

ಮಾನವಿಕ ಭಾರತಿ

ಮಕ್ಕಳ ವರ್ಷದ ವಿಶೇಷ ಸಂಚಿಕೆ

ಸಂಪುಟ : ೩

ಸಂಚಿಕೆ : ೧–೨

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಅವಶ್ಯವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ, ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

ಮಕ್ಕಳ ವರ್ಷದ ವಿಶೇಷ ಸಂಚಿಕೆ

೧೯೭೯

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೧–೨

ಸಂಪಾದಕರು :

ಡಾ. ಎ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಗುರುಮೂರ್ತಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

(ಮಕ್ಕಳ ವರ್ಷದ ವಿಶೇಷ ಸಂಚಿಕೆ)

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೧-೨

೧೯೭೯

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು
ಪ್ರಸಾರಾಂಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಶ್ರೀ ಜಿ. ಬಿ. ಮನ್ನಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ–೫೮೦ ೦೦೩

ಪರಿವಿಡಿ

ಮಗುವಿನ ವರ್ಷ*

● ಅನು : ಕೆ. ಜಿ. ಗುರುಮೂರ್ತಿ

ಮಕ್ಕಳು ಪ್ರಪಂಚದ ಅತ್ಯಂತ ಮಹತ್ವದ ಸಂಪತ್ತು. ಮಕ್ಕಳ ಅಭಿವೃದ್ಧಿಯಲ್ಲಿ ಹೂಡಿದ ಹಣ ರಾಷ್ಟ್ರದ ಭವಿಷ್ಯಕ್ಕಾಗಿ ಹೂಡಿದ ಹಣ. ಆದರೂ ಮಕ್ಕಳು ತಮ್ಮ ಅವಶ್ಯಕತೆಗಳ ಪೂರೈಕೆಗಾಗಿ ಇನ್ನೂ ತೊಳಲಾಡುತ್ತಿದ್ದಾರೆ. ಏಕೆಂದರೆ ಅವರು ಚಿಕ್ಕವರು, ಹೆಚ್ಚಿನ ಶಕ್ತಿಶಾಲಿಗಳಲ್ಲ, ಅವರು ಯಾವಾಗಲೂ ತಮ್ಮ ಈ ತೊಳಲಾಟದಲ್ಲಿ ಯಶಸ್ವಿಯಾಗಲಾರರು. ಆರೋಗ್ಯ, ಸತ್ವಪೂರ್ಣ ಆಹಾರ, ಉತ್ತಮ ನೀರು ಮತ್ತು ವಸತಿಗಳಿಗೆ ಅಭಾವವಿರುವ ಮತ್ತು ಇವನ್ನು ಒದಗಿಸಲು ಹಣದ ಕೊರತೆ ಇರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅವರ ಜೀವನ ಕಷ್ಟಕರ. ಆದರೆ ಇದಕ್ಕೆ ಏನಾದರೂ ಮಾಡಲೇಬೇಕು. ಏಕೆಂದರೆ ಅಭಿವೃದ್ಧಿ ಹೊಂದುತ್ತಿರುವ ಈ ದೇಶಗಳಲ್ಲಿ ಸಂಭವಿಸುವ ಸಾವುಗಳಲ್ಲಿ ಅರ್ಧದಷ್ಟು ಐದು ವರ್ಷದೊಳಗಿನ ಮಕ್ಕಳದಾಗಿರುತ್ತದೆ.

ಮಕ್ಕಳ ಈ ಅವಶ್ಯಕತೆಯನ್ನು ಗಮನಿಸಬೇಕಾದ್ದರಿಂದ ಮತ್ತು ಮಾಡಿ ಮುಗಿಸಲೇಬೇಕಾದ್ದರಿಂದ ವಿಶ್ವಸಂಸ್ಥೆಯು ೧೯೭೯ನ್ನು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಸಾರಿದೆ. ಈ ಘೋಷಣೆಯ ಉದ್ದೇಶವೆಂದರೆ ಸಾರ್ವಜನಿಕ ಗಮನವನ್ನು ಮಕ್ಕಳ ಗೋಳಿನತ್ತ ಸೆಳೆಯುವುದು ಮತ್ತು ಕಾರ್ಯಶೀಲ ಬದಲಾವಣೆಯಿಂದ ಬಾಲ್ಯಾವಸ್ಥೆಯ ಗುಣಮಟ್ಟವನ್ನು ಸುಧಾರಿಸುವುದಾಗಿದೆ. ಮಕ್ಕಳ ಕಲ್ಯಾಣ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಮುನ್ನಡೆ ಇವುಗಳಲ್ಲಿ ನಿಕಟ ಸಂಬಂಧವಿದೆ. ಇಡೀ ಒಂದು ವರ್ಷವನ್ನು ಮಗುವಿಗಾಗಿ ಅರ್ಪಿಸಿ, ಪ್ರಪಂಚದ ರಾಷ್ಟ್ರಗಳು ಮಕ್ಕಳ ಹಕ್ಕುಗಳನ್ನು ಗಮನಿಸಿ ಎಲ್ಲಾ ಮಕ್ಕಳೂ ಈ ಹಕ್ಕುಗಳನ್ನು ಅನುಭವಿಸುವಂತೆ ವ್ಯವಸ್ಥೆ ಮಾಡುವ ಕಾರ್ಯದಲ್ಲಿ ತೊಡಗುವುವೆಂಬ ಭರವಸೆ ನೀಡುವುವೆಂದು ವಿಶ್ವಸಂಸ್ಥೆ ಆಸಿಸುತ್ತದೆ.

ಈ ವರ್ಷದ ಉದ್ದೇಶ

ಅಂತರರಾಷ್ಟ್ರೀಯ ಮಕ್ಕಳ ವರ್ಷವು ಎಲ್ಲಾ ದೇಶದಲ್ಲಿಯ ಎಲ್ಲಾ ಮಕ್ಕಳಿಗೂ ಅದರಲ್ಲೂ ಚಿಕ್ಕಮಕ್ಕಳಿಗೆ ಅನ್ವಯಿಸುತ್ತದೆ. ಅದರ ಮುಖ್ಯ ಗುರಿಗಳೆಂದರೆ:

* A Year For The Child-UNICEF, 1979

ಎಲ್ಲಾ ದೇಶಗಳೂ ಬಡ ಅಥವಾ ಶ್ರೀಮಂತವಿರಲಿ, ಮಕ್ಕಳ ಒಳಿತಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ಪುನಃ ವಿಮರ್ಶಿಸುವುದು, ಮತ್ತು ಪ್ರತಿ ದೇಶದ ಸ್ಥಿತಿ, ಅವಶ್ಯಕತೆ ಮತ್ತು ಸ್ಥಳೀಯ ಕಾರ್ಯಕ್ರಮಗಳಿಗೆ ಬೆಂಬಲವನ್ನು ಕ್ರೋಢೀಕರಿಸುವುದು;

ಮಕ್ಕಳ ವಿಶೇಷ ಅವಶ್ಯಕತೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರ ಮತ್ತು ಸಾರ್ವಜನಿಕರ ತಿಳುವಳಿಕೆಯನ್ನು ಹೆಚ್ಚಿಸುವುದು;

ಒಂದು ಕಡೆ ಮಕ್ಕಳಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ಇನ್ನೊಂದು ಕಡೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ, ಇವುಗಳ ನಡುವಿನ ಅವಶ್ಯಕ ಸಂಬಂಧಗಳನ್ನು ಕಂಡುಕೊಂಡು ಅವನ್ನು ಉತ್ತಮ ಪಡಿಸುವುದು;

ರಾಷ್ಟ್ರಮಟ್ಟದಲ್ಲಿ ಮಕ್ಕಳಿಗೆ ಉಪಯುಕ್ತವಾದ, ಹೊಂದಲು ಸಾಧ್ಯವಾದ ಗುರಿಗಳುಳ್ಳ, ಅಲ್ಪ ಮತ್ತು ದೀರ್ಘಕಾಲಿಕ ನಿರ್ದಿಷ್ಟ ಮತ್ತು ಕಾರ್ಯಗತ ಕ್ರಿಯೆಗಳಿಗೆ ಉತ್ತೇಜನ ನೀಡುವುದು.

ಈ ವರ್ಷವು ಮಕ್ಕಳಿಗೆ ತಮ್ಮ ದೈಹಿಕ ಕಲ್ಯಾಣದ ಜೊತೆಗೆ ಅವರ ಬೌದ್ಧಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ವಿಶೇಷ ಅವಕಾಶವನ್ನು ಒದಗಿಸುತ್ತದೆ.

೧೯೭೯ನೇ ವರ್ಷವು ಮಗುವಿನ ಹಕ್ಕುಗಳ ಘೋಷಣೆಯ ೨೦ನೇ ವಾರ್ಷಿಕೋತ್ಸವದ ವರ್ಷ. ಅಂತರರಾಷ್ಟ್ರೀಯ ಮಕ್ಕಳ ವರ್ಷ ಈ ಹಕ್ಕುಗಳನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಗತ ಮಾಡಲು ಪ್ರತಿ ದೇಶಕ್ಕೂ ಒಂದು ಅವಕಾಶ ನೀಡುತ್ತದೆ.

ಅನಾನುಕೂಲ ಸ್ಥಿತಿಯಲ್ಲಿರುವ ಮಕ್ಕಳಿಗೆ ವಿಶೇಷ ಗಮನವನ್ನು ನೀಡಬೇಕು. ಅವರಲ್ಲೂ ಅತೀ ಹೆಚ್ಚು ತೊಂದರೆಗೀಡಾದವರ, ಉದಾಹರಣೆಗೆ, ಅಸಮಾನ ಅವಕಾಶಗಳಿರುವ ಚಿಕ್ಕ ವಯಸ್ಸಿನ ಹುಡುಗಿಯರು, ಕೊಳಚೆ ಪ್ರದೇಶದ ಮಕ್ಕಳು, ವಲಸೆಬಂದ ಕೆಲಸಗಾರರ ಮಕ್ಕಳು, ದುರುಪಯೋಗಕ್ಕೊಳಗಾದ ಮಕ್ಕಳು, ಅನಾಥ ಮಕ್ಕಳು, ನಿರಾಶ್ರಿತರ ಮಕ್ಕಳು, ಅವಿವಾಹಿತ ತಾಯಂದಿರ ಮಕ್ಕಳು, ಬಡ ಗ್ರಾಮೀಣ ಪ್ರದೇಶದ ಮಕ್ಕಳು, ಅಪರಾಧಿ ಮತ್ತು ಮಾದಕ ವಸ್ತುಗಳಿಗೆ ಒಳಗಾದ ಮಕ್ಕಳು, ದೈಹಿಕವಾಗಿ ಮತ್ತು ಮಾನಸಿಕವಾಗಿ ಊನವಾದ ಮಕ್ಕಳು, ಮತ್ತು ಪೌಷ್ಟಿಕತೆಯ ಅಭಾವದಿಂದ ಬಳಲುತ್ತಿರುವ ಅಸಂಖ್ಯಾತ ಮಕ್ಕಳು.

ರಾಷ್ಟ್ರ ಮತ್ತು ಸ್ಥಳೀಯ ಮಟ್ಟದ ಕಾರ್ಯಕ್ರಮಗಳು ಈ ವರ್ಷದ ಕೇಂದ್ರಬಿಂದುವಾಗಿದ್ದರೂ, ಅಂತರರಾಷ್ಟ್ರೀಯ ಮಕ್ಕಳ ವರ್ಷವು ಮಕ್ಕಳ ಅವಶ್ಯಕತೆಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯಾಪಕವಾದ ಮಾಹಿತಿ ಸಂಗ್ರಹಣೆ ಮತ್ತು ಸಂಶೋಧನೆಗಳನ್ನು ಪ್ರಚೋದಿಸಬೇಕು.

ರಾಷ್ಟ್ರಮಟ್ಟದ ವಿಶೇಷ ಕಾರ್ಯಕ್ರಮ:

ಈಚೆಗೆ ವಿಶ್ವಸಂಸ್ಥೆ ಆಚರಿಸಿದ ಅನೇಕ 'ವರ್ಷ'ಗಳಂತೆ ಜಾಗತಿಕ ಮಕ್ಕಳ ವರ್ಷವು ಜಾಗತಿಕ ಮಟ್ಟದ ದೊಡ್ಡ ಸಮ್ಮೇಳನಗಳ ಮೇಲೆ ಗಮನ ಹರಿಸುವುದಿಲ್ಲ. ಅದರ ಬದಲು, ಮೊಟ್ಟ ಮೊದಲ ಗುರಿ ಎಂದರೆ ಪ್ರತಿ ದೇಶದಲ್ಲೂ ಮಕ್ಕಳಿಗಾಗಿ ಉಪಯುಕ್ತ ವಾಗುವ ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನು ತಯಾರಿಸುವ ಮತ್ತು ಕಾರ್ಯಗತ ಮಾಡುವಂತಹ ಸಮ್ಮೇಲನಗಳಿಗಾಗಿ ಶ್ರಮ, ಹಣ ಮತ್ತು ಕಾಲವನ್ನು ವಿನಿಯೋಗಿ ಸುವುದಾಗಿದೆ.

ಅಂತರರಾಷ್ಟ್ರೀಯ ಮಕ್ಕಳ ವರ್ಷದ (ಅ.ಮ.ವ.) ಕಾರ್ಯಾಗಾರ:

ಈ ವರ್ಷವನ್ನು ಆಚರಿಸುವ ರಾಷ್ಟ್ರಗಳಿಗೆ ಸೂಕ್ತ ಸಹಾಯ ಮತ್ತು ಸಲಹೆ ನೀಡಲು ಜಿನಿವಾ ಮತ್ತು ನ್ಯೂಯಾರ್ಕಗಳಲ್ಲಿ ಅ.ಮ.ವ.ದ ಕಾರ್ಯಾಗಾರವನ್ನು ಸ್ಥಾಪಿಸ ಲಾಗಿದೆ. ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಮುಂದಾಳುತನವನ್ನು ನೀಡಲು ಒಬ್ಬ ವಿಶೇಷ ಪ್ರತಿನಿಧಿಯನ್ನು ನೇಮಿಸಿದೆ.

ಯೂನಿಸೆಫ್‌ನ್ನು ವಿಶ್ವಸಂಸ್ಥೆಯ ಮುಂದಾಳು ಸಂಸ್ಥೆಯಾಗಿ ನೇಮಿಸಲಾಗಿದ್ದು, ಇದು ಈ ವರ್ಷದ ಕಾರ್ಯಕ್ರಮಗಳನ್ನು ನೆರವೇರಿಸುತ್ತದೆ ಮತ್ತು ಉಳಿದವರೊಡನೆ ಸಹಕರಿಸುತ್ತದೆ.

ಅ.ಮ.ವ.ದ ಗುರಿ:

ತಮ್ಮ ಮಕ್ಕಳ ಇರುವಿನ ಪರಿಸ್ಥಿತಿ ಉತ್ತಮವಾಗದಿದ್ದರೆ ತಾವೂ ಮುಂದುವರೆ ಯುವುದಿಲ್ಲವೆಂದು ರಾಷ್ಟ್ರಗಳು ನಿಜವಾಗಿಯೂ ನಂಬಿದರೆ, ಆಗ ಅವರು ಹೆಚ್ಚು ಸಂಪನ್ಮೂಲಗಳನ್ನು ಮಕ್ಕಳ ಅಭಿವೃದ್ಧಿಯ ಸೇವಾ ಕಾರ್ಯಗಳಿಗೆ ಮೀಸಲಾಗಿಡಲೇ ಬೇಕಾಗುತ್ತದೆ. ಹೆಚ್ಚುವರಿ ಪ್ರಯತ್ನವೇ ಅ.ಮ.ವ.ದ ಗುರಿ ಮತ್ತು ಸಾರ್ವಜನಿಕ ಅಭಿಪ್ರಾಯವು ಇದನ್ನು ಬೆಂಬಲಿಸುತ್ತದೆ, ಮತ್ತು ಸರಕಾರಗಳು ಮಕ್ಕಳ ಕಾರ್ಯಕ್ರಮ ಗಳಿಗೆ ಹೆಚ್ಚು ಹಣ ಒದಗಿಸುವುದರ ಮೂಲಕ ಈ ಕಡೆಗೆ ಓಗೊಡುವವೆಂದು ಆಶಿಸ ಲಾಗಿದೆ. ಅ.ಮ.ವ.ವು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಮಕ್ಕಳಿಗೆ ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಅನುಮೋದನೆಯನ್ನು ಹೊಂದುವ ಭರವಸೆಯನ್ನು ಹೊಂದಿದೆ. ಔದ್ಯೋಗೀಕರಣಗೊಂಡಿರುವ ದೇಶಗಳು ತಮ್ಮ ಮಕ್ಕಳಿಗೆ ಅ.ಮ.ವ. ಕಾರ್ಯಕ್ರಮ ಕೈಗೊಳ್ಳಲು ಹಣ ನೀಡುವಾಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮಕ್ಕಳ ಸೇವಾ ಕಾರ್ಯಗಳನ್ನು ವಿಸ್ತರಿಸಲು ಹಣ ನೀಡಬೇಕು. ಈ ಅಂತರ ರಾಷ್ಟ್ರೀಯ ಸಹಾಯವನ್ನು ಯೂನಿಸೆಫ್ ಅಥವಾ ವಿಶ್ವಸಂಸ್ಥೆಗಳ ಮೂಲಕ ಅಥವಾ 'ದೇಶದಿಂದ ದೇಶಕ್ಕೆ' ಆಧಾರದ ಮೇಲೆ ನೀಡಬಹುದು.

ಮೂಲ ಸೇವೆಗಳು :

'ಮಗುವಿಗಾಗಿ ವರ್ಷ' ಎಂಬ ವಿಶೇಷ ಘೋಷಣೆಯ ಮುಖ್ಯ ಕಾರಣವೆಂದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮೂಲ ಸೇವೆಗಳಾದ ಆರೋಗ್ಯ ರಕ್ಷಣೆ, ಉತ್ತಮ ಆಹಾರ, ವಿದ್ಯೆ ಮತ್ತು ನೀರಿನ ಪೂರೈಕೆಗಳಿಲ್ಲದ ಕೊನೆಯ ಪಕ್ಷ ೩೫೦ ಮಿಲಿಯ ಮಕ್ಕಳಿದ್ದಾರೆ. ಆದರೆ ಈ ಮೂಲ ಆವಶ್ಯಕತೆಗಳನ್ನು ಅತ್ಯವಶ್ಯಕತೆ ಇರುವ ಮಕ್ಕಳಿಗೆ ತೀವ್ರ ಹಾಗೂ ಕಡಿಮೆ ಖರ್ಚಿನಲ್ಲಿ ಒದಗಿಸುವ ಮಾರ್ಗಗಳೂ ಇವೆ. ಯಾವ ಪ್ರದೇಶದಲ್ಲಿ ಸರಕಾರದ ಸೇವೆಗಳು ಇನ್ನೂ ತೃಪ್ತಿಕರವಾಗಿಲ್ಲವೋ ಅಲ್ಲಿ ಸ್ಥಳೀಯ ಸಮುದಾಯಗಳು ತಮ್ಮ ಗ್ರಾಮ ಮಟ್ಟದ ಕಾರ್ಯಕರ್ತರನ್ನು ತಮ್ಮಲ್ಲಿಯೇ ಆರಿಸಿ, ಅವರಿಗೆ ಆರೋಗ್ಯದ ರಕ್ಷಣೆ, ನೈರ್ಮಲ್ಯ, ಆಹಾರ ಮತ್ತು ಸತ್ವ ಪೂರ್ಣತೆಯ ಬಗ್ಗೆ ತಿಳುವಳಿಕೆ, ಸ್ವಚ್ಛ ನೀರು ಮತ್ತು ಸಮುದಾಯ ಶಿಕ್ಷಣ, ಮುಂತಾದವುಗಳ ಬಗ್ಗೆ ಸೂಕ್ತ ತರಬೇತಿ ನೀಡಬೇಕು. ಅನೇಕ ಸಮುದಾಯಗಳಲ್ಲಿ ಈ ವಿಸ್ತರಣ ಸೇವೆಗಳನ್ನು ಪ್ರಾರಂಭಿಸಲು ಹಣ ಸಹಾಯದ ಅವಶ್ಯಕತೆಯಿದ್ದು ಅ. ಮ. ವ. ಕ್ಕೆಂದು ಕೂಡಿಸಿದ ನಿಧಿಯಿಂದ ಕೆಲಭಾಗವನ್ನು ಈ ಕಾರ್ಯಕ್ಕೆ ವಿನಿಯೋಗಿಸಬಹುದು. ಈ ಮೂಲ ಸೇವೆಗಳನ್ನು ಅವಶ್ಯಕತೆ ಇರುವ ಸಮುದಾಯಗಳಲ್ಲಿ ಒದಗಿಸುವುದು ಸಧ್ಯ ಹಸಿವು, ರೋಗ ಅನಾರೊಗ್ಯಕರ ವಾತಾವರಣ, ವಿದ್ಯಾಭ್ಯಾಸಕ್ಕೆ ಅವಕಾಶ ವಿಲ್ಲದ್ದು ಮತ್ತು ಸರ್ವವಿಧದಲ್ಲಿ ಅನಾದರಣೆ ವಿರುದ್ಧ ಹೋರಾಡುತ್ತಿರುವ ಮಕ್ಕಳ ಜೀವನವನ್ನು ಉತ್ತಮಪಡಿಸುವಲ್ಲಿ ಬಹಳ ಮುಂದೆ ಹೋದಂತಾಗುತ್ತದೆ.

ಈ ಮೂಲ ಸೇವೆಗಳು ಯಾವುವೆಂದರೆ :

ಅ) ಆರೋಗ್ಯ ರಕ್ಷಣೆ (ತಾಯಂದಿರು, ಶಿಶುಗಳು ಮತ್ತು ಮಕ್ಕಳ ಪ್ರಾಥಮಿಕ ಆರೋಗ್ಯ ರಕ್ಷಣೆ, ಆರೋಗ್ಯದ ಬಗ್ಗೆ ತಿಳುವಳಿಕೆ ಮತ್ತು ರೋಗಗಳ ನಿಯಂತ್ರಣ):

ಆ) ಸ್ವಚ್ಛವಾದ ನೀರಿನ ಪೂರೈಕೆ (ಕುಡಿಯಲು, ಅಡಿಗೆ ಮಾಡಲು ಮತ್ತು ಸ್ನಾನಕ್ಕೆ ಉತ್ತಮ ನೀರು, ನೈರ್ಮಲ್ಯದ ಶುದ್ಧೀಕರಣವಿಲ್ಲದೆ ಹರಡುವ ರೋಗಗಳನ್ನು ತಡೆಗಟ್ಟುವುದು) :

ಇ) ಪೌಷ್ಟಿಕತೆ (ಅಪೌಷ್ಟಿಕತೆಯನ್ನು ತಡೆಗಟ್ಟಲು ಮತ್ತು ಶಾರೀರಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯವಾಗುವಂತಹ ಉತ್ತಮ ಹಾಗೂ ಸಾಕಷ್ಟು ಆಹಾರ):

ಈ) ವಿದ್ಯೆ (ಮಕ್ಕಳನ್ನು ಅನಕ್ಷರತೆ ಮತ್ತು ಅಜ್ಞಾನದಿಂದ ರಕ್ಷಿಸಲು ಪ್ರಾಥಮಿಕ ಶಿಕ್ಷಣ ಮತ್ತು ಶಾಲೆಯ ಹೊರಗಿನ ಶಿಕ್ಷಣ);

ಉ) ತರಬೇತಿ (ಆರೋಗ್ಯ ಕಾರ್ಯಕರ್ತರು, ಶಾಲಾ ಉಪಾಧ್ಯಾಯರು, ಸಾಮಾಜಿಕ ಕಾರ್ಯಕರ್ತರು, ಪೌಷ್ಟಿಕಾಹಾರ ತಜ್ಞರು, ಅಭಿವೃದ್ಧಿ ಕಾರ್ಯದಲ್ಲಿ ಬೇಕಾದ ಇತರರ ಸೇವೆಯನ್ನು ಪಡೆಯಲು);

ಊ) ಕಲ್ಯಾಣ ಕಾರ್ಯಗಳು (ಹಗಲು ಸಂರಕ್ಷಣಾ ಕೇಂದ್ರಗಳು, ತರುಣರು ಮತ್ತು ಮಹಿಳೆಯರ ಗುಂಪುಗಳು ಮತ್ತು ಕುಟುಂಬ ಮತ್ತು ಸಮುದಾಯ ಜೀವನವನ್ನು ಉತ್ತಮಪಡಿಸಲು ಸ್ವಸಹಾಯ ಯೋಜನೆಗಳು).

ಅ. ಮ. ವ. ದ. ಆಹ್ವಾನ :

ಅಂತರರಾಷ್ಟ್ರೀಯ ಮಕ್ಕಳ ವರ್ಷವು ಒಂದು ಆಹ್ವಾನ ಮತ್ತು ಅವಕಾಶವೂ ಆಗಿದೆ. ಅದರ ಗುರಿಗಳನ್ನು ಮುಟ್ಟಲು ಸರಕಾರಗಳ, ಸಂಸ್ಥೆಗಳ ಮತ್ತು ವ್ಯಕ್ತಿಗಳ ತುಂಬುಹೃದಯದ ಬೆಂಬಲ ಬೇಕಾಗುತ್ತದೆ. ಮಕ್ಕಳ ಅವಶ್ಯಕತೆಯನ್ನು ಸಾರ್ವಜನಿಕರು ಮತ್ತು ಸರಕಾರವು ತ್ವರಿತಗತಿಯಿಂದ ಮಾಡುವುದರಿಂದ ಭವಿಷ್ಯತ್ತಿನಲ್ಲಿ ಮಾನವ ಕುಲಕ್ಕೆ ಎಣೆ ಇಲ್ಲದ ಮತ್ತು ಬಹುಕಾಲ ಉಳಿಯುವ ಲಾಭಗಳು ಬರುತ್ತವೆ ಎಂಬುದನ್ನು ಪ್ರಪಂಚಕ್ಕೆ ತೋರಿಸಲು ಒಂದು ಅವಕಾಶ ಕೊಟ್ಟಂತಾಗುತ್ತದೆ. ಏಕೆಂದರೆ ಇಂದಿನ ಮಕ್ಕಳ ಒಳಿತಿನಲ್ಲಿಯೇ ಮುಂದಿನ ಪೀಳಿಗೆಯ ಹಿತ ಅಡಗಿದೆ.

ಭಾರತ ಮತ್ತು ಅ. ಮ. ವ.

ಮಕ್ಕಳಿಗೆ ಸಂಬಂಧಿಸಿದ ಧೋರಣೆಗಳು :

ಮಕ್ಕಳಿಗಾಗಿ ರಾಷ್ಟ್ರೀಯ ಧೋರಣೆಗಳನ್ನು ಹೊಂದಿರುವ ಕೆಲವೇ ದೇಶಗಳಲ್ಲಿ ಭಾರತವೂ ಒಂದು. ಇಂತಹ ಧೋರಣೆಯು ಮಕ್ಕಳ ಒಳಿತಿಗೆ ಬೇಕಾದ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಒಂದು ಚೌಕಟ್ಟು ಮತ್ತು ಗಮನ ಕೇಂದ್ರವನ್ನು ಒದಗಿಸುತ್ತದೆ. ರಾಷ್ಟ್ರದ ಮಕ್ಕಳು "ಒಂದು ಅತಿ ಮಹತ್ವದ ಆಸ್ತಿ," ಅವರ "ಪಾಲನೆ ಮತ್ತು ಹಿತ ನಮ್ಮ ಹೊಣೆ" ಎಂಬುದು ರಾಷ್ಟ್ರೀಯ ಧೋರಣೆಯಾಗಿದೆ.

ಭಾರತ ವಿಶ್ವ ಸಂಸ್ಥೆಯ ಪ್ರಣಾಳಿಕೆಯಲ್ಲಿರುವ ಮಕ್ಕಳ ಹಕ್ಕನ್ನು ಪಾಲಿಸಲು ಬದ್ಧವಾಗಿರುವುದಾಗಿ ಒತ್ತಿ ಹೇಳಲಾಗಿದೆ.

ಮಕ್ಕಳ ಮಂಡಳಿ :

ಭಾರತದಲ್ಲಿ. ಮಕ್ಕಳ ಕಲ್ಯಾಣಕ್ಕೆ ಸಂಬಂಧಿಸಿದ ಧೋರಣೆಗಳನ್ನು ರೂಪಿಸಲು. ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಮಕ್ಕಳ ಮಂಡಳಿ ಎಂಬ ಉನ್ನತ ಮಟ್ಟದ ಸಂಸ್ಥೆ ಇದೆ. ಅ. ಮ. ವ. ನ್ನು ಆಚರಿಸಲು ಪ್ರಭಾವಶಾಲಿ ಧೋರಣಾ

ಸೂಚನೆಗಳನ್ನು ನೀಡುವ ದೃಷ್ಟಿಯಿಂದ ಈ ಮಂಡಳಿಯೇ ಅಂತರರಾಷ್ಟ್ರೀಯ ಮಕ್ಕಳ ವರ್ಷಕ್ಕಾಗಿ ಒಂದು ರಾಷ್ಟ್ರೀಯ ಆಯೋಗವನ್ನು ನೇಮಿಸಿದೆ.

೩ ಮ. ವ. ದ ಕಾರ್ಯಕ್ಕಾಗಿ ರಾಷ್ಟ್ರೀಯ ಯೋಜನೆ :

ಈ ಮಕ್ಕಳ ಮಂಡಳಿಯು ಅಂತರರಾಷ್ಟ್ರೀಯ ಮಕ್ಕಳ ವರ್ಷಕ್ಕಾಗಿ ಕೆಳಗಿನ ಆರು ಕ್ಷೇತ್ರಗಳಲ್ಲಿ ವಿವಿಧ ಚಟುವಟಿಕೆಗಳ ಒಂದು ರಾಷ್ಟ್ರೀಯ ಯೋಜನೆಯನ್ನು ತಯಾರಿಸಿದೆ:

ಆರೋಗ್ಯ ಮತ್ತು ಪೌಷ್ಟಿಕತೆ :

ಪ್ರತಿರೋಧ ಮದ್ದು ಹಾಕುವುದು: ತಾಯಿ ಮಗುವಿನ ಆರೋಗ್ಯದ ಸೇವೆ: ವಿವಿಧೋದ್ದೇಶದ ಆರೋಗ್ಯ ಕಾರ್ಯಕರ್ತರು: ಪೌಷ್ಟಿಕತೆ: ಶಾಲೆಯಲ್ಲಿ ಆರೋಗ್ಯದ ಕಾರ್ಯಕ್ರಮ: ಶುದ್ಧವಾದ ಕುಡಿಯುವ ನೀರಿನ ಸರಬರಾಜು: ವಾತಾವರಣದ ನೈರ್ಮಲ್ಯ ತರಬೇತಿ ಮತ್ತು ಸಂಶೋಧನೆ.

ವಿದ್ಯಾಭ್ಯಾಸ :

ಪ್ರಾಥಮಿಕ—ಪೂರ್ವ ಮತ್ತು ಮೂಲ ವಿದ್ಯಾಭ್ಯಾಸ: ದುರ್ಬಲ ಗುಂಪಿನವರಿಗೆ ಶಾಲಾ ಮುನ್ನ ವಿದ್ಯಾಭ್ಯಾಸ: ಸಂಚಾರಿ ಶಾಲೆಗಳು: ಮಕ್ಕಳ ಸಾಹಿತ್ಯ: ಉಪಾಧ್ಯಾಯರ ತರಬೇತಿ: ಮಹಿಳೆಯರಿಗೆ ಶಿಕ್ಷಣ ತರಬೇತಿ: ಅಂಗವಿಕಲ ಮಕ್ಕಳಿಗೆ ವಿದ್ಯಾಭ್ಯಾಸ: ರಜಾ ಮುನ್ನದ ತರಬೇತಿ: ಸಮುದಾಯ ವಿದ್ಯಾಭ್ಯಾಸ.

ಸಮಾಜ ಕಲ್ಯಾಣ :

ಹಗಲು ಸಂರಕ್ಷಣಾ ಕೇಂದ್ರಗಳು, ಸಾರ್ವಜನಿಕ ಶಿಶು ಸಂರಕ್ಷಣಾಲಯಗಳು: ಬಾಲವಾಡಿಗಳು: ಅಂಗನವಾಡಿಗಳು: ಉದ್ಯೋಗಸ್ಥ ತಾಯಂದಿರಿಗೆ ಕಾರ್ಯಕ್ರಮಗಳು ಮತ್ತು ಮಕ್ಕಳ ಸಂಯುಕ್ತ ಅಭಿವೃದ್ಧಿ ಕಾರ್ಯಗಳ ಯೋಜನೆಗಳು.

ಶಾಸನ :

ಮಕ್ಕಳ ಶಾಸನ (Children's Act) ಇಲ್ಲದ ರಾಜ್ಯಗಳಲ್ಲಿ ಕಾನೂನುಗಳನ್ನು ಮಾಡುವುದು: ಮಕ್ಕಳಿಗಾಗಿ ಇರುವ ಕಾನೂನುಗಳನ್ನು ಜಾರಿಗೆ ತರುವುದು: ಕಾರ್ಮಿಕ ಮಕ್ಕಳ ಬಗ್ಗೆ ಕಾನೂನು ಜಾರಿಗೆ ತರುವುದು: ವಿವಾಹ ಬಂಧನದಿಂದ ಹೊರಗೆ ಹುಟ್ಟಿದ ಮಕ್ಕಳಲ್ಲಿ ಅಸಮಾನತೆ ಮತ್ತು ಭೇದಭಾವ ನಿವಾರಿಸಲು ಕಾನೂನು ಮಾಡುವುದು.

ಪ್ರಚಾರ :

ರೇಡಿಯೋ, ದೂರದರ್ಶನದ ಕಾರ್ಯಕ್ರಮಗಳು; ವಾರ್ತಾ ಚಿತ್ರಗಳು: ವಾರ್ತಾ ಪತ್ರಿಕೆಗಳು: ಮುದ್ರಿತ ಪ್ರಚಾರವಸ್ತುಗಳು, ಸ್ಮರಣಾರ್ಥವಾಗಿ ಅಂಚೆ ಚೀಟಿಗಳನ್ನು ಮತ್ತು ನಾಣ್ಯಗಳನ್ನು ಬಿಡುಗಡೆ ಮಾಡುವುದು, ಶಾಲೆಗೆ ಹೋಗದ ಮತ್ತು ಪ್ರೈಮರಿ/ ಮಾಧ್ಯಮಿಕ/ಪ್ರೌಢ ಶಾಲೆಯ ಮಕ್ಕಳಿಗೆ ರಾಷ್ಟ್ರ, ರಾಜ್ಯ, ಜಿಲ್ಲೆ, ತಾಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುವುದು.

ನಿಧಿ ಸಂಗ್ರಹ :

ಮಕ್ಕಳ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಮಕ್ಕಳ ನಿಧಿಯನ್ನು ಸ್ಥಾಪಿಸುವುದು.

ರಾಷ್ಟ್ರೀಯ ಘೋಷಣೆ, ಸಂಕೇತ ಮತ್ತು ಧ್ಯೇಯ :

"ಸಂತುಷ್ಟ ಮಗು – ರಾಷ್ಟ್ರದ ಹೆಮ್ಮೆ" ಮತ್ತು ಅದರ ಹಿಂದೀ ಅವತರಣೆ "बच्चे की मुसकान - राष्ट्र की शान" ಇದು ಅ. ಮ. ವ. ದ ಭಾರತದ ಘೋಷಣೆ.

ಸಂಕೇತವು ಪಾಟಿಯ ಮೇಲೆ ಸೂರ್ಯ, ಒಬ್ಬ ಹುಡುಗ ಮತ್ತು ಹುಡುಗಿಯ ಚಿತ್ರವನ್ನು ತೋರಿಸುತ್ತದೆ. ಸೂರ್ಯ ಆರೋಗ್ಯ ಮತ್ತು ಶಕ್ತಿಯ ಸಂಕೇತವಾಗಿದ್ದರೆ, ಪಾಟಿ ಮಕ್ಕಳ ಭವಿಷ್ಯದಲ್ಲಿ ವಿದ್ಯೆಯ ಮಹತ್ವದ ದ್ಯೋತಕವಾಗಿದೆ.

" ವಂಚಿತ ಮಕ್ಕಳನ್ನು ತಲುಪುವುದು " ಭಾರತದ ಅ. ಮ. ವ. ದ ಪ್ರಮುಖ ಧ್ಯೇಯವಾಗಿದೆ.

ಮಗುವಿನ ಜನನ, ಪಾಲನೆ-ಪೋಷಣೆ ಮತ್ತು ವ್ಯಕ್ತಿತ್ವದ ಬೆಳವಣಿಗೆ

● ಕೆ. ಜಿ. ಗುರುಮೂರ್ತಿ

ಬಹು ಹಿಂದಿನಿಂದಲೂ ಹಲವು ಸಮಾಜಶಾಸ್ತ್ರಜ್ಞರು ಮಕ್ಕಳ ಮಾನಸಿಕ, ದೈಹಿಕ, ಸಾಮಾಜಿಕ ಮುಂತಾದ ಬೆಳವಣಿಗೆಯನ್ನು ಕುರಿತು ಪರಿಶೀಲನೆ ಮಾಡಿದ್ದಾರೆ. ಇವರಲ್ಲಿ ಮಾನವ ಶಾಸ್ತ್ರಜ್ಞರು ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಮಾಜ, ಸಂಸ್ಕೃತಿ, ಭೌತಿಕ ವಾತಾವರಣ ಮುಂತಾದವುಗಳು ವಹಿಸುವ ಪಾತ್ರಗಳನ್ನು ಪರಿಶೀಲಿಸಿದ್ದಾರೆ. ೧೯೨೦ ಮತ್ತು ೧೯೩೦ ರ ದಶಕದಲ್ಲಿ ಇವರ ಶಾಸ್ತ್ರೀಯ ಅಧ್ಯಯನಗಳಲ್ಲಿ ಸಮಾಜದ ಅಥವಾ ಸಂಸ್ಕೃತಿಯ ರಚನೆ, ಕಾರ್ಯ ಮುಂತಾದವನ್ನು ಕೂಲಂಕಷವಾಗಿ ವಿಶ್ಲೇಷಿಸುತ್ತಾ, ಇವು ಮಗುವಿನ ನಡವಳಿಕೆಯ ಮೇಲೆ ಮಾಡಿದ ಪರಿಣಾಮಗಳನ್ನು ಅಭ್ಯಾಸ ಮಾಡಿದರು. ಮುಂದೆ ೧೯೪೦ ರ ದಶಕದಲ್ಲಿ ಮಗುವಿನ ಮಾನಸಿಕ ಬೆಳವಣಿಗೆಯಲ್ಲಿ ಮನೋವಿಕಾರ (emotional) ಅಂಶವು ವಹಿಸುವ ಪಾತ್ರಕ್ಕೆ ಹೆಚ್ಚಿನ ಗಮನ ನೀಡಲಾಯಿತು. ಇದೇ ರೀತಿ ೧೯೫೦ ರ ದಶಕದಲ್ಲಿ ನಡವಳಿಕೆಗಳ ಹಿಂದಿರುವ ಪ್ರಚೋದನೆಗಳನ್ನು ಗಮನದಲ್ಲಿಟ್ಟುಕೊಂಡು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಅಭ್ಯಾಸ ಮಾಡಲಾಯಿತು. ಈ ರೀತಿಯ ಅಧ್ಯಯನಗಳ ಮೂಲಕ ಕುಟುಂಬ ಮತ್ತು ಸಮುದಾಯಗಳು ಮಗುವಿನ ಅನುಭವಗಳು ಮತ್ತು ನಡವಳಿಕೆಗಳ ಮೇಲೆ ಮಾಡುವ ಪರಿಣಾಮಗಳನ್ನು ಅಭ್ಯಾಸ ಮಾಡಲು ಸಹಾಯವಾಗಿದ್ದವು. ೧೯೬೦ ರ ದಶಕದಲ್ಲಿ ಮಗುವಿನ ಸರ್ವಾಂಗೀಣ ಬೆಳವಣಿಗೆಯ ಬಗೆಗೆ ಅಭ್ಯಾಸಗಳು ಹೆಚ್ಚಿದವು. ಹೀಗೆ ಬಹು ಹಿಂದಿನಿಂದಲೂ ಮಾನವ ಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ವೈದ್ಯರು ಮತ್ತು ಆಹಾರ ವಿಜ್ಞಾನಿಗಳು ಮಗುವಿನ ಬೆಳವಣಿಗೆಯ ವಿವಿಧ ರೀತಿಗಳನ್ನು ಅಭ್ಯಾಸ ಮಾಡಿದ್ದಾರೆ.

ಮಗುವಿನ ಬಗೆಗೆ ಮೂರು ವಿಧವಾದ ಅಧ್ಯಯನಗಳನ್ನು ಕಾಣಬಹುದು. ಮೊದಲನೆಯದಾಗಿ, ಫ್ರಾಯ್ಡ್‌ರವರು ಮತ್ತು ಅವರ ನಂತರ ಅವರ ಮಾರ್ಗದಲ್ಲೇ ಮಾಡಿದ ಅಭ್ಯಾಸಗಳು. ಫ್ರಾಯ್ಡ್‌ರವರು ತಮ್ಮ ಅನೇಕ ಪುಸ್ತಕಗಳಲ್ಲಿ ಮುಖ್ಯವಾಗಿ "ಟೊಟೆಂ ಅಂಡ್ ಟ್ಯಾಬು" (Totem and Taboo, 1963)ದಲ್ಲಿ ಮಕ್ಕಳ ಸ್ಥಾನ

ಮಾನ, ಬೆಳವಣಿಗೆ ಮುಂತಾದವುಗಳ ಬಗೆಗೆ ಮಹತ್ವವಾದ ವಿಷಯಗಳನ್ನು ನೀಡಿದ್ದಾರೆ. ಮನೋವಿಜ್ಞಾನಿಯಾದ ಫ್ರಾಯ್ಡ್‌ರ ವಾದದಂತೆ ಎಲ್ಲವೂ ದೈಹಿಕ ಅವಶ್ಯಕತೆಯನ್ನು ಅವಲಂಬಿಸಿದ್ದು, ತಾಯಿ ಮಗುವಿಗೆ ಮೊಲೆ ಹಾಲು ನೀಡುವುದು ಮಗುವಿನ ಅವಶ್ಯಕತೆಗೆ ಮಾತ್ರವಲ್ಲ ಇದರಿಂದ ತನಗೆ ಸಿಗುವ ಸಂತೋಷಕ್ಕಾಗಿ, ಮುಂತಾಗಿ ಇವರ ವಾದಗಳು. ಇವರ ವಾದದ ಗುಂಪಿಗೆ ಸೇರಿದ ವೈಟಿಂಗ್ ಮತ್ತು ಚೈಲ್ಡ್ ಇವರು ಮಗುವಿನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಸಮಾಜದಲ್ಲಿಯ ಪ್ರಾಥಮಿಕ ಮೂಲ ಸಂಸ್ಥೆಗಳನ್ನು, (Primary Institutions) ಮಕ್ಕಳನ್ನು "ಸಲಹುವ ವ್ಯವಸ್ಥೆ ರೀತಿಯನ್ನು" (maintenance system) ಆಧರಿಸಿ ಅವು ಆ ಸಮಾಜದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರಚನೆಯನ್ನು ಇಡಿಯಾಗೇ ಹೇಗೆ ಒಳಗೊಂಡಿವೆ ಎಂದು ತಿಳಿಸಿದ್ದಾರೆ. ಅಂದರೆ ಆಯಾ ಸಮಾಜದಲ್ಲಿ ಈ ಸಾಮಾಜಿಕ ರಂಗಗಳಲ್ಲಿನ ತೊಡರುಗಳು. ರೀತಿಗಳು ಹೇಗೆ ಹಿರಿಯರ ರೀತಿ ನೀತಿಗಳನ್ನು, ನಡವಳಿಕೆಗಳನ್ನು ರೂಪಿಸಿ ಮುಂದೆ ಈ ಹಿರಿಯರ ನಡವಳಿಕೆಯು ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂದೂ ತಿಳಿಯಬಹುದು. ಸಮಾಜವು ಭೌತಿಕ ವಾತಾವರಣದ ರೀತಿಯಂತೆ ತನ್ನ ಸಾಮಾಜಿಕ ರಚನೆ. ರೀತಿ ನೀತಿಗಳು ಮುಂತಾದವನ್ನು ಹೊಂದಿದ್ದು, ಇವು ಮುಂದೆ ವಯಸ್ಕರ ವ್ಯಕ್ತಿತ್ವ ಮತ್ತು ನಡವಳಿಕೆಗಳನ್ನು ರೂಪಿಸುತ್ತವೆ. ಇದೇ ರೀತಿಯಲ್ಲಿ ಸಮಾಜ–ಸಂಸ್ಕೃತಿಗಳೂ ಮಕ್ಕಳ ಪಾಲನೆ–ಪೋಷಣೆಯಲ್ಲಿ ಸಹಾಯಕವಾಗಿ ಮುಂದೆ ಮಕ್ಕಳ ವ್ಯಕ್ತಿತ್ವ ರೂಪಿಸುತ್ತವೆ. ಈ ವ್ಯಕ್ತಿತ್ವವು ಅವರ ನಡವಳಿಕೆಯಲ್ಲಿ, ಅಂದರೆ ಅವರ ಆಟ, ಪಾಠ. ಕೆಲಸ, ಮನರಂಜನೆ, ಕಲ್ಪನೆ ಮುಂತಾದವುಗಳಲ್ಲಿ ವ್ಯಕ್ತವಾಗುತ್ತದೆ. ಹೀಗೆ ಸಮಾಜವು ಮಗುವಿನ ನಡವಳಿಕೆಯನ್ನು ನಿಯಂತ್ರಿಸುತ್ತದೆ. ಈ ಆಧಾರದಿಂದ ವೈಟಿಂಗರವರು ತಮ್ಮ ವಿದ್ವತ್‌ಪೂರ್ಣವಾದ ಕೃತಿಗಳಾದ "**ಸಿಕ್ಸ್ ಕಲ್ಚರ್ಸ್, ಮದರ್ಸ್ ಇನ್ ಸಿಕ್ಸ್ ಕಲ್ಚರ್ಸ್**" (Six Cultures, Mothers in Six Cultures, 1960s) ರಲ್ಲಿ ವಿವರಿಸಿದ್ದರು. ಬಿಚ್ ಕಾಕ್ ಮುಂತಾದವರು ಮಗುವಿನ ಶೌಚ ಕಾರ್ಯದಲ್ಲಿ ತರಬೇತಿ, ಆಹಾರ ಪದ್ಧತಿ. ವಸ್ತ್ರ–ಒಡವೆ ಧರಿಸುವ ರೀತಿಗಳು. ಮಲಗುವ ರೀತಿಗಳು, ವ್ಯವಸ್ಥೆ ಮುಂತಾದ ಬಗೆಗೂ ಬರೆದಿದ್ದಾರೆ. ಈ ಅಭ್ಯಾಸಗಳು ಪ್ರಪಂಚದ ವಿವಿಧ ಸಮಾಜ–ಸಂಸ್ಕೃತಿಗಳಲ್ಲಿ ಬೆಳೆವ ಮಕ್ಕಳ ಬಗೆಗೆ ತಿಳಿಯಲು ಸಹಾಯವಾಗಿವೆ.

ಮಗುವನ್ನು ಕ್ರಿಯಾವಾದದ ರೀತಿಯಲ್ಲಿ (functional approach) ಯೂ ಅಭ್ಯಾಸ ಮಾಡಲಾಗಿದೆ. ಈ ಕ್ರಿಯಾವಾದದ ಮೂಲ ಪುರುಷನಾದ ಮಲಿನೋವಾಸ್ಕಿಯವರು ಶಾಂತ ಸಾಗರದಲ್ಲಿಯ ಪಲಿನೇಷಿಯನ್ ಮತ್ತು ಮೆಲನೇಷಿಯನ್ ದ್ವೀಪ ನಿವಾಸಿಗಳಲ್ಲಿ ಮಾಡಿದ ಅಭ್ಯಾಸಗಳ ಆಧಾರದಿಂದ ಬರೆದ ಪುಸ್ತಕಗಳಲ್ಲಿ (೧೯೨೯. ೧೯೩೨) ಈ ಸಮಾಜಗಳಲ್ಲಿ ಗರ್ಭಧಾರಣೆ. ಜನನ. ಕುಟುಂಬ ವ್ಯವಸ್ಥೆ. ಲೈಂಗಿಕ

ಸಂಬಂಧಗಳು ಮುಂತಾದವನ್ನು ಅರ್ಥಪೂರ್ಣವಾಗಿ ಮಗುವಿನ ಜೀವನಕ್ಕೆ ಹೆಣೆದು ವಿವರಿಸಿದ್ದಾರೆ. ಈ ಕ್ರಿಯಾವಾದಿಗಳ ವಿವರಣೆಯಂತೆ ಮಗುವಿನ ಬಗೆಗೆ ಇರುವ ಎಲ್ಲಾ ನಂಬಿಕೆ, ಆಚರಣೆ, ವಿಧಿಕಾರ್ಯಗಳು ಮುಂತಾದವುಗಳಿಗೆ ಒಂದು ಕ್ರಿಯೆ ಇದ್ದು, ಅಂತಹ ಆಚರಣೆಯಿಂದ ಮಗುವಿನ ಬೆಳವಣಿಗೆಗೆ ಅನುಕೂಲವಾಗುತ್ತದೆ. ಉದಾಹರಣೆಗೆ ಮಗುವಿನ ಬಗೆಗಿರುವ ಅನೇಕ ನಂಬಿಕೆಗಳೂ, ಆಚರಣೆಗಳಾದ ನಾಮಕರಣ, ಮುಂಜಿ, ಮುಂತಾದವು ಮಗುವಿನ ಸಾಮಾಜಿಕ, ದೈಹಿಕ ಸ್ಥಾನಮಾನವನ್ನು ತೋರಿಸಿ, ಮಗುವಿನಲ್ಲಿ ಸೂಕ್ತ ಮಾನಸಿಕ ಬೆಳವಣಿಗೆಯನ್ನು ತರುತ್ತವೆ ಎಂದು ತೋರಿಸಿದ್ದಾರೆ.

ವಿಧಿಕಾರ್ಯಗಳ ಅಭ್ಯಾಸದ ರೀತಿಯಿಂದಲೂ ಮಗುವನ್ನು ಅಭ್ಯಾಸ ಮಾಡಿ ಮಕ್ಕಳ ನಡವಳಿಕೆ ಮತ್ತು ಕಲಾವಸ್ತುಗಳು, ವಿಧಿಕಾರ್ಯದಲ್ಲಿಯ ತಮ್ಮ ಉಪಯೋಗ ದಿಂದಾಗಿ ಅವು ಹೇಗೆ ಒಂದಕ್ಕೊಂದು ಹೆಣೆದುಕೊಂಡಿವೆ ಎಂದೂ ತಿಳಿಸಿದ್ದಾರೆ. ಈ ವಿಧಾನದಲ್ಲಿ ಅಧ್ಯಯನಮಾಡಿರುವವರಲ್ಲಿ ಮಾರ್ಗರೆಟ್ ಮೀಡ್ (೧೯೨೮) ಮುಂತಾದವರು ಪ್ರಮುಖರು. ಅವರು ತಮ್ಮ **ಕಮಿಂಗ್ ಆಫ್ ಏಜ್ ಇನ್ ಸೋಮೋಅ** (Coming of Age in Somoa) ಎಂಬ ಪುಸ್ತಕದಲ್ಲಿ ಬೆಳೆಯುತ್ತಿರುವ ಹುಡುಗಿಯು ತನಗೆ ಕಾಲಕಾಲಕ್ಕೆ ಮಾಡಲಾಗುವ ಅನೇಕ ವಿಧಿಕಾರ್ಯಗಳಿಂದಾಗಿ ಹೇಗೆ ಕಳ್ಳುಬಳ್ಳಿ, ಸಮಾಜ, ಸಮುದಾಯ, ಲೈಂಗಿಕ ಕ್ರಿಯೆ, ವಿಧಿಕಾರ್ಯಗಳು, ಸಂಸ್ಕೃತಿ ಮುಂತಾದವು ಗಳ ಬಗೆಗೆ ತಿಳಿಯುತ್ತಾಳೆಂದೂ ವಿವರಿಸಿದ್ದಾರೆ.

ಮುಖ್ಯವಾಗಿ ಮಾನವಶಾಸ್ತ್ರಜ್ಞರು ತಮ್ಮ ಸಾಂಸ್ಕೃತಿಕ ಮೌಲ್ಯಗಳ, ಭಾವನೆಗಳ ಮತ್ತು ಯೋಜನೆಗಳ ಅಭ್ಯಾಸದಿಂದ ಇವು ಮಗುವಿನ ಬೆಳವಣಿಗೆಯನ್ನು ಹೇಗೆ ರೂಪ ಗೊಳಿಸುತ್ತವೆಂದು ತೋರಿಸಿದ್ದಾರೆ. ಮುಖ್ಯವಾಗಿ ಸಾಂಸ್ಕೃತಿಕ- ಮಾನವಶಾಸ್ತ್ರಜ್ಞರು ಇವು ಮಗುವಿನ ಭಾವನೆಗಳನ್ನು ಪ್ರಭಾವಗೊಳಿಸುತ್ತವೆಂದೂ ತಿಳಿಸಿದ್ದಾರೆ. ಇವರ ನಂಬಿಕೆಯಂತೆ ಮಗು ನಿರ್ದಿಷ್ಟ ಸಾಮಾಜಿಕ-ಸಾಂಸ್ಕೃತಿಕ ಸೆಳೆತಗಳಿಗೆ ಸಿಕ್ಕ ಒಂದು ಕ್ರಿಯೆ. ಅವನಲ್ಲಾಗುವ ದೈಹಿಕ ಬದಲಾವಣೆಗಳು ಅವನ ವಯಸ್ಸಿನಲ್ಲಿ ಆಗುವ ಕೇವಲ ಬದಲಾವಣೆಗಳಾಗಿರದೆ ಅವನ ಜೀವನದಲ್ಲಿ ಸಂಭವಿಸುವ ಮುಖ್ಯ ಹಾಗು ಅರ್ಥವತ್ತಾದ ಘಟನೆಗಳು ಆಗಿರುತ್ತವೆ. ಇದೇ ರೀತಿಯಲ್ಲಿ ಮಗುವಿನ ನಡವಳಿಕೆಯು ಸನ್ನಿವೇಶಕ್ಕೆ ತಕ್ಕಂತೆ ಬೇರೆಯಾಗುತ್ತದೆ. ಈ ವಿವಿಧತೆಗೆ ತಕ್ಕಂತೆ ಅದರ ಮನೋವಿಕಾಸ, ವ್ಯಕ್ತಿತ್ವಗಳು ಬದಲಾಗುತ್ತವೆ. ಮಗು ತನ್ನದು ಮತ್ತು ಹೊರಗಿನದು ಎಂದು ಎರಡು ಬಗೆಯ ವಾತಾವರಣವನ್ನು ಹೊಂದಿರುತ್ತದೆ. ತನಗೆ ತಾನೇ ಇದ್ದಾಗ ವ್ಯಕ್ತಿಯು ಏನು ಮಾಡುತ್ತಾನೆ, ಯಾವ ರೀತಿಯಲ್ಲಿ ತನ್ನ ಚಟುವಟಿಕೆಗಳನ್ನು ರೂಪಿಸಿ ಕೊಳ್ಳುತ್ತಾನೆ ಎಂಬುದು ಅವನು ಬೆಳೆದ ರೀತಿಯಿಂದ ತಿಳಿಯುತ್ತದೆ. ಅಲ್ಲದೆ ಮಗು ವನ್ನು ಒಬ್ಬ ವಿಚಾರಶೀಲ, ಭಾವನಾಶೀಲ ಮತ್ತು ಚಟುವಟಿಕೆಯುಳ್ಳ ವ್ಯಕ್ತಿ ಎಂದೂ, ಅವನು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಬೆಳೆಯುತ್ತಿರುವ ಮತ್ತು

ಬದಲಾಗುತ್ತಿರುವ ವ್ಯಕ್ತಿ ಎಂದು ತಿಳಿದು ವಯಸ್ಕರು ಅವರೊಂದಿಗೆ ನಡೆದುಕೊಳ್ಳಬೇಕು. ಇದು ತಿಳಿಯದೆ ಮಗುವನ್ನು ಮುಗ್ಧ, ಮೂರ್ಖ, ಮರುಳ ಮುಂತಾಗಿ ತಿಳಿದು ಅವನೊಂದಿಗೆ, ಅವನಿದ್ದೆಡೆ ಸೂಕ್ಷ್ಮವಾಗಿ ನಡೆದುಕೊಳ್ಳದಿದ್ದರೆ ಅವನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ತೊಂದರೆಗಳು, ಕುಂದು–ಕೊರತೆಗಳು ಕಂಡುಬರುತ್ತವೆ.

ಮಗು ಬೆಳೆಯುತ್ತಿರುವ ಕುಟುಂಬದ ರೀತಿಯೂ ಅದರ ವ್ಯಕ್ತಿತ್ವದ ಬೆಳವಣಿಗೆಗೆ ಮುಖ್ಯವಾದದ್ದು. ಕುಟುಂಬಗಳು ಬಹುಪತ್ನಿ, ಬಹುಪತಿತ್ವದ ರೀತಿಯವಿರಬಹುದು. ಸಂಖ್ಯೆಯಲ್ಲಿ ಸಣ್ಣ ಅಥವಾ ದೊಡ್ಡವಿರಬಹುದು. ಮೂಲ ಅಥವಾ ವಿಕೃತ ಕುಟುಂಬಗಳಿರಬಹುದು. ಕುಟುಂಬದಲ್ಲಿ ಅಜ್ಜ–ಅಜ್ಜಿಯರು, ಹತ್ತಿರದ ಸಂಬಂಧಿಕರೂ ಇರಬಹುದು, ಇಲ್ಲದಿರಬಹುದು. ಕುಟುಂಬವು ವಾಸವಾಗಿರುವ ಪ್ರದೇಶದ ಆಧಾರದಿಂದಲೂ ಅದನ್ನು ಗ್ರಾಮೀಣ, ನಗರದಲ್ಲಿಯ ಕುಟುಂಬಗಳೆಂದೂ ಭಾಗ ಮಾಡಬಹುದು. ಈ ಎಲ್ಲಾ ಕುಟುಂಬಗಳ ಹಿನ್ನೆಲೆಗಳೂ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತವೆ. ವ್ಯಕ್ತಿಗಳ ನಡವಳಿಕೆ, ವ್ಯಕ್ತಿತ್ವ ಮುಂತಾದವನ್ನು ಅಭ್ಯಾಸ ಮಾಡುವ ವ್ಯಕ್ತಿಯು ತನ್ನ ಬಾಲ್ಯದಲ್ಲಿ ಹೊಂದಿದ್ದ ಕುಟುಂಬದ ಹಿನ್ನೆಲೆಯನ್ನು ತಿಳಿಯಬೇಕಾಗುತ್ತದೆ.

ಯಾವುದೇ ಸಂಸ್ಕೃತಿಯನ್ನು ತೆಗೆದುಕೊಂಡರೂ ಅದರಲ್ಲಿ ಮಗು ಹುಟ್ಟುವುದಕ್ಕೆ ಮುನ್ನ, ಹುಟ್ಟಿದ ನಂತರ ಅನೇಕ ವಿಧಿಕಾರ್ಯಗಳನ್ನು ಆಚರಿಸಲಾಗುವುದು. ಅಲ್ಲದೆ ಹುಟ್ಟು, ಸಾವು, ಹೆರಿಗೆ ಮುಂತಾದವುಗಳ ಬಗ್ಗೆಯೂ ಅನೇಕ ನಂಬಿಕೆಗಳಿರುತ್ತವೆ. ಒಂದು ಮಗು ಹುಟ್ಟುವುದಕ್ಕೆ ಮುಂಚೆಯೇ ಅದು ತನ್ನ ತಂದೆ ತಾಯಿಗಳ ಸ್ಥಾನಮಾನದಲ್ಲಿ, ತನಗೆ ತಾನೇ ಅನೇಕ ಸ್ಥಾನ–ಮಾನ ಪಡೆದಿರುತ್ತದೆ. ಒಂದು ಮಗುವಿನ ಜನನದಿಂದ ತಂದೆ–ತಾಯಿಗಳ, ಅವರ ತಂದೆ ತಾಯಿಗಳ ಸ್ಥಾನ-ಮಾನಗಳು ಬದಲಾಗುತ್ತವೆ. ಇಲ್ಲಿಯವರೆಗೆ ಕೇವಲ ಗಂಡ ಹೆಂಡಿರಿದ್ದವರು ಮಗುವಿನ ಬರುವಿನಿಂದ ತಂದೆ ತಾಯಿಗಳು ಆಗಿ ತಮ್ಮ ತಂದೆ ತಾಯಿಗಳನ್ನು ಅಜ್ಜ ಅಜ್ಜಿಯರನ್ನಾಗಿ ಮಾಡುತ್ತಾರೆ. ಇವು ಅಲ್ಲದೆ ಸೋದರಕ್ಕ, ಸೋದರಮಾವ, ದೊಡ್ಡಪ್ಪ, ಚಿಕ್ಕಪ್ಪ, ಚಿಕ್ಕವ್ವ, ಹೀಗೆ ಅನೇಕ ಸಂಬಂಧಗಳು ಹುಟ್ಟಿಕೊಳ್ಳುತ್ತವೆ ಮತ್ತು ಕುಟುಂಬಕ್ಕೆ, ಕಳ್ಳುಬಳ್ಳಿಗೆ ಹೊಸದಾಗಿ ಬಂದ ಮನೆ, ಕುಟುಂಬದ ಆಸ್ತಿಪಾಸ್ತಿಗಳ ವಿಷಯ, ವಿವಾಹ ಸಂಬಂಧ ಮುಂತಾದವನ್ನೆಲ್ಲಾ ಹೊಸದಾಗಿ ಒಡಂಬಡಿಕೆಯಾಗುವಂತೆ ಮಾಡುತ್ತಾನೆ.

ಒಂದು ಮಗುವಿನ ಬರುವಿಕೆಯಿಂದ ತಂದೆ ತಾಯಿಗಳ ಸ್ಥಾನಮಾನದಲ್ಲಿಯೂ ಮಹತ್ವದ ಬದಲಾವಣೆಗಳು ಉಂಟಾಗುತ್ತವೆ. ಸಂಪ್ರದಾಯಸ್ಥ ಸಮಾಜದಲ್ಲಿಯಂತೂ ಮಕ್ಕಳನ್ನು ಪಡೆಯದ ದಂಪತಿಗಳ ಬಾಳು ಗೋಳಿನದಾಗುತ್ತದೆ. ಬಂಜೆತನಕ್ಕೆ ಅವರು ಪೂರ್ವಜನ್ಮಗಳಲ್ಲಿ, ಈ ಜನ್ಮದಲ್ಲಿ ಮಾಡಿರಬಹುದಾದ ಪಾಪಗಳೇ ಕಾರಣವೆಂದು

ತಿಳಿಯುತ್ತಾರೆ. ಇಂತಹ ದಂಪತಿಗಳನ್ನು ಮುಖ್ಯವಾಗಿ ಸ್ತ್ರೀಯರನ್ನು. ಯಾವ ವಿಧಿ ಕಾರ್ಯಗಳಿಗೂ ಆಹ್ವಾನಿಸುವುದಿಲ್ಲ. ಅವರಲ್ಲಿರುವ ಕೆಟ್ಟ ಭಾವನೆ ಅಥವಾ ದುಷ್ಟಶಕ್ತಿಗಳೇ ಅವರ ಬಂಜೆತನಕ್ಕೆ ಕಾರಣವೆಂದು ನಂಬಿ ಅವರು ಮಕ್ಕಳನ್ನು ಮುಟ್ಟಲು. ಕೆಲವೊಂದು ಸಾರಿ ನೋಡಲು ಕೂಡ ಬಿಡುವುದಿಲ್ಲ. ಹೀಗೆ ಸಮಾಜ ನಿಂದನೆಗೆ, ಬಹಿಷ್ಕಾರಕ್ಕೆ ಗುರಿಯಾದ ದಂಪತಿಗಳಿಗೆ ಒಂದು ಮಗುವಾದರೆ ಅವರ ಸಾಮಾಜಿಕ ಅಂತಸ್ತು, ಸಂಬಂಧಗಳೇ ಬೇರೆಯಾಗುತ್ತವೆ. ಇದೇ ರೀತಿ ಒಂದು ಮಗುವಿನ ಬರುವಿಕೆಯಿಂದ ದಂಪತಿಗಳ ವ್ಯಕ್ತಿತ್ವದಲ್ಲಿಯೂ ಮಹತ್ತರವಾದ ಬದಲಾವಣೆಗಳಾಗುತ್ತವೆ. ಇಲ್ಲಿಯವರೆಗೆ ಉಂಡುಟ್ಟ 'ಗೂಳಿಗಳಂತಿದ್ದ' ಇವರು ತಮ್ಮ ರೀತಿ-ನೀತಿಗಳಲ್ಲಿ, ನಡವಳಿಕೆಯಲ್ಲಿ ಬದಲಾವಣೆ ತಂದುಕೊಳ್ಳಬೇಕಾಗುತ್ತದೆ. ಕೇವಲ ಪ್ರೌಢವಯಸ್ಕರ ಒಡನಾಟದಲ್ಲಿದ್ದ ಇವರು ಮುಂದೆ ಮಕ್ಕಳ ಪ್ರಪಂಚಕ್ಕೆ ಹೊಂದಿಕೊಳ್ಳಬೇಕಾಗುತ್ತದೆ.

ಆಯಾ ಸಂಸ್ಕೃತಿಗೆ ತಕ್ಕಂತೆ ಗರ್ಭಧಾರಣೆಯ ಬಗ್ಗೆಯೂ ಅನೇಕ ಕಲ್ಪನೆಗಳಿರುತ್ತವೆ. ಪುರುಷ ಸಂಗದಿಂದ ಗರ್ಭಧಾರಣವಾಗುವುದೆಂದು ತಿಳಿದಿದ್ದರೂ. ಇದಕ್ಕೆ ಕೆಲವೊಂದು ಶಕ್ತಿಗಳು ಅಥವಾ ಪಿತೃಗಳು ಮತ್ತೆ ಕುಟುಂಬದಲ್ಲಿ ಹುಟ್ಟಿಬರುವುದರಿಂದ ಗರ್ಭಧಾರಣವಾಗುತ್ತದೆ ಎಂದು ನಂಬುತ್ತಾರೆ. ಹೀಗೆ ದೈವ ಅಥವಾ ಪಿತೃಗಳು ತಮ್ಮ ಗರ್ಭದಲ್ಲಿ ಜನ್ಮತಾಳುವರೆಂದು ನಂಬುವರಾದ್ದರಿಂದ ಗರ್ಭದ ಬಗೆಗೆ ಹೆಚ್ಚಿನ ಗೌರವ ಉಳ್ಳವರಾಗಿರುತ್ತಾರೆ ಮತ್ತು ಅನೇಕ ಆಚರಣೆಗಳನ್ನು ಮಾಡುತ್ತಾರೆ. ಉದಾಹರಣೆಗೆ ಗರ್ಭಿಣಿಯರು ರಾತ್ರಿ ಮತ್ತು ನಡುಹಗಲಿನಲ್ಲಿ. ಗ್ರಹಣ ಕಾಲದಲ್ಲಿ. ಅಮಾವಾಸ್ಯೆ ಕಾಲದಲ್ಲಿ ಹೊರಬರುವಂತಿಲ್ಲ. ಇದೇ ರೀತಿ ಆಕೆಯು ತನ್ನ ಊಟ ತಿಂಡಿಗಳಲ್ಲಿ. ಕೆಲಸ-ಕಾರ್ಯದಲ್ಲಿ. ಕೆಲವು ನಿಯಂತ್ರಣ ಹೊಂದಿರಬೇಕಾಗುತ್ತದೆ. ಆಕೆ ಜೋಡಿ ಬಾಳೆ ಹಣ್ಣು. ಗಟ್ಟಿ ಪದಾರ್ಥ ಮುಂತಾದವನ್ನು ತಿನ್ನುವಂತಿಲ್ಲ. ಭಾರವಾದ ವಸ್ತುಗಳನ್ನು ಎತ್ತುವಂತಿಲ್ಲ. ತರಕಾರಿ, ಹಣ್ಣು ಮುಂತಾದವನ್ನು ಕತ್ತರಿಸುವಂತಿಲ್ಲ, ಮೆಟ್ಟಿಲು ಹತ್ತುವಂತಿಲ್ಲ, ಶವಸಂಸ್ಕಾರ, ಹೆರಿಗೆಯನ್ನು. ಹಾವು ಮುಂತಾದ ದುಷ್ಟಜಂತುಗಳನ್ನು ನೋಡುವಂತಿಲ್ಲ ಮುಂತಾಗಿ. ಇದೇ ರೀತಿ ಆಕೆ ಪಾಲಿಸಲೇಬೇಕಾದ ನಿಯಮಗಳು ಇರುತ್ತವೆ. ಆಕೆ ಲಘುವಾಗಿ ಉಂಡುಟ್ಟು. ಲಘು ಕೆಲಸ-ಕಾರ್ಯಗಳನ್ನು ಮಾಡುತ್ತಾ, ಸದಾ ನಗುತ್ತಿರಬೇಕು. ಸಾಧ್ಯವಾದರೆ ಪುರಾಣ-ಪುಣ್ಯಕಥೆಗಳಲ್ಲಿ ಬರುವ ಬಾಲಕರ ಸಾಹಸದ ಕಥೆಗಳನ್ನು ಹಾಡುಗಳನ್ನು ಕೇಳಬೇಕು. ಇದರಿಂದಾಗಿ ಮುಂದೆ ಹುಟ್ಟುವ ಮಗುವಿನಲ್ಲಿ ದೈಹಿಕವಾಗಿ, ಮಾನಸಿಕವಾಗಿ ಯಾವ ರೀತಿಯ ಕುಂದುಗಳೂ ಬರದೆ ಮಗು ಉತ್ತಮವಾಗಿರುತ್ತದೆ ಎಂದು ನಂಬಲಾಗುವುದು.

ಎಲ್ಲಾ ಸಮಾಜಗಳಲ್ಲೂ ಗರ್ಭಧಾರಣೆಗೆ ಸಂಬಂಧಪಟ್ಟ ಒಂದು ವಿಧಿ ಕ್ರಿಯೆ ಇರುತ್ತದೆ. ಇದನ್ನು ನಮ್ಮಲ್ಲಿ ಸೀಮಂತ ಕಾರ್ಯವೆಂದು ಹೇಳುತ್ತಾರೆ. ಇದರ

ಮತ್ತು ಸಾಮ್ಯಕವನ್ನು ತಿಳಿಯಲು ನಾವು ಕೆಲವೊಂದು ಆದಿವಾಸಿ ಸಮಾಜಗಳಲ್ಲಿನ ಈ ಆಚರಣೆಯ ಕ್ರಿಯೆಯನ್ನು ಅಭ್ಯಾಸ ಮಾಡಬೇಕು. ಉದಾಹರಣೆಗೆ, ತೋಡರಲ್ಲಿ ಗರ್ಭಿಣಿಗೆ ಬಿಲ್ಲು ಬಾಣ ನೀಡುವ ಕಾರ್ಯವನ್ನು ಆಕೆಯಲ್ಲಿನ ಮಗುವಿನ ತಂದೆಯಾದವನು ಅಥವಾ ಆ ಮಗುವಿನ ತಂದೆ ಎನಿಸಿಕೊಳ್ಳಬಯಸುವವನು ಆಚರಿಸುತ್ತಾನೆ. ಇದೇ ರೀತಿ ಅನೇಕ ಆದಿವಾಸಿ ಸಮಾಜಗಳಲ್ಲಿ ಮಗು ತನ್ನದೆನ್ನುವುದನ್ನು ಸಮಾಜಕ್ಕೆ ತಿಳಿಸಲು ಗಂಡ ಅಥವಾ ಅವನ ಮನೆಯವರು ಈ ವಿಧಿಯನ್ನು ಆಚರಿಸಬೇಕು. ಯಾವುದೇ ಕಾರಣಕ್ಕೆ ಗಂಡನ ಕಡೆಯವರು ಈ ಕಾರ್ಯವನ್ನು ಆಚರಿಸದಾದಾಗ ಅವರ ಹೆಸರಿನಲ್ಲಿ ಉಳಿದವರು ಆಚರಿಸುತ್ತಾರೆ. ಇದನ್ನು ಆಚರಿಸದಿದ್ದರೆ ಆ ಮಗುವಿನ ಪಿತೃತ್ವದ ಬಗೆಗೆ ತಪ್ಪು ಅಭಿಪ್ರಾಯ ಬರುತ್ತದೆ.

ಸೀಮಂತ ಕಾರ್ಯವನ್ನು ಸಾಮಾನ್ಯವಾಗಿ ಮೊದಲನೆಯ ಗರ್ಭಧಾರಣದ ಏಳನೆಯ ತಿಂಗಳು ತುಂಬಿದ ನಂತರ ಆಚರಿಸುವರು. ಈ ವೇಳೆಗೆ ಯಾವ ಕಾರಣಕ್ಕೂ ಗರ್ಭಪಾತವಾಗುವ ಸಂಭವಗಳು ಕಡಿಮೆ ಇರುತ್ತವೆ. ತಾಯಿಯಾಗುವವರು ಅನೇಕ ಚಟುವಟಿಕೆಗಳಿಂದ ದೂರವಿರುವ ಮತ್ತು ಅನೇಕ ಆಚರಣೆಗಳನ್ನು ಪಾಲಿಸುವುದರಲ್ಲಿ ತೊಡಗುವುದೂ ಈ ಕಾರ್ಯದಿಂದ ಪ್ರಾರಂಭವಾಗುತ್ತದೆ. ಈ ಕಾರ್ಯದ ನಂತರ, ಸಾಮಾನ್ಯವಾಗಿ ಮೊದಲ ಹೆರಿಗೆ ತೌರುಮನೆಯಲ್ಲಿ ಆಗುವುದರಿಂದ, ಈಕೆಯನ್ನು ತೌರುಮನೆಗೆ ಕಳುಹಿಸಿಕೊಡುತ್ತಾರೆ. ಇಲ್ಲಿ ಕೂಡ ನೆರೆಹೊರೆಯವರು. ಸ್ನೇಹಭಾವನೆಯುಳ್ಳ ಸಂಬಂಧಿಕರು. ಕುಲಸ್ಥರು ಈಕೆಯನ್ನು ಕರೆದು ಉತ್ತಮವಾದ ಊಟ ನೀಡಿ, ಒಳ್ಳೆಯ ಮಾತನಾಡಿ, ಬಳೆ ಮುಂತಾದವನ್ನು ನೀಡುತ್ತಾರೆ. ಇಂತಹ ಉತ್ತಮ ವಾತಾವರಣ ಆಕೆಯ ಮಾನಸಿಕ ಮತ್ತು ದೈಹಿಕವಾಗಿ ಹೆಚ್ಚಿನ ಸಹಾಯ ಮಾಡಿ ಆಕೆಗೆ ಯಾವ ತೊಂದರೆಗಳೂ ಇಲ್ಲದೆ ಸುಗಮ ಹೆರಿಗೆಯಾಗುವಂತೆ ಮಾಡುವಲ್ಲಿ ನೆರವಾಗುತ್ತವೆ. ಹೀಗೆ ತಮ್ಮ ಮನೆಗೆ ಮೊಮ್ಮಗನನ್ನು ತರುವವಳೆಂದು ಪ್ರೀತಿಯಿಂದ ನೋಡಿಕೊಳ್ಳುವುದರಿಂದ. ಅನೇಕ ಕಷ್ಟದ ಹಾಗೂ ಬೇಸರ ತರುವ ಕೆಲಸಗಳಿಂದ ಆಕೆಯನ್ನು ದೂರವಿಡುವುದರಿಂದ. ಸೀಮಂತ ಮುಂತಾದ ಕಾರ್ಯಗಳನ್ನು ಮಾಡುವುದರಿಂದ ಆಕೆಯ ಮನಸ್ಸು ಸದಾ ಪ್ರಸನ್ನವಾಗಿರುತ್ತದೆ ಮತ್ತು ತಾನು ಎಲ್ಲರ ಅಕ್ಕರೆಯ ಕೇಂದ್ರಬಿಂದುವೆಂದು ಸಂತೋಷ ಪಡುತ್ತಾಳಾದ್ದರಿಂದ ಆಕೆಯ ಆರೋಗ್ಯ ಉತ್ತಮಗೊಂಡು ಆಕೆಯಲ್ಲಿನ ಮಗುವಿನ ಆರೋಗ್ಯವೂ ಉತ್ತಮವಾಗಿ ಉಳಿಯುತ್ತದೆ.

ಹಿಂದೂ ಸಮಾಜದಂತೆ ಅನೇಕ ಇತರ ಸಮಾಜಗಳಲ್ಲಿಯೂ ತಮ್ಮ ಮೊದಲ ಮಗು ಗಂಡಾಗಬೇಕೆಂಬ ಬಯಕೆ ತಂದೆ ತಾಯಿಗಳಲ್ಲಿರುತ್ತದೆ. ಕೆಲವೊಂದು ಸಮಾಜಗಳಲ್ಲಿ ಕೇವಲ ತಂದೆಗೆ ಮಾತ್ರ ತನ್ನ ಮಗು ಗಂಡಾಗಲೆಂಬ ಬಯಕೆ ಇದ್ದು, ತಾಯಂದಿರು ಹೆಣ್ಣಾಗಲೆಂದು ಬಯಸುತ್ತಾರೆಂದು ನಂಬಲಾಗಿದೆ. ಆದರೆ ಸಾಮಾನ್ಯವಾಗಿ ಎಲ್ಲರೂ

ತಮ್ಮ ಮೊದಲ ಮಗು ಗಂಡಾಗಲೆಂದು ಬಯಸುತ್ತಾರೆ. ಇದು ಕೇವಲ ಅವರ ಬಯಕೆ ಮಾತ್ರವಾಗಿರದೆ ಇಡೀ ಸಮಾಜದಲ್ಲಿನ ಮೌಲ್ಯವೂ ಆಗಿರುತ್ತದೆ. ಮೊದಲ ಮಗು ಮಗನಾದರೆ ಆದಷ್ಟು ಬೇಗ ತನ್ನನ್ನು ಕೆಲಸದಿಂದ ಬಿಡಿಸುತ್ತಾನೆಂದು ತಂದೆಯ ಆಸೆಯಾದರೆ, ಮಗ ದೊಡ್ಡವನಾಗಿ ಸೊಸೆ ತಂದು ತನ್ನನ್ನು ಆದಷ್ಟು ಜಾಗ್ರತೆ ಮನೆಗೆಲಸದಿಂದ ಬಿಡಿಸುತ್ತಾನೆಂದು ಹೆಂಡತಿಯ ಆಸೆ. ಹೀಗೆ ಆಸೆ ಪಡುವುದು ಸಾಮಾನ್ಯವಾದರೂ ಮುಂದೆ ಗಂಡೇ ಹುಟ್ಟಲಿ, ಹೆಣ್ಣೇ ಹುಟ್ಟಲಿ ತಂದೆ–ತಾಯಿಗಳು. ಕುಟುಂಬದವರು ಯಾರೂ ಬೇಸರಪಟ್ಟುಕೊಳ್ಳುವುದಿಲ್ಲ. ಕೆಲವು ವೇಳೆ ಬರೀ ಹೆಣ್ಣು ಮಕ್ಕಳೇಕೆ ಗಂಡು ಮಕ್ಕಳನ್ನೇ ಹಡೆದರೂ ಬೇಸರಪಟ್ಟುಕೊಳ್ಳುತ್ತಾನೆ. ಕೆಲವೊಂದು ವೇಳೆ ಬರೀ ಹೆಣ್ಣು ಮಕ್ಕಳನ್ನೇ ಹೆತ್ತ ಹೆಂಡತಿಯ ಮೇಲೆ ಮತ್ತೊಬ್ಬ ಹೆಂಡತಿಯನ್ನು ತಂದು ಮಗನನ್ನು ಪಡೆಯಬಹುದು.

ಹೆರಿಗೆಯ ದಿನಗಳು ಸಮೀಪಿಸಿದಂತೆ ಕುಟುಂಬದ ಎಲ್ಲರಲ್ಲೂ ಆಕೆಯ ಬಗೆಗೆ ಕಾತುರತೆ ಹೆಚ್ಚಾಗುತ್ತದೆ. ಮೊದಲನೆಯ ಬಾರಿಗೆ ಗರ್ಭಿಣಿಯಾದ ತಾಯಿಯ ಬಗೆಗೆ ಕುಟುಂಬದ, ನೆರೆಹೊರೆಯ ಎಲ್ಲರೂ ಕಾತುರರಾಗಿರುವುದರಿಂದ ಆಕೆಯಲ್ಲಾಗುವ ಅಲ್ಪ ಬದಲಾವಣೆಗಳನ್ನೂ ಗಮನಿಸುತ್ತಾರೆ ಮತ್ತು ಕೂಡಲೇ ಸೂಕ್ತ ಪರಿಹಾರ, ಸಲಹೆ ಸೂಚಿಸುತ್ತಾರೆ. ಹೆರಿಗೆಯ ಕಾಲ ಸಮೀಪಿಸಿದಂತೆ ದೇಹದಲ್ಲಾಗುವ ರಾಸಾಯನಿಕ ಕ್ರಿಯೆಯಿಂದಾಗಿ ತಾಯಿಯಾಗುವವಳ ದೈಹಿಕ ಚಟುವಟಿಕೆಗಳು ಬದಲಾಗುತ್ತವೆ ಮತ್ತು ಆಕೆಯ ದೇಹದಲ್ಲಿ ಅವ್ಯಕ್ತವಾದ ನೋವುಗಳು ಪ್ರಾರಂಭವಾಗುತ್ತವೆ. ಮೊದಲ ಬಾರಿಗೆ ತಾಯಿಯಾಗುವವಳಿಗೆ ಇದು ಹೆರಿಗೆಯ ನೋವೆಂದು ಪ್ರಾರಂಭದಲ್ಲಿ ತಿಳಿಯದಿರಬಹುದು. ಹೆರಿಗೆಯಲ್ಲಿ ಸಹಾಯ ಮಾಡಲು ಸಾಮಾನ್ಯವಾಗಿ ಕುಟುಂಬದ, ನೆರೆಹೊರೆಯ ಮಹಿಳೆಯರು ಮತ್ತು ಸೂಲಗಿತ್ತಿಯೊಬ್ಬಳು ನೆರವಾಗುತ್ತಾಳೆ. ಕೆಲವೊಂದು ವೇಳೆ ಹೆರಿಗೆ ತಡವಾದರೆ ತಮಗೆ ತಿಳಿದ ನಾಟಿ ವೈದ್ಯೋಪಚಾರಗಳನ್ನು ಮಾಡುವುದು. ಬೇಕಾದ ದೇವರಿಗೆ ಹರಕೆ ಮಾಡಿಕೊಳ್ಳುವುದು ಸಾಮಾನ್ಯ.[೧]

ಮಗು ಹುಟ್ಟಿದ ವೇಳೆಯ ಆಧಾರದ ಮೇಲೆ ಮುಂದೆ ಅವನು ಯಾವ ತರಹದ ನಡವಳಿಕೆಯವನಾಗುತ್ತಾನೆಂದೂ ಹೇಳುತ್ತಾರೆ. ಒಂದು ಮಗು ಬೆಳಗಿನ ಜಾವ ಹುಟ್ಟಿದರೆ ಅದು ದುಡಿಮೆಗಾರನೂ. ಮಧ್ಯಾಹ್ನದಲ್ಲಿ ಹುಟ್ಟಿದರೆ ಬಿಸಿಲಿನಂತೆ ಸಿಟ್ಟಿನವನೂ. ಸಂಜೆಯಲ್ಲಿ ಹುಟ್ಟಿದರೆ ಮೈಗಳ್ಳನೂ, ಮಧ್ಯರಾತ್ರಿ ಹುಟ್ಟಿದರೆ ಸೋಮಾರಿ, ಆಲಸಿಯೂ ಆಗುತ್ತಾನೆಂದು ತಿಳಿಯುವರು. ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ಮತ್ತು ಇಂತಹ ನಂಬಿಕೆಗಳು ಮಗುವಿನ ಮೇಲೆ ಯಾವ ತರಹದ ಪರಿಣಾಮ ಬೀರುತ್ತ

---

೧ ಇಂದು ನಮ್ಮ ಸಮಾಜದಲ್ಲಿರುವ ಅನೇಕ ಹಿರಿಯರು ಅವರು ಹುಟ್ಟುವಾಗ ಹೆರಿಗೆಯಲ್ಲಿ ಆದ ತೊಂದರೆಯ ನಿವಾರಣೆಗೆ ಹರಕೆ ಹೊತ್ತು ಬಿಟ್ಟಂತಹವರು ಎಂಬ ಪ್ರತೀತಿಯೂ ಇದೆ.

ವೆಂಬುದನ್ನು ಸೂಕ್ತ ಸಂಶೋಧನೆಯಿಂದ ತಿಳಿಯಬೇಕಾಗಿದೆ. ಅಂದರೆ ಯಾರಾದರೂ ಮಗು ಸಿಟ್ಟಿನವನಾದರೆ, ಹಟ ಮಾಡಿದರೆ ಎಲ್ಲರೂ ಅವನು ಇಂತಹ ವೇಳೆಯಲ್ಲಿ ಹುಟ್ಟಿದ್ದೇ ಕಾರಣವೆಂದು ಹೇಳಿ, ಉಳಿದವರು ಅವನಿಂದ ದೂರವಿರುವಂತೆ ಮಾಡುತ್ತಾರೆ. ಇದೇ ಮನೋಭಾವನೆ ಬೆಳೆಸಿಕೊಂಡ ಮಗು ಇದನ್ನೇ ಸೂಕ್ತ ನಡವಳಿಕೆ ಎಂದು ತಿಳಿದು ಈ ರೀತಿಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ.

ಹುಟ್ಟಿದ ಮಗುವನ್ನು ಆಯಾ ಧರ್ಮಕ್ಕೆ ತಕ್ಕಂತೆ ಆದಷ್ಟು ಜಾಗ್ರತೆ ತಮ್ಮಲ್ಲಿ ಸೇರಿಸಿಕೊಳ್ಳುವುದು ಪದ್ಧತಿ. ಮಡಿ ಮೈಲಿಗೆಯ ನೇಮದಲ್ಲಿ ಹೆಚ್ಚಿನ ಆಸ್ಥೆ ಉಳ್ಳವರು ಇದನ್ನು ಬಹಳ ದಿನಗಳ ನಂತರ ಮಾಡಬಹುದು. ಉಳಿದವರು ಹೆಚ್ಚೆಂದರೆ ಮೂರು ದಿನದಲ್ಲಿಯೇ ಮಾಡಿ ಬಿಡುತ್ತಾರೆ. ಈ ಸಂದರ್ಭದಲ್ಲಿ ಮಗುವಿಗೆ ಒಂದು ಹೆಸರು ನೀಡುವುದರ ಜೊತೆಗೆ. ಹೆರಿಗೆಯಿಂದ ಮೈಲಿಗೆಯಾದ ಮನೆ ಮತ್ತು ಮನೆಯವರನ್ನು ಮಡಿ ಮಾಡಲು ಒಂದು ವಿಧಿಯನ್ನು ಆಚರಿಸಲಾಗುವುದು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ಸಂತೋಷವನ್ನು ವ್ಯಕ್ತಪಡಿಸಲು, ಕುಟುಂಬವು ತಮಗೆ ಬೇಕಾದವರಿಗೆ ಔತಣ ನೀಡಬಹುದು. ಈ ಆಚರಣೆಯು ನೆಂಟರಿಗೆ ಮತ್ತು ಸ್ನೇಹಿತರಿಗೆ ಕುಟುಂಬವನ್ನು ಮತ್ತು ಹೊಸ ತಾಯಿ ಮಗುವನ್ನು ಸಂದರ್ಶಿಸುವ ಒಂದು ಅವಕಾಶವನ್ನು ತಂದು, ಮಗುವಿಗೆ ಏನಾದರೂ ಹೊಸ ಬಟ್ಟೆ ಅಥವಾ ಹಣದ ರೂಪದಲ್ಲಿ ಕಾಣಿಕೆ ಕೊಟ್ಟು ತಮ್ಮ ಸಂತೋಷ ವ್ಯಕ್ತಪಡಿಸುವರು.

ಮಗುವಿಗೆ ಯಾವ ಹೆಸರಿಡಬೇಕೆನ್ನುವುದನ್ನು ಆಧುನಿಕ ಸಮಾಜದಲ್ಲಿ ಪುರೋಹಿತರು ನಿರ್ಣಯಿಸಿದರೆ, ಗ್ರಾಮೀಣ, ಜನಪದ ಮತ್ತು ಆದಿವಾಸಿಗಳಲ್ಲಿ ಕುಟುಂಬದ ಹಿರಿಯರೇ ನಿರ್ಣಯಿಸುತ್ತಾರೆ. ಸಾಮಾನ್ಯವಾಗಿ ಮನೆದೇವರು, ಇಷ್ಟದೇವರು, ಅಜ್ಜ-ಅಜ್ಜಿ. ಸ್ನೇಹಿತರು ಮುಂತಾದವರ ಹೆಸರಿಡಬಹುದು. ಅನೇಕ ವೇಳೆ ಒಂದು ನಿರ್ದಿಷ್ಟವಾದ ಉದ್ದೇಶದಿಂದ ಹೆಸರನ್ನು ಸೂಚಿಸಬಹುದು. ಉದಾಹರಣೆಗೆ, ಯಾರಿಂದಾದರೂ ಆಸ್ತಿಯನ್ನು ದಾನವಾಗಿ ಪಡೆಯುವ ಮಗುವಿಗೆ ಇದನ್ನು ಸೂಚಿಸಲು ದಾನಪ್ಪನೆಂದೂ: ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ಇದು ಯಾವುದೋ ದುಷ್ಟಶಕ್ತಿಯ ಕಾಟವೆಂದು ತಿಳಿದು ಇದನ್ನು ತಪ್ಪಿಸಲು ಯಾವುದಾದರೊಂದು "ಸೊಟ್ಟ" ಹೆಸರುಗಳಾದ ಪಡಕಪ್ಪ, ಮುರುಡಪ್ಪ ಮುಂತಾದವನ್ನೂ: ಬರೀ ಹೆಣ್ಣು ಮಕ್ಕಳೇ ಹುಟ್ಟುತ್ತಿದ್ದರೆ ಇದನ್ನು ತಪ್ಪಿಸಲು 'ಪ'ಕಾರದಿಂದ ಪ್ರಾರಂಭವಾಗುವ ಹೆಸರುಗಳನ್ನೇ ಇಡಬಹುದು. ಕೆಲವೊಂದು ಸಾರಿ ಯಾರಾದರೂ ಹುಡುಗಿ ಸೋದರಿಕೆಯಲ್ಲಿ, ಸ್ನೇಹಿತರಲ್ಲಿ ಇಂತಹವರನ್ನೇ ವಿವಾಹವಾಗುವುದಿದ್ದರೆ ಆಕೆಗೂ ಆಕೆಯ ಭಾವಿಪತಿಯ ಹೆಸರಿನಲ್ಲಿ ಹೆಸರಿಡುತ್ತಾರೆ. ಹುಡುಗನ ಹೆಸರಿಗೆ ಸರಿಹೋಗುವಂತೆ, ಅಂದರೆ ಬಸಪ್ಪ-ಬಸವ್ವ, ಸಿದ್ದಪ್ಪ-ಸಿದ್ದವ್ವ ಹೀಗೆ ಹೆಸರು ಕೊಡುತ್ತಾರೆ. ಹೀಗೆ ಮಗುವಿಗಿಡುವ

ಹೆಸರು ಕೂಡ ಮಗುವಿನ ಮಾನಸಿಕ ಬೆಳವಣಿಗೆಯ ಮೇಲೆ ಯಾವ ಪರಿಣಾಮ ಮಾಡಿ ಅವನ ನಡವಳಿಕೆಯಲ್ಲಿ, ವ್ಯಕ್ತಿತ್ವದಲ್ಲಿ ಸೂಕ್ಷ್ಮ ವ್ಯತ್ಯಾಸ ತರುತ್ತದೆ ಎಂಬುದನ್ನು ಅಭ್ಯಾಸ ಮಾಡಿ ತಿಳಿಯಬಹುದು.

ಶಿಶು ಅವಸ್ಥೆಯಲ್ಲಿ ಮಕ್ಕಳಿಗೆ ಬರುವ ರೋಗಗಳಿಗೆ, ಸಾವಿಗೆ ಅನೇಕ ಗ್ರಹಗಳು, ದುಷ್ಟ ಶಕ್ತಿಗಳು ಕಾರಣವೆಂದು ನಂಬುತ್ತಾರೆ. ಆದರೆ ಕೆಲವು ರೋಗಗಳು ಅನುವಂಶಿಕವಾದುವಿದ್ದು ಉಳಿದವು ಅನಾರೋಗ್ಯಕರವಾದ ವಾತಾವರಣದಿಂದ ಮತ್ತು ಮಕ್ಕಳನ್ನು ನೋಡಿಕೊಳ್ಳುವವರ ಅಜ್ಞಾನದಿಂದ ಬರುತ್ತವೆಂಬುದು ತಿಳಿಯದು. ಜನಪದ ಹಿನ್ನೆಲೆಯಿಂದ ಬಂದ ಇವರಿಗೆ ರೋಗಗಳು ಹೇಗೆ ಬರುತ್ತವೆ ಎಂಬುದಕ್ಕೆ ತಮ್ಮದೇ ಆದ ಕೆಲವು ನಂಬಿಕೆಗಳನ್ನು ಹೊಂದಿರುತ್ತಾರೆ. ಇವರ ನಂಬಿಕೆಯಂತೆ ರೋಗಗಳನ್ನು ಮುನಿದ ದೈವಗಳು, ಪಿತೃಗಳು, ದುಷ್ಟಶಕ್ತಿಗಳು, ಮಾಯ, ಮಾಟ ಮುಂತಾದವು ತರುತ್ತವೆ. ಆದ್ದರಿಂದ ಯಾರಿಗಾದರೂ ಕಾಯಿಲೆ ಬಂದ ಕೂಡಲೆ ಇದನ್ನು ತಂದಿರಬಹುದಾದ ಈ ಶಕ್ತಿಯನ್ನು ಮೊದಲೇ ಗೊತ್ತುಹಚ್ಚಿ ಅದನ್ನು ಹರಕೆ, ಪೂಜೆ, ಆಹುತಿ, ಪ್ರಾರ್ಥನೆ ಮುಂತಾದವುಗಳಿಂದ ಒಲಿಸಿಕೊಂಡು ಮತ್ತಷ್ಟು ಆರೋಗ್ಯ ಪಡೆಯಲು ಪ್ರಯತ್ನಿಸುತ್ತಾರೆ. ಅನೇಕ ವೇಳೆ ಮಡಿ ಮೈಲಿಗೆ ನಿಯಮಗಳನ್ನು ಉಲ್ಲಂಘಿಸುವುದರಿಂದ, ದೈವಗಳಿಗೆ ಅಗೌರವ ತೋರುವುದರಿಂದ ರೋಗಗಳು ಬರುತ್ತವೆ. ಆದ್ದರಿಂದ ಚಿಕ್ಕಮಕ್ಕಳಿರುವ ಮನೆಗಳಲ್ಲಿ ಹೆಚ್ಚಿನ ಮಡಿ- ಮೈಲಿಗೆ ನೇಮಗಳನ್ನು ಪಾಲಿಸುವರು ಮತ್ತು ಮಗುವಿಗೆ ಹಾಲು ಕೊಡುವಾಗ ಯಾರೂ ಮನೆಯೊಳಗೆ ಬರುವಂತಿಲ್ಲ ಮತ್ತು ಗಲಾಟೆ ಕೂಡ ಮಾಡಲಾಗದು.

ಸಾಮಾನ್ಯವಾಗಿ ಮಗುವಿಗೆ ಆಹಾರ ನೀಡುವಲ್ಲಿ ಯಾವ ಅಳತೆ ಇತಿಮಿತಿಗಳಿಲ್ಲ. ಮಗು ಅತ್ತಾಗಲೆಲ್ಲ ಅದು ಉಂಡು ತೃಪ್ತಿಗೊಂಡು ಕುಡಿಯುವುದನ್ನು ಬಿಡುವವರೆಗೂ ಹಾಲು ಕುಡಿಸುತ್ತಾರೆ. ಆದರೆ ತಾವು ನೀಡಿದ ಹಾಲು ಹೆಚ್ಚಾಯಿತೆ ಅಥವಾ ಕಡಿಮೆಯಾಯಿತೆ ಎಂಬುದಾಗಲೀ, ಮಗು ಅಳುವುದು ಆಹಾರ ಅಥವಾ ಮತ್ತಾವುದಾದರೂ ಕಾರಣಕ್ಕೋ ಎಂಬುದನ್ನು ಇವರು ತಿಳಿಯಲಾರರು. ಪೌಷ್ಟಿಕ ಆಹಾರ, ಅನ್ನಾಂಗಗಳು ಇವುಗಳ ಬಗೆಗೆ ಇವರಿಗೆ ತಿಳಿಯದಾದರೂ ಸಾಂಪ್ರದಾಯಿಕವಾಗಿ ಬಂದ ರೀತಿಯಲ್ಲಿ ಮಕ್ಕಳಿಗೆ, ಬಾಣಂತಿಗೆ ಊಟ ಉಪಚಾರಗಳನ್ನು ಮಾಡುವರು. ಹೀಗಾಗಿ ಅನ್ನಾಂಗಗಳ ಕೊರತೆಯಿಂದ, ರಕ್ತ ಹೀನತೆಯಿಂದ ಅನೇಕ ಮಕ್ಕಳು ಬಾಲ್ಯದಲ್ಲೇ ಮರಣ ಹೊಂದುತ್ತವೆ. ಇಲ್ಲವೆ ಅನ್ನಾಂಗದ ಕೊರತೆಯಿಂದ ಕುರುಡಾಗುತ್ತವೆ ಅಥವಾ ಬುದ್ಧಿ ಬೆಳವಣಿಗೆಯಲ್ಲಿ ಕುಂಠಿತವಾಗುತ್ತವೆ.

ಮಗು ಹುಟ್ಟಿದ ಮೂರು ದಿನದಲ್ಲಿ ತಾಯಿಯಲ್ಲಿ ಹಾಲು ಬರುತ್ತದೆ ಎಂದು ನಂಬಿಕೆ. ಇದು ಒಂದೆರಡು ದಿನ ತಡವಾಗಬಹುದು. ಇನ್ನೂ ತಡವಾದರೆ ಇದಕ್ಕೆ

ಸೂಕ್ತ ಗಿಡಮೂಲಿಕೆಗಳ ಔಷಧಿ ಅಥವಾ ಕೋಳಿ, ಕುರಿ ಮಾಂಸ ಮತ್ತು ಎಲುಬನ್ನು ಬೇಯಿಸಿದ ರಸವನ್ನು ಕುಡಿಸುತ್ತಾರೆ. ತಾಯಿಯಲ್ಲಿ ಹಾಲು ಬರುವವರೆಗೆ ಮಗುವಿಗೆ ಯಾವುದಾದರೂ ಸಾಕು ಪ್ರಾಣಿಯ ಹಾಲಲ್ಲಿ ಹತ್ತಿ ಅಥವಾ ಬಟ್ಟೆಯ ತುಂಡನ್ನು ಅದ್ದಿ ಅದನ್ನು ಮಗು ಚೀಪುವಂತೆ ಅದರ ಬಾಯಲ್ಲಿಡುತ್ತಾರೆ. ಮುಂದೆ ತಾಯಿಯಲ್ಲಿ ಹಾಲು ಬಂದಾಗ ಅದನ್ನೇ ಕುಡಿಯಲು ಪ್ರಾರಂಭಿಸುತ್ತದೆ. ಕೆಲವು ತಾಯಂದಿರಲ್ಲಿ ಹೆಚ್ಚಿಗೆ ಅಥವಾ ಸಾಕಷ್ಟು ಹಾಲು ಬಂದರೆ ಅನೇಕರಲ್ಲಿ ಕಡಿಮೆ ಬರುತ್ತವೆ. ಹಾಲು ಕಡಿಮೆಯಾದಾಗಲೂ ಮಗುವಿಗೆ ಯಾವುದಾದರೂ ಪ್ರಾಣಿಯ ಹಾಲನ್ನು ನೀಡುತ್ತಾರೆ. ಹಾಲು ಹೆಚ್ಚಾದಾಗ ಮಗು ಕುಡಿದ ನಂತರವೂ ಹೊರಚೆಲ್ಲಬಹುದು. ಎದೆಹಾಲು ಅಪರೂಪದ ವಸ್ತುವಾದ್ದರಿಂದ ಅದನ್ನು ಎಲ್ಲೆಂದರಲ್ಲಿ ಚೆಲ್ಲದೆ ಒಂದು ಪಾತ್ರೆ ಅಥವಾ ತೆಂಗಿನ ಚಿಪ್ಪಿನಲ್ಲಿ ಬೂದಿ ತುಂಬಿಟ್ಟುಕೊಂಡು, ಹಾಲು ಹೆಚ್ಚು ಬಂದಾಗಲೆಲ್ಲಾ ಅದರ ಮೇಲೆ "ಕರೆಯುತ್ತಾರೆ".

ಮಗುವಿಗೆ ಎಲ್ಲಿಯವರೆಗೆ ಎದೆಹಾಲು ಉಣಿಸಬೇಕು, ಬೇಗನೇ ಹಾಲುಣಿಸುವುದನ್ನು ಬಿಡಿಸುವುದರಿಂದ ತಾಯಿ ಮತ್ತು ಮಗುವಿನ ಮೇಲಾಗುವ ಪರಿಣಾಮಗಳ ಬಗ್ಗೆಯೂ ಅನೇಕ ಅಭ್ಯಾಸಗಳು ನಡೆದಿವೆ. ಕೆಲವೊಂದು ತಾಯಂದಿರು ಮಗು ಬೇಡ ಎನ್ನುವ ವಯಸ್ಸಿನವರೆಗೂ ಎದೆಹಾಲು ಕುಡಿಸಬೇಕು ಎಂದರೆ, ಉಳಿದವರು ಮತ್ತೆ ತಾಯಿ ಬಸಿರಿಯಾಗುವವರೆಗೂ ಕುಡಿಸಬಹುದೆಂದರು. ೮ ರಿಂದ ೧೨ ತಿಂಗಳವರೆಗೆ ಹಾಲು ಕುಡಿಸುವುದು ಸಾಮಾನ್ಯ ಮತ್ತು ಸೂಕ್ತವೆಂದು ತಿಳಿಯಲಾಗಿದೆ.

ಎದೆ ಹಾಲು ಕುಡಿಸುವದನ್ನು ಬಿಡಿಸಿದ ನಂತರ ತಾಯಿಗೆ ನೋವಿನಿಂದ ಮತ್ತು ಮಾನಸಿಕವಾದ ತೊಂದರೆಗಳಾಗುತ್ತವೆ. ಇದೇ ರೀತಿ ಮೊಲೆಯುಣಿಸುವುದನ್ನು ಬಿಡಿಸಿದ ಮಗುವಿನಲ್ಲೂ ವಿಶೇಷವಾಗಿ ಮಾನಸಿಕ ತೊಂದರೆಗಳು ಪ್ರಾರಂಭವಾಗುತ್ತವೆ. ಬಲವಂತವಾಗಿ ಬಿಡಿಸಿದರೆ ಮಗು ತೊಂದರೆಗೀಡಾಗುವದೆಂದು ಉಪಾಯವಾಗಿ ಬಿಡಿಸುವರು. ಮೊಲೆಯ ತೊಟ್ಟಿಗೆ ಯಾವುದಾದರೂ ಅಸಹ್ಯವಾಸನೆ ಅಥವಾ ಕಹಿ ಎಣ್ಣೆ ಅಥವಾ ಲೇಪ್ಯವನ್ನು ಲೇಪನಮಾಡುವರು. ಹಾಲು ಕುಡಿಯಲು ಹಟಮಾಡಿದ ಮಗುವಿಗೆ ಈ ರೀತಿ ಮಾಡುವುದರಿಂದ, ಬೇರೆ ಯಾವುದಾದರೂ ಆಹಾರ ನೀಡುವುದರಿಂದ ಮಗು ಕ್ರಮೇಣವಾಗಿ ಮೊಲೆ ಕುಡಿಯುವುದನ್ನು ಮರೆತು ಬಿಡುತ್ತದೆ. ಕೆಲವೊಂದು ವೇಳೆ ಇದನ್ನು ಮರೆಯುವಂತೆ ಮಾಡಲು ಮಗುವನ್ನು ತಾಯಿಯಿಂದ ದೂರ ಮಾಡಿ ಅಜ್ಜ–ಅಜ್ಜಿಯ ಊರಿಗೆ ಕಳಿಸಬಹುದು. ಹೀಗೆ ಉಪಾಯವಾಗಿ ಬಿಡಿಸದಿದ್ದರೆ ಮಗು ದೈಹಿಕ ಹಾಗೂ ಮಾನಸಿಕ ತೊಂದರೆಗೀಡಾಗಿ ಅಳುವುದು. ಹಟ ಮಾಡುವುದು ಮುಂತಾದ ತೊಂದರೆ ಅನುಭವಿಸಬಹುದು. ಇಂತಹ ತೊಂದರೆಗಳು ಮುಂದೆ ವ್ಯಕ್ತಿತ್ವದ ಬೆಳವಣಿಗೆಗೆ ಅಡ್ಡಿ ಬರುತ್ತವೆ.

ನಮ್ಮ ಗ್ರಾಮೀಣ ಹಾಗು ಜನಪದ ಸಮಾಜಗಳಲ್ಲಿ ಮಕ್ಕಳಿಗೆಂದು ಪ್ರತ್ಯೇಕ ಆಹಾರ ತಯಾರಿಸುವುದಿಲ್ಲ. ದೊಡ್ಡವರು ಊಟ ಮಾಡುವಾಗ ಅವರೊಂದಿಗೆ ಮಕ್ಕಳೂ ಊಟಕ್ಕೆ ಕೂಡುತ್ತಾರೆ. ಹಿರಿಯರು ಸ್ವಲ್ಪ ಸ್ವಲ್ಪವಾಗಿ, ಮೆತ್ತಗೆ ಮಾಡಿ ಮಕ್ಕಳಿಗೂ ತಿನ್ನಿಸಬಹುದು. ಖಾರವಾದರೆ ಅದಕ್ಕೆ ಮೊಸರು ಅಥವಾ ಹಾಲು ಹಾಕಿ ಕೊಳ್ಳುವರು. ಹಿರಿಯರಂತೆ ತಾವೇ ತಿನ್ನುತ್ತೇವೆಂದು ಮಕ್ಕಳು ಹಟಮಾಡಬಹುದು. ಕೆಲಸಕ್ಕೆ ಹೊರ ಹೋಗುವ ತಾಯಂದಿರು ಇದಕ್ಕೆ ಅವಕಾಶಕೊಡದೆ, ಕೊಳೆಮಾಡಿ ಕೊಳ್ಳುವುದನ್ನು ತಡೆಯಲು, ತಾವೇ ತಿನ್ನಿಸಬಹುದು. ಕಾಲಕ್ರಮೇಣ ಮಗು ದೊಡ್ಡ ದಾದಂತೆ ಅದಕ್ಕೆ ತಾನೇ ತಿನ್ನಲು ಕೊಡುತ್ತಾರೆ. ಹೀಗೆ ಮಗು ಕ್ರಮೇಣ ತಾನೇ ಉಣ್ಣಲು ಕಲಿಯುತ್ತದೆ. ಸರಿಯಾಗಿ ಕುಳಿತು, ಕಾಲು ಮೈಮೇಲೆ ಚೆಲ್ಲಿಕೊಳ್ಳದಂತೆ, ಬಲಗೈಯಿಂದ ತಿನ್ನುವುದನ್ನು ಕಲಿಸಲು ತಾಯಂದಿರು ಶ್ರಮಿಸಬೇಕಾಗುತ್ತದೆ.

ಹೊರಗೆ ಕೆಲಸಕ್ಕೆ ಹೋಗುವ ತಂದೆ ತಾಯಿಂದಿರು ತಮ್ಮ ಚಿಕ್ಕ ಮಕ್ಕಳನ್ನು ಮನೆಯಲ್ಲಿ ಹಿರಿಯರು ಅಥವಾ ತಮ್ಮ ಹಿರಿಯ ಮಕ್ಕಳ ಜೊತೆಗೆ ಬಿಟ್ಟುಹೋಗುತ್ತಾರೆ. ಅನೇಕರು ತಮ್ಮ ಮಕ್ಕಳನ್ನು ಹೊರಗೆ ಆಡಲು ಬಿಟ್ಟು ಸಂರಕ್ಷಣೆಗೆ ಮನೆಗೆ ಬೀಗ ಹಾಕಿಕೊಂಡು ಕೆಲಸಕ್ಕೆ ಹೋಗಬಹುದು. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಶಕ್ತರು ಮತ್ತು ಆರೋಗ್ಯವಂತರು ದುಡಿಯಲು ಹೊಲಕ್ಕೆ ಹೋಗುತ್ತಾರೆ. ಆದ್ದರಿಂದ ಮಕ್ಕಳನ್ನು ವಯಸ್ಸಾದ ಅಜ್ಜಿ-ಅಜ್ಜ ಅಥವಾ ಹಿರಿಯ ಮಕ್ಕಳೊಡನೆ ಬಿಟ್ಟು ಹೋಗು ತ್ತಾರೆ. ಮಗುವಿನ ಅಕ್ಕ ಅಥವಾ ಅಣ್ಣ ಅದನ್ನು ಒಂದೆಡೆ ಕೂಡಿಸಿ ತಮ್ಮ ಓರಿಗೆಯವ ರೊಡನೆ ಆಡಬೇಕು. ಓಡಬೇಕು, ಕುಣಿದು ಕುಪ್ಪಳಿಸಬೇಕೆಂದಿದ್ದರೆ ಇದೊಂದು ಬಾಲಂಗಸ ವೆಂದು ತಿಳಿದು ಅನಾದರಣೆ ಮಾಡಬಹುದು. ತಮ್ಮ ಆಟದ ಲಹರಿಯಲ್ಲಿ ಮಗುವನ್ನು, ಅದರ ಬೇಕು ಬೇಡುಗಳನ್ನು ಗಮನಿಸದಿರಬಹುದು. ಇದೇ ರೀತಿ ವಯಸ್ಸಾದ ಹಿರಿ ಯರೂ ತಮ್ಮ ವಯಸ್ಸಿನವರೊಡನೆ ಹರಟೆಯಲ್ಲಿ ತೊಡಗಿ ಮಗುವಿನ ಬೇಕು ಬೇಡ ಗಳನ್ನು ಮರೆಯಬಹುದು. ಅನೇಕ ವೇಳೆ ಕುರುಡು, ಕಿವುಡು ಮತ್ತು ಅನಾರೋಗ್ಯ ದಿಂದ, ಅಬಲತೆಯಿಂದ ಒಂದೆಡೆ ನೆಲ ಹಿಡಿದು ಕುಳಿತಿರುವ ಇವರನ್ನೇ ನೋಡಿಕೊಳ್ಳಲು ಒಬ್ಬರು ಬೇಕಾಗುತ್ತಾರೆ. ತಮ್ಮ ವಯಸ್ಸಿನವರೊಡನೆ ಕೂತು ಹರಟೆ ಹೊಡೆಯ ಬೇಕೆಂಬ ಇವರ ಮನೋಭಾವಕ್ಕೆ ವಿರುದ್ಧವಾಗಿ ಮಕ್ಕಳು ಹೊರಗೆ ಹೋಗಿ, ಆಡ ಬೇಕೆಂದು ಆಸೆಪಡುತ್ತಾರೆ. ಹೀಗೆ ತಮ್ಮನ್ನು ನೋಡಿಕೊಳ್ಳಲು ಸರಿಯಾದವರಿಲ್ಲದೆಯೂ ಮಕ್ಕಳು ಕೊರಗುತ್ತಾರೆ.[೨] ಹೀಗೆ ವಯಸ್ಕರ ಹಾಗು ಹಿರಿಯರ ಒಡನಾಡಿದ ಅವರ ವ್ಯಕ್ತಿತ್ವವು ಸೂಕ್ತವಾಗಿ ಬೆಳೆಯುವುದಿಲ್ಲ.

ಮಕ್ಕಳಿಗೆ ಮಲ-ಮೂತ್ರ ವಿಸರ್ಜನೆಯ ಹಾಗು ಸ್ನಾನ, ಸ್ವಚ್ಛತೆ ಮುಂತಾದವುಗಳ ತರಬೇತಿಯ ರೀತಿಗಳೂ ಮಾನವ ಶಾಸ್ತ್ರಜ್ಞರ ಗಮನ ಸೆಳೆದಿವೆ. ಮಗು ಕೈಗೂಸಾಗಿ

೨ ಗುರುಮೂರ್ತಿ, ೧೯೭೮ ನೋಡಿರಿ

ದ್ದಾಗ ಅದರ ಜೈವಿಕ ಕ್ರಿಯೆಗಳ ಮೇಲೆ ಸಾಂಸ್ಕೃತಿಕ ನಿಯಂತ್ರಣವಿಲ್ಲದಾಗ, ಎಲ್ಲೆಂದರಲ್ಲಿ, ಯಾವಾಗ ಬೇಕೆನಿಸಿದಾಗ, ಮಲಮೂತ್ರ ಮಾಡಿಬಿಡುತ್ತದೆ. ಈ ಕಾರಣದಿಂದ ಮಗುವಿಗೆ ಸೊಂಟದಿಂದ ಕೆಳಗೆ ಯಾವ ಬಟ್ಟೆಯನ್ನು ತೊಡಿಸುವುದಿಲ್ಲ. ಹೀಗೆ ಬಟ್ಟೆ ತೊಡಿಸುವ ಆಧಾರದಿಂದಲೂ ಮಕ್ಕಳನ್ನು ಒಂದು ತುಂಡು ಬಟ್ಟೆ ಉಡುವ ಮತ್ತು ಎರಡು ತುಂಡಿನ ಮಗುವೆಂದು ಗುಂಪುಮಾಡಬಹುದು. ಮಗು ದೊಡ್ಡದಾದಂತೆ, ನಿಯಂತ್ರಣ ಶಕ್ತಿ ಬಂದಂತೆ ಎಲ್ಲಿ, ಯಾವಾಗ, ಹೇಗೆ ಮಲಮೂತ್ರ ಮಾಡಬೇಕೆಂಬುದನ್ನು ತಿಳಿಸಿಕೊಡಲಾಗುವುದು. ಅನೇಕ ಸಮಾಜಗಳಲ್ಲಿ ಮಾಯ ಮಂತ್ರದ, ದೇವರುಗಳ, ಸಂಪ್ರದಾಯಸ್ಥ ಸಮಾಜದಲ್ಲಿ ಮಡಿ–ಮೈಲಿಗೆಯ ಹೆದರಿಕೆಯಿಂದ ಮಲಮೂತ್ರಗಳನ್ನು ದೂರ ಹಾಗು ಸೂಕ್ತವಾಗಿ ವಿಸರ್ಜಿಸುತ್ತಿದ್ದರು. ಹಿಂದುಳಿದ ಆದರೆ ಆಧುನಿಕತೆಯ ನೆರಳಲ್ಲಿರುವ ಸಮಾಜಗಳಲ್ಲಿ ಅವರ ನಂಬಿಕೆಯಲ್ಲಿ, ಧರ್ಮದಲ್ಲಿ ಹೆಚ್ಚಿನ ಬದಲಾವಣೆಯಾಗಿದ್ದು ಅವರು ಮಡಿ–ಮೈಲಿಗೆ ಅಥವಾ ಮಾಟ–ಮಂತ್ರದಲ್ಲಿ ನಂಬಿಕೆ ಕಳೆದುಕೊಂಡಿದ್ದು ಈಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲವಾದ್ದರಿಂದ ಅನೇಕ ತೊಂದರೆಗಳೂ ಬಂದಿವೆ. ಇವರು ಮಲಮೂತ್ರ ಮಾಡಲು ಸ್ಥಳದ ಅಭಾವ ಮತ್ತು ತಮ್ಮಲ್ಲಿ ಸೂಕ್ತ ನಡವಳಿಕೆ ಇಲ್ಲದ್ದರಿಂದ ಎಲ್ಲೆಂದರಲ್ಲಿ ಕುಳಿತು ಮಾಡಿಬಿಡುತ್ತಾರೆ. ಮಕ್ಕಳು ಹೊರಗೆ ಹೋಗಬೇಕೆಂದರೆ ಮನೆಯ ಮುಂದೆ, ಪಕ್ಕಕ್ಕೆ ಕೂಡಿಸುತ್ತಾರೆ. ಹೀಗಾಗಿ ಮಕ್ಕಳು ಹಿರಿಯರಿಂದ ಮಲಮೂತ್ರ ವಿಸರ್ಜನೆಯ ಬಗ್ಗೆ ತಪ್ಪು ನಡವಳಿಕೆಗಳನ್ನು ಪಡೆಯುತ್ತಾರೆ.

ಇದೇ ರೀತಿ ಹಲ್ಲು, ಬಾಯಿ ತೊಳೆದುಕೊಳ್ಳುವುದು, ತಲೆ ಬಾಚಿಕೊಳ್ಳುವುದು, ಉಗುರು, ಕೈಕಾಲಗಳನ್ನು, ಬಟ್ಟೆ, ಹಾಸಿಗೆ, ಒಳ ಉಡುಪುಗಳ ಬಗ್ಗೆಯೂ ತಂದೆ ತಾಯಂದಿರು ಕಲಿಸಿಕೊಡಬೇಕು. ಅವರ ಆರ್ಥಿಕ ಅನುಕೂಲತೆ, ವಿದ್ಯಾಮಟ್ಟ, ತಿಳುವಳಿಕೆ ಮುಂತಾದವು ಇಲ್ಲಿ ಗಮನಿಸಬೇಕಾದ ವಿಷಯಗಳು. ತಮಗೇ ಈ ವಿಷಯಗಳ ಬಗೆಗೆ ಆಸ್ಥೆ ಇಲ್ಲದಿದ್ದರೆ, ತಿಳುವಳಿಕೆ ಇಲ್ಲದಿದ್ದರೆ ಅವರು ತಮ್ಮ ಮಕ್ಕಳಿಗೂ ತಿಳಿಸಿ ಹೇಳಲಾರರು. ಈ ರಂಗದಯಲ್ಲಿಯೂ ಕುಟುಂಬದ ಹಾಗು ಸಮಾಜದ ಸದಸ್ಯರು ವ್ಯಕ್ತಿಯ ಮಾನಸಿಕ ಬೆಳವಣಿಗೆಯಲ್ಲಿ ನೆರವಾಗುತ್ತಾರೆ.

ಕೊನೆಯದಾಗಿ ಮಗು ಎಲ್ಲಿ, ಯಾರ ಜೊತೆಗೆ ಮಲಗುತ್ತದೆ ಎಂಬುದೂ ತಿಳಿಯಬೇಕಾದ ವಿಷಯ. ಇನ್ನೂ ಕೈಗೂಸಾಗಿದ್ದಾಗ ಯಾವಾಗಲೂ ಯಾರಾದರೊಬ್ಬರಿಂದ ಪಾಲಿಸಿಕೊಂಡ ಮಗು ಮುಂದೆ ಬೆಳೆದಂತೆ ಒಂಟಿಯಾಗಿರಬೇಕಾಗುತ್ತದೆ. ತಾಯಿ ಹೊರಗೆ ದುಡಿಯಲು ಹೋಗುವುದಿದ್ದರೆ ಕೆಲವಾರು ಗಂಟೆಕಾಲ ತಾಯಿಯನ್ನು ಕಾಣದೆಯೂ ಇರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಯಾರಾದರೂ ಸೂಕ್ತರಾದವರು ಮಗುವಿನ ಪಾಲನೆ ಪೋಷಣೆಯ ಹೊಣೆ ಹೊರುತ್ತಾರೆ. ಇವರು ಸಾಮಾನ್ಯವಾಗಿ ಮಗುವಿನ ಅಜ್ಜಿ, ಅತ್ತೆ ಮುಂತಾದವರಿದ್ದು ಅವರು ಮಗುವನ್ನು ಪ್ರೀತಿಯಿಂದ

ನೋಡಿಕೊಳ್ಳಬಹುದು. ಇಂತಹ ಸಂಬಂಧಿಕರಿಲ್ಲದ ಮಕ್ಕಳಿಗೆ ತೊಂದರೆಯಾಗುತ್ತದೆ. ಮಗು ಬಹಳ ಚಿಕ್ಕದಾಗಿದ್ದಾಗ ತನ್ನ ತಾಯಿಯಿಂದ ಅಗಲಿರುವುದನ್ನು ತಿಳಿಯಲಾರದು. ಮುಂದೆ ತಿಳಿದಂತೆ ಅದಕ್ಕೆ ಮಾನಸಿಕವಾದ ತೊಳಲಾಟ ಪ್ರಾರಂಬವಾಗಬಹುದು. ಚಿಕ್ಕದಿದ್ದಾಗ ತಾಯಿಯ ಮಗ್ಗುಲಲ್ಲೇ ಮಲಗುತ್ತಿದ್ದು ದೊಡ್ಡದಾದಂತೆ ಅದನ್ನು ದೂರ ಮಲಗಿಸಲು ಪ್ರಾರಂಭಿಸಬಹುದು. ಇದಕ್ಕೆ ಅನೇಕ ಕಾರಣಗಳಿರುತ್ತವೆ. ಮೊದಲನೆಯದಾಗಿ ತಾಯಿಗೆ ಈ ವೇಳೆಗೆ ಮತ್ತೊಂದು ಮಗುವಾಗಬಹುದು ಅಥವಾ ಗಂಡ ಹೆಂಡಿರೇ ಮಗುವನ್ನು ಬೇರೆ ಮಲಗಿಸಬಹುದು. ಆಗ ಮಗು ಹಟಮಾಡಬಹುದು ಅಥವಾ ತನ್ನವರಿಂದ ದೂರವಾದ ಭಯದಿಂದ ಮಾನಸಿಕವಾದ ತೊಂದರೆಗೀಡಾಗಬಹುದು.

ಮಕ್ಕಳನ್ನು ಅವರ ವಯಸ್ಸಿನ ಆಧಾರದ ಮೇಲೆ ಶಾಲೆ ವಯಸ್ಸಲ್ಲದ ಮತ್ತು ಶಾಲೆಗೆ ಹೋಗುವವರೆಂದು ಎರಡು ಗುಂಪು ಮಾಡಬಹುದು. ಮಗು ಬೆಳೆದಂತೆ ಕ್ರಮೇಣ ತನ್ನ ಮನೆಯವರೊಂದಿಗೆ ಬೆರೆಯುತ್ತದೆ. ಮತ್ತು ಮುಂದೆ ತನ್ನ ನೆರೆಹೊರೆಯವರೊಂದಿಗೆ ಬೆರೆಯಲು ಕಲಿಯುತ್ತದೆ. ಮೊದಲು ತೊದಲು ನುಡಿಯಿಂದ ಒಂದೆರಡು ಮಾತಾಡಿದರೂ ಅದೇ ದೊಡ್ಡ ವಿಷಯವೆಂದು ಗಣಿಸಿ ಅದನ್ನು ಹೆಚ್ಚು ಹೆಚ್ಚು ಮಾತಾಡುವಂತೆ ಪ್ರಚೋದಿಸುವರು. ಮುಂದೆ ಮನೆಯಲ್ಲಿರುವ ಎಲ್ಲರ ಸಂಬಂಧಗಳನ್ನು ತಿಳಿಸಿಕೊಡುವರು. ತಾಯಿ, ತಂದೆ, ಅಣ್ಣ, ಅಕ್ಕ ಮುಂತಾಗಿ ಎಲ್ಲರನ್ನು ಗುರುತಿಸುವ ಮತ್ತು ಅವರಿಗೆ ಸೂಕ್ತ ಸಂಬಂಧಿಕ ಶಬ್ದಗಳನ್ನು ಉಪಯೋಗಿಸಿ ಮಾತಾಡುವುದನ್ನು ಕಲಿಸಿಕೊಡುತ್ತಾರೆ. ಮೊದಲಿಗೆ ಮಗು ಇವರನ್ನು ಗುರುತು ಹಿಡಿಯುವಲ್ಲಿ, ಸೂಕ್ತ ಸಂಬಂಧಿಕ ಶಬ್ದಗಳನ್ನು ಉಪಯೋಗಿಸಿ ಮಾತಾಡಿಸುವಲ್ಲಿ ತಪ್ಪು ಮಾಡಿದರೆ ಬೆದರಿಕೆ, ದಂಡನೆ ಮುಂತಾದ ಶಿಕ್ಷೆ ನೀಡಿ ತಿದ್ದುತ್ತಾರೆ.

ಶಾಲೆಗೆ ಹೋಗದ ಮಗು ಮನೆಯವರ ನಂತರ ನೆರೆಹೊರೆಯವರ ಸಂಪರ್ಕದಲ್ಲಿ ಬರುತ್ತದೆ. ಅನೇಕ ಸಮೂಹಗಳಲ್ಲಿ ಇವರು ಅವರ ಜಾತಿ, ಕುಲ ಮುಂತಾದವಕ್ಕೆ ಸೇರಿದವರೇ ಆಗಿರುತ್ತಾರೆ. ಮೊದಲಿಗೆ ಮಗು ಅಂಗಾತನೆ ಮಲಗಿ ತನ್ನ ಅಶಕ್ತ ಹಾಗೂ ಅಸಹಾಯಕ ಸ್ಥಿತಿಯಿಂದಾಗಿ ಮಲಗಿಸಿದಲ್ಲಿಯೇ ಇರುತ್ತದೆ. ಆಗ ಅದರ ಕಣ್ಣಲ್ಲಿ ಏನಾದರೂ ಬೀಳದಿರಲೆಂದು ಅದನ್ನು ತೊಟ್ಟಿಲು ಅಥವಾ ಜೋಲಿಯಲ್ಲಿಟ್ಟು ಬಟ್ಟೆ ಮುಚ್ಚುತ್ತಾರೆ. ೪-೬ ತಿಂಗಳ ನಂತರ ಕ್ರಮೇಣ ಅದು ಮಗ್ಗುಲಾಗಲು ಕಲಿತು ಮಗುಚಿಕೊಳ್ಳುತ್ತದೆ. ಹೀಗೆ ಮಗುಚಿಕೊಂಡರೂ ತನ್ನ ಅಬಲ ಕೈಗಳಲ್ಲಿ ಶಕ್ತಿ ಸಾಲದೆ ತನ್ನ ಹೊಟ್ಟೆಯ ಮೇಲೆ ಮಲಗಬಹುದು. ಆಗ ಮಗುಚಿಕೊಳ್ಳುವುದನ್ನು ಆಸಕ್ತಿಯಿಂದ ನೋಡುತ್ತಿದ್ದ ಹಿರಿಯರು ಮತ್ತೆ ಅದನ್ನು ಬೆನ್ನಮೇಲೆ ಹಾಕುತ್ತಾರೆ. ಸುಮಾರು ಏಳು ತಿಂಗಳಲ್ಲಿ ಆರೋಗ್ಯವಾದ ಮಗು ಮಗುಚಿಕೊಂಡು, ತೆವಳುತ್ತಾ ಮುಂದೆ ಹೋಗಲು ಪ್ರಾರಂಭಿಸುತ್ತದೆ. ಆಗ ಮಗು ಒಂದೆಡೆ ನಿಲ್ಲದೆ ಹರಿದಾಡುವುದರಿಂದ

ಮನೆಯುವರೆಲ್ಲರೂ ಬಹಳ ಹುಷಾರಾಗಿರಬೇಕಾಗುತ್ತದೆ. ಸಿಕ್ಕಿದ್ದನ್ನು ತಿಂದು, ಕೈ–ಮೈಯನ್ನು ಕೊಳೆ ಮಾಡಿಕೊಳ್ಳುವುದರಿಂದ ಅದನ್ನು ಹೆಚ್ಚಿನ ಗಮನ ಕೊಟ್ಟು ನೋಡಿಕೊಳ್ಳುತ್ತಾರೆ. ಮುಂದೆ ೯-೧೦ ತಿಂಗಳಿಗೆ ಅದು ಕೂಡಲು ಪ್ರಾರಂಭಿಸಿ, ಚೇಲ ಅಥವಾ ಕಂಬಗಳನ್ನು ಹಿಡಿದು ನಿಲ್ಲಲು ಪ್ರಾರಂಭಿಸಿ, ಒಂದು ವರ್ಷಕ್ಕೆ ಓಡಾಡಲು ಕಲಿಯುತ್ತದೆ. ಮಗು ಮೊದಲನೆಯ ಬಾರಿಗೆ ತನಗೆ ತಾನೇ ಬಾಗಿಲು ದಾಟಿದುದನ್ನು ಸೂಚಿಸಲು ಬಾಗಿಲಿನ ಪೂಜೆ ಮಾಡಿ, ತೆಂಗಿನಕಾಯಿ ಒಡೆಯುತ್ತಾರೆ. ಮತ್ತು ಓಣಿಯ ಮಕ್ಕಳಿಗೆ ಫಲಹಾರ ಹಂಚುತ್ತಾರೆ. ಇದರ ಮುಖ್ಯ ಉದ್ದೇಶವೆಂದರೆ ಮಗು ಹೊರಗೆ ಹೋಗಬಲ್ಲದೆಂಬುದನ್ನು ನೆರೆಹೊರೆಯ ಎಲ್ಲರಿಗೂ ತಿಳಿಸುವುದೇ ಆಗಿದೆ. ಕುಟುಂಬದಿಂದ ಹೊರಗಿನವರೊಡನೆ ಅಂದಿನಿಂದಲೇ ಮಗುವಿನ ಸಂಬಂಧಗಳು ಪ್ರಾರಂಭವಾಗುವುವು ಎಂದು ತಿಳಿಯಬಹುದು. ಆಟಕ್ಕೆ, ಒಡನಾಟಕ್ಕೆ ಮಗುವಿಗೆ ಸಿಗುವವರೆಂದರೆ ನೆರಹೊರೆಯ ಓರಗೆಯವರು. ತಮ್ಮ ತಮ್ಮ ವಯಸ್ಸಿಗೆ ತಕ್ಕಂತೆ, ಗುಂಪು ಮಾಡಿಕೊಂಡು ಆಡುವುದು, ಗುಂಪುಗಾರಿಕೆ, ಜಗಳ ನಡೆಯುತ್ತವೆ. ಸಾಮಾನ್ಯವಾಗಿ ಈ ವಯಸ್ಸಿನಲ್ಲಿ ಜೊತೆಯಾದವರು ತಾವು ಜೊತೆಗೆ ಕಳೆದ ನೋವು-ನಲಿವಿನ ಅನುಭವದಿಂದಾಗಿ ಜೀವನ ಪರಿಯಂತ ಸ್ನೇಹಿತರಾಗಿರುತ್ತಾರೆ.

ಹಸಿವಾದಾಗ ಅಥವಾ ಕರೆದಾಗ ತಿಂದುಟ್ಟು ಸದಾ ಆಡುತ್ತಾ, ತಿರುಗುತ್ತಿರುವ ಈ ವಯಸ್ಸಿನ ಮಕ್ಕಳಿಗೆ ಯಾವ ಅಡತಡೆಗಳಿರುವುದಿಲ್ಲವಾದರೂ ಅವರು ತಮ್ಮ ಓಣಿ, ಮನೆಯ ಅಂಗಳವನ್ನು ಬಿಟ್ಟು ದೂರಹೋಗುವಂತಿಲ್ಲ. ಇದು ಆರೋಗ್ಯ ಮತ್ತು ಅಪಘಾತಗಳ ದೃಷ್ಟಿಯಿಂದ ಬಹಳ ಕೆಟ್ಟಕಾಲ. ತಮ್ಮ ಮರುಳತನದಿಂದಾಗಿ ಅಲ್ಲಲ್ಲಿ ತಿಂದು, ನೀರು ಕುಡಿಯಬಹುದು. ನೀರಲ್ಲಿ ಅಥವಾ ಗಿಡ ಮರ ಹತ್ತಿ ಬೀಳಬಹುದು, ಕಣ್ಣು, ಕಿವಿಯಲ್ಲಿ ಏನಾದರೂ ಜೀಳಿಸಿಕೊಳ್ಳಬಹುದು, ಮರಗಿಡಕ್ಕೆ ಕಲ್ಲು ಬೀರಿ ತಮ್ಮ ಮೇಲೆ ಅನೇಕ ಗಾಯಗಳನ್ನು ಮಾಡಿಕೊಳ್ಳಬಹುದು. ಈ ದೃಷ್ಟಿಯಿಂದ ಹಿರಿಯರು ಈ ವಯಸ್ಸಿನ ಮಕ್ಕಳನ್ನು ಅತ್ಯಂತ ಆಸ್ಥೆಯಿಂದ ನೋಡಿಕೊಳ್ಳುತ್ತಾರೆ.

ಸುಮಾರು ಐದು–ಆರನೇ ವಯಸ್ಸಿಗೆ ಬರುವಲ್ಲಿ ಗ್ರಾಮೀಣ ಮತ್ತು ಜನಪದ ಸಮಾಜದಲ್ಲಿ ಮಕ್ಕಳು ಕುಟುಂಬದ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಇವು ಲಘುವಾಗಿದ್ದು ದನ, ಹೊಲ, ಕಣ ಮುಂತಾದವನ್ನು ಕಾಯುವುದು, ನೇಯುವುದು, ಹೆಣೆಯುವುದು, ನೀರು, ಕಟ್ಟಿಗೆ ತರುವುದು ಹೀಗೆ ಅನೇಕ ಕೆಲಸಗಳಿರುತ್ತವೆ. ಆಧುನಿಕತೆಯು ನೆರಳಲ್ಲಿರುವ ಸಮಾಜ ಈ ವಯಸ್ಸಿಗೆ ಅವನನ್ನು ಶಾಲೆಗೆ ಕಳುಹಿಸುವ ಏರ್ಪಾಡು ಮಾಡಬಹುದು. ತನ್ನ ಮನೆಯ, ನೆರೆಹೊರೆಯ ಮೋಜಿನ ವಾತಾವರಣವನ್ನು ಬಿಟ್ಟು ನಾಲ್ಕು ಗೋಡೆಯೊಳಗಿನ ಜೀವನಕ್ಕೆ ಹೊಂದಿಕೊಳ್ಳುವುದು ಮಗುವಿಗೆ ತೊಂದರೆಯಾಗಬಹುದು. ಅಲ್ಲಿ ಸಿಗಬಹುದಾದ ಶಿಕ್ಷೆ ಮತ್ತು ನಿಯಂತ್ರಿತ ಜೀವನ

ದಿಂದಾಗಿ ಶಾಲೆ ಅವನಿಗೆ ಬೇಜಾರುತರಬಹುದು. ಕೆಲವೊಮ್ಮೆ ಹೊರಗಿನ ಜೀವನದ ಮೋಹ ಹೆಚ್ಚಾದರೆ, ತಂದೆ ತಾಯಿಗಳು ಬೇಜವಾಬ್ದಾರಿಯಿಂದ ಅವನು ಶಾಲೆ ತಪ್ಪಿಸಿ ತಿರುಗಿ, ಕೊನೆಗೆ ಶಾಲೆಗೆ ಶರಣು ಹೊಡೆಯಬಹುದು. ಆದರೆ, ಕುಟುಂಬದಲ್ಲಿ ಇವನು ಮಾಡಬಹುದಾದ ಕಾರ್ಯದಿಂದ, ಶಾಲೆಗೆ ಹೋಗುವುದರಿಂದ ಊಟ, ತಿಂಡಿ, ಓಡಾಟ ಮುಂತಾದವುಗಳಲ್ಲಿ ಒಂದು ಬಗೆಯ ಕ್ರಮ ಬರುವುದರಿಂದ ಸ್ವಲ್ಪ ಕಾಲ ಇವನು ಕಣ್ಣೆದುರಿಗಿಲ್ಲವಾದರೂ ಉಳಿದವರಿಗೆ ತಿಳಿಯುವದರಿಂದ ಈ ವಯಸ್ಸಿಗೆ ಇವನು ಅಪಾಯಗಳಿಗೆ, ರೋಗಕ್ಕೆ ತುತ್ತಾಗುವುದು ಕಡಿಮೆಯಾಗುತ್ತದೆ. ತನ್ನ ಗೆಳೆಯರೊಂದಿಗೆ ಆಡುತ್ತಾ, ಓದುತ್ತಾ ತನ್ನೆಲ್ಲಾ ಕಾಲವನ್ನು ಕಳೆಯುವುದರಿಂದ ಮನೆಯವರಿಗೂ ಅವನ ಕಾಟಗಳು, ತೊಂದರೆಗಳು ಕಡಿಮೆಯಾಗುತ್ತವೆ.

ಅವಿಭಕ್ತ ಕುಟುಂಬದಿಂದ ಬಂದ ಮಗು ಕುಟುಂಬದಲ್ಲಿಯ ಅನೇಕ ಬಂಧುಗಳ ಒಡನಾಟದಿಂದಾಗಿ ತನ್ನಲ್ಲಿ ವಿಶಾಲ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತದೆ. ಇದೇ ರೀತಿ ವೃದ್ಧರಿಂದ ಪಾಲನೆ-ಪೋಷಣೆ ಹೊಂದಿದ ಮಗು ಅವರ ಬಗ್ಗೆ ಗೌರವ ಭಾವನೆ ಹೊಂದಿ ಬೆಳೆಯುತ್ತದೆ. ಸಿಡುಕಿನ, ಸಂಕುಚಿತ ಭಾವನೆ, ಈರ್ಷೆ, ಭೇದಭಾವ, ದೈವ ಭಕ್ತಿ, ಸಹಕಾರ, ಪರೋಪಕಾರ, ನ್ಯಾಯ ಮಾಟದಲ್ಲಿ, ದೆವ್ವ ಮುಂತಾದ ಶಕ್ತಿಗಳಲ್ಲಿ ಮೂಢ ನಂಬಿಕೆಯಲ್ಲಿ, ನಂಬಿಕೆಯುಳ್ಳ ಹಿರಿಯರಿಂದ ಬೆಳೆಸಲ್ಪಟ್ಟ ಮಕ್ಕಳು ತಾವು ಇದೇ ಗುಣಗಳನ್ನು ಬೆಳಸಿಕೊಳ್ಳುತ್ತಾರೆ. ಆದ್ದರಿಂದ ಒಂದು ಮಗುವಿನ ವ್ಯಕ್ತಿತ್ವದ ಹಿನ್ನೆಲೆಯನ್ನು ಅರಿಯಬೇಕಾದರೆ ಅದು ಬೆಳೆದ ಸನ್ನಿವೇಶ, ಪ್ರದೇಶ, ಕಾಲ ಮುಂತಾದವುಗಳ ಜೊತೆಗೆ ಅವನ್ನು ಬೆಳೆಸಿದ ಹಿರಿಯರ ವ್ಯಕ್ತಿತ್ವವನ್ನೂ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಹೀಗೆ ಮಾನವಶಾಸ್ತ್ರಜ್ಞರು ಬಹು ಹಿಂದಿನಿಂದಲೂ ಸಮಾಜ-ಸಂಸ್ಕೃತಿಗಳು ಅವನ ಹುಟ್ಟಿನಿಂದಲೇ ಮಾನವನನ್ನು ಹೇಗೆ ಪ್ರಭಾವಗೊಳಿಸುತ್ತವೆಂದು ಅಧ್ಯಯನ ಮಾಡಿದ್ದಾರೆ.

ಗ್ರಂಥಋಣ

1. Freud, S. **Primer of Freudian Psychology**; **London : Allen G. 1956.**

2. Freud, S. : **Totem and Taboo**, London : Routledge, 1950

3. Malinowski, B. Sex and Repression in Savage Society, London : Routledge, 1953

4. **Crime and Custom in** Savage Society London : Routledge, 1951

5. Mead, M. **Coming of age in Soumoa : Psychological study of Primitive Youth of western Civiligation.**
Newyork : New American, Library 1952

6. Mead, M. and Wolfenstein, M. **Childhood in Contemporary Culture,** 1955

7. Whiting, B.B. (Ed) **Six Cultures : Studies in Child Rearing. Laboratory of Human Development**, Harvard University, John Wiley and Fous, Inc, 1963

೮. ಗುರುಮೂರ್ತಿ. ಕೆ. ಜಿ. 'ಗ್ರಾಮೀಣ ಮಗು' **ಮಾನವಿಕ ಭಾರತಿ** : ೨ : ೧ ೧೯೭೮

ಮಕ್ಕಳ ಸಾಮಾಜಿಕ ವರ್ತನೆಯ ಮೂಲ ಮತ್ತು ವಿಕಾಸ

● ಬಿ. ಕುಪ್ಪುಸ್ವಾಮಿ

ಸಾಮಾಜಿಕ ಜೀವನ ಕೌಟುಂಬಿಕ ಜೀವನ ಮತ್ತು ಮಕ್ಕಳ ಪೋಷಣೆ, ಮಾನವರಿಗೆ ಮಾತ್ರ ಸೀಮಿತವಲ್ಲ. ಈ ಮೂರು ಸಾಮಾಜಿಕ ಅಂಶಗಳನ್ನು ಪ್ರಾಣಿವರ್ಗಗಳಲ್ಲಿ ಸಹ ಕಾಣಬಹುದು. ಪಕ್ಷಿಗಳಲ್ಲಿಯೂ ಮತ್ತು ವಾನರ ಗುಂಪುಗಳಲ್ಲಿಯೂ ಈ ಮೂರು ಅಂಶಗಳನ್ನು ಕಾಣಬಹುದು. ಸಾಧಾರಣವಾಗಿ ಪಕ್ಷಿಗಳು ಒಂದು ಸಮೂಹದಲ್ಲಿ ಹಾರಾಡುವವು. ಗಂಡು ಮತ್ತು ಹೆಣ್ಣು ಪಕ್ಷಿಗಳು ಗೂಡನ್ನು ಕಟ್ಟಿ, ಮೊಟ್ಟೆಗಳನ್ನು ಸುರಕ್ಷಿತವಾಗಿ ನೋಡಿಕೊಂಡು ಮರಿಗಳನ್ನು ಪೋಷಣೆ ಮಾಡುವವು. ವಾನರ ಗುಂಪು ಒಂದು ಕುಟುಂಬ. ಬಲಶಾಲಿಯಾದ ಗಂಡು, ನಾಲ್ಕಾರು ಹೆಣ್ಣು ಕೋತಿಗಳು. ನಾಲ್ಕಾರು ಯುವಕ ಗಂಡು ಕೋತಿಗಳು ಮತ್ತು ಮರಿ ಕೋತಿಗಳನ್ನೊಳಗೊಂಡಿರುವುವು. ಆ ಗುಂಪಿನ ಹೆಣ್ಣು ಕೋತಿಗಳೆಲ್ಲವೂ ಆ ಯಜಮಾನ ಕೋತಿಯ ಸ್ವತ್ತು. ಇತರ ಗಂಡು ಕೋತಿಗಳಿಗೆ ಅವುಗಳ ಮೇಲೆ ಯಾವ ವಿಧವಾದ ಹಕ್ಕಿಲ್ಲ. ಇತರ ಗಂಡು ಕೋತಿಗಳು ಆ ಗುಂಪಿನ ಹೆಣ್ಣು ಕೋತಿಗಳ ಹತ್ತಿರ ಹೋದರೆ ಯಜಮಾನ ಕೋತಿಯು ಅವುಗಳನ್ನು ಹೊಡೆದು ಅಟ್ಟಿಸಿಬಿಡುವುದು. ಹೀಗೆ ವಾನರ ಗುಂಪುಗಳಲ್ಲಿ ಬಹುಪತ್ನೀತ್ವವನ್ನು ಕಾಣಬಹುದು. ಆದರೆ ಮರಿ ಕೋತಿಗಳನ್ನು ಕೇವಲ ತಾಯಿ ಮಾತ್ರವಲ್ಲದೆ ಇತರ ಗಂಡು ಮತ್ತು ಹೆಣ್ಣು ಕೋತಿಗಳು ಸಹ ಪೋಷಣೆ ಮಾಡುವುವು. ಈ ವಿಧವಾಗಿ ಸಾಮಾಜಿಕ ಜೀವನವನ್ನು ಮನುಷ್ಯೇತರ ಪ್ರಾಣಿವರ್ಗಗಳಲ್ಲಿ ಕಾಣಬಹುದು.

ಆದರೆ ಆ ಪ್ರಾಣಿಗಳಲ್ಲಿ ಸಾಮಾಜಿಕ ವರ್ತನೆಯು ಈ ಹಂತಗಳಿಂದ ಮುಂದುವರಿಯುವುದಿಲ್ಲ. ಈ ನ್ಯೂನತೆಯು ಎರಡು ಕಾರಣಗಳಿಂದ ಉಂಟಾಗಿರಬಹುದೆಂದು ಹೇಳಬಹುದು. ಮೊದಲನೆಯದು, ಶೈಶವಾವಸ್ಥೆಯ ಅಲ್ಪ ಕಾಲಾವಧಿ. ಎರಡನೆಯದು, ಭಾಷೆಯ ಅಭಾವ.

ಪ್ರಾಣಿಗಳಲ್ಲಿ ಶೈಶವಾವಸ್ಥೆಯು ಕೆಲ ಘಂಟೆ ಅಥವಾ ಕೆಲ ದಿವಸ, ಅಥವಾ ಕೆಲ ತಿಂಗಳುಗಳೊಳಗೆ ಇರುವುದು. ಈ ಕಾರಣದಿಂದ ಸಣ್ಣ ವಯಸ್ಸಿನಲ್ಲಿಯೇ ಮರಿ ಪ್ರಾಣಿಯು ಸ್ವತಂತ್ರವಾಗಿ ತನ್ನ ಜೀವನವನ್ನು ಮುಂದುವರಿಸುವುದಕ್ಕೆ ಸಾಧ್ಯ. ಅಂದರೆ

ತಂದೆ ತಾಯಿಗಳ ಮೇಲೆ ಪರಾವಲಂಬನೆ ಇರುವುದಿಲ್ಲ. ಆದುದರಿಂದ ಸಾಮಾಜಿಕ ವರ್ತನೆಯು ಆ ಮಟ್ಟದಲ್ಲಿಯೇ ನಿಂತುಹೋಗುವುದು. ಮತ್ತೊಂದು ಕಾರಣವೆಂದರೆ ಪ್ರಾಣಿವರ್ಗದಲ್ಲಿ ಭಾಷೆಯ ಅಭಾವ. ಆದುದರಿಂದ ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ ಸಂಪರ್ಕವು ಕೇವಲ ಕೂಗುಗಳ ಆಧಾರದ ಮೇಲೆ ಇರುವುದು. ಇದರಿಂದಾಗಿ ಸಾಮಾಜಿಕ ವರ್ತನೆಯಲ್ಲಿ ಬೆಳವಣಿಗೆ ಇರುವುದಿಲ್ಲ.

ಮಾನವಕೋಟಿಯಲ್ಲಿ ಶೈಶವಾವಸ್ಥೆಯು ಬಹಳ ದೀರ್ಘವಾಗಿರುವುದು. ಈ ಅವಧಿಯು ಎಷ್ಟು ದೀರ್ಘವಾಗಿರುವುದೋ ಆ ಗುಂಪಿನ ಸಂಸ್ಕೃತಿಯು ಅಷ್ಟು ಉನ್ನತ ಮಟ್ಟವನ್ನು ಪಡೆಯುವುದು ಸಾಧ್ಯ. ಈಗಲೂ ಸಹ ಗ್ರಾಮೀಣ ಸಮಾಜಗಳಲ್ಲಿಯೂ ಪಟ್ಟಣದ ಕೊಳಚೆ ಪ್ರದೇಶದ ಸಮಾಜಗಳಲ್ಲಿಯೂ ಅನಕ್ಷರತೆ ಮತ್ತು ಅಸಂಸ್ಕೃತ ಸಾಮಾಜಿಕ ಜೀವನವನ್ನು ಕಾಣಬಹುದು. ಕಾರಣ ಬಾಲಕ ಬಾಲಕಿಯರು ೮–೧೦ ವರ್ಷಗಳ ವಯಸ್ಸಿನಲ್ಲಿಯೇ ತಮ್ಮ ಕುಟುಂಬದ ಕೆಲಸ ಕಾರ್ಯದಲ್ಲಿ ತೊಡಗುವರು; ಅಥವಾ ಕುಟುಂಬದ ಸಹಾಯಕ್ಕಾಗಿ ಬೇರೆ ಮನೆಯಲ್ಲಿಯೋ ಅಂಗಡಿಯಲ್ಲಿಯೋ ಕೆಲಸವನ್ನು ಮಾಡಬಹುದು. ಆದುದರಿಂದ ಅವರ ಬಾಲ್ಯಾವಸ್ಥೆಯು ಕುಂಠಿತವಾಗಿ ಅವರ ಸಾಮಾಜಿಕ ಜೀವನದ ಬೆಳವಣಿಗೆಗೆ ಅಡ್ಡಿಯನ್ನು ತರುವುದು. ಆದುದರಿಂದಲೇ ೧೯೫೦ ರ ನಮ್ಮ ಸಂವಿಧಾನದಲ್ಲಿ ಹದಿನಾಲ್ಕು ವಯಸ್ಸು ಬರುವವರೆಗೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಲಾಯಿತು; ಮತ್ತು ಹದಿನೈದು ವಯಸ್ಸಿನೊಳಗಿನ ಬಾಲಕ ಬಾಲಕಿಯರು ಕೆಲಸ ಮಾಡುವುದು ಕಾನೂನಿಗೆ ವಿರುದ್ಧವೆಂದು ಘೋಷಿಸಲಾಯಿತು.

ಆದುದರಿಂದ ಮಕ್ಕಳ ಸಾಮಾಜಿಕ ಜೀವನದ ತಳಹದಿಯು ದೀರ್ಘ ಶೈಶವಾವಸ್ಥೆ ಮತ್ತು ಭಾಷೆಯ ಕಲಿಯುವಿಕೆ.

ತಂದೆ ತಾಯಿಗಳು ಶಿಶುವನ್ನು ಅತಿ ಪ್ರೇಮದಿಂದ ಪೋಷಣೆ ಮಾಡುವದು ಅವಶ್ಯ. ಈ ಪೋಷಣೆಯೇ ಮಗುವಿನ ಸಾಮಾಜಿಕ ಜೀವನದ ಅಡಿಪಾಯ.

ಈಗ ಸುಮಾರು ಐವತ್ತು ವರ್ಷಗಳಿಂದ ಶಿಶುವರ್ತನೆಯನ್ನು ಬಹಳ ಜಾಗರೂಕತೆಯಿಂದ ಮನಃಶಾಸ್ತ್ರಜ್ಞರು ಪರಿಶೀಲಿಸಿರುವರು. ಈ ಪರಿಶೀಲನೆಗಳ ಮೂಲಕ ಲಭಿಸಿರುವ ಕೆಲ ಅಂಶಗಳನ್ನು ಸಂಕ್ಷೇಪವಾಗಿ ವಿವರಿಸಬಹುದು.

ಮೊದಲ ಆರು ತಿಂಗಳ ಜೀವನ :

ಶಿಶುವಿನ ಮೊದಲನೆಯ ತಿಂಗಳಲ್ಲಿ ಸಾಮಾಜಿಕ ಅರಿವು ಇರುವುದಿಲ್ಲ. ಸಾಧಾರಣವಾಗಿ ನಾಲ್ಕನೆಯ ವಾರದ ಕೊನೆಯಲ್ಲಿ ಶಿಶುವು ತನ್ನನ್ನು ಪೋಷಿಸುವ ತಾಯಿ ಅಥವಾ ಅಜ್ಜಿಯನ್ನು ದಿಟ್ಟಿಸಿ ನೋಡುವುದನ್ನು ಪ್ರಾರಂಭಿಸುವುದು. ಅಳುತ್ತಿರುವಾಗ ತನ್ನನ್ನು

ಎತ್ತಿಕೊಂಡರೆ ಅಳುವದನ್ನು ನಿಲ್ಲಿಸುವುದು. ಆದರೆ ಈ ಪ್ರತಿಕ್ರಿಯೆಯನ್ನು ಸಾಮಾಜಿಕ ಪ್ರತಿಕ್ರಿಯೆ ಎಂದು ನಿರ್ಧರಿಸುವುದು ಅಸಾಧ್ಯ. ಕೇವಲ ದೈಹಿಕ ಕಾವಿನಿಂದ ಉಂಟಾದ ತೃಪ್ತಿಯಿಂದ ಅಳುವದನ್ನು ನಿಲ್ಲಿಸಿರಬಹುದು. ಆದರೆ ಆರೆಂಟು ವಾರಗಳು ಬರುವುದರೊಳಗೆ ತಾಯಿಯು ತನ್ನನ್ನು ಎತ್ತಿಕೊಳ್ಳುವವರೆಗೂ ಅಳುವದನ್ನು ಮುಂದುವರಿಸುವುದು. ಎರಡು ತಿಂಗಳ ಮಗು ಯಾರಾದರೂ ವಯಸ್ಕರು, ತನ್ನನ್ನು ನೋಡಿ ಕಿರುನಗೆಯನ್ನು ವ್ಯಕ್ತಪಡಿಸಿದರೆ ತಾನೂ ಸಹ ಕಿರುನಗೆಯನ್ನು ವ್ಯಕ್ತಪಡಿಸುವುದು.

ಇದಲ್ಲದೆ, ಮಗು ತಾನಿರುವ ಕೊಠಡಿಯಲ್ಲಿ ಯಾರಾದರೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಿದರೆ ಅವರನ್ನು ನೋಟದಿಂದ ಹಿಂಬಾಲಿಸುವುದು ಮತ್ತು ಇತರರನ್ನು ನೋಡಿ ತನ್ನ ಸಂತೋಷವನ್ನು ವ್ಯಕ್ತಪಡಿಸುವುದು. ಹೀಗೆ ಹದಿನಾರು ವಾರಗಳು ಕಳೆಯುವುದರೊಳಗೆ ಅದು ಸಾಮಾಜಿಕ ಅರಿವನ್ನು ಸೂಚಿಸುವುದು. ಇತರರು ಮಾತನಾಡಿಸಿದರೆ, ಹಾಡು ಹೇಳಿದರೆ ಬಹಳ ಆನಂದ ಪಡುವುದು. ಕ್ರಮೇಣ ಇಪ್ಪತ್ತು ವಾರಗಳು ಕಳೆಯುವುದರೊಳಗೆ ತನ್ನನ್ನು ನೋಡಿಕೊಳ್ಳುತ್ತಿರುವ ತಾಯಿಯಾಗಲಿ, ಇತರರಾಗಲಿ ತನ್ನನ್ನು ಬಿಟ್ಟು ಹೊರಗೆ ಹೋದರೆ ಅಳುವುದು.

ಮಗುವಿಗೆ ಇಪ್ಪತ್ತೆಂಟು ವಾರವಾಗುವ ಸಮಯಕ್ಕೆ ಪರಸ್ಪರ, ಅನ್ಯೋನ್ಯ ವರ್ತನೆಯಲ್ಲಿ ಭಾಗವಹಿಸುವುದು. ತನ್ನನ್ನು ಒಬ್ಬರಿಂದ ಮತ್ತೊಬ್ಬರು ಎತ್ತಿಕೊಂಡು ಮುದ್ದಾಡಿದರೆ ಸಂತೋಷವನ್ನು ವ್ಯಕ್ತಪಡಿಸುವುದು. ಕ್ರಮೇಣ ವ್ಯಕ್ತಿಗಳ ವ್ಯತ್ಯಾಸವನ್ನು ಗುರುತಿಸುವುದು. ತನ್ನನ್ನು ಪೋಷಿಸುವ ತಾಯಿಯನ್ನು ಗುರುತಿಸುವುದು. ಸ್ವಜನರ ಹೊರಗಿನವರ ಅರಿವು ಉಂಟಾಗುವುದು. ಗುರುತಿನವರನ್ನು ಕಂಡರೆ ಸಂತೋಷವನ್ನು, ಹೊರಗಿನವರನ್ನು ಕಂಡರೆ ಭಯವನ್ನು ಸೂಚಿಸುವುದು. ಈ ವಿಧವಾಗಿ ತನ್ನ ನಾಲ್ಕನೆಯ ತಿಂಗಳಿನಿಂದ ಆರನೆಯ ತಿಂಗಳ ಅವಧಿಯಲ್ಲಿ ಶಿಶುವಿನ ಸಾಮಾಜಿಕ ವರ್ತನೆ ಕ್ರಮೇಣ ಬೆಳೆಯುವುದು.

ಎರಡನೆಯ ಆರು ತಿಂಗಳು :

ಮೊದಲನೆ ವರ್ಷದ ಉತ್ತರಾರ್ಧದಲ್ಲಿ ಶಿಶು ಇತರರೊಡನೆ ಇರುವುದಕ್ಕೆ ಆಸೆ ಪಡುವುದು. ಇತರರನ್ನು ಕಂಡರೆ ಆನಂದವನ್ನು ವ್ಯಕ್ತಪಡಿಸುವುದು. ಈ ಸಮಯದಲ್ಲಿ ತಾಯಿಯು ತನ್ನೊಡನಿದ್ದರೆ ಅದಕ್ಕೆ ಸಂತೋಷ. ಬಿಟ್ಟು ಹೋದರೆ ಅಳಲು ಪ್ರಾರಂಭ. ಇಣಿಕಿ ನೋಡುವ ಆಟ, ಕೂಗಾಟವೆಂದರೆ ಬಹಳ ಸಂತೋಷ. ಅಂದರೆ ಇತರರ ಜೊತೆಯಲ್ಲಿ ಆಡುವುದು ಸಂತೋಷವನ್ನು ಕೊಡುವುದು. ಅಂಬೆಗಾಲಿಟ್ಟುಕೊಂಡು ಹೋಗುತ್ತಿರುವಾಗ ಇತರರು ಹಿಡಿಯುವುದಕ್ಕೆ ಹೋದರೆ ಸಂತೋಷದಿಂದ ಕೂಗಾಡಿ ತಪ್ಪಿಸಿಕೊಳ್ಳುವುದಕ್ಕೆ ಬೇಗನೆ ಮುಂದುವರಿಯುವುದು. ಒಂದು ವರ್ಷ ವಯಸ್ಸಿನ ಸಮಯಕ್ಕೆ ಇತರರ ಕೈಯನ್ನು ಹಿಡಿದು ನಿಲ್ಲಲು ಪ್ರಯತ್ನಿಸುವುದು.

ಮತ್ತೊಂದು ಬಹಳ ಇಷ್ಟವಾದ ಆಟವೆಂದರೆ ಕೈಯಲ್ಲಿರುವ ಆಟಿಗೆಯನ್ನು ಕೆಳಗೆ ಹಾಕುವುದು. ಅದನ್ನು ತೆಗೆದು ಕೊಟ್ಟರೆ ಮತ್ತೆ ಹಾಕುವುದು. ಪದೇ ಪದೇ ಹೀಗೆ ಮಾಡಿದರೆ ತಾಯಿಗೆ ಬೇಸರವಾಗಿ ಆಟಿಗೆಯನ್ನು ಎತ್ತಿಕೊಡದೆ ಹೋದರೆ ಅಳುವುದು.

ಸಾಮಾಜಿಕ ವರ್ತನೆಯ ಬೆಳವಣಿಗೆಯಲ್ಲಿ ಈ ಕಾಲದ ಮತ್ತೊಂದು ಮುಖ್ಯ ಅಂಶವೆಂದರೆ ಇತರ ಮಕ್ಕಳನ್ನು ಕುತೂಹಲದಿಂದ ನೋಡುವುದು. ಈ ವರ್ತನೆಯು ಮೊದಲು ಇರುವುದಿಲ್ಲ. ಕ್ರಮೇಣ ಉಂಟಾಗುವುದು. ಬೇರೆ ಮಕ್ಕಳು ಅತ್ತರೆ ಅವರ ಕಡೆ ನೋಡಿ ತಾನು ಸಹ ಅಳುವುದು. ಒಂಭತ್ತು ಹತ್ತು ತಿಂಗಳ ವಯಸ್ಸಿನಲ್ಲಿ ತೊದಲು ನುಡಿಯಲ್ಲಿ ಬೇರೆ ಮಕ್ಕಳ ಗಮನವನ್ನು ಸೆಳೆಯಲು ಪ್ರಯತ್ನಿಸುವುದು.

ಬೆಳವಣಿಗೆಯ ಮತ್ತೊಂದು ಮುಖ್ಯ ಅಂಶವೆಂದರೆ. ಇತರರ ಮನೋಭಾವವನ್ನು ಮುಖದಿಂದ ತಿಳಿದುಕೊಳ್ಳುವುದು, ಇದು ಮಗುವಿನ ಸಾಮಾಜಿಕ ವರ್ತನೆಯ ಬೆಳವಣಿಗೆಯ ಒಂದು ಮುಖ್ಯ ಹಂತ. ಕೋಪ. ಭಯ. ಸಂತೋಷ ಮುಂತಾದ ಭಾವೋದ್ರೇಕಗಳನ್ನು ೮–೯ ತಿಂಗಳ ವಯಸ್ಸಿನಲ್ಲಿಯೇ ಮಗುವು ಅರಿಯುವುದು. ಕ್ರಮೇಣ ಈ ಶಕ್ತಿಯು ಮುಂದುವರಿಯುವುದು. ತನ್ನನ್ನು ಅಡ್ಡಿಪಡಿಸಿದರೆ ಮಗು ಕೋಪಗೊಳ್ಳುವುದು.

ಎರಡನೆಯ ವರ್ಷ :

ಮಗುವಿಗೆ ೧೪-೧೬ ತಿಂಗಳ ವಯಸ್ಸಿನಲ್ಲಿ ಬೆಳವಣಿಗೆಯ ಎರಡು ಮಹತ್ತರವಾದ ಅಂಶಗಳು ಕಾಣಿಸಿಕೊಳ್ಳುವುವು. ಮೊದಲನೆಯದೆಂದರೆ ನಡೆಯುವುದು, ಎರಡನೆಯದು ಮಾತನಾಡುವುದು. ಓಡಾಡುವ ಶಕ್ತಿಯನ್ನು ಹೊಂದಿರುವುದರಿಂದ ಮಗು ಮನೆಯ ಹೊರಗಡೆ ಹೋಗಲು ಪ್ರಯತ್ನಿಸುವುದು. ಮಾತನ್ನು ಕಲಿಯುತ್ತಿರುವುದರಿಂದ ಅನುಕರಣ ಶಕ್ತಿಯನ್ನು ರೂಢಿಸಿಕೊಳ್ಳುವುದು. ಯಾರು ಏನಾದರೂ ಮಾಡಿದರೆ. ಯಾರು ಏನಾದರೂ ಹೇಳಿದರೆ ಅದನ್ನು ಅನುಸರಿಸಲು ಪ್ರಯತ್ನಿಸುವುದು. ತಾನು ನೋಡಿದ್ದನ್ನೆಲ್ಲಾ ತನಗೆ ಬೇಕೆಂದು ಹಟ ಮಾಡುವುದು. ಇನ್ನು ಕೆಲ ತಿಂಗಳ ನಂತರ ಓಡಾಡುವುದನ್ನು ಚೆನ್ನಾಗಿ ಕಲಿತ ಮೇಲೆ ಗೃಹ ಕೆಲಸಗಳಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸುವುದು. ಮನೆ ಗುಡಿಸುವುದು. ಪಾತ್ರೆಗಳನ್ನು ತರುವುದು ಮುಂತಾದ ಕೆಲಸಗಳನ್ನು ಮಾಡುವುದು. ಈ ವಯಸ್ಸಿನಲ್ಲಿ ಮಗುವಿಗೆ ಅಡ್ಡಿಆತಂಕಗಳು ಇಷ್ಟವಿರುವುದಿಲ್ಲ. ಸ್ವೇಚ್ಛೆಯಾಗಿರಲು ಪ್ರಯತ್ನಿಸುವುದು. ತಾನು ಕೇಳಿದುದನ್ನು ಕೊಡುವವರೆಗೂ ಹಟ ಹಿಡಿಯುವುದು. ಅಳುವುದು. ಕ್ರಮೇಣ ನಕಾರಾತ್ಮಕ ವರ್ತನೆಯು ಪ್ರಬಲಗೊಳ್ಳುವುದು. ತಂದೆ ತಾಯಿಗಳು ಹೇಳಿದ ಮಾತನ್ನು ಕೇಳುವುದಿಲ್ಲ. ಸ್ನಾನ ಮಾಡಿಸಿಕೊಳ್ಳುವುದಕ್ಕೆ, ಊಟ ಮಾಡುವುದಕ್ಕೆ ಪ್ರತಿಬಂಧನೆಯನ್ನು ವ್ಯಕ್ತಪಡಿಸುವುದು. ಈ ವರ್ತನೆಯು

ಮಗುವಿನ ಬೆಳವಣಿಗೆಯಲ್ಲಿಯೂ, ಸಾಮಾಜಿಕ ವರ್ತನೆಯ ಬೆಳವಣಿಗೆಯಲ್ಲಿಯೂ ಮುಖ್ಯವಾದ ಹಂತ. ಇದು ವ್ಯಕ್ತಿತ್ವದ ಬೆಳವಣಿಗೆಯನ್ನು ಸೂಚಿಸುವುದು.

ಈ ವಯಸ್ಸಿನಲ್ಲಿ ಇತರ ಮಕ್ಕಳನ್ನು ಕಂಡರೆ ಸ್ನೇಹಭಾವ ಮತ್ತು ಸಹಕಾರ ಉಂಟಾಗುವದು. ಆದರೆ ಇತರರೊಡನೆ ಕೂಡಿ ಆಡುವುದು ಬರಬೇಕಾದರೆ ಇನ್ನು ಕೆಲಕಾಲ ವಾಗಬೇಕು. ಬೇರೆ ಬೇರೆ ಮಕ್ಕಳು ತಮ್ಮಷ್ಟಕ್ಕೆ ತಾವೇ ಒಂದೇ ಆಟವನ್ನು ಆಡು ವರೇ ಹೊರತು ಕೂಡಿ ಆಡಲಾರರು.

ಮೂರನೆಯ ವರ್ಷ :

ಮಗುವಿಗೆ ಮೂವತ್ತು ತಿಂಗಳ ವಯಸ್ಸು ಬರುವುದರೊಳಗೆ ಯಾವ ಯಾವ ಕೆಲಸವನ್ನು ತಾನು ಮತ್ತು ಇತರರು ಯಾವ ವಿಧವಾಗಿ ಮಾಡುವರೆಂಬುದನ್ನು ಅರಿತು ಕೊಳ್ಳುವುದು. ಆದುದರಿಂದ ಆ ಕೆಲಸವನ್ನು ಅದೇ ವಿಧವಾಗಿ ಮಾಡಬೇಕೆಂದು ಹಠ ಹಿಡಿಯುವುದು. ಉದಾಹರಣೆಗೆ ಕಛೇರಿಯಿಂದ ತಂದೆಯು ಮನೆಗೆ ಬಂದರೆ ಉಡುಪುಗಳನ್ನು ತೆಗೆಯುವುದು. ಜೋಡು ತೆಗೆಯುವ ಕಾರ್ಯಕಲಾಪಗಳಲ್ಲಿ ಸಹಾಯ ಮಾಡುವುದು. ಆದುದರಿಂದ ಆ ಕೆಲಸಗಳನ್ನು ಒಂದೇ ಕ್ರಮದಲ್ಲಿ ಮಾಡಬೇಕೆಂದು ನಿರ್ಬಂಧ ಮಾಡುವುದು. ಬದಲಾವಣೆಯನ್ನು ಸಹಿಸುವುದಿಲ್ಲ. ಇದೇ ವಿಧವಾಗಿ ಮನೆ ಯಲ್ಲಿ ಸಾಮಾನುಗಳನ್ನು ಕ್ರಮಬದ್ಧವಾಗಿ ಆಯಾ ಸ್ಥಳಗಳಲ್ಲಿಯೇ ಇಡುವುದು. ಅದೇ ಸಾಮಾನು ಇನ್ನೊಂದು ಜಾಗದಲ್ಲಿದ್ದರೆ ಸಹಿಸುವುದಿಲ್ಲ. ಹೀಗೆ ಈ ವಯಸ್ಸಿನ ಮಗು ಒಂದು ನಿರಂಕುಶ ಪ್ರಭುತ್ವವನ್ನು ವ್ಯಕ್ತಪಡಿಸುವುದು.

ಮನೆಯ ಹೊರಗೆ ಹೋಗಿ ಇತರ ಮಕ್ಕಳ ಜೊತೆಯಲ್ಲಿ ಆಡುವುದೆಂದರೆ ಈ ವಯಸ್ಸಿನ ಮಕ್ಕಳಿಗೆ ಬಹಳ ಇಷ್ಟ. ಭಾಷೆಯ ಮೇಲೆ ಹತೋಟಿಯು ಹೆಚ್ಚಾಗು ತ್ತಿರುವುದರಿಂದ ಇತರ ಮಕ್ಕಳ ಜೊತೆಯಲ್ಲಿಯೂ, ಇತರ ವಯಸ್ಕರ ಜೊತೆಯಲ್ಲಿಯೂ ಪರಸ್ಪರ ಸಂಬಂಧ ಹೆಚ್ಚುವುದು.

ನಾಲ್ಕನೆಯ ವರ್ಷ :

ಈ ವಯಸ್ಸಿನಲ್ಲಿ ಕಲ್ಪನಾಶಕ್ತಿಯು ಹೆಚ್ಚಾಗುವುದು. ತಾನು ಕಲ್ಪನೆ ಮಾಡಿ ಕೊಂಡಿರುವ ಇತರ ಕಾಲ್ಪನಿಕ ವ್ಯಕ್ತಿಗಳ ಜೊತೆಯಲ್ಲಿ ಸಂಭಾಷಣೆ ನಡೆಸುವುದು ಮತ್ತು ಆಟವಾಡುವುದು. ಅವರಿಗೆ ತಿಂಡಿ. ತೀರ್ಥಗಳನ್ನು ಕೊಡುವ ಆಟವನ್ನು ಆಡುವುದು. ಅಥವಾ ತಾನು ನಾಯಿಯೋ ಕೋತಿಯೋ ಎಂಬುವ ಕಲ್ಪನೆಯನ್ನು ಮಾಡಿಕೊಂಡು ಆ ಪ್ರಾಣಿಯು ಓಡಾಡುವಹಾಗೆ, ಕೂಗುವಹಾಗೆ ಮಾಡುವುದು. ಈ ಅನೇಕ ಕಾರ್ಯ ಕಲಾಪಗಳು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಸೂಚಿಸುವುವು.

ಈ ವಯಸ್ಸಿನಲ್ಲಿ ಇತರ ಮಕ್ಕಳ ಜೊತೆಯಲ್ಲಿ ಆಡಬೇಕೆಂಬ ಇಚ್ಛೆಯು ಹೆಚ್ಚಾಗುವುದು. ಇದರ ಪರಿಣಾಮವಾಗಿ ತಂದೆ ತಾಯಿಗಳು ತನ್ನ ವಯಸ್ಸಿನ ಮಕ್ಕಳಿರುವ ಮನೆಗಳಿಗೆ ಹೋದರೆ ಸಂತೋಷವಾಗಿಹೋಗುವುದು. ತನ್ನ ವಯಸ್ಸಿನ ಮಕ್ಕಳು ಆ ಮನೆಯಲ್ಲಿಲ್ಲದಿದ್ದರೆ ತಂದೆ ತಾಯಿಗಳೊಂದಿಗೆ ಹೋಗಲಿಚ್ಛಿಸುವುದಿಲ್ಲ.

ಈ ವಯಸ್ಸಿನಲ್ಲಿ ಪಾತ್ರಾಭಿನಯ ಮಾಡುವುದಕ್ಕೆ ಮಗು ಇಷ್ಟಪಡುತ್ತದೆ. ತಂದೆಯ ಉಡುಪುಗಳನ್ನು ಹಾಕಿಕೊಂಡು ತಂದೆಯ ಪಾತ್ರವನ್ನು ಅಭಿನಯಿಸುವುದು. ಅಥವಾ ವೈದ್ಯನ ಪಾತ್ರ, ಉಪಾಧ್ಯಾಯನ ಪಾತ್ರ ಅಥವಾ ಅಂಚೆಯವನ ಪಾತ್ರ, ಇಲ್ಲ ಮಾರಾಟಗಾರನ ಪಾತ್ರ ಮುಂತಾದ ಪಾತ್ರಗಳನ್ನು ಅಭಿನಯಿಸುವುದು.

ಈ ವಯಸ್ಸಿನ ಮತ್ತೊಂದು ಮುಖ್ಯ ಅಂಶವೆಂದರೆ ಪ್ರಶ್ನೆಗಳನ್ನು ಕೇಳಿ ಕುತೂಹಲವನ್ನು ವ್ಯಕ್ತಪಡಿಸುವುದು. ಆದುದರಿಂದ ತಂದೆ ತಾಯಿಗಳು ಮಗುವಿನ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಕೊಟ್ಟು ಅದರ ಜ್ಞಾನವನ್ನು ಬೆಳೆಯಲು ಅವಕಾಶವನ್ನು ಕೊಡಬೇಕು.

ನಾಲ್ಕನೇ ಮತ್ತು ಐದನೇ ವರ್ಷದಲ್ಲಿ ಮಕ್ಕಳು ಲೈಂಗಿಕ ಪಾತ್ರವನ್ನು ಕಲಿಯುವರು. ಇದು ವ್ಯಕ್ತಿಯ ಬೆಳವಣಿಗೆಯಲ್ಲಿಯೂ, ಸಾಮಾಜಿಕ ವರ್ತನೆಯ ಬೆಳವಣಿಗೆಯಲ್ಲಿಯೂ ಬಹಳ ಮುಖ್ಯವಾದ ಘಟನೆ. ಹುಡುಗನು ತಂದೆಯ ಪಾತ್ರವನ್ನು, ಹುಡುಗಿಯು ತಾಯಿಯ ಪಾತ್ರವನ್ನು ಕಲಿಯುವರು. ಈ ಕಲಿಕೆಯು ಸರಿಯಾಗಿ ಮುಂದುವರಿಯದೇ ಹೋದರೆ ಆ ವ್ಯಕ್ತಿಯ ಬೆಳವಣಿಗೆಯಲ್ಲಿಯೂ, ಸಾಮಾಜಿಕ ವರ್ತನೆಯಲ್ಲಿಯೂ ಅನೇಕ ಕುಂದುಕೊರತೆಗಳುಂಟಾಗಬಹುದು.

ಉಪಸಂಹಾರ :

ಮೇಲೆ ಸೂಚಿಸಿರುವ ಹಾಗೆ ಯಾವ ಶಕ್ತಿಯಿಲ್ಲದೆ ಹುಟ್ಟಿರುವ ಶಿಶು– ಕ್ರಮೇಣ ಓಡಾಡುವುದನ್ನೂ, ಮಾತಾಡುವುದನ್ನೂ, ಆಟವಾಡುವುದನ್ನೂ, ಸಹಕರಿಸುವುದನ್ನೂ, ಹಟಮಾರಿತನವನ್ನೂ ಕಲಿತು, ಸಮಾಜದಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಕಲಿಯುವುದು. ಈ ಕಲಿಕೆಯು ವಯಸ್ಸಿನ ಪ್ರಕಾರ ಬೆಳೆಯುತ್ತಿದ್ದರೂ ತಂದೆ ತಾಯಿಗಳ ಮತ್ತು ಇತರರ ಪ್ರೋತ್ಸಾಹವೂ ಬಹು ಮುಖ್ಯ. ತಂದೆ ತಾಯಿಗಳ ವರ್ತನೆಯು ಸರಿಯಾದ ರೀತಿಯಲ್ಲಿಲ್ಲದಿದ್ದರೆ ಅದನ್ನೇ ಅನುಕರಿಸುವ ಮಗುವಿನ ವರ್ತನೆಯೂ ಹಾಳಾಗಬಹುದು. ಇದರ ಪರಿಣಾಮವಾಗಿ ಸಮಾಜದಲ್ಲಿ ಸಾಮರಸ್ಯ ಇಲ್ಲದಂತಾಗಬಹುದು.

ಮಕ್ಕಳ ಮಾನಸಿಕ ವಿಕಾಸದಲ್ಲಿ ತಂದೆ ತಾಯಿಗಳ ಪಾತ್ರ

● ಎಂ. ಬಸವಣ್ಣ

ನಾವು ಮಕ್ಕಳ ಆರೋಗ್ಯದ ವಿಷಯವಾಗಿ ವಿಚಾರಿಸುವಾಗ ನಮ್ಮ ಗಮನವಿರುವುದೆಲ್ಲಾ ಸಾಮಾನ್ಯವಾಗಿ ಅವರ ದೈಹಿಕ ಸ್ಥಿತಿಯನ್ನು ಕುರಿತಾಗಿಯೇ. ಮಕ್ಕಳಿಗೆ ಪುಷ್ಟಿಕರವಾದ ಆಹಾರ, ಸಡಿಲಾದ ಬಟ್ಟೆ ಮತ್ತು ಅನುಕೂಲಕರವಾದ ವಸತಿಯನ್ನೊದಗಿಸಿದರೆ ಮಕ್ಕಳ ಬೆಳವಣಿಗೆ ಸುಗಮವಾಗುತ್ತದೆ. ಅಷ್ಟಕ್ಕೇ ಅವರು ಆರೋಗ್ಯವಾಗಿರುತ್ತಾರೆಂಬುದು ನಮ್ಮೆಲ್ಲರ ನಂಬಿಕೆ. ಆದರೆ ಮಕ್ಕಳು ಕೇವಲ ಜೀವಂತ ಬೊಂಬೆಗಳಲ್ಲ. ಅವರಿಗೆ ತಮ್ಮದೇ ಆದ ಮನಸ್ಸಿದೆ. ವ್ಯಕ್ತಿತ್ವವಿದೆ ಎಂಬುದನ್ನು ಈ ಕಾಲದಲ್ಲೂ ಬಹಳ ಜನ ಗಣನೆಗೆ ತಂದುಕೊಳ್ಳದಿರುವುದು ವಿಷಾದಕರ. ಮಕ್ಕಳ ಶರೀರ ಬೆಳೆಯಬೇಕು, ನಿಜ. ಅದರ ಜೊತೆಯಲ್ಲಿ ಅವರ ಮನಸ್ಸೂ ಬೆಳೆಯಬೇಕು. ಶಾರೀರಿಕ ಬೆಳವಣಿಗೆಗೆ ಬೇಕಾಗುವಂತೆ ಮಾನಸಿಕ ವಿಕಾಸಕ್ಕೂ ಒಂದು ಉತ್ತಮ ಪರಿಸರ ಬೇಕು. ಆಗಲೇ ಮಗುವಿನ ಪರಿಪೂರ್ಣ ವಿಕಾಸ ಸಾಧ್ಯ. ಆರೋಗ್ಯವೆಂಬುದು ಮನೋದೈಹಿಕ ಸಂಸ್ಥಿತಿ. ಮಾನಸಿಕವಾಗಿ ವಿಕಾಸ ಹೊಂದದೆ ಯಾರೂ ಪೂರ್ಣವಾಗಿ ಆರೋಗ್ಯವಂತರಾಗುವುದು ಸಾಧ್ಯವಿಲ್ಲ.

ಮಕ್ಕಳ ಮಾನಸಿಕ ವಿಕಾಸ ಹಲವಾರು ಘಟಕಗಳನ್ನವಲಂಬಿಸಿರುತ್ತದೆ. ಅವುಗಳಲ್ಲಿ ಪ್ರಾಮುಖ್ಯವಾದುದು ಮಕ್ಕಳು ಬೆಳೆಯುವ ವಾತಾವರಣ; ತಂದೆ ತಾಯಿಗಳು ಒದಗಿಸುವ ಕೌಟುಂಬಿಕ ಪರಿಸರ. ಕೌಟುಂಬಿಕ ಪರಿಸರ ಮಕ್ಕಳ ಮನಸ್ಸಿನ ಮೇಲೆ ತೀವ್ರವಾಗಿ ಪ್ರಭಾವ ಬೀರುತ್ತದೆ. ಅದೇ ಮಗುವಿನ ವ್ಯಕ್ತಿತ್ವದ ವಿಕಾಸಕ್ಕೆ ಅಡಿಗಲ್ಲು. ಅನುಚಿತವಾದ ಕೌಟುಂಬಿಕ ವಾತಾವರಣ ಮಕ್ಕಳ ಹಲವಾರು ಸಮಸ್ಯೆಗಳ ಹುಟ್ಟಿಗೆ ಕಾರಣವಾಗುತ್ತದೆ. ಅವಷ್ಟೇ ಆಗಿದ್ದರೆ ನಾವು ಯೋಚಿಸಬೇಕಾಗುತ್ತಿರಲಿಲ್ಲ. ಆದರೆ ಸಣ್ಣ ಮಕ್ಕಳ ಮೇಲಾಗುವ ಈ ಪ್ರಭಾವಗಳು ಸುಲಭವಾಗಿ ಅಳಿಸಿಹೋಗುವುದಿಲ್ಲ. ಅವು ಮಕ್ಕಳು ದೊಡ್ಡವರಾದಮೇಲೂ ಅವರ ವರ್ತನೆ, ವ್ಯವಹಾರಗಳನ್ನು ನಿರ್ಧರಿಸುತ್ತವೆ; ಅವರ ಜೀವನ ಶೈಲಿಯನ್ನು ನಿರ್ದೇಶಿಸುತ್ತವೆ; ಮಾನಸಿಕ ಸ್ವಾಸ್ಥ್ಯ, ಸ್ವಸ್ಥತೆಯನ್ನು ನಿರ್ಣಯಿಸುತ್ತವೆ. ಯಾವ ಯಾವ ಕೌಟುಂಬಿಕ ಪರಿಸರಗಳಲ್ಲಿ ಬೆಳೆದು ಬಂದ ಮಕ್ಕಳು

ಏನೇನು ಮಾನಸಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಂಬುದನ್ನು ಆಧುನಿಕ ಮನೋವಿಜ್ಞಾನ ಬಹಳ ಆಳವಾಗಿ ಪರಿಶೀಲಿಸಿದೆ. ಅದು ನಮಗಿತ್ತಿರುವ ಅರಿವಿನ ಒಂದು ಸಂಕ್ಷಿಪ್ತ ಚಿತ್ರವನ್ನು ಈ ಲೇಖನದಲ್ಲಿ ಕೊಡಲಾಗಿದೆ.

ಬಾಲ್ಯಾವಸ್ಥೆ ಮಾನವನ ಜೀವನದಲ್ಲಿ ಬಹಳ ಮುಖ್ಯವಾದುದೆಂಬುದು ಎಲ್ಲರ ನಂಬಿಕೆ. ಈ ನಂಬಿಕೆಗೆ ವೈಜ್ಞಾನಿಕ ಆಧಾರವನ್ನೊದಗಿಸಿದವನು ಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್. ಮಕ್ಕಳ ಮೊದಲ ಐದು ವರ್ಷಗಳ ಅನುಭವ ಅವರ ಮುಂದಿನ ಐವತ್ತು ವರ್ಷಗಳ ಮನೋವೃತ್ತಿಯನ್ನು ನಿರ್ಧರಿಸುತ್ತದೆಂಬುದು ಫ್ರಾಯ್ಡನ ಅಭಿಮತ. ಸಾಧಾರಣವಾಗಿ, ಹೆಚ್ಚಿಗೆ ಮಾನಸಿಕ ರೋಗಗಳಿಗೆ ಬೀಜಾಂಕುರವಾಗುವುದು ಬಾಲ್ಯದಲ್ಲಿಯೇ ಎಂಬುದು ಮನೋವೈಜ್ಞಾನಿಕ ಸತ್ಯಗಳಲ್ಲೊಂದು. ಭಿನ್ನಾಭಿಪ್ರಾಯ ವಿರುವುದೆಲ್ಲಾ ಇದು ಹೇಗೆ ನಡೆಯುತ್ತದೆ, ಏಕೆ ನಡೆಯುತ್ತದೆ ಎಂಬ ವಿಷಯವಾಗಿ. ಮಕ್ಕಳು ತಮ್ಮ ಮೊದಲ ವರ್ಷಗಳನ್ನು ಕಳೆಯುವುದು ಒಂದು ಕುಟುಂಬದಲ್ಲಿ; ತಂದೆ ತಾಯಿಗಳ ಆಶ್ರಯದಲ್ಲಿ. ತಂದೆ ತಾಯಿಗಳೇ ಕೌಟುಂಬಿಕ ಪರಿಸರದ ನಿರ್ಮಾತೃಗಳು, ನಿರ್ದೇಶಕರು. ಅವರು ಮಕ್ಕಳೊಡನೆ ವ್ಯವಹರಿಸುವ ರೀತಿ ಮಕ್ಕಳ ಮಾನಸಿಕ ಆರೋಗ್ಯವನ್ನು ನಿಯಂತ್ರಿಸುವ ಒಂದು ಪ್ರಮುಖ ಅಂಶ. ಕೆಲವರು ತಮ್ಮ ಮಕ್ಕಳನ್ನು ಅತಿಯಾಗಿ ಮುದ್ದು ಮಾಡುತ್ತಾರೆ; ಮತ್ತೆ ಕೆಲವರು ಮಕ್ಕಳೆಂದರೆ ಅನಾದರ, ಅನಾಸಕ್ತಿ. ಕೆಲವರು ತಮ್ಮ ಮಕ್ಕಳಿಗಾಗಿ ಎಲ್ಲವನ್ನೂ ಮಾಡುತ್ತಾರೆ. ಅವರನ್ನು ಏನು ಮಾಡಲಿಕ್ಕೂ ಬಿಡುವುದಿಲ್ಲ: ಮತ್ತೆ ಕೆಲವರು ಮಕ್ಕಳಿಗಾಗಿ ಏನೂ ಮಾಡುವುದಿಲ್ಲ. ಹಲವರು ಮಕ್ಕಳನ್ನು ಬಹಳವಾಗಿ ದಂಡಿಸುತ್ತಾರೆ. ಕೆಲವರು ಅವರೇನೇ ಮಾಡಿದರೂ ಮನ್ನಿಸುತ್ತಾರೆ. ಕೆಲವು ತಂದೆ ತಾಯಿಗಳು ಮಕ್ಕಳಿಂದ ಏನೇನೋ ನಿರೀಕ್ಷಿಸುತ್ತಾರೆ. ಮಕ್ಕಳು ಅವರು ನಿರೀಕ್ಷಿಸಿದ ಮಟ್ಟಕ್ಕೆ ಬಾರದಿದ್ದರೆ ಅವರನ್ನು ಕೀಳಾಗಿ ಕಾಣುತ್ತಾರೆ. ಆಶ್ಚರ್ಯದ ಸಂಗತಿಯೆಂದರೆ, ತಂದೆ ತಾಯಿಗಳು ಯಾವುದೇ ಬಗೆಯಲ್ಲಿ ವರ್ತಿಸಲಿ, ಆ ವರ್ತನಾ ವಿಧಾನವನ್ನು ಕ್ರಮಬದ್ಧವಾಗಿ ಚಾಚೂ ತಪ್ಪದೆ ಅನುಸರಿಸುತ್ತಾರೆ. ಇದರಿಂದಾಗಿ, ತಂದೆ ತಾಯಿಗಳು ಮಕ್ಕಳ ಪಾಲನೆ ಪೋಷಣೆಯಲ್ಲಿ ಅನುಸರಿಸುವ ಕೆಲವು ನಿಶ್ಚಿತ ಪದ್ಧತಿಗಳನ್ನು ಗುರುತಿಸಿ, ಅವುಗಳ ನಿರ್ದಿಷ್ಟ ಪ್ರಭಾವಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದು ಮನೋವಿಜ್ಞಾನಿಗಳಿಗೆ ಸಾಧ್ಯವಾಗಿದೆ. ಒಂದೊಂದು ಗೊತ್ತಾದ ಕೌಟುಂಬಿಕ ಪರಿಸರದಲ್ಲಿ ಬೆಳೆದ ಮಗು ಕೆಲವು ವಿಶಿಷ್ಟ ಮಾನಸಿಕ ಲಕ್ಷಣಗಳನ್ನು ಬೆಳೆಸಿಕೊಳ್ಳುವುದು ಕಂಡು ಬಂದಿದೆ. ಇದು ಹೇಗೆ ಮತ್ತು ಏಕೆ ಜರುಗುತ್ತದೆಂಬುದನ್ನು ಕೊಂಚ ವಿಶದವಾಗಿ ಪರಿಶೀಲಿಸೋಣ.

ಮಕ್ಕಳ ಸ್ವಯಂಭಾವನೆ

ಪ್ರತಿಯೊಂದು ಮಗುವಿಗೂ ತನ್ನನ್ನು ಕುರಿತು ತನ್ನದೇ ಆದ ಒಂದು ಮಾನಸಿಕ ಚಿತ್ರವಿರುತ್ತದೆ. ಇದನ್ನು ಸ್ವಯಂಭಾವ (Self-Concept) ಅಥವಾ ಆತ್ಮ ಚಿತ್ರವೆನ್ನ

ಬಹುದು. ಸ್ವಯಂಭಾವನೆ ಮಗುವಿನ ವ್ಯಕ್ತಿತ್ವದ ಕೇಂದ್ರ. ಅದು ಅವನ ವರ್ತನೆಯ ನಿರ್ಣಾಯಕಗಳಲ್ಲಿ ಬಹುಮುಖ್ಯವಾದ ಘಟಕ. ಸ್ವಯಂಭಾವನೆ ಹುಟ್ಟಿನಿಂದಲೇ ಬರುವು ದಿಲ್ಲ. ಪ್ರತಿಯೊಂದು ಮಗುವೂ ಅದನ್ನು ಬೆಳೆಸಿಕೊಳ್ಳುತ್ತದೆ. ಮಗು ತನ್ನ ಆತ್ಮ ಚಿತ್ರ ರಚನೆಗೆ ತನ್ನ ಪರಿಸರದ ಪ್ರಮುಖ ವ್ಯಕ್ತಿಗಳನ್ನು ಮಾದರಿಯಾಗಿ ಇಟ್ಟುಕೊಳ್ಳು ತ್ತದೆ. ಮಾದರಿಯು ಹಾಗೆ ತಾನಾಗಲು ಪ್ರಯತ್ನಿಸುತ್ತದೆ. ಕೌಟುಂಬಿಕ ಪರಿಸರದಲ್ಲಿ ರುವವರು ತನ್ನ ವಿಷಯವಾಗಿ ಪ್ರದರ್ಶಿಸುವ ಅಭಿಪ್ರಾಯಗಳನ್ನು, ಆಸಕ್ತಿಗಳನ್ನು ಮೌಲ್ಯಗಳನ್ನು ತನ್ನ ಆತ್ಮ ಚಿತ್ರಣದಲ್ಲಿ ಅಳವಡಿಸಿಕೊಳ್ಳುತ್ತದೆ. ಅಂದರೆ ಬೇರೆಯವರು ತನ್ನನ್ನು ಹೇಗೆ ಕಾಣುವರೋ, ಹೇಗೆ ಅಳೆಯುವರೋ, ಹೇಗೆ ಅರ್ಥೈಸುವರೋ ಅದೇ ರೀತಿಯಲ್ಲಿ ಮಗು ತನ್ನನ್ನು ತಾನು ಕಂಡು, ಅಳೆದು. ಅರ್ಥೈಸಿಕೊಳ್ಳುತ್ತದೆ. ಸಣ್ಣ ಮಕ್ಕಳಿಗೆ ಈ ಕಾರ್ಯದಲ್ಲಿ ಯಾರೇ ಆದರೂ ಮಾದರಿಯಾಗಬಹುದಾದರೂ, ತಂದೆ ತಾಯಿಗಳೇ ಈ ಪಾತ್ರ ವಹಿಸುವ ಸಂಭವ ಹೆಚ್ಚು. ಹಾಗಾಗಬೇಕಾದ್ದು ಅವಶ್ಯಕೂಡ: ಅಂದ ಮೇಲೆ ಮಕ್ಕಳ ಸ್ವಯಂಭಾವ, ತಂದೆ ತಾಯಿಗಳು ಮಕ್ಕಳ ವಿಷಯವಾಗಿ ಪ್ರದರ್ಶಿಸುವ ಅಭಿಪ್ರಾಯಗಳನ್ನು ಅವಲಂಬಿಸಿರುತ್ತದೆಂದಾಯ್ತು. ಆದುದರಿಂದ ತಂದೆ ತಾಯಿಗಳು ಮಗುವಿನ ಸಧ್ಯಾತ್ಮಕ ವರ್ತನೆಗಳನ್ನು ಉಚಿತ ರೀತಿಯಲ್ಲಿ ಪ್ರೋತ್ಸಾಹಿಸಿದರೆ. ಹಾಗೆಯೇ ದುರ್ವರ್ತನೆಗಳನ್ನು ದಂಡಿಸಿದರೆ, ಮಗುವಿಗೆ ತನ್ನಲ್ಲಿರುವ ಒಳಿತು ಕೆಡಕು ಗಳನ್ನು ಕುರಿತು ವಿವೇಚಿಸುವ ಶಕ್ತಿ ಬರುತ್ತದೆ. ಹೀಗೆ ಮಗು ತನ್ನ ಸಕಲ ಗುಣ ಲಕ್ಷಣ ಗಳನ್ನು ವರ್ತನೆ ವ್ಯವಹಾರಗಳನ್ನು ತಂದೆ ತಾಯಿಗಳ ಅಭಿಪ್ರಾಯಗಳಿಗೆ ಒರೆಹಚ್ಚು ತ್ತಾನೆ; ಅವರು ಕೋರುವ ಪ್ರತಿಕ್ರಿಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ: ಅವುಗಳಿಗನುಸಾರವಾಗಿ ತನ್ನ ಕೆಲವು ಲಕ್ಷಣಗಳನ್ನು ಉಳಿಸಿಕೊಳ್ಳುತ್ತಾನೆ, ಕೆಲವನ್ನು ಕೈಬಿಡುತಾನೆ. ಹೀಗೆ ತನ್ನ ಸ್ವಯಂ ಚಿತ್ರವನ್ನು ರಚಿಸಿ, ವಿಮರ್ಶಿಸಿ, ಪುನರ್ರಚಿಸುತ್ತಿರು ತ್ತಾನೆ. ಈ ಕಾರ್ಯ ನಿರಂತರವಾಗಿ ಜರುಗುತ್ತಲೇ ಇರುತ್ತದೆ. ಆದುದರಿಂದ ತಂದೆ ತಾಯಿಗಳು ಆದರ್ಶಪ್ರಾಯರಾಗಬೇಕು. ಉತ್ತಮ ಮಾದರಿಗಳನ್ನು ಒದಗಿಸಬೇಕು. ಅವರು ಮಗುವಿನ ವರ್ತನೆಯನ್ನು ಆಸಕ್ತಿಯಿಂದ ಅವಲೋಕಿಸುತ್ತಿರಬೇಕು. ಸೂಕ್ತ ರೀತಿಯಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ತೋರಿಸಬೇಕು. ಹಾಗಲ್ಲದೆ ಅವರು ತಮ್ಮ ಮಕ್ಕಳ ವಿಷಯದಲ್ಲಿ ಅತ್ಯಾಸಕ್ತರಾದರೆ ಅಥವಾ ತೀರ ನಿರಾಸಕ್ತರಾದರೆ, ಅನುಚಿತ ಮಾದರಿಗಳಾದರೆ, ಮಕ್ಕಳ ಸ್ವಯಂ ಚಿತ್ರ ರಚನೆ ದೋಷಪೂರಿತವಾಗುತ್ತದೆ: ಮಾನಸಿಕ ವಿಕಾಸ ಕುಂಠಿತಗೊಳ್ಳುತ್ತದೆ: ವ್ಯಕ್ತಿತ್ವದ ಬೆಳವಣಿಗೆಗೆ ಧಕ್ಕೆಯಾಗುತ್ತದೆ: ಅವರ ಜೀವನ ಅಸ್ವಸ್ಥವಾಗುತ್ತದೆ.

ತಂದೆ ತಾಯಿಗಳ ಅನುಚಿತ ಮಾದರಿಗಳು

ಮಕ್ಕಳು ಬೆಳೆದಂತೆ ಕೌಟುಂಬಿಕ ಪರಿಸರದ ಜತೆಯಲ್ಲಿಯೇ ಸಾಮಾಜಿಕ ಪರಿಸರವೂ ಅವರ ಮೇಲೆ ಪ್ರಭಾವ ಬೀರುತ್ತದೆ. ಇದರಿಂದಾಗಿ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲೇ

ತಂದೆ ತಾಯಿ ಹೇಗಿರಬೇಕು ಎನ್ನುವ ಕಲ್ಪನೆ ಬಂದಿರುತ್ತದೆ. ಉದಾಹರಣೆಗೆ, ತಾಯಿ ಬಹಳ ಮೃದು, ಕರುಣಾಳು, ಪ್ರೀತಿಪರಳು, ಉದಾರಮನಸ್ಸಿನವಳೆನ್ನುವ ಹಾಗೂ ತಂದೆ ಒರಟು, ಸಿಪ್ಪುರಿ, ಕಠಿಣಮನಸ್ಸಿನವನು, ತಪ್ಪು ಮಾಡಿದರೆ ದಂಡಿಸುವನು ಎನ್ನುವ ಕಲ್ಪನೆಗಳು ಮಕ್ಕಳ ಮನಸ್ಸಿನಲ್ಲಿ ಬೇರೂರಿರುತ್ತವೆ. ಹಾಗೆಯೇ ತಮ್ಮ ಸ್ವಯಂ ಚಿತ್ರ ರಚನೆಗೆ ಗಂಡು ಮಗು ತಂದೆಯನ್ನೂ, ಹೆಣ್ಣು ಮಗು ತಾಯಿಯನ್ನೂ ಮಾದರಿಯಾಗಿ ಆರಿಸಿ ಕೊಳ್ಳುತ್ತವೆ. ಅವರನ್ನೇ ಅನುಕರಣ ಮಾಡುತ್ತವೆ. ಹೀಗೆ ಮಾಡಬೇಕಾದ್ದು ಸ್ವಾಭಾವಿಕ. ಆದರೆ ಒಂದೊಂದು ವೇಳೆ ಮಕ್ಕಳಿಗೆ ಸಲಿಂಗ ಪಿತೃಗಳೊಡನೆ ತಾದಾತ್ಮ್ಯ ಹೊಂದಿ, ಅವರನ್ನು ಅನುಕರಣೆ ಮಾಡುವುದು ಕಷ್ಟವಾಗುತ್ತದೆ. ಮನೆಯಲ್ಲಿ ತಂದೆ ತಾಯಿಗಳ ಪಾತ್ರ ನಿರ್ವಹಣೆಯಲ್ಲಿ ಅದಲು ಬದಲಾದಾಗ, ತಂದೆಯೋ, ತಾಯಿಯೋ ಅನಿವಾರ್ಯ ಕಾರಣಗಳಿಂದಾಗಿ ಮನೆಯಲ್ಲಿ ಇಲ್ಲವಾದಾಗ, ಮಕ್ಕಳ ದೃಷ್ಟಿಯಲ್ಲಿ ತಂದೆಯಾಗಲೀ, ತಾಯಿಯಾಗಲೀ, ಅಯೋಗ್ಯರೆನಿಸಿದಾಗ, ಅಸಮರ್ಥರೆನಿಸಿದಾಗ ಮಕ್ಕಳಿಗೆ ಅವರಲ್ಲಿ ತಾದಾತ್ಮ್ಯ ಹೊಂದುವುದು ಕಷ್ಟವೆನಿಸುತ್ತದೆ.

ಸಾಂಪ್ರದಾಯಿಕವಾಗಿ ಮಗುವಿನ ಪಾಲನೆ, ಪೋಷಣೆ ತಾಯಿಗೆ ಸೇರಿದ್ದು. ಅವಳಿಗಿರುವಷ್ಟು ಮಗುವಿನ ಸಂಪರ್ಕ ತಂದೆಗಿರುವುದಿಲ್ಲ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಗುವಿನ ವರ್ತನೆಯನ್ನು ತಾಯಿ ನಿರ್ಧರಿಸುತ್ತಾಳೆ, ನಿಯಂತ್ರಿಸುತ್ತಾಳೆ ಮತ್ತು ನಿರ್ದೇಶಿಸುತ್ತಾಳೆ. ಹೀಗೆ ಮಗುವಿನ ಆರೈಕೆಯಲ್ಲಿರುವ ಅವಳದು ಮೇಲ್ಗೈಯಾಗುತ್ತದೆ. ಹೀಗೆ ಆರಂಭವಾದ ಅವಳ ಪ್ರಾಬಲ್ಯ ಕುಟುಂಬದ ವ್ಯವಹಾರಗಳೆಡೆಗೂ ಪಸರಿಸಬಹುದು. ಮಗುವಿನ ವಿಷಯದಲ್ಲಿ ಅವಳು ತನ್ನ ಪತಿಯ ಸಲಹೆಗಳನ್ನು ನಿರಾಕರಿಸಬಹುದು. ಅವನು ಮಗುವನ್ನು ತಿದ್ದಲು ಬಂದಾಗ, ನಿಯಂತ್ರಿಸಲು ಯತ್ನಿಸಿದಾಗ, ಪತ್ನಿ ಅದಕ್ಕೆ ಅವಕಾಶ ಕೊಡದಿರಬಹುದು. ಕೊನೆಕೊನೆಗೆ ತಾಯಿಯೇ ಕುಟುಂಬದ ನಿರ್ದೇಶಕಿಯಾಗಬಹುದು. ಹಣಕಾಸಿನ ವ್ಯವಸ್ಥೆ ಅವಳ ಕೈಸೇರಬಹುದು. ಗಂಡಸು ಮಾಡಬೇಕಾದ ಕಾರ್ಯಗಳನ್ನು ತಾನೇ ನಿರ್ವಹಿಸಲು ತೊಡಗಿ, ತಾನೇ ಕುಟುಂಬದ ನಾಯಕಿಯಾಗಬಹುದು. ತಾಯಿ ಕೆಲವು ವೇಳೆ ಒಂದು ಉದ್ಯೋಗದಲ್ಲಿದ್ದರಂತೂ ಈ ಪ್ರವೃತ್ತಿ ಬಲಗೊಳ್ಳುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ತಂದೆ ಸಂಸಾರದಲ್ಲಿ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಾನೆ. ಹೆಂಡತಿಗೆ ಅಧೀನನಾಗುತ್ತಾನೆ. ಪುರುಷ ಸಹಜವಾದ ವರ್ತನೆಗಳನ್ನು ಕೈಬಿಡುತ್ತಾನೆ. ಈಗ ಅವನೇ ಹೆಚ್ಚು ಹೆಚ್ಚಾಗಿ ಮನೆಗೆಲಸದಲ್ಲಿ ತೊಡಗಬಹುದು, ಮಕ್ಕಳ ಆರೈಕೆಗೂ ತೊಡಗಬಹುದು. ಹೀಗಾಗಿ ಕೊನೆಯಲ್ಲಿ ತಂದೆತಾಯಿಗಳ ಪಾತ್ರನಿರ್ವಹಣೆಯಲ್ಲಿ ಅದಲುಬದಲಾಗಿ ಅವರ ಸ್ಥಾನಪಲ್ಲಟವಾಗಬಹುದು.

ಕೆಲವು ಸಂದರ್ಭಗಳಲ್ಲಿ ಅನಿವಾರ್ಯ ಕಾರಣಗಳಿಂದಾಗಿ ತಂದೆಯೋ, ತಾಯಿಯೋ ಮನೆಯಲ್ಲಿ ಇಲ್ಲದಿರಬಹುದು, ವಿವಾಹ ವಿಚ್ಛೇದನದಿಂದ ಅವರು ಬೇರ್ಪಟ್ಟಿರಬಹುದು. ಯಾರಾದರೊಬ್ಬರು ದೂರದೂರಿನಲ್ಲಿ ಉದ್ಯೋಗದಲ್ಲಿರಬಹುದು, ಇಲ್ಲವೇ ಪರದೇಶಗಳಲ್ಲಿ ವಾಸಿಸುತ್ತಿರಬಹುದು. ಯಾರಾದರೊಬ್ಬರು ತೀರಿಕೊಂಡಿರಬಹುದು. ಹೀಗಾಗಿ ಮಕ್ಕಳಿಗೆ ಸಲಿಂಗ ಪಿತೃಗಳ ಸಂಪರ್ಕ, ಸಹವಾಸ ತಪ್ಪುತ್ತದೆ.

ತಂದೆಯೋ ತಾಯಿಯೋ ಮನೆಯಲ್ಲಿಲ್ಲದಾಗ ಅಥವಾ ಇಬ್ಬರೂ ಇದ್ದು ಅವರ ವರ್ತನೆ ಮತ್ತು ಪಾತ್ರನಿರ್ವಹಣೆಯಲ್ಲಿ ಅದಲುಬದಲಾದಾಗ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಏರುಪೇರಾಗುತ್ತದೆ. ಮಕ್ಕಳು ತಮ್ಮದೇ ಆದ ಲೈಂಗಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದು ಅವರ ವ್ಯಕ್ತಿತ್ವವಿಕಾಸಕ್ಕೆ ತೀರ ಅವಶ್ಯಕ. ತಂದೆತಾಯಿಗಳ ಪಾತ್ರ ಪಲ್ಲಟವಾದಾಗ ಗಂಡುಮಗುವಿಗೆ ತಂದೆಯನ್ನು ಮಾದರಿಯಾಗಿಟ್ಟುಕೊಳ್ಳುವುದು ಕಷ್ಟ. ಹೆಣ್ಣುಮಗು ಕೂಡ ಇಂತಹ ಪರಿಸ್ಥಿತಿಯಲ್ಲಿ ಗೊಂದಲಕ್ಕೀಡಾಗುತ್ತಾಳೆ. ಇವರು ಪರಲಿಂಗ ಪಿತೃಗಳ ಅನುಕರಣೆ ಮಾಡಲು ಯತ್ನಿಸಿ ಗೊಂದಲದಲ್ಲಿ ಬೀಳುತ್ತಾರೆ. ಆದರಿಂದ ತೊಂದರೆಗಳನ್ನನುಭವಿಸುತ್ತಾರೆ. ಕೆಲವು ವೇಳೆ ಮಾನಸಿಕ ವಿಕಾರಗಳಿಗೊಳಗಾಗುತ್ತಾರೆ. ತಂದೆ ಇಲ್ಲದ ಪರಿಸರದಲ್ಲಿ ಬೆಳೆದ ಗಂಡು ಮಕ್ಕಳಲ್ಲಿ ನೈತಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಅವರಲ್ಲಿ ಪುರುಷ ಲಕ್ಷಣದ ಅಭಾವ ಕಂಡುಬರುತ್ತದೆ. ಅವರ ವೈವಾಹಿಕ ಜೀವನ ಸಮಸ್ಯಾತ್ಮಕವಾಗುತ್ತದೆ. ಬಾಲಾಪರಾಧಿಗಳು ಹೆಚ್ಚಿಗೆ ತಂದೆಯಿಲ್ಲದ ಪರಿಸರಗಳಲ್ಲಿ ಬೆಳೆದುಬಂದಿರುವುದು ಕಂಡುಬಂದಿದೆ.

ಒಟ್ಟಿನಲ್ಲಿ ಕಾರಣವೇನೇ ಇರಲಿ, ತಂದೆತಾಯಿಗಳು ಉತ್ತಮ ಮಾದರಿಗಳಾಗದಿದ್ದರೆ ಅವರ ಮಾನಸಿಕ ವಿಕಾಸ ನಿರೀಕ್ಷಿತ ಮಾರ್ಗದಲ್ಲಿ ಜರುಗುವುದಿಲ್ಲ. ಅವರು ಮಕ್ಕಳಾಗಿರುವಾಗಷ್ಟೆ ಅಲ್ಲ. ವಯಸ್ಕರಾದ ಮೇಲೂ ಸ್ವಸ್ಥ ಜೀವನ ನಡೆಸುವುದು ಕಷ್ಟವಾಗುತ್ತದೆ. ಈ ಮಕ್ಕಳು ತಂದೆತಾಯಿಗಳಾದಾಗ ತಮ್ಮ ಮಕ್ಕಳಿಗೂ ಉತ್ತಮ ಮಾದರಿಗಳಾಗಲಾರರು. ಇವರು ತಮಗೆ ತಾವು ಸಮಸ್ಯೆಯಾಗುವುದರ ಜೊತೆಗೆ ಸಮಾಜಕ್ಕೂ ಸಮಸ್ಯೆಯಾಗುತ್ತಾರೆ.

ಅನುಚಿತ ಶಿಶುಪಾಲನಾ ಪದ್ಧತಿಗಳು :

ಎಳೆಯ ಮಕ್ಕಳು ಪೂರ್ಣವಾಗಿ ಪರಾಶ್ರಯಿಗಳು. ಪರಾವಲಂಬಿಗಳು. ಅವರನ್ನು ಪಾಲಿಸಿ ಪೋಷಿಸುವುದು ತಂದೆ ತಾಯಿಗಳ ಕರ್ತವ್ಯ. ಜವಾಬ್ದಾರಿ. ಈ ಕರ್ತವ್ಯ ನಿರ್ವಹಣೆಯಲ್ಲಿ, ತಿಳಿದೋ ತಿಳಿಯದೆಯೋ. ಅವರು ತಮ್ಮದೇ ಆದ ಕೆಲವು ಪದ್ಧತಿಗಳನ್ನು ಅನುಸರಿಸುತ್ತಾರೆ. ಮಕ್ಕಳ ಆರೈಕೆಯಲ್ಲಿ ಅವರು ಬಹಳ ಆಸಕ್ತಿ ತೋರಬಹುದು ಅಥವಾ ತೀರ ನಿರಾಸಕ್ತರಾಗಿರಬಹುದು. ಅತಿಯಾದ ನಿರ್ಬಂಧಕ್ಕೊಳಪಡಿಸಬಹುದು ಅಥವಾ ಮುಕ್ತ ವಾತಾವರಣದಲ್ಲಿ ಬೆಳೆಯಲು ಬಿಡಬಹುದು: ಅತಿಯಾದ ಪ್ರಚೋದನೆಗಳಿಗೆ ಗುರಿಮಾಡಬಹುದು ಅಥವಾ ಅತಿಯಾದ ರಕ್ಷಣೆಗೊಳಪಡಿಸಬಹುದು; ಅತಿಯಾದ ಶಿಸ್ತಿಗೊಳಪಡಿಸಬಹುದು ಇಲ್ಲವೇ ಅವರು ಹೋದಂತೆ ಬಿಡಬಹುದು: ಅವರೇನೇ ಮಾಡಿದರೂ ಟೀಕಿಸಿ, ಶಿಕ್ಷಿಸಬಹುದು ಅಥವಾ ಮಾಡಿದ್ದಕ್ಕೆಲ್ಲಾ ಶ್ಲಾಘಿಸಿ, ಮನ್ನಿಸಬಹುದು. ಹೀಗೆ, ತಂದೆ ತಾಯಿಗಳು ಅನುಸರಿಸುವ ಒಂದೊಂದು ವಿಧಾನವೂ ಮಕ್ಕಳ ಸ್ವಭಾವದ ಮೇಲೆ ನಿರ್ದಿಷ್ಟ ಪ್ರಭಾವ ಬೀರುತ್ತದೆ. ಕೆಲವು

ವಿಶಿಷ್ಟ ವರ್ತನೆಗಳಿಗೆ ಪ್ರೇರಕವಾಗುತ್ತದೆ. ಇದು ಅವರು ವಯಸ್ಕರಾದಾಗ ಎಂತಹ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆಂಬುದನ್ನು ಮೊದಲೇ ನಿರ್ಧರಿಸುತ್ತದೆ. ಮಕ್ಕಳ ಪಾಲನೆಯಲ್ಲಿ ತಂದೆ ತಾಯಿಗಳು ಅನುಸರಿಸಬಹುದಾದ ಕೆಲವು ಅನುಚಿತ ವಿಧಾನಗಳನ್ನೂ ಮಕ್ಕಳ ಮೇಲಿನ ಅವುಗಳ ಪ್ರಭಾವಗಳನ್ನೂ ಈ ಕೆಳಗೆ ಕೊಟ್ಟಿದೆ.

ಅತಿರಕ್ಷಿತ ಮಕ್ಕಳು :

ಎಳೆಯ ಮಕ್ಕಳು ಪರಾವಲಂಬಿಗಳಾದರೂ ಈ ಅವಲಂಬನೆ ಬಹಳ ಕಾಲದ ವರೆಗೆ ಇರುವುದಿಲ್ಲ. ಹೀಗಿರಲು ಮಕ್ಕಳೇ ಇಚ್ಛಿಸುವುದಿಲ್ಲ. ಒಂದೆರಡು ವರ್ಷ ತುಂಬುವುದರಲ್ಲಿಯೇ ಮಕ್ಕಳಲ್ಲಿ ತಮ್ಮಿಷ್ಟಕ್ಕೆ ತಾವಿರಬೇಕೆಂಬ ಮನೋವೃತ್ತಿ ಬೆಳೆದು ಬರುತ್ತದೆ. ಆದರೆ ಕೆಲವು ತಂದೆತಾಯಿಗಳು ಇದಕ್ಕೆ ಅವಕಾಶ ಕೊಡುವುದಿಲ್ಲ. ಇವರು ಸದಾ ಅವನ ಆರೈಕೆಯಲ್ಲೇ ತೊಡಗಿರುತ್ತಾರೆ. ಅವನ ಕರೆಗಾಗಿ ಓಗೊಟ್ಟು ನಿಂತಿರುತ್ತಾರೆ. ಒಂದು ಕ್ಷಣವೂ ಮಗುವನ್ನು ಅದರಷ್ಟಕ್ಕೆ ಬಿಟ್ಟಿರುವದಿಲ್ಲ. ಮಗುವಿಗೆ ವಯಸ್ಸಾಗುತ್ತಿರುವ ವಿಷಯ ಗಮನಕ್ಕೆ ಬರುವದೇ ಇಲ್ಲ. ಅವನ ಆಶೋತ್ತರಗಳನ್ನು ಅವೆಷ್ಟೇ ಕ್ಷುಲ್ಲಕವಾಗಿ ಕಂಡರೂ. ನೆರವೇರಿಸಲು ಕಾದುಕುಳಿತಿರುತ್ತಾರೆ. ಮಗುವಿಗೆ ವಯಸ್ಸಾದ ಮೇಲೂ ಉಣಿಸುತ್ತಾರೆ, ಉಡಿಸುತ್ತಾರೆ. ಅವನೊಡನೆ ಮಲಗುತ್ತಾರೆ: ಕಕ್ಕಸು ಮಾಡಿಸುತ್ತಾರೆ, ಸ್ನಾನ ಮಾಡಿಸುತ್ತಾರೆ, ಶಾಲೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿಂದ ಕರೆದು ತರುತ್ತಾರೆ, ಹೋಮ್‌ವರ್ಕ ತಾವೇ ಮಾಡಿಕೊಡುತ್ತಾರೆ. ಬೇರೆ ಮಕ್ಕಳು ಇವರ ದೃಷ್ಟಿಯಲ್ಲಿ ಒಳ್ಳೆಯವರಲ್ಲ. ಆದುದರಿಂದ ಮಗುವನ್ನು ಯಾರ ಜತೆಯಲ್ಲೂ ಆಡಲು ಬಿಡುವುದಿಲ್ಲ. ಬೇರೆ ಮಕ್ಕಳನ್ನು ತಮ್ಮ ಮಗುವಿನೆದುರಿನಲ್ಲಿ ಬಡಿಯುವದೂ, ಬೈಯುವದೂ ಮಾಡಬಹುದು. ತಮ್ಮ ಮಗುವಿಗೆ ತೊಂದರೆಕೊಟ್ಟರೆಂದು ಉಪಾಧ್ಯಾಯರನ್ನೂ ನಿಂದಿಸದೇ ಬಿಡುವುದಿಲ್ಲ. ಒಟ್ಟಿನಲ್ಲಿ ಇವರು ತಮ್ಮ ಮಗುವನ್ನು ಏನು ಮಾಡಲಿಕ್ಕೂ ಬಿಡುವುದಿಲ್ಲ. ಹಾಗೆಯೇ ಅವನನ್ನು ಬೆಳೆಯಲಿಕ್ಕೂ ಬಿಡುವುದಿಲ್ಲ. ಇವರು ಅತಿ ರಕ್ಷಿತ ಮಕ್ಕಳು. ಈ ಪರಿಸರದಲ್ಲಿ ಬೆಳೆದ ಮಕ್ಕಳು ಯಾವಾಗಲೂ ಎಳಸಾಗಿಯೇ ಉಳಿಯುತ್ತಾರೆ. ಸದಾ ಪರಾವಲಂಬನೆಯನ್ನೇ ಬೆಳೆಸಿಕೊಳ್ಳುತ್ತಾರೆ. ತಂದೆ ತಾಯಿಗಳಿರುವುದು ತಮ್ಮ ಸೇವೆಗಾಗಿಯೇ ಎನ್ನುವ ಭಾವನೆಯನ್ನು ಬೆಳಸಿಕೊಂಡ ಈ ಮಕ್ಕಳು, ದೊಡ್ಡವರಾದ ಮೇಲೆ ಲೋಕವಿರುವುದೆಲ್ಲಾ ತಮ್ಮ ಸೇವೆಗಾಗಿಯೇ ಎಂದು ನಂಬುತ್ತಾರೆ. ಇವರಿಗೆ ಸ್ವಾವಲಂಬನೆ ಬರುವುದು ಕಷ್ಟ. ಹೆಚ್ಚು ಪಾಲು ಇವರು ಸ್ವಾರ್ಥಿಗಳಾಗುತ್ತಾರೆ. ಸಾಂಘಿಕ ಜೀವನ ಬಿಡಿಸುವುದಿಲ್ಲ. ಸ್ಪರ್ಧೆ ಇವರಿಗಿಲ್ಲ. ಆಟ ಪಾಠಗಳಲ್ಲಿ ಆಸಕ್ತಿ ಇಲ್ಲ. ಶಾಲೆಯಲ್ಲೂ ಹಿಂದುಳಿದಿರುತ್ತಾರೆ. ತಂದೆತಾಯಿಗಳು ಹೇಳುವ "ಅದು ನಿನ್ನ ಕೈಲಾಗೊಲ್ಲಮ್ಮ" ಎಂಬ ಮಾತು ಅವರ ಸ್ವಯಂ ಭಾವದಲ್ಲಿ ಅಚ್ಚಾಗಿ, ಕೊನೆಯಲ್ಲಿ ಅವರ ಮನಸ್ಸಿನಲ್ಲಿ "ಅದು ನನ್ನ ಕೈಲಾಗೊಲ್ಲ" ಎನ್ನುವ ಭಾವನೆ ಬೇರೂರುತ್ತದೆ. ಸದಾ ಬೇರೆಯವರ

ಅನುಕಂಪವನ್ನು ಬಯಸುತ್ತಾರೆ. ಅದು ದೊರಕದಿದ್ದಾಗ ಕೋಪಗೊಳ್ಳುತ್ತಾರೆ. ತಮ್ಮ ದೇನೂ ತಪ್ಪಿಲ್ಲ, ತಪ್ಪೆಲ್ಲಾ ಬೇರೆಯವರದು. ತಾವು ಏನೂ ಅರಿಯದ ನಿಸ್ಸಹಾಯಕರು ಎಂಬುದು ಇವರ ಅಭಿಪ್ರಾಯ. ದೊಡ್ಡವರಾದ ಮೇಲೆ ಇವರಿಗೆ ಇತರರೊಡನೆ ಸಹಕರಿಸುವುದು ಕಷ್ಟ. ಯಾವ ಕೆಲಸದಲ್ಲೂ ಸ್ವಯಂಪ್ರೇರಣೆಯಿಂದ ತೊಡಗುವುದಿಲ್ಲ. ಸ್ವಯಂ ನಿರ್ದೇಶನ ಇವರಿಗೆ ಬಾರದು. ಒಟ್ಟಿನಲ್ಲಿ ಇವರು ನಿಷ್ಪ್ರಯೋಜಕರಾಗುತ್ತಾರೆ. ಯಾವ ವಿಷಯದಲ್ಲೂ ಜವಾಬ್ದಾರಿ ವಹಿಸಿಕೊಳ್ಳಲಾರರು. ಹೀಗೆ ತಂದೆತಾಯಿಗಳಿಂದ ಅತಿಯಾಗಿ ರಕ್ಷಿತವಾದ ಮಗು ಪ್ರಬುದ್ಧ ವ್ಯಕ್ತಿಯಾಗದೆ. ಎಂದೆಂದಿಗೂ ಎಳೆ ನಿಂಬೆ ಕಾಯಿಯಾಗಿ ಉಳಿಯುತ್ತದೆ.

ಅತಿ ನಿರ್ಬಂಧಿತ ಮಗು :

ಅತಿನಿರ್ಬಂಧನ ಅತಿ ರಕ್ಷಣೆಗೆ ತೀರ ಹತ್ತಿರದ ಇನ್ನೊಂದು ಅನುಚಿತ ಪಾಲನಾ ವಿಧಾನ. ಮಕ್ಕಳು ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಕುರಿತು ನಿಯಮಗಳ ಒಂದು ಪಟ್ಟಿ ತಂದೆತಾಯಿಗಳಲ್ಲಿದ್ದು, ಅದನ್ನು ಕಟ್ಟುನಿಟ್ಟಾಗಿ ಪಾಲಿಸುವ ನಿದರ್ಶನಗಳು ಹಲವಾರಿವೆ. ಎಷ್ಟೊತ್ತಿಗೆ ಏಳಬೇಕು, ಮಲಗಬೇಕು, ಮನೆಯಿಂದ ಹೊರಡಬೇಕು, ಹಿಂದಿರುಗಬೇಕು, ಯಾರ ಜತೆ ಸೇರಬೇಕು, ಯಾರ ಜತೆ ಸೇರಬಾರದು, ಇವುಗಳನ್ನು ಕುರಿತು ಮಕ್ಕಳ ಮೇಲೆ ನಿರ್ಬಂಧನೆ ವಿಧಿಸಿಸಲ್ಪಟ್ಟಿರುತ್ತವೆ. ಹೀಗೆ ಅತಿ ನಿರ್ಬಂಧನಕ್ಕೊಳಗಾದ ಮಗು ಆತ್ಮ ವಿಶ್ವಾಸವನ್ನೇ ಬೆಳೆಸಿಕೊಳ್ಳಲಾರ. ಅವನಿಗೆ ವಿಮರ್ಶಕ ದೃಷ್ಟಿ ಕೂಡ ಬರುವುದು ಕಷ್ಟ. ಯಾರು ಏನು ಹೇಳಿದರೂ ಒಪ್ಪಿಕೊಳ್ಳುವ "ಕಾರ್ಬನ್ ಕಾಪಿ" ಮನೋವೃತ್ತಿ ಅವನಲ್ಲಿ ಬೆಳೆದುಕೊಳ್ಳುತ್ತದೆ. ಅತಿ ನಿರ್ಬಂಧನ ವನ್ನು ಆಳವಾಗಿ ಅಭ್ಯಸಿಸಿದ ಒಬ್ಬರ ಪ್ರಕಾರ, ಹೀಗೆ ಬೆಳೆದ ಮಕ್ಕಳು ಸಾಮಾಜಿಕವಾಗಿ ಒಳ್ಳೆಯ ಶಿಸ್ತು ಪಾಲಕರು; ಆದರೆ ಪರಾವಲಂಬಿಗಳು, ಬಹಳ ತಲೆಬಗ್ಗಿ ನಡೆಯುವವರು. ವಿಧೇಯರು. ಇವರು ಕೆಲವು ವೇಳೆ ನಿರ್ಬಂಧಗಳನ್ನು ಕಿತ್ತೊಗೆದು ಹಿರಿಯರ ಮೇಲೆ ತಿರುಗಿ ಬೀಳುವುದೂ ಉಂಟು. ಕೆಲವರು ಒಂದು ರೀತಿಯ ಸಾಮಾಜಿಕ ವಿಮುಖತೆ (Alienation)ಯನ್ನು ಬೆಳೆಸಿಕೊಳ್ಳಬಹುದು.

ಅನಿರ್ಬಂಧಿತ ಮಗ :

ಅತಿ ನಿರ್ಬಂಧಕ್ಕೆ ವಿರೋಧ ದಿಕ್ಕಿನ ಕ್ರಮ ಅನಿರ್ಬಂಧನ. ಕೆಲವು ತಂದೆತಾಯಿ ಗಳು ತಮ್ಮ ಮಕ್ಕಳು ಏನು ಮಾಡಿದರೂ ಮನ್ನಿಸುತ್ತಾರೆ, ಕ್ಷಮಿಸುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳು ಕೆಡುತ್ತಾರೆ. ಅವರಿಗೆ ಉತ್ತಮ ನಡತೆಯಾವುದು. ಕೀಳಾ ವುದು ಎನ್ನುವ ಪರಿಜ್ಞಾನವೇ ಬೆಳೆಯುವುದಿಲ್ಲ. ಪ್ರತಿಯೊಂದು ಮಗುವಿಗೂ ಶಿಸ್ತು, ಆತ್ಮ ನಿಯಂತ್ರಣ (Self-Control) ಬಹಳ ಅವಶ್ಯಕ. ಆತ್ಮನಿಯಂತ್ರಣ ಬೆಳೆಯು

ಬೇಕಾದರೆ ಮಕ್ಕಳು ಹಿರಿಯರ ಅಂಕೆಯಲ್ಲಿ ಬೆಳೆಯಬೇಕಾಗುತ್ತದೆ. ಮಕ್ಕಳಿಗೆ ಹಿರಿಯರ ಮೇಲೆ ಭಯ ಭಕ್ತಿ ಇರಬೇಕು. ಇಲ್ಲದಿದ್ದರೆ ಮಕ್ಕಳು ಬೇಜವಾಬ್ದಾರರಾಗುತ್ತಾರೆ; ಹಿರಿಯರ ಮೇಲೆ ತಿರುಗಿ ಬೀಳುತ್ತಾರೆ; ಪುಂಡಾಟ, ಗೂಂಡಾಗಿರಿಗಳು ಮೈಗೂಡುತ್ತವೆ. ನೈತಿಕ ಬೆಳವಣಿಗೆ ಹಿಮ್ಮೆಟ್ಟುತ್ತದೆ.

ತಂದೆ ತಾಯಿಗಳು ಮಕ್ಕಳ ಎಲ್ಲಾ ವರ್ತನೆಗಳನ್ನು ಮನ್ನಿಸುವಾಗ ಪರೋಕ್ಷವಾಗಿ ಅವರ ದುರ್ವರ್ತನೆಯನ್ನು ಪ್ರೋತ್ಸಾಹಿಸುತ್ತಾರೆ. ಬೇರೆಯವರು ತಮ್ಮ ಮಕ್ಕಳ ದುರ್ನಡತೆಯನ್ನು ತಿಳಿಸಿದಾಗ ಅವರ ಮೇಲೆಯೇ ತಿರುಗಿ ಬೀಳುತ್ತಾರೆ. ಉಪಾಧ್ಯಾಯರು ಮಕ್ಕಳನ್ನು ಶಿಕ್ಷಿಸಿದರೆ ಅವರ ಮೇಲೆ ಉರಿದು ಬೀಳುತ್ತಾರೆ. ಒಬ್ಬ ತಂದೆ ಉಪಾಧ್ಯಾಯರೊಬ್ಬರ ಬಳಿ "ನನ್ನ ಮಗನನ್ನು ನಾನೇ ಎಂದೂ ಕೈಯೆತ್ತಿ ಹೊಡೆದಿಲ್ಲ. ನೀವಾರು ಹೊಡೆಯುವುದಕ್ಕೆ?" ಎಂದು ಕೇಳಿದಾಗ ಆ ಉಪಾಧ್ಯಾಯರು "ಸ್ವಾಮಿ ನೀವು ಹೊಡೆದಿದ್ದರೆ ನನಗೆ ಆ ಕೆಲಸ ಮಾಡುವ ಅವಶ್ಯಕತೆಯೇ ಬರುತ್ತಿರಲಿಲ್ಲ" ಎಂದು ಹೇಳಿದರಂತೆ. ಹೀಗೆ ತಂದೆ ತಾಯಿಗಳ ನಿಯಂತ್ರಣ ಮಕ್ಕಳಿಗೆ ಅವಶ್ಯಕ. ಅದು ಅತಿಯಾಗಬಾರದು, ಅಷ್ಟೆ. ಅನಿರ್ಬಂಧಿತ ಮಕ್ಕಳು ಹಿರಿಯರ ಮಾತಿಗೆ ಬೆಲೆ ಕೊಡುವುದಿಲ್ಲ; ಅವರು ಧೂರ್ತರಾಗುತ್ತಾರೆ, ಹಠಮಾರಿಗಳಾಗುತ್ತಾರೆ. ಸಮಾಜವಿರೋಧಿ ಕೃತ್ಯಗಳಲ್ಲಿ ತೊಡಗಬಹುದು. ಮಕ್ಕಳಿಗೆ ಬಾಹ್ಯನಿಯಂತ್ರಣವಿಲ್ಲದಾದಾಗ ಆಂತರಿಕ ನಿಯಂತ್ರಣ ಬರುವುದು ಸಾಧ್ಯವಿಲ್ಲ.

ಮಿತಿಮೀರಿದ ಶಿಕ್ಷೆ :

ಮಕ್ಕಳ ಜೀವನದಲ್ಲಿ ಒಂದು ಅಚ್ಚುಕಟ್ಟು, ಕ್ರಮಬದ್ಧತೆ ಅಥವಾ ಶಿಸ್ತು ಬಹಳ ಅವಶ್ಯಕ. ಶಿಸ್ತು ನಾಗರಿಕತೆಯ ಸಂಕೇತ. ಮಕ್ಕಳಿಗೆ ಶಿಸ್ತನ್ನು ಕಲಿಸುವ ವಿಧಾನಗಳು ಹಲವಾರಿದ್ದರೂ, ಹೆಚ್ಚು ಜನ ತಂದೆ ತಾಯಿಗಳು ಅನುಸರಿಸುವುದು ಶಿಕ್ಷೆ ಅಥವಾ ದಂಡನೆಯ ಹಾದಿ. ಹದವರಿತ ಶಿಕ್ಷೆಯಲ್ಲಿ ಅನುಚಿತವಾದುದೇನೂ ಇಲ್ಲ. ಇರುವ ತೊಂದರೆಯೆಲ್ಲಾ ಅದರ ಮಿತಿಮೀರಿದ ಉಪಯೋಗದಲ್ಲಿ ಅಥವಾ ದುರುಪಯೋಗದಲ್ಲಿ. ಅತಿಯಾದ, ವಿವೇಚನಾರಹಿತವಾದ ಹಾಗು ಅಸಂಬದ್ಧವಾದ ದಂಡನೆ, ಮಕ್ಕಳ ಮೇಲೆ ಬೀರುವ ಪರಿಣಾಮ ಬಹಳ ದುರಂತವಾಗಿರುತ್ತದೆಂಬುದನ್ನು ಮನೋವಿಜ್ಞಾನ ಸ್ಪಷ್ಟಪಡಿಸುತ್ತದೆ.

ತಂದೆ ತಾಯಿಗಳು ಮಕ್ಕಳಿಗೆ ವಿಧಿಸುವ ಶಿಕ್ಷೆಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು : ಒಂದು ಶಾರೀರಿಕ ಶಿಕ್ಷೆ: ಎರಡನೆಯದು ಮಾನಸಿಕ ಶಿಕ್ಷೆ. ಶಾರೀರಿಕ ಶಿಕ್ಷೆ ಎಲ್ಲರಿಗೂ ತಿಳಿದ ವಿಷಯವೇ. ಮಾನಸಿಕ ಶಿಕ್ಷೆಯಲ್ಲಿ ಹಲವಾರು ವಿಧಾನಗಳಿವೆ. ಅವುಗಳಲ್ಲಿ ಬೈಯುವುದು, ಹೀಯಾಳಿಸುವುದು, ವ್ಯಂಗ್ಯವಾಗಿ ಮಾತನಾಡುವುದು, ಕಠಿಣ

ವಾಗಿ ಟೀಕಿಸುವುದು ಇವು ಮುಖ್ಯವಾದವು. ಶಿಕ್ಷೆ ಯಾವುದೇ ಬಗೆಯದಾಗಿರಲಿ, ಅದು ಅತಿಯಾದಾಗ, ಅನುಚಿತವಾದಾಗ, ಪರಿಣಾಮ ಮಾತ್ರ ಕೆಟ್ಟದ್ದೇ. ಮೊಟ್ಟಮೊದಲು ನಾವು ಗಮನಿಸಬೇಕಾದ್ದು, ದಂಡಿಸುವುದರಿಂದ ಮಗುವಿನ ಯಾವುದೇ ವರ್ತನೆಯನ್ನು ಸಂಪೂರ್ಣವಾಗಿ ಅಳಿಸಲು ಸಾಧ್ಯವಿಲ್ಲವೆಂಬುದು. ಶಿಕ್ಷೆ ಒಂದು ವರ್ತನೆಯ ಸಂಭಾವ್ಯತೆಯನ್ನು ತಗ್ಗಿಸಬಲ್ಲುದೇ ಹೊರತು ವರ್ತನೆಯ ಪ್ರವೃತ್ತಿಯನ್ನೇ ನಾಶಪಡಿಸಲಾರದು. ಕೆಲವು ವೇಳೆ ಶಿಕ್ಷಿಸಿದಂತೆಲ್ಲಾ ಅದರ ತೀವ್ರತೆ ಹೆಚ್ಚಾಗಬಹುದು. ಮಗುವನ್ನು ಶಿಕ್ಷಿಸಿದಾಗ ಅದು ಶಿಕ್ಷಿತ ವರ್ತನೆಯನ್ನು ಕೈಬಿಡುವುದರ ಬದಲು, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬೇರೆ ಬೇರೆ ಅನುಚಿತ ವರ್ತನೆಗಳನ್ನು ರೂಢಿಸಿಕೊಳ್ಳುತ್ತದೆ. ಮುಖ್ಯವಾಗಿ ಸುಳ್ಳು ಹೇಳಲು, ಮರೆಮಾಚಲು ಕಲಿತುಕೊಳ್ಳುತ್ತದೆ. ಸುಳ್ಳು ಹೇಳುವುದರಿಂದ ಕಳವಳ, ಅಳುಕು ಉಂಟಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಇನ್ನಷ್ಟು ಅನಪೇಕ್ಷಿತ ವರ್ತನೆಗಳನ್ನು ಅನುಸರಿಸುತ್ತದೆ. ತೀವ್ರ ಶಿಕ್ಷೆಗೊಳಗಾದ ಮಗುವಿನ ಮನಸ್ಸಿನಲ್ಲಿ, ಒಂದೊಂದು ವೇಳೆ, ತಾನು ತಪ್ಪಿತಸ್ಥನೆಂಬ ಭಾವನೆ ಬೆಳೆದು. ಅದರಿಂದ ಪಾರಾಗಲು ತಾನೇ ಶಿಕ್ಷೆಯನ್ನು ನಿರೀಕ್ಷಿಸುವ ವಿಚಿತ್ರ ಸ್ಥಿತಿಯೊದಗುವುದೂ ಉಂಟು. ಕೆಲವು ಮಕ್ಕಳು ತಾವು ಶಿಕ್ಷೆಗೊಳಗಾದಾಗ ಇತರರ ಗಮನ ಸೆಳೆಯುವುದರ ಮೂಲಕ ಕೇಂದ್ರ ವ್ಯಕ್ತಿಗಳಾಗಬಹುದೆಂದು ಶಿಕ್ಷಾರ್ಹ ಪರಿಸ್ಥಿತಿಗಳನ್ನು ಬರಮಾಡಿಕೊಳ್ಳಬಹುದು.

ಶಿಕ್ಷಿತ ಮಗುವಿನಲ್ಲಿ ಪರಾವಲಂಬನ ಪ್ರವೃತ್ತಿ ಅಭಿವೃದ್ಧಿಯಾಗುವ ಸಂಭವ ಹೆಚ್ಚು. ತಾನು ಏನಾದರೂ ಮಾಡಿದರೆ ಅದು ತಪ್ಪಾಗಬಹುದು; ತಂದೆ ತಾಯಿಗಳು ಶಿಕ್ಷಿಸಬಹುದು; ಆದುದರಿಂದ ಅವರ ಅಪ್ಪಣೆಯಿಲ್ಲದೆ ಏನೂ ಮಾಡುವುದೇ ಬೇಡವೆಂಬ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಹುದು. ಹೀಗಾಗಿ ಸ್ವಯಂ ನಿರ್ಧಾರದಿಂದ ಏನನ್ನೇ ಮಾಡಲು ಮಗು ಹಿಂಜರಿಯಬಹುದು: ಮಗುವಿನಲ್ಲಿ ಅಂತಃಪ್ರೇರಿತ ಕ್ರಿಯೆಗಳೇ ಇಲ್ಲದಾಗಿ, ಅವನ ಕ್ರಿಯೆಗಳೆಲ್ಲಾ ಪರರ ಇಚ್ಛೆಗನುಸಾರವಾಗಿಯೇ ನಡೆಯುವಂತಾಗಬಹುದು. ಇದೆಲ್ಲಕ್ಕಿಂತ ಮಿಗಿಲಾಗಿ ತನ್ನನ್ನು ಶಿಕ್ಷಿಸಿದವರ ಬಗ್ಗೆ ದ್ವೇಷದ ಭಾವನೆ ಬೆಳೆಯಬಹುದು. ಹೀಗೆ ಬೆಳೆದ ದ್ವೇಷವನ್ನು ಪ್ರಕಟಿಸುವುದು ಸಾಧ್ಯವಾಗದೆ ಅದು ಅವ್ಯಕ್ತವಾಗಿಯೇ ಉಳಿದು, ಅದರಿಂದ ಕೆಲವು ಅನಪೇಕ್ಷಿತ ವರ್ತನೆಗಳು ಬೆಳೆಯುವಂತಾಗಬಹುದು. ತಂದೆ ತಾಯಿಗಳ ಮೇಲಣ ಅವ್ಯಕ್ತ ದ್ವೇಷ ಸಮಾಜದ ಇತರರೆಡೆಗೆ ನಿರ್ದೇಶಿತವಾಗಿ, ಮಗು ತನ್ನ ಕೋಪವನ್ನು ಇತರ ಮಕ್ಕಳ ಮೇಲೆ ತೋರಬಹುದು. ಒಮ್ಮೊಮ್ಮೆ ಮಗು ಸಾಕು ಪ್ರಾಣಿಗಳನ್ನು ಹಿಂಸಿಸುವುದು ಇದೇ ಕಾರಣಕ್ಕಾಗಿ ಎಂಬುದು ವಿಜ್ಞಾನಿಗಳ ಅಭಿಮತ. ವಯಸ್ಕರಾದ ಮೇಲೂ ಇಂತಹ ಮಕ್ಕಳು ಹಿಂಸಾಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತವೆ. ಒಟ್ಟಿನಲ್ಲಿ, ಅತಿಯಾಗಿ ದಂಡನೆಗೊಳಗಾದ ಮಗು, ನಾವು ನಂಬಿರುವಂತೆ, ಶಿಸ್ತು ಬೆಳೆಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಮಾನಸಿಕ ತೊಂದರೆಗಳಿಗೆ ಈಡಾಗುತ್ತದೆಂಬುದು ಮನೋವಿಜ್ಞಾನಿಗಳ ಸ್ಪಷ್ಟ ಅಭಿಪ್ರಾಯ.

ಮಕ್ಕಳನ್ನು ಅತಿಯಾಗಿ ಶಿಕ್ಷಿಸುವ ತಂದೆ ತಾಯಿಗಳು ಮಾನಸಿಕವಾಗಿ ಸ್ವಸ್ಥರಿರುವು ದಿಲ್ಲವೆಂಬುದು ಸಂಶೋಧನೆಗಳಿಂದ ತಿಳಿದು ಬಂದಿದೆ. ಅವರ ತಂದೆ ತಾಯಿಗಳೂ ಅವರನ್ನು ಹೀಗೆಯೇ ನಡೆಸಿಕೊಂಡಿರಬೇಕು. ಅದರ ಪುನರಾವರ್ತನೆ ಈಗ ನಡೆಯುತ್ತಿರುತ್ತದೆ. ಅಷ್ಟೆ. ಮತ್ತೆ ಕೆಲವರು ತಾವು ಮಾಡಿದ ತಪ್ಪಿಗಾಗಿ ತಮಗರಿವಿಲ್ಲದಂತೆ ಮಕ್ಕಳನ್ನು ಶಿಕ್ಷಿಸುತ್ತಿರುತ್ತಾರೆ. ಒಬ್ಬ ತಂದೆ ತನ್ನ ಮಗ ಶಾಲೆಯಿಂದ ಒಂದು ತುಂಡು ಪೆನ್ಸಿಲ್ ತಂದಾಗ ಬಹಳವಾಗಿ ದಂಡಿಸಿದರು. ವಿಚಾರ ಮಾಡಿ ನೋಡಿದಾಗ ಅವರು ತಮ್ಮ ಆಫೀಸಿನಿಂದ ತಂದ ಸ್ಟೇಷನರಿಯನ್ನು ಬಹಳವಾಗಿ ಉಪಯೋಗಿಸುತ್ತಿದ್ದುದು ತಿಳಿದು ಬಂತು. ಈ ತನ್ನ ತಪ್ಪಿಗೆ ಶಿಕ್ಷೆ ವಿಧಿಸಿಕೊಳ್ಳುವ ವಿಧಾನ ಮಗನನ್ನು ದಂಡಿಸುವುದು. ಎಷ್ಟೋ ವೇಳೆ ಹಿರಿಯರು ತಾವು ಅನುಭವಿಸಿದ ಸೋಲು, ನಿರಾಶೆ, ಅಪಮಾನ ಹಾಗೂ ಅಂತರಿಕತ ಮೂಲಗಳ ಪರಿಣಾಮವನ್ನು ಮಗುವನ್ನು ದಂಡಿಸುವುದರ ಮೂಲಕ ಪ್ರದರ್ಶಿಸುತ್ತಾರೆ. ತಂದೆ ತಾಯಿಗಳ ನಡುವೆ ಸಾಮರಸ್ಯವಿಲ್ಲವಾದಾಗ ಮಕ್ಕಳು ಶಿಕ್ಷಿಸಲ್ಪಡುವುದು ಎಲ್ಲರೂ ಬಲ್ಲ ವಿಷಯ. ಇವೆಲ್ಲಾ ಅನುಚಿತ ಶಿಕ್ಷೆಗಳು. ತನ್ನ ತಪ್ಪೇನೆಂಬುದು ತಿಳಿಯದ ಮಗು ಶಿಕ್ಷೆಗೊಳಗಾದಾಗ ಅವನ ಮನಸ್ಸಿನಲ್ಲಿ ಗೊಂದಲವೇಳುತ್ತದೆ. ಅವನಿಗೆ ಏನು ಮಾಡಬೇಕು, ಏನು ಮಾಡಬಾರದೆಂಬುದು ತಿಳಿಯದೆ ಕೊನೆಯಲ್ಲಿ ಎಲ್ಲರಿಂದಲೂ ವಿಮುಖನಾಗಬಹುದು.

ಹಾಗಾದರೆ ಮಕ್ಕಳನ್ನು ದಂಡಿಸಲೇಬಾರದೇ ? ಹಾಗೇನೂ ಇಲ್ಲ. ಶಿಕ್ಷೆ ವಿಧಿಸಲೇಬೇಕಾದಾಗ ಅದು ನೇರವಾಗಿ ಜರುಗಬೇಕು. ತಪ್ಪು ಮಾಡಿದಾಗ, ತಪ್ಪು ಮಾಡಿದ ತಕ್ಷಣ, ತಪ್ಪಿನ ತೀವ್ರತೆಗನುಸಾರವಾಗಿ ಶಿಕ್ಷೆ ವಿಧಿಸಬಹುದು. ಎಂದೋ ಮಾಡಿದ ತಪ್ಪಿಗೆ ಇಂದು ಶಿಕ್ಷಿಸಬಾರದು. ಮಗುವಿಗೆ ಯಾವ ತಪ್ಪಿಗೆ ಶಿಕ್ಷೆ ಎಂಬುದು ಸ್ಪಷ್ಟವಾಗಿ ತಿಳಿದಿರಬೇಕು. ಮಾಡಬಾರದ್ದನ್ನು ಮಾಡಿದಾಗ ಶಿಕ್ಷಿಸುವುದರ ಜತೆಗೆ, ಅವನು ಮಾಡಬೇಕಾಗಿದ್ದುದೇನು ಎಂಬುದನ್ನು ತಿಳಿಸಬೇಕು. ಅಂತಹ ವರ್ತನೆಯನ್ನು ಪ್ರೋತ್ಸಾಹಿಸಬೇಕು. ಮಗು ದುರ್ವರ್ತನೆಯಲ್ಲಿ ತೊಡಗಿದಾಗ ಶಿಕ್ಷಿಸುವ ನಾವು, ಅವನು ಸದ್ವರ್ತನೆ ಕೋರಿದಾಗ ಸುಮ್ಮನಿದ್ದು ಬಿಡುತ್ತೇವೆ. ಇದು ತಪ್ಪು. ಕೆಟ್ಟದನ್ನು ಶಿಕ್ಷಿಸಿದಾಗ, ಒಳ್ಳೆಯದನ್ನು ಮರೆಯದೆ ಪ್ರೋತ್ಸಾಹಿಸಬೇಕು. ಕೆಲವರು ಮಕ್ಕಳನ್ನು ಬೆದರಿಸುತ್ತಾ "ನೀನು ಹಾಗೆ ಮಾಡಿದರೆ ಮೂಳೆ ಮುರಿಯುತ್ತೇನೆ" ಎಂದು ಹೇಳಿ ಮಗು "ಹಾಗೆಯೇ" ಮಾಡಿದಾಗ ಸುಮ್ಮನಿದ್ದು ಬಿಡುತ್ತಾರೆ. ಈ ಪೊಳ್ಳು ಬೆದರಿಕೆಗಳು ಅಶಿಸ್ತಿಗೆ ಪರೋಕ್ಷ ಪ್ರೇರಣೆಗಳಾಗುತ್ತವೆಂದು ಬೇರೆ ಹೇಳಬೇಕಾದ್ದಿಲ್ಲ.

ವಿವೇಚನೆಯಿಲ್ಲದೆ ಮಕ್ಕಳನ್ನು ಮನಬಂದಂತೆ ದಂಡಿಸುವುದರ ಪರಿಣಾಮ ಸರ್ವಥಾ ಒಳ್ಳೆಯದಲ್ಲ. ನೇರವಾದ ಹಾಗೂ ಕ್ರೂರವಾದ ದಂಡನೆಯನ್ನು ವಿಧಿಸುವ ಬದಲು, ತಪ್ಪು ಮಾಡಿದಾಗ ಮಗುವಿಗೆ ನೀವು ಯಾವಾಗಲು ತೋರುತ್ತಿದ್ದ ಪ್ರೀತ್ಯಾದರಗಳನ್ನು ಕೊಂಚ ತಡಮಾಡುವುದು ಉತ್ತಮ ವಿಧಾನ. ಅನುಚಿತ ವರ್ತನೆಯನ್ನು

ಕೋರಿದ ಮಗುವಿಗೆ, "ನಿನ್ನೊಡನೆ ನಾನು ಮಾತಾಡಲ್ಲ," "ನಿನಗೆ ಕೊಡಬೇಕಾಗಿದ್ದ ಚಾಕೋಲೆಟ್ ಕೊಡಲ್ಲ," ಅಥವಾ "ನಿನ್ನನ್ನು ಇಂದು ನನ್ನ ಜತೆ ತಿರುಗಾಡಲು ಕರೆದುಕೊಂಡು ಹೋಗುವದಿಲ್ಲ," ಎಂದು ಹೇಳಿದಾಗ ಅದರ ಪರಿಣಾಮ ನೇರವಾದ ಶಿಕ್ಷೆಗಿಂತ ಹೆಚ್ಚಿಗೆ ಪ್ರಭಾವಕಾರಿಯಾಗಿರುತ್ತದೆಂಬುದು ತಿಳಿದು ಬಂದಿದೆ.

ಮಕ್ಕಳನ್ನು ಹೊಡೆಯುವುದು. ಬೈಯುವುದು ಮಾಡಬಾರದೆಂಬ ಸೂಚನೆ ತುಂಬಾ ಒಳ್ಳೆಯದೆಂಬುದನ್ನು ಎಲ್ಲರೂ ನಂಬುತ್ತಾರೆ. ಆದರೆ ಅದನ್ನು ಆಚರಣೆಗೆ ತರುವುದೇ ಕಷ್ಟ. ಉದಾಹರಣೆಗೆ, ಒಲೆಯ ಮೇಲೆ ಸಾರು ಉಕ್ಕುತ್ತಿದೆ: ನಲ್ಲಿಯಲ್ಲಿ ನೀರು ಹರಿಯುತ್ತಿದೆ: ಯಾರೋ ಬಾಗಿಲು ಬಡಿಯುತ್ತಿದ್ದಾರೆ: ಗಂಡ ಮನೆಗೆ ಊಟಕ್ಕೆ ಬರುವ ವೇಳೆ, ಎಲ್ಲವೂ ಗೊಂದಲಮಯ. ಆಗ ಮಗು ಹೊಸದಾಗಿ ತಂದಿದ್ದ ಹಾರ್ಲಿಕ್ಸ್ ಬಾಟಲ್ಲನ್ನು ಎತ್ತಿ ಹಾಕಿ ಅರಚಿಕೊಳ್ಳುತ್ತದೆ. ತಾಯಿ ಮಗುವಿಗೆ ಎರಡು ಬಾರಿಸುತ್ತಾಳೆ. ಹಾಗೆ ಮಾಡಬಾರದಿತ್ತು ಎಂದು ಹೇಳುವುದು ಸುಲಭ, ಮಾಡದಿರು ವದು ಕಷ್ಟ. ಮಕ್ಕಳನ್ನು ದಂಡಿಸಬಾರದೆಂಬುದೊಂದು ಆದರ್ಶ. ಎಲ್ಲಾ ಆದರ್ಶ ಗಳಂತೆಯೇ ಇದನ್ನೂ ಪಾಲಿಸುವುದು ಕಷ್ಟವೇ. ಆದರೂ ಆದರ್ಶವನ್ನು ಮರೆಯು ವುದು ಅಷ್ಟೇನು ಒಳಿತಲ್ಲ.

ಉಪೇಕ್ಷಿತ ಮಗು :

ಸಾಮಾನ್ಯವಾಗಿ ಮಕ್ಕಳು ತಂದೆ ತಾಯಿಗಳ ಪ್ರೀತಿ, ವಿಶ್ವಾಸ, ಸಹಕಾರ, ಸಹಾನುಭೂತಿ ಮತ್ತು ಮೆಚ್ಚಿಗೆಗಾಗಿ ಹಾತೊರೆಯುತ್ತಾರೆ. ಇವು ಅವನ ಮನಸ್ಸಿನ ಬೆಳವಣಿಗೆಗೆ ಅವಶ್ಯಕವಾದ ವಿಟ್ಯಾಮಿನ್ನಗಳು. ಈ ವಿಟ್ಯಾಮಿನ್ನಗಳ ಕೊರತೆ ಯಿದ್ದರೆ ಮಾನಸಿಕ ವಿಕಾಸ ಕುಂಠಿತವಾಗುತ್ತದೆ. ಕೆಲವು ತಂದೆ ತಾಯಿಗಳು, ಅರಿತೋ ಅರಿಯದೆಯೋ ತಮ್ಮ ಮಕ್ಕಳಲ್ಲಿ ಸಾಕಷ್ಟು ಆಸಕ್ತಿ ತೋರಿಸುವುದಿಲ್ಲ: ಅವರೊಡನೆ ವ್ಯವಹರಿಸುವುದಿಲ್ಲ: ಅವರ ಆಗುಹೋಗುಗಳನ್ನು ಗಮನಿಸುವುದಿಲ್ಲ. ಜತೆಗೆ ಅವರ ತಪ್ಪುಗಳನ್ನೇ ಎತ್ತಿತೋರಬಹುದು: ಕಟುವಾಗಿ ಟೀಕಿಸಬಹುದು: ದಂಡಿಸಬಹುದು. ಹೀಗಾದಾಗ ಮಗುವಿಗೆ ತನ್ನ ತಂದೆ ತಾಯಿಗಳಿಗೆ ತಾನು "ಬೇಡದ ಮಗು"ವೆಂಬ ಭಾವನೆಯುಂಟಾಗುತ್ತದೆ. ತಾನು ಕೆಲಸಕ್ಕೆ ಬಾರದವನೆನಿಸುತ್ತದೆ. ಹೀಗೆ ತನ್ನವರಿಂದ ಉಪೇಕ್ಷೆ ಮತ್ತು ತಿರಸ್ಕಾರವನ್ನು ಅನುಭವಿಸಿದ ಮಗು ಆತ್ಮ ತಿರಸ್ಕಾರ (Self-rejection)ವನ್ನು ಬೆಳೆಸಿಕೊಳ್ಳುತ್ತದೆ.

ತಂದೆ ತಾಯಿಯ ಅಲಕ್ಷ್ಯ, ಅನಾದರಕ್ಕೊಳಗಾದಾಗ ಮಕ್ಕಳಲ್ಲಿ "ತಾವು ಯಾರೂ ಅಲ್ಲ" ಎನ್ನುವ ಅನಾಥ ಪ್ರಜ್ಞೆ ಬೇರೂರುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಬೇರೆ ಯವರ ಗಮನ ಸೆಳೆಯುವಂತಹ ಕೆಲವು ವಿಕೃತ ವರ್ತನೆಗಳನ್ನು ಕಲಿತುಕೊಳ್ಳುತ್ತವೆ.

ತಂದೆಯ ಅಥವಾ ತಾಯಿಯ ಪ್ರೀತಿಯನ್ನು ಅರಿಯದ ಮಗು ಬೇರೆಯವರನ್ನು ಪ್ರೀತಿಸಲೂ ಅರಿಯದು. ಬೇರೆಯವರಿಂದ ಅದನ್ನು ನಿರೀಕ್ಷಿಸುವುದೂ ಇಲ್ಲ. ಇದ ರಿಂದ ಒಂದು ಬಗೆಯ ನಿರ್ಲಿಪ್ತತೆಯುಂಟಾಗಿ ಅವನ ಜೀವನ ಭಾವರಹಿತವಾಗುತ್ತದೆ, ವರ್ಣರಹಿತವಾಗುತ್ತದೆ.

ತಂದೆ ತಾಯಿಗಳು ಮಕ್ಕಳನ್ನು ಉಪೇಕ್ಷಿಸಲು ಹಲವಾರು ಕಾರಣಗಳಿರುತ್ತವೆ. ಕೆಲವರಿಗೆ ಉದ್ಯೋಗದ ಹೊಣೆ ಅತಿಯಾಗಿದ್ದು ಮಕ್ಕಳನ್ನು ಗಮನಿಸಲು ತಾಳ್ಮೆ ಇಲ್ಲ ದಿರಬಹುದು; ವೇಳೆಯೂ ಇಲ್ಲದಿರಬಹುದು. ತಂದೆ ತಾಯಿಯರಿಬ್ಬರೂ ದುಡಿಯು ವಾಗ ಈ ಪರಿಸ್ಥಿತಿಯುಂಟಾಗುತ್ತದೆ. ಮಕ್ಕಳು ಹೆಚ್ಚಾಗಿದ್ದಾಗಲೂ ಹೀಗಾಗ ಬಹುದು. ಬಡತನ ಇದಕ್ಕೆ ಕಾರಣವಾಗಿರಬಹುದು. ಕೆಲವರಿಗೆ ಮಕ್ಕಳೇ ಬೇಕಾಗಿಲ್ಲ ವಾಗಿದ್ದು, ಅಕಸ್ಮಾತ್ ಮಕ್ಕಳಾಗಿರಬಹುದು, ತಾವೇ ತಮ್ಮ ತಂದೆ ತಾಯಿಗಳಿಂದ ತಿರಸ್ಕೃತರಾಗಿದ್ದಿರಬಹುದು. ಅವರಿಗೇ ದೊರಕದ್ದನ್ನು ತಮ್ಮ ಮಕ್ಕಳಿಗೆ ಹೇಗೆ ತಾನೇ ಕೊಟ್ಟಾರು ? ಈ ದೃಷ್ಟಿಯಲ್ಲಿ ಮಕ್ಕಳ ಮೇಲಿನ ತಿರಸ್ಕಾರ ಭಾವನೆ ಒಂದು ಅಂಟು ಜಾಡ್ಯವಾಗಿ ಒಬ್ಬರಿಂದೊಬ್ಬರಿಗೆ ಹರಡಬಹುದು. ಇತ್ತೀಚಿನ ದಿನಗಳಲ್ಲಿ ತಂದೆ ತಾಯಿ ಗಳು ತಮ್ಮ ಮಕ್ಕಳಿಂದ ಎಲ್ಲವನ್ನೂ ಅತಿಯಾಗಿಯೇ ನಿರೀಕ್ಷಿಸುತ್ತಾರೆ. ಮಕ್ಕಳು ಶಾಲೆಯಲ್ಲಿ ಮುಂದಿರಬೇಕು; ಅಷ್ಟೇ ಏಕೆ ಎಲ್ಲಾ ರಂಗಗಳಲ್ಲೂ ಮಕ್ಕಳು ಮೊದಲ ಸ್ಥಾನದಲ್ಲೇ ಇರಬೇಕೆಂಬುದು ಹಡೆದವರ ಆಶೆ. ಹೀಗಾಗದಿದ್ದಾಗ ಮಕ್ಕಳಲ್ಲಿ ನಿರಾ ಸಕ್ತಿಯುಂಟಾಗಿ ಅವರನ್ನು ಅಲಕ್ಷಿಸಬಹುದು.

ಕೆಲವು ಸಂದರ್ಭಗಳಲ್ಲಿ ತಂದೆ ತಾಯಿಗಳು ಮಕ್ಕಳನ್ನು ತಿರಸ್ಕರಿಸುವ ಬದಲು ಮಕ್ಕಳೇ ತಂದೆ ತಾಯಿಗಳನ್ನು ನಿರಾಕರಿಸಬಹುದು. ತಂದೆ ತಾಯಿಗಳು ಸುಳ್ಳು ಗಾರರು, ಮೋಸಗಾರರು, ಕಪಟಿಗಳು, ಅನೀತಿವಂತರು ಅಥವಾ ಇನ್ನಿತರ ಬಗೆಯ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಮಕ್ಕಳು ಅವರಲ್ಲಿ ತಾದಾತ್ಮ್ಯ ಹೊಂದಲಾರದೆ ಅವರನ್ನು ನಿರಾಕರಿಸುತ್ತಾರೆ. ಇಂತಹ ತಂದೆ ತಾಯಿಗಳು ಮಕ್ಕಳ ಸ್ವಭಾವದ ಬೆಳವಣಿಗೆಗೆ ಅನುಚಿತ ಮಾದರಿಗಳು. ಅವರನ್ನು ಅನುಕರಿಸಿದರೆ ಮಕ್ಕಳೂ ಅವರ ಹಾಗೆಯೇ ಆಗುತ್ತಾರೆ. ಇಲ್ಲವಾದರೆ ಬೇರೆ ತೆರನಾದ ಮನೋವಿಕಾರಗಳನ್ನು ಬೆಳೆಸಿಕೊಳ್ಳುತ್ತಾರೆ. ಮಾನಸಿಕ ಚಿಕಿತ್ಸೆಗೆ ಬಂದ ಮಕ್ಕಳ ಕೌಟುಂಬಿಕ ಹಿನ್ನೆಲೆಯನ್ನು ಪರಿಶೀಲಿಸಿದಾಗ ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಅನುಚಿತ ಪಿತೃಮಾದರಿಗಳನ್ನು ಹೊಂದಿದ್ದರೆಂಬುದು ತಿಳಿದುಬಂದಿದೆ.

ಹೀಗೆ, ಮಕ್ಕಳು ತಂದೆ ತಾಯಿಗಳನ್ನೇ ತಿರಸ್ಕರಿಸಲಿ, ತಂದೆ ತಾಯಿಗಳು ಮಕ್ಕಳನ್ನೇ ತಿರಸ್ಕರಿಸಲಿ, ಅಪಾಯ ಮಾತ್ರ ಮಕ್ಕಳಿಗೇ. ತಿರಸ್ಕೃತ ಮಕ್ಕಳು ಆತ್ಮ ನಿಂದನೆಯಲ್ಲಿ ತೊಡಗುತ್ತಾರೆ. ಅವರಲ್ಲಿ ಆತ್ಮ ವಿಶ್ವಾಸದ ಅಭಾವವಿರುತ್ತದೆ.

ತಿರಸ್ಕೃತ ಮಕ್ಕಳು ಕಳವಳಕಾರಕ ಜೀವನ ನಡೆಸುತ್ತಾರೆ. ಏನು ಮಾಡಲಿಕ್ಕೂ ಭಯ ಪಡುತ್ತಾರೆ. ಜನರು ತಮ್ಮನ್ನು ನಡೆಸಿಕೊಳ್ಳುವ ರೀತಿಗಾಗಿ ಅವರ ಮೇಲೆ ಹಗೆ ಸಾಧಿಸುತ್ತಾರೆ. ಅದು ನಡೆಯದಿದ್ದರೆ ಜೀವನದಿಂದ ವಿಮುಖರಾಗುತ್ತಾರೆ, ಒಂಟಿ ಯಾಗುತ್ತಾರೆ. ಕೆಲವು ಸಲ ಆತ್ಮ ಹತ್ಯೆಗೂ ಯತ್ನಿಸಬಹುದು.

ಕಡೆಯ ಮಾತು

ಪ್ರತಿಯೊಂದು ಮಗುವೂ ಹುಟ್ಟಿ ಬೆಳೆಯುವುದು ಒಂದು ಕುಟುಂಬದಲ್ಲಿ. ಕುಟುಂಬ ಅವನ ಪ್ರಮುಖ ಕಾರ್ಯ ಕ್ಷೇತ್ರ. ಅವನು ಜೀವನದ ಹೋರಾಟಕ್ಕೆ ಸಜ್ಜಾ ಗುವುದು ಕೌಟುಂಬಿಕ ಪರಿಸರದಲ್ಲಿ. ಮಗು ತನ್ನನ್ನು ಕುರಿತಾಗಿ ಮತ್ತು ಸುತ್ತಲಿನ ವಿಶ್ವವನ್ನು ಕುರಿತಾಗಿ ಉಪಯುಕ್ತ ನಿರೀಕ್ಷೆ ಮತ್ತು ತನ್ನ ಧೋರಣೆಗಳನ್ನು ಬೆಳೆಸಿ ಕೊಳ್ಳುವುದು ಕುಟುಂಬದಲ್ಲಿ: ಹೆತ್ತವರ ಹಾಗೂ ಇನ್ನಿತರ ಮುಖ್ಯರ ನಿರ್ದೇಶನದಲ್ಲಿ. ಆದುದರಿಂದ ಕೌಟುಂಬಿಕ ಪರಿಸರ ಮಕ್ಕಳ ಬೆಳವಣಿಗೆಯಲ್ಲಿ ಮುಖ್ಯ ಪ್ರಭಾವ ಬೀರುತ್ತದೆ ಎನ್ನುವ ವಾದದಲ್ಲಿ ತಪ್ಪೇನೂ ಇಲ್ಲ. ಇಲ್ಲಿಯವರೆಗೆ ಅಸ್ವಸ್ಥ ಕೌಟುಂಬಿಕ ಪರಿಸರ, ತಂದೆ ತಾಯಿಗಳ ಅನುಚಿತ ವರ್ತನೆ, ಮುಂತಾದವು ಮಕ್ಕಳ ಮೇಲೆ ಏನೇನು ದುಷ್ಪರಿಣಾಮ ಬೀರುತ್ತವೆಂಬುದನ್ನು ತಿಳಿದುಕೊಂಡೆವು. ನಾವು ವಿವರಿಸಿದ ಪರಿಸ್ಥಿತಿ ಗಳು ನಮ್ಮ ಸಮಾಜದಲ್ಲಿ ಕೊಂಚ ಹೆಚ್ಚಾಗಿಯೇ ಇವೆ ಎಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಆದರೂ ನಮ್ಮ ಮಕ್ಕಳೆಲ್ಲಾ ಮನೋವಿಕಾರಗಳಿಗೊಳಗಾಗಿಲ್ಲ ಎಂಬುದು ಸಂತೋಷದ ವಿಷಯ. ಇದಕ್ಕೆ ಕಾರಣಗಳು ಇಲ್ಲದಿಲ್ಲ.

ಮೊದಲನೆಯದಾಗಿ, ಮಕ್ಕಳ ಮಾನಸಿಕ ಆರೋಗ್ಯ ಕೌಟುಂಬಿಕ ಪರಿಸರವ ನ್ನೊಂದನ್ನೇ ಅನುಸರಿಸಿರುತ್ತದೆಂದು ಭಾವಿಸಬಾರದು. ಕುಟುಂಬ ಪ್ರಮುಖ ಘಟಕ ವಾದರೂ ಬೇರೆಯವೂ ಇರುತ್ತವೆ. ಉದಾಹರಣೆಗೆ ಉತ್ತಮ ನೆರೆಹೊರೆ, ಉತ್ತಮ ಶಾಲಾ ಶಿಕ್ಷಣ, ಒಳ್ಳೆಯ ಸಾಮಾಜಿಕ ಮಾದರಿಗಳು, ಮುಂತಾದವು ಅನುಚಿತ ಕುಟುಂಬದ ಪ್ರಭಾವಗಳನ್ನು ತಡೆಯಬಲ್ಲವು. ಹೀಗೆ, ಅಯೋಗ್ಯ ತಂದೆ ತಾಯಿಗಳ ಮಕ್ಕಳು ಯೋಗ್ಯರಾಗುವ ನಿದರ್ಶನಗಳಿವೆ. ಎರಡನೆಯದಾಗಿ, ಕುಟುಂಬಗಳಲ್ಲಿ ತಂದೆ ತಾಯಿಗಳಿಬ್ಬರೂ ಕೆಟ್ಟವರಾಗಿರುವ ಸಂಭವ ಕಡಿಮೆ. ಒಬ್ಬರು ಕೆಟ್ಟವರಾದರೆ ಇನ್ನೊಬ್ಬರು ಉತ್ತಮರಾಗಿರುವ ಸಂದರ್ಭಗಳೇ ಹೆಚ್ಚು. ಆದುದರಿಂದ ಒಬ್ಬರು ಮಗುವನ್ನು ತಿರಸ್ಕರಿಸಿದರೆ ಇನ್ನೊಬ್ಬರು ಪ್ರೀತಿಸಬಹುದು. ತಂದೆ ತಾಯಿಗಳಿಬ್ಬರೂ ತಿರಸ್ಕರಿಸಿದಾಗಲೂ ಕುಟುಂಬದ ಇನ್ನಿತರರು ತಾತ, ಅಜ್ಜಿ, ಅಕ್ಕ, ಅಣ್ಣ, ಚಿಕ್ಕಪ್ಪ, ಚಿಕ್ಕಮ್ಮ, ಇತ್ಯಾದಿ ಮಕ್ಕಳನ್ನು ಮೆಚ್ಚಬಹುದು: ಪೋಷಿಸಿ ಪುರಸ್ಕರಿಸಬಹುದು. ಇದರಿಂದಾಗಿ ಮಕ್ಕಳ ಮೇಲಾಗುವ ದುಷ್ಪರಿಣಾಮಗಳು ತಡೆಹಿಡಿಯಲ್ಪಡಬಹುದು.

ಕೊನೆಯದಾಗಿ, ಇತರರು ಹೇಗೆ ವರ್ತಿಸಿದರೂ, ತಮ್ಮನ್ನು ತಾವು ಸರಿದೂಗಿಸಿಕೊಳ್ಳ ಬಲ್ಲ ಅಂತಃಶಕ್ತಿಯೊಂದು ಮಕ್ಕಳಲ್ಲಿರಬಹುದು. ಕೆಲವು ಮಕ್ಕಳಿಗೆ ಅದು ಆನುವಂಶಿಕ ವಾಗಿ ಬಂದಿರಬಹುದು. ಕೆಲವು ಮೇಧಾವಿ ಮಕ್ಕಳು ತಮ್ಮ ಪರಿಸರದ ಪ್ರಭಾವವೇನೇ ಇದ್ದರೂ ಅದನ್ನು ಮೆಟ್ಟಿನಿಂತು ಪ್ರಗತಿ ಸಾಧಿಸಿದ ನಿದರ್ಶನಗಳು ಕೂಡ ಕಡಿಮೆ ಇಲ್ಲ. ಆದುದರಿಂದ ಮಕ್ಕಳ ಮಾನಸಿಕ ವಿಕಾಸದಮೇಲೆ ತಂದೆ ತಾಯಿಗಳ ಪ್ರಭಾವವನ್ನು ನಿರ್ಣಯಿಸುವಾಗ, ಇನ್ನಿತರ ಘಟಕಗಳ ಪ್ರಭಾವಗಳನ್ನು ಮರೆತರೆ ನಮ್ಮ ತೀರ್ಮಾನ ತಪ್ಪಾಗುತ್ತದೆ.

ಮಗುವಿನ ಸಾಮಾಜಿಕ-ರಾಜಕೀಯ ಪ್ರವೃತ್ತಿಯ ವಿಕಾಸ

● ಮೂಲ : ಡಾ. ಆರ್. ಟಿ. ಜಂಗಮ್
● ಅನುವಾದ : ಎ. ಎಸ್. ಧರಣೇಂದ್ರಯ್ಯ

ಒಂದು ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ಬೆಳೆದು, ಆ ವ್ಯವಸ್ಥೆಯ ಪೂರ್ಣರೂಪದ ಸದಸ್ಯತ್ವ ಪಡೆಯಲು ಮಗುವಿಗೆ ಅನುವಾಗುವ ಪ್ರಕ್ರಿಯೆಯೇ, ಮಗುವಿನ ಸಾಮಾಜಿಕ-ರಾಜಕೀಯ ಪ್ರವೃತ್ತಿಯ ವಿಕಾಸ ಅಥವಾ ರಾಜಕೀಯ ಸಮಾಜೀಕರಣವೆನಿಸುತ್ತದೆ. ವ್ಯಕ್ತಿಯು ತನ್ನ ಜೀವನದ ವಿವಿಧ ಹಂತಗಳಲ್ಲಿ, ವಿವಿಧ ವಯೋಸಮೂಹಗಳಿಗೆ ಸೇರಿರುತ್ತಾನೆ. ಒಂದು ಸಮಾಜದ ಸದಸ್ಯನಾಗಿ ಆತನು ಮಾಡಿಕೊಳ್ಳುವ ಸಿದ್ಧತೆ, ಗಳಿಸಿಕೊಳ್ಳುವ ಅರ್ಹತೆ ಮತ್ತು ಬೆಳೆಸಿಕೊಳ್ಳುವ ವಿಶಿಷ್ಟ ಗುಣಲಕ್ಷಣಗಳ ಅಧ್ಯಯನವನ್ನು ಆತನು ಸೇರಿರುವ ವಯೋಸಮೂಹಗಳಿಗೆ ಅನುಗುಣವಾಗಿ ನಡೆಸಬಹುದು. ಜೀವಿತದ ವಿವಿಧ ಹಂತಗಳೆಂದರೆ ಬಾಲ್ಯ, ಯೌವ್ವನ, ಪ್ರಾಪ್ತವಯಸ್ಸು, ಮಧ್ಯಮ ವಯಸ್ಸು ಮತ್ತು ಮುಪ್ಪು. ಹಿಂದೂ ಜೀವನ ದೃಷ್ಟಿಯ ಪ್ರಕಾರ ಮನುಷ್ಯನ ಜೀವಿತಕಾಲದಲ್ಲಿ ನಾಲ್ಕು ಹಂತಗಳು ಅಥವಾ ಆಶ್ರಮಗಳಿರುತ್ತವೆ. ಅವುಗಳು : **ಬ್ರಹ್ಮಚರ್ಯಾಶ್ರಮ** (ವಿದ್ಯಾರ್ಥಿದೆಸೆ), **ಗೃಹಸ್ಥಾಶ್ರಮ** (ವೈವಾಹಿಕ ಜೀವನ), **ವಾನಪ್ರಸ್ಥಾಶ್ರಮ** (ಸಕ್ರಿಯ ಕೌಟುಂಬಿಕ ವ್ಯವಹಾರಗಳನ್ನು ಬಿಟ್ಟು ಸಾಮಾಜಿಕ ಮತ್ತು ಅಧ್ಯಾತ್ಮಿಕ ಸಾಧನೆಗಳಲ್ಲಿ ನಿರತವಾಗುವ ಹಂತ) ಮತ್ತು **ಸನ್ಯಾಸಾಶ್ರಮ** (ಸಂಸಾರದಿಂದ ಸಂಪೂರ್ಣವಾಗಿ ವಿಮುಖನಾಗಿ, ಜಗತ್ತನ್ನು ಪೂರ್ಣ ಪರಿತ್ಯಜಿಸುವ ಹಂತ). ಮಾನವನ ಜೀವಿತದಲ್ಲಿ ಕಂಡುಬರುವ ಈ ವಿವಿಧ ಹಂತಗಳು, ತಾನಿರುವ ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ಆತನು ನಿರ್ವಹಿಸುವ ಪಾತ್ರದ ವಿವಿಧ ವಿನ್ಯಾಸಗಳು ಎಂದು ಹೇಳಬಹುದು. ಹೀಗಿದ್ದರೂ, ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ವ್ಯಕ್ತಿಯ ಪಾತ್ರಕ್ಕೆ ಸಂಬಂಧಿಸಿದಂತೆ, ಶೈಶವದಿಂದ ಪ್ರಾಪ್ತವಯಸ್ಸಿನವರೆಗಿನ ಅವಧಿಯು ಅತ್ಯಂತ ಮಹತ್ವಪೂರ್ಣವಾದುದೆಂದು ನಾವು ಹೇಳಬಹುದು.

ಒಂದು ಸಾಮಾಜಿಕ-ರಾಜಕೀಯ ವ್ಯವಸ್ಥೆಯ ಸದಸ್ಯನಾಗಿರುವ ವಯಸ್ಕನಲ್ಲಿ ಸಾಮಾನ್ಯವಾಗಿ ಈ ಕೆಳಕಂಡ ಗುಣಲಕ್ಷಣಗಳಿರಬೇಕಾಗುತ್ತವೆ :

೧. ಚೆನ್ನಾಗಿ ಬೆಳೆದ ಶರೀರ
೨. ಚೆನ್ನಾಗಿ ಬೆಳೆದ ಮನಸ್ಸು
೩. ಹೆಸರು
೪. ಭಾಷೆ
೫. ಧರ್ಮ (ಮತಧರ್ಮ)
೬. ಸಮುದಾಯ, ಜಾತಿ, ಉಪಜಾತಿ
೭. ಶಿಕ್ಷಣ, ತರಬೇತಿ, ಕಾರ್ಯಾನುಭವ
೮. ಸೇವಾವೃತ್ತಿ, ಕಸಬು, ಉದ್ಯೋಗ ಇತ್ಯಾದಿ
೯. ರಾಜಕೀಯ ಪಕ್ಷ, ಒತ್ತಡ ಸಮೂಹ ಮುಂತಾದವುಗಳ ಸದಸ್ಯತ್ವ
೧೦. ಸಾಮಾಜಿಕ-ಆರ್ಥಿಕ ವ್ಯವಸ್ಥೆಯಲ್ಲಿ ಪಡೆದಿರುವ ವಾಸ್ತವಿಕ ಸ್ಥಾನ, ನಿರ್ವಹಿಸುವ ಪಾತ್ರ, ಬೀರುವ ಪ್ರಭಾವ ಇತ್ಯಾದಿ.

ಒಂದು ಮಗುವು ಹುಟ್ಟಿದಾಗ ನಿಜವಾಗಿಯೂ ಒಬ್ಬ ಸಂಭಾವ್ಯ ವ್ಯಕ್ತಿಯು ಹುಟ್ಟಿದಂತೆಯೇ. ಆದರೆ ಸಂಭಾವ್ಯ ವ್ಯಕ್ತಿಯು ನಿಜವಾದ ವ್ಯಕ್ತಿಯಾಗಿರುವುದಿಲ್ಲ. ಮಗುವು ಹುಟ್ಟಿದಾಗ, ಜನನ ದಾಖಲೆ ಅಥವಾ ಜನಸಂಖ್ಯೆ ವರದಿಯಲ್ಲಿ ಒಂದು ಹೆಚ್ಚಿನ ಸಂಖ್ಯೆ ಸೇರಿದಂತಾಗುತ್ತದೆ. ತಂದೆತಾಯಿಗಳು ಸಂತೋಷಪಡುತ್ತಾರೆ, ಅಲ್ಲದೆ ಜನ ಸಂಖ್ಯೆಯ ಹೆಚ್ಚಳವನ್ನು ಸ್ವಾಗತಿಸುವಂತಹ ರಷ್ಯಾ, ಪೂರ್ವಜರ್ಮನಿ ಮುಂತಾದ ದೇಶಗಳಲ್ಲಿನ ಸರಕಾರಗಳಿಗೂ ಮಗುವಿನ ಜನನದಿಂದ ಸಂತೋಷವಾಗಬಹುದು. ಇಷ್ಟಲ್ಲದೆ, ಆರ್ಥಿಕ-ರಾಜಕೀಯ ಯೋಜಕರು, ಸೈನಿಕ ತಜ್ಞರು, ಉದ್ಯೋಗಗಳನ್ನು ಕೊಡುವವರು ಅಥವಾ ವ್ಯವಸ್ಥೆಗೊಳಿಸುವವರು ಮತ್ತು ವಿವಿಧರೀತಿಯ ಸಾಮಾಜಿಕ ವಿಮಾ ಸಂಸ್ಥೆಗಳು ಮತ್ತು ಸಾಮಾನು ಸರಂಜಾಮು ಹಾಗೂ ಸೇವಾಸಂಸ್ಥೆಗಳೂ ಕೂಡ ಮಗುವಿನ ಜನನವನ್ನು ಗಮನಿಸಬಹುದು. ಹೀಗಾದಲ್ಲಿ, ಮೂಲ, ಸಂಭಾವ್ಯ ಅಥವಾ ಸಾಧ್ಯತೆಯ ಅರ್ಥದಲ್ಲಿ, ಹುಟ್ಟಿದ ಮಗುವು ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ಒಬ್ಬ ಸದಸ್ಯನಾಗುತ್ತಾನೆಂಬುದು ನಿಜ. ಆದರೆ ಆ ವ್ಯವಸ್ಥೆಯಲ್ಲಿ ಮಗುವು ವಯಸ್ಕನಂತೆ ಪೂರ್ಣ ಸದಸ್ಯತ್ವವನ್ನು ಪಡೆದಿರುತ್ತಾನೆಂದು ಹೇಳುವಂತಿಲ್ಲ.

ಒಂದು ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ, ವಯಸ್ಕ ಅಥವಾ ಪೂರ್ಣ ರೂಪದ ಸದಸ್ಯನಾಗಿರಲು, ಮಗುವು ವಿವಿಧ ಪ್ರಭಾವಗಳಿಗೆ ಒಳಗಾಗಬೇಕು ಅಥವಾ ಅವುಗಳನ್ನು ಸ್ವೀಕರಿಸಬೇಕು; ಅಥವಾ ಮೇಲಿನ ಪಟ್ಟಿಯಲ್ಲಿ ಹೇಳಿರುವಂತೆ ವಿವಿಧ ಶಕ್ತಿ ಸಾಮರ್ಥ್ಯಗಳು ಅಥವಾ ಪರಿಣತಿಗಳನ್ನು ಗಳಿಸಿಕೊಳ್ಳಬೇಕು. ಮೊದಲನೆಯದಾಗಿ

ಮಗುವಿನ ದೇಹವು ಚೆನ್ನಾಗಿ ಬೆಳೆಯಬೇಕಾಗುತ್ತದೆ. ಹುಟ್ಟಿದಾಗ ಮಗುವು ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುತ್ತದೆ. ಆಹಾರ, ಬಟ್ಟೆ, ಪಾಲನೆ ಮತ್ತು ಸಂರಕ್ಷಣೆಗಳನ್ನು ಒದಗಿಸುವುದರ ಮೂಲಕ ಮಗುವನ್ನು ಪೋಷಿಸಬೇಕಾಗುತ್ತದೆ. ಮಗುವಿನ ದೈಹಿಕ ಬೆಳವಣಿಗೆಯು ಸಮರ್ಪಕವಾಗಿರದಿದ್ದಲ್ಲಿ, ಅದು ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ಪೂರ್ವವಿಕಸಿತ ಸದಸ್ಯನಾಗಲು ಸಾಧ್ಯವಿಲ್ಲ. ಅಂದರೆ ಸರಿಯಾದ ಪಾಲನೆ–ಪೋಷಣೆಗಳಿಂದ ಬೆಳೆಯುವ ಮಗುವು ಸಮರ್ಪಕ ಸದಸ್ಯನಾಗಿರಬಹುದು. ಮಾನವ ಕುಟುಂಬಗಳಲ್ಲಿ ಬೆಳೆಯದ ಮಕ್ಕಳ ಕಥೆಗಳನ್ನು ಸಮಾಜಶಾಸ್ತ್ರಜ್ಞರು ವರದಿಮಾಡಿದ್ದಾರೆ. ಉತ್ತರಪ್ರದೇಶದ ಒಂದು ಕಾಡಿನಲ್ಲಿ ತೋಳಗಳೊಡನೆ ಜೀವಿಸಿದ್ದ 'ತೋಳ ಬಾಲ'ನ ಕಥೆಯುಂಟು. ಆತನ ಹೆಸರು ರಾಮು. ಆತನು ತೋಳಗಳ ಜೊತೆ ಬೆಳೆದದ್ದರಿಂದ, ದೈಹಿಕವಾಗಿ ಮನುಷ್ಯನಂತೆ ಬೆಳೆದರೂ, ಸಾಮಾನ್ಯ ಮನುಷ್ಯರಿಂದ ಭಿನ್ನವಾಗಿದ್ದ. ಆತನು ತೋಳಗಳಂತೆ 'ನಾಲ್ಕು ಕಾಲುಗಳ' ಮೇಲೆ ನಡೆಯುತ್ತಿದ್ದನಲ್ಲದೆ, ಮಾನವಸಹಜವಾದ ನುಡಿಶಕ್ತಿಯನ್ನು ಅವನು ಬೆಳೆಸಿಕೊಳ್ಳದಾದ. ಅಂದಮೇಲೆ, ಯಾವುದೇ ಮಗುವು ತೋಳಬಾಲನಂತೆ ಅಸಾಮಾನ್ಯ ಅಥವಾ ವಿಕೃತವ್ಯಕ್ತಿಯಂತಾಗದಿರಲು, ದೈಹಿಕವಾಗಿಯೂ ಆತನನ್ನು ಸರಿಯಾಗಿ ಬೆಳೆಸುವುದು ಅತ್ಯವಶ್ಯಕ. ದೇಹವು ರೋಗರುಜಿನಗಳಿಂದ ಆವೃತವಾಗದೆ ಸಹಜವಾಗಿ, ಸಮರ್ಪಕವಾಗಿ ಬೆಳೆಯಬೇಕಾದುದು ಅತ್ಯಗತ್ಯ.

ದೇಹದ ಜೊತೆಜೊತೆಗೇ ಮಗುವಿನ ಮನಸ್ಸೂ ಚೆನ್ನಾಗಿ ಬೆಳೆಯಬೇಕಾಗುತ್ತದೆ. ಅಂದರೆ ಕಾಲಾನುಕ್ರಮದಲ್ಲಿ, ದೇಹದ ಬೆಳವಣಿಗೆಯ ಜೊತೆಗೇ ಮಗುವಿನ ಮಾನಸಿಕ ಹಾಗೂ ಭಾವಾತ್ಮಕ ವಿಕಾಸವೂ ಆಗಬೇಕಾಗುತ್ತದೆ. ಮಗುವು ೧೬ನೇ ವಯಸ್ಸಿನ ವೇಳೆಗೆ ತನ್ನ ದೈಹಿಕ ಪರಿಪಕ್ವತೆಯನ್ನು ಮುಟ್ಟುತ್ತದೆ ಎಂದು ನಮ್ಮ ದೇಶದಲ್ಲಿ ಪ್ರಚಲಿತವಿರುವ ಅಭಿಮತ. ಈ ಕಾರಣದಿಂದಲೇ, ಬಹುಶಃ ಹದಿನಾರು ವರ್ಷದ ಮಗನನ್ನು ತಂದೆಯು ತನ್ನ ಸಮಾನನಂತೆ ಕಾಣಬೇಕೆಂಬ ಸಂಸ್ಕೃತ ಲೋಕೋಕ್ತಿ ಪ್ರಚಲಿತವಾಗಿದೆ. ಆದರೆ ಮಾನಸಿಕ ಬೆಳವಣಿಗೆಯು ಹದಿನಾರು ವರ್ಷಗಳನಂತರವೂ ಮುಂದುವರಿಯಬಹುದು. ಅದು ೨೦ ವರ್ಷಗಳಿಗೂ ಮೀರಿ ಸುಮಾರು ೨೫ ವರ್ಷ ವಯಸ್ಸಿನವರೆಗೂ ಆಗಬಹುದು. ಸಾಂಪ್ರದಾಯಿಕ ಹಿಂದೂ ವಿಚಾರದ ಪ್ರಕಾರ ೨೫ ವರ್ಷ ವಯಸ್ಸಿನವನಾದಾಗ, ಹುಡುಗನು ಮದುವೆಗೆ ಅರ್ಹನಾಗುತ್ತಾನೆ. ಅಂದರೆ ಆ ವಯಸ್ಸಿನ ವೇಳೆಗೆ, ಹುಡುಗನು ದೈಹಿಕ ಹಾಗೂ ಮಾನಸಿಕವಾಗಿ ಪೂರ್ಣ ಬೆಳೆದು ಪರಿಪಕ್ವ ವ್ಯಕ್ತಿಯಾಗಿರುತ್ತಾನೆ ಎಂಬುದೇ ಇದರ ಹಿನ್ನೆಲೆಯ ನಂಬಿಕೆ. ವ್ಯಕ್ತಿಯ ಜೀವಿತದ ಮೊದಲ ಕಾಲುಭಾಗವು, ಅಂದರೆ ಬ್ರಹ್ಮಚರ್ಯಾಶ್ರಮವು, ೨೫ನೇ ವಯಸ್ಸಿನಲ್ಲಿ ಮುಗಿಯುತ್ತದೆ ಎಂಬುದು ಗಮನಾರ್ಹ ಅಂಶ. ಅದರಂತೆಯೇ, ತನ್ನ ೨೫ನೇ ವಯಸ್ಸಿನಲ್ಲಿ ಉದ್ಯೋಗ ಜಗತ್ತಿಗೆ ಪ್ರವೇಶಿಸಲು ವ್ಯಕ್ತಿಯು ದೈಹಿಕ ಹಾಗೂ ಮಾನಸಿಕವಾಗಿ ಪೂರ್ಣ ವಿಕಾಸ ಹೊಂದಿರುತ್ತಾನೆ ಎಂದೂ ಭಾವಿಸಲಾಗಿದೆ. ದೈಹಿಕ ಹಾಗೂ ಮಾನಸಿಕವಾಗಿ

ಒಂದು ಮಗುವು ಪೂರ್ಣರೂಪದಲ್ಲಿ ಬೆಳೆದಾಗ ಮಾತ್ರ, ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ ಆತನನ್ನು ವಯಸ್ಕ ಅಥವಾ ಪೂರ್ಣರೂಪದ ಸದಸ್ಯನೆಂದು ಪರಿಗಣಿಸಲಾಗುತ್ತದೆ. ಮಗುವಿನ ಅಥವಾ ಬಾಲಕನ ಈ ರೀತಿಯ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯು ರಾಜಕೀಯ-ಸಮಾಜೀಕರಣ ಪ್ರಕ್ರಿಯೆಯ ಒಂದು ಅಂಗವೆಂದು ಹೇಳಬಹುದು.

ಹುಟ್ಟಿದಾಗ ಮಗುವು ಹೆಸರಿಲ್ಲದ ವ್ಯಕ್ತಿಯಾಗಿರುತ್ತಾನೆ. ಭಾಷೆ, ಧರ್ಮ, ವರ್ಗ, ಜಾತಿ, ಉಪಜಾತಿ ಇತ್ಯಾದಿಗಳಿಲ್ಲದವನಾಗಿ ಆತ ಜನಿಸುತ್ತಾನೆ. ಇವುಗಳೆಲ್ಲಾ, ಆತನಿಗೆ ಆತನ ಜೀವಿತದ ವಿವಿಧ ಹಂತಗಳಲ್ಲಿ ಪ್ರಾಪ್ತವಾಗುತ್ತವೆ. ಮೇಲ್ಕಂಡ ಅಂಶಗಳು ವ್ಯಕ್ತೀಕರಣ ಅಥವಾ ಗುರುತಿಸುವ ಲಕ್ಷಣಗಳು. ಇಂತಹ ಲಕ್ಷಣಗಳಿಲ್ಲದೆ ಆತನು ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಗುರುತಿಸಲಾಗದ ಅಥವಾ ಉಲ್ಲೇಖಿಸಲಾಗದ ಸದಸ್ಯನಾಗಿ ಉಳಿಯಬೇಕಾಗುತ್ತದೆ. ಇಷ್ಟು ಮಾತ್ರವಲ್ಲದೆ, ವ್ಯಕ್ತಿಯ ಮುಂದಿನ ಬಲಾಬಲಗಳು, ಅದೃಷ್ಟ ದುರಾದೃಷ್ಟಗಳೂ ಕೂಡ ಮೇಲ್ಕಂಡ ಲಕ್ಷಣಗಳಿಂದ ನಿರ್ಧಾರವಾಗುತ್ತವೆ ಎಂದು ಹೇಳಬಹುದು. ಚರ್ಚಿಲ್, ಕೆನಡಿ, ಗಾಂಧಿ ಅಥವಾ ನೆಹರೂ ಮುಂತಾದಂತಹ ಹೆಸರನ್ನಿಟ್ಟಾಗ, ಮಗುವು ಸಾಮಾಜಿಕ ರಾಜಕೀಯ ವ್ಯವಸ್ಥೆಯ ಪ್ರಾರಂಭಿಕ ಪ್ರಯೋಜನಗಳನ್ನು ಪಡೆದಂತಾಗುತ್ತದೆ. ಆದರೆ ಆತನಿಗೆ, 'ಕಲ್ಲು' ಕಲ್ಲಪ್ಪ, ಮುಂತಾದ ಅಸಮರ್ಪಕ ಹೆಸರಿನ್ನಿಟ್ಟರೆ, ಆ ಹೆಸರೇ ಆತನಿಗೆ ಪ್ರಾರಂಭಿಕ ಅಡಚಣೆಯಾಗಿ ಪರಿಣಮಿಸಿ, ಅದನ್ನು ಹೋಗಲಾಡಿಸಿಕೊಳ್ಳಲು ಹೋರಾಡಬೇಕಾಗುತ್ತದೆ. ರಾಜಕೀಯದಲ್ಲಿ, ಒಬ್ಬ ವ್ಯಕ್ತಿಗೆ ಪ್ರಾರಂಭಿಕ ಗೌರವ, ಅನುಕೂಲ ಅಥವಾ ಸಂಬಂಧಗಳನ್ನು ಹೆಸರುಗಳು ಕೂಡಾ ಒದಗಿಸುತ್ತವೆ. ಇದೇರೀತಿ ಭಾಷೆ ಧರ್ಮ, ವರ್ಗ ಮತ್ತು ಜಾತಿಗಳೂ ಕೂಡ ಅಷ್ಟೇ ಮಹತ್ವಪೂರ್ಣವಾದ ಸಂಪತ್ತೆನಿಸಬಹುದು ಅಥವಾ ಸಂಕಷ್ಟಕಾರಕವೆನಿಸಲೂಬಹುದು. ಜಗತ್ತಿನ ಇತಿಹಾಸದ ವಿವಿಧ ಕಾಲಗಳಲ್ಲಿ ವಿವಿಧ ಭಾಷೆಗಳು ಗೌರವಾರ್ಹ ಅಥವಾ ಘನತೆವೆತ್ತ ಭಾಷೆಗಳಾಗಿದ್ದವೆಂಬುದನ್ನು ನಾವು ಕಾಣಬಹುದು. ಈ ಶತಮಾನದಲ್ಲಿ, ಇಂಗ್ಲೀಷ್ ಮತ್ತು ಫ್ರೆಂಚ್ ಭಾಷೆಗಳು ಶ್ರೇಷ್ಠವೆಂಬುದೂ ಪರಿಗಣಿತವಾಗಿವೆ. ಭಾರತದಲ್ಲಿ ಶ್ರೇಷ್ಠವೆಂಬುದಾಗಿ ಪರಿಗಣಿತವಾಗಿರುವ ಭಾಷೆಗಳೆಂದರೆ, ಇಂಗ್ಲೀಷ್, ಹಿಂದಿ ಅಥವಾ ಹಿಂದೂಸ್ಥಾನಿ ಮತ್ತು ಬೊಂಬಾಯಿ. ಮದ್ರಾಸು ಹಾಗೂ ಬಂಗಾಲ ಪ್ರಾಂತಗಳಲ್ಲಿ, ಮರಾಠಿ, ತಮಿಳು ಮತ್ತು ಬಂಗಾಲಿ ಭಾಷೆಗಳು, ಸಾಮಾಜಿಕ-ರಾಜಕೀಯ ವ್ಯವಸ್ಥೆಯ ಸದಸ್ಯರು, ಶ್ರೇಷ್ಠವೆನಿಸಿದ ಭಾಷೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಲ್ಲರಾದರೆ, ಸತತವಾಗಿ ನಾನಾ ರೀತಿಯ ಪ್ರಯೋಜನಗಳನ್ನು ಪಡೆಯಬಲ್ಲರು. ಅಂತಹ ಭಾಷೆಗಳು ಅವರ ಮಾತೃ ಭಾಷೆಗಳಾಗದಿದ್ದರೂ. ಅವುಗಳಲ್ಲಿ ವ್ಯಾವಹಾರಿಕ ಜ್ಞಾನವನ್ನಾದರೂ ಸಂಪಾದಿಸಿಕೊಳ್ಳುವುದು ವಿವೇಕವೆನಿಸುತ್ತದೆ. ಅಂತಹ ಗೌರವಾನ್ವಿತ ಅಥವಾ ಪ್ರಥಮ ದರ್ಜೆಯ ಭಾಷೆ

ಗಳನ್ನು ತಿಳಿಯದ ಜನರು, ಆಧುನಿಕ ಪ್ರಪಂಚದ ವಿವಿಧ ಪ್ರದೇಶಗಳು, ರಾಜ್ಯಗಳು ಅಥವಾ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದರೂ. ತಾವು ಭಾಷಾತ್ಮಕವಾಗಿ ಎರಡನೇ ದರ್ಜೆಯ ನಾಗರೀಕರೆಂಬ ಕೀಳರಿಮೆ ಭಾವಗ್ರಂಥಿ ಅಥವಾ ಭಾವನೆಗೆ ತುತ್ತಾಗಿ, ಪುನರ್ಸಂಘಟಿತ ಭಾಷಾ ವಿಭಾಗಗಳಿಗೆ ಸೇರಿದವರಾಗುತ್ತಾರೆ. ಇದರಿಂದಾಗಿ, ಭಾರತವೂ ಸೇರಿದಂತೆ ಜಗತ್ತಿನ ನಾನಾ ಭಾಗಗಳಲ್ಲಿ ಭಾಷಾ ವಿವಾದಗಳೂ ಹಾಗೂ ಘರ್ಷಣೆಗಳೂ ಉಂಟಾಗುತ್ತವೆ. ಒಬ್ಬ ವ್ಯಕ್ತಿಯು ಯಾವುದೋ ಒಂದು ಅಪ್ರಧಾನ ಭಾಷಾ ಸಮೂಹಕ್ಕೆ ಸೇರಿದ್ದಾನೆ ಅಥವಾ ಆತನು ಮೂರು ಅಥವಾ ನಾಲ್ಕು ಭಾಷೆಗಳನ್ನಾಡದೆ ಕೇವಲ ಎರಡನ್ನು ಮಾತ್ರ ಆಡುತ್ತಾನೆ ಎಂಬ ಅಂಶಗಳು, ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಪಾತ್ರಧಾರಿಯಾಗಲು, ಅನುಕೂಲ ಅಥವಾ ಅನಾನುಕೂಲಗಳಾಗಿ ಪರಿಣಮಿಸಬಹುದು.

ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲಿ, ಧಾರ್ಮಿಕ ಅಂಶವೂ ಕಾಲಕಾಲಕ್ಕೆ ಮಹತ್ವಪೂರ್ಣ ಪಾತ್ರವಹಿಸುತ್ತಾ ಬಂದಿದೆ. ಜಗತ್ತಿನ ನಾನಾ ಭಾಗಗಳಲ್ಲಿಯೂ. ಅನೇಕ ಸಮಾಜಗಳ ಜೀವನದಲ್ಲಿಯೂ, ಒಂದು ಪುರಾತನ ಸಂಸ್ಥೆಯೆನಿಸಿ, ಧರ್ಮವು ಪ್ರಧಾನವಾಗಿರುವುನ್ನು ಕಾಣಬಹುದು. ವಿವಿಧ ರಾಷ್ಟ್ರಗಳಲ್ಲಿ ವಿವಿಧ ಧರ್ಮಗಳು ಪ್ರಮುಖವಾಗಿ ಉಳಿದುಬಂದಿವೆ. ಭಾರತ ಮತ್ತು ನೇಪಾಳಗಳಲ್ಲಿ ಹಿಂದೂ ಧರ್ಮವು ಪ್ರಮುಖವಾಗಿದ್ದರೆ. ಶ್ರೀಲಂಕೆ ಮತ್ತು ಬರ್ಮಾಗಳಲ್ಲಿ ಬೌದ್ಧ ಧರ್ಮವು ಪ್ರಧಾನವಾಗಿದೆ. ಆಯಾಯ ದೇಶಗಳಲ್ಲಿ ಪ್ರಧಾನವಾಗಿರುವ ಧರ್ಮಗಳಲ್ಲಿ ಹುಟ್ಟಿ ಬೆಳೆದ ಆ ದೇಶಗಳ ಸಾಮಾಜಿಕ–ರಾಜಕೀಯ ವ್ಯವಸ್ಥೆಗಳಲ್ಲಿ ಅಧಿಕಾರವನ್ನು ಪಡೆದು ಪ್ರಭಾವ ಬೀರುವ ಸಾಧ್ಯತೆ ಹೆಚ್ಚು. ಜಗತ್ತಿನ ವಿವಿಧ ಭಾಗಗಳಲ್ಲಿರುವ ಮತಧರ್ಮ ಹಾಗೂ ಪಂಗಡಗಳಲ್ಲಿಯೂ ಕೂಡ ಇದೇ ರೀತಿಯ ಸತ್ಯ ಕಂಡುಬರುತ್ತದೆ. ಪಶ್ಚಿಮ ಜರ್ಮನಿಯಲ್ಲಿ ಪ್ರೊಟೆಸ್ಟೆಂಟರ ಪ್ರಭಾವಕ್ಕೆ ಮಾನ್ಯತೆ ಹೆಚ್ಚು. ಸ್ಪೆಯಿನ್. ಪೋರ್ಚುಗಾಲ್ ಮತ್ತು ಇಟಲಿಗಳಲ್ಲಿ ಕೆಥೋಲಿಕರ ಪ್ರಭಾವ ಹೆಚ್ಚಿರುವುದನ್ನು ಕಾಣಬಹುದು. ಇಂಗ್ಲೆಂಡಿನ ಚರ್ಚಿನ ಅನುಯಾಯಿಗಳು ಬ್ರಿಟನ್ನಿನಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿದ್ದಾರೆ. ಪರಿಸ್ಥಿತಿ ಹೀಗಿರುವಲ್ಲಿ. ಅಲ್ಪಸಂಖ್ಯಾತ ಧರ್ಮಗಳ ಮತ್ತು ಪಂಗಡಗಳ ಜನರು. ಕೊನೆಯ ಪಕ್ಷ ಮಾನಸಿಕವಾಗಿಯಾದರೂ ಅನಾನುಕೂಲಕ್ಕೆ ಒಳಗಾಗುತ್ತಾರೆ. ಅಂದರೆ, ಒಂದು ವಿಶಿಷ್ಟ ಧರ್ಮದಲ್ಲಿ ಹುಟ್ಟಿದ ಅಥವಾ ಆ ಧರ್ಮಕ್ಕೆ ಸೇರಿದ ಆಕಸ್ಮಿಕವು ವ್ಯಕ್ತಿಯ ಜೀವನದಲ್ಲಿ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತದೆಯಲ್ಲದೆ. ಒಂದು ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಆತನು ಸದಸ್ಯನಾಗಿರುವುದರ ಮೇಲೆಯೂ, ಅದು ಒಂದಲ್ಲ ಒಂದು ರೀತಿಯ ಪ್ರಭಾವ ಬೀರಬಹುದು. ಹೀಗಿರುವುದರಿಂದ. ರಾಜಕೀಯ–ಸಮಾಜೀಕರಣ ಪ್ರಕ್ರಿಯೆಯಲ್ಲಿ ಮಗುವಿನ ಧರ್ಮವು ಮಹತ್ವಪೂರ್ಣ ಅಂಶವೆಂಬುದನ್ನು ಪರಿಗಣಿಸಲೇಬೇಕಾಗುತ್ತದೆ.

ಒಂದು ವಿಶಿಷ್ಟ ಸಮುದಾಯ ಅಥವಾ ವರ್ಗದಲ್ಲಿ ಮಗುವಿಗಿರುವ ಸದಸ್ಯತ್ವವು ಆತನ ಪಾತ್ರ ಮತ್ತು ಚಟುವಟಿಕೆಗಳ ಮೇಲೆ ಪ್ರಮುಖ ಪ್ರಭಾವ ಬೀರುತ್ತದೆ. ಒಂದು ವೇಳೆ, ಮಗುವು ಮೇಲಿನ ಅಥವಾ ಶ್ರೀಮಂತ ವರ್ಗಗಳಿಗೆ ಸೇರಿದ್ದರೆ ಆತನಿಗೆ, ಅಧಿಕಾರ ಆಸ್ತಿ ಮತ್ತು ಬಾಧ್ಯತೆಗಳ ಅನುಕೂಲತೆಗಳು ಆನುವಂಶೀಯವಾಗಿ ಬಂದುಬಿಡುತ್ತವೆ. ಶ್ರೀಮಂತ ಪ್ರಭುತ್ವವಿರುವ ರಾಜಕೀಯ ವ್ಯವಸ್ಥೆಗಳಲ್ಲಿ, ಆತನು ನೇರವಾದ ಅಥವಾ ಅಧಿಕೃತವಾದ ನೇತೃತ್ವವನ್ನು ಪಡೆಯಬಹುದಲ್ಲದೆ, ದೈನಿಕ ರಾಜಕೀಯ ಹಾಗೂ ಆಡಳಿತ ಸ್ಥಾನಗಳಿಗೂ ಏರಬಹುದು. ಅ ಶ್ರೀಮಂತ ಪ್ರಭುತ್ವ ವ್ಯವಸ್ಥೆಗಳಲ್ಲಿ ಆತನಿಗೆ ನೇರವಾಗಿ ಅಧಿಕಾರ ಸ್ಥಾನಮಾನಗಳು ಸಿಗದಿರಬಹುದು. ಆದರೂರಾಜಕೀಯ ವ್ಯವಸ್ಥೆಯ ವಿವಿಧ ಪ್ರಕಾರಗಳ ಮೇಲೆ ಆತನು ಪರೋಕ್ಷವಾದ, ಅಥವಾ ಮುಚ್ಚುಮರೆಯ ಅಧಿಕಾರ ಅಥವಾ ಪ್ರಭಾವವನ್ನು ಹೊಂದಿರಬಹುದು. ಕೆಲವು ಸನ್ನಿವೇಶಗಳಲ್ಲಿ ಆತನು ಬೀರುವ ಪ್ರಭಾವ ಮಹತ್ವಪೂರ್ಣವೆನಿಸುತ್ತದೆ. ಹೇಗೆಂದರೆ, ಆತನು ರಾಜನಿರ್ಮಾತೃ, ಮಂತ್ರಿ ಮಂಡಲಗಳ ನಿರ್ಮಾತೃ ಅಥವಾ ಇಡೀ ರಾಜಕೀಯ ವ್ಯವಸ್ಥೆಯ ಪ್ರಮುಖ ಬೆಂಬಲಿಗ ನಿರುತ್ತಾನೆಂಬುದು ಸೂಕ್ಷ್ಮ ವಿಶ್ಲೇಷಣೆಯಿಂದ ಕಂಡುಬರುತ್ತದೆ. ವ್ಯಕ್ತಿಯು ಮಧ್ಯಮ ವರ್ಗಕ್ಕೆ ಸೇರಿದ್ದರೆ, ರಾಜಕೀಯ ವ್ಯವಸ್ಥೆಯಲ್ಲಿ ಆತನು ಒಂದು ಸ್ಥಿರ, ನಂಬಿಕಾರ್ಹ ಹಾಗೂ ಏಕಪ್ರಕಾರದ ಪಾತ್ರವನ್ನು ನಿರ್ವಹಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಸ್ಥಿರವಾದ ಹಾಗೂ ಜಯಪ್ರದವಾದ ರಾಜಕೀಯ ವ್ಯವಸ್ಥೆಗಳನ್ನು ನಡೆಯಿಸುವುದರಲ್ಲಿ ಮಧ್ಯಮ ವರ್ಗಗಳ ಪಾತ್ರಕ್ಕೆ ಅರಿಸ್ಟಾಟಲ್ ಮತ್ತು ಲಾಕ್ ಇವರಂತಹ ಚಿಂತಕರು ಮಹತ್ವ ಕೊಟ್ಟಿದ್ದಾರೆ. ಅಂತಹ ಸನ್ನಿವೇಶದಲ್ಲಿ ವ್ಯಕ್ತಿಯು ಪರಿಣಾಮಕಾರಿ ಪಾತ್ರವನ್ನು ವಹಿಸಲು ಸಮರ್ಥನಾಗುತ್ತಾನೆ. ಕೆಳವರ್ಗ ಅಥವಾ ಕೊಳೆಗೇರಿಯಲ್ಲಿ ಹುಟ್ಟುವಂತಹ ದುರಾದೃಷ್ಟಶಾಲಿಯಾಗಿದ್ದರೆ, ವ್ಯಕ್ತಿಯು ಸಾಮಾಜಿಕ–ರಾಜಕೀಯ ವ್ಯವಸ್ಥೆಯಲ್ಲಿ ಪಾತ್ರವಹಿಸಲು ಹಾಗೂ ಜಯಗಳಿಸಲು ಸತತ ಹೋರಾಡಬೇಕಾಗುತ್ತದೆ. ಅಂತಹ ಸನ್ನಿವೇಶಗಳಲ್ಲಿ ಹುಟ್ಟಿದವರು, ಜಗತ್ತಿನ ನಾನಾ ದೇಶಗಳಲ್ಲಿ, ಉಗ್ರವಾದಿ ಅಥವಾ ವಾಮವಾದಿ ಪಕ್ಷಗಳ ಸ್ಥಾಪಕರೋ, ನೇತೃಗಳೋ ಆಗಬಹುದು. ವೃತ್ತಿ ಅಥವಾ ಕಾರ್ಮಿಕ ಸಂಘ–ಸಂಸ್ಥೆಗಳ ಭೂಗತ ನಾಯಕರಾಗಿ ಅಥವಾ ಚಳವಳಿದಾರರಾಗಿ, ಕೆಳ ವರ್ಗಗಳ ಮೇಲೆ ಆಗುವ ಸಾಮಾಜಿಕ–ಆರ್ಥಿಕ ಶೋಷಣೆಯನ್ನು ತಪ್ಪಿಸಲು ಅವರು ಹೋರಾಡಬಹುದು. ಕೆಲವು ವೇಳೆ ಮಧ್ಯಮ ಅಥವಾ ಮೇಲಿನ ವರ್ಗಗಳಲ್ಲಿ ಹುಟ್ಟಿದ ಮಕ್ಕಳಿಗಿಂತ, ಕೊಳೆಗೇರಿಯಲ್ಲಿ ಹುಟ್ಟಿದ ಕೆಲಮಕ್ಕಳು, ಅಧಿಕಾರದ ಮೇಲ್ಮಟ್ಟದ ಸ್ಥಾನ ಗಳನ್ನು ಗಳಿಸಿಕೊಂಡು ಪ್ರಭಾವಶಾಲಿಗಳಾಗಬಹುದು. ಕೊಳೆಗೇರಿಗಳಲ್ಲಿ ಬೆಳೆಯುವ ಮಕ್ಕಳಿಗೆ, ಐಶ್ವರ್ಯ ಮತ್ತು ಪ್ರಭಾವಗಳಿಗಾಗಿರುವ ಮಾರ್ಗ ಸಾಮಾನ್ಯವಾಗಿ ದುರ್ಗಮ ಹಾಗೂ ಕಷ್ಟಸಾಧ್ಯವಾಗಿರುತ್ತದೆ. ಬ್ರಿಟನ್ ಮತ್ತು ಭಾರತಗಳ ಟೋರಿ ಮತ್ತು ಸ್ವತಂತ್ರ ಪಕ್ಷಗಳ ನಾಯಕರು ಸಾಮಾನ್ಯವಾಗಿ ಮೇಲ್ವರ್ಗಗಳಿಗೆ ಸೇರಿದ್ದು ರಾಜಕೀಯದ ಮೇಲೆ ಗಣನೀಯ ಪ್ರಭಾವ ಬೀರುತ್ತಿದ್ದರು. ಈ ಮೊದಲು ಬ್ರಿಟನ್ನಿನ ಕಾರ್ಮಿಕ

ಪಕ್ಷ ಅಥವಾ ಕೆಳವರ್ಗದವರ ಪ್ರಭಾವವು ಬಹಳ ಅಲ್ಪವಿದ್ದಿತು. ಆದರೆ ಅದು ಈ ಶತಮಾನದ ಆದಿಯಿಂದ ಹೆಚ್ಚುತ್ತಾ ಬಂದಿದೆ.

ಮಗುವಿನ ರಾಜಕೀಯ ಭವಿಷ್ಯದ ಮೇಲೆ ಆತನ ಜಾತಿ ಮತ್ತು ಉಪಜಾತಿಗಳ ಪ್ರಭಾವವು ನಿರ್ಧಾರಕವಾಗಿರಬಲ್ಲದು. ಸಾಮಾನ್ಯವಾಗಿ, ಜಾತಿ ಮತ್ತು ಉಪಜಾತಿಗಳು ಹಿಂದೂಧರ್ಮದ ಭಾಗೋಪಭಾಗಗಳಾಗಿದ್ದು, ಅದರ ಪ್ರಮುಖ ಲಕ್ಷಣಗಳೆನಿಸಿ ಕೊಂಡಿವೆ. ಅಧಿಕಾರ ಮತ್ತು ಪ್ರಭಾವಗಳಿಗೆ ಸ್ವಾಭಾವಿಕವೆನಿಸುವಂತಹ ಸನ್ನಿವೇಶವನ್ನು ವಿಶಿಷ್ಟ ಜಾತಿ ಮತ್ತು ಉಪಜಾತಿಗಳಿಗೆ ಒದಗಿಸಿರುವ ಪರಿಸ್ಥಿತಿಯನ್ನು ಇಂದು ಭಾರತದ ಅನೇಕ ರಾಜ್ಯಗಳಲ್ಲಿ ಯಾರಾದರೂ ಕಾಣಬಹುದು. ಅಂತಹ ಅಧಿಕಾರ ಹಾಗೂ ಪ್ರಭಾವಗಳಲ್ಲಿ ಮಂತ್ರಿಮಂಡಲಗಳ ಮತ್ತು ಆಡಳಿತ ಸೇವಾವಿಭಾಗಗಳ ರಚನೆ ಮುಂತಾ ದವುಗಳನ್ನು ಕಾಣಲು ಸಾಧ್ಯ. ಹಿಂದುಳಿದ ಜಾತಿ ಮತ್ತು ಬುಡಕಟ್ಟುಗಳು ಎನಿಸಿದ್ದ ಜನಸಮೂಹಗಳು ಶತಮಾನಗಳಿಂದ ಪತಿತ ಸ್ಥಿತಿಯಲ್ಲಿ ಉಳಿದು ಬಂದಿವೆ. ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ, ಅಧಿಕಾರ ಹಾಗೂ ಪ್ರಭಾವಗಳಿಗೆ, ಇತ್ತೀಚಿನ ವರ್ಷಗಳಲ್ಲಿ ಅವರಿಗೆ ಅವಕಾಶಗಳು ಮತ್ತು ಅನುಕೂಲತೆಗಳನ್ನು ಒದಗಿಸಲಾಗಿದೆ. ಹೀನಾವಸ್ಥೆ ಯಲ್ಲಿದ್ದ ಶತಮಾನಗಳ ಅವಧಿಯಲ್ಲಿ, ಈ ಜಾತಿ ಮತ್ತು ಉಪಜಾತಿಗಳಲ್ಲಿ ಹುಟ್ಟಿದ ಮಕ್ಕಳು, ಅಸಹನೀಯವೆನಿಸುವಂತಹ ತಿರಸ್ಕಾರ, ಭೇದಭಾವ ಮತ್ತು ಶೋಷಣೆಗಳ ಭಾರದಲ್ಲಿ ಬದುಕಿದ್ದರೆಂದು ಸಾಮಾನ್ಯೀಕರಿಸಿದರೆ ಬಹುಶಃ ತಪ್ಪಾಗದು. ಚೆನ್ನಾಗಿ ನೆಲೆನಿಂತು, ಪ್ರಭಾವಶಾಲಿಗಳಾಗಿದ್ದ ಮೇಲ್ಜಾತಿ ಹಿಂದುಗಳೊಡನೆ ಈ ಕೆಳವರ್ಗದವರು ರಾಜಕೀಯ ಪಾತ್ರನಿರ್ವಹಣೆಯಲ್ಲಿ ಸರಿಗಟ್ಟಿ ನಿಲ್ಲಲು ಕಷ್ಟ. ಈ ದೃಷ್ಟಿಯಿಂದ ನೋಡಿ ದಾಗ, ವರ್ಗ, ಜಾತಿ, ಮತ್ತು ಉಪಜಾತಿಗಳೆಂಬ ಗುಂಪುಗಳ ಪ್ರಭಾವ, ಮಗುವಿನ ರಾಜಕೀಯ-ಸಮಾಜೀಕರಣ ಪ್ರಕ್ರಿಯೆಯಲ್ಲಿ ವಾಸ್ತವವಾಗಿ ಎದ್ದು ಕಾಣುತ್ತವೆ.

ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಭಾವೀ ಸೂತ್ರಧಾರರಾಗುವ ಮಕ್ಕಳ ಬೆಳವಣಿಗೆಯ ಮೇಲೆ, ಶಿಕ್ಷಣ, ತರಬೇತಿ ಮತ್ತು ಕಾರ್ಯಾನುಭವಗಳು ಬೀರುವ ನಿರ್ಧಾರಕ ಪಾತ್ರವು ಮಹತ್ತರವಿರಲು ಸಾಧ್ಯ. ಹೆಚ್ಚು ಕಡಿಮೆ, ಇತರ ಎಲ್ಲ ಸ್ಥಿತಿಗತಿ ಗಳು ಸಮನಿದ್ದಾಗ, ಸಾಮಾಜಿಕ ಮತ್ತು ರಾಜಕೀಯ ಅಧಿಕಾರ ಮತ್ತು ಪ್ರಭಾವ ಗಳಿಗೆ, ಶಿಕ್ಷಣವು ಕೀಲಿಕೈ ಎನಿಸುತ್ತದೆ. ಆದಾಗ್ಯೂ. ವಾಸ್ತವವಾಗಿ ಅನಕ್ಷರಸ್ಥರು ಅಥವಾ ಅಶಿಕ್ಷಿತರೂ ಆಗಿರುವ ಕೆಲವು ವ್ಯಕ್ತಿಗಳು ಅಥವಾ ನಾಯಕರು. ರಾಜಕೀಯ ವ್ಯವಸ್ಥೆಯಲ್ಲಿ ಸಾಕಷ್ಟು ಅಧಿಕಾರವನ್ನು ನಿಯಂತ್ರಿಸುವುದನ್ನು ನಾವು ಕಾಣಬಹುದು. ಆದರೂ ಶಿಕ್ಷಿತ ಅಥವಾ ತರಬೇತಿ ಪಡೆದ ಜನರು. ಸಾಮಾನ್ಯವಾಗಿ ಹೆಚ್ಚು ಅಧಿಕಾರ ಯುತ ಹಾಗೂ ಪ್ರಭಾವಕಾರಿ ಪಾತ್ರವನ್ನು ವಹಿಸುತ್ತಾರೆ ಎಂದು ಹೇಳುವುದು ಹೆಚ್ಚು ಸಮರ್ಪಕವಾದೀತು. ಬಹುಮಟ್ಟಿಗೆ. ವಿವಿಧ ಕಡೆಗಳಲ್ಲಿ ವಿವಿಧ ಹೆಸರುಗಳಿರ ಬಹುದಾದ 'ನಾಗರಿಕ ಸೇವೆ'ಯು ಯಾವಾಗಲೂ ಶಿಕ್ಷಿತ ಹಾಗೂ ತರಬೇತಿ ಪಡೆದ

ಜನರಿಂದಲೇ ತುಂಬಿರುತ್ತದೆ. ತಜ್ಞರಾಡಳಿತವಿಲ್ಲದ ಗಣರಾಜ್ಯವನ್ನು ಪ್ಲೇಟೋ ಯೋಚಿಸಿಲ್ಲ. ಚೀಣಾದ ತತ್ವಜ್ಞಾನಿ ಕನ್‌ಫ್ಯೂಷಿಯುನನ ವಿಚಾರವೂ ಇದೇರೀತಿ ಯದು. ಆಧುನಿಕ ರಾಷ್ಟ್ರಗಳಲ್ಲಿ ಯಾವುದೇ ನಾಗರೀಕ ಸೇವೆಗಾದರೂ, ಅನಕ್ಷರತೆ ಅಥವಾ ಅಸಿದ್ಧತೆಗಳಿಗೆ ಬದಲಾಗಿ ಶಿಕ್ಷಣ ಮತ್ತು ತರಬೇತಿಗಳು ಪ್ರಮಾಣಿತ ಅಗತ್ಯ ಗಳೆನಿಸಿವೆ. ಕಾರ್ಯನೀತಿ ನಿರೂಪಣೆ ಅಥವಾ ಆಡಳಿತ ನಿರ್ವಹಣೆಗಳಲ್ಲಿ ಮಾತ್ರ ವಲ್ಲದೆ, ರಾಜ್ಯತಂತ್ರ ಅಥವಾ ರಾಜಕೀಯ ಸಂವಿಧಾನ ರೂಪಣೆ ಮತ್ತು ನ್ಯಾಯ ರೂಪಣೆಗಳಲ್ಲಿಯೂ ಸಾಮಾನ್ಯವಾಗಿ ಶಿಕ್ಷಿತ ಹಾಗೂ ತರಬೇತಿ ಪಡೆದ ಜನರೇ ಹೆಚ್ಚು ಪ್ರಭಾವಕಾರಿ ಪಾತ್ರಗಳನ್ನು ನಿರ್ವಹಿಸುತ್ತಾರೆ. ೧೭೮೭ ರಲ್ಲಿ ಫಿಲಿಡೆಲ್ಫಿಯಾದ ಸಮ್ಮೇಳನದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನ ರೂಪಣೆಯಾದು ದನ್ನು, ೧೯೪೭–೪೯ ರಲ್ಲಿ ಭಾರತೀಯ ಸಂವಿಧಾನ ರೂಪಗೊಂಡದ್ದನ್ನು, ಅಗತ್ಯವಿದ್ದ ಪರಿಣಿತರ ಅಥವಾ ತರಬೇತಿಪಡೆದ ಜನರ ತಂಡವಿಲ್ಲದೆ, ಕಲ್ಪಿಸಿಕೊಳ್ಳುವುದು ಅಸಾಧ್ಯ. ಮಂತ್ರಿಗಳು, ಮಂತ್ರಾಲೋಚಕರು ಹಾಗೂ ಸೈನಿಕ ಸಲಹೆಗಾರರೂ ಸೇರಿದಂತೆ, ಶಿಕ್ಷಿತ ಮತ್ತು ತರಬೇತಿಪಡೆದ ಜನರಿಂದಲೇ, ಅಂತಹ ತಂಡಗಳಿಗೆ ಸಲಹೆಗಾರರನ್ನು ಆರಿಸಿ ಕೊಳ್ಳಲಾಗುತ್ತದೆ. ರಾಜನು ತನ್ನ ಮಂತ್ರಿಗಳನ್ನು ಆಯ್ದುಕೊಳ್ಳುವಾಗ ಶಿಕ್ಷಣವೂ ಕೂಡ ಒಂದು ಪ್ರಧಾನ ಅರ್ಹತೆಯಾಗಿರಬೇಕೆಂದು ಕೌಟಿಲ್ಯನು ಪ್ರತಿಪಾದಿಸಿದ್ದಾನೆ. ಹಿಂದೂ ರಾಜಕೀಯ ವ್ಯವಸ್ಥೆಯಲ್ಲಿ, ಪುರೋಹಿತ ವರ್ಗವು, ಅದರಲ್ಲಿಯೂ ಬ್ರಾಹ್ಮಣರು ಜನರಿಗೆ ಶಿಕ್ಷಣಕೊಡುವುದು ಮತ್ತು ಜ್ಞಾನಿಗಳನ್ನಾಗಿ ಮಾಡುವ ಕಾರ್ಯಗಳಲ್ಲಿ ಮಾತ್ರವಲ್ಲದೆ, ರಾಜಕಾರಣ ಮತ್ತು ಆಡಳಿತದಲ್ಲಿ ರಾಜರಿಗೆ ಸಲಹೆ ಹಾಗೂ ನೆರವನ್ನು ನೀಡುವುದರಲ್ಲಿಯೂ ಪ್ರಧಾನ ಪಾತ್ರವಹಿಸಬೇಕೆಂಬ ನಿರೀಕ್ಷೆಯಿತ್ತು. ಮಗುವಿಗೆ ಶಿಕ್ಷಣ, ತರಬೇತಿ ಹಾಗೂ ಕಾರ್ಯಾನುಭವಗಳ ಲಾಭ ದೊರೆಯುವದಾದರೆ, ಸಾಮಾಜಿಕ–ರಾಜಕೀಯ ವ್ಯವಸ್ಥೆಯಲ್ಲಿ ಅದರ ಪಾತ್ರ ಗಣನೀಯವಾಗಬಲ್ಲದು ಎಂಬುದೇ ಇದರಲ್ಲಿರುವ ಪ್ರಮುಖ ಅಂಶ. ತದ್ವಿರುದ್ಧವಾಗಿ, ಅನಕ್ಷರಸ್ಥ ಜನ ಜಂಗುಳಿ ಅಥವಾ ತರಬೇತಿಯಿಲ್ಲದ ರೈತಸಮೂಹದಲ್ಲಿ ಜನಿಸಿದರೆ, ಮಗುವು ತನ್ನ ಜೀವನವನ್ನು ಅತ್ಯಂತ ದುರ್ಬಲ ಸ್ಥಿತಿಯಿಂದ ಪ್ರಾರಂಭಿಸಬೇಕಾಗುತ್ತದೆ. ೧೯೭೭ರಷ್ಟು ಇತ್ತೀಚಿನ ಅಂಕೆ ಸಂಖ್ಯೆಗಳ ಪ್ರಕಾರ ಭಾರತದಲ್ಲಿ ಅಕ್ಷರತೆಯಮಟ್ಟ ಶೇಕಡಾ ೩೦ ಮಾತ್ರ. ನಮ್ಮಲ್ಲಿ ಸುಮಾರು ಶೇಕಡ ೭೦ ಮಂದಿ ಅನಕ್ಷರಸ್ಥರಿದ್ದಾರೆ ಎಂದಂತಾ ಯಿತು. ಇಂತಹ ಅನಕ್ಷರತೆ ಅಥವಾ ಹಿಂದುಳಿದಿರುವಿಕೆಯ ಹಿನ್ನೆಲೆಯಿಂದ ಬರುವು ದಾದರೆ, ಮಕ್ಕಳು ದೇಶದ ಸಾಮಾಜಿಕ ರಾಜಕೀಯ ಜೀವನದಲ್ಲಿ, ಅದು ನಿಯಮ ಬದ್ಧವೆಂಬಂತೆ, ಬಹುಮಟ್ಟಿಗೆ ಹಿಂದಿನ ಸಾಲುಗಳಲ್ಲೇ ಉಳಿಯಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಮಗುವಿನ ಸಾಮಾಜಿಕ ರಾಜಕೀಯ ಸಮಾಜೀಕರಣ ಪ್ರಕ್ರಿಯೆಯುಲ್ಲಿ, ಶಿಕ್ಷಣ, ತರಬೇತಿ ಹಾಗೂ ಕಾರ್ಯಾನುಭವಗಳು ಮಹತ್ವಪೂರ್ಣ ಅಂಶಗಳೆನಿಸುತ್ತವೆ.

ವ್ಯಕ್ತಿಯ ಸೇವಾವೃತ್ತಿ, ಕಸಬು ಅಥವಾ ಉದ್ಯೋಗವು, ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ, ಆತನ ಪ್ರಭಾವವೇನೆಂಬುದನ್ನು ಒಂದು ರೀತಿಯಲ್ಲಿ ನಿರ್ಧರಿಸಬಹುದು. ಒಂದು ಜಗತ್ತನ್ನು ನಿರ್ಮಿಸಲು ಎಲ್ಲ ರೀತಿಯ ಜನಗಳೂ ಬೇಕಾಗುತ್ತಾರೆ ಎಂಬ ಲೋಕೋಕ್ತಿಯಂತೆ, ಎಲ್ಲಾ ಮಕ್ಕಳೂ ಒಂದೇ ರೀತಿಯ ಸೇವಾವೃತ್ತಿಯನ್ನು ಅವಲಂಬಿಸುವುದಾಗಲೀ, ಅಥವಾ ಒಂದು ವಿಶಿಷ್ಟ ಉದ್ಯೋಗದ ವಿವಿಧ ದರ್ಜೆಗಳನ್ನು ಹೊಂದುವುದಾಗಲೀ ಆಗದ ಮಾತೆಂಬುದು ಎಲ್ಲರಿಗೂ ತಿಳಿದ ವಿಷಯ. ವಿವಿಧ ಮಕ್ಕಳು ತಾವು ದೊಡ್ಡವರಾದ ಮೇಲೆ, ವಿವಿಧ ಸೇವಾವೃತ್ತಿ, ಕಸಬು ಅಥವಾ ಉದ್ಯೋಗಗಳನ್ನು ಸೇರುತ್ತಾರೆ. ಸೇವಾವೃತ್ತಿ ಎಂದರೆ, ಸಾಮಾನ್ಯವಾಗಿ ದೀರ್ಘಕಾಲಿಕ ಶಿಕ್ಷಣ, ತರಬೇತಿ ಅಥವಾ ಅಭ್ಯಾಸ, ಶಿಕ್ಷಣ ಬೇಕಾಗುತ್ತದೆ ಎಂಬುದು ಪೂರ್ವಸ್ವೀಕೃತ ಅಂಶ. ಆದ್ದರಿಂದ ಶಿಕ್ಷಣ ಮತ್ತು ತರಬೇತಿಗಳನ್ನು ಮುಗಿಸಿ, ವಿವಿಧ ಸೇವಾವೃತ್ತಿಗಳಿಗೆ ಅರ್ಹತೆ ಸಂಪಾದಿಸುವ ವೇಳೆಗೆ ಸಂಬಂಧಪಟ್ಟ ವ್ಯಕ್ತಿಗಳು ಪ್ರಾಪ್ತ ವಯಸ್ಕರಾಗಿರುತ್ತಾರೆ. ಉದಾಹರಣೆಗೆ, ಇಂಜಿನಿಯರಿಂಗ್, ಅಥವಾ ವೈದ್ಯಕೀಯ ಪದವಿ ಅಥವಾ ಭಾಷಾಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿಗಳಿಗೆ ಸೇವಾವೃತ್ತಿಗೆ ಅರ್ಹತೆ ಪಡೆಯುವ ವೇಳೆಗೆ ವ್ಯಕ್ತಿಯು ಬಹುಮಟ್ಟಿಗೆ ೩೦ ವರ್ಷ ವಯಸ್ಸನ್ನು ಮೀರಿರುತ್ತಾನೆ. ಇದಕ್ಕೆ ಬದಲಾಗಿ, ಕಸಬುಗಳು ಅಥವಾ ಇತರ ಉದ್ಯೋಗಗಳಿಗೆ ಇನ್ನೂ ಕಡಿಮೆ ವಯಸ್ಸಿನಲ್ಲಿಯೇ ಸೇರುವ ಸಾಧ್ಯತೆ ಇದೆ. ಹೀಗಾಗಿ, ಸಾಪೇಕ್ಷವಾಗಿ ಚಿಕ್ಕ ವಯಸ್ಸಿನ ಮಕ್ಕಳೂ ಕೂಡ ನಾನಾ ರೀತಿಯ ಕೆಲಸಗಳಲ್ಲಿ ನಿರತರಾಗುವುದನ್ನು ಕಾಣಬಹುದು. ಉದಾಹರಣೆಗೆ, ಸುಮಾರು ೧೨ ವರ್ಷ ವಯಸ್ಸಿನ ಮಕ್ಕಳು, ಸಿಂಪಿಗರಾಗಿ, ಗೌಂಡಿಗಳಾಗಿ, ರೈತರಾಗಿ ಅಥವಾ ನಾನಾರೀತಿಯ ಕಸಬುದಾರರ ಸಹಾಯಕರಾಗಿ ಕೆಲಸ ಮಾಡಬಹುದು. ಅದೇ ವಯಸ್ಸಿನ ಮಕ್ಕಳು ಉಪಹಾರ, ಫಲಾಹಾರ ಮಂದಿರಗಳಲ್ಲಿ ಅಥವಾ ಭೋಜನ ಶಾಲೆಗಳಲ್ಲಿ ಸ್ವಚ್ಛ ಮಾಡುವ ಅಥವಾ ಆಹಾರವನ್ನು ಒದಗಿಸುವ ಕೆಲಸ ಮಾಡಬಹುದು. ಅನೇಕ ನಗರಗಳಲ್ಲಿ, ಸಾಪೇಕ್ಷವಾಗಿ ಚಿಕ್ಕ ವಯಸ್ಸಿನ ಮಕ್ಕಳು, ಸುದ್ದಿವಾಹಕರಾಗಿ ಅಥವಾ ಪತ್ರಿಕೆ ಹಂಚುವವರಾಗಿ ಕೆಲಸ ಮಾಡುವುದನ್ನು ನಾವು ಕಾಣಬಹುದು. ಹುಡುಗರು ಅಥವಾ ವ್ಯಕ್ತಿಗಳು ಅನುಸರಿಸುವ ವಿಶಿಷ್ಟ ಸೇವಾವೃತ್ತಿಗಳು, ಕಸಬುಗಳು ಅಥವಾ ಉದ್ಯೋಗಗಳಿಗೆ ಅನುಗುಣವಾಗಿ ಸಾಮಾಜಿಕ-ರಾಜಕೀಯ ವ್ಯವಸ್ಥೆಯ ಮೇಲೆ ಒಂದಿಲ್ಲೊಂದು ರೀತಿಯ ಪ್ರಭಾವ ಬಿದ್ದೇ ಬೀಳುತ್ತದೆ. ಉದಾಹರಣೆಗೆ ತಾಲೂಕಾ ಮಟ್ಟದಲ್ಲಿ ವೈದ್ಯನಾಗುವಂತಹ ವ್ಯಕ್ತಿಯು, ಆ ಕ್ಷೇತ್ರದ ರಾಜಕೀಯ ವ್ಯವಸ್ಥೆಯ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲವನಾಗಿರುತ್ತಾನೆ. ತದ್ವಿರುದ್ಧವಾಗಿ, ಸ್ಥಳೀಯ ಬಸ್ ನಿಲ್ದಾಣದಲ್ಲಿ ಕೂಲಿಯಾಗಿ ದುಡಿಯುತ್ತಿರುವ ಆತನ ಬಾಲ್ಯ ಸ್ನೇಹಿತನು, ಆತನು ನಿಯಂತ್ರಿಸಬಹುದಾದ ಕೂಲಿಕಾರರ ಸಂಘವಿಲ್ಲದಿದ್ದಲ್ಲಿ ಅಥವಾ ಅವನ ಪ್ರಭಾವಕ್ಕೆ ಒತ್ತಾಸೆ ಕೊಡುವಂತಹ ಮತ್ತಾವುದಾದರೂ ಪ್ರಬಲ ಕಾರಣವಿಲ್ಲದಿದ್ದಲ್ಲಿ, ಪ್ರಭಾವ ಶಾಲಿಯಾಗಿರುವುದು ಅಸಾಧ್ಯ. ಒಂದು ಜಿಲ್ಲಾ ಮಟ್ಟದಲ್ಲಿ ಇಂಜನಿಯರ್ ಆಗುವಂತಹ ವ್ಯಕ್ತಿಯು

ಆ ಮಟ್ಟದ ಆಡಳಿತ ವ್ಯವಸ್ಥೆಯ ಮೇಲೆ ಗಣನೀಯ ಪ್ರಭಾವ ಬೀರುತ್ತಾನೆ. ಆದರೆ ಒಂದು ಹಳ್ಳಿಯಲ್ಲಿ ಸಿಂಪಿಗನೋ, ಕ್ಷೌರಿಕನೋ ಆಗುವ ಹುಡುಗನು, ಆ ಹಳ್ಳಿಯ ಸಾಮಾಜಿಕ ರಾಜಕೀಯ ವ್ಯವಸ್ಥೆಯ ಮೇಲೆ ಗಣನೀಯ ಪ್ರಭಾವ ಬೀರಲಾರ. ಆದ್ದರಿಂದ, ನಾನಾ ರೀತಿಯ ಸೇವಾವೃತ್ತಿ, ಕಸಬು ಮತ್ತು ಉದ್ಯೋಗಗಳಲ್ಲಿ, ಮಕ್ಕಳು ಯಾವುದನ್ನು ಸೇರುತ್ತಾರೆ ಮತ್ತು ಹೇಗೆ ಸೇರುತ್ತಾರೆ ಎಂಬ ಅಂಶಗಳು, ಸಂಬಂಧ ಪಟ್ಟ ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಅವರು ನಿರ್ವಹಿಸುವ ಪಾತ್ರಗಳ ಮೇಲೆ ನಿರ್ಧಾರಕ ಪ್ರಭಾವ ಬೀರಬಲ್ಲವು. ಆದ್ದರಿಂದ, ಸೇವಾವೃತ್ತಿ, ಕಸಬು ಹಾಗೂ ಉದ್ಯೋಗಗಳು ಮಗುವಿನ ರಾಜಕೀಯ ಸಮಾಜೀಕರಣ ದಲ್ಲಿ ಪ್ರಮುಖ ಅಂಶಗಳೆಂದು ಪರಿಗಣಿಸಬೇಕಾಗುತ್ತದೆ.

ಜೀವನದ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ರಾಜಕೀಯ ಪಕ್ಷಗಳ, ಒತ್ತಡ ಸಮೂಹ ಗಳ ಅಥವಾ ವಿವಿಧ ಸಂಘ ಅಥವಾ ಮಂಡಳಿಗಳ ಸದಸ್ಯತ್ವವು ರಾಜಕೀಯ ವ್ಯವಸ್ಥೆ ಯಲ್ಲಿ ವ್ಯಕ್ತಿಯ ಪಾತ್ರದ ಮೇಲೆ ಮಹತ್ವಪೂರ್ಣ ಪ್ರಭಾವ ಬೀರಬಹುದು. ವಾಸ್ತವಿಕ ಜೀವನದಲ್ಲಿ ಮಕ್ಕಳು ಬೆಳೆದು ವಯಸ್ಕರಾದಾಗ, ರೈತರಾಗುತ್ತಾರೆ, ವ್ಯಾಪಾರಿಗಳಾಗುತ್ತಾರೆ, ರಾಜಕೀಯ ಪಟುಗಳಾಗುತ್ತಾರೆ. ಇಂತಹ ಪಟುಗಳಲ್ಲಿ ಕೆಲವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗುತ್ತಾರೆ, ಕೆಲವರು ಕಮ್ಯುನಿಸ್ಟ ಪಕ್ಷದ ಕೇಂದ್ರ ಕಾರ್ಯ ಕಾರಿಯ ಸದಸ್ಯರಾಗುತ್ತಾರೆ, ಕೆಲವರು ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರಾಗುತ್ತಾರೆ, ಕೆಲವರು ರಾಜ್ಯ ಮಂತ್ರಿಮಂಡಳದ ಸದಸ್ಯರಾಗುತ್ತಾರೆ, ಕೆಲವರು ಕೇಂದ್ರ ಮಂತ್ರಿ ಮಂಡಳದ ಸದಸ್ಯರಾಗುತ್ತಾರೆ. ಆಕಸ್ಮಿಕಗಳ ಅಥವಾ ಪವಾಡಗಳ ಪ್ರಭಾವವನ್ನು ಬಿಟ್ಟರೆ, ಮಂತ್ರಿ, ನ್ಯಾಯಾಧೀಶರುಗಳಾಗುವವರು. ಕಾರ್ಯ ಸಮೂಹಗಳ ನಾಯಕತ್ವ ದಂತಹ ಸ್ಥಾನಗಳನ್ನು ಪಡೆವ ಜನರು, ತಮ್ಮ ಕಾಯಕದಲ್ಲಿ ತೊಡಗಿರುವ ಯಾವದೋ ಮೂಲೆಯ ಹಳ್ಳಿರೈತರು ಅಥವಾ ಅಷ್ಟಾಗಿ ಹೆಸರಿಲ್ಲದ ಯಾವುದೋ ಮುನಿಸಿಪಲ್ ಕಚೇರಿಯಲ್ಲಿರುವ ಕಾರಕೂನರು ಇವರುಗಳಿಗಿಂತ ಹೆಚ್ಚು ಸಾಮಾಜಿಕ ರಾಜಕೀಯ ವ್ಯವಸ್ಥೆಗಳ ಮೇಲೆ ಪ್ರಭಾವ ಬೀರುತ್ತಾರೆ. ಪ್ರಜಾಪ್ರಭುತ್ವದ ಪ್ರಾರಂಭಿಕ ದಿನಗಳಿಗೆ ಮೊದಲು, ರಾಜವಂಶಗಳಿಗೆ ಸೇರಿದ ಹುಡುಗರು ಬಹುಮಟ್ಟಿಗೆ ಎಲ್ಲಾ ಕಾಲದಲ್ಲಿಯೂ, ಅಧಿಕಾರ ಮತ್ತು ಅಂತಸ್ತುಗಳನ್ನು ಪಡೆಯುವ, ಗಳಿಸುವ ಅಥವಾ ಬಳಸುವ ಹಕ್ಕನ್ನು ಅನುವಂಶೀಯವಾಗಿ ಪಡೆದಿರುತ್ತಿದ್ದರು. ರಾಜವಂಶಗಳಿಗೆ ಮನ್ನಣೆ ಯಿಲ್ಲದ ಆಧುನಿಕ ಪ್ರಜಾಪ್ರಭುತ್ವದಲ್ಲಿಯೂ ತಮ್ಮ ಸರಿಸಮಾನರಾದ ಇತರರಿಗಿಂತ, ರಾಜಕುಟುಂಬಕ್ಕೆ ಸೇರಿದವರು ಸಾಮಾನ್ಯವಾಗಿ ಹೆಚ್ಚು ಪ್ರಭಾವಶಾಲಿಗಳಾಗಿರುವದನ್ನು ಕಾಣಬಹುದು. ಉದಾಹರಣೆಗೆ, ಬ್ರಿಟನ್ನಿನ ರಾಜವಂಶಕ್ಕೆ ಸೇರಿರುವುದರಿಂದ ವೇಲ್ಸಿನ ರಾಜಕುಮಾರನು, ಆತನ ವಯಸ್ಸಿನ ಅನೇಕ ಇತರ ತರುಣರಿಗಿಂತ ಹೆಚ್ಚು ಪ್ರಭಾವ ಶಾಲಿಯಾಗಿರುತ್ತಾನೆ. ಹೀಗೆ ಮಕ್ಕಳು ಹುಡುಗರು ಅಥವಾ ವಯಸ್ಕರು ಎಲ್ಲಿ

ಬೆಳೆಯುತ್ತಾರೆ, ಹೇಗೆ ಬೆಳೆಯುತ್ತಾರೆ ಯಾವ ಸ್ಥಾನಮಾನಗಳನ್ನು ಹೊಂದುತ್ತಾರೆ ಎಂಬ ಅಂಶಗಳು, ಸಂಬಂಧಪಟ್ಟ ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಅವರು ಎಂತಹ ಪಾತ್ರಗಳನ್ನು ಎಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುತ್ತಾರೆ ಎಂಬುದರ ಮೇಲೆ ಮಹತ್ವಪೂರ್ಣ ಪ್ರಭಾವ ಬೀರುತ್ತವೆ. ಆದ್ದರಿಂದ ಮಕ್ಕಳು ಅಥವಾ ವಯಸ್ಕರು ಪಡೆದಿರುವ ವಾಸ್ತವಿಕ ಸ್ಥಾನಮಾನಗಳು, ಜೀವಿಸಿರುವ ಸ್ಥಳಗಳು ಹಾಗೂ ನಿರ್ವಹಿಸುವ ಪಾತ್ರಗಳು ಮಗುವಿನ ಸಮಾಜೀಕರಣ ಪ್ರಕ್ರಿಯೆಯಲ್ಲಿ ಪ್ರಮುಖ ಅಂಶಗಳೆಂದು ಪರಿಗಣಿಸಲೇಬೇಕೆಂದು ಹೇಳಬಹುದು.

A Select Bibliography

Balan, K., "Public Participation in Child Welfare" *Social Welfare* (Vol. XX, No. 5, August 1973), pp. 10-12.

Banks, Olive, *Sociology of Education* (London : Batstord 1971).

Bhatt, C. L., *Gifted Children*: Psychological, Sociological and Educational (Allahabad: United Study Publishers, 1973).

Brookover, Wilbus B., *Sociology of Education* (New York: American Book Company, 1955).

Cox, Edwin, *Changing Aims in Religious Education* (London: Routledge, 1966).

D'Evelyn, Katherine E., *Meeting Children's Emotional Needs: A Guide for Teachers* (Englewood-Cliffs, N. J. : Prentice-Hall, 1957).

Durkheim, Emile, *Education and Sociology* (Translated by Sherwood D. Fox, (Illinois : Free Press, 1956).

Erikson, Erik H., *Childhood and Society* (New York: Norton, 1963).

Gardner, D. Bruce, *Development in Early Childhood* (New York : Harper, 1965).

Gore, M. G., "The Children's Aid Society," *Social Welfare* (Vol. XXI, Nos. 3-4, January-July 1974), pp. 46-48.

King, Edmund J., *Education and Social Change* (Oxford : Pergamon Press, 1966).

Mannheim, Karl and Stewart, W.A.C., *Introduction to the Sociology of Education* (London: Routledge, 1970).

Mc Dougall, William; *Introduction to Social Psychology* (London: Methuen, 1950)

Mussen, Paul Henry (editor); *Handbook of Research Methods in Child Development* (New Delhi : Wiley Eastern, 1970).

Pandey, Rama S., *Child Socialization in Modernization* (Bombay: Somariya, 1977).

Piaget, Jean; *Moral Judgement of the Child* (Transla:ed by Marjorie Gabain; London: Routledge, 1950).

Russell, Bertrand, *Education and Social Order* (London: Allen and Unwin, 1977).

Saiyidain, K. G., *Education, Culture and the Social Order* Bombay: Asia, 1958).

Saxena, Shakuntala, *Sociological Perspectives in Indian Education*; New Delhi: Ashajanak Publications, 1975).

Sears, Robert R., Rau, Lucy and Alpert, Richard, *Identification and Child Rearing* (London: Tavistock Publications, 1966).

Shah, S. M., "Integrated Child Development Projects" *Yojana* (Vol. XXII, No. 13, July), pp. 15–17.

Stacey, Barrie, *Political Socialisation in Western Society* (London: Arnold-Heinmann, 1978).

Varma, Paripurnanand, "The Neglected Child," *Social Welfare* Vol. XXI, No. 2, May 1974), pp. 1–2.

Weinberg, Carl, *Education and Social Problems* (New York: Free Press, 1971).

ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳ ಪಾಲನೆ-ಪೋಷಣೆ.

● ಎನ್. ಕೆ. ಕಡೆತೋಟದ

ಇಂದಿನ ಬಾಲಕರು ನಾಳಿನ ಪಾಲಕರು. ಬಾಲಕರು ರಾಷ್ಟ್ರದ ಮಹಾ ಸೊತ್ತು. ಅವರ ಏಳಿಗೆಯೇ ರಾಷ್ಟ್ರದ ಏಳಿಗೆ. ಯಾವ ರಾಷ್ಟ್ರದಲ್ಲಿ ಮಕ್ಕಳು ನಿರ್ಲಕ್ಷಿಸಲ್ಪಡುವರೋ ಆ ರಾಷ್ಟ್ರವು ಮಹಾನ್ ರಾಷ್ಟ್ರವಾಗಲಾರದು. ಆದ್ದರಿಂದ ನಮ್ಮ ರಾಷ್ಟ್ರವು ಮುಂದುವರಿಯಬೇಕಾದರೆ ನಮ್ಮ ಮಕ್ಕಳು ಬಲಶಾಲಿಯಾಗಬೇಕು. ಹೀನವಾದ ಪರಿಸ್ಥಿತಿಯಲ್ಲಿರುವ ಮಕ್ಕಳು ಬಲಶಾಲಿಯಾದ ಪಾಲಕರಾಗಲಾರರು. ನಮ್ಮ ದೇಶದಲ್ಲಿ ಮಕ್ಕಳ ಬಗ್ಗೆ ಇರುವ ಅನಾಸ್ಥೆ, ಅಜ್ಞಾನ ಮತ್ತು ನಿರ್ಲಕ್ಷ್ಯ ನಮಗೆ ನಿಜಕ್ಕೂ ಒಂದು ಮಹಾ ಸಮಸ್ಯೆಯಾಗಿದೆ. ನಮ್ಮ ದೇಶದಲ್ಲಿ ಬಾಲಕರ ಪ್ರತಿಶತ ಮರಣದ ಸಂಖ್ಯೆ ಹೆಚ್ಚಾಗಿಯೇ ಉಳಿದಿದೆ. ಇವೆಲ್ಲ ಅಂಶಗಳು ನಮ್ಮ ದೇಶದಲ್ಲಿ ಮಕ್ಕಳ ಪಾಲನೆ ಪೋಷಣೆಯ ನಿಜಸ್ಥಿತಿಗಳನ್ನು ತೋರಿಸುತ್ತವೆ. ನಮ್ಮ ದೇಶದಲ್ಲಿ ನಿರಕ್ಷರತೆ, ಬಡತನ ಮತ್ತು ಅಜ್ಞಾನದ ಅವಸ್ಥೆಗಳು ಮುಂದುವರಿದಿರುವುದಲ್ಲದೆ ಮೂಢ ನಂಬಿಕೆಗಳು, ಸಾಂಪ್ರದಾಯಿಕ ಮಕ್ಕಳ ಪಾಲನೆಯ ಪದ್ಧತಿಗಳು ಸಹಿತ ಮಕ್ಕಳ ಕಲ್ಯಾಣದಲ್ಲಿ ಕುಠಾರಪ್ರಾಯವಾದ ಪರಿಸ್ಥಿತಿಗಳಾಗಿ ಇವೆ. ಆದ್ದರಿಂದ ಈ ಲೇಖನದಲ್ಲಿ ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿಯ ಮಕ್ಕಳ ಪಾಲನೆಯ ಹಾಗೂ ಪೋಷಣೆಯ ಚಿತ್ರವನ್ನು ವಿವರಿಸಿ ನಿಜಸ್ಥಿತಿಯನ್ನು ಪ್ರಸ್ತುತ ಪಡಿಸಿ ಅದನ್ನು ಯಾವ ರೀತಿಯಲ್ಲಿ ಸುಧಾರಿಸಬಹುದಾಗಿದೆ ಎಂದು ತಿಳಿಯುವ ಉದ್ದೇಶದಿಂದ ಸಂಗತಿಗಳನ್ನು ಕಲೆ ಹಾಕಿ ವಿವರಿಸಲಾಗಿದೆ. ಸಂಗತಿಗಳನ್ನು ಮಾನವಶಾಸ್ತ್ರದ ರೀತಿಗಳ ಆಧಾರದ ಮೇಲೆ ಕಲೆಹಾಕಿ ಅವುಗಳನ್ನು ಶಾಸ್ತ್ರೀಯವಾಗಿ ವಿವರಿಸುವ ಪ್ರಯತ್ನಮಾಡಲಾಗಿದೆ.

ಮಕ್ಕಳ ಪಾಲನೆಯ ವಿಷಯದಲ್ಲಿ ವಿಭಿನ್ನ ಜನಾಂಗಗಳಲ್ಲಿ ವಿಭಿನ್ನ ಪದ್ಧತಿಗಳಿವೆ. ಆಯಾ ಗೋತ್ರಗಳು (Ethnic groups) ತಮ್ಮ ಸಂಸ್ಕೃತಿಯ ಪರಿಸರದಲ್ಲಿ ಮಕ್ಕಳ ಪಾಲನೆ ಪೋಷಣೆಯ ಪದ್ಧತಿಗಳನ್ನು ವಿಶಿಷ್ಟ ರೀತಿಯಲ್ಲಿ ಬೆಳೆಯಿಸಿಕೊಂಡಿರುತ್ತವೆ. ಆದರೆ ಮಕ್ಕಳ ಪೋಷಣೆಯು ತಂದೆ ತಾಯಿಗಳಲ್ಲಿರುವ ಒಂದು ಸಹಜ ಪ್ರವೃತ್ತಿ

(Instinct) ಇರಬಹುದು. ಯಾಕೆಂದರೆ ಪಕ್ಷಿ ಪ್ರಾಣಿಗಳು ಬಹುತರವಾಗಿ ತಮ್ಮ ಮಕ್ಕಳ ಪಾಲನೆ ಪೋಷಣೆಯ ಬಗ್ಗೆ ಕಾಳಜಿವಹಿಸುತ್ತವೆ. ಮಾನವನೂ ಮೂಲತಃ ಒಂದು ಪ್ರಾಣಿಯಾಗಿರುವದರಿಂದ ಅವನಲ್ಲಿ ಒಂದು ಅಂತಹ ಮಾನಸಿಕ-ದೈಹಿಕ ಮೂಲ ಪ್ರವೃತ್ತಿ (Instinct) ಇದ್ದಿರಲೇಬೇಕು. ಕೆಲವು ಪ್ರಾಣಿಗಳು ತಮ್ಮ ಪೀಳಿಗೆಯನ್ನು ತಿಂದು ಜೀವಿಸುವಲ್ಲಿ ಇಲ್ಲವೆ ಬದಿಕುಳಿಯುವಲ್ಲಿ ಹಿಂದೆ ಮುಂದೆ ನೋಡುವದಿಲ್ಲ. ಆದರೆ ಮಾನವನು ಒಂದು ಪ್ರಾಣಿಯಾಗಿದ್ದರೂ ಉಳಿದ ಪ್ರಾಣಿಗಳಿಗಿಂತ ಸಂಸ್ಕೃತಿಯಲ್ಲಿ, ವಿಚಾರದಲ್ಲಿ, ಧರ್ಮದಲ್ಲಿ, ವಾಕ್ ಶಕ್ತಿಯಲ್ಲಿ, ಸಾಧನೆ ಸಲಕರಣೆಗಳನ್ನು ನಿರ್ಮಿಸುವಲ್ಲಿ ಮತ್ತೆ ಇನ್ನೂ ಅನೇಕ ರೀತಿಗಳಲ್ಲಿ ಅವನು ಬಹು ಭಿನ್ನವಾಗಿದ್ದಾನೆ. ಮಾನವ ಸಮಾಜದಲ್ಲಿ ಮಕ್ಕಳನ್ನು ಪಾಲನೆ ಪೋಷಣೆ ಮಾಡುವ ವಿಭಿನ್ನ ಪದ್ಧತಿಗಳು ಬೇರೆ ಬೇರೆ ಸಮಾಜಗಳಲ್ಲಿ ವಿವಿಧ ರೀತಿಗಳಿಂದ ಬೆಳೆದು ಬಂದಿವೆ. ತಾಯಿಯು ಮಕ್ಕಳನ್ನು ಪೋಷಿಸುವದು ಒಂದು ವಿಜ್ಞಾನವಾಗಿ ಮತ್ತು ಕಲೆಯಾಗಿ ಮಾನವ ಸಮಾಜಗಳಲ್ಲಿ ಬೆಳೆಯುತ್ತಿದೆ. ಮಾನವನ ಸಂಸ್ಕೃತಿ ಬೆಳೆದಂತೆ ಅವನ ಮಕ್ಕಳ ಪಾಲನೆ ಪೋಷಣೆಯ ಬಗ್ಗೆ ಕ್ಲಿಷ್ಟವಾದ ವಿಚಾರಗಳು, ಪದ್ಧತಿಗಳು ಮತ್ತು ಸಮಸ್ಯೆಗಳು ತಲೆ ಎತ್ತಿವೆ. ಆದ್ದರಿಂದ ನಾವು ಈ ವಿಷಯವನ್ನು ಇಂದು ಒಂದು ಮಹತ್ವದ ಸಮಸ್ಯೆ ಎಂದು ತಿಳಿದು ಆದರ ಬಗ್ಗೆ ಆಲೋಚಿಸಬೇಕಾಗಿದೆ.

ಒಂದು ರೀತಿಯಿಂದ ಮಗುವಿನ ಬೆಳವಣಿಗೆ ತಾಯಿಯ ಗರ್ಭದಲ್ಲಿಯೇ ಆರಂಭವಾಗುತ್ತದೆ. ಇಷ್ಟೇ ಅಲ್ಲ ಅನೇಕ ದೈಹಿಕ ಗುಣಗಳಲ್ಲಿ ಪೂರ್ವಜರ ವಂಶ ಪರಂಪರಾಗತ ಅಂಶಗಳನ್ನು ಹೊಂದಿಕೊಂಡಿರುತ್ತದೆ. ಮಕ್ಕಳನ್ನು ಹೊರುವದು, ಹೆರುವದು ನಂತರ ಅವರ ಪಾಲನೆ ಪೋಷಣೆ ಮಾಡುವುದು ಮುಂತಾದ ಕೆಲಸವೆಲ್ಲ ಸ್ತ್ರೀಯರ ಮೇಲಿದೆ. ದೈಹಿಕ ಶಾಸ್ತ್ರದ ಸತ್ಯದ ಪ್ರಕಾರ ಗಂಡಸರು ಮಕ್ಕಳನ್ನು ಹೆರುವದು ಹೇಗೆ ಅಸಾಧ್ಯವೋ ನಮ್ಮ ಸಮಾಜದಲ್ಲಿ ಅಷ್ಟೇ ಅಸಾಧ್ಯವಾದ ಕೆಲಸವೆಂದರೆ ಮಕ್ಕಳನ್ನು ಪೋಷಿಸುವದು. ನಮ್ಮ ಸಮಾಜದಲ್ಲಿ ಮಕ್ಕಳಿಗೆ ಜನ್ಮ ಕೊಟ್ಟಾಗಲೇ ಸ್ತ್ರೀಯರಿಗೆ ಗಂಡನ ಮನೆಯು ಸ್ಥಿರವಾಗುವಂತೆ. ಮಕ್ಕಳಿಲ್ಲದ ದಂಪತಿಗಳು ಸಹಿತ ಜನರ ಅವಹೇಳನೆಗೆ ಮತ್ತು ಲಿಂಗ ಅಶಕ್ತತೆಯ ಅಥವಾ ನಪುಂಸಕತೆಯ ಅವಹೇಳನೆಗೆ ಗುರಿಯಾಗುತ್ತಾರೆ. ಮಕ್ಕಳನ್ನು ಹಡೆಯುವ ಸಲುವಾಗಿ ದೇವರ ಪೂಜೆಗೆ ಮತ್ತು ಮಾಂತ್ರಿಕತೆಗೆ ಶರಣು ಹೋಗುವದು, ಮೂಢ ನಂಬಿಕೆಗಳಿಗೆ ತುತ್ತಾಗುವದು ಮುಂತಾದ ಕೃತ್ಯಗಳಲ್ಲಿ ತೊಡಗುತ್ತಾರೆ. ಮಕ್ಕಳಿಲ್ಲದ ಸ್ತ್ರೀಗೆ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಸ್ಥಾನವಿರುವದಿಲ್ಲ.

ಮಕ್ಕಳ ಪಾಲನೆಯಲ್ಲಿ ಸ್ತ್ರೀಯರ ಪಾತ್ರ :

ಮಕ್ಕಳ ಜೀವನದಲ್ಲಿ ಸ್ತ್ರೀಯರ ಪಾತ್ರ ಹಿರಿದಾದುದು ಮತ್ತು ನೇರವಾದುದು. ತಂದೆಯ ಪಾತ್ರ ಮಹತ್ವದ್ದಾದರೂ ನೇರವಾದುದಲ್ಲ. ಅದ್ದರಿಂದ ತೊಟ್ಟಿಲ

ತೂಗುವ ಕೈ ಸ್ತ್ರೀಯಳದೇ ಆಗಿದೆ. ಮಕ್ಕಳನ್ನು ಹೆತ್ತ ನಂತರ ದೈಹಿಕವಾಗಿ ಮಗು ಮತ್ತು ಸ್ತ್ರೀ ಬೇರೆಯಾದರೂ ಅದು ಮೊಲೆಯುಣಿಸುವ ಕಾರ್ಯದಲ್ಲಿ ದೈಹಿಕ ಜೋಡಣೆಯ ಮುಂದುವರಿಕೆಯೇ ಆಗಿದೆ. ಹೆತ್ತ ನಂತರ ಮಗು ಸಮಾಜದ ಸೊತ್ತು, ಮನೆಯ ಸೊತ್ತು. ಮಾನವ ಗೋತ್ರಗಳ (Ethnic groups) ಸೊತ್ತು. ತಂದೆ ಆರ್ಥಿಕವಾಗಿ, ಅಪರೋಕ್ಷವಾಗಿ ಮಗುವಿನ ಆರೈಕೆ ನೋಡಿಕೊಳ್ಳುವವ. ಗ್ರಾಮ ಜೀವನದಲ್ಲಿ ಮಗುವಿನ ಪಾಲನೆ ಪೋಷಣೆ ಮಾಡುವ ಹೊಣೆ ಬಹು ರೀತಿಗಳಿಂದ ತಾಯಿಯದು. ಅದಕ್ಕೆ ಅಪರೋಕ್ಷ ರೀತಿಯ ಸಹಾಯಕರು ಕುಟುಂಬದ ಇತರ ಸದಸ್ಯರು. ಮಗು ಹುಟ್ಟಿದ ಜಾತಿ, ನೆರೆ ಹೊರೆ, ಬಂಧು ಬಾಂಧವರು, ಗ್ರಾಮದ ಸಂಸ್ಕೃತಿ ಇವು ಎಲ್ಲ ಬಾಲಕರ ಮೇಲೆ ಒಂದಿಲ್ಲ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿಯೇ ಬೀರುತ್ತವೆ.

ಭಾರತದ ಗ್ರಾಮಗಳಲ್ಲಿ ಮಗು ಹುಟ್ಟಿದ ಕೂಡಲೇ ಅವನ ಭವಿಷ್ಯ ನಿರ್ಣಯದ ಅನೇಕ ದೇವತೆಗಳ ಪೂಜೆ ನಡೆಯುತ್ತದೆ. ಮಗುವಿನ ಜನನದ ನಂತರ ಬಿದ್ದ ಮಾಂಸವನ್ನು ಹುಗಿಯುವ ಕಾರ್ಯವು ಸಹಿತ ಇಂಥ ಅನೇಕ ನಂಬಿಕೆಗಳ ಆಧಾರದ ಮೇಲೆ ನಡೆಯುತ್ತದೆ. ಸ್ತ್ರೀಯು ಮಾಂಸವನ್ನು ಹಿತ್ತಲದಲ್ಲಿ ಅಥವಾ ಹೊಸ್ತಿಲದಲ್ಲಿ ಹುಗಿಯುವ ಪದ್ಧತಿ ಹೆಚ್ಚು. ಕೊಡಗು ಜನರು ತಮ್ಮ ಮಕ್ಕಳ ನಾಭಿಯ ನರಸಂಬಂಧಗಳನ್ನು ಕೊಯ್ದು ಶಾಲೆಯ ಅಂಗಳದಲ್ಲಿ ಹುಗಿಯುತ್ತಾರೆ. ಏಕೆಂದರೆ ತಮ್ಮ ಮಗು ವಿದ್ಯಾಭ್ಯಾಸದಲ್ಲಿ ಮುಂದುವರಿಯಬೇಕೆಂದು. ತಮ್ಮ ಮಕ್ಕಳು ಬಿಳಿಯ ಬಣ್ಣದವರಾಗಬೇಕೆಂದು ಕೆಲವು ವೀರಶೈವ ಸ್ತ್ರೀಯರು ತಾಯಂದಿರಾಗುವ ಹೆರಿಗೆಯ ಪೂರ್ವದಲ್ಲಿ ವಿಭೂತಿಯನ್ನು ತಿನ್ನುತ್ತಾರೆ. ಬಯಕೆಯ ತಿಂಡಿಗಳನ್ನು ತಿನ್ನದಿದ್ದರೆ ತಮ್ಮ ಮಗು ದೈಹಿಕ ಊನತೆಗಳಿಗೆ ಗುರಿಯಾಗುವದೆಂದು ನಂಬುತ್ತಾರೆ. ಆದರೆ ಅವರು ಸಶಕ್ತ ಆಹಾರಗಳನ್ನು ಅಥವಾ ವೈದ್ಯಕೀಯ ಆಹಾರವನ್ನು ಸೇವಿಸುವಲ್ಲಿ ಮುಂದಾಗುವದಿಲ್ಲ. ಆದ್ದರಿಂದ ಬಯಕೆಯ ತಿಂಡಿಗಳನ್ನು ತಿನ್ನುವದು ಅನಿವಾರ್ಯವೆಂದು ಮನಸ್ಸಿಗೆ ಬಂದದ್ದನ್ನು ಮನಬಂದಂತೆ ತಿನ್ನುತ್ತಾರೆ. ಮತ್ತು ಬಯಕೆಯ ತಿಂಡಿ ತಿನ್ನುವ ಪದ್ಧತಿಯು ಮಣ್ಣು, ಕಲ್ಲು ಮುಂತಾದ ಪದಾರ್ಥಗಳನ್ನು ಸಹಿತ ತಿನ್ನಲಿಕ್ಕೆ ಅನುವು ಮಾಡಿ ಕೊಡುತ್ತದೆ. ಮೂಢ ನಂಬಿಕೆಯಿಂದ ಎಲ್ಲವನ್ನೂ ತಿನ್ನುತ್ತಾರೆ. ಇದು ಅವರಿಗೆ ಒಂದು ನೈಸರ್ಗಿಕ ಪದ್ಧತಿಯೇ ಆಗಿದೆ. ನಮ್ಮ ದೇಶದಲ್ಲಿ ಗರ್ಭಿಣಿಯರು ಏನು ತಿನ್ನಬೇಕು ಮತ್ತು ಏನು ತಿನ್ನಬಾರದು ಎಂಬುದಕ್ಕೆ ಸಾಂಪ್ರದಾಯಿಕ ಪದ್ಧತಿಗಳು ಮಾರ್ಗದರ್ಶನವನ್ನು ಕೊಡುತ್ತವೆ. ಕೆಲವು ಆಹಾರ ಪದಾರ್ಥಗಳು ಗರ್ಭಿಣಿ ಸ್ತ್ರೀಯರಿಗೆ ಗರ್ಭಪಾತವನ್ನು ಕೊಡುವಲ್ಲಿ ನೆರವಾಗುತ್ತಿದ್ದರೆ ಅಂಥವುಗಳನ್ನು ವರ್ಜ ಮಾಡುತ್ತಾರೆ. ಗರ್ಭಪಾತ ಮಾಡುವ ಶ್ರಮದ ಕೆಲಸಗಳನ್ನು ಬಿಡುತ್ತಾರೆ. ಬಡವರು ಹಾಗೆಯೇ ಮುಂದುವರಿಸುತ್ತಾರೆ. ಒಮ್ಮೆ ಮಾನವ ಶಾಸ್ತ್ರದ ಸಂಶೋಧಕರೊಬ್ಬರು ಒಂದು ಹಳ್ಳಿಯಲ್ಲಿ ಸಂಶೋಧ

ನೆಯ ಕೆಲಸದಲ್ಲಿ ತೊಡಗಿದ್ದಾಗ ಮಧ್ಯಾಹ್ನ ಒಬ್ಬ ಸ್ತ್ರೀಯು ಹೆರುವ ಬೇನೆಗಳಿಗೆ ತುತ್ತಾದಳು. ಆಗ ಆ ಸಂಶೋಧಕರು ಅಲ್ಲಿಂದ ಬೇರೆ ಕೆಲಸಕ್ಕೆ ಹೋಗಿ ಸಂಜೆ ತಿರುಗಿ ಬರುವಾಗ ಹೆತ್ತ ಸ್ತ್ರೀಯು ತನ್ನ ಬಟ್ಟೆಗಳನ್ನು ಕೆರೆಯಲ್ಲಿ ಒಗೆದುಕೊಂಡು ತಿರುಗಿ ಮನೆಗೆ ಹೋಗುತ್ತಿರುವದು ಕಂಡುಬಂದಿತು. ಈ ಪ್ರಕಾರವಾಗಿ ಹೆರಿಗೆಯ ನಂತರ ವಿಶ್ರಾಂತಿ ಮತ್ತು ಗರ್ಭಿಣಿಯರಿಗೆ ಸಿಗಬೇಕಾದ ಸೌಲಭ್ಯಗಳು ನಮ್ಮ ದೇಶದಲ್ಲಿ ಸರಿಯಾಗಿ ಸಿಗುತ್ತಿರುವದಿಲ್ಲ. ಆದ್ದರಿಂದ ನಮ್ಮ ಮಕ್ಕಳ ಆರೈಕೆ ಸರಿಯಾಗಿ ಆಗುವದಿಲ್ಲ.

ಗರ್ಭಿಣಿಯರು ಮತ್ತು ಸೂಲಗಿತ್ತಿಯರು :

ನಮ್ಮ ದೇಶದಲ್ಲಿ ಸಾಂಪ್ರದಾಯಿಕ ಸೂಲಗಿತ್ತಿಯರು ಗರ್ಭಿಣಿಯರಿಗೆ ಹೆರುವಲ್ಲಿ ನೆರವಾಗುತ್ತಾರೆ. ಅವರಿಗೆ ತಮ್ಮ ಅನುಭವದ ಉಪದೇಶಗಳನ್ನು ಕೊಡುತ್ತಾರೆ. ಈ ಸೂಲಗಿತ್ತಿಯರು ಮೂಢ ನಂಬಿಕೆಗಳಿಗೆ ಒಳಗಾಗಿ ಹೆರಿಗೆಯ ಸಮಯದಲ್ಲಿ ಒಮ್ಮೊಮ್ಮೆ ಮಕ್ಕಳ ಕತ್ತು ಹಿಚುಕಿ ಕೊಲ್ಲುತ್ತಾರೆ. ಈ ಪ್ರಕಾರವಾಗಿ ಎಷ್ಟೋ ಸಲ ಒಳ್ಳೆಯ ಮಕ್ಕಳು ನಮ್ಮ ದೇಶದಲ್ಲಿ ಸತ್ತಿರಬೇಕು ಮತ್ತು ಸಾಯುತ್ತಿರಬೇಕು. ಈ ಸೂಲಗಿತ್ತಿಯರ ಹತ್ತಿರ ಯಾವ ಸಾಧನ ಸೌಕರ್ಯಗಳೂ ಇರುವದಿಲ್ಲ. ಮಗುವಿನ ನಾಭಿಯ ಹುರಿಯನ್ನು ಕೊಯ್ಯುವಾಗ ತುಕ್ಕು ಹತ್ತಿದ ಕುಡುಗೋಲನ್ನೋ ಅಥವಾ ಚಾಕುವನ್ನೋ ಉಪಯೋಗಿಸುತ್ತಾರೆ. ಹೆರುವ ಹೆಣ್ಣು ಮಕ್ಕಳಿಗೆ ಒಮ್ಮೊಮ್ಮೆ ಪ್ರತ್ಯೇಕ ಕೋಣೆಗಳೇ ಇರುವದಿಲ್ಲ. ಅಂಥ ಸಂದರ್ಭಗಳಲ್ಲಿ ತಾತ್ಕಾಲಿಕ ಪರದೆಯನ್ನು ಉಪಯೋಗಿಸುತ್ತಾರೆ. ಒಮ್ಮೊಮ್ಮೆ ಅದಕ್ಕೂ ಕೊರತೆಯಾದಾಗ ಹೆರುವ ಹೆಣ್ಣು ಮಕ್ಕಳು ನಾಚಿಕೆಯಿಂದ ತಮ್ಮ ಹೆರುವ ಕಾರ್ಯವನ್ನು ತೊಂದರೆಯಿಂದ ನಿರ್ವಹಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಮಗುವನ್ನು ಹೆರುವ (child-birth practices) ಅನೇಕ ಪದ್ಧತಿಗಳು ಆಯಾ ಜಾತಿ ಜನಾಂಗಗಳಲ್ಲಿ ವಿಶಿಷ್ಟವಾಗಿ ಬೆಳೆದು ಬಂದಿವೆ. ಮಕ್ಕಳನ್ನು ಹೊಲದಲ್ಲಿಯೇ ಹೆತ್ತ ಅನೇಕ ಸ್ತ್ರೀಯರನ್ನು ಗ್ರಾಮದ ಜನರು ಬಲ್ಲರು. ಹೆರುವ ಬೇನೆಗಳನ್ನು ತಾಳಲಾರದೇ ಸತ್ತ ಅನೇಕ ಉದಾಹರಣೆಗಳಿವೆ. ಏಕೆಂದರೆ ಹಳ್ಳಿಯಲ್ಲಿ ಶಸ್ತ್ರ ಚಿಕಿತ್ಸೆಕೊಡುವಲ್ಲಿ ನಿಪುಣರಾದವರು ಯಾರೂ ಇರುವದಿಲ್ಲ. ಅಲ್ಲಿ ಸಿಗುವದು ಕೇವಲ ನೈಸರ್ಗಿಕ ಚಿಕಿತ್ಸೆ !

ಮಾನವ ಶಾಸ್ತ್ರದ ಒಬ್ಬ ಸಂಶೋಧಕರು ಒಂದು ಗ್ರಾಮದ ಹೆರುವ ಪದ್ಧತಿಯ ವಿವರಣೆಯನ್ನು ಈ ರೀತಿ ಕೊಡುತ್ತಾರೆ. ಹೆರುವ ಸ್ತ್ರೀಯು ತನ್ನ ಎರಡೂ ಕಾಲುಗಳನ್ನು ಅಗಲವಾಗಿಟ್ಟು ಕುಳಿತುಕೊಳ್ಳುತ್ತಾಳೆ. ಸಾಮಾನ್ಯವಾಗಿ ಹಳ್ಳಿಯಲ್ಲಿ ಹೀಗೆ ಕೂಡುವ ಪದ್ಧತಿ ನಡೆಯುವಾಗ ಕೂಡುವ ಪದ್ಧತಿ ಎಂದೇ ಕರೆಯುತ್ತಾರೆ. ಅವಳ ಮುಂದೆ ಸೂಲಗಿತ್ತಿಯು ಕುಳಿತುಕೊಳ್ಳುತ್ತಾಳೆ. ಮಗುವು ಸ್ತ್ರೀಯ ಜನನಾಂಗದಿಂದ ಪೂರ್ತಿ ಹೊರಬರುವಲ್ಲಿ ಸಹಾಯಕಳಾಗಿ, ಮಗುವಿನ ನಾಭಿಯಿಂದ ಜೋಡಿತವಾದ

ಹುರಿಯನ್ನು ಕೊಯ್ದು ಮಗುವನ್ನು ದೈಹಿಕವಾಗಿ ಬೇರ್ಪಡಿಸುತ್ತಾಳೆ. ಸೂಲಗಿತ್ತಿಯು ಮಗುವನ್ನು ಬಿಸಿನೀರಿನಿಂದ ತೊಳೆಯುತ್ತಾಳೆ. ಮೊದಲು ಮೂಗು, ಕಣ್ಣು, ಕಿವಿ ಮತ್ತು ಬಾಯಿಗಳನ್ನು ತೊಳೆಯುತ್ತಾಳೆ. ಮಗುವನ್ನು ಒಂದು ಮೆತ್ತಗಿನ ಬಟ್ಟೆಯಲ್ಲಿ ಸುತ್ತಿ ಒಂದು ಬಿದಿರಿನ ಮೊರದಲ್ಲಿ ಇಡುತ್ತಾಳೆ. ಅದೇ ಮೊರದಲ್ಲಿ ಅಕ್ಕಿಯನ್ನೂ ಇಟ್ಟಿರುತ್ತಾರೆ. ಇದು ಫಲವತ್ತತೆಯ ಚಿಹ್ನೆ (Fertility Ritual) ಸದ್ಯೋಜಾತ ಮಗುವಿಗೆ ಔಡಲ ಎಣ್ಣೆಯನ್ನು ಮತ್ತು ಜೇನು ತುಪ್ಪವನ್ನು ನೀಡಿಸುತ್ತಾರೆ. ಎರಡನೆಯ ಅಥವಾ ಮೂರನೆಯ ದಿವಸ ತಾಯಿಯ ಮೊಲೆಹಾಲನ್ನು ಕೊಡಲಾಗುವದು. ೧೧ ದಿವಸಗಳವರೆಗೆ ತಾಯಿಯು ಹೊಲೆಯಾಗಿರುತ್ತಾಳೆ. ಇಂಥ ದಿನಗಳಲ್ಲಿ ಊರಿನ ಸಾಂಪ್ರದಾಯಿಕ ಬಟ್ಟೆ ಒಗೆಯುವವರೇ (ಅಗಸರು) ಮಗುವಿನ ಹಾಗು ತಾಯಿಯ ಬಟ್ಟೆಗಳನ್ನು ಒಗೆಯುತ್ತಾರೆ. ಆದರೆ ಚಿಕಿತ್ಸಾಲಯ (Maternity Homes)ದಲ್ಲಿ ಹಡೆಯುವ ಸ್ತ್ರೀಯರಿಗೆ ವೈಜ್ಞಾನಿಕವಾಗಿ ಆರೈಕೆಯನ್ನು ಒದಗಿಸಲಾಗುವದು. ಅಲ್ಲಿ ಹಡೆಯುವ ತಾಯಂದಿರು ಮೇಜಿನ ಮೇಲೆ ಸುಸಜ್ಜಿತವಾದ ಸ್ಥಿತಿಯಲ್ಲಿ ಮಲಗಿಕೊಂಡು ಹೆರುವ ಕಾರ್ಯವನ್ನು ಪೂರೈಸುವರು ಆದ್ದರಿಂದ ಅಲ್ಲಿ ಜನನವಾಗುವ ಮಕ್ಕಳ ಮರಣ (Still–births) ಪ್ರಮಾಣ ಕಡಿಮೆ.

ಸದ್ಯೋಜಾತ ಮಕ್ಕಳಿಗೆ ಸ್ನಾನಮಾಡಿಸುವದು ಮತ್ತು ಹೆತ್ತ ತಾಯಂದಿರಿಗೆ ಸ್ನಾನಮಾಡಿಸುವದು ವಿಶಿಷ್ಟವಾದ ರೀತಿಯಲ್ಲಿ ಬೆಳೆದು ಬಂದಿವೆ. ಅದರಲ್ಲಿ ನಿಪುಣರಾದ ಸೂಲಗಿತ್ತಿಯರು ಅಥವಾ ಬೇರೆ ಹೆಂಗಸರು ಈ ಕಾರ್ಯ ಮಾಡುತ್ತಾರೆ. ಮಕ್ಕಳ ನೆತ್ತಿ, ಕಿವಿ. ಕಣ್ಣು ಮತ್ತು ಮೂಗುಗಳಲ್ಲಿ ಕೊಬ್ಬರಿ ಎಣ್ಣೆಯಿಂದ ತೊಳೆದು ಸ್ನಾನ ಮಾಡಿಸುತ್ತಾರೆ. ವಿವಿಧ ಅಂಗಗಳನ್ನು ತಿದ್ದುವ (articulation) ಇಲ್ಲವೆ ತಿಕ್ಕುವ (massage) ಕಾರ್ಯವನ್ನು ಇಂಥ ಪರಿಣಿತ ಹೆಂಗಸರೇ ಮಾಡುತ್ತಾರೆ. ನವಜಾತ ಶಿಶುಗಳ ತಲೆ ತಿಕ್ಕಿ ಮತ್ತು ಮೂಗನ್ನು ಜಗ್ಗಿ ಅವಕ್ಕೆ ರೂಪಕೊಡುತ್ತಾರೆ. ಹೆತ್ತ ತಾಯಂದಿರು ಎರಡನೆಯ ಮೂರನೆಯ ದಿವಸದಿಂದ ಸಾಮಾನ್ಯವಾಗಿ ಸ್ನಾನ ಮಾಡಲು ಪ್ರಾರಂಭಿಸುತ್ತಾರೆ. ಹೆತ್ತ ತಾಯಂದಿರಿಗೆ ಹಸಿ ಮೈಯವರು ಎಂದು ಕರೆಯುತ್ತಾರೆ. ಅವರಿಗೆ ಉಷ್ಣ ಆಹಾರವನ್ನು ಮತ್ತು ಒಮ್ಮೊಮ್ಮೆ ಚೇತನ ಬರುವ ಬ್ರ್ಯಾಂಡಿ ಮೊದಲಾದ ದ್ರವಗಳನ್ನು ಪೂರೈಸುತ್ತಾರೆ. ಬಡವರಾದ ಹೆತ್ತ ತಾಯಂದಿರು ದೇಶೀಯ ಶೆರೆಯನ್ನು ಸಹಿತ ಕುಡಿಯಬಹುದು. ಸೂಲಗಿತ್ತಿಯರು ಹೆತ್ತ ತಾಯಂದಿರಿಗೆ ಕೊಬ್ಬರಿ ಎಣ್ಣೆಯನ್ನು ಅರಿಷಿಣ ಪುಡಿಯಲ್ಲಿ ಮಿಶ್ರಮಾಡಿ ಮೈ ತಿಕ್ಕಿ (massage) ಬಹಳ ಬಿಸಿಯಾದ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಇಂಥ ಸ್ನಾನದಿಂದ ಸಡಿಲಾದ ಅವರ ಜನನಾಂಗಗಳು ಬಿಗಿಯಾಗುತ್ತವೆಂದು ಭಾವಿಸುತ್ತಾರೆ. ಅವರಿಗೆ ಅಗ್ಗಿಷ್ಟಿಗೆಗಳನ್ನು ಒದಗಿಸಿ ನಿವಸ್ತ್ರರನ್ನಾಗಿಸಿ ಮೊರಗಿನ ಮೇಲೆ ಮಲಗಿಸಿ ಮೈಗೆ ಕಾವು ಕೊಡುತ್ತಾರೆ. ಸಾಮಾನ್ಯವಾಗಿ ಇಂಥ ಕಾವು ಕೊಡುವುದನ್ನು ಡಾಕ್ಟರರು ಒಪ್ಪ

ದಿದ್ದರೂ ಅನೇಕ ಸಾಂಪ್ರದಾಯಿಕ ಪದ್ಧತಿಗಳನ್ನು ನಂಬುವ ಜನರು ಇಂಥ ಪದ್ಧತಿ ಅವಶ್ಯವೆಂದು ತಿಳಿಯುತ್ತಾರೆ. ಇನ್ನೂ ಅನೇಕ ದೇಶೀಯ ಪದ್ಧತಿಯ ಕಷಾಯಗಳನ್ನು ಹೆತ್ತ ತಾಯಂದಿರಿಗೆ ಕೊಡುತ್ತಾರೆ; ಮತ್ತು ಮಕ್ಕಳಿಗೆ ಕುಡಿಸುತ್ತಾರೆ. ಇವು ಅನುಭವಗಳ ಮೇಲೆ ಆಧಾರಿತವಾಗಿದ್ದರೂ ಶಾಸ್ತ್ರೀಯವಾಗಿ ಪೂರ್ಣವಾಗಿ ಒಪ್ಪಿಕೊಳ್ಳುವಂಥವುಗಳಾಗಿರುವದಿಲ್ಲ. ಹೆತ್ತ ನಂತರ ಮಗುವಿಗೂ ಮತ್ತು ತಾಯಿಗೂ ಮೊದಲಿನ ಎರಡು ತಿಂಗಳುಗಳು ಅತೀ ಮಹತ್ವದ್ದಾದವುಗಳಾಗಿವೆ. ಅವು ಮಗುವಿನ ಶರೀರ ಹಾಗೂ ಮಾನಸಿಕ ಬೆಳವಣಿಗೆಯ ಮಹತ್ವದ ದಿನಗಳು.

ಶಿಸುಗಳನ್ನು ಪೋಷಿಸುವ ಪದ್ಧತಿಗಳು :

ಮಕ್ಕಳನ್ನು ಎತ್ತಿಕೊಳ್ಳುವ ಮತ್ತು ದೇಹದ ಮೇಲೆ ಹೊರುವ ಪದ್ಧತಿಗಳು ವಿಭಿನ್ನ ಜನಾಂಗಗಳಲ್ಲಿ ವಿಭಿನ್ನ ರೀತಿಯವಾಗಿವೆ. ಕೆಲವು ಸ್ತ್ರೀಯರು ಮಗುವನ್ನು ಎಡ ಭಾಗದ ಸೊಂಟದ ಮೇಲೆ ಹೊತ್ತು ಎಡಗೈಯಿಂದ ಹಿಡಿದುಕೊಳ್ಳುತ್ತಾರೆ. ಮತ್ತೆ ಕೆಲವು ಗಂಡಸರು ಮಗುವನ್ನು ಎಡಗೈಯಿಂದ ಅಪ್ಪಿಕೊಂಡು ತಮ್ಮ ಎಡಭಾಗದ ಎದೆಗೆ ಅಂಟಿಸಿಕೊಳ್ಳುತ್ತಾರೆ. ಬೇರೆ ಕೆಲವು ಜನರು ಮಕ್ಕಳನ್ನು ಅರಿವೆಯಲ್ಲಿ ಬೆನ್ನಿಗೆ ಕಟ್ಟಿಕೊಳ್ಳುವ ಇಲ್ಲವೆ ಮೈ ಮುಂದೆ ಕಟ್ಟಿಕೊಳ್ಳುವ ಪದ್ಧತಿಗಳಿವೆ. ಸೊಂಟದ ಮೇಲೆ ಮಕ್ಕಳನ್ನು ಹೊತ್ತು ತಿರುಗುವದರಿಂದ ಮಕ್ಕಳ ಜನನಾಂಗಗಳು ಮೈಗೆ ಬಿಗಿಯಾಗಿ ಅಂಟಿಕೊಳ್ಳುತ್ತವೆ.' ಮತ್ತು ಮಕ್ಕಳ ಕಾಲುಗಳು ಹೆಂಗಸರ ನಿತಂಬಗಳಿಗೆ ಮತ್ತು ತೊಡೆಗಳಿಗೆ ಬಡಿಯುತ್ತವೆ. ಫ್ರಾಯ್ಡ್ (Frued) ಎಂಬ ಶಾಸ್ತ್ರಜ್ಞನ ಪ್ರಕಾರ ಮಗು ತೊಟ್ಟಿಲಲ್ಲಿರುವಾಗಲೇ ಕಾಮ ತೃಪ್ತಿಯನ್ನು ಪಡೆಯಲಾರಂಭಿಸುವದು. ಮಕ್ಕಳ ಕಾಲುಗಳು ಹೆಂಗಸರ ಅಂಗಾಂಗಗಳಿಗೆ ಬಡಿದಾಗ ಅವರೂ ತೃಪ್ತಿ ಪಡೆಯುವಲ್ಲಿ ಸಂಶಯವೇ ಇಲ್ಲ.

ಮಕ್ಕಳಿಗೆ ತೊಟ್ಟಿಲ ಸೌಕರ್ಯ (Cradling) ಕೊಡುವ ಪದ್ಧತಿ ಸಹಿತ ವಿಭಿನ್ನ ರೀತಿಯಾಗಿದೆ. ಕೆಲವರು ಅರಿವೆಯ ತೊಟ್ಟಿಲು. ಕೆಲವರು ಕಟ್ಟಿಗೆಯ ತೊಟ್ಟಿಲು ಮತ್ತೆ ಕೆಲವರು ಕಬ್ಬಿಣದ ತೊಟ್ಟಿಲನ್ನು ಉಪಯೋಗಿಸುತ್ತಾರೆ. ತೊಟ್ಟಿಲನ್ನು ತೂಗುವದರಿಂದ ಮಕ್ಕಳು ಬೇಗ ನಿದ್ದೆ ಹೋಗುತ್ತಾರೆ. ತಾಯಿಯ ಗರ್ಭದಲ್ಲಿದ್ದಾಗ ಯಾವ ಒಂದು ಸುಸಂಬದ್ಧತೆ (Rythm) ಇತ್ತೋ ಅಂಥ ಒಂದು ವಾತಾವರಣ ತೊಟ್ಟಿಲಿನಿಂದ ಸಿಗುತ್ತದೆ. ಎಲ್ಲ ಜನಾಂಗಗಳಲ್ಲಿ ಒಂದಲ್ಲ ಒಂದು ತರದ ತೊಟ್ಟಿಲು ಇರುವದು ಕಂಡುಬರುತ್ತದೆ. ಟೆಂಟುಗಳಲ್ಲಿ ವಾಸಿಸುವ ಜನಾಂಗಗಳು ತೊಟ್ಟಿಲುಗಳನ್ನು ಮತ್ತು ಜೋಕಾಲಿಗಳನ್ನು ಗಿಡ ಮರಗಳಲ್ಲಿ ತೂಗಹಾಕುತ್ತಾರೆ. ಇತ್ತೀಚಿನ ಕಬ್ಬಿಣದ ತೊಟ್ಟಿಲುಗಳು ಸ್ಪ್ರಿಂಗುಗಳಲ್ಲಿ ಜೋತಾಡುತ್ತವೆ. ಮಕ್ಕಳ ರೋಗಗಳ ಬಗ್ಗೆ ಇತ್ತೀತ್ತಲಾಗಿ ವಿಶಿಷ್ಟ ತರಬೇತಿ ಪಡೆದ ಡಾಕ್ಟರರು ದೊಡ್ಡ ನಗರಗಳಲ್ಲಿ ಲಭ್ಯವಾಗಿದ್ದಾರೆ. ಆದರೆ

ಗ್ರಾಮಾಂತರ ಪ್ರದೇಶದಲ್ಲಿ ಇಂಥ ಅನುಕೂಲತೆಗಳು ಕಡಿಮೆ. ಆದ್ದರಿಂದ ಅನೇಕ ರೋಗಗಳಿಗೆ ಇನ್ನೂ ಮೂಢ ನಂಬಿಕೆಯ ಆರೈಕೆಯೇ ಅವಲಂಬನೆಯಾಗಿದೆ. ಮಕ್ಕಳು ತಮಗೆ ಏನು ಆಗಿದೆ ಎಂಬುದನ್ನು ತಿಳಿಸಲು ಅಶಕ್ತರು. ಆದ್ದರಿಂದ ಅವರಿಗೆ ವೈದ್ಯರಿಂದ ಪರೀಕ್ಷೆ ಅವಶ್ಯ. ಆದರೆ ಹಳ್ಳಿಗಳಲ್ಲಿ ಡಾಕ್ಟರರ ಕೊರತೆ. ಹೀಗಾಗಿ ಜನರು ತಮ್ಮ ಅನುಭವಗಳ ಮೇಲೆಯೇ ತಮ್ಮ ಶಿಶುಗಳ ಬೆಳವಣಿಗೆಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಸಾಮಾನ್ಯವಾಗಿ ಏಳನೇಯ ತಿಂಗಳಲ್ಲಿ ಮಕ್ಕಳು ಶಬ್ದಗಳನ್ನು ಉಚ್ಚಾರ ಮಾಡಲು ಪ್ರಾರಂಭಿಸುತ್ತವೆ. ಮಕ್ಕಳ ಬೆಳವಣಿಗೆ ಎಂದರೆ ಮಾನವಶಾಸ್ತ್ರಜ್ಞರಿಗೆ ಸಾಂಸ್ಕೃತಿಕ ಬೆಳವಣಿಗೆಯೇ ಆಗಿದೆ (enculturation), ಅಂದರೆ ಅವರು ಯಾವ ಸಂಸ್ಕೃತಿಯಲ್ಲಿ ಬೆಳೆಯುವರೋ ಅದೇ ಸಂಸ್ಕೃತಿಗೆ ಹೊಂದಿಕೊಳ್ಳುತ್ತಾರೆ. ಅದಕ್ಕೆ ಸಮಾಜಶಾಸ್ತ್ರಜ್ಞರು ಸಮಾಜೀಕರಣ (socialization) ವೆಂದೂ ಕರೆಯುತ್ತಾರೆ ತೋಳದ ಆಶ್ರಯದಲ್ಲಿ ಬೆಳೆದ ಮಕ್ಕಳು ತೋಳಗಳಂತೆ ವ್ಯವಹರಿಸುತ್ತವೆ. ಶಿಶುಗಳನ್ನು ತೋಳಗಳು ಕದ್ದೊಯ್ದು ಬೆಳೆಸಿದ ಅನೇಕ (Wolf-Children) ಉದಾಹರಣೆಗಳಿವೆ. ಇದಕ್ಕೆ ಒಂದು ಉತ್ತಮ ಉದಾಹರಣೆ ಎಂದರೆ ಮಠದಲ್ಲಿಯ ಗಿಳಿ ಮತ್ತು ಬೇಡನಿಂದ ಸಾಕಿದ ಗಿಳಿಯ ಕತೆಗಳು. ಮಠದಲ್ಲಿಯ ಗಿಳಿಯು ಉತ್ತಮ ಸಂಸ್ಕೃತಿಯ ವಾಕ್ಯಗಳನ್ನು ಉಚ್ಚರಿಸಿದರೆ. ಬೇಡನಲ್ಲಿ ಬೆಳೆದ ಗಿಳಿಯು ಕಠೋರ ಶಬ್ದಗಳನ್ನು ಉಚ್ಚರಿಸುತ್ತದೆ. ಏಳನೇ ತಿಂಗಳಲ್ಲಿಯೇ ಮಕ್ಕಳ ಹಲ್ಲುಗಳು ಬೆಳೆಯಲಾರಂಭಿಸುತ್ತವೆ. ಹಲ್ಲು ಬೆಳೆಯುವಾಗ ಮಕ್ಕಳ ರೋಗಗಳು ಬರುವ ಸಂಭವ ಹೆಚ್ಚು. ಮುಂದೆ ಹೆಜ್ಜೆ ಇಟ್ಟು ನಡೆಯಲು ಕಲಿಯುವಾಗ ಅವಸರ ಪಟ್ಟು ಮುಂಗಾಲು ಡೊಂಕು ಮಾಡುವ ಸಂಭವವಿರುತ್ತದೆ. ಆದ್ದರಿಂದ ಮಕ್ಕಳನ್ನು ನಡೆದಾಡಿಸುವ ಕಾತರಪಡಬಾರದು.

ಮುಂದೆ ಮಗುವಿನ ಶಾಲೆಯ ಪೂರ್ವದ ಮತ್ತು ಶಾಲೆಯಲ್ಲಿಯ ಜೀವನ ಪ್ರಾರಂಭವಾಗುತ್ತದೆ. ನಿಜಕ್ಕೂ ಮಕ್ಕಳಿಗೆ ಮನೆಯೇ ಪ್ರಥಮ ಶಾಲೆ. ಮಕ್ಕಳ ವ್ಯಕ್ತಿತ್ವ ಬೆಳೆಯಬೇಕಾದರೆ ಅವರ ದೈಹಿಕ ಬೆಳವಣಿಗೆ ಎಷ್ಟು ಅವಶ್ಯವೋ ಅಷ್ಟೇ ಅವರ ಸಾಂಸ್ಕೃತಿಕ. ಸಾಮಾಜಿಕ ಮತ್ತು ಮಾನಸಿಕ ಬೆಳವಣಿಗೆ ಅವಶ್ಯ

ಮೊಲೆ ಬಿಡಿಸುವ ಪದ್ಧತಿಗಳು (Weaning) **:**

ಇತ್ತೀಚಿತ್ತಲಾಗಿ ತಾಯಿಯ ಮೊಲೆಹಾಲು ಉತ್ತಮವೋ ಅಥವಾ ಬಾಟ್ಲಿಯ ಹಾಲು ಉತ್ತಮವೋ ಎಂಬ ಬಗ್ಗೆ ಬಹಳಷ್ಟು ಚರ್ಚೆ ನಡೆಯುತ್ತಿದೆ. ಕೆಲವು ಸ್ತ್ರೀಯರಿಗೆ ಮೊಲೆಹಾಲು ಕಡಿಮೆ. ಕೆಲವರು ಮಕ್ಕಳಿಗೆ ಮೊಲೆ ಕುಡಿಸುವುದರಿಂದ ಅಶಕ್ತತೆಯನ್ನೂ ಹೊಂದುತ್ತಾರೆ. ತಾಯಂದಿರು ಸಾಕಷ್ಟು ಹಾಲು ಹೊಂದಿದ್ದರೆ ನೈಸರ್ಗಿಕವಾಗಿ ಪಡೆದ ಹಾಲು ಮಕ್ಕಳ ಬೆಳವಣಿಗೆಗೆ ಮತ್ತು ಆರೋಗ್ಯಕ್ಕೆ ಬಹಳ

ಅನುಕೂಲಕರವೆಂದು ತಿಳಿಯಲಾಗುತ್ತದೆ. ಆದರೆ ಸಾಕಷ್ಟು ಮೊಲೆಹಾಲು ಇಲ್ಲದ ಸ್ತ್ರೀಯರು ಬಾಟ್ಲಿಯ ಹಾಲಿಗೆ ಶರಣು ಹೋಗದೇ ಗತ್ಯಂತರವಿಲ್ಲ. ಮತ್ತು ಅವರ ಮಕ್ಕಳು ಬಾಟ್ಲಿಯ ಹಾಲಿನ ಮೇಲೆಯೇ ಬೆಳೆಯಬೇಕಾಗುತ್ತದೆ. ಇನ್ನೂ ಕೆಲವು ಮಕ್ಕಳಿಗೆ ತಾಯಿಯ ಮೊಲೆಹಾಲನ್ನು ಕುಡಿಯುವದನ್ನು ಬಿಡಿಸುವ ಬಗ್ಗೆ (weaning) ಅನೇಕ ಸಮಸ್ಯೆಗಳಿವೆ. ಮಕ್ಕಳು ತಾಯಿಯ ಮೊಲೆಯಲ್ಲಿ ಸಾಕಷ್ಟು ಹಾಲು ಇದ್ದರೆ ೨-೩ ವರ್ಷಗಳು ಕಳೆದರೂ ಇನ್ನೂ ಮೊಲೆ ಹಾಲನ್ನು ಕುಡಿಯುತ್ತಲೇ ಹೋಗುತ್ತಾರೆ. ಹೀಗೆ ಅವರು ಕೆಲವೊಂದು ಸಲ ೫-೬ ವರ್ಷಗಳ ವರೆಗೂ ಮುಂದುವರೆಸಬಹುದು. ದೊಡ್ಡವರಾದ ನಂತರ ಅಂಥವರು ಸ್ತ್ರೀಯರ ಮೊಲೆಗಳಿಂದ ಬೇಗ ಆಕರ್ಷಿತವಾಗುತ್ತಾರೆ. ಆದ್ದರಿಂದ ಮಕ್ಕಳಿಗೆ ಮೊಲೆಹಾಲು ಕುಡಿಸುವದನ್ನು ಬಿಡಿಸುವದಕ್ಕಾಗಿ ಅನೇಕ ಸಾಮಾಜಿಕ ಮತ್ತು ಮಾನಸಿಕ ಸಂಪ್ರದಾಯಗಳನ್ನು ಅನುಸರಿಸುತ್ತಾ ಬರಲಾಗಿದೆ. ಕೆಲವು ಸ್ತ್ರೀಯರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕುಡಿಸುವದನ್ನು ಬಿಡಿಸುವದರ ಸಲುವಾಗಿ ಮೊಲೆಗೆ ಬೇವಿನ ರಸವನ್ನೋ ಅಥವಾ ಇನ್ನಾವುದೋ ಕಹಿಯಾದ ರಸವನ್ನೋ ಹಚ್ಚಿಕೊಳ್ಳುತ್ತಾರೆ. ಮಕ್ಕಳು ಮೊಲೆಗೆ ಬಾಯಿ ಹಚ್ಚಿದ ಕೂಡಲೇ ಕಹಿಯ ಅನುಭವದಿಂದ ಮೊಲೆಹಾಲನ್ನು ಕುಡಿಯುವದನ್ನು ಬಿಟ್ಟುಬಿಡುತ್ತಾರೆ. ಸಮಾವೊ ಎಂಬ ಜನಾಂಗದವರು ತಾಯಂದಿರ ಮೊಲೆ ಹಾಲು ಕುಡಿಸಲು ಇಷ್ಟವಿಲ್ಲದಿದ್ದರೆ ಅಥವಾ ಶಕ್ಯವಾಗದಿದ್ದರೆ ಬೇರೆ ಸ್ತ್ರೀಯರಿಂದ ಮೊಲೆಹಾಲು ಕುಡಿಸಬಹುದು. ಗ್ರಾಮಾಂತರ ಭಾರತದಲ್ಲಿ ಬೇರೆ ಸ್ತ್ರೀಯರಿಂದ ಮೊಲೆಹಾಲು ಕುಡಿಸುವ ಪದ್ಧತಿಯು ಇರದಿದ್ದರೂ ಕೆಲವು ಜನರು ಆ ಪದ್ಧತಿಯನ್ನು ಅನುಸರಿಸುತ್ತಾರೆ. ಆದ್ದರಿಂದ ಮಕ್ಕಳಿಗೆ ಮೊಲೆಹಾಲು ಕುಡಿಸುವವರು ಒಬ್ಬರು. ಹತ್ತಿರ ಮಲಗಿಸಿಕೊಳ್ಳುವವರು ಮತ್ತೊಬ್ಬರು (ಸಾಧಾರಣವಾಗಿ ತಾಯಂದಿರು) ಭಾರತದಲ್ಲಿ ಚಿಕ್ಕ ಮಕ್ಕಳೂ ಮಗುವಿನ ಆರೈಕೆಯಲ್ಲಿ ಬಹುಪಾಲು ಪಾತ್ರವಹಿಸುತ್ತಾರೆ. ಇಂಥ ಚಿಕ್ಕ ಮಕ್ಕಳು ಅಕ್ಕಂದಿರು ಅಥವಾ ಸಂಬಂಧಿಕರು ಇಲ್ಲವೆ ನೆರೆಹೊರೆಯವರು ಆಗಿರಬಹುದು.

ಸ್ತ್ರೀಯರು ಪುನಃ ಗರ್ಭಿಣಿಯರಾದಾಗ ತಮ್ಮ ಮೊದಲಿನ ಮಗುವಿಗೆ ಹಾಲು ಕುಡಿಸುವದನ್ನು ಬಿಡಿಸುವದು ಒಮ್ಮೊಮ್ಮೆ ಅನಿವಾರ್ಯವಾಗುತ್ತದೆ. ಪುನಃ ಗರ್ಭಿಣಿಯರಾದಾಗ ಸ್ತ್ರೀಯರು ತಮ್ಮ ಮಕ್ಕಳ ಆರೈಕೆಯನ್ನು ಮನೆಯಲ್ಲಿದ್ದ ಮುದುಕಿಯರಿಗೆ ವಹಿಸಿಕೊಡುತ್ತಾರೆ. ಈ ಪ್ರಕಾರವಾಗಿ ಮಕ್ಕಳು ತಾಯಂದಿರ, ಚಿಕ್ಕಮಕ್ಕಳ ಮತ್ತು ಮುದುಕರ ಆರೈಕೆಯಲ್ಲಿ ಬೆಳೆಯಬೇಕಾಗುತ್ತದೆ. ಮಕ್ಕಳ ಮಲ-ಮೂತ್ರಗಳನ್ನು ತೆಗೆಯುವಲ್ಲಿ, ಅವುಗಳ ಸ್ನಾನ ಮಾಡಿಸುವಲ್ಲಿ, ಬಟ್ಟೆ-ಬರೆಗಳನ್ನು ತೊಡಿಸುವಲ್ಲಿ, ಏನು ಮುಟ್ಟಬೇಕು ಮತ್ತು ಏನು ಮುಟ್ಟಬಾರದು ಎಂಬುದನ್ನು ಹೇಳುವಲ್ಲಿ ಅವರು ಸಹಾಯಕರಾಗುತ್ತಾರೆ.

ಸ್ತ್ರೀಯರು ಗರ್ಭಿಣಿಯರಿರುವಾಗ ಅಥವಾ ತಾಯಂದಿರಾದಾಗ ಗಂಡಂದಿರು ತಮ್ಮ ಹೆಂಡಂದಿರೊಡನೆ ಮಲಗಿಕೊಳ್ಳಲು ಮಗು ತಮ್ಮ ಕಾಮ ಸಂತೃಪ್ತಿಯಲ್ಲಿ ಅಡ್ಡ ಬರುವದೆಂದು ತಿಳಿದುಕೊಳ್ಳುತ್ತಾರೆ.ಮತ್ತು ಅವರಿಗೆ ಈ ಅನುಭವ ಉಂಟಾಗುತ್ತದೆ ಆದರೆ ಇದು ಮಗುವನ್ನು ವಿರೋಧಿಸುವಲ್ಲಿ ಪರಿವರ್ತನೆಯಾಗಲಾರದು. ಮಗುವನ್ನು ಬೆಳೆಸುವಾಗ ಅದಕ್ಕೆ ಏನು ಯಾವಾಗಬೇಕು ಎಂದು ತಿಳಿದುಕೊಳ್ಳುವಲ್ಲಿ ತಾಯಂದಿರು ಸಾಕಷ್ಟು ಅನುಭವ ಪಡೆಯುತ್ತಾರೆ. ಅಥವಾ ಕೆಲವೊಂದು ಹೊಸ ತಾಯಂದಿರಿಗೆ ಹಳೆ ತಾಯಂದಿರು ಹೇಳಿಕೊಡುತ್ತಾರೆ. ಬರಬರುತ್ತಾ ಮೊಲೆ ಹಾಲನ್ನು ಮತ್ತು ಬಾಟ್ಲಿಯ ಹಾಲನ್ನೂ ಕಡಿಮೆ ಮಾಡಿ ಮಕ್ಕಳಿಗೆ ಆಹಾರ ಪದಾರ್ಥಗಳನ್ನು ತಿನ್ನಿಸಲು ತಾಯಂದಿರು ಪ್ರಯತ್ನ ಮಾಡುತ್ತಾರೆ.

ಹಿಂದೂ ಸಮಾಜದಲ್ಲಿ ಗರ್ಭಿಣಿಯರನ್ನು ಸಂತೈಸುವ ಮತ್ತು ಗರ್ಭಧಾರಣೆಯ ನಂತರ ಮಹತ್ವದ ಹಂತಗಳಲ್ಲಿ ಅವನ್ನು ಪುರಸ್ಕರಿಸುವ ಅನೇಕ ಧಾರ್ಮಿಕ ವಿಧಿಗಳನ್ನು ಆಚರಿಸುತ್ತಾರೆ. ಈ ಪದ್ಧತಿಗಳು ಇಸ್ಲಾಮ ಮತ್ತು ಕ್ರಿಶ್ಚಿಯನ್ ಸಮಾಜದವರ ಮೇಲೂ ಭಾರತದಲ್ಲಿ ಸಾಕಷ್ಟು ಪ್ರಭಾವ ಬೀರಿವೆ. ಮೊದಲನೆಯ ಮಗುವಿನ ಜನನಕ್ಕಾಗಿ ತಾಯಿಯು ತವರು ಮನೆಯಲ್ಲಿಯೇ ಇರುವ ಪದ್ಧತಿ ಇದೆ. ನಂತರದ ಹೆರಿಗೆಗಳು ಸಾಮಾನ್ಯವಾಗಿ ಗಂಡನ ಮನೆಯಲ್ಲಿಯೇ ಜರುಗುವವು. ಈ ರೀತಿಯಾಗಿ ಮಕ್ಕಳ ಮೇಲೆ ಬೇರೆ ಬೇರೆ ಪರಿಸರದ ಪ್ರಭಾವ ಬೀಳುತ್ತದೆ.

ಮಕ್ಕಳ ಪಾಲನೆಯ ಮತ್ತು ಪೋಷಣೆಯ ಕಾರ್ಯವು ವಿಶೇಷವಾಗಿ ಸಾಂಸ್ಕೃತಿಕವಾದುದು. ಮತ್ತು ಸಾಮಾಜಿಕವಾದುದು. ನಮ್ಮ ಸಂಸ್ಕೃತಿ ಮತ್ತು ನಮ್ಮ ಸಮಾಜ ಸುಧಾರಿಸಿದರೆ ಮಕ್ಕಳ ಪಾಲನೆ-ಪೋಷಣೆ ಸುಧಾರಿಸುವದು. ಇದಕ್ಕಾಗಿ ಸ್ತ್ರೀಯರಲ್ಲಿ ಪರಿವರ್ತನೆಯಾಗುವದು ಮತ್ತು ಸುಧಾರಣೆಯಾಗುದವರು ಅತಿ ಮಹತ್ವದ್ದು. ಮಕ್ಕಳನ್ನು ಹೆರುವವಳು ಮತ್ತು ಪೋಷಿಸುವವಳು ಸ್ತ್ರೀಯೇ ಆಗಿರುವದರಿಂದ ಸ್ತ್ರೀಯರಿಗೆ ಈ ಬಗ್ಗೆ ಶಿಕ್ಷಣ. ಸೌಕರ್ಯ ಮತ್ತು ಸೌಲಭ್ಯಗಳು ಸಿಗುವದು ಅವಶ್ಯ. ಈ ಕಾರ್ಯ ನಮ್ಮ ಸಮಾಜದಲ್ಲಿ ಸಮಾಜ ಸುಧಾರಣೆಯ ಮತ್ತು ಸಮಾಜ ಕಾರ್ಯದ ಒಂದು ಅಂಗವಾಗಿ ಬೆಳೆದುಬರಬೇಕು.

ಕುಟುಂಬ ಯೋಜನೆಯಿಂದ ಸಣ್ಣ ಕುಟುಂಬಗಳು ನಿರ್ಮಾಣವಾಗಿ ಮಕ್ಕಳ ಪಾಲನೆ ಪೋಷಣೆಯಲ್ಲಿ ಸುಧಾರಣೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ, ಆದರೆ ಕುಟುಂಬ ಯೋಜನೆಯು ಕುಟುಂಬದ ಸದಸ್ಯರ ಮನವರಿಕೆಯಿಂದ ಮಾತ್ರ ಸಾಧ್ಯ. ಸಮಾಜದಲ್ಲಿ ಈ ಯೋಜನೆಯಿಂದ ದುಷ್ಪರಿಣಾಮಗಳಾದ ಅನೇಕ ಸಂಗತಿಗಳು ನಮ್ಮೆಲ್ಲರಿಗೆ ಇತ್ತೀಚೆಗೆ ಅನುಭವಕ್ಕೆ ಬಂದಿವೆ. ಜನನ ನಿಯಂತ್ರಣದ ಸಾಧನೆಗಳು ತೃಪ್ತಿಕರವಿರದಿದ್ದರೂ ಅವು ಮಕ್ಕಳ ಪಾಲನೆ-ಪೋಷಣೆಯ ವಿಷಯದಲ್ಲಿ ಮಹತ್ವದ ಪಾತ್ರವನ್ನು ಆಡುತ್ತವೆಂದು ನಿಃಸಂಶಯವಾಗಿ ಹೇಳಬಹುದು. ಬಡತನ, ಅಜ್ಞಾನ

ಮತ್ತು ನಿರಕ್ಷರತೆ ತುಂಬಿರುವ ನಮ್ಮ ದೇಶದಲ್ಲಿ ಅದೂ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳ ಪಾಲನೆ-ಪೋಷಣೆ ಮಾಡುವುದು ಒಂದು ಮಹತ್ವದ ಸಮಸ್ಯೆಯಾಗಿದೆ. ಗ್ರಾಮಗಳಿಂದಲೇ ತುಂಬಿದ ನಮ್ಮ ಈ ದೇಶದಲ್ಲಿ ಈ ವಿಷಯದ ಬಗ್ಗೆ ವಿಶೇಷ ಗಮನ ಕೊಡುವದು ಅತ್ಯವಶ್ಯ.

ಆಧಾರ ಗ್ರಂಥಗಳು

Chitguppi S. K., **Study of Child Rearing Practices in Hiliyana.** Unpublished M. A. Dissertation, 1969, K.U.D.

Freud, Sigmund, **Study in Psycho-Sexuality**; Random House, New York, 1947.

Kadetotad N. K., **Field notes**, 1966–76.

Kowdi J. I., **Child Rearing Practices and Informal Education in Kadwad,** Unpublished M. A. Dissertation, K.U.D., 1975

Mead Margaret, **Anthropology– AHuman Science**, D. Van Nostramd Comp. Inc., New York, 1964.

ಬೆಳೆಯುತ್ತಿರುವ ಮಕ್ಕಳ ಸಂಖ್ಯೆ: ಆರ್ಥಿಕ ಹಾಗೂ ಸಾಮಾಜಿಕ ಪರಿಣಾಮ

● ಎಂ. ಸಿ. ಕೊಡ್ಲಿ

ಕಳೆದ ನಾಲ್ವತ್ತು ವರ್ಷಗಳಿಂದ ನಮ್ಮ ದೇಶದ ಜನಸಂಖ್ಯೆ ತೀವ್ರಗತಿಯಿಂದ ಬೆಳೆಯುತ್ತಾ ನಡೆದಿದೆ. ಸಾರಿಗೆ. ಸಂಪರ್ಕಗಳ ಸುಧಾರಣೆ ಮತ್ತು ಆಧುನಿಕ ಔಷಧೋಪಚಾರಗಳ ಪರಿಣಾಮವಾಗಿ ಮರಣ ಪ್ರಮಾಣವು ಕಡಿಮೆಯಾಗುತ್ತ ನಡೆದಿದ್ದು, ಜನನ ಪ್ರಮಾಣವು ಸಾಕಷ್ಟು ಕಡಿಮೆಯಾಗದ್ದರಿಂದ ಜನಸಂಖ್ಯೆ ಬೆಳೆಯುವ ಗತಿಯು ಹೆಚ್ಚುತ್ತಾ ನಡೆದಿದೆ. ನಮ್ಮ ದೇಶ ಸ್ವಾತಂತ್ರ್ಯ ಪಡೆದ ವೇಳೆಯಲ್ಲಿ ೩೫ ಕೋಟಿ ಇದ್ದ ನಮ್ಮ ಜನಸಂಖ್ಯೆ ಈಗ ೬೫ ಕೋಟಿಯನ್ನು ದಾಟಿದೆಯೆಂದು ಅಂದಾಜುಮಾಡಲಾಗಿದೆ. ಇದೇರೀತಿ ನಮ್ಮ ಜನಸಂಖ್ಯೆ ಬೆಳೆಯುತ್ತಾ ಹೋದರೆ. ಈ ಶತಮಾನದ ಕೊನೆಯಲ್ಲಿ ಅದು ೧೦೦ ಕೋಟಿ ಮುಟ್ಟಬಹುದೆಂದು ತಜ್ಞರು ಲೆಕ್ಕಹಾಕಿದ್ದಾರೆ.

ನಮ್ಮ ದೇಶದಲ್ಲಿ ಜನಸಂಖ್ಯೆ ತೀವ್ರಗತಿಯಿಂದ ಬೆಳೆಯುವದರ ಜೊತೆಗೆ ಕೂಸುಗಳ ಮರಣ ಪ್ರಮಾಣವೂ ಸಹಿತ ಹೆಚ್ಚಾಗಿದೆ. ನಮ್ಮ ದೇಶದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಲ್ಲಿ ೧೪೦ ಮಕ್ಕಳು ತಮ್ಮ ಎರಡನೆಯ ಹುಟ್ಟುಹಬ್ಬವನ್ನಾಚರಿಸುವದರೊಳಗಾಗಿಯೇ ಮರಣವನ್ನಪ್ಪುತ್ತವೆ. ಮುಂದುವರಿದ ದೇಶಗಳಲ್ಲಿ ಈ ಪ್ರಮಾಣವು ಒಂದು ಸಾವಿರಕ್ಕೆ ೨೦ಕ್ಕಿಂತ ಕಡಿಮೆ ಇರುವಾಗ ನಮ್ಮ ದೇಶದಲ್ಲಿ ಎಷ್ಟು ಚಿಕ್ಕಮಕ್ಕಳು ಅಸಹಾಯಕ ಪರಿಸ್ಥಿತಿಯಲ್ಲಿ ಮರಣವನ್ನಪ್ಪುತ್ತವೆಯೆಂಬ ಕಲ್ಪನೆ ನಮಗೆ ಬರಬಹುದು. ಉಳಿದ ಮಕ್ಕಳಲ್ಲಿಯೂ ಸಹಿತ ಅರ್ಧಕ್ಕಿಂತ ಹೆಚ್ಚು ಮಕ್ಕಳು ಪೌಷ್ಟಿಕ ಆಹಾರದ ಕೊರತೆ, ಸರಿಯಾದ ಔಷಧೋಪಚಾರದ ಕೊರತೆ ಮತ್ತು ಸರಿಯಾದ ಶಿಕ್ಷಣದ ಕೊರತೆಯಿಂದಾಗಿ ತಮ್ಮ ಬಾಲ್ಯವನ್ನು ಕಷ್ಟದಲ್ಲಿ ಕಳೆಯುತ್ತವೆ. ಆದ್ದರಿಂದ ಮಕ್ಕಳ ಮರಣ ಪ್ರಮಾಣವನ್ನು ಕಡಿಮೆಮಾಡುವದು ನಾಗರಿಕ ಸಮಾಜದ ಆದ್ಯಕರ್ತವ್ಯವಾಗಿದೆ. ಮಕ್ಕಳ ಮರಣ ಪ್ರಮಾಣವು ಕಡಿಮೆಯಾಗುವುದರ ಜೊತೆಗೆ ಜನನಪ್ರಮಾಣವೂ ಕಡಿಮೆಯಾಗಬೇಕು. ಇಲ್ಲದೇಹೋದಲ್ಲಿ ಜನಸಂಖ್ಯೆ ಬೆಳೆಯುವ ಗತಿಯು ಹೆಚ್ಚುತ್ತದೆ. ಹುಟ್ಟಿದ ಕೂಸು ಬದುಕಿ ದೊಡ್ಡವನಾಗುವ ಭರವಸೆ ಪ್ರತಿಯೊಬ್ಬ ತಂದೆ ತಾಯಿಗಳಿಗೆ

ಬಡವಾಗಿದ್ದಾಗ ಚಿಕ್ಕ ಸಂಸಾರವು ಪ್ರಚಲಿತದಲ್ಲಿ ಬರುವದೆಂಬುದು ಅಭಿವೃದ್ಧಿ ಹೊಂದಿದ ದೇಶಗಳ ಅನುಭವದಿಂದ ತಿಳಿದುಬರುತ್ತದೆ. ಆದ್ದರಿಂದ ಚಿಕ್ಕಮಕ್ಕಳ ಮರಣ ಪ್ರಮಾಣ ವನ್ನು ಕಡಿಮೆ ಮಾಡುವದು ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವದು ಬಹಳ ಮಹತ್ವದ್ದಾಗಿದೆ. ಮಕ್ಕಳು ನಮ್ಮ ಸಮಾಜದ ಸೊತ್ತು ಮತ್ತು ದೇಶದ ಭಂಡವಾಳ.

ಹೀಗೆ ನಾವು ಪ್ರತಿಯೊಂದು ಮಗುವಿನ ಯೋಗಕ್ಷೇಮವನ್ನು ಸರಿಯಾಗಿ ನೋಡಿ ಕೊಳ್ಳಬೇಕಾದರೆ ಜನಸಂಖ್ಯಾ ನಿಯಂತ್ರಣವು ಬಹಳ ಮಹತ್ವದ ಪಾತ್ರವಹಿಸುತ್ತದೆ. ಬೆಳೆಯುತ್ತಿರುವ ಜನಸಂಖ್ಯೆಯನ್ನು ನಾವು ಹತೋಟಿಯಲ್ಲಿ ತರದೆ ಹೋದಲ್ಲಿ ಮಕ್ಕಳ ಪಾಲನೆ–ಪೋಷಣೆಗೆ ನಾವು ಏಷ್ಟೋ ಯೋಜನೆಗಳನ್ನು ಮಾಡಿದರೂ ಕೊನೆಯಲ್ಲಿ ಅವು ವ್ಯರ್ಥವಾಗಿ ಹೋಗುತ್ತವೆ. ನಮ್ಮ ದೇಶದಲ್ಲಿ ೧೯೧೧ನೇ ಇಸ್ವಿಯಲ್ಲಿ ಮಕ್ಕಳ ಸಂಖ್ಯೆ (೦ ದಿಂದ ೧೪ ವರುಷದವರೆಗಿನವರು) ೧೨ ಕೋಟಿ ೨ ಲಕ್ಷ ಇದ್ದದ್ದು ೧೯೪೧ ರಲ್ಲಿ ೧೨ ಕೋಟಿ ೨೬ ಲಕ್ಷವಾಯಿತು. ಅಂದರೆ ಈ ಅವಧಿಯ ೩೦ ವರುಷಗಳಲ್ಲಿ ಮಕ್ಕಳ ಸಂಖ್ಯೆ ಕೇವಲ ಶೇಕಡಾ ೨ರಷ್ಟು ಮಾತ್ರ ಹೆಚ್ಚಾಯಿತು. ಆದರೆ ಕಳೆದ ೨೦ ವರುಷಗಳಲ್ಲಿ ಮಕ್ಕಳ ಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಿನಪ್ರಮಾಣದಲ್ಲಿ ಬೆಳೆದಿದೆ. ೧೯೫೧ರಲ್ಲಿ ೧೬ಕೋಟಿ ೮೪ ಲಕ್ಷವಿದ್ದ ನಮ್ಮ ಮಕ್ಕಳ ಸಂಖ್ಯೆ ೧೯೭೧ರಲ್ಲಿ ಅದು ೨೩ ಕೋಟಿ ೨ ಲಕ್ಷಕ್ಕೇರಿತು. ಅಂದರೆ ಈ ಅವಧಿಯ ೨೦ ವರುಷಗಳಲ್ಲಿ ಮಕ್ಕಳ ಸಂಖ್ಯೆ ಶೇಕಡಾ ೬೭ ರಷ್ಟು ಹೆಚ್ಚಾಯಿತು. ೧೯೮೧ರ ಸುಮಾರಿಗೆ ನಮ್ಮ ದೇಶದ ಮಕ್ಕಳ ಸಂಖ್ಯೆ ೨೮ ಕೋಟಿ ೯೩ ಲಕ್ಷಕ್ಕೆ ಏರಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಕಳೆದ ೩೦ ವರುಷಗಳಲ್ಲಿ ನಮ್ಮ ದೇಶದ ಮಕ್ಕಳ ಸಂಖ್ಯೆ ದುಪ್ಪಟ್ಟಾಗಿದೆಯೆಂದಹಾಗಾಯಿತು. ಈಗ ನಮ್ಮ ದೇಶದಲ್ಲಿ ಒಟ್ಟು ಜನಸಂಖ್ಯೆಯ ಶೇಕಡಾ ೪೨ ರಷ್ಟು ಮಕ್ಕಳೇ ಇದ್ದಾರೆ. ಮುಂದುವರಿದ ಪಾಶ್ಚಿಮಾತ್ಯ ದೇಶಗಳಲ್ಲಿ ಜನಸಂಖ್ಯೆಯ ಶೇಕಡಾ ೨೦ ರಿಂದ ೩೦ ರಷ್ಟು ಮಾತ್ರ ಮಕ್ಕಳಿರುತ್ತಾರೆ. ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ಹಿಂದುಸ್ಥಾನದಂಥ ರಾಷ್ಟ್ರಗಳಲ್ಲಿ ಪ್ರತಿಯೊಬ್ಬ ಕೆಲಸಗಾರನು ತನ್ನ ಮೇಲೆ ದೊಡ್ಡ ಸಂಸಾರದ ಹೊರೆಯನ್ನು ಹೊರಬೇಕಾಗುತ್ತದೆ. ಮಕ್ಕಳ ಸಂಖ್ಯೆ ಹೀಗೆ ಬೆಳೆಯುತ್ತಿರುವಾಗ ನಾವು ಯಾವ ಯಾವ ಸಮಸ್ಯೆ ಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಕಂಡುಕೊಳ್ಳುವಾ.

ಸಮತೋಲ ಆಹಾರ :

ಪೌಷ್ಟಿಕ ಆಹಾರವು ಮಗುವಿನ ದೈಹಿಕ ಮತ್ತು ಬುದ್ಧಿಯ ಬೆಳವಣಿಗೆಗೆ ಅತೀ ಅವಶ್ಯ. ಪೌಷ್ಟಿಕ ಆಹಾರದ ಕೊರತೆಯಾದರೆ ಮಕ್ಕಳಲ್ಲಿ ನ್ಯೂನ ಪೋಷಣೆಯುಂಟಾಗಿ (malnutrition) ಅವರ ಬೆಳವಣಿಗೆ ಕುಂಠಿತವಾಗುತ್ತದೆ. ಮಕ್ಕಳ ಮೊದಲಿನ ೫ ವರ್ಷಗಳು ಈ ದೃಷ್ಟಿಯಿಂದ ಅತೀ ಮಹತ್ವದವುಗಳಾಗಿರುತ್ತವೆಯೆಂದು ತಜ್ಞರು ಹೇಳುತ್ತಾರೆ. ಮಗುವಿನ ಮೆದುಳಿನ ಬೆಳವಣಿಗೆಯು ಈ ೫ ವರುಷಗಳಲ್ಲಿಯೇ ಆಗು

ಹವರಿಂದ ಅಂಥ ವೇಳೆಯಲ್ಲಿ ಪೌಷ್ಟಿಕ ಆಹಾರವು ಬಹಳ ಅವಶ್ಯ. ಒಂದು ವೇಳೆ ಈ ಅವಧಿಯಲ್ಲಿ ಆಹಾರದ ಕೊರತೆಯುಂಟಾದರೆ ಮೆದುಳಿನ ಬೆಳವಣಿಗೆಯು ಕುಂಠಿತ ವಾಗುತ್ತದೆ. ಮುಂದೆ ನಾವು ಎಷ್ಟೇ ಪೌಷ್ಟಿಕ ಆಹಾರವನ್ನು ಒದಗಿಸಿದರೂ ಆ ಮಗು ವಿನ ಬುದ್ಧಿಶಕ್ತಿಯಲ್ಲಿ ಸುಧಾರಣೆಯಾಗುವದಿಲ್ಲವೆಂದು ತಜ್ಞರು ಅಭಿಪ್ರಾಯಪಡು ತ್ತಾರೆ. ಪೌಷ್ಟಿಕ ಆಹಾರವು ಮಕ್ಕಳಿಗೆ ಇಷ್ಟು ಅತ್ಯಾವಶ್ಯಕವಾಗಿರುವಾಗ ನಮ್ಮ ದೇಶ ದಲ್ಲಿ ಕೋಟಿಗಟ್ಟಲೆ ಮಕ್ಕಳು ಸಾಕಷ್ಟು ಆಹಾರ ಕೊಡಲು ಸಾಧ್ಯವಾಗದ ಬಡ ಕುಟುಂಬ ಗಳಿಗೆ ಸೇರಿದವರಾಗಿದ್ದಾರೆ. ನಮ್ಮ ದೇಶದಲ್ಲಿ ಬಡ ಜನರು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೪೦ ರಷ್ಟು ಮತ್ತು ಪಟ್ಟಣ ಪ್ರದೇಶಗಳಲ್ಲಿ ಶೇಕಡಾ ೫೦ ರಷ್ಟು ಇದ್ದಾರೆಂದು ಪ್ರೊಫೆಸರ ದಾಂಡೇಕರ ಮತ್ತು ರಥ ಅವರು ಅಭಿಪ್ರಾಯಪಟ್ಟಿದ್ದಾರೆ. ಇಂಥ ಕುಟುಂಬಗಳು ೧೯೭೦-೭೧ರ ಬೆಲೆಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ತಿಂಗ ಳಿಗೆ ೧೫ ರೂಪಾಯಿಗಳು ಮತ್ತು ಪಟ್ಟಣಗಳಲ್ಲಿ ತಿಂಗಳಿಗೆ ೨೨.೫೦ ರೂಪಾಯಿಗಳಿಗಿಂತ ಕಡಿಮೆ ಉತ್ಪನ್ನದ ಕುಟುಂಬಗಳಾಗಿದ್ದವು. ಕೆಲವು ಅರ್ಥಶಾಸ್ತ್ರಜ್ಞರು ನಮ್ಮ ದೇಶದಲ್ಲಿ ಬಡತನ ಇತ್ತೀಚೆಗಾಗಿ ಇನ್ನೂ ಹೆಚ್ಚಾಗಿದೆಯೆಂದು ಅಭಿಪ್ರಾಯಪಡುತ್ತಾರೆ. ಇಂಥ ಬಡಕುಟುಂಬಗಳು ತಮ್ಮ ಮಕ್ಕಳಿಗೆ ಹೊಟ್ಟೆ ತುಂಬ ಅನ್ನವನ್ನು ಕೊಡಲು ಅಸಮರ್ಥ ವಾಗಿರುವಾಗ ಪೌಷ್ಟಿಕ ಆಹಾರಗಳಾದ ಹಾಲು, ಹಣ್ಣು ಮುಂತಾದವುಗಳನ್ನು ಕೊಡುವ ದಂತೂ ಕನಸಿನ ಮಾತಾಯಿತು. ಕಳೆದ ೩೦-೪೦ ವರುಷಗಳಲ್ಲಿ ನಮ್ಮ ದೇಶದಲ್ಲಿ ಮಕ್ಕಳು ಬದುಕುವ ಪ್ರಮಾಣ ಹೆಚ್ಚುತ್ತಾ ನಡೆದಿದೆ. ಇದು ಒಳ್ಳೆಯದೇ ಆದರೆ ಮಕ್ಕಳ ಜೀವನ ಮಟ್ಟ ಸುಧಾರಿಸಿಲ್ಲ. ಬಡ ಕುಟುಂಬಗಳಲ್ಲಿ ಮಕ್ಕಳು ತಿನ್ನುಣ್ಣುವ ಮಟ್ಟ ಕಡಿಮೆಯಾಗಿದೆ. ಬಡಕುಟುಂಬಗಳಲ್ಲಿ ಮಕ್ಕಳು ಬದುಕುವ ಪ್ರಮಾಣವು ಕಡಿಮೆಯಿದ್ದಾಗ ಇದ್ದ ಒಂದು ಅಥವಾ ಎರಡು ಮಕ್ಕಳಿಗೆ ಸರಿಯಾಗಿ ತಿನ್ನುಣ್ಣಿಸಲು ಸಾಧ್ಯವಾಗುತ್ತಿತ್ತು. ಈಗ ಮಕ್ಕಳು ಹೆಚ್ಚು ಬದುಕುವದರಿಂದ ಎಲ್ಲ ಮಕ್ಕಳಿಗೂ ಉಣಿ ಸಲು ಸಾಕಷ್ಟು ಉತ್ಪನ್ನ ಬಡಕುಟುಂಬಗಳಿಗಿರುವದಿಲ್ಲ. ಆದ್ದರಿಂದ ಜನನ ಪ್ರಮಾಣವು ಕಡಿಮೆಯಾಗದ ಹೊರತು ನ್ಯೂನ ಪೋಷಣೆಯ ಸಮಸ್ಯೆಯನ್ನು ಬಿಡಿಸುವದು ಕಠಿಣ ವಾಗುತ್ತದೆ. ನಮ್ಮ ಕೇಂದ್ರ ಸರಕಾರವು ೧೯೭೦-೭೧ರಿಂದ ಚಿಕ್ಕ ಮಕ್ಕಳು ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈವರೆಗೆ ಶೇಕಡಾ ೧೦ರಷ್ಟು ಮಕ್ಕಳಿಗೂ ಈ ಯೋಜನೆಯ ಲಾಭ ಸಿಕ್ಕಿಲ್ಲವೆಂದ ಮೇಲೆ ನ್ಯೂನ ಪೋಷಣೆಯ ಸಮಸ್ಯೆಯ ಅರಿವು ನಮಗೆ ಬರಬಹುದು. ನಮ್ಮ ದೇಶದಲ್ಲಿ ಬಡತನವನ್ನು ನಾವು ಸಂಪೂರ್ಣ ನಿರ್ಮೂಲನ ಮಾಡುವವರೆಗೆ ಮಕ್ಕಳ ನ್ಯೂನ ಪೋಷಣೆಯ ಸಮಸ್ಯೆಯನ್ನು ಪರಿಹರಿಸುವದು ಸಾಧ್ಯವಿಲ್ಲ. ಅಲ್ಲಿಯವರೆಗೆ ಕೋಟಿ ಗಟ್ಟಲೆ ಮಕ್ಕಳು ನ್ಯೂನ ಪೋಷಣೆಯಿಂದ ಅನೇಕ ರೋಗಗಳಿಗೆ ತುತ್ತಾಗುತ್ತಾರೆ. ಅಥವಾ ಕಷ್ಟಮಯ ಜೀವನವನ್ನು ನಡೆಸುತ್ತಾರೆ.

ಶಿಕ್ಷಣ:

ಮಾನವನ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ ಅತೀ ಅವಶ್ಯ. ನಿರಕ್ಷರಿಗಳಾದ ಜನರು ಅಜ್ಞಾನದ ಅಂಧಕಾರದಲ್ಲಿ ಜೀವನವನ್ನು ಕಳೆಯುತ್ತಾರೆ. ಶಿಕ್ಷಣದ ಮಹತ್ವವನ್ನರಿತ ನಮ್ಮ ಸರಕಾರವು ೧೯೫೨ ರಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿತು. ಸ್ವಾತಂತ್ರ್ಯದ ನಂತರ ನಮ್ಮ ದೇಶದಲ್ಲಿ ಶಿಕ್ಷಣ ರಂಗದಲ್ಲಿ ಸಾಕಷ್ಟು ಪ್ರಗತಿಯಾಗಿದ್ದಾಗ್ಯೂ ನಿರಕ್ಷರಿ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವದು ವಿಷಾದದ ಸಂಗತಿ. ೧೯೭೧ರ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ೧೯೭೧ ರಲ್ಲಿ ೧೫ ಕೋಟಿ ಮಕ್ಕಳು ಶಾಲೆಗೆ ಹೋಗುವ (೫ ರಿಂದ ೧೪ ವರುಷ) ವಯಸ್ಸಿನವರಿದ್ದರು. ಅವರ ಪೈಕಿ ೯ ಕೋಟಿ ೭೪ ಲಕ್ಷ ಮಕ್ಕಳು ನಿರಕ್ಷರಿಗಳಾಗಿದ್ದರೆಂದ ಮೇಲೆ ನಮ್ಮ ದೇಶದ ಮಕ್ಕಳ ಶಿಕ್ಷಣದಲ್ಲಿ ನಾವು ಎಷ್ಟು ಹಿಂದುಳಿದಿದ್ದೇವೆಂಬ ಕಲ್ಪನೆ ನಮಗೆ ಬರುತ್ತದೆ. ನಿರಕ್ಷರಿ ಮಕ್ಕಳ ಸಂಖ್ಯೆ ನಮ್ಮ ದೇಶದಲ್ಲಿ ಬೆಳೆಯುತ್ತಾ ನಡೆದಿದೆ.

ತಃಖ್ತೆ–೧

ಮಕ್ಕಳಲ್ಲಿ ನಿರಕ್ಷರತೆ

(ಲಕ್ಷಣಗಳು)

ಜನಗಣತಿಯ ವರುಷ	ನಿರಕ್ಷರಿ ಮಕ್ಕಳು	ಸಾಕ್ಷರಿ ಮಕ್ಕಳು	ಒಟ್ಟು ಮಕ್ಕಳು
೧೯೫೧	೭೨೭.೮	೧೩೮.೩	೮೬೬.೧
೧೯೬೧	೮೦೩.೨	೩೩೬.೬	೧೧೩೯.೮
೧೯೭೧	೯೭೩.೬	೫೨೩.೩	೧೪೯೬.೯

ಮೇಲಿನ ಕೋಷ್ಟಕದ ಪ್ರಕಾರ ಸಾಕ್ಷರಿ ಮಕ್ಕಳ ಸಂಖ್ಯೆಯಲ್ಲಿ ನಾಲ್ಕುಪಟ್ಟು ಹೆಚ್ಚಳವಾಗಿದೆ. ಆದರೆ ಅದೇ ವೇಳೆಯಲ್ಲಿ ನಿರಕ್ಷರಿ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದನ್ನು ನಾವು ಕಂಡುಕೊಳ್ಳಬಹುದು.

ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿದ್ದಾಗ್ಯೂ ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಮಕ್ಕಳು ನಿರಕ್ಷರಿಗಳಾಗಿದ್ದಾರೆ. ಇಂಥ ಮಕ್ಕಳ ತಂದೆ ತಾಯಂದಿರು ಕಡುಬಡವರಾಗಿದ್ದು ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಬದಲು ದುಡಿಯಲು ಕಳಿಸುತ್ತಾರೆ. ಆದ್ದರಿಂದ ಇಂಥ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಸುಧಾರಿಸದ ಹೊರತು ಎಲ್ಲ ಮಕ್ಕಳೂ ಶಾಲೆಗೆ ಹೋಗಲು ಸಾಧ್ಯವಿಲ್ಲ. ಚೀನಾ ದೇಶದಲ್ಲಿ ಅಲ್ಲಿಯ ಆರ್ಥಿಕ

ಮತ್ತು ರಾಜಕೀಯ ವ್ಯವಸ್ಥೆ ಬೇರೆ ಇದ್ದ ಕಾರಣ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳೆಲ್ಲರೂ ಶಾಲೆಗೆ ಹೋಗುತ್ತಾರೆಂದು ಹೇಳಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಶೇಕಡಾ ೬೫ ರಷ್ಟು ಮಕ್ಕಳು ನಿರಕ್ಷರಿಗಳಾಗಿದ್ದಾರೆಂದರೆ ನಾವು ಈ ದಿಶೆಯಲ್ಲಿ ಎಷ್ಟು ಮುಂದುವರಿಯಬೇಕಾಗಿದೆಯೆಂಬ ಕಲ್ಪನೆ ನಮಗೆ ಬರಬಹುದು.

ಶ್ರಮಿಕ ಮಕ್ಕಳು :

ಕಡು ಬಡತನದಿಂದಾಗಿ ಎಷ್ಟೋ ಮಕ್ಕಳು ತಾವು ಆಡುವ ವಯಸ್ಸಿನಲ್ಲಿ ದುಡಿಯಲು ಹೋಗಬೇಕಾಗುತ್ತದೆ. ೧೯೭೧ ನೆಯ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ೧೦೭.೪ ಲಕ್ಷ ಮಕ್ಕಳು ದುಡಿಯುತ್ತಿದ್ದರೆಂದು ತಿಳಿದುಬರುತ್ತದೆ. ಈ ಶ್ರಮಿಕ ಮಕ್ಕಳು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿಯೇ ಇದ್ದಾರೆ. ಶೇಕಡಾ ೯೩ ರಷ್ಟು ಶ್ರಮಿಕ ಮಕ್ಕಳು ಗ್ರಾಮೀಣ ಪ್ರದೇಶಗಳಲ್ಲೂ, ಇನ್ನುಳಿದ ಶೇಕಡಾ ೭ ರಷ್ಟು ಶ್ರಮಿಕ ಮಕ್ಕಳು ಪಟ್ಟಣಗಳಲ್ಲಿಯೂ ಇದ್ದಾರೆಂದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ೧೯೭೧ ನೆಯ ಜನಗಣತಿಯ ಪ್ರಕಾರ ಒಟ್ಟು ನಿರಕ್ಷರಿ ಮಕ್ಕಳ ಸಂಖ್ಯೆ ೯೭೩.೬ ಲಕ್ಷ ವಿದ್ದು ಇವರಲ್ಲಿ ೧೦೭.೪ ಲಕ್ಷ ಮಕ್ಕಳು ಶ್ರಮಿಕರೆಂದು ತಿಳಿದು ಬರುತ್ತದೆ. ಇನ್ನುಳಿದ ೮೭೦ ಲಕ್ಷ ಮಕ್ಕಳು ಶ್ರಮಿಕರೂ ಅಲ್ಲ ಮತ್ತು ಶಾಲೆಗೂ ಹೋಗುತ್ತಿರಲಿಲ್ಲವೆಂದ ಹಾಗಾಯಿತು. ಈ ಮಕ್ಕಳು ಏನು ಮಾಡುತ್ತಿದ್ದರೆಂದು ಹೇಳುವದು ಬಹಳ ಕಠಿಣ. ಇಂಥ ಮಕ್ಕಳ ತಂದೆ ತಾಯಿಗಳು ಶಿಕ್ಷಣದ ಮಹತ್ವವನ್ನು ಅರಿಯುವವರೆಗೂ ನಮ್ಮ ದೇಶದಲ್ಲಿ ಎಷ್ಟೋ ಮಕ್ಕಳು ತಮ್ಮ ಜೀವನವನ್ನು ಗೊತ್ತು ಗುರಿಯಿಲ್ಲದೆ ಹೀಗೆಯೇ ಕಳೆಯಬೇಕಾಗುತ್ತದೆ.

ನಿವೇಶನ ಹಾಗೂ ಕೊಳಚೆ ಪ್ರದೇಶಗಳು :

೧೯೭೧ ರ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೪೭ ರಷ್ಟು ಮತ್ತು ಪಟ್ಟಣ ಪ್ರದೇಶಗಳಲ್ಲಿ ಶೇಕಡಾ ೫೦ ರಷ್ಟು ಕುಟುಂಬಗಳು ಒಂದೇ ಕೋಣೆಯ ನಿವೇಶನದಲ್ಲಿ ಇರುತ್ತಿದ್ದರೆಂದು ತಿಳಿದು ಬರುತ್ತದೆ. ಜನಸಂಖ್ಯೆಯ ಹೆಚ್ಚಳದಿಂದ ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನದ ಪರಿಸ್ಥಿತಿ ಹದಗೆಡುತ್ತ ನಡೆದಿದೆ. ಗ್ರಾಮೀಣ ಪ್ರದೇಶದ ಜನರು ಹೊಸ ಮನೆಗಳನ್ನು ಕಟ್ಟದೇ, ಇದ್ದ ಮನೆಯನ್ನೇ ಅಣ್ಣ, ತಮ್ಮಂದಿರಲ್ಲಿ ಹಂಚುತ್ತ ಹೋಗುವದರಿಂದ ಪ್ರತಿಯೊಬ್ಬರೂ ಮನೆಯ ಒಂದು ಭಾಗದಲ್ಲಿ ಸಂಸಾರಮಾಡುತ್ತ ಹೋಗಬೇಕಾಗುತ್ತದೆ. ಪಟ್ಟಣದಲ್ಲಿ ಗ್ರಾಮೀಣ ಪ್ರದೇಶಗಳಿಂದ ವಲಸೆ ಬರುವ ಜನರು ಕೊಳಚೆ ಪ್ರದೇಶಗಳಲ್ಲಿ ತಮ್ಮ ಜೀವನವನ್ನು ಕಳೆಯಬೇಕಾಗುತ್ತದೆ. ವಿಪರೀತ ಜನಸಂದಣಿಯು ಇಂಥ ಪ್ರದೇಶಗಳಲ್ಲಿ ಕುಡಿಯುವ

ನೀರಿನ ವ್ಯವಸ್ಥೆ ಮತ್ತು ಇನ್ನಿತರ ವ್ಯವಸ್ಥೆಗಳು ಇಲ್ಲದ್ದರಿಂದ ಜನರು ರೋಗ ರುಜಿನುಗಳಿಗೆ ತುತ್ತಾಗುತ್ತಾರೆ. ಇಂಥ ವಾತಾವರಣದಲ್ಲಿ ಬೆಳೆದ ಮಕ್ಕಳು ಆರೋಗ್ಯದಿಂದಿರಲು ಸಾಧ್ಯವಿಲ್ಲ.

ಸಾಮಾಜಿಕ ಪರಿಣಾಮಗಳು :

೧೯೮೧ ಕ್ಕೆ ಮುಗಿಯುವ ೩೦ ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲಿ ಮಕ್ಕಳ ಸಂಖ್ಯೆ ದುಪ್ಪಟ್ಟಾಗುತ್ತದೆಯೆಂದು ನಾವೀಗ ಕಂಡುಕೊಂಡಿದ್ದೇವೆ. ನಿರಕ್ಷರಿ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ ನಡೆದಿದ್ದು ನಮ್ಮ ದೇಶದಲ್ಲೀಗ ಶೇಕಡಾ ೬೫ ರಷ್ಟು ಮಕ್ಕಳು ನಿರಕ್ಷರಿಗಳಾಗಿದ್ದಾರೆಂದು ನಾವು ತಿಳಿದುಕೊಂಡದ್ದಾಯಿತು. ಅನೇಕ ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮನೆತನದ ಭಾರ ಹೊತ್ತು ದುಡಿಯಬೇಕಾಗುತ್ತದೆ. ಅನೇಕ ಮಕ್ಕಳು ಶಾಲೆಗೂ ಹೋಗದೆ ಮತ್ತು ದುಡಿಯದೆ ತಮ್ಮ ವೇಳೆಯನ್ನು ಕಳೆಯುತ್ತಾರೆ. ಇಂಥ ಮಕ್ಕಳು ಅದರಲ್ಲಿಯೂ ಪಟ್ಟಣಗಳಲ್ಲಿರುವ ಮಕ್ಕಳು ಉಡಾಳರಾಗಿ ತಿರುಗುತ್ತಾ ಸಣ್ಣಪುಟ್ಟ ಕಳ್ಳತನಗಳಲ್ಲಿ ತೊಡಗುತ್ತಾರೆ. ಇಂಥ ಮಕ್ಕಳು ಬಡಕುಟುಂಬಗಳಿಂದ ಬಂದವರಾಗಿದ್ದು ಅವರ ತಂದೆ ತಾಯಿಗಳೂ ನಿರಕ್ಷರಿಗಳಾಗಿರುತ್ತಾರೆ. ಕೊಳಚೆ ಪ್ರದೇಶಗಳಲ್ಲಿರುವ ಕುಟುಂಬಗಳಲ್ಲಿ ಬಡಿದಾಟ, ಕುಡಿಯುವದು, ಕಳ್ಳಮಾರುವದು ಸಾಮಾನ್ಯವಾಗಿರುವದರಿಂದ ಇಂಥ ವಾತಾವರಣದಲ್ಲಿ ಬೆಳೆದ ಮಕ್ಕಳು ಅವನ್ನೇ ಅನುಕರಣೆ ಮಾಡಲು ಪ್ರಾರಂಭಿಸುತ್ತಾರೆ. ಅವರು ದೊಡ್ಡವರಾದ ನಂತರ ಅಪರಾಧಗಳಲ್ಲಿ ತೊಡಗುವ ವ್ಯಕ್ತಿಗಳಾಗುತ್ತಾರೆ.

ಇದೆಲ್ಲಕ್ಕೂ ಮೂಲಕಾರಣ ಹೆಚ್ಚಿಗೆ ಇರುವ ಜನನ ಪ್ರಮಾಣವೆಂದೇ ನಾವು ಹೇಳಬಹುದು. ಬೆಳೆಯುತ್ತಿರುವ ಜನಸಂಖ್ಯೆಯನ್ನು ನಾವು ಹತೋಟಿಯಲ್ಲಿ ತರದೇ ಹೋದಲ್ಲಿ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವದು ನಮಗೆ ಕಠಿಣವಾಗುತ್ತದೆ. ಆದ್ದರಿಂದ ನಾವು ಮೊದಲು ಜನನ ಪ್ರಮಾಣವನ್ನು ಕೆಳಗೆ ತರಲು ಪ್ರಯತ್ನ ಮಾಡಬೇಕು. ಕುಟುಂಬಯೋಜನಾ ಕಾರ್ಯಕ್ರಮಗಳು ನಮ್ಮ ದೇಶದಲ್ಲಿ ಕಳೆದ ೨೫ ವರ್ಷಗಳಿಂದಲೂ ಇವೆ. ಇವುಗಳ ಜೊತೆ ಉಳಿದ ಸಹಾಯಕ ಕಾರ್ಯಕ್ರಮಗಳನ್ನು ನಾವು ಕೈಕೊಂಡಲ್ಲಿ ಕುಟುಂಬಯೋಜನಾ ಕಾರ್ಯಕ್ರಮವು ಯಶಸ್ವಿಯಾಗುತ್ತದೆ. ಇಂಥ ಕಾರ್ಯಕ್ರಮಗಳು ಯಾವವೆಂಬುದನ್ನು ನಾವೀಗ ನೋಡುವಾ.

ಮೊದಲನೆಯದಾಗಿ ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು ಹೆಚ್ಚಿಸುವದು. ಈಗ ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು ೧೮ ವರುಷಗಳಿಗೂ ಗಂಡಸರ ಮದುವೆಯ ವಯಸ್ಸನ್ನು ೨೧ ವರುಷಗಳಿಗೂ ಏರಿಸಲಾಗಿದೆ. ಆದರೆ ನಮ್ಮ ದೇಶದಲ್ಲಿಯ ಸಮೀಕ್ಷಣಾ ವರದಿಗಳ ಪ್ರಕಾರ ಹೆಣ್ಣು ಮಕ್ಕಳ

ಮದುವೆಯ ವಯಸ್ಸನ್ನು ೨೨ ವರುಷಗಳಿಗೆ ಏರಿಸಿದರೆ ಮಾತ್ರ ಜನನ ಪ್ರಮಾಣದಲ್ಲಿ ಗಣನೀಯ ಇಳಿತವನ್ನು ಸಾಧಿಸಲು ಸಾಧ್ಯವೆಂದು ತಿಳಿದುಬಂದಿದೆ. ಹೀಗೆ ನಾವು ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು ಏರಿಸಬೇಕಾದರೆ ಹೆಣ್ಣು ಮಕ್ಕಳಿಗೆ ಶಿಕ್ಷಣವು ಅವಶ್ಯವಾಗುತ್ತದೆ. ಸಾಮಾನ್ಯ ಶಿಕ್ಷಣದ ಜೊತೆಗೆ ಅವರಿಗೆ ಉದ್ಯೋಗ ಅವಕಾಶಗಳೂ ಹೆಚ್ಚಬೇಕು. ಈ ರೀತಿ ಅವರಿಗೆ ಶಿಕ್ಷಣ ಮತ್ತು ಉದ್ಯೋಗ ಅವಕಾಶ ಗಳಿಲ್ಲದೆ ಅವರ ಮದುವೆಯ ವಯಸ್ಸನ್ನು ಹೆಚ್ಚಿಸಲು ಸಾಧ್ಯವಿಲ್ಲ. ಹೆಣ್ಣು ಮಕ್ಕಳಿಗೂ ಸಮಾನ ಅವಕಾಶಗಳು ಒದಗಿದಾಗ ಈ ರೀತಿಯ ಬದಲಾವಣೆ ಸಾಧ್ಯವಾಗುತ್ತದೆ. ಮೇಲಾಗಿ ಸಣ್ಣ ಕುಟುಂಬವು ಪ್ರಪಂಚದಲ್ಲಿ ಬಂದಾಗ ೩೦ ವರುಷದ ಮದುವೆಯಾದ ಹೆಣ್ಣು ಮಕ್ಕಳಿಗೂ ಮನೆಯ ಹೊರಗೆ ಏನಾದರೂ ಉದ್ಯೋಗ ಅವಕಾಶ ಬೇಕಾಗು ತ್ತದೆ.

ಎರಡನೆಯದಾಗಿ ಮಕ್ಕಳ ಶ್ರಮಿಕ ವರ್ಗವನ್ನು ತೆಗೆಧು ಹಾಕುವದು. ಎಷ್ಟೋ ಮಕ್ಕಳು ನಮ್ಮ ದೇಶದಲ್ಲಿ ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುತ್ತಾರೆ. ಇಂಥ ಮಕ್ಕಳನ್ನು ನಾವು ಶಾಲೆಗೆ ಕಳಿಸುವ ವ್ಯವಸ್ಥೆ ಮಾಡಬೇಕು. ಶಿಕ್ಷಣದಿಂದಲೇ ಮಾನವನ ಉತ್ಕರ್ಷ ಹೆಚ್ಚಾಗುತ್ತದೆ. ಆದ್ದರಿಂದ ಈ ದಿಶೆಯಲ್ಲಿ ಪ್ರಯತ್ನವು ಅತ್ಯವಶ್ಯ.

ಕೊನೆಯದಾಗಿ ನಮ್ಮ ಕುಟುಂಬ ಯೋಜನಾ ಕಾರ್ಯಕ್ರಮವು ಯಶಸ್ವಿಯಾಗ ಬೇಕಾದರೆ ಮಕ್ಕಳ ಮರಣ ಪ್ರಮಾಣವು ಕಡಿಮೆಯಾಗಬೇಕು. ಹುಟ್ಟಿದ ಪ್ರತಿಯೊಂದು ಕೂಸು ಬೆಳೆದು ದೊಡ್ಡವನಾಗುವ ಭರವಸೆ ತಂದೆತಾಯಿಗಳಿಗೆ ಬಂದಾಗ ಅವರು ತಾವಾಗಿಯೇ ಕುಟುಂಬ ಯೋಜನೆಯನ್ನು ಕಾರ್ಯಗತ ಗೊಳಿಸುತ್ತಾರೆ. ಆದ್ದರಿಂದ ಈ ಅಂತರರಾಷ್ಟ್ರೀಯ ಮಗುವಿನ ವರುಷದಲ್ಲಿ ಈ ರೀತಿ ಭರವಸೆ ನೀಡಬಲ್ಲ ಮಗುವೇ ನಮ್ಮ ಕುಟುಂಬಯೋಜನೆಯನ್ನು ಯಶಸ್ವಿಗೊಳಿಸಲು ಸಹಾಯಕವಾಗಬಲ್ಲದು.

ಗ್ರಂಥಋಣ

1. Coale, Ansley and Edgar M. Hoover, *Population growth and Economic Development in Low-Income countries*, Princeton University Press, Princeton, N. J., 1958.

2. *Census of India*, 1971.

3. U. N. *The Population Debate : Dimensions and Perspectives* (Papers of the World Population Conference, Bucharest, 1974).

ಮಕ್ಕಳಲ್ಲಿ ಸೃಜನಶೀಲತೆ

● ಎ. ಎಸ್. ಧರಣೇಂದ್ರಯ್ಯ

ಪೀಠಿಕೆ : ಸೃಷ್ಟಿಯ ನಿರಂತರಿತ ನಾವೀನ್ಯತೆಯು ಅದರ ಸೃಜನಶೀಲತೆಯ ಕುರುಹು. ಸೃಷ್ಟಿಯ ಅವಿಭಾಜ್ಯ ಅಂಗವೆನಿಸಿರುವ ಮಾನವನು ಸ್ವತಃ ಸೃಷ್ಟಿಕ್ರಿಯೆಯ ಕೂಸೆನಿಸುವುದರ ಜೊತೆಗೆ ಪುನಸ್ಸೃಷ್ಟಿಯ ಪ್ರಬಲ ಸಾಧನವೂ ಎನಿಸಿದ್ದಾನೆ. ತನ್ನ ಬದುಕನ್ನು ಹಸನಾಗಿಸಿಕೊಳ್ಳುವ ಬಯಕೆಯಿಂದ ನಿಸರ್ಗದ ಅಂತರ್ಯವನ್ನು ಅರಿಯಲು ಸತತ ಹೋರಾಟ ನಡೆಸಿಕೊಂಡುಬಂದಿರುವ ಆತನು, ತನ್ನ ಸೃಜನಶೀಲತೆಯಿಂದ ಬೆರಗುಗೊಳಿಸುವಂಥ ಶೋಧನೆಗಳನ್ನು ಮಾಡಿದ್ದಾನೆ; ಗಹನವೆನಿಸುವಂತಹ ಪರಿಕಲ್ಪನೆಗಳು, ತತ್ವಗಳು ಮತ್ತು ಸಿದ್ಧಾಂತಗಳನ್ನು ರೂಪಿಸಿದ್ದಾನೆ; ಸೌಂದರ್ಯಪೂರ್ಣವೆನಿಸುವಂತಹ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ನಿರ್ಮಿಸಿದ್ದಾನೆ. ಆದರೂ ಈ ಸಾಧನೆಗಳು ನಿಸರ್ಗದ ನಿಗೂಢ ರಹಸ್ಯದ ದೃಷ್ಟಿಯಿಂದ, ಸೀಮಿತ ಸತ್ಯಸೌಂದರ್ಯಗಳೆಂಬುದನ್ನು ಮನಗಾಣುವುದು ಕಷ್ಟವಲ್ಲ. ಇಲ್ಲಿಯವರೆಗೆ ಮಾನವನು ಕಂಡುಂಡಿರುವ ಈ ಸತ್ಯ ಸೌಂದರ್ಯಗಳಲ್ಲಿ ಹಲವು ಕೇವಲ ಕೆಲವು ಆಯಾಮಗಳಿಗೆ ಗೋಚರವಾದವುಗಳು. ಆದರೆ ನಿಸರ್ಗವನ್ನು ನಾವು ನೋಡುವ ಆಯಾಮಗಳ ಸಂಖ್ಯೆ ಮತ್ತು ಪರಹುಗಳಲ್ಲಿ ಹೆಚ್ಚಳ ಸಾಧ್ಯವೆಂಬುದು ವಿದ್ವಾಂಸರ ಮತ. ಅಂತಹ ಸಾಧ್ಯತೆ ಸಾಕ್ಷಾತ್ಕಾರ ಪಡೆಯುತ್ತಾ ಹೋದಂತೆ ಸೃಷ್ಟಿಯ ಬಗ್ಗೆ ನಮಗೆ ಈಗಿರುವ ಪರಿಕಲ್ಪನೆಗಳೇ ಬೇರೆಯಾಗುತ್ತಾ ಹೋಗಬಹುದು. ನೈಸರ್ಗಿಕ ರಹಸ್ಯಗಳ ಬಗ್ಗೆ ನಮಗೆ ಈಗಾಗಲೇ ಗೋಚರವಾಗಿರುವ ಸತ್ಯಾಂಶಗಳಲ್ಲಿ ವ್ಯತ್ಯಯ ಕಂಡುಬರಬಹುದು. ಇಂತಹ ವ್ಯತ್ಯಯಗಳಿಗೆ ನಾವು ಸೃಷ್ಟಿಯನ್ನು ಎಂತಹ ಸ್ಥಿತಿಗತಿಗಳಲ್ಲಿ ನೋಡುತ್ತೇವೆ ಮತ್ತು ಎಂತಹ ಆಯಾಮಗಳ ಮೂಲಕ ನೋಡುತ್ತೇವೆ ಎಂಬುದು ಕಾರಣ. ಉದಾಹರಣೆಗೆ ಭೂಮಿಯ ನೋಟವನ್ನೇ ತೆಗೆದುಕೊಳ್ಳೋಣ. ವಿಮಾನಯಾನ ಕಾಲದಲ್ಲಿ ಆಮ್ಲಜನಕ, ಒತ್ತಡ ಮತ್ತು ಗುರುತ್ವಾಕರ್ಷಣೆಗಳ ಅನುಕೂಲವಿರುವಾಗ ಭೂಮಿಯತ್ತ ನೋಡಿದಾಗ ಅದರ ಬಗ್ಗೆ ನಮಗೆ ಬರುವ ಕಲ್ಪನೆಗೂ: ಗಗನನೌಕೆಯಲ್ಲಿ ಮಿಂಚಿನಂತೆ ಮುಂದುವರಿಯುತ್ತಿರುವಾಗ, ಆಮ್ಲಜನಕ, ಒತ್ತಡ ಮತ್ತು ಗುರುತ್ವಾಕರ್ಷಣೆಗಳ ಅಭಾವಸ್ಥಿತಿಯಲ್ಲಿ, ಭೂಮಿಯತ್ತ ನೋಡಿದಾಗ ಅದರ ಬಗ್ಗೆ ನಮಗೆ ಬರುವ ಕಲ್ಪನೆಗೂ ನೆಲ–ಮುಗಿಲುಗಳಷ್ಟೇ ವ್ಯತ್ಯಾಸ

ಕಂಡುಬರಬಹುದು. ಬೀಜಗಣಿತದ ಒಂದು ಸರಳ ಸೂತ್ರವನ್ನು ರೂಪಿಸುವಲ್ಲಿಯೂ, ಮತ್ತು ಇಡೀ ವಿಶ್ವತಂತ್ರವನ್ನು ಗ್ರಹಿಸಲು ಅನುಕೂಲವಾಗುವಂತಹ ಸಿದ್ಧಾಂತವೊಂದನ್ನು ರೂಪಿಸುವಲ್ಲಿಯೂ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತದೆ. ಇದರಂತೆಯೇ, ಒಂದು ಸುಂದರ ಭಾವಗೀತೆಯನ್ನು ಓದಿದಾಗ ಆಗುವ ಆನಂದಾನುಭವಕ್ಕೂ, ಮತ್ತು ಒಂದು ಮಹಾಕಾವ್ಯವನ್ನು ಓದುವಾಗ ಆಗುವ ಆನಂದಾನುಭವಕ್ಕೂ ಭೂಮ್ಯಂತರಿಕ್ಷಗಳ ಅಂತರವನ್ನು ಕಾಣಬಹುದು. ಇವುಗಳಲ್ಲಿ ಒಂದು ಲಲಿತಸುಂದರವೆನಿಸಿದರೆ ಮತ್ತೊಂದು ಬೃಹದ್‌ಭವ್ಯವೆನಿಸಬಹುದು. ಕವನಸೌಂದರ್ಯವನ್ನು ಸವಿಯಲು ನಾವು ಬಳಸುವ ಆಯಾಮಗಳು, ಮಹಾಕಾವ್ಯಸೌಂದರ್ಯದರ್ಶನಕ್ಕಾಗಿ ಬಳಸುವ ಆಯಾಮಗಳ ಸಂಖ್ಯೆ, ಗುಣ ಮತ್ತು ಆಳ–ಅಗಲಗಳಿಗೆ ಎಂದೆಂದೂ ಸರಿಗಟ್ಟಲಾರವು. ಈ ಎರಡು ಅನುಭವಗಳೂ ಒಂದಿಲ್ಲ ಒಂದು ರೀತಿಯಲ್ಲಿ ಪುನರ್‌ಸೃಷ್ಟಿ ಕಾರ್ಯಗಳು. ಅವುಗಳಿಗೆ ವ್ಯಕ್ತಿಯ ಸೃಜನಶೀಲತೆಯೇ ಆಧಾರ. ಅಂದರೆ ಎರಡು ಅನುಭವಗಳ ಅಂತರ್ಯದಲ್ಲಿ ಸೃಷ್ಟಿಪ್ರತಿಭೆ ಮನೆಮಾಡಿಕೊಂಡಿದೆ. ಹೀಗಿದ್ದರೂ, ಮಹಾಕಾವ್ಯದ ರಸಾನುಭವಕ್ಕೆ ಬೇಕಾದ ಸೃಷ್ಟಿಪ್ರತಿಭೆ ಹೆಚ್ಚು ವಿಶಿಷ್ಟವಾದುದು, ವೈವಿಧ್ಯಪೂರ್ಣವಾದುದು.

ಹೊಸ ಹೊಸ ಅನುಭವಗಳನ್ನು ಪಡೆಯಲು, ಹೊಸಹೊಸ ಪರಿಕಲ್ಪನೆಗಳನ್ನು ರೂಪಿಸಲು ಹಾಗೂ ನಿಸರ್ಗದ ರಹಸ್ಯವ್ಯವಹಾರಗಳನ್ನು ಹೊಸಹೊಸ ಆಯಾಮಗಳಲ್ಲಿ ನೋಡಲು ಮಾನವನಿಗೆ ನೆರವಾಗುವುದು ಆತನ ಸೃಷ್ಟಿಪ್ರತಿಭೆ (creative talent). ಅಂತಹ ಪ್ರತಿಭೆಯ ನಮ್ಯತೆ ಆಶ್ಚರ್ಯಕರವೆನಿಸುವಂತಹುದು. ಇಂತಹ ಸೃಷ್ಟಿಪ್ರತಿಭೆಯ ಪರಮಸಂಪತ್ತು ತನ್ನಲ್ಲಿಯೇ ಹುದುಗಿದ್ದರೂ, ಅದರ ಸೂಕ್ತಪ್ರಯೋಜನ ಪಡೆಯುವಲ್ಲಿ ಮಾನವನು ಇನ್ನೂ ನಾವು ನಿರೀಕ್ಷಿಸಿದಷ್ಟು ಜಯಶಾಲಿಯಾಗಿಲ್ಲ ಎಂದು ಹೇಳಿದರೆ ಬಹುಶಃ ತಪ್ಪಾಗದು. ಇದಕ್ಕೆ ಆತನು ಇನ್ನೂ ನಡೆಸುತ್ತಿರುವ ಅಸ್ತವ್ಯಸ್ತ ಅಮಾನವೀಯ ಸಾಮಾಜಿಕ ಜೀವನವೇ ಜೀವಂತ ನಿದರ್ಶನ. ಇಂತಹ ಅಸಹನೀಯ ಪರಿಸ್ಥಿತಿಗೆ, ತನ್ನ ಸೃಷ್ಟಿಪ್ರತಿಭೆಯ ಬಗ್ಗೆ ಮಾನವನಿಗೆ ನಿಖರವಾದ ಅರಿವು ಇಲ್ಲದಿರುವುದೇ ಬಹುಶಃ ಪ್ರಮುಖ ಕಾರಣ. ಒಂದುಪಕ್ಷ ಅಂತಹ ಅರಿವು ಹೊಳಪುಗಳಂತೆ ಅಲ್ಲಲ್ಲಿ ಕಾಣಿಸಿಕೊಂಡರೂ, ಮೂಲ ಪ್ರತಿಭೆಯನ್ನು ಹೊರಸೆಳೆದು, ನಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ತಂತ್ರ ನಮಗಿನ್ನೂ ಚೆನ್ನಾಗಿ ಕರಗತವಾದಂತಿಲ್ಲ. ಅಂದಮೇಲೆ ಸೃಷ್ಟಿಪ್ರತಿಭೆಯನ್ನು ಸರಿಯಾಗಿ ಗುರುತಿಸಿ, ಯುಕ್ತಿಯಿಂದ ಹೊರಸೆಳೆದು, ಹುಲುಸಾಗಿ ಬೆಳಸಿ, ಸಮರ್ಪಕವಾಗಿ ಬಳಸಿಕೊಳ್ಳುವ ಕಾರ್ಯ ಪ್ರಜ್ಞಾಪೂರ್ವಕವಾಗಿ ನಡೆಯಬೇಕಾದುದು ಅನಿವಾರ್ಯವೆನಿಸುತ್ತದೆ. ಇಂತಹ ಕಾರ್ಯದ ಆರಂಭ ಶಿಶುಗಳ ಮೇಲೇ ಆಗಬೇಕಾಗುತ್ತದೆ.

ಸೃಜನಶೀಲತೆ ಎಂದರೇನು? : ಸಾಮಾನ್ಯ ಜನರ ಗ್ರಹಿಕೆಯಲ್ಲಿ, ಸೃಜನಶೀಲತೆಯೆಂದರೆ ಕಲೆ-ಸಾಹಿತ್ಯ,ವೈಜ್ಞಾನಿಕ ಸಂಶೋಧನೆ, ವೈಚಾರಿಕ ಪರಿಕಲ್ಪನೆ ಮುಂತಾ

ದವುಗಳಲ್ಲಿ ಅಭಿವ್ಯಕ್ತಿ ಪಡೆಯುವ ಒಂದು ವಿಶಿಷ್ಟ ಮನೋವ್ಯಾಪಾರ, ಆದರೆ ಇದು ಸೃಜನಶೀಲತೆಯ ಬಗೆಗಿನ ಒಂದು ಸಂಕುಚಿತ ದೃಷ್ಟಿ. ವಿಶಾಲ ದೃಷ್ಟಿಯಿಂದ ನೋಡಿದಾಗ, ವ್ಯಕ್ತಿ ಅಥವಾ ಸಮಾಜದ ಯಾವುದೇ ಕಾರ್ಯದಲ್ಲಿ ಸೃಜನಶೀಲತೆಯು ಪ್ರಕಟವಾಗುವುದನ್ನು ಕಾಣಬಹುದು. ಅಂತಹ ಕಾರ್ಯವು ಹೂದಾನಿ ಜೋಡಣೆಯಂತಹ ಅತ್ಯಂತ ಸಣ್ಣ ಪ್ರಮಾಣದ್ದಾಗಿರಬಹುದು. ಅಥವಾ ಈ ಹಿಂದೆಯೇ ಹೇಳಿದಂತೆ ಇಡೀ ಸೃಷ್ಟಿಯ ಅಂತರಾಳದಲ್ಲಿ ಪ್ರವಹಿಸುವ ನಿಗೂಢ ವಿಳಿಯ ಗ್ರಹಿಕೆಯಂತಹ ಮಹತ್ತರದ್ದಾಗಿರಬಹುದು. ನಮ್ಮ ದೈನಂದಿನ ಜೀವನದಲ್ಲಿಯೇ, ಶಿಶುವಿನ ಗೀಚುವಿಕೆಯಲ್ಲಿ, ಗೃಹಿಣಿಯ ರಸಪಾಕದಲ್ಲಿ, ಬಡಗಿ ಕಮ್ಮಾರರ ಕುಶಲಕರ್ಮದಲ್ಲಿ, ಶಿಕ್ಷಕನ ಬೋಧನಾ ರೀತಿಯಲ್ಲಿ, ಆಡಳಿತಗಾರನ ಅಚ್ಚುಕಟ್ಟುತನದಲ್ಲಿ, ನಾವು ಸೃಜನಶೀಲತೆಯ ಸಾಕ್ಷಾತ್ಕಾರವನ್ನು ಕಾಣಬಹುದು. ಅಂದರೆ, ಯಾವುದೇ ವಸ್ತು, ವಿಚಾರ ಅಥವಾ ಕ್ರಿಯೆಯ ನಿರ್ಮಾಣದಲ್ಲಿ, ಸುಧಾರಣೆಯಲ್ಲಿ, ಅದನ್ನು ಹೆಚ್ಚು ಸಂಪದ್ಯುಕ್ತವನ್ನಾಗಿ ಮಾಡುವಲ್ಲಿ ಅಥವಾ ಹೆಚ್ಚು ಉಪಯುಕ್ತವನ್ನಾಗಿಸುವಲ್ಲಿ ಅನುಪಮ ಪಾತ್ರವನ್ನು ನಿರ್ವಹಿಸುವ ಮನೋಪ್ರವೃತ್ತಿಯೇ ಸೃಜನಶೀಲತೆ ಎನಿಸುತ್ತದೆ. ಸೃಜನಶೀಲತೆಯಿಂದ ಬದುಕು ತಿಳಿಯಾಗುತ್ತದೆ, ಜೀವನ ಕಲೆಯಾಗುತ್ತದೆ, ಕಲೆ ಜೀವಂತವಾಗುತ್ತದೆ.

ಸೃಜನಶೀಲತೆಯ ಅಭಿವ್ಯಕ್ತತೆಗೆ ಕಾರಣವಾಗುವ ಮಾನಸಿಕಕ್ರಿಯೆ ಎಂದರೆ. 'ಸೃಜನಾತ್ಮಕ ಚಿಂತನೆ' (Creative thinking). ಈ ಚಿಂತನೆಯ ಮೂಲಕ ಮೂಲ ವಸ್ತುವಿಷಯಗಳ ನವನವೀನ ಸಂಯೋಜನೆಗಳು ಸಾಧ್ಯವಾಗಿ. ಚಿತ್ರವಿಚಿತ್ರವೆನಿಸುವ ಬಂಧಗಳುಂಟಾಗುತ್ತವೆ. ಈ ಬಂಧಗಳು, ಸಂಬಂಧಪಟ್ಟ ವ್ಯಕ್ತಿ ಅಥವಾ ಸಮಾಜದ ವಿಶಿಷ್ಟ ಅಗತ್ಯಗಳಿಗೆ ಅನುಗುಣವಾಗಿರುತ್ತವೆ ಅಥವಾ ಒಂದಿಲ್ಲ ಒಂದು ರೀತಿಯಲ್ಲಿ ಉಪಯುಕ್ತವೆನಿಸುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಹೊಸ ಹೊಸ ಬಂಧಗಳಾಗಿ ಮಾರ್ಪಡುವ ಮೂಲಾಂಶಗಳು ಎಷ್ಟೆಷ್ಟು ವಿಚಿತ್ರವೆನಿಸುತ್ತವೋ ಅವು ಅಷ್ಟಷ್ಟು ಸೃಜನಾತ್ಮಕವಾಗಿರುತ್ತವೆ. ವಸ್ತುವಿಷಯಗಳ ಬಗ್ಗೆ ನಮ್ಮ ಅರಿವು ಮತ್ತು ಜ್ಞಾನಸಂಪತ್ತುಗಳನ್ನು ಹೆಚ್ಚಿಸುವ ಯಾವುದೇ ಕೃತಿಯು ಸೃಜನಾತ್ಮಕವೆನಿಸುತ್ತದೆ; ವಿಶಿಷ್ಟರೀತಿಯ ಸೌಂದರ್ಯಾನುಭವವನ್ನು ಉಂಟುಮಾಡಬಲ್ಲ ಯಾವುದೇ ಕಲಾತ್ಮಕ ಸೃಷ್ಟಿಯೂ ಸೃಜನಾತ್ಮಕವೆನಿಸುತ್ತದೆ: ಒಂದು ಪದಾರ್ಥದ ಉಪಯೋಗವನ್ನು ಕುರಿತು ಕೊಡುವ ಪುನರ್ವ್ಯಾಖ್ಯೆಯೂ ಹಾಗೂ ಸನ್ನಿವೇಶವೊಂದಕ್ಕೆ ಕೊಡುವ ವಿಭಿನ್ನ ರೀತಿಯ ಅರ್ಥವಿವರಣೆಯೂ ಸೃಜನಾತ್ಮಕವೆನಿಸುತ್ತವೆ.

ಸೃಜನಾತ್ಮಕತೆಯಲ್ಲಿ ಕಂಡುಬರುವ ಚಿಂತನೆಯ ಸ್ವರೂಪವು ಸಾಮಾನ್ಯ ಚಿಂತನೆಗಿಂತ ಬೇರೆಯಾಗಿರುತ್ತದೆ. ವಿಭಿನ್ನತೆ ಅದರ ಪ್ರಮುಖ ಲಕ್ಷಣ. ಸಾಮಾನ್ಯ ಚಿಂತನೆಯು ಏಕಮುಖಿಯಾಗಿದ್ದು, ನವಸೃಷ್ಟಿಯಲ್ಲಿ ನಿರುಪಯುಕ್ತವೆನಿಸುತ್ತದೆ, ಸವೆದ

ಪಾಲಿಯೋಗುತ್ತದೆ. ಬರುಬರುತ್ತಾ ಕೊರಕಲಾಗುವ ಸಾಧ್ಯತೆಯೂ ಇಲ್ಲದಿಲ್ಲ. 'ಎರಡಕ್ಕೆ ಎರಡು ಸೇರಿದರೆ ನಾಲ್ಕು' ಎಂಬ ಧೋರಣೆ ಒಂದು ದೃಷ್ಟಿಯಲ್ಲಿ ಚಿಂತನೆಯ ಸ್ಥಗಿತ ರೂಪ. ಅದಕ್ಕೆ ಬದಲಾಗಿ ಎರಡಕ್ಕೆ ಎರಡು ಸೇರಿದರೆ ಐದು ಏಕೆ ಆಗಬಾರದು ? ಎಂಬ ಪ್ರಶ್ನೆ ಎದ್ದಾಗ ಚಿಂತನೆ ಅಲುಗುತ್ತದೆ, ಅದರ ಗತಿ ವೈವಿಧ್ಯಪೂರ್ಣವಾಗುತ್ತದೆ. ನಮಗೆ ಸಾಮಾನ್ಯವಾಗಿ ಗೊತ್ತಿರುವ ವಿಷಯಗಳ ಬಗ್ಗೆ ಮಕ್ಕಳು ಕೇಳುವಂತಹ ಪ್ರಶ್ನೆಗಳು, ನಮ್ಮ ಚಿಂತನೆಯ ಬುಡವನ್ನೇ ಅಲುಗಿಸಬಲ್ಲವು. ಸಾಮಾನ್ಯ ಚಿಂತನೆಯಲ್ಲಿ ಪರಿತಪ್ಪುಗಳ ಹಿಡಿತವಿರುತ್ತದೆ. ಆದರೆ ಯಾವುದೇ ವಸ್ತು ಅಥವಾ ವಿಷಯಕ್ಕೆ ನಾನಾ ಮುಖಗಳಿರುವ ಸಾಧ್ಯತೆ ಇದೆ ಎಂದಾಗ ಸಂಬಂಧಪಟ್ಟ ಚಿಂತನೆಯು ಗರಿಬಿಚ್ಚಿ ಹಾರುತ್ತದೆ, ಹಲವು ಮುಖ ಧರಿಸುತ್ತದೆ. ಅದರ ಪರಿಣಾಮ ಒಂದೇ ವಸ್ತು ಅಥವಾ ವಿಷಯಕ್ಕೆ ಹಲವು ಉತ್ತರಗಳು ! ಸುಪ್ರಸಿದ್ಧ ಮನೋವಿಜ್ಞಾನಿ ಗಿಲ್‌ಫೋರ್ಡನ ಪ್ರಕಾರ ಯಾವದೇ ಸೃಜನಾತ್ಮಕ ಕಾರ್ಯದಲ್ಲಿ, ವಿಭಿನ್ನರೂಪದ ಚಿಂತನೆಯದೇ ಪ್ರಧಾನ ಪಾತ್ರ. ನಾವು ಒಂದು ವಸ್ತು ಅಥವಾ ವಿಚಾರದ ಬಗ್ಗೆ ವಿಭಿನ್ನ ದೃಷ್ಟಿಕೋನಗಳಿಂದ ಚಿಂತಿಸಿದಾಗಲೇ ಹೊಸಹೊಸ ವಸ್ತು ವಿಚಾರಗಳನ್ನು ರೂಪಿಸಲು ಸಾಧ್ಯವೆಂಬುದು ಆತನ ಸ್ಪಷ್ಟ ಅಭಿಮತ.

ಮಕ್ಕಳು ಮತ್ತು ಸೃಜನಶೀಲತೆ : ಮಕ್ಕಳಲ್ಲಿ ಕಂಡುಬರುವ ವ್ಯಕ್ತ ಮತ್ತು ಅವ್ಯಕ್ತ ರೂಪದ ಸೃಜನಶೀಲತೆಯು ಯಾರ ಗಮನವನ್ನಾದರೂ ಸೆಳೆಯಬಲ್ಲದು. ಅದರಲ್ಲಿಯೂ ಚಿಕ್ಕಮಕ್ಕಳ ಮನಸ್ಸು ಹೆಚ್ಚು ಸ್ವಚ್ಛಂದವಾಗಿರುತ್ತದೆ. ಅಲ್ಲಿ ಸಮಾಜ ಜನ್ಯ ಪೂರ್ವಾಗ್ರಹಗಳು, ಮನೋಮುದ್ರೆಗಳು ಹಾಗೂ ಭಾವಬಂಧನಗಳ ಸೋಂಕು ಅತ್ಯಲ್ಪ. ಚಿಕ್ಕ ಮಕ್ಕಳ ಮನಸ್ಸು ಸರಳವಾಗಿರುತ್ತದೆ. ಕಲುಷಿತ ದೂರವಾಗಿರುತ್ತದೆ. ಮೇಲಾಗಿ ಅಲ್ಲಿ ಏಕಮುಖಿ ಚಿಂತನೆಯು ಅಪರೂಪದ ವಸ್ತು. ಸದಾ ಚೈತನ್ಯದ ಬುಗ್ಗೆ ಗಳಂತಿರುವ ಅವರ ಮನಸ್ಸು ವಿಭಿನ್ನ ಚಿಂತನೆಯ ಆಗರವಾಗಿರುತ್ತದೆ. ಸ್ವಚ್ಛಂದ ಕಲ್ಪನಾವಿಲಾಸ ಅವರ ಮನಸ್ಸನ್ನು ತುಂಬಿ ಹರಿಯಬಲ್ಲದು. ಅಂದಮೇಲೆ ನಿರ್ದೇಶಿತ ಚಿಂತನೆಯ ಕಪಿಮುಷ್ಟಿಗೆ ಸಿಗದ ಮಕ್ಕಳು, ಮನೋವಿಲಾಸಿಗಳಾಗಿ, ಹೊಸ ಹೊಸ ನೋಟಗಳನ್ನು ಕಾಣಬಲ್ಲರು, ಹೊಸಹೊಸ ರೂಪ ಸಂಯೋಜನೆಗಳನ್ನು ಮಾಡ ಬಲ್ಲರು ಹಾಗೂ ಹೊಸ ಹೊಸ ಕಲ್ಪನೆಗಳನ್ನು ಸೃಷ್ಟಿಸಬಲ್ಲರು. ಸುಪ್ರಸಿದ್ಧ ಮಾನವ ಶಾಸ್ತ್ರಜ್ಞೆ ಮಾರ್ಗರೆಟ್ ಮೀಡ್ ಹೇಳುವಂತೆ, ಮಕ್ಕಳು ವಸ್ತುವಿಷಯಗಳನ್ನು ಹಲವು ಆಯಾಮಗಳಲ್ಲಿ ನೋಡಬಲ್ಲರು. ಹೀಗಾಗಿ ಅವರು ವೈವಿಧ್ಯಪೂರ್ಣವೂ, ವಿಲಾಸಮಯವೂ ಆದ ತಮ್ಮದೇ ಜಗತ್ತಿನಲ್ಲಿ ಸ್ವತಂತ್ರವಾಗಿ ವಿಹರಿಸಬಲ್ಲರು. ಮಕ್ಕಳ ಈ ರೀತಿಯ ಮನೋವ್ಯವಹಾರದ ನೈಜಸ್ವರೂಪವನ್ನು ನಾವು ಅವರ ಪ್ರಶ್ನೆ ಗಳಲ್ಲಿ ಮತ್ತು ಆಟಗಳಲ್ಲಿ ಗಮನಿಸಬಹುದು. ಆಟಗಳಲ್ಲಿ ಅವರ ಸ್ವಂತಿಕೆ, ಪರಿಶೋಧನಾ ಪ್ರವೃತ್ತಿ ಮತ್ತು ಶ್ರೀಮಂತ ಕಲ್ಪನಾ ವಿಲಾಸಗಳು ಸಾಕ್ಷಾತ್ಕಾರ ತಳೆದು, ಸೃಜ

ನಾತ್ಮಕತೆಯ ಸೂಚಕಗಳೆನಿಸುತ್ತವೆ. ಮರದ ಚೌಕಗಳಿಂದ ಮನೆ ಮಠಗಳನ್ನು ನಿರ್ಮಿಸುವ, ನಿರುಪಯುಕ್ತವೆನಿಸಿದ ವಸ್ತುಗಳಿಂದ ಉಪಯುಕ್ತ ಮಾದರಿಗಳನ್ನು ರೂಪಿಸುವ ಗಾಳಿಪಟ, ವಿಮಾನ, ರಾಕೆಟ್ ಮುಂತಾದ ಆಟಿಕೆಗಳನ್ನು ತಯಾರಿಸಿ ಪ್ರಯೋಗ ನಡೆಸುವ ಹವ್ಯಾಸಗಳ ಅಂತರ್ಯದಲ್ಲಿ ಸೃಜನಶೀಲತೆ ಹಾಸುಹೊಕ್ಕಾಗಿರುತ್ತದೆ. ಬಣ್ಣ, ಮಣ್ಣು, ಕಟ್ಟಿಗೆ, ಕಾಗದ ಮುಂತಾದ ಮೂಲವಸ್ತುಗಳಿಂದ ಸಾಧ್ಯವಾಗಬಹುದಾದ ನಾನಾ ರೂಪ ರಚನೆಗಳನ್ನು ಮಾಡಿ ಮಕ್ಕಳು ತಮ್ಮ ಕುತೂಹಲ ತಣಿಸಿಕೊಳ್ಳಬಲ್ಲರು. ವೈವಿಧ್ಯಪೂರ್ಣವೆನಿಸುವ ದನಿಗಳನ್ನು ಸೃಷ್ಟಿಸಬಲ್ಲರು. ಒಟ್ಟಿನಲ್ಲಿ ಚಿಕ್ಕ ಮಕ್ಕಳ ಮಾನಸಸರೋವರವು ಕಲ್ಪನಾವಿಲಾಸಗಳಿಂದ ತುಂಬಿ ತುಳುಕಬಲ್ಲದು. ಇದರಿಂದ ಅವರು ಮನೋಲ್ಲಾಸ ಪಡೆಯುವುದು ಒಂದು ಸಹಜ ಪರಿಣಾಮವೆಂದರೆ ಬಹುಶಃ ತಪ್ಪಾಗದು.

ಸೃಜನಶೀಲತೆಯ ಬೆಳವಣಿಗೆ : ಮಕ್ಕಳಲ್ಲಿ ಕಂಡುಬರುವ ಸೃಜನಶೀಲತೆಯ ಸ್ವರೂಪವನ್ನೇ ವಯಸ್ಕರಲ್ಲಿ ಕಾಣಲು ಸಾಧ್ಯವಿಲ್ಲ. ಮಕ್ಕಳ ಮುಕ್ತರೀತಿಯ ಸೃಜನಶೀಲತೆಗೆ ಮೂಲ ಅವರ ಅನನುಭವ ಮತ್ತು ಲೋಕಜ್ಞಾನದ ಅಭಾವ. ವಯಸ್ಕರಲ್ಲಿ ಪ್ರಧಾನವಾಗಿ ಕಾಣುವ ಅನುಭವ ಮತ್ತು ಲೋಕಜ್ಞಾನಗಳು ಮುಕ್ತರೀತಿಯ ಸೃಜನಶೀಲತೆಗೆ ಪ್ರತಿಬಂಧಕಗಳಾಗುವ ಸಂಭವ ಹೆಚ್ಚು. ಆದ್ದರಿಂದ ವಯಸ್ಕರಲ್ಲಿ ಒಂದಿಲ್ಲ ಒಂದು ರೀತಿಯ ನಿಯಂತ್ರಿತ ಸೃಜನಶೀಲತೆ ಕಂಡುಬರುತ್ತದೆ. ಅದರಲ್ಲಿ ದೃಢ ಸಂಶೋಧನಾಪ್ರವೃತ್ತಿ ಮತ್ತು ಪರಿಷ್ಕೃತ ನಿರ್ಣಯಗಳು ಪ್ರಧಾನ ಲಕ್ಷಣಗಳಾಗಿರುತ್ತವೆ. ಆದರೆ ಮಕ್ಕಳಲ್ಲಿ, ಅತೀವ ಕುತೂಹಲ ಮತ್ತು ಸಂವೇದನಾನುಭವಗಳು, ಸೃಜನಶೀಲತೆಯ ಅಭಿವ್ಯಕ್ತಿಗೆ ಮೂಲ ಪ್ರೇರಕಗಳಾಗುತ್ತವೆ.

ಸಾಮಾನ್ಯವಾಗಿ ಸೃಜನಶೀಲತೆಯು, ಶೈಶವದಿಂದ ತಾರುಣ್ಯದವರೆಗೆ ವಿಕಾಸ ಹೊಂದುವುದಾದರೂ, ಅದರಲ್ಲಿಯೇ ಅಲ್ಲಲ್ಲಿ ವ್ಯತ್ಯಯ ಕಂಡುಬರುತ್ತದೆ. ಹುಟ್ಟಿದಂದಿನಿಂದ ಮೂರುವರ್ಷ ವಯಸ್ಸಿನವರೆಗೆ ಒಂದೇಸಮನೆ ಬೆಳೆಯುತ್ತಾಹೋಗುವ ಸೃಜನಶೀಲತೆಯು, ಮುಂದೆ ಏರಿಳಿತಗಳಿಂದ ಕೂಡಿರುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸುಪ್ರಸಿದ್ಧ ಮನೋವಿಜ್ಞಾನಿ ಟಾರೆನ್ಸನ ಗ್ರಹಿಕೆಗಳು ಗಮನಾರ್ಹ. ಆತನ ಪ್ರಕಾರ ಸೃಜನಾತ್ಮಕ ಬೆಳವಣಿಗೆಯಲ್ಲಿ ಕಂಡುಬರುವ ಏರಿಳಿತಗಳಲ್ಲಿಯೇ ಒಂದು ವಿನ್ಯಾಸವಿರುತ್ತದೆ. ಪ್ರಮುಖವಾಗಿ, ವಿಕಾಸದ ಮೂರುಹಂತಗಳಲ್ಲಿ ಅಂದರೆ ಒಂದು, ನಾಲ್ಕು ಮತ್ತು ಏಳನೇ ವರ್ಗಗಳ ಹಂತಗಳಲ್ಲಿ ಇಳಿತಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ರೀತಿಯ ಇಳಿತಗಳಿಗೆ ಪ್ರಮುಖ ಕಾರಣಗಳೆಂದರೆ ಬೆಳೆಯುತ್ತಿರುವ ಮಕ್ಕಳ ಸಾಂಘಿಕ ಪರಿಸರದಲ್ಲಿ ಆಗುವ ಬದಲಾವಣೆ ಮತ್ತು ಸಾಮಾಜಿಕ ನಿರೀಕ್ಷೆಗಳಲ್ಲಿ ಆಗುವ ವ್ಯತ್ಯಯಗಳು. ಮಗುವು ಪ್ರಾಥಮಿಕ ಶಾಲೆಯನ್ನು ಪ್ರವೇಶಿಸಿದಾಗ ಶಾಲೆಯ

ಸಾಮಾಜಿಕ ರೀತಿನೀತಿಗಳಿಗೆ ಹೊಂದಿಕೊಳ್ಳಬೇಕಾದ ಅಗತ್ಯದಿಂದಾಗಿ, ಅದರ ಸೃಜನಶೀಲತೆಯಲ್ಲಿ ಇಳಿತ ಕಂಡುಬರುತ್ತದೆ. ಶಾಲೆಯ ಸ್ಥಿತಿಗತಿಗಳಿಗೆ ಹೊಂದಿಕೊಂಡ ಅನಂತರ, ಸೃಜನಶೀಲತೆಯಲ್ಲಿ ಪುನಃ ಏರಿಕೆ ಕಂಡುಬರುತ್ತದೆ. ಮುಂದೆ ನಾಲ್ಕನೇ ವರ್ಗಕ್ಕೆ ಬಂದಾಗ ಅಂದರೆ ಸುಮಾರು ಒಂಬತ್ತನೇ ವಯಸ್ಸಿನಲ್ಲಿ ಮತ್ತೆ ಕಂಡುಬರುವ ಇಳಿತಕ್ಕೆ ಜೊತೆಗಾರರ ಸ್ವೀಕಾರ ಮತ್ತು ಮನ್ನಣೆಗಳ ಪ್ರಭಾವ ಕಾರಣವಾಗುತ್ತದೆ. ಮೂರನೆಯ ಇಳಿತ ನಮಗೆ ಕಾಣುವುದು ಏಳನೇ ವರ್ಗದ ಅಂದರೆ ಸುಮಾರು ೧೨–೧೩ ವರ್ಷ ವಯಸ್ಸಿನ ಮಕ್ಕಳಲ್ಲಿ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಹರೆಯಕಾಲೀನ ಚಿಂತೆ, ಕಳವಳ ಮತ್ತು ಪ್ರಮಾದಭಾವಗಳು, ಅಲ್ಲಿಂದ ಮುಂದೆ ಹನ್ನೊಂದನೇ ವರ್ಗದವರೆಗೂ, ಸೃಜನಶೀಲತೆಯಲ್ಲಿ ನಿರಂತರಿತ ಏರಿಕೆ ಕಂಡುಬರುತ್ತದೆ.

ಬೆಳವಣಿಗೆಯ ಅವಧಿಯಲ್ಲಿ ಸೃಜನಶೀಲತೆಯಲ್ಲಿ ಹೆಚ್ಚಳ ಕಂಡುಬಂದರೂ, ಮಕ್ಕಳು ಬೆಳೆದಂತೆಲ್ಲಾ ಅದರಲ್ಲಿನ ಸ್ವಯಂಪ್ರೇರಕ ಗುಣ ಕ್ರಮೇಣ ಕಡಿಮೆಯಾಗುವುದನ್ನು ಕಾಣಬಹುದು. ಇದಕ್ಕೆ ಕುಟುಂಬ, ಶಾಲೆ ಮತ್ತು ಸಮಾಜದಲ್ಲಿನ ಸಂಪ್ರದಾಯಬದ್ಧ ಆಚಾರ–ವಿಚಾರಗಳು ಒಂದಿಲ್ಲ ಒಂದು ರೀತಿಯಲ್ಲಿ ಅಡೆತಡೆಗಳನ್ನು ಒಡ್ಡುತ್ತವೆ. ತಮ್ಮ ಸಂಸ್ಕೃತಿಯನ್ನು ತಲಾಂತರಗೊಳಿಸುವ ಹಿರಿಯರ ಆಶಯವು, ಮಕ್ಕಳ ಸೃಜನಶೀಲತೆಯಲ್ಲಿನ ಸ್ವಂತಿಕೆ ಮತ್ತು ಸ್ವಯಂಪ್ರೇರಕ ಗುಣಗಳನ್ನು ದಮನಮಾಡುತ್ತದೆ. ಸಂಪ್ರದಾಯಬದ್ಧ ಶಿಕ್ಷಣಪದ್ಧತಿಯು ಮಕ್ಕಳ ನಡವಳಿಯ ಮೇಲೆ ಹಾಕುವ ವಿಶೇಷ ಒತ್ತಾಯವೇ ಮುಕ್ತ ಸೃಜನಶೀಲತೆಗೆ ಕಡುವೈರಿಯಾಗಿ ಪರಿಣಮಿಸುತ್ತದೆ. ಅಂದಮೇಲೆ, ನಮ್ಮ ಶಿಕ್ಷಣ ಪದ್ಧತಿಯು ಸೃಜನಾತ್ಮಕವಾಗಬೇಕಾಗುತ್ತದೆ. ಹಾಗಾದಲ್ಲಿ ನಮ್ಮ ಮಕ್ಕಳು ತಮ್ಮ ಸೃಜನಶೀಲತೆಯನ್ನು ಮುಕ್ತರೀತಿಯಿಂದ ಸಾಕ್ಷಾತ್ಕರಿಸಿಕೊಳ್ಳಲು ಅನುವಾಗುತ್ತದೆ. ಅದಕ್ಕೆ ಬದಲಾಗಿ ಸತ್ತ್ವರಹಿತ, ಬರಡು ಸಂಪ್ರದಾಯಬದ್ಧ ಶಿಕ್ಷಣ ಪಡೆದ ದುರ್ದೈವಿ ಮಕ್ಕಳು ತಮ್ಮ ಸೃಷ್ಟಿಪ್ರತಿಭೆಗೆ ತಾವೇ ಎರವಾಗಿ, ನಿರುಪಯುಕ್ತ ನಾಗರೀಕರಾಗಿ ಬೆಳೆಯಬೇಕಾಗುತ್ತದೆ.

ಸೃಜನಶೀಲತೆ ಮತ್ತು ಬುದ್ಧಿಶಕ್ತಿ : 'ಬುದ್ಧಿಶಾಲಿಗಳೆಲ್ಲ ಸೃಜನಶೀಲರು' ಎಂಬ ತಪ್ಪು ಕಲ್ಪನೆ ಹಲವರಲ್ಲಿದೆ. ಆದರೆ ಅಧ್ಯಯನಗಳಿಂದ ದೊರೆತ ಪುರಾವೆಗಳು ಈ ಕಲ್ಪನೆಗೆ ವಿರೋಧವಾಗಿವೆ. ಬುದ್ಧಿಶಕ್ತಿ ಮತ್ತು ಸೃಜನಶೀಲತೆಗಳ ನಡುವೆ ಸ್ವಲ್ಪ ಮಟ್ಟಿನ ಸಹಸಂಬಂಧವಿರುವುದಾದರೂ, ಅದು ಮಹತ್ವಪೂರ್ಣವಾಗಿಲ್ಲ.

ಗೆಟ್ಸೆಲ್ಸ್ ಮತ್ತು ಜಾಕ್ಸನ್, ಮಕ್ಕಳ ಮೇಲೆ ನಡೆಸಿದ ಅಧ್ಯಯನಗಳಿಂದ ಪ್ರಮುಖವಾಗಿ ಎರಡು ಚಿತ್ರಗಳು ಸ್ಪಷ್ಟವಾದವು. ಮೇಲ್ಮಟ್ಟದ ಬುದ್ಧಿಶಾಲಿಗಳಿದ್ದರೂ ಸಾಮಾನ್ಯ ರೀತಿಯ ಸೃಜನಶೀಲತೆಯನ್ನು ತೋರಿದ ಮಕ್ಕಳು, ವಸ್ತು ವಿಷಯಗಳಲ್ಲಿ ಏಕರೀತಿಯ ಅರ್ಥಗಳನ್ನು ಗ್ರಹಿಸುವ ಮತ್ತು ಸಾಂಪ್ರದಾಯಿಕ ಮೌಲ್ಯಗಳಿಗೆ ಅನು

ಗುಣವಾಗಿ ಪ್ರಗತಿ ಹೊಂದುವ ಪ್ರವೃತ್ತಿ ತೋರಿಸಿದರು. ಬಹುಮಟ್ಟಿಗೆ ಅವರು, ಶಿಕ್ಷಕರು ತೋರಿದ ಮಾದರಿಯನ್ನೇ ಅನುಸರಿಸಿದರಲ್ಲದೆ, ತಮ್ಮ ಸಮಾಜದ ನಿರೀಕ್ಷೆಗನು ಗುಣವಾದ ವೃತ್ತಿಗಳನ್ನೇ ಆಯ್ಕೆ ಮಾಡುವುದು ಕಂಡುಬಂದಿತು. ತದ್ವಿರುದ್ಧವಾಗಿ, ಸಾಮಾನ್ಯ ಬುದ್ಧಿಶಾಲಿಗಳಾಗಿದ್ದರೂ, ಮೇಲ್ಮಟ್ಟದ ಸೃಜನಶೀಲತೆ ಪಡೆದಿದ್ದ ಮಕ್ಕಳು, ವಸ್ತು ವಿಷಯಗಳ ಬಗ್ಗೆ ಏಕತಾನದ ಅರ್ಥಗ್ರಹಿಕೆಯನ್ನು ತೊರೆದುದಲ್ಲದೆ, ಶಿಕ್ಷಕರು ತೋರಿಸಿದ ಮಾದರಿಯಿಂದ ದೂರಸರಿದುದು ಕಂಡುಬಂದಿತು, ಅಲ್ಲದೆ, ಸಂಪ್ರದಾಯ ಬದ್ಧ ವೃತ್ತಿಗಳಿಂದ ವಿಮುಖವಾಗುವ ಪ್ರವೃತ್ತಿಯನ್ನು ತೋರಿಸಿದರು. ಈ ಎರಡು ಗುಂಪಿನ ಮಕ್ಕಳ ವಿದ್ಯೆಯ ಸಾಧನ ಮಟ್ಟ ಬಹುಮಟ್ಟಿಗೆ ಸಮವೆನಿಸಿದ್ದರೂ. ಶಿಕ್ಷಕರು ಹೆಚ್ಚು ಬುದ್ಧಿಶಾಲಿಗಳತ್ತ ಒಲವು ತೋರಿಸುತ್ತಿದ್ದುದರ ಪ್ರಯುಕ್ತ ಅವರ ವಿದ್ಯೆ ಸಾಧನೆಯ ಮಟ್ಟ ಸ್ವಲ್ಪ ಹೆಚ್ಚಿದ್ದಿತು. ಇದೇ ರೀತಿಯ ಫಲಿತಾಂಶಗಳು ಇತರ ಅಧ್ಯಯನಗಳಿಂದಲೂ ಕಂಡುಬಂದಿವೆ. ಶಿಶುವಿಹಾರದಿಂದ ಹಿಡಿದು ಆರನೆಯ ವರ್ಗದ ವರೆಗಿನ ೧೫,೦೦೦ ಮಕ್ಕಳ ಒಂದು ಪ್ರತಿದರ್ಶ (Sample)ದ ಮೇಲೆ ಅಧ್ಯಯನ ನಡೆಸಿ, ಅವರ ಬುದ್ಧಿಶಕ್ತಿ ಮತ್ತು ಸೃಜನಶೀಲತೆಗಳನ್ನು ಪರಸ್ಪರ ಹೋಲಿಸಿ ನೋಡಿದಾಗ, ಮೇಲಿನ ವಿನ್ಯಾಸವೇ ಪ್ರಧಾನವಾಗಿ ಕಂಡುಬಂದಿತು. ಈ ಅಧ್ಯಯನದಲ್ಲಿ ನಮ್ಮ ಗಮನಸೆಳೆದ ಅಂಶವೆಂದರೆ. ಕೆಲವು ಮಕ್ಕಳು ಸಾಮಾನ್ಯ ಬುದ್ಧಿಶಾಲಿಗಳಾಗಿದ್ದು. ವಿದ್ಯಾ ಸಾಧನೆಯಲ್ಲಿ ಕೆಳಮಟ್ಟದಲ್ಲಿದ್ದಾಗಲೂ, ಅತ್ಯಂತ ಮೇಲ್ಮಟ್ಟದ ಸೃಜನಶೀಲತೆಯನ್ನು ತೋರಿಸಿದುದು. ಒಟ್ಟಿನಲ್ಲಿ ಬುದ್ಧಿಶಕ್ತಿಯು ಸೃಜನಶೀಲತೆಯ ಒಂದು ಪ್ರಮುಖ ಅಂಶವೆಂಬುದನ್ನು ಅಲ್ಲಗಳೆಯಲಾಗದಿದ್ದರೂ, ಹೆಚ್ಚು ಬುದ್ಧಿಯಿದ್ದವರೆಲ್ಲಾ ಮೇಲ್ಮಟ್ಟದ ಸೃಜನಶೀಲತೆ ತೋರಿಸುತ್ತಾರೆಂದು ಹೇಳಲು ಪುರಾವೆಗಳಿಲ್ಲ.

ಹೆಚ್ಚು ಬುದ್ಧಿಶಾಲಿ ಮತ್ತು ಹೆಚ್ಚು ಸೃಜನಶೀಲ ಸಮೂಹಗಳ ನಡುವೆ, ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆಯೂ ಗಣನೀಯ ವ್ಯತ್ಯಾಸಗಳು ಕಂಡುಬಂದಿವೆ. ವಿಮಾನದಲ್ಲಿ ಕುಳಿತು ಬರುತ್ತಿರುವ ಮನುಷ್ಯನೊಬ್ಬನ ಚಿತ್ರದ ಬಗ್ಗೆ ಕಥೆ ರಚಿಸುವ ಪರೀಕ್ಷೆಯೊಂದರಲ್ಲಿ ಹೆಚ್ಚು ಸೃಜನಶೀಲ ಬಾಲ ಬಾಲಕಿಯರು. ಬಹುಮಟ್ಟಿಗೆ,ಅನಿರೀಕ್ಷಿತ ಅಂತ್ಯ. ವಿನೋದ. ಹುಡುಗಾಟಿಕೆ ಮತ್ತು ಸ್ವತಂತ್ರ ಹಾಗೂ ಮುಕ್ತ ಕಲ್ಪನೆಗಳಿಂದ ಕೂಡಿದ ಕಥೆಗಳನ್ನು ರಚಿಸಿದರು. ಇಂತಹ ಸ್ಪಂತಿಕೆ ಹೆಚ್ಚು ಬುದ್ಧಿಶಾಲಿ ಮಕ್ಕಳಲ್ಲಿ ಕಂಡುಬರಲಿಲ್ಲ. ಹೆಚ್ಚು ಲಾಭಪಡೆದ ವ್ಯಾಪಾರಿಯೊಬ್ಬನು ತನ್ನ ಊರಿಗೆ ಹಿಂದಿರುಗುತ್ತಿದ್ದಾನೆ ಎಂಬ ಅರ್ಥ ಕೊಡುವ ಕಥೆಗಳನ್ನೇ ಅವರು ಬಹುಮಟ್ಟಿಗೆ ರಚಿಸಿದರು. ಆದರೆ ಅದೇ ಚಿತ್ರಕ್ಕೆ ಒಬ್ಬ ಹೆಚ್ಚು ಸೃಜನಶೀಲ ಬಾಲಕನು ಬರೆದ ಕಥೆ ಸ್ವಾರಸ್ಯಕರವಾಗಿದೆ. ತನ್ನ ಹೆಂಡತಿಯಿಂದ ವಿವಾಹವಿಚ್ಛೇದನ ಪಡೆದು ಸಂತೋಷದಿಂದ ಆ ಮನುಷ್ಯನು ತನ್ನ ಊರಿಗೆ ವಾಪಸಾಗುತ್ತಿದ್ದ. ಆ ವಿಚ್ಛೇದನಕ್ಕೆ ಪ್ರಮುಖ ಕಾರಣವೆಂದರೆ, ಆತನ ಹೆಂಡತಿಯು ತನ್ನ ಮುಖಕ್ಕೆ ಅತಿಯಾಗಿ ತಂಪುಕ್ರೀಮನ್ನು ಬಳಿದುಕೊಳ್ಳುತ್ತಿದ್ದಳು. ಪ್ರಯೋಗಾಲಯ

ದಲ್ಲಿದ್ದ ಇಬ್ಬರು ವ್ಯಕ್ತಿಗಳ ಚಿತ್ರವೊಂದಕ್ಕೆ ಮತ್ತೊಬ್ಬ ಸೃಜನಶೀಲ ಬಾಲಕ ಬರೆದ ಕಥೆಯ ಸಾರಾಂಶ ಹೀಗಿದೆ. ಶೋಧಕನು ಕಾಲಯಂತ್ರದ ಮೇಲೆ ಪ್ರಯೋಗ ನಡೆಸಿ ತನ್ನ ಇಚ್ಛಾಶಕ್ತಿಯಿಂದ ಕಾಲವನ್ನು ತಡೆಹಿಡಿಯುವುದರಲ್ಲಿ ಜಯಶೀಲನಾಗುತ್ತಾನೆ.

ತಮ್ಮ ತಮ್ಮ ಆತ್ಮಕಥೆ ಬರೆಯುವುದರಲ್ಲಿಯೂ ಹೆಚ್ಚು ಸೃಜನಶೀಲ ಮಕ್ಕಳು ವಿನೋದಪ್ರಿಯತೆ, ಹುಡುಗಾಟಿಕೆ ಮತ್ತು ವಿಚಿತ್ರ ಸಂಯೋಜನೆಗಳತ್ತ ಹೆಚ್ಚು ಒಲವು ತೋರಿಸುತ್ತಾರೆ. ಒಬ್ಬ ಬಾಲಕ, ತಾನು ಇಂತಹ ದಿನ ಹುಟ್ಟಿದೆನೆಂದು ತನ್ನ ಕಥೆಯನ್ನು ಪ್ರಾರಂಭಿಸಿ, ಮುಂದೆ ವಿನೋದಾತ್ಮಕವಾಗಿ, "ಅಲ್ಲಿಯವರೆಗೆ ನಾನು ಯಾವ ಅಡ್ಡಿ ಆತಂಕಗಳೂ ಇಲ್ಲದೆ ಜೀವಿಸಿದ್ದೆ" ಎಂದು ಬರೆಯುತ್ತಾನೆ. ವಿನೋದಪ್ರಿಯತೆ ಮತ್ತು ಹುಡುಗಾಟಿಕೆಗಳು ದೃಷ್ಟಿ ಪ್ರತಿಭೆಯ ಪ್ರಧಾನ ಕುರುಹುಗಳೆಂದು ಕಾಣುತ್ತವೆ. ಸೃಜನಶೀಲ ಮಕ್ಕಳು ದಿನದಿನದ ಘಟನೆಗಳನ್ನು ಹೊಸ ಹೊಸ ಹಾಗೂ ವಿಶಿಷ್ಟ ದೃಷ್ಟಿಯಿಂದ ನೋಡಬಲ್ಲರು. ಇಂತಹ ವರ್ತನೆ ಅವರಲ್ಲಿ ಸ್ವಯಂಪ್ರೇರಿತ. ಸುಪ್ರಸಿದ್ಧ ಪರಾಮರ್ಶನ ಮನೋವಿಜ್ಞಾನಿ ಕಾರ್ಲ್ ರೋಜರ್ಸ್‌ನ ಪ್ರಕಾರ ಭಾವ ಕಲ್ಪನೆಗಳು ಮತ್ತು ಮೂಲಾಂಶಗಳು ಸೃಜನಶೀಲ ಮಕ್ಕಳ ಆಟಿಕೆಗಳಂತಾಗುತ್ತವೆ. ಈ ಮಕ್ಕಳು ಹೊಸ ಹೊಸ ಅನುಭವಗಳಿಗೆ ಹೆಚ್ಚು ಸೂಕ್ಷ್ಮ ಸಂವೇದಿಗಳಾಗಿರಬಲ್ಲರು. ಹೊಸ ಅನುಭವಕ್ಕೆ ಬಿಚ್ಚು ಮನಸ್ಸು ಇರುವುದೂ ಕೂಡ ಸೃಜನಶೀಲತೆಯ ಮತ್ತೊಂದು ಪ್ರಮುಖ ಲಕ್ಷಣ. ತಾವು ರೂಪಿಸಿದ ವಸ್ತು ವಿಷಯಗಳ ಬಗ್ಗೆ, ಇತರರ ಅಭಿಪ್ರಾಯದ ಬಗ್ಗೆ ಸೃಜನಶೀಲ ಮಕ್ಕಳು ತಲೆಕೆಡಿಸಿಕೊಂಡು ಕೂರುವುದಿಲ್ಲ. ಅವರಿಗೆ ತಮ್ಮವೇ ಆದ ಮಾನದಂಡಗಳಿರುತ್ತವೆ. ಏನಾದರೂ ಹೊಸತನ್ನು ರೂಪಿಸಬೇಕೆಂಬ ಅದಮ್ಯ ಇಚ್ಛೆಯಿಂದ ಪ್ರವೃತ್ತರಾಗಿ ಅವರು ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾರೆ. ಸುಪ್ರಸಿದ್ಧ ಪರಿಶೋಧಕರು, ವಿಜ್ಞಾನಿಗಳು, ಸಾಹಿತಿಗಳು ಮತ್ತು ಕಲಾವಿದರಲ್ಲೂ ಇದೇ ಪ್ರವೃತ್ತಿ ಕಂಡು ಬರುತ್ತದೆ.

ವೃತ್ತ್ಯಭಿರುಚಿ : ಹೆಚ್ಚು ಸೃಜನಶೀಲ ಮಕ್ಕಳು, ಸಾಮಾನ್ಯವಾಗಿ ಅಸ್ವಾಭಾವಿಕ ವೆನಿಸುವಂತಹ ವೃತ್ತಿಗಳತ್ತ ಒಲವು ತೋರಿಸುತ್ತಾರೆಯಲ್ಲದೆ, ತಮ್ಮ ಸೃಷ್ಟಿ ಪ್ರತಿಭೆಯ ಮುಕ್ತ ಅಭಿವ್ಯಕ್ತತೆಗೆ ಸಾಕಷ್ಟು ಅವಕಾಶ ಒದಗಿಸುವಂತಹ ವೃತ್ತಿಗಳತ್ತ ಒಲಿಯುತ್ತಾರೆ. ಉದಾಹರಣೆಗೆ ಅವರು ನಟನೆ, ನರ್ತನ, ಬರೆಹ, ಸಾಹಸ ಮುಂತಾದವುಗಳಿಗೆ ಮಾರು ಹೋಗುತ್ತಾರೆ. ತದ್ವಿರುದ್ಧವಾಗಿ ಹೆಚ್ಚು ಬುದ್ಧಿಶಾಲಿ ಮಕ್ಕಳು ಸಾಂಪ್ರದಾಯಿಕ ಹಾಗೂ ಸಮಾಜ ಮಾನ್ಯ ವೃತ್ತಿಗಳಾದ ವೈದ್ಯ, ಅಭಿಯಂತ, ನ್ಯಾಯವಾದಿ ಇತ್ಯಾದಿಗಳನ್ನೇ ಆರಿಸುತ್ತಾರೆ. ಈ ಲೇಖಕರು ಮತ್ತು ಸಹಾಯಕರು ನಡೆಸಿದ ಅಧ್ಯಯನವೊಂದರಲ್ಲಿ ಇದೇ ರೀತಿಯ ತಥ್ಯಾಂಶಗಳು ದೊರೆತಿವೆ. ಸಾಂಪ್ರದಾಯಿಕ ವೃತ್ತಿಗಳನ್ನು ಬಿಟ್ಟರೆ, ಇತರ ವೃತ್ತಿಗಳ ಬಗ್ಗೆ ಇರುವ ಅಭಿರುಚಿಗಳಲ್ಲಿ, ಮೇಲ್ಮಟ್ಟ ಮತ್ತು ಕೆಳಮಟ್ಟದ ಸೃಜನಶೀಲ ಮಕ್ಕಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.

ಹೆಚ್ಚು ಸೃಜನಶೀಲ ಮತ್ತು ಹೆಚ್ಚು ಬುದ್ಧಿಶಾಲಿ ಮಕ್ಕಳ ನಡುವೆ ಕಂಡುಬರುವ ವ್ಯತ್ಯಾಸಗಳನ್ನು ಗಮನಿಸಿದಾಗ ನಮ್ಮ ಇಂದಿನ ಶಿಕ್ಷಣ ಪದ್ಧತಿಯಲ್ಲಿರುವ ಅಸಂಬದ್ಧತೆ ವೇದ್ಯವಾಗದಿರದು. ಇಂದು ಸಾಂಪ್ರದಾಯಿಕ ಶಿಕ್ಷಣವಿಧಾನಗಳ ಮತ್ತು ಮೌಲ್ಯಗಳ ಕಪಿಮುಷ್ಟಿಗೆ ಒಳಗಾಗಿರುವ ನಾವು. ಬುದ್ಧಿಶಕ್ತಿಯನ್ನು ಪ್ರೋತ್ಸಾಹಿಸುವ ಸೆಪದಲ್ಲಿ, ಜನತೆಯ ಸಾಮಾಜಿಕ ಆರ್ಥಿಕ ಪ್ರಗತಿಗೆ ಅತ್ಯಂತ ಹೆಚ್ಚು ಅಗತ್ಯವಿರುವ ಸೃಷ್ಟಿ ಪ್ರತಿಭೆಯನ್ನು ಚಿಕ್ಕಂದಿನಲ್ಲಿಯೇ ಚಿವುಟಿಹಾಕುತ್ತಿದ್ದೇವೆಯೇ? ಎಂಬ ಶಂಕೆ ನಮ್ಮೆಲ್ಲರ ಮನದಲ್ಲಿ ಮೂಡದಿರದು. ಇಂದಿನ ಪದ್ಧತಿಯು ಹೀಗೇ ಮುಂದುವರಿದರೆ, ನಮ್ಮ ಪ್ರಗತಿ ಒಂದಿಲ್ಲ ಒಂದು ದಿನ ಸ್ಥಗಿತವಾಗುವುದು ಅನಿವಾರ್ಯ ಪರಿಣಾಮನೆನಿಸುತ್ತದೆ. ಇನ್ನು ಮುಂದಾದರೂ ನಾವು ಎಚ್ಚೆತ್ತು, ಸಾಂಪ್ರದಾಯಿಕ ಕೊರಕಲು ದಾರಿಯ ವ್ಯಾಮೋಹವನ್ನು ಬಿಟ್ಟು, ಹೊಸ ಹಾಗೂ ಅಪರಿಚಿತ ಪ್ರದೇಶಗಳನ್ನು ಪ್ರವೇಶಿಸದಿದ್ದರೆ ನಮಗೆ ಗತ್ಯಂತರವಿಲ್ಲ. ಸೃಜನಶೀಲ ಮಕ್ಕಳು ತಮ್ಮ ಸೃಷ್ಟಿ ಪ್ರತಿಭೆಯನ್ನು ಅಡೆತಡೆಯಿಲ್ಲದೆ ಅಭಿವ್ಯಕ್ತಗೊಳಿಸಲು ಅನುಕೂಲಕರ ವಾತಾವರಣವನ್ನು ಕಲ್ಪಿಸಿಕೊಡುವುದು ಕೇವಲ ಶಿಕ್ಷಕರ ಹೊಣೆಯಾಗಿರದೆ, ಎಲ್ಲಾ ತಂದೆತಾಯಿಗಳ. ಸಮಾಜದ ಹಾಗೂ ರಾಷ್ಟ್ರದ ಹೊಣೆಗಾರಿಕೆಯಾಗುತ್ತದೆ.

ಸೃಜನಶೀಲತೆಯ ಮಾಪನ : ಸೃಜನಶೀಲತೆಯ ವಸ್ತುನಿಷ್ಠ ಮಾಪನ ಕಾರ್ಯ ಪ್ರಾರಂಭವಾದುದು ೧೯೨೦ರ ದಶಕದಲ್ಲಿ ! ಮೊದಮೊದಲು ೧೯೬೦ ರವರೆಗೆ. ಸಿಂಪ್ಸನ್, ಹಾರ್‌ಗ್ರೀವ್ಸ್ ಮತ್ತಿತರರು ನಿರ್ಮಿಸಿದ, 'ಸೃಜನಾತ್ಮಕ ಕಲ್ಪನಾ ಪರೀಕ್ಷೆಗಳು', 'ಸೃಜನಾತ್ಮಕತೆಯ ಪರೀಕ್ಷೆಗಳು' ಮುಂತಾದವುಗಳನ್ನು ಬಳಸಿ ಸೃಜನಶೀಲತೆಯ ಮಾಪನ ಕೊಡಲಾಗುತ್ತಿತ್ತು. ೧೯೬೦ ರಿಂದ ಈಚೆಗೆ, ಉತ್ತಮ ತಾತ್ವಿಕ ಆಧಾರವುಳ್ಳ ಹಾಗೂ ಹೆಚ್ಚು ವಸ್ತುನಿಷ್ಠವೆನಿಸುವ ಪರೀಕ್ಷೆಗಳು ರೂಪಗೊಂಡು ಸೃಜನಶೀಲತೆಯ ಅಳತೆಯ ಕಾರ್ಯ ಹೆಚ್ಚು ಪರಿಣಾಮಕಾರಿ ಎನಿಸತೊಡಗಿತು. ಈ ದಿಸೆಯಲ್ಲಿ ಗೆಟ್ಸಲ್ಸ್ ಮತ್ತು ಜಾಕ್‌ಸನ್, ಗಿಲ್ ಫೋರ್ಡ್ ಮತ್ತು ಅನುಯಾಯಿಗಳು, ಟಾರೆನ್ಸ್ ಮತ್ತು ಅನುಯಾಯಿಗಳು, ಮೆಹದಿ ಮತ್ತು ಕುಪ್ಪರ್‌ಸ್ಮಿತ್ ಮುಂತಾದವರು ನಿರ್ಮಿಸಿರುವ ಪರೀಕ್ಷೆಗಳು ಗಮನಾರ್ಹವಾದವುಗಳು. ಗೆಟಲ್ಸ್ ಮತ್ತು ಜಾಕ್‌ಸನ್ ಬಳಸಿದ ಸೃಜನಾತ್ಮಕ ಪರೀಕ್ಷೆಗಳೆಂದರೆ ಪದಸಂಯೋಜನೆ, ಪದಾರ್ಥಗಳ ವಿಭಿನ್ನ ಉಪಯೋಗಗಳು ಮರೆಮಾಚಿದ ಆಕಾರಗಳು. ಕಟ್ಟುಕಥೆಗಳು ಮತ್ತು ಕೃತಕ ಸಮಸ್ಯೆಗಳು. ಉದಾಹರಣೆಗೆ ಕಟ್ಟುಕಥೆಗಳ ಪರೀಕ್ಷೆಯಲ್ಲಿ ನಾಲ್ಕು ಅತಿ ಸಂಕ್ಷಿಪ್ತ ಕಥೆಗಳನ್ನು ಕೊಡಲಾಗುತ್ತದೆ. ಆ ಕಥೆಗಳಲ್ಲಿ ಕೊನೆಯ ಸಾಲು ಬಿಟ್ಟು ಹೋಗಿರುತ್ತದೆ. ಪರೀಕ್ಷಾರ್ಥಿಯು ಒಂದೊಂದು ಕಥೆಗೂ ಮೂರು ರೀತಿಯ ಅಂದರೆ, ನೈತಿಕವಾದ, ವಿನೋದಪರ ಮತ್ತು ದುಃಖಾತ್ಮಕ ಅಂತ್ಯಗಳನ್ನು ಸೂಚಿಸಬೇಕಾಗುತ್ತದೆ.

ಸೃಜನಶೀಲತೆಯ ಮಾಪನದಲ್ಲಿ ಟಾರೆನ್ಸ್‌ನ ಹೆಸರು ಸುಪ್ರಸಿದ್ಧವಾದುದು. ಅವನ ಪ್ರಕಾರ ಸೃಜನಶೀಲತೆಯ ಪ್ರಮುಖ ಕುರುಹಗಳೆಂದರೆ, 'ನಿರರ್ಗಳತೆ' (fluency), 'ನಮ್ಯತೆ' (flexibility), ಸ್ವಂತತೆ (originality) ಮತ್ತು ವಿಸ್ತಾರತೆ (elaboration). ಈ ಮನೋಲಕ್ಷಣಗಳನ್ನು ಅಳೆಯಲೆಂದು ಟಾರೆನ್ಸ್ ಮತ್ತು ಆತನ ಅನುಯಾಯಿಗಳು ರೂಪಿಸಿದ ಪರೀಕ್ಷೆಗಳು ಹಲವು. ಅವುಗಳಲ್ಲಿ ಬಹು ಮುಖ್ಯವಾದವುಗಳೆಂದರೆ: ಆಕೃತಿ-ಪೂರಣ ಪರೀಕ್ಷೆ (figure completion test), ವೃತ್ತಗಳ ಪರೀಕ್ಷೆ (circles test), ಉತ್ಪನ್ನ ಸುಧಾರಣಾ ಪರೀಕ್ಷೆ (product Improvement test), ಪರಿಣಾಮಗಳ ಪರೀಕ್ಷೆ (consequences test) ಮತ್ತು ಸಾಮಾನ್ಯ ಸಮಸ್ಯೆಗಳ ಪರೀಕ್ಷೆ (common problems test). ಉದಾಹರಣೆಗೆ, ಕೊಟ್ಟಿರುವ ವೃತ್ತಗಳನ್ನು ಪ್ರಧಾನ ಅಂಗಗಳನ್ನಾಗಿ ಮಾಡಿಕೊಂಡು, ಪರೀಕ್ಷಾರ್ಥಿಯು ವಸ್ತುಗಳು ಅಥವಾ ಚಿತ್ರಗಳನ್ನು ರಚಿಸಬೇಕು. ಹೀಗೆ ರಚಿಸುವಲ್ಲಿ ಆತನು ಸಾಧ್ಯವಾದಷ್ಟು ಸಂಖ್ಯೆಯ ಚಿತ್ರಗಳನ್ನು ರಚಿಸಬಹುದು (ನಿರರ್ಗಳತೆ); ಸಾಧ್ಯವಾದಷ್ಟು ಭಿನ್ನರೀತಿಯ ಚಿತ್ರಗಳನ್ನು ರಚಿಸಬಹುದು (ನಮ್ಯತೆ); ಮತ್ತಾರೂ ಯೋಚಿಸದಿರುವಂತಹ ಚಿತ್ರಗಳನ್ನು ರಚಿಸುವುದು; (ಸ್ವಂತತೆ ಅಥವಾ ಸ್ವಂತಿಕೆ) ಮತ್ತು ಚಿತ್ರದಲ್ಲಿ ಸಾಧ್ಯವಾದಷ್ಟು ಭಾವಗಳನ್ನು ಮೂಡಿಸುವುದು (ವಿಸ್ತಾರತೆ). ಸಾಮಾನ್ಯ ಸಮಸ್ಯೆಗಳ ಪರೀಕ್ಷೆಯಲ್ಲಿ ಸ್ನಾನಮಾಡುವುದು, ಮನೆಗೆಲಸ ಮಾಡುವುದು ಮುಂತಾದ ಕೆಲಸಗಳಲ್ಲಿ, ಎಂತೆಂತಹ ಸಮಸ್ಯೆಗಳು ಮೈದಾಳಬಹುದೆಂಬುದನ್ನು ಪರೀಕ್ಷಾರ್ಥಿಯು ತನಗೆ ಸಾಧ್ಯವಾದಷ್ಟು ಪಟ್ಟಿ ಮಾಡಬೇಕು.

ಇಂದು ಸೃಜನಶೀಲತೆಯ ಪರೀಕ್ಷೆಗಳು ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿವೆ. ಇವುಗಳಲ್ಲಿ ಬಹು ಸಂಖ್ಯೆಯ ಪರೀಕ್ಷೆಗಳು ಮಕ್ಕಳಿಗಾಗಿ ರೂಪಗೊಂಡವುಗಳು. ಇದಕ್ಕೆ ಪ್ರಮುಖ ಕಾರಣ, ಈ ಹಿಂದೆಯೇ ಪ್ರಸ್ತಾಪಿಸಿದಂತೆ, ಮಕ್ಕಳಲ್ಲಿ ಸಾಪೇಕ್ಷವಾಗಿ ಸ್ಪಷ್ಟತೆ ಪಡೆಯುವ ಸೃಜನಶೀಲತೆ. ಇಂದು ಈ ಪರೀಕ್ಷೆಗಳ ನೆರವಿನಿಂದ ಪಡೆದ ಪುರಾವೆಗಳು ಮಕ್ಕಳ ಶಿಕ್ಷಣದ ಬಗ್ಗೆ ನಮಗೆ ಇಲ್ಲಿಯವರೆಗಿದ್ದ ಹಲವು ನಿರುಪಯುಕ್ತ ಧೋರಣೆ ಮತ್ತು ವಿಚಾರಗಳ ಬಗ್ಗೆ ನಮ್ಮ ಮನೋಭಾವವನ್ನು ಬದಲಿಸುವಂತೆ ಮಾಡುತ್ತಿವೆ. ಅಲ್ಲದೆ ನಮ್ಮ ಶಿಕ್ಷಣ ವಿಧಾನದಲ್ಲಿಯೂ ಕ್ರಾಂತಿಕಾರಕ ಬದಲಾವಣೆಯಾಗಬೇಕೆಂಬುದನ್ನು ಆ ಪುರಾವೆಗಳು ಸೂಚಿಸುತ್ತವೆ. ಉದ್ಯಮ ಸನ್ನಿವೇಶಗಳಲ್ಲಿ ರೂಪಗೊಂಡ 'ಸಲಹಾ ಪೆಟ್ಟಿಗೆ', 'ಮಸ್ತಿಷ್ಕ ಸಂಕ್ಷೋಭನೆ' (Brains forming). ವಿಭಿನ್ನ ಭಾವ ಸಂಯೋಜನೆ (Synectics) ಮುಂತಾದ ವಿಧಾನಗಳನ್ನು ಶೈಕ್ಷಣಿಕ ಕ್ಷೇತ್ರದಲ್ಲಿಯೂ ಬಳಸಬೇಕಾದ ಕಾಲ ಬರುತ್ತಿದೆ. ಸೃಜನಾತ್ಮಕ ಬೋಧನೆಗೆ ಅತ್ಯಗತ್ಯವಾದ ಮಾರ್ಗಗಳನ್ನು ರೂಪಿಸುವಲ್ಲಿ ಈಗಾಗಲೇ ಪ್ರಯತ್ನಗಳು ನಡೆಯುತ್ತಿರುವುದು ಭರವಸೆಯ ಸಂಗತಿ. ಅಂತಹ ಮಾರ್ಗಗಳ ಸ್ಪಷ್ಟ ಕಲ್ಪನೆ ನಮಗೆ ಬಂದಾಗ, ಸೃಜನಾತ್ಮಕ ಕಲಿಕೆಗೆ ಅತ್ಯಗತ್ಯ ಪ್ರಕ್ರಿಯೆಗಳೆನಿಸುವ, ದೊರೆಯುವ ಪುರಾವೆಗಳಿಂದ ವಿಷಯ ಕ್ರೋಢಿಕರಿಸು

ವುದು, ಇಂದಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವುದು, ಮುಂದಿನ ಪರಿಣಾಮಗಳನ್ನು ಕಲ್ಪಿಸಿಕೊಳ್ಳುವುದು, ವರ್ಗೀಕರಣ ಯೋಜನೆಯನ್ನು ರೂಪಿಸುವುದು, ಹೇಗೆ ಸಂಶೋಧನೆ ನಡೆಸಬೇಕೆಂಬುದನ್ನು ಅರಿಯುವುದು, ಹೇಗೆ ಸುಧಾರಣೆ ಮಾಡಬೇಕೆಂಬುದನ್ನು ತಿಳಿಯುವುದು, ಅವಲೋಕನದ ಬಳಕೆಯನ್ನು ಅರಿಯುವುದು ಮುಂತಾದವುಗಳ ಬಗ್ಗೆ ಹೆಚ್ಚು ಆಳವಾಗಿ ಚಿಂತಿಸಿ, ಅವುಗಳನ್ನು ಸೃಜನಶೀಲ ಶಿಕ್ಷಣದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

ಪರಿಸಮಾಪ್ತಿ : ಮಕ್ಕಳಲ್ಲಿ ಕಂಡುಬರುವ ಸೃಜನಶೀಲತೆಯು ಇಡೀ ಮಾನವತೆಗೇ ಅತ್ಯಂತ ಉಪಯುಕ್ತ ಸಂಪನ್ಮೂಲ. ಇಂತಹ ಸಂಪನ್ಮೂಲವನ್ನು ಸರಿಯಾಗಿ ಗುರುತಿಸಿ, ಹೊರಸೆಳೆದು, ಸೊಂಪಾಗಿ ಬೆಳಸಿ, ಯುಕ್ತರೀತಿಯಲ್ಲಿ ಬಳಸಿಕೊಳ್ಳುವ ಅಗತ್ಯ ಕಾರ್ಯ ಎಲ್ಲೆಡೆಯೂ ನಡೆಯಬೇಕಾಗಿದೆ. ಅಂತಹ ಕಾರ್ಯವು ವಿಜ್ಞಾನ ನಿರ್ದೇಶಿತವಾಗಿರಬೇಕಾಗುತ್ತದೆ. ಹಾಗಾಗದಿದ್ದಲ್ಲಿ, ಸ್ವಾರ್ಥಪರ ಸಮಾಜಶಕ್ತಿಗಳ ಇಚ್ಛೆಗನುಗುಣವಾಗಿ ಅದು ನಡೆದಲ್ಲಿ ಅದರಿಂದ ಅನರ್ಥವಾದೀತು ! ಇಡೀ ಮಾನವೀಯತೆಯೇ ವಿನಾಶದಹಾದಿ ಹಿಡಿದೀತು!

ಮಾನವೀಯ ಗುಣಗಳ ಸಾಕ್ಷಾತ್ಕಾರ ಪಡೆದ, ಸರ್ವತಂತ್ರ ಸ್ವತಂತ್ರ, ಸಂಪದ್ಯುಕ್ತ, ಸಂತೋಷಕರ ಮಾನವ ಸಮಾಜವನ್ನು ರೂಪಿಸಲು ಮಾಡಲಾಗುವ ಯಾವುದೇ ಪ್ರಯತ್ನವಾದರೂ, ಮಕ್ಕಳ ಸೃಜನಶೀಲತೆಯನ್ನು ಕಡೆಗಾಣಿಸಿದರೆ ವಿಫಲಗೊಳ್ಳುವುದು ಖಂಡಿತ. ಆರೋಗ್ಯವಂತ, ದೃಢಕಾಯರೂ, ಮಾನಸಿಕ ಸ್ವಾಸ್ಥ್ಯದಿಂದ ಕೂಡಿದವರೂ, ಸೃಜನಶೀಲರೂ ಆದ ಮಕ್ಕಳು ಯಾವುದೇ ಪ್ರಗತಿಪರ ಸಮಾಜದ ಅಮೂಲ್ಯ ಆಸ್ತಿಗಳು. ಈ ಶ್ರೀಮಂತ ಆಸ್ತಿಗಳ ಪುರೋಭಿವೃದ್ಧಿಯ ಹೊಣೆ ಸಮಾಜಕ್ಕೆ ಸೇರಿದ್ದು. ಇಂತಹ ಹೊಣೆಯನ್ನು ಸಮಾಜವು ತನ್ನ ಪವಿತ್ರ ಕರ್ತವ್ಯವೆಂದು ನಿರ್ವಹಿಸಿದಾಗ, ಅವರ ವೈವಿಧ್ಯಪೂರ್ಣ ಬದುಕಿನಲ್ಲಿ, ವೈವಿಧ್ಯಪೂರ್ಣ ಹಾಗೂ ಸಮರ್ಥ ಮಾರ್ಗದರ್ಶನ ನೀಡಬಲ್ಲ ಸೃಷ್ಟಿ, ಪ್ರತಿಭಾ ಸಂಪತ್ತು ಸರ್ವಾಂಗೀಣವಾಗಿ ಅರಳಿ, ಮಾನವ ಸಂಬಂಧಗಳಲ್ಲಿ ಸೌಂದರ್ಯ, ಮಾಧುರ್ಯ ಮತ್ತು ಸಂವಾದಗಳನ್ನು ಹೊರಸೂಸುತ್ತವೆ.

ಗ್ರಂಥ ಋಣ

Hildreth, G. H., *Introduction to the Gifted.*
Mc Graw, 1966: Pp 453–460

Moravcsik, M. J., The Context of Creative Science.
'*Everyman's Science*' Vol. XI, No. 3, 1976.

Tripathi, S. N., *Creativity and Education*
N. C. E. R. T. New Delhi, 1969.

ಧರಣೇಂದ್ರಯ್ಯ, ಎ. ಎಸ್. ಮತ್ತು ಆರ್. ಶ್ಯಾಮಲಾ, ಪ್ರೌಢಶಾಲಾ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಉದ್ಯೋಗಾಭಿರುಚಿಗಳು
ಮಾನವಿಕ ಭಾರತಿ ಸಂ. ೨, ಸಂ. ೨, ೧೯೭೮.

ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ

● ಎಲ್. ಆರ್. ಹೆಗಡೆ

ಕಾರ್ಯಕಾರಣ ಸಂಬಂಧ ಪ್ರತಿಯೊಂದು ವಸ್ತುವಿಗೂ ಘಟನೆಗೂ ಇದ್ದೇಇದೆ. ಈ ಸಂಬಂಧವನ್ನು ಕುರಿತು ತೀರ ಪ್ರಾಚೀನ ಕಾಲದಿಂದಲೂ ಪ್ರಾಣಿಗಳೂ ಮನುಷ್ಯರೂ ಪ್ರತಿಕ್ರಿಯೆಯನ್ನು ತೋರಿಸುತ್ತ ಬಂದಿರುವುದು ನಡೆದು ಬಂದಿದೆ. ಈ ಸಂಬಂಧ ಮತ್ತು ಅದರ ಪ್ರತಿಕ್ರಿಯೆ ವನಸ್ಪತಿಗಳಲ್ಲೂ, ಚೇತನಾ ಚೇತನವುಳ್ಳ ಸಮಸ್ತ ವಿಶ್ವದಲ್ಲೂ ವ್ಯಾಪಿಸಿಕೊಂಡಿದೆ. (ಮುಟ್ಟಿದರೆ ಮುನಿ ನಾಚಿಕೆಗಿಡ ಅದಕ್ಕೆ ಪತುರಂತಿ (ಪತಿವ್ರತೆ) ಎಂದೂ ಹಳ್ಳಿಗರು ಹೇಳುತ್ತಾರೆ. ಗಂಡಸರು ಮಾತ್ರವಲ್ಲ; ಹೆಂಗಸರು, ಚಿಕ್ಕ ಹುಡುಗರು ಮುಟ್ಟಿದರೂ ಈ ಮಳ್ಳಕ್ಕ ಮುದುಡಿ ಬೇಸರ ತೋರುತ್ತಾಳೆ.) ಆದರೆ, ತೀರ ಪ್ರಾಚೀನ ಕಾಲದಿಂದಲೂ ಜೀವಿಗಳು ಈ ಸಂಬಂಧವನ್ನು ಕುರಿತು ಪಡುವ ಭಾವನೆಗಳೂ, ವಿಚಾರಗಳೂ, (ಪ್ರಾಣಿ ವನಸ್ಪತಿಗಳಲ್ಲಿ ಭಾವನೆ ವಿಚಾರ ಪ್ರತಿಕ್ರಿಯೆಗಳಲ್ಲಿ ವ್ಯತ್ಯಾಸ ಹುಡುಕುವುದು ಕಷ್ಟ) ಪ್ರತಿಕ್ರಿಯೆಗಳೂ ಸಮಂಜಸ, ಅಸಮಂಜಸ ಎರಡೂ ಸ್ತರಗಳಲ್ಲಿ ಕಾಣಬರುತ್ತವೆ.

ತೆಂಗಿನ ಮಡಲು ಮರದಿಂದ ಬಿದ್ದು ದೊಡ್ಡ ಶಬ್ದವಾಗುವದು ಸಹಜ. ಆದರೆ ಸಾಕಿದ ಒಂದು ನಾಯಿ ಆ ಮಡಲ ಹೆಡೆ ಬಿದ್ದಕೂಡಲೆ ಕೂಗುತ್ತ ಹೋಗಿ ಅದನ್ನು ಕಚ್ಚಿ ಕಚ್ಚಿ ಎಳೆದಾಡುತ್ತಿತ್ತು. ಶಬ್ದ ಮಾಡುತ್ತ ಬಿದ್ದ ಆ ಮಡಲಹೆಡೆ ಯಾವುದೋ ಪ್ರಾಣಿಯೆಂದೇ ಆ ನಾಯಿ ತರ್ಕಿಸಿ ತನ್ನ ಉಗ್ರ ರೋಷದ ಪ್ರತಿಕ್ರಿಯೆಯನ್ನು ಪ್ರತಿ ಸಲವೂ ತೋರುತ್ತಿತ್ತು. ಆ ಮಡಲ ಹೆಡೆ ಒಂದು ಜೀವಂತ ಪ್ರಾಣಿಯಲ್ಲ ಎಂದು ಕೊನೆಯ ವರೆಗೂ ಅದು ತಿಳಿಯಲಾರದೆ ಹೋಯಿತು. ಆದರೆ. ಅದೇ ನಾಯಿ ಒಂದು ದೊಡ್ಡ ಹೆಗ್ಗಣ ಮುಂದೆ ಬಂದು ಕೂದಲು ನಿಮಿರಿಸಿಕೊಂಡು ಕೂಗುತ್ತ ನಿಂತುದನ್ನು ಕಂಡು ಹೆದರಿ ಓಡುತ್ತಿತ್ತು. ಎರಡೂ ಕಡೆ ನಾಯಿಯಲ್ಲಿ ತರ್ಕ ಶಕ್ತಿಯು ಕೆಲಸ ಮಾಡುತ್ತಿತ್ತು. ಆದರೆ. ಆ ತರ್ಕವು ತಳಬುಡವಿಲ್ಲದಾಗಿತ್ತು. ಎರಡನೆಯ ಸಂದರ್ಭದಲ್ಲಿ ಕಪ್ಪು ಹೆಗ್ಗಳನ ಕರಿ ಕೂದಲು ನಿಮಿರು, ಅದರ ರುಂ ಎಂಬ ಮಂದ್ರವಾದ ಕೂಗು ಅದರ ಭೀತಿಯನ್ನು ಬಡಿದೆಬ್ಬಿಸಿ, ಆ ಚಿಕ್ಕ ಪ್ರಾಣಿ ತನಗೆ ಈಡಲ್ಲ ಎಂಬ ತರ್ಕವನ್ನು ಮತ್ತು ಅದರ ಮೇಲೆ ಮುಗಿಬಿದ್ದು ಅದನ್ನು ಮುಗಿಸುವ ಶಕ್ತಿಯನ್ನೂ ನಷ್ಟ ಮಾಡಿತು.

ಒಂದು ಒಂದೂವರೆ ವರ್ಷದ ಒಂದು ಮಗು ನಾಗರಹಾವಿನೊಡನೆ ಆಟ ಮಾಡುತ್ತಿದ್ದಿತಂತೆ. ಆ ಸರ್ಪವು ಆ ಮಗುವಿನ ಮೆತ್ತಗಿನ ಕೈಯು ತನ್ನನ್ನು ಹಿಡಿದು ಕಿವುಚಿ ಎಳೆದರೂ ಸುಮ್ಮನೆ ಆ ಆಟದಲ್ಲಿ ಆನಂದವನ್ನು ಕಂಡಿತಂತೆ. ಇಲ್ಲಿ ಆ ಮುಗ್ಧ ಶಿಶುವಿನ ಗಂಡಾಂತರದ ಕಲ್ಪನೆಯ ಅಭಾವವು ಅದರ ಆಟದ ವೈಮರೆಯುವಿಕೆ ಯೊಡನೆ ಸೇರಿ ಹೋಯಿತು. (ದುಃಖದ ಸಂಗತಿಯೆಂದರೆ, ಆ ಸರ್ಪವನ್ನು ಆ ಮೇಲೆ ಕೂಡಿದ ಜನರು ಮಗುವಿಗೆ ಕೇಡನ್ನು ಮಾಡೀತೆಂದು ವಧಿಸಿದರಂತೆ.) ಆ ಮಗು ವಿಗೆ ಆ ಸರ್ಪವು ಒಂದು ಆಟದ ಗೊಂಬೆಯಂತಾಗಿ ಹೋಗಿತ್ತು. ಆದರೆ, ಅದೇ ಮಗು ಅಪರಿಚಿತರು ತನಗೆ ಏನಾದರೂ ಅಪಾಯ ಮಾಡಬಹುದೆಂದು ಅವರನ್ನು ಕಂಡು ಹೆದರಿ ನಡಗುತ್ತಿದ್ದಿರಬಹುದು.

ಇಲ್ಲಿ ತೀರ ಚಿಕ್ಕ ವಯಸ್ಸಿನ ಆ ಮಗುವಿನ ಬುದ್ಧಿ ಬಲಿತಿರಲಿಲ್ಲ, ಅನುಭವವೂ ಅದಕ್ಕೆ ಸಾಲುತ್ತಿರಲಿಲ್ಲ. ಎರಡೂ ಕಡೆ ಅದರ ತರ್ಕಶಕ್ತಿ ಅದಕ್ಕೆ ಸಾಲುತ್ತಿರಲಿಲ್ಲ. ತೀರ ಪ್ರಾಚೀನ ಕಾಲದ ಮಾನವನು ನಿಸರ್ಗದೊಡನೆ ಬಾಳುವ ಸಂದರ್ಭದಲ್ಲಿ ನಿಸರ್ಗ ವ್ಯಾಪಾರಗಳನ್ನೂ ಅವುಗಳಿಂದ ತನ್ನ ಜೀವನದ ಮೇಲಾಗುವ ಒಳಿತು ಕೆಡಕುಗಳನ್ನು ತನ್ನ ಅನುಭವ ಭಾವನೆಗಳ ಒರೆಗಲ್ಲಿಗೆ ಹಚ್ಚಿ ನೋಡುವಾಗ ಅವನಲ್ಲಿಯೂ ಒಂದು ತರದ ತರ್ಕಶಕ್ತಿ ಕೆಲಸ ಮಾಡುತ್ತಿತ್ತು. ಕಾಡಿನಲ್ಲಿ ಬೇಟೆಯಾಡಲು ಹೋದಾಗ ಮರ ತಾನಾ ಗಿಯೇ ಮುರಿದು ಬಿದ್ದು ತನ್ನ ಸಂಗಡಿಗರು ಅದರ ಕೆಳಗೆ ಬಿದ್ದು ಸತ್ತು ಹೋದುದನ್ನು ನೋಡಿದ ಅನುಭವ ಅವನಿಗೆ ಆಗುವ ಸಂದರ್ಭವಿತ್ತು. ಮರ ಮುರಿದು ಬೀಳುವಾಗ ಭೀಕರವಾದ ಕೂಗುವಿಕೆಯಂಥ ಶಬ್ದ ಅವನಿಗೆ ಕೇಳುತ್ತಿತ್ತು. ಇದು ಆ ಮರದಲ್ಲಿದ್ದ ಯಾವುದೇ ಶಕ್ತಿಯ ರೌದ್ರ ಪ್ರತೀಕಾರ ಎಂದು ಅವನು ತನ್ನ ಭೀತಿಯಿಂದ ಭಾವಿಸಿದ್ದರೆ ಅಚ್ಚರಿಯಿಲ್ಲ. ಆ ಮರ ಬಿದ್ದುದಕ್ಕೆ ನೈಸರ್ಗಿಕ ಕಾರಣ ಇದ್ದುದನ್ನು ಅವನು ಭೀತಿ ಯಿಲ್ಲದೆ ವಿಚಾರ ಮಾಡಿದ್ದರೆ ತಿಳಿಯಬಹುದಾಗಿತ್ತು. ಇದು ಅವರ ಅಸಮಂಜಸ ತರ್ಕ ಬುದ್ಧಿಗೆ ಚಾಲನೆ ಕೊಟ್ಟ ಒಂದು ಕಾರಣ. ಹೊಳೆ ದಾಟುವಾಗ ಪ್ರವಾಹದಲ್ಲಿ ಬಳಿದು ಹೋಗುವ ಸಂದರ್ಭಗಳೂ ಬರುತ್ತಿದ್ದವು. ಆದರೆ, ನೀರಿನ ಸೆಳವು ಎಳೆದು ಕೊಂಡು ಹೋಯಿತೆಂಬ ಸಹಜ ಕಾರಣ ಅವನಿಗೆ ಸೂಚಿಸಿದ್ದಿರಬಹುದು, ಸೂಚಿಸಿದ್ದಿ ರಲಿಕ್ಕಿಲ್ಲ. ಇನ್ನು ಎರಡು ಮೂರು ಸಲ ಹಾಗೆಯೇ ತನ್ನ ಸಂಗಡಿಗರಿಗೆ ದುರ್ಗತಿ ಅಲ್ಲಿ ಬಂದಿದ್ದಾದರೆ ಅಲ್ಲಿ ಯಾವುದೋ ಅದೃಶ್ಯಶಕ್ತಿ (ಭೂತ. ದೆವ್ವ) ಇತ್ಯಾದಿ ಇದೆ; ಅದು ಬಲಿ ತೆಗೆದುಕೊಳ್ಳುತ್ತದೆ, ಎಂದು ಅವನು ತಿಳಿಯುವ ಸಾಧ್ಯತೆ ಹೆಚ್ಚಾಗಿತ್ತು.

ಕೆಲವು ಕೆರೆಗಳಲ್ಲಿ ಹುಡುಗರು ಈಸಲು ಹೋಗಿ ಮರಣಪಟ್ಟ ಅನೇಕ ಉದಾಹರ ಣೆಗಳುಂಟು. ಶಕ್ತಿಕುಂದಿ, ಅಥವಾ ನೀರು ಆಕಸ್ಮಾತ್ ಮೂಗಿನಲ್ಲಿ ಸೇರಿ ಉಸಿರುಕಟ್ಟಿ ಸತ್ತರೂ ಯಾವುದೋ ದೆವ್ವ, ಕೊಲೆ ಮಾಡಿ ಆ ಕೆರೆಯಲ್ಲಿ ಹುಡುಗರ ಆಹುತಿ ತೆಗೆದು

ಕೊಳ್ಳುತ್ತದೆ ಎಂಬ ಪ್ರತೀತಿ ಆದರಿಂದ ಹುಟ್ಟಿಕೊಂಡು, ಆ ಕೆರೆ ಭೀತಿಯ ಆಗರವಾಗುತ್ತದೆ.

ಹೆದರಿಕೆಯೇ ಅನೇಕ ಸಲ ಭ್ರಮಾಮೂಲವಾದ ನಂಬಿಕೆಗಳಿಗೆ ಕಾರಣವಾಗುತ್ತದೆ. ರಾತ್ರಿ ಹೊತ್ತಿನಲ್ಲಿ ದಾರಿಯಲ್ಲಿ ಇಲಿ ಓಡುವುದು ಅಸಹಜವೇನಲ್ಲ. ಬಿಡಾಡಿಯಾಗಿ ದನಗಳೂ, ಕೋಣಗಳೂ ರಾತ್ರಿ ಅಲೆಯುತ್ತವೆ. ಒಂದೆಡೆ ಮೊಲ ದಾರಿಯಿಂದ ಅಡ್ಡಗಳೆದು ಹಾರಿ ಹೋಗುತ್ತದೆ. ಮುಂದೆ ಒಂದು ಕೋಣ, (ಎಮ್ಮೆಯಾದರೂ ಆಗಬಹುದು) ರಾವ್ ಎಂದು ಕೂಗುತ್ತ ಓಡಿ ಹೋಗಬಹುದು. ಮುಂದೆಹೋದಾಗ ಒಂದು ನರಿ ಓಡಿ ಹೋಗಬಹುದು; ಹಿರಿಯರಿಂದ ಕೇಳಿ ತಿಳಿದ ರಾಹುವಿನ ಚರ್ಯೆಯನ್ನು ಬಲ್ಲ ಹುಡುಗನು ಒಂದು ಪ್ರಾಣಿಯನ್ನು ನೋಡಿದಾಗ ಇನ್ನೊಂದು ಪ್ರಾಣಿಯ ರೂಪದಲ್ಲಿದ್ದ ರಾಹು ಆ ಪ್ರಾಣಿಯ ರೂಪತಾಳಿತ್ತು, ಮಗದೊಂದು ರೂಪ ತಾಳಿತು ಎಂದು ಭಾವಿಸಿ, ಒಂದು ಪ್ರಾಣಿ ಅದೃಶ್ಯವಾಗಿ (ಇವನಿಗೆ ಭೀತಿಯ ಅತಿಶಯದಲ್ಲಿ ಕಣ್ಣು ಮಂಜಾಗಿ, ಅದು ಕಾಣದೆ) ಬೇರೊಂದು ಪ್ರಾಣಿಯ ರೂಪ ತಳೆಯಿತು ಎಂದು ಭಾವಿಸಲು ಕಾರಣವಾಗುತ್ತದೆ. ಆ ಭೀತಿಯ ಕಾರಣವಾಗಿ ಅವನು ಎಚ್ಚರ ತಪ್ಪಿ ಅಲ್ಲೇ ಬೀಳಬಹುದು, ಓಡಿಬರಬಹುದು. ಭೀತಿಯ ಪರಿಣಾಮವಾಗಿ ಅವನಿಗೆ ಜ್ವರವೋ, ಬೇರೆ ಯಾವುದೋ ಕಾಹಿಲೆಯಾಗಬಹುದು. ಹಳ್ಳಿಯ ಜನರು ಅತಿಶಯ ಭೀತಿಗೆ "ರಾವು"ಎಂಬ ಶಬ್ದವನ್ನು ಬಳಸಲು ಈ ಅನುಭವ ಕೋಶದ ಹಿನ್ನೆಲೆ ಕಾರಣ. ಆ ರಾವು ಬಡಿದ ಆಘಾತಕ್ಕೆ ಆಗಲೇ ಪ್ರಾಣ ಕಳೆದುಕೊಂಡವರ ಸಂದರ್ಭಗಳೂ ಇದ್ದವು.

ವಿಜ್ಞಾನದ ಬೆಳವಣಿಗೆಯ ಪ್ರಯೋಜನಗಳು ಹಳ್ಳಿಹಳ್ಳಿಗೂ ವ್ಯಾಪಿಸಿರುವ, ಶಿಕ್ಷಣ ಪಡೆದ ಜನರು ಹಳ್ಳಿಗಳಲ್ಲಿಯೂ ಕಂಡುಬರುವ ಈ ಕಾಲದಲ್ಲಿಯೇ ಇಷ್ಟೆಲ್ಲ ಭ್ರಾಮಕಕಲ್ಪನೆಗಳು, ಮೂಢನಂಬಿಕೆಗಳಿರುವಾಗ ತೀರ ಹಿಂದಿನ ಕಾಲದ ಅನಾಗರಿಕ ಮನುಷ್ಯನ ಪಾಡೇನು? ಆ ಕಾಲದಿಂದಲೂ ರೂಢಮೂಲವಾಗಿ ಬಂದು ಬೇರು ಬಿಟ್ಟಿರುವ ಮೂಢನಂಬಿಕೆಯ ಶಾಖೋಪಶಾಖೆಗಳು ಹಳ್ಳಿಗಳಲ್ಲಿ ಪಸರಿಸಿರುವಂತೆಯೇ ಪಟ್ಟಣಗಳಲ್ಲಿಯೂ ಪಟ್ಟುಹಿಡಿದು ಕುಳಿತಿವೆ.

ಚಿಕ್ಕಮಕ್ಕಳು ಅಳುತ್ತ, ನಗುತ್ತ, ಆಡುತ್ತ ದೊಡ್ಡವಾಗುತ್ತವೆ. ಆದರೆ ದೊಡ್ಡವರಿಗೆ ಅಳುವ ಮಕ್ಕಳನ್ನು ಸುಮ್ಮಗುಳಿಸುವುದೇ ದೊಡ್ಡ ಸಮಸ್ಯೆಯಾಗುವುದುಂಟು. ಆಗ, ಗುಮ್ಮನ ಕುರಿತು ಹೆದರಿಕೆಯಾಗುವಂತೆ ಬಗೆಬಗೆಯ ಸೋಗನ್ನು ನಟಿಸಿ, ಕೂಗನ್ನು ಕೂಗುತ್ತಾರೆ. ಪುರಂದರದಾಸರ ಪದಗಳಲ್ಲಿಯ ಶ್ರೀಕೃಷ್ಣನು ಯಶೋದೆಗೆ ಹೀಗೆ ಹೇಳಿದನು:

ಗುಮ್ಮನ ಕರೆಯದಿರೇ ॥ ಅಮ್ಮಾ ನೀನು
ಗುಮ್ಮನ ಕರೆಯದಿರೇ
ಸುಮ್ಮನೆ ಇರುವೆನು । ಅಮ್ಮಿಯ ಬೇಡೆನು

ಎಂದು ಅವಳಿಗೆ ಆಶ್ವಾಸನ ಕೊಟ್ಟನಂತೆ. (ಅಮ್ಮಿ ಅಂದರೆ ಮೊಲೆ ಹಾಲು, ಶಿಶುಗಳ ಮಾತಿನಲ್ಲಿ.) ಕಣ್ಣಿನ ರೆಪ್ಪೆಯನ್ನು, ಮೇಲ್ಮುಖವಾಗಿ ಮಡಚಿ, ಕಣ್ಣುಗುಮ್ಮನ ಮಾಡುವೆ ಕಣ್ಣುಗುಮ್ಮ ನಿನ್ನನ್ನು ನುಂಗೇ ಬಿಡುತ್ತಾನೆ ಎಂದೂ ಮಕ್ಕಳನ್ನು ಹೆದರಿಸುವುದುಂಟು. ರಾತ್ರಿಯಲ್ಲಿ (ಒಮ್ಮೊಮ್ಮೆ ಹಗಲಿನಲ್ಲೂ ಗುಮ್ಮಕ್ಕಿ (ಗೂಗೆ) ಕೂಗುವುದುಂಟು). ಗೂಗೆ ಗುಂ ಹುಂ ಎಂದು ಕೂಗಿದರೆ, "ಅಗ ನೋಡು; ಗುಮ್ಮ ಹೇಗೆ ಕೂಗುತ್ತದೆ" ಎಂದು ಮಕ್ಕಳನ್ನು ಹೆದರಿಸಲು ಇನ್ನೂ ಅನುಕೂಲವಾಗುತ್ತದೆ. ಗುಡುಗಿನ ಸಂದರ್ಭದಲ್ಲಿ "ಗುಡುಗಪ್ಪ ಬಂದ; ಹೆಡಿಗೇ ತಂದ ತೀಡುಮಕ್ಕಳ ಒಡಿತಾರಂದ" ಎಂದು ಹೆದರಿಕೆ ಹಾಕುತ್ತಾರೆ. ದೊಡ್ಡವರಿಗೂ ಇರುವ ಭೂತಾದಿಗಳ ಭೀತಿಯನ್ನು ಸಣ್ಣ ಮಕ್ಕಳಲ್ಲಿ ಬಿತ್ತಲು ತೀರ ಚಿಕ್ಕವಯಸ್ಸಿನಲ್ಲಿಯೇ ಪ್ರಾರಂಭಮಾಡುತ್ತಾರೆ.

ಮತ್ತು ದೊಡ್ಡವರು ಪಡೆದ ಅನುಭವಗಳು ಎಂಬ ರೀತಿಯಲ್ಲಿ ಹಲವಾರು ತರದ ಭೂತ-ಪಿಶಾಚ-ದೆವ್ವದ ಕುರಿತಾದ ಕಥೆಗಳನ್ನು ಮಕ್ಕಳು ಕೇಳಿಕೊಂಡೇ ಬೆಳೆಯುತ್ತವೆ. (ಇಂಥ ಅನೇಕ ವೃತ್ತಾಂತ ಕಥೆಗಳನ್ನು ಧಾರವಾಡ ಆಕಾಶವಾಣಿಯ ಪ್ರಸಾರಭಾಷಣದಲ್ಲಿ ಪ್ರಸ್ತಾಪ ಮಾಡಿರುತ್ತೇನೆ.)

ಈ ಅನುಭವಗಳೊಡನೆ, ತೀರ ಚಿಕ್ಕಮಕ್ಕಳಿಗೂ ಕಥೆ ಹೇಳಿ. ಅವುಗಳನ್ನು ಅಳದಂತೆ ತೀರ ರಂಜಿಸಿ. ಲಹರಿಯಲ್ಲಿರಿಸುವದಕ್ಕಾಗಿ ಅನೇಕ ಜನಪದ ಕಥೆಗಳನ್ನೂ, ರುಚಿಕಟ್ಟಾದ ಇತರ ಸಂಗತಿಗಳನ್ನೂ ಅಜ್ಜಿಯರೂ, ತಾಯಂದಿರೂ. ಇತರ ಹಿರಿಯರೂ ಹೇಳುತ್ತಾರೆ. ಅವುಗಳಲ್ಲಿ ರಾಕ್ಷಸರ ಕಥೆಗಳಿರಬಹುದು: ಭೂತ-ಪಿಶಾಚಿ-ದೆವ್ವಗಳ ಕಥೆಗಳಿರಬಹುದು: ಮುದ್ದು ಮಾಟಗಳ ಪರಿಣಾಮದ ಕಥೆಗಳಿರಬಹುದು; ಕ್ರೂರಪ್ರಾಣಿಗಳ ಕಥೆಗಳಿರಬಹುದು; ಇವನ್ನು ಕೇಳುವಾಗ ಹುಡುಗರು ನಲಿದರೂ ಅವರ ಭೀತಿಯ ಸ್ತರದೊಡನೆ ಈ ಕಥೆಗಳಲ್ಲಿಯ ರಾಕ್ಷಸ ಭೂತ ಪಿಶಾಚಾದಿಗಳ ಸಂಗತಿಗಳೂ ಕೂಡಿಕೊಂಡು. ಅವರ ಇಂಥ ನಂಬುಗೆಗಳು ಬಲವಾಗಲು ಕಾರಣವಾಗಬಹುದು.

ಈ ಹಿನ್ನೆಲೆಯಲ್ಲಿ ಕೇಳದಿರತಕ್ಕಂಥ ಸ್ವರಗಳನ್ನು ಅವರು ಕೇಳಬಹುದು: ನೋಡುದಕ್ಕಿಂತಲೂ ಬೇರೆಯಾದ ದೃಶ್ಯಕಲ್ಪನೆಗಳನ್ನು ಅವರು ಮಾಡಬಹುದು. ರಾತ್ರಿಯಲ್ಲಿ ಕೇಂ ಎಂದು ಕೂಗುವ ಪಕ್ಕಿಯ ಸ್ವರ ದೆವ್ವ ಅಳುವ ಸ್ವರವಾಗಿ ಕೇಳಲೂಬಹುದು. ಈ ಭೀತಿಯು ಭೂತಾಕಾರ ತಾಳಿ, ಬಿಳಿ ಸೀರೆಯುಟ್ಟ ದೆವ್ವ ಅವರಿಗೆ ಕಂಡಂತೆ ಕಾಣಬಹುದು. ಬೆಳದಿಂಗಳಿನಲ್ಲಿ ಮರಗಳ ನೆರಳುಗಳಲ್ಲಿ ಇಂಥ ದೆವ್ವಗಳೂ ಜಡೆಯನ್ನು ಬಿಚ್ಚಿ ಹರಡಿಕೊಂಡಿರುವ ಚೌಡಿಗಳೂ ಕಾಣುವದುಂಟು. (ಇತ್ತೀಚೆಗೆ ಒಬ್ಬನಿಗೆ ಅವನು ಸೈಕಲ್

ಮೇಲೆ ಹೋಗುವಾಗ ಮಧ್ಯರಾತ್ರಿಯಲ್ಲಿ ಎರಡು ಜಡೆ ಧರಿಸಿದ ಹೆಣ್ಣುದೆವ್ವ ಕಂಡಿದ್ದುಂಟಂತೆ.)

ಒಬ್ಬನಿಗೆ ಕಂಡ ಆ ಎರಡು ಜಡೆಗಳ 'ಗರ'(ತಿ?) ವರ್ತಮಾನ ಗಾಳಿಯಲ್ಲಿ ಹಬ್ಬುವಾಗ, ಅದು ಒಬ್ಬ ಪ್ರಾಧ್ಯಾಪಕರಿಗೆ ಎದುರಾದ ಸುದ್ದಿಯ ರೆಕ್ಕೆ ಹುಟ್ಟಿಕೊಂಡಿತು. ನಾನು ಆ ಪ್ರಾಧ್ಯಾಪಕರನ್ನೇ ವಿಚಾರಿಸಿದಾಗ ಅವರು ಸುಮ್ಮನೆ ನಕ್ಕುಬಿಟ್ಟರು. ಸುದ್ದಿ ಮತ್ತೂ ರಂಜಕವಾದುದೇನೋ ನಿಜ.

ಆದರೆ, ಇನ್ನೂ ಸ್ವಾರಸ್ಯದ ವರ್ತಮಾನವೆಂದರೆ, ಕನ್ನಡದ ಶ್ರೇಷ್ಠ ವಿದ್ವಾಂಸರಾಗಿ, ದೇಶವಿದೇಶಗಳಲ್ಲಿಯೂ ಪ್ರಸಿದ್ಧರಾಗಿರುವ ಸಂಸ್ಕೃತದ ಪ್ರಾಧ್ಯಾಪಕರಿಗೆ ಕುಮಟಾದ ವಿಶಾಲವಾದ ಪಶ್ಚಿಮ ಕರಾವಳಿಯ ಹೆದ್ದಾರಿಯ ರಸ್ತೆಯಲ್ಲಿ (ಆಗ ಆ ರಸ್ತೆ ಇನ್ನೂ ಹಾಗೆ ಕರೆಸಿಕೊಂಡಿರಲಿಲ್ಲ. ಆ ಮಾತು ಬೇರೆ.) ಕೈ ಕೈ ಹಿಡಿದುಕೊಂಡು ಅಡ್ಡಾಡುತ್ತಿದ್ದ ಯುರೋಪಿಯನ್ ದಂಪತಿಗಳು ಮಧ್ಯರಾತ್ರಿಯಲ್ಲಿ ಎದುರಾದುದು. ಇದು ಇತ್ತೀಚಿನ ವರ್ತಮಾನವಾದರೆ ಯಾರೋ ಹಿಪ್ಪಿ ಜೋಡಿ ವಿಹಾರ ಮಾಡುತ್ತ ಹೋಗುತ್ತಿತ್ತು ಎಂದು ಸುಲಭವಾಗಿ ಹೇಳಬಹುದಾದ ಸಂಗತಿ ಇದು. ಆದರೆ ಇಪ್ಪತ್ತು ವರ್ಷಗಳ ಕೆಳಗೆ (ಹಿಂದೆ) ಆ ಪ್ರಾಧ್ಯಾಪಕರು ಪ್ರತ್ಯಕ್ಷ ನೋಡಿದ ಈ ದೃಶ್ಯವನ್ನು ಇನ್ನೂ ಅನೇಕರು ಬೆಳದಿಂಗಳಿನಲ್ಲಿ ನೋಡಿದ್ದರೆಂಬ ವದಂತಿಯ ಪುಷ್ಟಿಯೂ ದೊರೆಯಿತು. ಹಿಂದೆ ಅಲ್ಲಿಯೇ ಬದಿಯಲ್ಲಿ ಇರುವ ಚರ್ಚಿನಲ್ಲಿ ಮದುವೆಯಾಗಿ ರಸ್ತೆಯ ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದ ಯುರೋಪಿಯನ್ ದಂಪತಿಗಳ ಜೊತೆ ಹೀಗೆ ರಾತ್ರಿ ವಿಹಾರ ಮಾಡುತ್ತಿರುತ್ತದೆ ಎಂದು ಇದಕ್ಕೆ ಸ್ಪಷ್ಟೀಕರಣವೂ ದೊರೆಯಿತು. "ಓವರೋವರೊಳೊಡವಾಯಲ್ ಪವದರ್. ಇನ್ನವೇಂ ಸೈಪೊಳವೇ?" ಎಂದು ಪಂಪನ ಕವನವನ್ನು ನೆನಪು ಮಾಡಬಹುದಾದ ಸಂಗತಿ. ಸುಧಾರಸದ ಬೆಳದಿಂಗಳಿನಲ್ಲಿ ಮಧುರವಾದ ದಿವ್ಯ ದೃಶ್ಯ ಇದು. ಆದರೆ, ಆ ದಂಪತಿಗಳು ಇತ್ತೀಚೆಗೆ ಯಾರ ಕಣ್ಣಿಗೂ ಬಿದ್ದ ವರ್ತಮಾನವಿಲ್ಲ. ಬಹುಶಃ ಪರ (ಅವರ ಸ್ವ)ದೇಶಕ್ಕೆ ಹೋಗಿದ್ದಿರಬಹುದು.

ನಾವು ಚಿಕ್ಕವರಾಗಿದ್ದಾಗ ನಮಗೆ ಹಿರಿಯರು, ಸುಣ್ಣಾ ಕೊಡು, ಸುಣ್ಣಾ ಕೊಡು ಎಂದು ಕೇಳುವ ವಮ್ಮಲತಿ (ಒಂದು ಮೊಲೆಯುಳ್ಳ ಗರತಿ?) ದೆವ್ವದ ಕುರಿತು ಹೇಳಿ, ರಾತ್ರಿಯಲ್ಲಿ ಹಾಗೆ ಎಂದಾದರೂ ಕೇಳಿದರೆ ಹಿಂದಿರುಗಿ ನೋಡಬಾರದು ಎಂದು ಎಚ್ಚರಿಕೆ ಕೊಟ್ಟಿದ್ದರು. ಅಕಸ್ಮಾತ್ ಹಿಂದಿರುಗಿ ನೋಡಿದರೆ, ಅದು ತನ್ನ ದೊಡ್ಡ ಮೊಲೆಯನ್ನು ತಲೆಯ ಮೇಲೆ ಇಟ್ಟುಬಿಡುತ್ತಿತ್ತಂತೆ. ಆ ಮೇಲೆ ಹೆದರಿಕೆಯಿಂದ ಆ ಬಡ ಪ್ರಾಣಿಗೆ ಏನೇನು ಅವಸ್ಥೆಯಾಗುತ್ತಿತ್ತೋ: ಬಹುಶಃ ಅವಳೇ ಕೊಂದುಬಿಡುತ್ತಿದ್ದಳೆಂದು ಹೇಳಿದಂತೆ ನೆನಪು. ಆ ವಮ್ಮಲತಿ ದೆವ್ವಗಳ ಪದ್ಧತಿಗನುಗುಣವಾಗಿ, ತನ್ನ 'ನಡೆ'ಯ ಗಡಿಯಲ್ಲಿ ಮಾತ್ರ ಸಂಚಾರ ಮಾಡುವುದಂತೆ. ಆದರಿಂದ, ಹಾಗೆ ಕೇಳಿದರೆ, ಹಿಂದಿರುಗಿ

ನೋಡದೆ, "ಸುಣ್ಣ ಕೊಡ್ತೆ" ಅಂತ ಹೇಳುತ್ತ ಅವಳ ನಡೆಯು ಗಡಿ ದಾಟಿದರೆ ಅವಳ ಕಾಟ ತಪ್ಪಿದಂತೆ ಎಂದು ಹೇಳಿದ್ದರು. ಆದರೆ, ಈ ಪಮ್ಮಲತಿ ಹೀಗೆ ಕೇಳಿದ್ದ ಅನುಭವ ವುಳ್ಳ ಹಿರಿಯರು ಈಗ ಯಾರೂ ಇಲ್ಲ. ಆದರೂ ಈ ಪಮ್ಮಲತಿಯು ಕುರಿತ ಪದಂತಿ ಇನ್ನೂ ಇದೆ.

ಅದರಂತೆ ನಮ್ಮೂರಲ್ಲಿ ಸಪ್ಪರತಿ ಕಟ್ಟೆಯುಂಟು. ಅದನ್ನು ದಾಟಿ ಹೋಗುವಾಗ ನಮ್ಮ ಹಿರಿಯರ ಹೇಳಿಕೆಯಂತೆ ನಾವು ಗಿಡದ ಸೊಪ್ಪನ್ನು ಹರಿದು ಆ ಕಟ್ಟೆಯ ಕಡೆ ಒಗೆದು ಹೋಗುತ್ತಿದ್ದೆವು. ಅಲ್ಲಿ ವಾಸವಾಗಿದ್ದ ಆ ಹೆಣ್ಣು ದೆವ್ವಕ್ಕೆ ಹೀಗೆ ಸೊಪ್ಪನ್ನು ಹರಿದು ಒಗೆಯಬೇಕಾದ ಸಂದರ್ಭದ ಹಿನ್ನೆಲೆ ನಮ್ಮ ಹಿರಿಯರಿಗೂ ಗೊತ್ತಿರಲಿಲ್ಲ. ಅವರು ತಮ್ಮ ಹಿರಿಯರಿಂದ ಕೇಳಿದ ಸಂಗತಿ, ನಡೆಸಿದ ಪದ್ಧತಿಯನ್ನು ಮುಂದುವರಿಸಿದ್ದರು. ಇದರ ಹಿನ್ನೆಲೆಯಲ್ಲಿ ಡಾ. ಬೆಟಗೇರಿ ಕೃಷ್ಣಶರ್ಮರು ತಮ್ಮ ಕಥಾಸಂಕಲನ "ಮಾತನಾಡುವ ಕಲ್ಲು" ಗ್ರಂಥದಲ್ಲಿ ಕಲ್ಪನೆಯಿಂದಲೋ ಕೇಳಿದ ಸಂಗತಿಯಿಂದಲೋ ರಚಿಸಿದ ಕಥೆಯಂತಹ ಹಿನ್ನೆಲೆ ಇತ್ತೇನೋ.

ನಾನು ಚಿಕ್ಕವನಿರುವಾಗ (ಈಗಲೂ ಸಹ) ಚಾಡಿಯು ಮಾಡುವ ಅನೇಕ ತುಂಟತನದ ವರ್ತಮಾನಗಳನ್ನು ಕೇಳುತ್ತಿದ್ದುದುಂಟು. ಸ್ವಲ್ಪದರಲ್ಲಿ ಹೇಳುವದಾದರೆ, ನನ್ನ ಸೋದರತ್ತೆಯೊಬ್ಬಳು ಏಳು ವರ್ಷದವಳಾಗಿದ್ದಾಗ, (ಅವಳು ಮದುವೆಯಾದ ಎರಡು ವರ್ಷಗಳಲ್ಲೇ ತೀರಿಕೊಂಡಳು. ಅವಳ ಆತ್ಮಕ್ಕೆ ಶಾಂತಿಯಿರಲಿ.) ಚೌಡಿಯು ಅವಳನ್ನು ಒಂದು ದೊಡ್ಡ ಮರದ ಮೇಲೆ ತೆಗೆದುಕೊಂಡು ಹೋಗಿ ಕೂಡ್ರಿಸಿತ್ತಂತೆ. ಅವಳನ್ನು ಹುಡುಕಿ ಹುಡುಕಿ, ಕಡೆಗೆ ಆ ಮರ ಹತ್ತಿ ಅವಳನ್ನು ಅಲ್ಲಿಂದ ಇಳಿಸಿಕೊಂಡು ಬಂದರಂತೆ.

ಒಂದೆರಡು ಮೂರು ವರ್ಷಗಳ ಹಿಂದೆ, ಕುಮಟಾದ ದೊಡ್ಡ ಜವಳಿ ಅಂಗಡಿಯಲ್ಲಿ ಬೀಗ ಹಾಕಿಟ್ಟರೂ ಅಂಗಡಿಯ ಬೀಗ ಹಾಕಿದ್ದು ಹಾಕಿದಂತೆಯೇ ಇದ್ದು, ಒಳಗೆ ಬಹು ಮೌಲ್ಯವಾದ ಪಟ್ಟೆಸೀರೆಗಳಿದ್ದುದು ಕಾಣದಂತಾಗುತ್ತಿದ್ದವಂತೆ. ಈ ವಿಚಿತ್ರ ಘಟನೆ ಅನೇಕ ದಿನ ನಡೆದು, ಆದ ನಷ್ಟವನ್ನು ಕಂಡು ನೊಂದ ಅಂಗಡಿಕಾರರಿಗೆ ಇದು ಏನೋ ದೆವ್ವದ ತಂಟೆಯೆಂದು ಅನಿಸಿತು. ಮೊಗೇರಿಯ ಪ್ರಸಿದ್ಧ ಮಾಂತ್ರಿಕರಾದ ಶ್ರೀ ಪದ್ಮನಾಭ ಅಡಿಗರನ್ನು ಕರೆಸಿ, ವಿಧ್ಯುಕ್ತವಾದ ಶಾಂತಿಯನ್ನು ಮಾಡಿಸಿದರು. ಸಾವಿರಾರು ರೂಪಾಯಿ ಖರ್ಚುಮಾಡಿದರು. ಆಮೇಲೆ ಈ ತರದ ನಷ್ಟವಾಗುವದು ನಿಂತಿತು ಎಂದೂ ವರ್ತಮಾನ ದೃಢವಾಯಿತು.

ಇಂಥ ಘಟನೆಗಳಲ್ಲಿ ನಷ್ಟವಾದದ್ದು ನಿಜ. ಶಾಂತಿ ಮಾಡಿಸಿದ್ದು ನಿಜ: ಮುಂದೆ ಉಪಟಳ ನಿಂತದ್ದೂ ನಿಜ. ಆದರೆ, ಇಷ್ಟರಿಂದಲೇ, ಇದು ದೆವ್ವದ ಕಾಟವೇ: ಅಂಥನೇ

ಕೀಲಿಕೈ ದೊರಕಿಸಿದ ಕಳ್ಳರ ಮೋಟವಲ್ಲ ಎಂದು ಹೇಳಬಹುದೇ? ಬೇರೊಂದು ಊರಿನ ಪ್ರಸಿದ್ಧ ಸ್ಥಳದಲ್ಲಿ ಚೌಡಿಯು ತಂಟೆಯೆಂದು ಸುದ್ದಿ ಹಬ್ಬಿ, ಹೀಗೆಯೇ ಶಾಂತಿ ಮಾಡಿಸಿ, ತಂಟೆ ನಿಂತುದರಲ್ಲಿ ತಂದೆಮಕ್ಕಳ ಜಗಳದಲ್ಲಿ ಮಗನ ಕೈವಾಡ ಇದು ಎಂದು ಹೇಳಿದವರುಂಟು. ವಿಚಾರಮಾಡತಕ್ಕ ವಿಷಯ.

ಹುಟ್ಟಿದ ಶಿಶುವಿಗೆ ಹನ್ನೊಂದು ದಿನಗಳಾದ ಮೇಲೆ ಹನ್ನೆರಡನೆ ದಿನದ ಸಂದರ್ಭದಲ್ಲಿ ಬಾಣಂತಿಯನ್ನು ಮೀಯಿಸಿ ಒಳಗೆ ತಕ್ಕೊಳ್ಳುವರಷ್ಟೇ. ಆ ದಿನದಿಂದ ಶಿಶುವಿಗೆ ದೃಷ್ಟಿಯಾಗಬಾರದೆಂದು ಮೀಯಿಸಿದ ಶಿಶುವಿಗೆ ದೃಷ್ಟಿ ತೆಗೆಯುವ ಸಂಸ್ಕಾರ ನಡೆಸುತ್ತಾರೆ. ತಿನ್ನುವ ಎಲೆ (ವೀಳ್ಯದೆಲೆ)ಗೆ ಮೂರು ರಂಧ್ರ ಮಾಡಿ, ಎಣ್ಣೆಹಚ್ಚಿ, ಉಪ್ಪು, ಮೆಣಸಿನ ಮೂರು ಕರೆಗಳನ್ನೂ, ಆ ಎಲೆಯನ್ನೂ ಶಿಶುವಿನ ತಲೆಯ ಸುತ್ತಲು ತಿರುಗಿಸಿ (ಸುಳಿದು) ಒಲೆಯ ಬೆಂಕಿಯಲ್ಲಿ ಹಾಕುತ್ತಾರೆ. ಯೆರಜಲು (ಬಕುಳ) ಎಲೆಯನ್ನು ಹೀಗೆ ಬೆಂಕಿಗೆ ಹಾಕುವದೂ ಉಂಟು. ಆಗ, ಉಪ್ಪು, ಎಲೆ, ಮೆಣಸಿನ ಕರೆ ಸುಡುವಾಗ ಚಟ ಚಟ ಶಬ್ದವಾಗುತ್ತದೆ. ದೃಷ್ಟಿ ಬಿದ್ದದ್ದೇ ಹೌದಾದರೆ ಉಪ್ಪು ಚಟ ಚಟ ಶಬ್ದಮಾಡುವದಿಲ್ಲ, ಸುಟ್ಟ ಎಲೆಯ ಪರಿಮಳವೂ ಬರುವದಿಲ್ಲ ಎಂದು ಸೂಲಗಿತ್ತಿ ಪರಮೇಶ್ವರಿ ಮಡಿವಾಳ ದೃಢವಾಗಿ ನಂಬಿದ್ದಾಳೆ.

ಈ ದೃಷ್ಟಿ ಬೀಳಲು ಕಾರಣವೆಂದರೆ, ಹಡೆದ ಹೆಂಗಸನ್ನೂ, ಪಡೆದ ಶಿಶುವನ್ನೂ ನೋಡಲು ಬರುವ ಹೆಂಗಸರಲ್ಲಿ ಕೆಲವರು "ಹುಡುಗ ಚೆಂದವಾಗಿದೆ. ಪುಟಪುಟಿ (ಮೈ ಕೈ ತುಂಬಿ) ಅದೆ;" ಅಂತ ಹೇಳಿ ದೃಷ್ಟಿ ಹಾಕುವುದು. ಇದರ ಪರಿಣಾಮ ಎಂದರೆ. ಶಿಶು ಬಹಳ ತೀಡು (ಅಳು)ತ್ತದೆ; ಮಲಗಿಸಿದರೂ ನಿದ್ದೆ ಮಾಡುವದಿಲ್ಲ. ಆದರೆ, ಇದರಲ್ಲಿ ವಿಶೇಷವೇನಂದರೆ. ಬಾಣಂತಿ–ಶಿಶು ಮೈಲಿಗೆಯಲ್ಲಿರುವಾಗ, ಹನ್ನೊಂದು ದಿನಗಳ ವರೆಗೆ ಆ ಮೈಲಿಗೆಯ ತಾಯನ್ನೂ ಮಗುವನ್ನೂ ಆ ದೃಷ್ಟಿ ಸೋಂಕುವದಿಲ್ಲ, ಅದಕ್ಕೂ ಮಡಿ–ಮೈಲಿಗೆ ಎಂಬುದಿರಬೇಕು.

ಹಿರಿಯರ ಚರ್ಯೆಗಳನ್ನು ಚಿಕ್ಕಮಕ್ಕಳು ಕುತೂಹಲದಿಂದ ನೋಡುತ್ತವೆ; ಇದು ಯಾಕೆ ಎಂದು ಅವರನ್ನೇ ಕೇಳುತ್ತವೆ. ತಮ್ಮ ತಮ್ಮ–ತಂಗಿಯರನ್ನು ಮೀಯಿಸಿಕೊಂಡು ಬಂದು, ಅವನ್ನು ಕಾಲಿನ ಮೇಲೆ ಕೂಡ್ರಿಸಿಕೊಂಡು ಹೇಳೆಯ ಹಿಂಬದಿ ಎಣ್ಣೆ ಬಡಿದು ಅದನ್ನು ದೀಪಕ್ಕೆ ಹಿಡಿದು ಮಾಡಿದ ಕಪ್ಪನ್ನು ಕಣ್ಣಿಗೆ ಹಚ್ಚುವದನ್ನೂ, ಹಣೆಗೆ ದೃಷ್ಟಿನಾಮ ಇಡುವುದನ್ನೂ, ಕೆಂಡಕ್ಕೆ ವಿಶೇಷ ಧೂಪಹಾಕಿ ಅದರ ಹೊಗೆಯನ್ನು ಶಿಶುವಿಗೆ ತಾಗಿಸಿದ್ದನ್ನು ನೋಡಿದ ಚಿಕ್ಕಮಕ್ಕಳಿಗೆ ದೃಷ್ಟಿ ಬೀಳುತ್ತದೆ. ದೃಷ್ಟಿ ತೆಗೆಯಲು ಹೀಗೆ ಮಾಡುತ್ತೇನೆ; ನಿನಗೂ ಶಿಶುವಾಗಿದ್ದಾಗ ಹೀಗೆಯೇ ಮಾಡಿದ್ದೆ ಎಂದು ತಾಯಿ ಹೇಳುತ್ತಾಳೆ.

ಕೆಲವು ಮಕ್ಕಳು ಏಳೆಂಟು ಒಂಬತ್ತು ವರ್ಷ ವಯಸ್ಸಿನವರಾಗುವ ವರೆಗೂ ಹಿರಿಯರು ದೃಷ್ಟಿ ತೆಗೆಯಿಸುತ್ತಾರೆ. ನನ್ನ ಉದಾಹರಣೆಯೇ ಇದೆ. ನಮಗೆ ಸ್ವಲ್ಪ

ದೂರದ ಸಂಬಂಧಿಯಾದ ಒಬ್ಬ ವಿಧವೆಯನ್ನು ಎಂಟೆಂಟು ದಿನಗಳಿಗೊಮ್ಮೆ ನನಗೆ ದೃಷ್ಟಿ ತೆಗೆಯಲು ಕರೆಸುತ್ತಿದ್ದರು. ಅವಳು ಬಂದವಳು ನನಗೆ ಮೊದಲು ಮೆಣಸಿನ ಕಾಯಿ ಮತ್ತು ಉಪ್ಪು ಕೂಡಿಸಿ, ನನ್ನ ತಲೆಯ ಸುತ್ತಲು ತಿರುಗಿಸುತ್ತ ಈ ರೀತಿ (ಇನ್ನೂ ಏನೇನೋ) ಹೇಳಿ (ನಿವಾಳಿಸಿ) ಬೆಂಕಿಯಲ್ಲಿ ಅದನ್ನು ಒಗೆಯುತ್ತಿದ್ದಳು. ಉಪ್ಪು ಮೆಣಸು ಚಟ ಚಟ ಆಗುವದು ಕಡಿಮೆಯೆಂದೆನಿಸಿದರೆ ದೃಷ್ಟಿ ಬಹಳ ಜೋರಾಗಿ ಬಿದ್ದಿದೆ ಎಂದು ಅರ್ಥ. ಅವಳ ದೃಷ್ಟಿ ಮಂತ್ರದ ಭಾಗ:—

ತಂದೆ ದೃಷ್ಟಿ ತಾಯಿ ದೃಷ್ಟಿ
ಒಕ್ಕಲದೃಷ್ಟಿ ಮಕ್ಕಳ ದೃಷ್ಟಿ
ಹೋದೋರ ದೃಷ್ಟಿ ಬಂದೋರ ದೃಷ್ಟಿ
ಹಾದೀ ದೃಷ್ಟಿ ಬೀದೀ ದೃಷ್ಟಿ
ಕಾಕೇ ದೃಷ್ಟಿ ಕುನ್ನೀ ದೃಷ್ಟಿ … ಎಲ್ಲಾ ತೊಲಗಲಿ

ಎನ್ನುತ್ತಿದ್ದಳು. ಇತರರ ದೃಷ್ಟಿಗಳ ಪರಿಣಾಮಕ್ಕಿಂತ ತಂದೆ–ತಾಯಿ ದೃಷ್ಟಿ ಬಹಳ ಕಷ್ಟ ವಂತೆ. ಮುಂದೆ ಹರಿವಾಣವನ್ನು ತರಿಸಿಕೊಂಡು ಅವಳು ಹರಿವಾಣದಲ್ಲಿ ಕುಂಕುಮ ಕದಡಿದ ನೀರನ್ನು ಸಿದ್ಧಮಾಡಿಕೊಳ್ಳುತ್ತಿದ್ದಳು. ಒಂದು ಚಂಬಿನಲ್ಲಿ ಸಿಗಿಸಿಗಿ ಕೆಂಡ ಹಾಕಿಕೊಂಡು, ಸ್ವಲ್ಪಹೊತ್ತಿನಲ್ಲಿ ಆ ಚಂಬನ್ನು ಹರಿವಾಣದ ನೀರನಲ್ಲಿ ಬೋರಲಾಗಿ ಇಡುತ್ತಿದ್ದಳು. ಚಂಬಿನ ಕೆಂಡದ ಶಾಖದಿಂದ ಅಲ್ಲಿಯ ಹವೆ ವಿರಲವಾಗಿ ವಾತಾವರ ಣದ ಒತ್ತಿನ ಪರಿಣಾಮವಾಗಿ ಹರಿವಾಣದ ನೀರು ಚಂಬಿನಲ್ಲಿ ಸೇರುತ್ತ ಹರಿವಾಣದಲ್ಲಿ ನೀರು ಕಡಿಮೆಯಾಗುತ್ತಿತ್ತು. ಈ ಕೆಂಪು ಹಾನ (ಪಾನ)ವನ್ನು ಆ ದೃಷ್ಟಿಭೂತ ಮೋರಿ (ಹೀರಿ) ಹರಿವಾಣದ ನೀರು ಕಡಿಮೆಯಾಗುವಾಗ ನಮಗೆಲ್ಲ ಆಶ್ಚರ್ಯ ಹೇಳಲಾರ ದಷ್ಟು. ಕೆಂಪು ನೀರನ್ನು ಕುಡಿದು, ರಕ್ತವನ್ನು ಹೀರಿದೆನೆಂಬ ಸಮಾಧಾನದಿಂದ ಆ ಭೂತವು ನನ್ನ ಮೈರಕ್ತ ಹೀರಿ. ನಾನು ಬಡಕಲಾಗುವದು ಎಂಟು ದಿನಗಳಮಟ್ಟಿಗೆ ತಪ್ಪಿ ದಂತೆ ಎಂದು ಲೆಕ್ಕಾಚಾರ. ಪುನಃ ಎಂಟು ದಿನಗಳಾಗಲು ಆ ಭೂತಕ್ಕೆ ಮತ್ತೆ ಪಾನದ ಹಸಿವೆ. ಪುನಃ ಈ ಪಾನದ ಏರ್ಪಾಟು. ಆ ಬಿಳಿ ಮುದುಕಿಯ ಮೂವತ್ತೆರಡು ಥಳಥಳಿಸುವ ಹಲ್ಲುಗಳಿಂದ ನಗೆಯ ರಭಿಗರಭಿಗ. ಬಾಲಗ್ರಹದ ಉಪಚಾರದಲ್ಲಿ ಮಂತ್ರಬರೆದ ಚಿನ್ನದ ತಗಡುಳ್ಳ ಚಿನ್ನದ ಯಂತ್ರಮಣಿ ನನ್ನ ತೋಳನ್ನು ಬಹಳ ವರ್ಷ ಅಲಂಕರಿಸುತ್ತಿತ್ತು.

ಕೊಟ್ಟಿಗೆಯ ದನಕರಗಳ ಯೋಗಕ್ಷೇಮ ಮುಖ್ಯವಾಗಿ ಹೆಂಗಸರ ಹೊಣೆ. ಕರೆವ ಎಮ್ಮೆ ಆಕಳುಗಳ ಆಹಾರದ ಮತ್ತು ಇತರ ವಿಷಯಗಳ ಕುರಿತು ಹೆಚ್ಚು ಲಕ್ಷ್ಯ ಕೊಡು ತ್ತಾರೆ. ಎಮ್ಮೆ ಹೆಚ್ಚು ಹಾಲು ಹಿಂಡುವದಾದರೆ, ಕೆಚ್ಚಲು ದೊಡ್ಡದಾಗಿದ್ದರೆ ಕರುಬುವ ಜನರ ಕುಹಕದೃಷ್ಟಿಯ ಪರಿಣಾಮ ಬೇಗ ಮತ್ತು ವಿಶೇಷವಾಗುತ್ತದೆ. ಎಮ್ಮೆ ಸರಿ ಯಾಗಿ ಹಾಲು ಕೊಡದಿದ್ದರೆ, ತೆಳ್ಳಗೆ ಸಗಣಿ ಹಾಕಿದರೆ, (ಹಾಲು ಕಡಿಮೆಯಾಗುವದು

ಸಹಜ) ಏನೋ ಕೀಳು ದೆವ್ವದ ತಂಟೆ; ಅದಕ್ಕಾಗಿ ನೋಟ ನೋಡುವವ (ಭೂತ ವೈದ್ಯ)ನ ಹತ್ತಿರ ಹೋಗಿ ನೋಟ ನೋಡಿಸುತ್ತಾರೆ. ಭಟ್ಟರಲ್ಲಿ ಕೆಲವರು ಮಣೆಯ ಮೇಲೆ ಅಕ್ಕಿಕಾಳು ತಿರುಗಿಸುತ್ತ ಸೋದಿಕೆ (ದೆವ್ವದ ಶೋಧ) ನೋಡುತ್ತಾರೆ. ಇದರಿಂದ ಎಂಟು ಹತ್ತು ದಿನ ಪರಿಸ್ಥಿತಿ ಸುಧಾರಿಸುತ್ತದೆಯೆಂಬ ಅನುಭವ ಮಂತ್ರಿಸಿದ ವಿಭೂತಿ, ಅಥವಾ ತೀರ್ಥವನ್ನು ಕೊಡುತ್ತಾರೆ, ಚಲ್ಲಲು. ಇನ್ನು ದೃಷ್ಟಿ ಬಿದ್ದಿದೆಂಬುದಿದೆಯಲ್ಲ? ಅದಕ್ಕೆ ಉಪಚಾರ ಅಂದರೆ, ಚಿಕ್ಕ (ಏಳೆಂಟು, ಹತ್ತುವರ್ಷ ವಯಸ್ಸಿನೊಳಗಿನ, ಗಂಡು ಹುಡುಗರನ್ನು ದೃಷ್ಟಿ ತೆಗೆಯಲು ಕರೆಯುತ್ತಾರೆ. ಇದಕ್ಕೆ ಕಾರಣ ಮತ್ತೇನಲ್ಲ. ಆ ಹುಡುಗರು ಸುಲಭವಾಗಿ ಆ ಎಮ್ಮೆ ಅಥವಾ ಆಕಳ ಮುಂದೆ ತಮ್ಮ ಜನನೇಂದ್ರಿಯ ವನ್ನು ಎತ್ತಿ ಕೈಯಲ್ಲಿ ಹಿಡಿದು, ಅದಕ್ಕೆ ಆರತಿಯೆತ್ತಿದ ಹಾಗೆ ತಿರುಗಿಸುತ್ತಾರೆ. (ಹಾಗೆ ಮಾಡಿದರೆ ದೃಷ್ಟಿಬಾಧೆಯು ನಿವಾರಣೆಯಾಗುವದೆಂದು ಹುಡುಗರಿಗೆ ವಿವರಣೆ ನೀಡಿಯೇ ಅವರು ಹುಡುಗರನ್ನು ಈ ಕೆಲಸಕ್ಕೆ ಹಚ್ಚುತ್ತಾರೆ.) ಹುಡುಗರಿಗೂ ತಾವು ಏನೋ ಮಹತ್ವದ ಕೆಲಸವನ್ನು ಇಷ್ಟು ಸುಲಭವಾಗಿ ಮಾಡುವೆವೆಂದು ಒಂದು ತರದ ಸಮಾಧಾನ. ಜನನೇಂದ್ರಿಯಗಳಿಗೆ ಮಾಟದ ಶಕ್ತಿಯಿದೆಯೆಂದು ತೀರ ಪ್ರಾಚೀನಕಾಲದಿಂದಲೂ ನಂಬುತ್ತ ಬಂದಿದ್ದಾರೆ. ಯಾರೂ ಹುಡುಗರು ಅಷ್ಟುಹೊತ್ತಿಗೆ ಸಿಗದಿದ್ದರೆ ಹೆಂಗಸರೇ ಒಂಟಿಯಾಗಿ ದನಕರಗಳ ಮುಂದೆ ಈ ದೃಷ್ಟಿ ತೆಗೆಯುವ ಕಾರ್ಯಕ್ರಮವನ್ನು ನಡೆಸು ತ್ತಾರೆ. ಈ ಉಪಚಾರದಿಂದ ದೃಷ್ಟಿಬಾಧೆ ನಿವಾರಣೆಯಾಗಿ, ಆ ಎಮ್ಮೆ ದನಗಳಿಗೂ ಸಂತೋಷವಾಗಿ, ಅವು ಹೆಚ್ಚು ಹಾಲನ್ನು ನೀಡುವಂತೆ ನಿರೀಕ್ಷಿಸಬಹುದು (ಅವುಗಳಿಗೆ ಕತ್ತದ ಹುರಿಗಟ್ಟಿಗೆ ಬಣ್ಣ, ಸಿಂಪು ಕೂಡಿಸಿ ದೃಷ್ಟಿದಂಡೆ ಮಾಡಿ ಕೊರಳಿಗೆ ಹಾಕುತ್ತಾರೆ).

ಊಟ ಮಾಡುವಾಗ ಮಕ್ಕಳು ತನಗೆ ಅಷ್ಟು ಅನ್ನಬೇಕು: ಇಷ್ಟು ಕಜ್ಜಾಯ ಬೇಕು ಎಂದು ಒಮ್ಮೆಲೇ ಎಡೆ (ಊಟದ ತಾಟು ಅಥವಾ ಎಲೆ)ಯಲ್ಲಿ ಬಡಿಸಲು ದುಂಬಾಲ ಬೀಳುತ್ತಾರೆ. ಆ ಮೇಲೆ ಪೂರ್ತಿ ಉಣ್ಣದೆ ಬಿಡುವದಾದರೂ ಕೂಡ ಆಗ ಹಿರಿಯರು "ಒಂದೇ ಸಲ ಹೆಚ್ಚು ಬಡಿಸಿಕೊಂಡರೆ, ಯಾರಾದರೂ ನೋಡಿದವರು ದೃಷ್ಟಿ ಹಾಕಿ ಬಿಟ್ಟಾರು. ಉಂಡಿದ್ದು ದಕ್ಕುವದಿಲ್ಲ. ಮತ್ತೆ ಬೇಕಾದರೆ ಬಡಿಸುತ್ತೇವೆ." ಎನ್ನು ತ್ತಾರೆ. ಇಲ್ಲಿ ದೃಷ್ಟಿ ಬೀಳುವ ನಂಬಿಕೆ ಹಿರಿಯರಿಗೂ ಇದ್ದರೂ ಮಕ್ಕಳು ಆಹಾರವನ್ನು ಬಿಟ್ಟು ಹಾಳುಮಾಡಬಾರದೆಂಬ ದೃಷ್ಟಿಯೂ ಉಂಟು.

ಹಿಂದಿನ ಕಾಲದಲ್ಲಿ ಮದುಮಕ್ಕಳು ಚಿಕ್ಕವರಿರುತ್ತಿದ್ದರು. ವರನು ಬಾಸಿಂಗ ಕಟ್ಟಿಕೊಂಡು ಹೊರಡುವಾಗ ಅವನ ಹಣೆಗೆ ಕಪ್ಪು ಹಚ್ಚಲೇಬೇಕು ಮತ್ತು ವಧುವಿನ ಮನೆಗೆ ಹೋದಾಗ ತೋರಣದ ಹತ್ತಿರ ನಿಂತಾಗ ಇತರ ಉಪಚಾರಗಳೊಡನೆ ಅವನು ಬಳು ನೀರಲ್ಲಿ (ಅಂದರೆ ಕುಂಕುಮ, ಅರಿಷಿಣ, ಸುಣ್ಣ ಹಾಕಿ ಕೆಂಪಗೆ ಮಾಡಿದ ನೀರು) ತನ್ನ ಮೋರೆ ನೋಡಿಕೊಂಡರೆ ದೃಷ್ಟಿದೋಷ ಪರಿಹಾರವಾದಂತಾಗುತ್ತದೆ. ಈ ಕ್ರಮ

ಇಂದಿಗೂ ರೂಢಿಯಲ್ಲಿದೆ. ವಧೂವರರು ದೊಡ್ಡವರಿದ್ದಾಗಲೂ ಕೂಡ ಇಲ್ಲಿಯೂ ದೃಷ್ಟಿಭೂತ ಕೆಂಪುನೀರನ್ನು ರಕ್ತ ಎಂದು ತಿಳಿದು ಕುಡಿಯುತ್ತಿದ್ದಿರಬೇಕು.

ಹಿರಿಯರು, ವಿಶೇಷವಾಗಿ ತಾಯಂದಿರು ಮಕ್ಕಳಿಗೆ ಹೀಗೆ ಮಾಡು, ಹೀಗೆ ಮಾಡದಿದ್ದರೆ ಹೀಗೆ ಕೇಡಾಗುತ್ತದೆ; ಹೀಗೆ ಮಾಡಬೇಡ, ಮಾಡಿದರೆ ಹೀಗೆ ಅನಿಷ್ಟ ವಾಗುತ್ತದೆ ಎಂದು ಎಚ್ಚರಿಕೆ ಕೊಡುತ್ತಾರೆ. ಇದರಿಂದ ಅನೇಕ ಮೂಢ ನಂಬಿಕೆಗಳು ಮಕ್ಕಳಲ್ಲಿ ಬೇರೂರಿ ಬಿಡುತ್ತವೆ.

ಕೆಲವುಸಲ ನಿಜವಾದ ಕಾರಣ ಒಂದಿರುತ್ತದೆ. ಅದನ್ನು ಮರೆಸಿ, ಸುಳ್ಳುಕಾರಣ ಅಥವಾ ನೆವ ಹೇಳಿ ಮಕ್ಕಳ ರಗಳೆ ತಪ್ಪಿಸಿಕೊಳ್ಳುತ್ತಾರೆ. ಅವರು ಅನಿಷ್ಟ ಕೆಲಸ ಮಾಡದಂತೆ ತಡೆಯುತ್ತಾರೆ.

ಚಿಕ್ಕಮಕ್ಕಳಿಗೆ ಕತೆಯ ರುಚಿ ತಿಳಿದಮೇಲೆ ಹಗಲಿಗೂ ಕತೆ ಹೇಳೆಂದು ದುಂಬಾಲ ಬೀಳುತ್ತಾರೆ. ಆಗ "ಕತೆ ಕತೆ ಕಾರಣ, ಬೆಕ್ಕಿನ ತೋರಣ, ಕೊಳಗದಲ್ಲಿಬ್ಬಣ. ಶಿದ್ದೆಲಿ ದಬ್ಬಣ" ಎಂದು ಶಿಶು, ಪ್ರಾಸ ಹೇಳಿ, 'ಹಗಲಿಗೆ ಕತೆ ಹೇಳಬಾರದು, ಹೇಳಿದರೆ ಕತ್ತೆ ಯಾಗಿ ಹುಟ್ಟುತ್ತಾರೆ' ಎಂದು ಹೇಳಿ ಪಾರಾಗುತ್ತಾರೆ. ಕೆಲವು ಮಕ್ಕಳು ಹಾದೆಂದು ತಿಳಿದು ತೆಪ್ಪಗಾಗುತ್ತಾರೆ.

ಉದ್ದಿನ ಕಾಳಿನಲ್ಲಿ ಕಲ್ಲನ್ನು ಆರಿಸುವಾಗ, ಮಕ್ಕಳು ಉದ್ದಿನ ಕಾಳನ್ನು ತಿನ್ನಲು ಹವಣಿಸುತ್ತಾರೆ. ಆಗ, ಉದ್ದಿನ ಕಾಳು ತಿಂದರೆ ಅಪ್ಪ ಸತ್ತುಹೋಗುತ್ತಾನೆ ಎಂದು ನೆವ ಹೇಳಿ, ತಡೆಯುತ್ತಾರೆ.

ಕೋಲನ್ನು ತೆಗೆದುಕೊಂಡು ನೆಲವನ್ನು ಗೀರುತ್ತಾ ಹೋಗುವದು ಮಕ್ಕಳ ಅಭ್ಯಾಸ, ಆಗ "ಭೂಮಿ ತಾಯಿ: ತಾಯಿಯ ಹೊಟ್ಟೆಯನ್ನು ಸಿಗಿ (ಸೀಳು)ತ್ತೀನೋ? ಅಂತ ಕೇಳುತ್ತಾರೆ. ಪಾದದಿಂದ ನೆಲವನ್ನು ಉಜ್ಜುತ್ತ ಹೋಗಬಾರದು. ಹಾಗೆ ಹುಡುಗರು ಮಾಡುವಾಗ, ನೋಡುವವರಿಗೂ ಮೈ ಅದರಿದ ಅನುಭವವಾಗುತ್ತದೆ. ಆದರೆ, ಇದಕ್ಕೆ ಕಾರಣಕೊಡುವುದು ಹಾಗಲ್ಲ. ಇದು ಅವಲಕ್ಷಣ ಹೀಗೆ ಪಾದದಿಂದ ನೆಲ ಗೀರುತ್ತ ಹೋಗಬಾರದು. ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಎಲ್ಲರಿಗೂ ಈ ಉಪದೇಶ ನೀಡುತ್ತಾರೆ.

ನಾವು ಚಿಕ್ಕವರಾಗಿದ್ದಾಗ ದೊಡ್ಡಮರದ ತೊಲೆಯ ಕೆಳಗೆ ಮಲಗಬಾರದು ಎಂದು ಹೇಳುತ್ತಿದ್ದರು. ಕೆಟ್ಟ ಕನಸು ಬೀಳುತ್ತದೆ ಎಂದು ಕಾರಣ ಕೊಡುತ್ತಿದ್ದರು. ದೊಡ್ಡ ಮರದಲ್ಲಿ ಆ ಮರದ ದೋಷ. ಅಂದರೆ ಏನಾದರೂ ಭೂತದ, ದೆವ್ವದ ಪಿಶಾಚದ ಆಳಿಕೆ (ಅದರಲ್ಲಿ ಠಾಣ್ಯ ಸ್ಥಾಪಿಸುವದು) ಇರುತ್ತವೆ. ಅದರ ಕಾಟವಾದೀ

ತೆಂದು ಸ್ಪಷ್ಟಹೇಳದೆ ಹೀಗೆ ಕನಸಿನದೋಷ ಹೇಳುತ್ತಾರೆ. ಆ ದೆವ್ವ ಕುತ್ತಿಗೆ ಹತ್ತೊತ್ತು (ಗಟ್ಟಿಯಾಗಿ ಒತ್ತು) ತ್ತದಂತೆ.

ಮಕ್ಕಳು ತಾಯಂದಿರ ಬೆನ್ನು ಹತ್ತಿ ತಿರುಗುತ್ತಾರೆ. ಅಡಿಗೆ ಮನೆಯಲ್ಲೂ ಇರು ತ್ತಾರೆ. ಒರಳುಕಲ್ಲು ಹತ್ತಿ ಕೂಡ್ರುವದೆಂದರೆ ಅವರಿಗೆ ತುಂಬಾಪ್ರೀತಿ. ಇದು ಸಹಜ ವಾಗಿ ತೋರುವರೆ. ಮುಂದೆ ಇಂಥ ಸಂದರ್ಭ ತಪ್ಪಿಸಲು, ಒರಳಕಲ್ಲು ಮೇಲೆ ಕೂಡ್ರ ಬಾರದು: "ಒಳಕಲ್ಲಿನಂಥ ಮಕ್ಕಳು ಹುಟ್ಟುತ್ತಾರೆ." ಎಂದು ಎಚ್ಚರಿಕೆ ಕೊಡುತ್ತಾಳೆ ಬರೇ ಒರಳು ಕಲ್ಲು ಬೀಸಬಾರದು: ಬೀಸಿದರೆ ನೆಂಟರು ಬರುತ್ತಾರೆ ಎಂದೂ ನಿಷೇಧಿ ಸುತ್ತಾರೆ.

ಮಕ್ಕಳಿಗೆ ಸಹ ದುಡ್ಡೆಂದರೆ ಬಹಳ ಅಕ್ಕರೆ, ಅದರಿಂದಲೇ ಆಟವಾಡುತ್ತಾರೆ. ಇದ ರಿಂದ ದುಡ್ಡು ಕಳೆದುಹೋಗುವ ಸಂಭವ ಹೆಚ್ಚು. ಅದರಿಂದ "ದುಡ್ಡು ಲಕ್ಷ್ಮೀದೇವಿ ದುಡ್ಡಿನಲ್ಲಿ ಆಡಿದರೆ ಲಕ್ಷ್ಮೀದೇವಿಗೆ ಸಿಟ್ಟು ಬರುತ್ತದೆ. ಮನೆಯಲ್ಲಿ ಲಕ್ಷ್ಮೀದೇವಿ ನಿಲ್ಲುವದಿಲ್ಲ. (ಅರ್ಥಾತ್ ಹಣ ನಷ್ಟವಾಗುತ್ತದೆ.)" ಎಂದು ಹೇಳುತ್ತಾರೆ. ಮುಗ್ಧ ಮಕ್ಕಳು ನಂಬಿ ದುಡ್ಡನ್ನು ತಕ್ಕೊಂಡು ಆಡುವದಿಲ್ಲ. ಅಡಕೆ ಆಡಬಾರದು; ಅಡಕೆ ತಕ್ಕೊಂಡು ಆಡಿದರೆ ಅಡಿಕೆ ದರ ಕಡಿಮೆಯಾಗುತ್ತದೆ ಎನ್ನುತ್ತಾರೆ.

ಒಮ್ಮೆ ತಾಯಿ ದುಡ್ಡುಕೊಡು ಎಂದು ಪೀಡಿಸುವ ಮಗನ ಹತ್ತರ "ದುಡ್ಡು ಗಿಡದಲ್ಲಿ ಆಗುತ್ತದೆಯೇನೊ ?" ಎಂದು ಜೋರುಮಾಡಿದಳು. "ದುಡ್ಡಿನ ಗಿಡನಟ್ಟು ಅಲುಗಿಸು ದುಡ್ಡು ಬೀಳುವದೋ ನೋಡು" ಎಂದು ಅವಳು ಹೇಳಿದಳು. ಹುಡುಗನು ನೋಡೋಣ! ಎಂದುಕೊಂಡು ತಾಯ ಕಣ್ಣು ತಪ್ಪಿಸಿ, ಒಂದು ದುಡ್ಡನ್ನು ತಕ್ಕೊಂಡು ಹೋಗಿ, ಮಣ್ಣಿನಲ್ಲಿ ಹುಗಿದು, ಅದಕ್ಕೆ ನೀರು ಹಾಕಿದನು. ಗಿಡವಾಗಲೆಂದು.

ಮಿತವ್ಯಯದ ದೃಷ್ಟಿಯಿಂದ ಇರಬೇಕು. ಉಪ್ಪನ್ನು ಚೆಲ್ಲಬಾರದು. ಹೆಚ್ಚು ಬೇಕೆಂದು ಬಡಿಸಿಕೊಂಡು ಬಿಡಬಾರದು. ಹೆಚ್ಚಾದ ಉಪ್ಪನ್ನು ನೀರಿನಲ್ಲಿ ಕದಡಬೇಕು ಎನ್ನುತ್ತಾರೆ.

ನಮ್ಮ ಭಾವನವರು (ಎರಡನೆ ಅಕ್ಕನ ಗಂಡ) ಒಮ್ಮೆ ನಮ್ಮ ಮನೆಯಲ್ಲಿ ಹೇಳಿದರು. "ಆ ಆಚಾರಿಗೆ ನಾಕು ಮಣೆ ಮಾಡಿಕಂಡು ಬಾ ಹೇಳಿ ಹಲಗೆ ಕೊಟ್ಟೆ. ಯೆರಡ ರುಪ್ಪಾ ದುಡ್ಡನೂ (ಮುಂಗಡ) ಕೊಟ್ಟೆ. ಅವನು ಹಲಗೆನೂ ತಿಂದ: ದುಡ್ಡನೂ ತಿಂದ." ಈ ಮಾತಿನ ಅಭಿಪ್ರಾಯ ದೊಡ್ಡವರಿಗೆ ತಿಳಿಯುತ್ತದೆ. ಆ ಬಡಿಗ ಹಲಗೆ ದುಡ್ಡು ಪೂರ್ತಿ (ತಿಂದ) ದಕ್ಕಿಸಿದ; ಎಂದು

ಆದರೆ, ಮೂರು ವರ್ಷ ವಯಸ್ಸಿನ ಅವರ ಮಗ ಈ ಮಾತು ಕೇಳಿದ. ಅವನ ಅರ್ಥವೇ ಬೇರೆಯಾಗಿತ್ತು. ಆ ಮೇಲೆ ಆ ಹುಡುಗನು ಜಗಲಿಯ ಕಟಾಂಜನದ

ಮಧ್ಯದ ಹಲಗೆಗೆ ಬಾಯಿ ಹಚ್ಚಿ ಅದು ತಿನ್ನಲು ಬರುವದೋ ಎಂದು ಪ್ರಯತ್ನಮಾಡಿ ನೋಡಿದನು. ಇಂಥದೇ ರೀತಿಯ ಅಸಮಂಜಸ ತರ್ಕ ಮೂಢನಂಬಿಕೆಗಳಿಗೆ ಕಾರಣವಾಗುತ್ತದೆ. ಏನನ್ನಾದರೂ ಮಕ್ಕಳು ಸುಲಭವಾಗಿ ನಂಬಿಬಿಡುತ್ತಾರೆ. ಅವರಂತೆ ಹಳ್ಳಿಯ ಮುಗ್ಧ ಜನತೆಕೂಡ ನಂಬುತ್ತಾರೆ.

ಶಬ್ದದ ಎರಡು ಅರ್ಥಗಳನ್ನು ಮಕ್ಕಳನ್ನು ಅಂಜಿಸಲು ಬಳಸುವ ಸಂದರ್ಭ: ಮಳೆ ಬಿದ್ದ ಹೊಸದರಲ್ಲಿ ಮಕ್ಕಳಿಗೆ ಬಲು ಹಿಗ್ಗು. ನೀರು ಅಂಗಳದಲ್ಲಿ ಹರಿಯುತ್ತದೆ. ಆ ನೀರಿನಲ್ಲಿ ಕಾಲನ್ನಿಟ್ಟು, ನೀರಿನಲ್ಲೇ ಕಾಲೆಳೆದುಕೊಂಡು, ನೀರು ತೂರಿ ಚೆಲ್ಲುತ್ತ ಹೋಗುವ ಶಬ್ದವನ್ನೂ ರೀತಿಯನ್ನೂ ಕೇಳಿ ನೋಡಿ ಅವರಿಗೆ ತುಂಬಾ ಖುಷಿ. ನೀರಿನಲ್ಲಿ ಆಟವಾಡಬಾರದು. ಥಂಡಿಯಾಗುತ್ತದೆ ಅಂದರೆ ಮಕ್ಕಳು ಕೇಳುವದಿಲ್ಲ. "ನೋಡು, ಮಳೆಯಲ್ಲಿ ಆಟವಾಡಲು ಹೋಗಬೇಡ ! ಮಣ್ಣು ಕರಡಿ ಬರುತ್ತದೆ." ಎಂದು ಹೆದರಿಸುತ್ತಿದ್ದರು. ನಾವು ಚಿಕ್ಕವರಾಗಿದ್ದಾಗ ಹೌದೆಂದು ನಂಬಿ ಆಗ ಆಡಲು ಅಂಗಳಕ್ಕೆ ಹೋಗಲು ಹಿಂಜರಿದದ್ದುಂಟು.

ಆ ಮೇಲೆ, ಸ್ವಲ್ಪ ದೊಡ್ಡವರಾದ ಮೇಲೆ ಕರಡಿ ಎಂದರೆ ಕರಡಿ ಪ್ರಾಣಿಯಲ್ಲ; ನೀರಿನಲ್ಲಿ ಮಣ್ಣು 'ಕರಡಿ' (ಕದಡಿ) ಬರುತ್ತದೆ ಎಂದು ಈ ಮಾತಿನ ಅರ್ಥ ತಿಳಿಯಿತು.

ಮಕ್ಕಳಿಗೆ ತಿಂಡಿ ತಿನ್ನುವ ಆಸೆ ಹೆಚ್ಚೇ ಆಗಿದೆ. ತಿಂಡಿಯನ್ನು ಕೊಟ್ಟಾಗ ಬೇರೆ ಮಕ್ಕಳಿಗೆ ತೋರಿಸಿ, "ನೋಡೋ ನಾನು ತಿನ್ನುತ್ತೇನೆ ನಿನಗೆ ಕೊಡುವದಿಲ್ಲ" ಎನ್ನಲು ಮುಷ್ಟಿಯನ್ನು ಮುಚ್ಚಿ ಮುಂದೆ ಮಾಡುತ್ತಾ "ತೂಮ್ಮೆ" (ನಿನಗೆ ಇಲ್ಲ, ಸೊನ್ನೆ) ಎಂದು ಛೇಡಿಸುತ್ತಾರೆ. ಇದು ಅಪೇಕ್ಷಣೀಯವಾದ ಗುಣವಲ್ಲ–ಮಕ್ಕಳಿಗೆ ಸಹಜವಾದರೂ.

ಇದನ್ನು ತಪ್ಪಿಸಲು "ಹೀಗೆ ತಕ್ಕಿಸಿ (ಬೇರೆಯವರಿಗೆ ತೋರಿಸಿಕೊಡದೆ) ತಿಂದರೆ ಕಣ್ಣ (ರೆಪ್ಪೆಗೆ) ಚಮುಕಲು ಏಳುತ್ತದೆ" ಎಂದು ಹೇಳುತ್ತಾರೆ. ಚಮುಕಲು, ಚಮುಟಲು ಅಂದರೆ ರೆಪ್ಪೆಗುರು.

ಶಿಶುಗಳಿಗೆ ಹಾಲೆಂದರೆ ಆಗದು: ಚಹವನ್ನಾದರೆ ಪ್ರೀತಿಯಿಂದ ಚಪ್ಪರಿಸಿ ಕುಡಿಯುತ್ತಾರೆ. ಹಿಂದಿನ ಕಾಲದಲ್ಲಿ ಚಹ ಇದ್ದಿರಲಿಲ್ಲ. ಆದರೆ, ಹಾಲನ್ನು ಕುಡಿಯದಿದ್ದ ಬಾಲಕೃಷ್ಣನಿಗೆ ಯಶೋದೆ "ಮಗೂ, ಹಾಲನ್ನು ಕುಡಿ; ನಿನ್ನ ಚಂಡಿಕೆ ಬೇಗ ಉದ್ದವಾಗುತ್ತದೆ" ಎಂದು ಪುಸಲಾಯಿಸಿದಳಂತೆ. ರುದ್ರಭಟ್ಟನ 'ಜಗನ್ನಾಥವಿಜಯ' ಕಾವ್ಯದಲ್ಲಿ, ಆ ತುಂಟ ಮಗು ಹಾಲನ್ನು ಕುಡಿದು, "ಅಬ್ಬೇ ಈಗ ನನ್ನ ಚಂಡಿಕೆ ಎಷ್ಟು ಉದ್ದವಾಗಿದೆ ?" ಎಂದು ಆಕೆಗೇ ಸವಾಲು ಹಾಕಿದನು. (ಮುಗ್ಧಮಗು

ನಿಜವಾಗಿ ಚಂಡಿಕೆ ಎಷ್ಟು ಉದ್ದವಾಗಿರಬೇಕು ಎಂದು ತಿಳಿದು ಕೇಳಿರಬೇಕು ಎಂದು ಇತರರು ತಿಳಿದುಕೊಳ್ಳುವಂತಿತ್ತು.)

ಚಹ ಕುಡಿಯುವುದು ಒಳ್ಳೆಯದಲ್ಲ ಎಂದು ಮಗುವಿಗೆ ಹೇಳುತ್ತಲೇ ಹಿರಿಯರು ಚಹ ಕುಡಿಯುತ್ತಾರೆ. ಮಗುವಿಗೆ ಹೇಳುವ ಕಾರಣ ಹೀಗೆ ಚಹ ಕುಡಿದರೆ ಮೈಬಣ್ಣ ಕರಿದಾಗುತ್ತದೆ. ಮಗು ಇದು ಸುಳ್ಳೇ ಎಂದರೆ 'ನೋಡು ನಿನ್ನ ಅಜ್ಜ ಸಣ್ಣವನಿರುವಾಗ ಬೆಳ್ಳಗಿದ್ದ. ಚಹ ಕುಡಿದು ಕುಡಿದು ಅವನ ಮೈ ಬಣ್ಣ ಹೇಗೆ ಕಪ್ಪಾಗಿದೆ." ಒಂದೊಂದು ಮಗು ನಂಬಿಯೂ ಬಿಡುತ್ತದೆ.

ಅನ್ನ ಉಣ್ಣಿಸುವಾಗ ಚಿಕ್ಕಮಕ್ಕಳು ಉಣ್ಣದೆ ತಾಯನ್ನು ಗೋಳುಹೊಯ್ದುಕೊಳ್ಳುವಂತೆ ಮಾಡುತ್ತವೆ. ಹೆದರಿಕೆಗೆ ಮಣಿಯದ ಮಕ್ಕಳನ್ನು ಹೀಗೆ ರಂಬಿಸಿ ಉಣ್ಣುವಂತೆ ಮನವೊಲಿಸುತ್ತಾರೆ. ರಾತ್ರಿಯ ಹೊತ್ತಾದರೆ ಚಂದ್ರನನ್ನು ತೋರಿಸಿ, "ನೋಡು, ಚಂದಮಾಮ ನಿನ್ನೆಗಿಂತ ದೊಡ್ಡವನಾಗಿದ್ದಾನೆ: ಅಜ್ಜೀಮನೆಯಲ್ಲಿ ಹಾಲು ಅನ್ನ ಉಂಡು ಬೇಗ ದೊಡ್ಡವನಾಗುತ್ತಾನೆ. ನೀನೂ ಅವನ ಹಾಗೇ ಹಾಲು ಅನ್ನ ಉಂಡು ಬೇಗ ದೊಡ್ಡವನಾಗು ಮರೀ.

ತಿಂಗಳ ಚಾಮಿ, ತಿಂಗಳ ಚಾಮಿ,
ತಿಂಗಳಿಗ್ ವಂದ್ ಸಾರ್ ಬಂದ್ ಹೋಗು,
ಹಾಲು ಅನ್ನ ಉಂಡ್ ಹೋಗು,
ತುಪ್ಪ ಅನ್ನ ಉಂಡ್ ಹೋಗು" ಎಂದು ರಾಗವಾಗಿ ಹೇಳುತ್ತಾಳೆ.

ಮಗು ಉತ್ಸುಕತೆಯಿಂದ ತಿಂಗಳು ಮಾವನನ್ನು ಬಾಯಿತೆರೆದು ನಗುತ್ತ ನೋಡುತ್ತದೆ. ಆ ತೆರೆದ ಬಾಯಲ್ಲಿ ಹಾಲು ಅನ್ನದ ತುತ್ತನ್ನು ತಾಯಿ ಉಣ್ಣಿಸುತ್ತಾಳೆ. ದಿನದಿನಕ್ಕೆ ಸೊರಗುತ್ತ ಬರುವ ತಿಂಗಳು ಮಾವನನ್ನು ನೋಡುವ ಸಂದರ್ಭ ಆ ಮಕ್ಕಳಿಗೆ ಬರುವುದೇ ಇಲ್ಲ. ಯಾಕೆಂದರೆ, ತಿಂಗಳು ತಡೆ ತಡೆದು, ಮೂಡುತ್ತ ಹೋಗುತ್ತದೆ. ಒಂದು ವೇಳೆ ಹುಣ್ಣಿಮೆಯ ಮರುದಿನದ ಚಂದ್ರ ಸೊರಗಿದಂತೆ ಕಂಡರೆ, "ಇಂದು ತಿಂಗಳು ಮಾವ ಹಾಲು ಅನ್ನ ಉಣ್ಣಲಿಲ್ಲ. ಸೊರಗಹತ್ತಿದ್ದಾನೆ" ಎಂದು ಹೇಳಬಹುದು.

ಸಂಜೆ ದೀಪ ಹಚ್ಚಿದ ಸಂದರ್ಭದಲ್ಲಿ ಚಿಕ್ಕ ಮಕ್ಕಳು ಬಾಯಿಪಾಠ ಹೇಳಬೇಕು. ಮಗ್ಗಿ ಕಲಿಯಬೇಕು. ಆಗ ಆಡಲು ಹವಣಿಸುವದು ತರವಲ್ಲ. ಆಗ ಹೆಣ್ಣುಮಕ್ಕಳಾಗಲಿ, ಗಂಡು ಮಕ್ಕಳಾಗಲಿ ಕಲ್ಲು ಹರಳಿನ ಆಟ. ಕವಡೆ ಆಟ. ಗಜ್ಜುಗದಾಟ ಇತ್ಯಾದಿ ಆಟಗಳನ್ನು ಆಡಲಿಕ್ಕೆ ಕುಳಿತರೆ, ದನಗಳ ಹಾಲು ಕಡಿಮೆಯಾಗುತ್ತದೆ: ಮೂರು ಸಂಜೆ ಹೊತ್ತಿನಲ್ಲಿ ಆಟ ಆಡಬೇಡಿ." ಎಂದು ಗದರಿಸುತ್ತಾರೆ. ಕೆಲವು ಹುಡುಗರು ನಂಬುತ್ತಾರೆ; ಕೆಲವರು ನಂಬುವದಿಲ್ಲ.

ದಿ. ಅ.ನ.ಕೃ. ಅವರ ಸಂಧ್ಯಾರಾಗದಲ್ಲಿ ಲಕ್ಷ್ಮಣನ ತಾಯಿ ಮೀನಾಕ್ಷಮ್ಮ ಅಷ್ಟೇನೂ ಚಿಕ್ಕವನಲ್ಲದ ಮಗನಿಗೆ, "ಬೀದಿಯಲ್ಲಿ ಹೋಗುವ ಹೆಂಗಸಿಗೆ ಎರಡು ಮೊರ ರಾಗಿ ಕೊಟ್ಟು ನಿನ್ನನ್ನು ಕೊಂಡೆ", ಎಂದೆನ್ನುತ್ತಾಳೆ ಅವನು ಅದನ್ನು ನಂಬಿದವನಂತೆ……… ಹೌದೋ? ಎಂದು ತಾಯನ್ನು ಕೇಳುವದು ಅಷ್ಟು ಸಹಜವೆನ್ನಿಸುವುದಿಲ್ಲ.

ನಮ್ಮ ಕಡೆ ತೀರ ಚಿಕ್ಕ ಹುಡುಗರು, "ನಾನು ಎಲ್ಲಿಂದ ಬಂದೆ?" ಅಂತ ಕೇಳಿದರೆ, (ಅಥವಾ ಕೇಳದಿದ್ದರೂ) "ಹೊಳೆಯಲ್ಲಿ ನೀನು ನೀರಿನ ಸಂಗಡ ಬಳಿದು ಹೋಗುತ್ತಿದ್ದೆ: ನಾನು ನಿನ್ನನ್ನು ಅಲ್ಲಿಂದ ಎತ್ತಿಕೊಂಡು ಬಂದೆ" ಎಂದು ಹೇಳಿ ಹಾಸ್ಯಮಾಡುತ್ತಾರೆ. ಮಗು ನಂಬಲಿ, ಬಿಡಲಿ, ಸಂತೋಷದಿಂದ ನಕ್ಕು ದೊಡ್ಡವರಿಗೆ ಸಂತೋಷವನ್ನು ನೀಡುತ್ತದೆ.

ಚಿಕ್ಕ ಮಕ್ಕಳಿಗೆ ಪ್ರಾಣಿ, ಕ್ರಿಮಿಕೀಟ ನೋಡಿದರೆ ಖುಶಿಯೇ ಹೌದು. ಆದರೆ, ಅವರು ಅವನ್ನು ಪೀಡಿಸಿ ಮನರಂಜನೆ ಮಾಡಿಕೊಳ್ಳುವ ಪ್ರವೃತ್ತಿ ಒಳ್ಳೆಯದಲ್ಲ.

ಯಾರಾದರೂ ಪ್ರಾಣಿಯನ್ನು ಕೊಂದರೆ ಮುಂದಿನ ಜನ್ಮದಲ್ಲಿ ಅವನು(ಳು) ಅದೇ ಪ್ರಾಣಿಯಾಗಿ ಹುಟ್ಟಿ ಆ ಪ್ರಾಣಿ ಇಂಥ ಹುಡುಗ(ಗಿ) ಆಗಿ ಅವನ(ಳ)ನ್ನು ಕೊಲ್ಲುತ್ತದೆ. ಎನ್ನುತ್ತಾರೆ. ದುಂಬಿಯ ರೆಕ್ಕೆ ಕೀಳುವುದು, ಅದರ ಬಾಲಕ್ಕೆ ದಾರ ಕಟ್ಟಿ ಅದು ಹಾರುವಾಗ ನೋಡಿ ಪೀಡಿಸಿ ಆನಂದ ಪಡುವ ಆಟವಾಡುವದು ತಪ್ಪಬೇಕೆಂದು ಹೀಗೆ ಹೇಳುತ್ತಾರೆ. ಜಲದಲ್ಲಿದ್ದ ಕಪ್ಪೆಗೆ ಕಲ್ಲು ಹೊಡೆವುದೂ ಮಕ್ಕಳ ಪ್ರೀತಿಯ ಆಟ, ಬೆಕ್ಕಿಗೆ ಹೊಡೆದು ಕೊಂದರೆ, ಕಾಶಿಗೆ ಹೋಗಿ, ಚಿನ್ನದ ಬೆಕ್ಕನ್ನು ಮಾಡಿಸಿ ಕೊಟ್ಟರೂ ಬೆಕ್ಕನ್ನು ಕೊಂದ ಪಾಪ ಹೋಗುವದಿಲ್ಲ ಎಂದು ಸಾರುತ್ತಾರೆ.

ಮೂಕ ಪ್ರಾಣಿ ಗೋವಿಗೆ ಕೈಯೆತ್ತಿ ಹೊಡೆಯಬಾರ. ಬಾಯೆತ್ತಿ ಬಯ್ಯಬಾರ ಬಯ್ದು ಬಯ್ಗಳು, ಹೊಡೆದ ಹೊಡೆತ ಯಮನಿಗೆ ಹೋಗಿ ಮುಟ್ಟುತ್ತದೆ ಎಂದು ಒಂದು ಜನಪದ ಗೀತದಲ್ಲಿದೆ. ಹಿರಿಯರನ್ನು—ತಾಯಿ. ಅಕ್ಕ ಇತ್ಯಾದಿ. ತುಳಿದರೆ ಕಾಲಿನಲ್ಲಿ ಹುಳ ಆಗುತ್ತವೆ. ತುಳಿಯಬಾರದು.

ಅಕ್ಕನ ತುಳಿದವನೇ
ಬೆಕ್ಕ ಸುಟ್ಕಂಡ್ ತಿಂದವನೇ ಎಂದೂ ಹೀಯಾಳಿಸುತ್ತಾರೆ.

ನಮ್ಮ ಮನೆ ಮೂಢನಂಬಿಕೆಗಳ ಒಂದು ತವರು ಮನೆಯಾಗಿದೆ. ನನ್ನ ಶ್ರೀಮತಿಯ ತಂದೆಯ ಮನೆ ಅವಕ್ಕೆ ಅಜ್ಜನ ಮನೆ. ಅಲ್ಲಿಂದಲೇ ಅನೇಕ ಮೂಢ ನಂಬಿಕೆಗಳನ್ನು ಬಳುವಳಿಯಾಗಿ ತಂದು ಇಲ್ಲಿ ಅವನ್ನು ಪೋಷಿಸಿದ್ದಾಳೆ.

ಎಲ್ಲಿಗಾದರೂ ಹೋದರೆ ಮೂರುದಿನ ಆದಾಗ ಅಲ್ಲಿಂದ ಬರಬಾರದು. ಹಾಗೆಯೇ ಒಂಬತ್ತುದಿನ, ಏಳು ದಿನ, ಹನ್ನೊಂದು ದಿನ ಆದ ಸಂದರ್ಭದಲ್ಲಿ ಅಲ್ಲಿಂದ

ಮನೆಗೆ ಬರಬಾರದು. ಬಂದರೆ, ನಾನಾ ತರದ ತ್ರಾಸು ಕಟ್ಟಿಟ್ಟ ಬುತ್ತಿ. ಈ ರೀತಿ ಲೆಕ್ಕಾಚಾರ ಪಾಲಿಸದಿದ್ದಾಗ ಒಣ ಕೆಮ್ಮಲೋ, ಜ್ವರವೋ ಏನಾದರೂ ಉಪದ್ರವ ಬೆನ್ನಿಗೇ ಬರುತ್ತದೆಯಂತೆ. ಒಂದು ದಿನ ಹೋಗಿ ಹನ್ನೊಂದು ದಿನಗಳಾದ ಸಂದರ್ಭದಲ್ಲಿ ಬಂದಾಗ, ಅನಂತರ ಪಟ್ಟ ಪಾಡು ಅಷ್ಟಿಷ್ಟಲ್ಲ ಇನ್ನೆಂದೂ ಹೀಗೆ ಬರಬಾರದು ಎಂದಳು.

ಇಂಥ ಅನುಭವಗಳು ಮಕ್ಕಳಿಗೂ ಮೂಢ ನಂಬಿಕೆ ಗಟ್ಟಿಯಾಗುವಂತೆ ಮಾಡಿವೆ. ಕಾಗೆ ಕರಕರಗುಟ್ಟುವಾಗ ನನ್ನ ಕಿರಿಮಗಳು ಕಾಗೆಯ ಹತ್ತಿರ ಹೀಗೆ ಕೇಳಿದಳು "ಕಾಕೀ ಈ ಪ್ರಕಾರ ಕರಗುಟ್ಟುತ್ತಾ ಇರುವೆ ನಮ್ಮ ಮನೆಗೆ ಯಾರು ಬರುತ್ತಾರೆಯೋ?" (ಕಾಗೆ ಹೆಣ್ಣಾಗಿರಲಿ, ಗಂಡಾಗಿರಲಿ, ಹೆಂಗಸರು ಅವುಗಳೊಡನೆ ಮಾತಾಡುವಾಗ ಬೇರೆ ಹೆಂಗಸಿನ ಸಂಗಡ ಮಾತಾಡುವ ಹಾಗೆಯೇ ಸ್ತ್ರೀಲಿಂಗದಲ್ಲೇ ಸಂಬೋಧಿಸುವುದು ರೂಢಿ) ಆ ಕಾಗೆ ತನ್ನ ಭಾಷೆಯಲ್ಲೇ ಉತ್ತರ ಕೊಟ್ಟಿತು. ನೆಂಟರು ಬರುತ್ತಾರೆ, ಯಾರೋ ಅತಿಥಿ ಬರುತ್ತಾರೆ ಎಂದು ಹಿಂದಿನ ಅನೇಕ ಸಂದರ್ಭಗಳ ನೆನಪಿನಿಂದ ಗಟ್ಟಿಯಾಗಿ ಹೋಗಿದೆ; ಬಾರದಿದ್ದರೆ ಆ ಕಾಗೆ ಕೂಗಿದ್ದೇ ನೆನಪಿನಲ್ಲಿ ಉಳಿದಿರುವದಿಲ್ಲ.

ಶ್ರಾದ್ಧದ ಬಲಿಬಾಳೆಯನ್ನು ಕಾಗೆಗೆ ಇಡುತ್ತಾರೆ. ಆಗ ನಾಯಿ ಆ ಬಾಳೆಯ ಆಹಾರವನ್ನು ಮೊದಲು ಮುಟ್ಟದ ಹಾಗೆ ಕಾದು ಕೊಂಡಿರುತ್ತಾರೆ. ಇದಕ್ಕೆ ಅಕ್ಕ ಪಕ್ಕದ ಮಕ್ಕಳ ವಾನರ ಸೇನೆಯನ್ನು ಈ ಅಜ್ಜಗಾವಲಿಗೆ ಬಳಸುತ್ತಾರೆ. ಪಿತೃಗಳು (ಹೆಂಗಸಾಗಲಿ, ಗಂಡಸಾಗಲಿ) ಕಾಗೆಯ ರೂಪದಿಂದ ಬರುವ ಸಂದರ್ಭವಂತೆ. ಕಾಗೆಗೆ "ಹಾಯ್ ಹಾಯ್" ಎಂದು ಕರೆಯುತ್ತಾರೆ. ಕಾಗೆಗಳು ಈ ಶಬ್ದ ಕೇಳಿ, ತಮ್ಮನ್ನೇ ಕರೆದುದೆಂದು ತಿಳಿದು ಸುತ್ತಲಿಂದ ಓಡಿ ಬರುತ್ತವೆ. ಮೊದಲು ಆ ಬಾಳೆಯ ಯಾವ ಆಹಾರಪದಾರ್ಥವನ್ನು ಮುಟ್ಟಿದರೂ "ಅಜ್ಜ(ಅಜ್ಜಿ)ಗೆ ಈ ಕಜ್ಜಾಯವೇ ಪಸಂದಾಯಿತು" ಎಂದು ಹೇಳಿ ಸಂತೋಷಪಡುತ್ತಾರೆ. ಆ ಮೇಲೆ ನಾಯಿ ತಿಂದರೆ ಪರವಾಗಿಲ್ಲ. ಪಿತೃಗಳು ಅಷ್ಟು ಹೊತ್ತಿಗೆ ತೃಪ್ತಿಹೊಂದಿ, ತಮ್ಮ ಕಾಗೆಯ ಶರೀರದಿಂದ ತೊಲಗಿ ತಮ್ಮ ಲೋಕಕ್ಕೆ ಹೊರಟು ಹೋದಂತೆ ನಿರ್ಣಯ). ಶ್ರಾದ್ಧ ಮಾಡಿದ ಮನೆಯವರಿಗೆ ತಮ್ಮ ಶ್ರಾದ್ಧದೂಟವನ್ನು ಪಿತೃಗಳು ಉಂಡಷ್ಟು ಸಮಾಧಾನ.

"ಬೆಳೆಯನ್ನು ಹೊಗಳಿ ಉಣ್ಣಬೇಕು; ಕರೆವನ್ನು (ಎಮ್ಮೆ) ಆಕಳುಗಳ ಹಾಲು ಕರೆಯುವಿಕೆಯನ್ನು ಹುಗ್ಗಿಸಿ (ಅಡಗಿಸಿ) ಉಣ್ಣಬೇಕು. ಎಂಬ ಹಳೆಯರ ಹೇಳಿಕೆಯಲ್ಲಿ ನಮ್ಮ ಮನೆಯವರಿಗೆ ತುಂಬಾ ನಂಬಿಗೆಯುಂಟು. ಬೆಳೆದ ಧಾನ್ಯವನ್ನು ಹೆಚ್ಚಾಯಿತೆಂದು ಹೊಗಳಬೇಕು. ಅಳೆವಾಗ "ಹೆಚ್ಚೋ" ಎಂದೇ ಪ್ರಾರಂಭಮಾಡುತ್ತಾರೆ.

ಆದರೆ. ಕರುಬುದೃಷ್ಟಿಯುವರು ನೋಡಿದರೆ ಇದ್ದಕ್ಕಿದ್ದಲ್ಲೆ ಹೊಲಿಯ (ಬತ್ತದ) ರಾಶಿ ಕರಗಿ, ಅಳತೆ ಕಮಿಮೆ ಬರುವದೆಂದೂ ಹೇಳುತ್ತಾರೆ.

ಎಮ್ಮೆ. ದನಗಳು ಹಾಲು ಕೊಡುವದು ಇಂತಿಷ್ಟು ಎಂದು ನಿಜವನ್ನು ಹೇಳಿದರೆ ದೃಷ್ಟಿ ಬೀಳುವದೆಂದು ನಂಬುತ್ತಾರೆ: ಹಾಲನ್ನು ಕಾಯಿಸಿದಾಗ, ಒಮ್ಮೊಮ್ಮೆ ಹಾಲು ಗುಳ್ಳೆಯಾಗುವಾಗ ಹವೆ ಸೇರಿ ಹಾಲಿನ ಮೇಲೆ ಗುಳ್ಳೆಗಳೇಳುತ್ತವೆ. ಆಗ, ಆ ಗುಳ್ಳೆಗಳು ಚಾಪಲ್ಯ ಉಳ್ಳವರ ಕಣ್ಣು ಬಿದ್ದಿದ್ದರ ಪರಿಣಾಮ ಎಂದು ತಿಳಿದು, ಹಾಲಿನ ಗುಳ್ಳೆಯ ಮೇಲೂ ಹಾಗೇ ಮೊಸರಿನ ಗುಳ್ಳೆಯ ಮೇಲೂ ಬೆಂಕಿ ಕೊಳ್ಳಿಯನ್ನು ನುರಿದು ಆ ಕಣ್ಣನ್ನು ಹಾಳುಮಾಡುತ್ತಾರೆ. ಕಣ್ಣಿನ ದೋಷ ಪರಿಹಾರವಾದಂತೆ.

ಬೆಳಿಗ್ಗೆ ಕಾಗೆ ಕರ್ ಕರ್ ಎಂದು ಬೆಳಕು ಹರಿವುದನ್ನು ಸೂಚಿಸಿದ ಕೂಡಲೆ ಮುಂದಿನ ಬಾಗಿಲನ್ನು ತೆಗೆಯಬೇಕು. ಇದು ಯಾವ ಶಾಸ್ತ್ರ ? ಎಂದು ಕೇಳಿದರೆ ಆಗ ಭಾಗ್ಯಲಕ್ಷ್ಮಿ ಮನೆಯ ಒಳಗೆ ಬರುವ ಸಮಯ: ಬಾಗಿಲು ತೆಗೆಯದಿದ್ದರೆ ಮನೆಯೊಳಗೆ ಬಾರದೇ ಹೊರಟು ಹೋಗಿ ಬಿಡುತ್ತಾಳೆ ಎಂದು ವಿವರಣೆ ಬರುತ್ತದೆ. ಹಿಂದಿನ ಬಾಗಿಲನ್ನು ಆಗ ತೆಗೆಯಕೂಡದಂತೆ ಬಂದ ಭಾಗ್ಯಲಕ್ಷ್ಮಿ ಆಗಿಂದಾಗ ಹಿಂದಿನ ಬಾಗಿಲಲ್ಲಿ ಹೊರಟು ಹೋಗಬಾರದು.

ಸಂಜೆ ಉರಿ ಹೋಗಿ ಸಿರಿ ಬರುವ ಸಮಯ ಆಗ ಮುಂದಿನಬಾಗಿಲನ್ನು ತೆರೆದು ದೀಪ ಹಚ್ಚಿ ಗೃಹಿಣಿ ನಮಸ್ಕಾರ ಮಾಡಿ ಆ ಸಂಧ್ಯಾಲಕ್ಷ್ಮಿಯನ್ನು ಎದುರುಗೊಂಡು ಸ್ವಾಗತಿಸಬೇಕು.

ಇನ್ನೊಬ್ಬ ಲಕ್ಷ್ಮಿಯ ಜಾಗ ಹೊಸ್ತಿಲು. ಹೊಸ್ತಿಲ ಲಕ್ಷ್ಮಿಗೆ ರಾತ್ರಿ ಮಲಗುವ ಮುನ್ನ ತಂಬಿಗೆಯಲ್ಲಿ ಪ್ರತಿಯೊಬ್ಬ ಗೃಹಿಣಿಯೂ ನೀರನ್ನಿಡಬೇಕು. ಮಧ್ಯರಾತ್ರಿ ನೀರಡಿಕೆಯಾದರೆ ಆವಳಿಗೆ ಕುಡಿಯಲು ಇಡುವ ನೀರು ಅದು. ನೀರನ್ನಿಡಲು ತಪ್ಪಿದರೆ ಆ ಲಕ್ಷ್ಮಿ ಸಿಟ್ಟುಗೊಂಡು ಮನೆಯನ್ನೇ ಬಿಟ್ಟು ಹೋಗುವಳಂತೆ.

ನನ್ನ ಗೃಹಲಕ್ಷ್ಮಿಗೆ ಈ ಹೊಸ್ತಿಲ ಲಕ್ಷ್ಮಿಗೆ ನೀರನ್ನು ಇಡುವ ಕುರಿತು ಬಹಳ ಮುತುವರ್ಜಿ. ನಮ್ಮ ಹುಡುಗಿಗೆ ಈ ರೀತಿ ವಿವರಣೆ ಕೊಟ್ಟರೂ ಹುಡುಗಿಗೆ ಇದರಲ್ಲಿ ಸಂದೇಹ ಬಂತು. ಆ ನೀರು ಬೆಳಿಗ್ಗೆ ಸಹ ಇದ್ದಷ್ಟೇ ಇರುತ್ತದೆ. ಆಗ ನಾನು ಹೇಳಿದೆ:

ರಾತ್ರಿ ನೀರಡಿಕೆ ಹೊಂದಿದ ಜಿರಲೆಗಳು ಬಂದು ಆ ತಂಬಿಗೆಯಲ್ಲಿ ಸೇರಿ, ನೀರಿನಲ್ಲಿ ಬಿದ್ದು ಪರದಾಡುವ ಶಬ್ದ ಕೇಳುತ್ತಿರುತ್ತದೆ. ಆದ್ದರಿಂದ ಆ ಹೊಸ್ತಿಲ ಲಕ್ಷ್ಮಿ ಜಿರಲೆಯ ರೂಪದಿಂದ ಬಂದು ನೀರನ್ನು ಕುಡಿಯುತ್ತನೆ ಎಂದು ನಾವು ವಿನೋದ ಮಾಡಿದೆವು. ಆ ತಂಬಿಗೆಯನ್ನು ಮುಚ್ಚದೆ ಇಟ್ಟಿರುವದರಿಂದ ಜಿರಲೆಗಳು ಬಿದ್ದು ಸಾಯುತ್ತವೆ.

ನಾನು ಈ ಲೇಖನವನ್ನು ನನ್ನ ಮಿತ್ರ ಪ್ರೊ. ಬಿ. ಎಸ್. ಶಾನಭಾಗರಿಗೆ ಓದಿ ಹೇಳುವಾಗ ಶ್ರೀ ಎಂ. ಬಿ. (ಅಪ್ಪು) ಶಾನಭಾಗರು ಬಂದು ಓದುವುದನ್ನು ಆಸಕ್ತಿಯಿಂದ ಕೇಳಿದರು. ತಮ್ಮ ಅನುಭವವನ್ನೂ ಹೇಳಿದರು.

ಅವರ ಕುಟುಂಬದ ಮುದುಕಿ ಒಬ್ಬರು ನಿಪುತ್ರಿಕರಾಗಿ ತೀರಿದರು. ಅವರು ಒಬ್ಬ ಚಿಕ್ಕ ಹುಡುಗಿಯನ್ನು ದಿನಾ ಕೈಹಿಡಿದು ದೇವಾಲಯಕ್ಕೆ ಕರೆದುಕೊಂಡು ಹೋಗುವ ಅಭ್ಯಾಸವಿತ್ತು. ರಾತ್ರಿ ಅವರು ಮರಣಹೊಂದಿದ ಮೇಲೆ ರಾತ್ರಿಯೇ ಅವರ ಶವವನ್ನು ದಹನಮಾಡಿದರು.

ಮರುದಿನ ಆ ಹುಡುಗಿ ಅಜ್ಜಿಯನ್ನು ಹುಡುಕಿದಳು. ಶಯ್ಯೆಯಲ್ಲಿ ಅವರು ಕಾಣಲಿಲ್ಲ. ಎಲ್ಲಿ ಹೋದರೆಂದು ಕೇಳಿದಳು. ಮೇಲೆ ಹೋದರೆಂದು ತಿಳಿಸಿದರು.

ಅವರು ಮಡಿದ ಕೋಣೆಯಲ್ಲಿ ಗಿಳಿಗೂಟಕ್ಕೆ ಅರಿವೆಯ ಎರಡು ದಾರಗಳನ್ನು ನೆಲದವರೆಗೆ ತೂಗು ಬಿಟ್ಟು ನೆಲದ ಮೇಲೆ ಒಂದು ತಟ್ಟೆಯಲ್ಲಿ ಹಾಲನ್ನೂ ಒಂದರಲ್ಲಿ ನೀರನ್ನೂ ಇಟ್ಟು ಪಾಥೇಯವನ್ನು ರಚಿಸಿದ್ದರು. ಆ ಹುಡುಗಿ ಇದೇ ದಾರದ ಮೇಲೆ ಅವರು ಮೇಲೆ ಹೋದರೆಂದು ತಿಳಿದಳು. ತಟ್ಟೆಗಳು ಯಾಕೆ ? ಎಂದು ಕೇಳಿದಳು. "ಅವರು ರಾತ್ರಿ ಬಂದು ಕುಡಿಯುವ ಸಲುವಾಗಿ ಇಟ್ಟಿವೆ, ಎಂದರು.

ಹುಡುಗಿ ಹೌದೆಂದು ನಂಬಿದಳು. ಬೆಳಗಾದ ಮೇಲೆ ಹೋಗಿ ಅಜ್ಜಿ ಬಂದು ತಟ್ಟೆಯನ್ನು ಬರಿದುಮಾಡಿದಳೋ ಎಂದು ಕುತೂಹಲದಿಂದ ನೋಡಿದಳು. ಹಾಲಿನ ತಟ್ಟೆ ಮಾತ್ರ ಬರಿದಾಗಿತ್ತು. ಹುಡುಗಿ, "ಇಂದು ರಾತ್ರಿಯೂ ಬಂದು ಹಾಲನ್ನು ಕುಡಿವರೋ ನೋಡಬೇಕು," ಎಂದಳು. ಶ್ರೀ ಶಾನಭಾಗರು ಅವಳು ಹೆದರಿಯಾಳೆಂದು ನಿಜ ಸಂಗತಿ ಹೇಳಿದರು. ರಾತ್ರಿ ಬೆಕ್ಕು ಬಂದು ಹಾಲನ್ನು ಕುಡಿದದ್ದು, ಅಜ್ಜಿಯಲ್ಲ.

ಹೆಣ ಸುಟ್ಟು ತಿರುಗಿ ಬರುವಾಗ ತಿರುಗಿ ನೋಡದೆ ಏಳು ಕಲ್ಲುಗಳನ್ನು ಹಿಂಬದಿಗೆ ಒಗೆವ ವಿಷಯವನ್ನು ಹೇಳಿದರು. ಸತ್ತವರ ಆತ್ಮಗಳು ತಿರುಗಿ ಬಾರದಂತೆ ಮಾಡುವ ಉಪಾಯಗಳನ್ನು ನಾನೂ ಅನೇಕ ಕ್ರಮಗಳನ್ನು ಹೇಳಿದೆನು.

ಅವರು ಏಳು ಸಂಖ್ಯೆಗೆ ದೆವ್ವಗಳು ಹೆದರುವವು: ಕಲ್ಲುಗಳು ಅವುಗಳಿಗೆ ಮಧ್ಯ ಪರ್ವತಗಳಾಗಿ ಅವನ್ನು ತಡೆಯುವವೆಂಬ ನಂಬಿಗೆಯಿದೆ ಎಂದರು. ಜನಪದ ಕಥೆಗಳಲ್ಲಿ ಓಟದಲ್ಲಿ ವಿಘ್ನಗಳು ಎಂಬ ಆಶಯವಿದೆಯೆಂಬುದನ್ನು ನಾನು ತಿಳಿಸಿದೆನು.

ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟ ಅನೇಕ ಮೂಢನಂಬಿಕೆಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಪ್ರಮುಖವಾದದ್ದು ಗಂಡಸರಿಗಿಂತಲೂ ಹೆಂಗಸರು ಕಡಿಮೆ ಮಟ್ಟದವರು

ಎಂಬುದು. ಇದನ್ನು ನಮ್ಮ ಹೆಂಗಸರೂ ನಂಬಿಕೊಂಡು ತಮ್ಮ ಹೆಣ್ಣುಮಕ್ಕಳಿಗೂ ನೀನು ನಿನ್ನ ಅಣ್ಣ, ತಮ್ಮನಿಗಿಂತ ಕಡಿಮೆಯವಳು ಎಂದು ತಲೆಯಲ್ಲಿ ತುಂಬುತ್ತ ಬರುತ್ತಾರೆ. ಫಲವಾಗಿ ಹೆಂಗಸರು ದೊಡ್ಡವರಾದ ಮೇಲೂ ಈ ಕೀಳರಿಮೆ (Inferiority Complex) ಅವರಲ್ಲಿ ಬಾಲ್ಯದಿಂದ ಬೇರೂರಿರುವದರಿಂದ ಅವರು ಹಾಗೆಯೇ ನಂಬಿ ನಡೆಯುತ್ತಾರೆ; ನುಡಿಯುತ್ತಾರೆ. ಗಂಡು ಹುಟ್ಟಿದರೆ ಬಹಳ ಹಿಗ್ಗು; ಹೆಣ್ಣು ಹುಟ್ಟಿದರೆ ಬಹಳ ಕುಗ್ಗು (ಇವಕ್ಕೆ ಇರುವ ಸಾಮಾಜಿಕ, ಆರ್ಥಿಕ ಕಾರಣಗಳನ್ನು ಯೋಚಿಸುವದನ್ನು ಸದ್ಯಕ್ಕೆ ಬಿಡೋಣ.)

"ಅವ ಹೇಗಿದ್ದರೂ ಗಂಡು ಪೋರ; ಗಂಡಾಗಿ ಹುಟ್ಟಿದವ ಬೆಂಡಾಗಿ ತೇಲುವದಿಲ್ಲ (ಗಾದೆ) ನೀನು ಎಷ್ಟಾದರೂ ಹೆಣ್ಣು; ಪರರ ಮನೆಗೆ ಹೋಗಿ ಮುಸುರೆ ಪಾತ್ರೆ ತಿಕ್ಕುವವಳು" ಎಂದು ತಾರತಮ್ಯವನ್ನು ಬಿತ್ತುತ್ತಾರೆ. (ಹುಟ್ಟಿದ ಶಿಶು ಗಂಡಾದರೇನು? ಹೆಣ್ಣಾದರೇನು ? ದೇವರು ಕೊಟ್ಟಿದ್ದು." ಎಂದು ಹೇಳಿ, ಸಮಾಧಾನ ಮಾಡು–ವವರೂ ಕಾಣಬರುತ್ತಾರೆ.) ಇಲಿಯು ಹೀಗೆ ಹೇಳಿಕೊಳ್ಳುತ್ತದೆ ಎಂದು ಪದ ಕಟ್ಟಿ ಹೇಳಿದ್ದುಂಟು.

ಮಾಣಿ ಹುಟ್ಟಿದ ಮಗ ರಾಜ ಹುಟ್ಟಿದ
ಅಕ್ಕಿ ಕಣಜ ಬತ್ತದ ಕಣಜ ಕಟ್ಟಿಲ್ ಹುಟ್ಟಿದ
ಕೂಸು ಹುಟ್ಟಿತು ಕುಕ್ಕಣ್ಣಾಶಿ ಹುಟ್ಟಿತು
ಅಕ್ಕಿ ಕಣಜ ಬತ್ತದ ಕಣಜ ಮುಚ್ಚಿಲ್ ಹುಟ್ಟಿತು.
(ಪಾಠಾಂತರ ಪಾತ್ರಪಡಗ ಗೀತ್ರಪಡಗ ಮುಚ್ಚಿಲ್ ಹುಟ್ಟಿತು.)
ಮಡಕೆ ಬಾಯಿ ಕುಡಕೆ ಬಾಯಿ ಮುಚ್ಚಿಲ್ ಹುಟ್ಟಿತು.

ಆಹಾರ ಹಾಕಿದ ಪಾತ್ರೆಗಳನ್ನು ಮುಚ್ಚಿಟ್ಟು. ತನಗೆ ಸಿಗದ ಹಾಗೆ ಮಾಡುತ್ತಾರೆಂದು ಇಲಿಗೆ ಹೆಣ್ಣುಮಕ್ಕಳ ಮೇಲೆ ಸಿಟ್ಟು ಎಂದು ಹೇಳಿಕೆ). ಇಲ್ಲಿ ಹೆಣ್ಣುಮಕ್ಕಳು ಸತ್ತುಹೋಗಲಿ: ಗಂಡುಮಕ್ಕಳು ಬದುಕಲಿ ಎಂದೂ ಶಾಪ ಹಾಕುತ್ತದೆ ಎನ್ನುತ್ತಾರೆ.

ಗಂಡು ಶಿಶು ಹುಟ್ಟಿದಾಗ ಜಾಗಟೆ ಬಡಿಯುತ್ತಾರೆ: ಹೆಣ್ಣು ಶಿಶು ಹುಟ್ಟಿದಾಗ ಬಟ್ಟಲು ಬಡಿಯುತ್ತಾರೆ. ಗಂಡು ಹುಟ್ಟಿದರೆ ಸಕ್ಕರೆ ಹಂಚುತ್ತಾರೆ: ಹೆಣ್ಣು ಹುಟ್ಟಿದರೆ ಬೆಲ್ಲ ಹಂಚುತ್ತಾರೆ. (ಮನೆಯಲ್ಲೇ ನಡೆದ ಸಂದರ್ಭದಲ್ಲಿ ಹೀಗೆ)

ರಜಸ್ವಲೆಯಾಗುವ ದೇಹಧರ್ಮ ಹೆಂಗಸಿಗೆ ಅವಶ್ಯಕವಾದದ್ದು ಎನ್ನುವುದನ್ನು ಅರಿತೂ ಅದು ಹೆಣ್ಣು ಜನ್ಮದ ಪಾಪದ ಫಲ ಎನ್ನುವವರಿದ್ದಾರೆ.

ಕಸ ತೆಗೆವಾಗ ಕಸಬರಿಗೆ (ಹಿಡಿ) ಗಂಡುಮಕ್ಕಳ ಕಾಲಿಗೆ ತಾಗಬಾರದು. ತಾಗಿದರೆ ಗಂಡುಮಕ್ಕಳು ಸೊರಗು (ಜೀರಾಗು)ತ್ತಾರೆ ಎಂಬ ನಂಬಿಕೆಯಿದೆ. ಆಕಸ್ಮಾತ್ ತಾಗಿದರೆ,

ಒಂದು ಹಿಡಿ(ಕಸಬರಿಗೆ)ಯ ಕಡ್ಡಿಯನ್ನು ಮುರಿದು ಆ ಚೂರನ್ನು ಬೀಸಾಡಬೇಕು ಅಂದರೆ ದೋಷ ಪರಿಹಾರ. ಹೆಣ್ಣು ಮಕ್ಕಳಿಗೂ ಕಸಮಾಡುವಾಗ ಹೀಗೆ ಕಲಿಸುತ್ತಾರೆ. (ಗಂಡಸರಿಗೆ ಬಲಭಾಗ; ಹೆಂಗಸರಿಗೆ ಎಡಭಾಗ ಒಳ್ಳೆಯದು ಎಂಬಲ್ಲಿಯೂ ತಾರತಮ ಕಾಣುತ್ತದೆ.)

ಅಡಿಗೆ ಮಾಡುವವರು (ಸಾಮಾನ್ಯವಾಗಿ) ಹೆಂಗಸರಾದರೂ ಕರಿಕುಂಬಳ (ಬೂದು ಗುಂಬಳ) ಕಾಯಿಗೆ ಮೊದಲು ಕಚ್ಚು ಹಾಕಲು (ಸೀಳಲು) ಗಂಡಸರೇ ಆಗಬೇಕು ಗಂಡುಮಕ್ಕಳಾದರೂ ಪರವಾಗಿಲ್ಲ. (ಇದಕ್ಕೆ ಹಿಂದಿನ ಯಾವ ಅನುಭವವು ಕಾರಣವಾಯಿತೋ, ಹೆಣ್ಣುಮಕ್ಕಳು ಕಡಿತ ಹಾಕಿದಾಗ ಯಾವ ಅನಿಷ್ಟವಾಯಿತೋ, ಕಾಲಿಗೆ ಬಹಳ ಗಾಯವಾಗಿ ಕಷ್ಟನಷ್ಟವಾಯಿತೋ ತಿಳಿಯದು. ಕರಿ(ಬೂದು) ಗುಂಬಳ ಕಾಯಿ ದೆವ್ವಗಳಿಗೆ ಬಲಿಕೊಡಲು ಉಪಯೋಗಿಸುವ ವಸ್ತುವಂತೆ.

ಶ್ರೀನಿವಾಸರ "ಸುಬ್ಬಣ್ಣ" ಕಾದಂಬರಿಯಲ್ಲಿ ಲಲಿತಳಿಗೆ ತಾಯಿ ಹೇಳಿದಳಂತೆ: "ಗಂಡಸರು ಪಾರಿಜಾತದ ಹೂವಿನ ಹಾಗೆ, ನೋಡಿದರೆ ಬಾಡುತ್ತಾರೆ." ಗಂಡಸನ್ನು ದೃಷ್ಟಿಯಿಟ್ಟು ನೋಡಬಾರದು ಎಂದು ಹೇಳಿದ್ದಳೆಂದು ಬಂದಿದೆ.

ಇದರ ಸತ್ಯಾಸತ್ಯತೆ ಏನೇ ಇರಲಿ: ಗಂಡುಶಿಶುಗಳು ಬದುಕಿ ಉಳಿವುದು ಹೆಣ್ಣು ಶಿಶುಗಳ ಬದುಕಿರುವುವಕ್ಕಿಂತ ಹೆಚ್ಚು ಕಷ್ಟ ಎಂದು ಜನರು ನಂಬಿದ್ದಾರೆ. (ಗಂಡು ಜವಿಯ ಮೂಲಕ ಗಂಡು ಶಿಶುಗಳು ಸಾಯುವುದು ಹೆಚ್ಚು ಎನ್ನುತ್ತಾರೆ) ಬೆಂಡಾಗಿ ತೇಲದ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಗುಂಡುಕಲ್ಲಿನಂತೆ ಹೋಲಿಕೆಯಿಂದ ಗಟ್ಟಿ ಎನ್ನುತ್ತಾರೆ.

ಈ ಗಂಡಿನ ಹೆಚ್ಚುಗಾರಿಕೆ ಎಂಬ ತಿಳುವಳಿಕೆ ಮುಂದುವರಿದ ಜನಾಂಗಗಳಲ್ಲಿಯೂ ಕಾಣದೆ ಇಲ್ಲ. ಇದು ಸಹಸ್ರ ಸಹಸ್ರ ವರ್ಷಗಳಿಂದ ನಂಬಿ ನಡೆದುದರ ಫಲ. ಒಮ್ಮೆಲೇ ಹೋಗದು.

ಭವಭೂತಿ ಮಹಾಕವಿ, "ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ ॥" ಗುಣಗಳೇ ಪೂಜೆಗೆ ಅರ್ಹಸ್ಥಳ, (ಹೆಣ್ಣು ಗಂಡೆಂಬ) ಲಿಂಗ ತಾರತಮ್ಯವಲ್ಲ, ವಯಸ್ಸಲ್ಲ" ಎಂದು ಘೋಷಿಸಿ ಸರಿಯಾದ ದೃಷ್ಟಿಯನ್ನು ಹಿಂದೆಯೇ ಪ್ರಕಟಿಸಿದ್ದನು. ಆದರೆ, ಸಾಮಾಜಿಕ ಪರಂಪರೆಯ ಪ್ರಭಾವ ಬಲವತ್ತರವಾದುದು. ಇಂದಿರಾ ಗಾಂಧಿಯವರಂಥ ಅಸಾಧಾರಣ ಯೋಗ್ಯತೆಯ ಮುಂದಾಳು (ಒಳಗೊಳಗೆ ಎಷ್ಟೇ ಅಭಾವವಿದ್ದರೂ) ಒಮ್ಮೆ ಹೀಗೆ ಹೇಳಿದರು. "... ಪಕ್ಷದವರು ನನಗೆ, ಕೇವಲ ಒಬ್ಬ ಹೆಣ್ಣಿಗೆ, (a mere woman) ಹೆದರುತ್ತಾರೆ." ಮನೆಯಲ್ಲಿ ಅಚ್ಚೆಯಿಂದ ಬೆಳೆಸಿದರೂ ಸುತ್ತಲಿನ ವಾತಾವರಣದ ಫಲವಾದ ಈ ಕೀಳರಿಮೆ ಸುಲಭವಾಗಿ ಹೋಗತಕ್ಕದ್ದಲ್ಲ.

ಮಹಾದೇವಿಯಕ್ಕನು ಹೀಗೆ ಬರೆದುದರ ಹಿನ್ನೆಲೆಯೂ ಅಂತೆಯೇ. "ನಾಮದ ಹೆಂಗಸೆಂಬ ಹೆಸರಾದರೇನು? ಭಾವಿಸಲು ಗಂಡುರೂಪು". ಶ್ರೀಮತಿ ಗಾಂಧಿಯವರ ಇದೇ ಅರ್ಥದ ಮಾತನ್ನು ಹಿಂದೆ ಹೇಳಿದ್ದುಂಟು.

ಹೆಣ್ಣುಮಕ್ಕಳು ಬಾರೆಕಾಯಿ (ತೆಂಗಿನ ಕಾಯಿ ಒಳಗೆ ಕೊಬ್ಬರಿಗಿಂತ ಬದಲು ಹಿಂಡದ ಅರಳಿಯಂತೆ ಬಾರು ಬರುತ್ತದೆ) ತಿನ್ನಬಾರದು. ಹೊಕ್ಕಳ ಬಾರು (ಅಪ್ಪ ಮಕ್ಕಳು ಹುಟ್ಟುವರೆಂಬುದೇ ಕಾರಣವಿರಬೇಕು.

ಹೆಣ್ಣುಮಕ್ಕಳು ಕುಂಕುಮವನ್ನು ಎರಡು ಹುಬ್ಬುಗಳ ನಡುವೆ ಹಚ್ಚಿಕೊಳ್ಳ ಬಾರದು. ಹಾಗೆ ಹಚ್ಚಿಕೊಂಡರೆ ಗಂಡನ ಆಯುಷ್ಯ ಕಡಿಮೆ ಎಂದು ಹೇಳುತ್ತಾರೆ ಅವರ ಬಳಿ ಬಡಿದರ ಸೋದರವಾದಾಗ ಅನಿಷ್ಟವಂತೆ.

ಹೆಣ್ಣುಮಕ್ಕಳು ಕೆಂಪುದಾಸಾಳ ಹೂವನ್ನು ಮುಡಿಯಬಾರದು. (ಇದಾ ಕಾರಣ ಹೀಗಿರಬಹುದೇನೋ! ಹಿಂದೆ ಕೊಲೆಯ ಆರೋಪದಿಂದ ಗಲ್ಲಿಗೆ ಹಾಕಲು ಕೊಂಡೊಯ್ಯು ವಾಗ ಆ ದಾಸಾಳ ಹೂಮಾಲೆ ಹಾಕುತ್ತಿದ್ದರು.) ಕೆಂಪುದಾಸಾಳ ಹೂ ಮುಡಿದ ಹೆಣ್ಣುಮಕ್ಕಳನ್ನು ಗಡಿ ದಾಟಿಸಿ (ದೂರ) ಮದುವೆ ಮಾಡಿ ಕೊಡುತ್ತಾರೆ ಎನ್ನುತ್ತಾರೆ ಜೋಡು (ತುದಿಗೆ ಬಾಗಿಟು ಬಂದು ಅಪ್ಪಿದ) ಬಾಳೆಕಾಯಿ ತಿನ್ನಬಾರದು. ತಿಂದ ಹಾಗೆಯೇ ಬಾಗಲು ಬರುತ್ತದೆ ಎನ್ನುತ್ತಾರೆ.

ರಾತ್ರಿ ಕೂದಲು ಬಿಚ್ಚಿಕೊಂಡು ಮಲಗಿದರೆ ಮಂಡೋದರಿ ಬರುತ್ತಾಳೆ ಎಂದು ಹೇಳಿ ಅದನ್ನು ನಿಷೇಧಿಸುತ್ತಾರೆ

ಮಂಗಳವಾರ ಮಧ್ಯಾಹ್ನದಲ್ಲಿ ಚಿನ್ನದ ಪಾತ್ರೆ ತೊಳೆಯಬಾರದು ಎಂದೆನ್ನುತ್ತಿ ದ್ದರು. ಅನ್ನ ಲಕ್ಷ್ಮೀದೇವಿ ಎಂಬ ಕಾರಣದಿಂದ ಹೀಗೆ ಹೇಳಿದ್ದಿರಬೇಕು. ಮಂಗಳವಾ ಮಗಳನ್ನು ಕಳಿಸಬಾರದು; ಶುಕ್ರವಾರ ಸೊಸೆಯನ್ನು ಕಳಿಸಬಾರದು ಎಂದೆನ್ನುತ್ತಾ

ಒಂದು ಕಿವಿಯನ್ನು ಮಾತ್ರ ಮುಚ್ಚಿಕೊಳ್ಳಬಾರದು. ಹಾಗೆ ಮುಚ್ಚಿಕೊಂಡ ಕಿವಿಯು ಅಥರಾ ಬಿದ್ದು ಹೋಗುತ್ತದೆ. ಮತ್ತೊಂದು ಕಿವಿಯನ್ನು ಮುಚ್ಚಿಕೊಳ್ಳಬೇಕ ಇದು ಯಾವುದೋ ಸಂದರ್ಭದಲ್ಲಿ ಅದ ಘಟನೆಯನ್ನು ಎಲ್ಲ ಸಂದರ್ಭಗಳಿಗೂ ಹೀಗೆ ಎಂದು ಅನ್ವಯಿಸಿದುದರ ಫಲ.

ಶಾಲೆಗೆ ಹೋಗುವ ಮಕ್ಕಳಲ್ಲಿ ಅನೇಕರದು ಮೂಢನಂಬಿಕೆಗಳು ಪ್ರಚಾರದಲ್ಲಿ ಬಿಟ್ಟಿನ ತಲೆ ಅಥವಾ ತ "ಹೆಣ್ಣುಮಕ್ಕಳ) ತಲೆಗೆ ತಾಗಿದರೆ. "ಹಣ್ಣಿದ್ದರೆ, ನ್ಯಾಯ ಪೂರ್ವಕವಾಗಿ ತಲೆ ತಲೆ ತಾಗಿಸಿಕೊಳ್ಳಬೇಕು. ಇಲ್ಲದಿದ್ದರೆ, ತಲೆಗೆ ಕೊಂಬು ಬ ರುತ್ತದೆ ಎಂದು ಒಬ್ಬ ಹುಡುಗ ಹೇಳಿದ. "ಹಣ್ಣು ವಾದಿಯಲ್ಲಿ ಬಿದ್ದು ಸಾಯುವ ಎಂದನು.

ಹೆಣ್ಣುಮಕ್ಕಳ ಮೈಮೇಲೆ ಬಹಳ ಎಳ್ಳು (ಎಳ್ಳಿನಷ್ಟು ಆಕಾರದ ಕಪ್ಪು ಚಿಹ್ನೆಗಳು) ಇದ್ದರೆ ಬಹಳ ಚಿನ್ನದ ಒಡವೆ ಹಾಕಿಕೊಳ್ಳುತ್ತಾರೆ ಎಂದು ಹುಡುಗಿಯರಲ್ಲಿ ನಂಬಿಕೆ ಇದೆ. ಹಾಗೆಯೇ ಹೆಂಗಸರಿಗೆ ಮಚ್ಚೆ (ಮತ್ತೆ) ಎಡಗಡೆ ಇದ್ದರೆ ಒಳ್ಳೆಯದು; ಗಂಡಸ ರಿಗೆ ಬಲಗಡೆ ಇದ್ದರೆ ಒಳ್ಳೆಯದು ಎಂದೂ ಹೇಳುತ್ತಾರೆ. ಹಣೆ ಅಗಲವಾಗಿ ಎತ್ತರ ವಾಗಿದ್ದರೆ ಬುದ್ಧಿವಂತರಾಗಿರುತ್ತಾರೆ ಎಂಬ ನಂಬಿಕೆ ಇದೆ. ಪಾಶ್ಚಿಮಾತ್ಯರಲ್ಲೂ ಈ ನಂಬಿಕೆಯಿದೆ.

ಗಂಡುಮಕ್ಕಳಲ್ಲಿ ಅಂಗೈ ಮಡಚಿಕೊಂಡು ಕಿರಿಬೆರಳಿನ ಕೆಳಗಿನ ಮಡಿಕೆಗಳನ್ನು ಲೆಕ್ಕ ಮಾಡಿ ಇಷ್ಟು ಹೆಂಡಂದಿರೂ, ಮಕ್ಕಳೂ ಎಂದೆನ್ನುವ ಗೀಳು ಹೆಚ್ಚು.

ಎರಡು ಹುಬ್ಬುಗಳು ಕೂಡಿದರೆ ಭಾಗ್ಯವಂತೆ ಇದು ಕ್ವಚಿತ್ತಾಗಿ ಇರುವುದೇ ಈ ನಂಬಿಕೆಗೆ ಕಾರಣ. ಹೆಂಗಸರಿಗೆ (ಹುಡುಗಿಯರಿಗೂ) ಎಡಗಾಲು ಜಜ್ಜಿ (ಜಪ್ಪಿ)ದರೆ ಒಳ್ಳೆಯದು. ಒಳ್ಳೆಯ ಎಡೆ (ಊಟದ ಬಾಳೆ) ಹಾಕಿ ಇಡುತ್ತಾರೆ ! ಚನ್ನಾಗಿ ಊಟ ಮಾಡಿದರಾಯಿತು. ಎಡಭುಜ, ಎಡಗಣ್ಣು ಹಾರಿದರೆ ಒಳ್ಳೆಯದು. ಗಂಡಸರಿಗೆ ಬಲಗಣ್ಣು ಬಲಭುಜ ಹಾರಬೇಕು. ಅಂಗಾಲು ತುರಿಸಿದರೆ ಎಲ್ಲೋ ಹೋಗುವ ಬಯಕೆಯ ಸೂಚನೆ.

ಹುಡುಗರಲ್ಲಿರುವ ಇನ್ನೊಂದು ಹೆಚ್ಚು ರೂಢಿಯಲ್ಲಿರುವ ನಂಬಿಕೆ ನರಿಗೆ ಸಂಬಂಧಪಟ್ಟಿದ್ದು. ನರಿ ತೀರ ಪುಕ್ಕಪ್ರಾಣಿ. ಅದು ಯಾರಾದರೂ ಕಂಡರೆ ಸಾಕು: ಮೈ ತಿರುಗಿಕೊಂಡು ಓಟ ಕೀಳುತ್ತದೆ. ನರಿಯ ಮೋರೆ ನೋಡಿ. ಅದರ ಹಿಂಭಾಗ ನೋಡದಿರುವುದು ತುಂಬಾ ವಿರಳ. ಆದರಿಂದ ನರಿ ಮೋರೆ ನೋಡಿದರೆ (ಆಮೇಲೆ ಹಿಂಭಾಗ ನೋಡಿದರೆ ಆ ಭಾಗ್ಯ ಲಭಿಸದು) ತುಂಬಾ ಭಾಗ್ಯ ಎನ್ನುತ್ತಾರೆ.

ಮುದಿ ನರಿ (ಬಳ್ಳು) ಕೂಗುವ ಶಬ್ದ ಒಡಕಲು ದನಿ ವಿಕಾರರೂಪೀ ಸ್ವರ ಸಹಜವಾಗಿ ಯಾರಿಗಾದರೂ ಆ ದನಿ ಕೇಳಿದರೆ ಬೇಸರವಾಗುತ್ತದೆ. ಕುತ್ತಿಗೆಯನ್ನು ಯಾರೊ ಹಿಸುಕುತ್ತಿ ಹಾಗೆ ಕೂಗುವದೊ ಎಂದು ಭಾವನೆ ಆ ಸ್ವರ ಕೇಳಿ ಉಂಟಾಗು ತ್ತದೆ. ಬಳ್ಳು ಕೂಗಿದರೆ. ಹೆಚ್ಚು ಸೀಕಿನಲ್ಲಿದ್ದವರಿಗೆ ಮರಣ ಸೂಚನೆ. ಸಾಯು ವವರು ಈ ರೀತಿ ನಂಬಿಕೆಯಿದ್ದವರಾದರೆ, ಈ ಅಪಸ್ವರ ಕೇಳಿ. ತುಂಬಾ ಗಾಬರಿಯಾಗಿ ಬೇಗನೆ ಮರಣಹೊಂದುವ ಸಾಧ್ಯತೆಯಿದೆ. ಮತ್ತು ಬಳ್ಳು ಕೂಗಿದ ಹಲವು ಸಂದರ್ಭ ಗಳಲ್ಲಿ ರೋಗಿಗಳು ಮರಣ ಹೊಂದುವದೂ ಕಾಕತಾಳೀಯವಾಗಿ ಘಟಿಸುತ್ತದೆ. ನಂಬಿಕೆ ಗಟ್ಟಿಯಾಗಲು ಹೆಚ್ಚು ಅವಕಾಶ. ಇದಕ್ಕೆ ಸಿದ್ಧವೃದ್ಧನೊಬ್ಬನು ಅಂತೆ ಕಂತೆಯ ವಿವರಣೆ ಹೇಳಿದನು. "ಯಾರಾದರೂ ಸಾಯುವ ಸಂದರ್ಭದಲ್ಲಿ ಬರುವ ಯಮ ದೂತರು ಬಳ್ಳುವಿನ ಬಾಲವನ್ನು ಮೆಟ್ಟಿ ಒಯ್ಯುತ್ತಾರೆ. ಆ ನೋವಿನಲ್ಲಿ ಕೆಟ್ಟ

ಸ್ವರದಲ್ಲಿ ಅದು ಕೂಗುತ್ತದೆ." ಇದಕ್ಕೆ ಪರಿಹಾರವೆಂದರೆ, ನಾಯಿಗಳು ಕೂಗಿ ಉತ್ತರ ಕೊಡುವದು, ಬಳ್ಳು ವಿನ ಸ್ವರ ಕೇಳಿದ ನಾಯಿಗಳು ಸಾಮಾನ್ಯವಾಗಿ ಕೂಗುವದುಂಟು. ಬಳ್ಳು ಕೂಗಿದಾಗ ನಾಯಿಯು ಸ್ವರ ಕೇಳಿದ ಹೊರತು ನಮಗೆ (ಚಿಕ್ಕವರಾಗಿದ್ದಾಗ) ಸಮಾಧಾನವೇ ಇರುತ್ತಿರಲಿಲ್ಲ. ಬಳ್ಳು ಕೂಗುವಾಗ ಅದಕ್ಕೆ ತಲೆಯ ಮೇಲೆ ಎರಡು ಚಿನ್ನದ ಕೋಡುಗಳು ಬರುತ್ತವೆ ಎಂದೂ ನಂಬಿಕೆಯಿದೆ. ಶ್ರೇಷ್ಠ ಸರ್ಪದ ತಲೆಯ ಮೇಲೆ ಇರುವ ಮಾಣಿಕ್ಯದಂತೆ ಈ ಚಿನ್ನದ ಕೋಡು ಮೊಲದ ಕೋಡಿನಂತೆ ಅದೃಶ್ಯವಾಗಿರುವದೇ ರೂಢಿ. ನಾಯಿ ವಿಕಾರವಾಗಿ ಊಳಿದರೂ ರೋಗಿಗಳು ಸಾಯುತ್ತಾರೆಂದು ಸತ್ತ ಉದಾಹರಣೆ ಹೇಳುತ್ತಾರೆ.

ಒಂದು ಹಕ್ಕಿ ಕೂಗುವ ಸ್ವರ "ಕೂಸು ಸತ್ತು ಹೋತು ಎಂದಂತೆಯೇ ಕೇಳುತ್ತದೆ. ರಾತ್ರಿ ಕೂಗುವ ಅಭ್ಯಾಸ ಈ ಹಕ್ಕಿಗೆ. ಇದು ಯಾವುದೋ ಕಥೆಗೆ ಕಾರಣವಾಗಿರುವಂತಿದೆ. ಜನರ ನಂಬಿಕೆಯಲ್ಲಿ ಈ ಹಕ್ಕಿ "ಹೋರಿ ಸತ್ತು ಹೋತು" ಎಂದು ನಿಜವಾಗಿ ಹೇಳುತ್ತದೆ. ನಮಗೆ ಮೇಲೆ ಬರೆದಂತೆ ಕೂಸು (ಹೆಣ್ಣು ಮಗು) ಎಂದು ಕೇಳುತ್ತದೆಯಂತೆ. ಅಂತೂ ಈ ಹಕ್ಕಿ ಉತ್ತರ ಕನ್ನಡದ ದೇಶಿಮಾತನ್ನು (ಅರ್ಥ ತಿಳಿಯದೆ) ಹೇಗೋ ಹೇಳಲು ಕಲಿತುಕೊಂಡಿದೆ. ಇದರ ಕುರಿತು ಏನಾದರೂ ಮೂಢನಂಬಿಕೆ (ಸೀಕಾದ ಹೆಣ್ಣು ಮಗುವಿನ ಸಾವಿನ ನಂಬಿಕೆ) ಜನರಲ್ಲಿ ಇದೆಯೋ ಎಂಬುದು ತಿಳಿದು ಬಂದಿಲ್ಲ. "ಮೀನ ಸತ್ತು ಹೋತು" ಎಂದು ಕೂಗುತ್ತದೆ ಎಂದೂ ಹೇಳಿಕೆಯುಂಟು. ಅದು ಹೀಗೆ ಕೂಗಿದರೆ ಮೀನಗಾರರ ಬಲೆಯಲ್ಲಿ ಬಹಳ ಮೀನಗಳು ಬೀಳುವವಂತೆ.

ಘಟ್ಟದ ಮೇಲೆ ಸುಟುರ್ ಹಕ್ಕಿ ಸುಟುರ್ (ಸುಟ್ಟರು) ಎಂದು ಕೂಗುತ್ತದೆಯಂತೆ. ಯಾರೋ ಸಾಯುತ್ತಾರೆ, ಸುಡುತ್ತಾರೆ ಎಂದು ಇದರ ಸೂಚನೆ ಎಂದು ನಂಬುತ್ತಾರೆ.

ಕಾಗೆ ಕೂಗುವದು ಕರ್ಕಶ ಸ್ವರದಲ್ಲಿ. ಬಹಳ ಹೊತ್ತು ಕೂಗಿದರೆ ಸಾವಿನ ವರ್ತಮಾನ ಬರುತ್ತದೆ ಎಂದು ನಂಬಿಗೆಯಿದೆ. ನಾನು ಚಿಕ್ಕವನಿದ್ದಾಗ ನಮ್ಮ ಸೋದರಮಾವನವರು ದುರ್ದೈವವಶಾತ್ (ಇದೂ ಒಂದು ಮೂಢನಂಬಿಕೆ. ನಾವು ಕಲಿತವರೂ ದುರ್ದೈವ; ದುರ್ದೈವ ಇತ್ಯಾದಿ ಶಬ್ದಗಳನ್ನು ನಂಬಿ, ನಂಬದೆ ಸಹ ಬಳಸುತ್ತೇವೆ.) ಮರಣ ಹೊಂದಿದ ಸಂದರ್ಭದ ಸುದ್ದಿ ಬರುವ ಮುಂಚೆ ಕಾಗೆ ವಿಪರೀತ ಕರ್ಕಶ ಸ್ವರದಲ್ಲಿ ಒಂದೇ ಸಮನೆ ಕೂಗಿತ್ತು. ನನ್ನ ಪೂಜ್ಯ ಮಾತೋಶ್ರೀಯವರ ಮನಸ್ಸು ತುಂಬಾ ಖಿನ್ನವಾಗಿ "ಕಾಗೆ ಈ ಪ್ರಕಾರ ಕರಗುಡುತ್ತದೆ; ಇನ್ನು ಎಂಥ ಕೆಟ್ಟ ಸುದ್ದಿ ಕೇಳಬೇಕೊ ?" ಎನ್ನುತ್ತಿರುವಾಗಲೇ ಆ ದಾರುಣ ವರ್ತಮಾನ ಬಂತು.

ನನಗೂ ಮನಸ್ಸು ಕದಡಿ. ಕಾಗೆಯನ್ನು ಓಡಿಸಿದರೂ ಪುನಃ ಪುನಃ ಬಾವಿ ಕಟ್ಟೆಯ, ಬಚ್ಚಲ ಮಾಡಿನ ಮೇಲೆ ಬಂದು ಕೂಗುತ್ತಲೇ ಇತ್ತು.

ಇಂಥ ಸಂದರ್ಭಗಳು ಮೂಢ ನಂಬಿಕೆ ಬೆಳೆಯಲು ಕಾರಣವಾಗುತ್ತವೆ. ಕಾಗೆ ಕೂಗುವಾಗ ಒಂದು ತರದಲ್ಲಿ ಕ್ರು ಕ್ರು ಕ್ರು ಕ್ರು ಎಂದು ಶಬ್ದಮಾಡಿದರೆ, ಬಾವಿಕಟ್ಟೆಯ ಅಥವಾ ಮರದ ಕೊಂಬೆಯ ಮೇಲೆ ತನ್ನ ಚುಂಚನ್ನು ತಲೆ ಆಚೆ ಒಮ್ಮೆ ಈಚೆ ಒಮ್ಮೆ ತಿರುಗಿಸಿ. ಚುಂಚ ತಿಕ್ಕಿದರೆ, ಕಾಗ ಅಕ್ಕಿ ತೊಳೆಯುತ್ತದೆ. ಯಾರಾದರೂ ಮನೆಗೆ ಊಟಕ್ಕೆ ಬರುತ್ತಾರೆ. ಅನೇಕ ಸಲ ಯಾರಾದರೂ ಬರುವುದೂ ಹೌದು. ಆದರೆ. ಹಾಗೆ ಕೂಗಿದಾಗ, ಯಾರೂ ಬಾರದಿದ್ದರೆ ಜನರು ಅದನ್ನು ಲಕ್ಷ್ಯದಲ್ಲಿಡುವುದಿಲ್ಲ.

ತೆಂಗಿನ ಹರಟೆ (ಗರಟೆ) ಒಲೆಯಲ್ಲಿ ಉರಿವಾಗ ಚೊರ್ ಚೊರ್ ಎಂದು ಶಬ್ದವಾಗುವುದು ಸಹಜ. ಆದರೆ. ಅದನ್ನು ಒಲೆಯಲ್ಲಿ ಹಾಕದಿದ್ದಾಗ ಸಹ ಒಮ್ಮೊಮ್ಮೆ ಸೌದೆ ಉರಿವಾಗ ಹಾಗೆ ಶಬ್ದವಾಗುತ್ತದೆ. ಅಂಥ ಸಂದರ್ಭದಲ್ಲಿ "ಒಲೆ ಚೊರ್ ಗುಡುತ್ತದೆ ನೆಂಟರು ಬರುತ್ತಾರೆ" ಎಂದು ಹಿರಿಯರು ಹೇಳುತ್ತಿದ್ದುದನ್ನು ಕೇಳಿದ ನಮ್ಮ ಮನೆಯ ಹೆಣ್ಣುಮಕ್ಕಳೂ ತಪ್ಪದೆ ಈ ಮಾತು ಹೇಳುತ್ತಾರೆ. ಬೆಕ್ಕು ತನ್ನ ತುದಿಗಾಲಿನಿಂದ ಮೋರೆ ತಿಕ್ಕಿಕೊಂಡರೂ, ನೆಂಟರು ಬರುವರಂತೆ. ಬೆಕ್ಕು ಇಲ್ಲಿ ಬರುವವರು ಇಲ್ಲಿ ಉಣ್ಣುವನೆಂದು ಅಭಿನಯದಿಂದ ಮೊದಲೇ ಸೂಚನೆ ಕೊಟ್ಟ ಹಾಗೆ ಇದು.

ಜೋಡು ಬಾಳೆಹಣ್ಣು ತಿನ್ನುವ ಹುಡುಗಿಗೆ ಅದನ್ನು ತಿಂದರೆ ಜೋಡು(ಅವಳಿ) ಮಕ್ಕಳು ಹುಟ್ಟುತ್ತಾರೆ ಎಂದು ಹಿರಿಯರು ಹೇಳುತ್ತಾರೆ. ಚಕ್ಕಲಿ. ಪುರಿ. ವಡೆ ಇತ್ಯಾದಿ ಕರಿವಾಗ, ಒಲೆಯ ಬಳಿ ಹುಡುಗರು ಬಂದು. ಆಸ್ರು (ನೀರಡಿಕೆ) ಆಗುತ್ತದೆ ಎಂದರೆ ಒಲೆ ಬಂಡಿ ಹೆಚ್ಚು ಎಣ್ಣೆಯನ್ನು ಕುಡಿಯುತ್ತದೆ ಎನ್ನುತ್ತಾರೆ. ಬಂಡಿಗೂ ಹೆಚ್ಚು ತೃಷ್ಣೆ ಆಗುವದಂತೆ ! ಒಲೆಯ ಹತ್ತಿರ ಅವನ್ನು ಸುಡಲು ಕೂತವರೂ ಬೆಂಕಿ ಸೆಕೆಯಲ್ಲಿ ನೀರಡಿಕೆಯಾಗಿ ಹೆಚ್ಚು ನೀರನ್ನು ಕುಡಿದರೂ ಅದೇ ಗತಿ ! ಆ ಬಂಡಿಯ ಹೊಟ್ಟೆಯಲ್ಲಿ ಭೂತವಿರಬೇಕು.

ಒಂದು ಹಾಲಕ್ಕಿ ಕುಟುಂಬದಲ್ಲಿ ಮಕ್ಕಳು ದೊಡ್ಡವರು ಸೇರಿ ಹತ್ತು ಹನ್ನೆರಡು ಜನರಿದ್ದಾರೆ. ಒಂದು ಮನೆಗೆ ಅಕ್ಕಿ ಎಂಟೇ ದಿನದಲ್ಲಿ ಉಂಡು ಖರ್ಚಾಗುತ್ತದೆ ! ದೆವ್ವದ ಕಾಟ ಎಂದು ಅಲ್ಲಿಯ ಹಾಲಕ್ಕಿ ಹೆಂಗಸು ಭಟ್ಟರ ಹತ್ತಿರ ಮಾಯಮಂತ್ರ ಮಾಡಿ[illegible] ಕೊಂಡು ಹೋಗಿ ತೀರ್ಥವನ್ನು ಪ್ರೋಕ್ಷಿಸಿ. ಹೊಟ್ಟೆ (ದೆವ್ವದ) ಕಾಟಕ್ಕೆ ಚಿಕಿತ್ಸೆಗೆ ಮುಕ್ತಿ [illegible]ದ್ದಳು.

ರಾತ್ರಿಯಲ್ಲಿ. ಬಜೆ (ವಚಾ. ವನಸ್ಪತಿ) ಎಂದು ಹೇಳಬಾರದು: ಅದರ ಔಷಧ ಗುಣ ಕಡಿಮೆಯಾಗುತ್ತದೆ ಎಂದು ನನ್ನ ಪ್ರಾಜ್ಞ ದೊಡ್ಡಪ್ಪನವರು ಹಾಗೆ ಹೇಳಬಾರದೆಂದು ನನಗೆ ಬೋಧಿಸಿದ್ದುದು ನೆನಪುಂಟು.

ಕೆಲವರು ನಾಗರಹಾವಿಗೆ ಹಿರಿಹಾವು, ಹಿರಿಯುವ, ಹಿರಿಯಪ್ಪ ಎನ್ನುತ್ತಾರೆ. ಹಾವು ಎನ್ನುವದು ಅವರಿಗೆ ಏನು ಹೆದರಿಕೆಯೋ ಹಾವು ಬಂದು ಬಿಡುತ್ತವೆ ಎಂದು ಕಾರಣವಿರಬಹುದು.

ರಾತ್ರಿ ಬಾವಲಿಕ್ಕಿ (ಬಾವುಲಿ) ಎಂದರೆ ಬಾವುಲಿಗೆ ಆಹಾರವೇ ಸಿಗುವದಿಲ್ಲ ಎಂದೂ ಹೇಳುತ್ತಾರೆ. ಹಿಡಿ (ಕಸಬರಿಗೆ)ಯಿಂದ ನಾಯಿಗೆ ಹೊಡೆಯಬಾರದು; ಹೊಡೆದರೆ ನಾಯಿಗೆ ಕೆಮ್ಮು ಬರುತ್ತವೆ ಎನ್ನಲು ಯಾವುದೋ ಸಂಘರ್ಷದಲ್ಲಿ ನಾಯಿ ಕೆಮ್ಮಿದ್ದು ಕಾರಣವಾಗಿರಬೇಕು.

ಯಾರಾದರೂ ಮನೆಗೆ ಬರುವ ಸಂದರ್ಭದಲ್ಲಿ ನೆಲವನ್ನು (ಕಸ) ಗುಡಿಸಬಾರದು. ಕಸಬರಿಗೆ ಹಿಡಿದು ಅವರಿಗೆ ಎದುರಾಗಬಾರದು. ಇದು ಅಪಲಕ್ಷಣವೂ ಹೌದು: ಬಂದವರಿಗೆ ಅಪಶಕುನ. ಅವಮರ್ಯಾದೆ ಎಂದೂ ತಿಳಿಯುತ್ತಾರೆ.

ಯಾರಾದರೂ ಬತ್ತವನ್ನು ಹೊದಲಿಗಾಗಿ (ಅರಳು ಮಾಡಲು) ಹುರಿವಾಗ. ಅರಳು (ಹೊದಲು) ಚೆನ್ನಾಗಿ ಆಗದಿದ್ದರೆ, ಅಂಥವರು ಬರೇ ಹೊಟ್ಟೆಕಿಚ್ಚಿನವರು ಎಂದು ನಂಬುತ್ತಾರೆ. ಅರಳು ಹೆಚ್ಚಾಗುವದು ಅವರ ಧಾರಾಳತನದ (ಔದಾರ್ಯದ) ಪ್ರತೀಕವಾಗುತ್ತದೆ.

ಖಾಲಿ ಕರಟೆ (ಗರಟೆ)ಯನ್ನು ಕೆರೆಯಲಾಗದು, ತೆಂಗಿನಕಾಯಿ ಕಡಿಯನ್ನು ಕೆರೆ (ಹೆರೆ)ವಾಗ ಸ್ವಲ್ಪ ಕೊಬರಿಯ ಭಾಗ ಉಳಿದಿದ್ದರೆ, ಸೌಟಿನಲ್ಲಿ ಎತ್ತಿ ತೆಗೆದುಕೊಳ್ಳುತ್ತಾರೆ. ಬಹಳ ಜಿಪುಣನಿಗೆ "ಗರಟೆಕೆರೆವವ" ಎಂದು ತಿರಸ್ಕಾರದಿಂದ ಹೇಳುತ್ತಾರೆ. ಕಡೆದು ಬೆಣ್ಣೆ ತೆಗೆದ ಮಜ್ಜಿಗೆ ಕಡೆದರೆ ಬೆಣ್ಣೆ ಬರುವದಿಲ್ಲ. ಗರಟೆ ಕೆರೆದರೆ ಸಹ ಪ್ರಯೋಜನವಿಲ್ಲ. ಇದು ಭಾಗ್ಯ ಬರಿದಾಗುವವರ ಸೂಚಕವಾಗುತ್ತದೆ ಎಂದು ತಿಳಿಯುತ್ತಾರೆ.

ಮೂಗಿನಲ್ಲಿ ಹೆಚ್ಚು ಹಳಗು (ಜಿಪರು)ವವರಿಗೆ ಸಿಟ್ಟು ಹೆಚ್ಚು ಎನ್ನುತ್ತಾರೆ. ಸಿಟ್ಟಿನ ಬೆಂಕಿಯ ಪರಿಣಾಮ ಎಂದು ಭಾವನೆ.

ಸಿದ್ದೆ (ಧಾನ್ಯ ಅಳೆವ ಸೇರಿನ ಅಳತೆಯಂತೆ ಸಣ್ಣ ಅಳತೆಪಾತ್ರೆ)ಯನ್ನು ತುಳಿಯಬಾರದು. ಬರಿ ಕೊಳಗವನ್ನು ಇಡಬಾರದು. ಧಾನ್ಯಕ್ಕೆ ಜನರು ದೈವತ್ವವನ್ನು ಕಲ್ಪಿಸುವರು. ಸಮೃದ್ಧಿಗೆ ಕೊರತೆಯಾಗಬಾರದೆಂಬುದು ಇಲ್ಲಿ ಕಾರಣಗಳು. ಇದ್ದಲಿಯಿಂದ ಸುಣ್ಣದಿಂದ ಗೋಡೆಯ ಮೇಲೆ ಬರೆದರೆ ಸಾಲವಾಗುತ್ತದೆ. ಗಲೀಜಾಗಬಾರದೆಂಬುದು ಸಹಜ ಕಾರಣ.

ಬಿದಿರ ಕಳಲೆ ರುಚಿಕರ. ಮೇಲೋಗರದ ವಸ್ತು. ಅದನ್ನು ತಿನ್ನಬೇಕೆಂಬುದೇನೂ ತಪ್ಪಲ್ಲ. ಆದರೆ, ಅದನ್ನು ತಿಂದರೆ, ಯಾವಾಗಲಾದರೂ ಬೆಕ್ಕಿನ ಎಂಜಲು ತಿಂದ

ದೋಷ ಹೋಗುತ್ತದೆಯಂತೆ. ಕಳಲೆಯನ್ನು ಹೆಣ್ಣು ಮಕ್ಕಳು ಮುರಿಯಬಾರದಂತೆ ಅಂಥ ಸಂದರ್ಭದಲ್ಲಿ ಏನು ಅಪಾಯವಾಗಿತ್ತೋ ಏನೋ.

ಜನಪದ ವೈದ್ಯದಲ್ಲಿ ಉಪಯುಕ್ತ ಜ್ಞಾನವುಂಟು. ಆದರೆ, ಇದರಲ್ಲಿ ಅನೇಕ ಮೂಢ ನಂಬಿಕೆಗಳೂ ಸೇರಿವೆ. ಗ್ರಹಣ ಕಾಲದಲ್ಲಿ ಬಸುರಿಯರು ಮೆಟ್ಟುಕತ್ತಿ (ಕಾಯಿ ಪಲ್ಲೆ ಕೊಚ್ಚುವ ಸಾಧನ, ಹೋಳು ಮಾಡುವದು) ಮೇಲೆ ಕೂತರೆ ಸಿರಬಾಯಿ (ಸೀಳು ಬಾಯಿ) ಮಕ್ಕಳು ಹುಟ್ಟುತ್ತಾರೆ ಎಂಬುದು ಅಂಥ ನಂಬಿಕೆ. ಕಣ್ಣಿಗೆ ಚಮುಕಲು (ರೆಪ್ಪೆಗುರು) ಆದರೆ, ಉಪ್ಪನ್ನು ಬಟ್ಟೆಯಲ್ಲಿ ಗಂಟು ಕಟ್ಟಿ ಸಮುದ್ರದಲ್ಲಿ ಒಗೆದರೆ ಗುಣವಾಗುವದೆಂಬುದೂ ಹಾಗೆಯೇ.

ಆದರೆ ಗ್ರಹಣ ಕಾಲದಲ್ಲಿ ಬರಿಗಣ್ಣಿನಿಂದ ಸೂರ್ಯನನ್ನು ನೋಡಬಾರದೆಂಬುದಕ್ಕೆ ಸಮಂಜಸ ಕಾರಣವಿದೆ. ಹೀಗೆ ಹೇಳಿದರೂ ಕೇಳದ ಉದ್ಧಟ ಹುಡುಗನು "ಏನಾಗುವದೋ ನೋಡುತ್ತೇನೆ" ಎಂದು ನೋಡಿ ಕಣ್ಣು (ದೃಷ್ಟಿ) ಕಳೆದುಕೊಂಡನು.

ಮಕ್ಕಳು ಕರುವಿನ ಬೆನ್ನನ್ನು ಮುಟ್ಟಿದರೆ ಅದು ಸೊರಗುತ್ತದೆ ಎಂಬುದರಲ್ಲಿ ಕರುವಿಗೆ ಒಂದು ತರದ (ಹೀಕರಿಕೆ. ಮೈನಡುಗು) ಆಗಿ. ಅದು ನಿರುತ್ಸಾಹ ಹೊಂದಿ. ಬಡಕಲಾಗುತ್ತದೆ ಎನ್ನುತ್ತಾರೆ.

ಹೆಚ್ಚು ಉಪ್ಪು ತಿನ್ನುವದು ಆರೋಗ್ಯಕ್ಕೆ ಹಾನಿಕರ. ಜನರು ಅದರಿಂದ ಎಲುಬು ಲಡ್ಡಾಗು (ದುರ್ಬಲವಾಗು)ತ್ತದೆ ಎನ್ನುತ್ತಾರೆ.

ಒಂದು ಬದಿ ಸೀಳಿದ ಬಳೆ ಒಡೆದು, ಕೈಗೆ ಗಾಯವಾಗುವ ಸಾಧ್ಯತೆ ಇದೆ. ಆದರೆ, ಅಂಥ ಕಣ್ಣುಕಡಕ ಬಳೆ ಹಾಕಿಕೊಳ್ಳಬಾರದು ಎನ್ನಲು ಸೋದರ ಮಾವನಿಗೆ ಕಷ್ಟ ಎಂಬುದು ಸಯುಕ್ತಿಕವಲ್ಲ. ಕೈಕಾಲು ತೊಳೆಯದೆ ಒಳಗೆ ಬಂದರೆ ಕಣ್ಣು ಕುರುಡಾಗುತ್ತದೆ ಎಂಬುದರಲ್ಲೂ ಕಾರಣ ಸಮಂಜಸವಿದ್ದರೂ ವಿವರಣೆ ಸರಿಯಾಗದು.

ಗಂಡು ಶಿಶುವಿಗೆ ಮೇಲ್ಭಾಗದಲ್ಲಿ ಮೊದಲು ಹಲ್ಲು ಬಂದರೆ ಸೋದರ ಮಾವನಿಗೆ ಯಾಕೆ ಕಷ್ಟವಾಗಬೇಕು ? ಹಾಗೆ ಆದರೆ, ದೋಷ ಪರಿಹಾರಕ್ಕೆ ಚಿಕಿತ್ಸೆ ಅಂದರೆ. ಮೆಟ್ಟಿಲಿನ ಮೇಲೆ ಶಿಶುವನ್ನು ಇಳಿಸಿ. ಮಾವನು ಕಂಚಿನ ಬಟ್ಟಲಿನಲ್ಲಿ ಹಾಲು ಹಾಕಿ ಕೊಡಬೇಕು. ಮತ್ತು ಇದ್ದಿಲು ತೆಗೆದುಕೊಂಡು, ನೆಲಕ್ಕೆ ಗೀಚಿ. ತನಗೆ ರಕ್ಷಣೆ ಮಾಡು ಎಂದು ಅವನು ಹೇಳಬೇಕು. ಯಾವಾಗ ಯಾರಿಗೆ ಕಷ್ಟವಾಗಿತ್ತೋ ಇಂಥ ಸಹಜಕ್ರಿಯೆಯಿಂದ. ಅಂತೂ ಯಾರೋ ಉಪಚಾರವನ್ನು ಶೋಧ ಮಾಡಿದರು.

ತಾರೆಕಲು (ಉಲ್ಕೆ) ಬೀಳುವದನ್ನು ನೋಡಿದರೆ ಹಸಿಮರ ನೋಡಬೇಕು. ಉಲ್ಕಾಪಾತದಿಂದ ಮರಣ ಸೂಚನೆ ಎಂಬ ಕಾರಣವಾಗಿಯೋ ಏನೋ ಆ ಅನಿಷ್ಟ ತಪ್ಪಿಸಲು ಹಸಿ (ಜೀವವುಳ್ಳ) ಮರ ನೋಡಲು ಹೇಳುತ್ತಿರಬೇಕು. ಉಲ್ಕಾಪಾತವಾದರೆ,

ಶ್ರೇಷ್ಠ ಪುರುಷ ಹುಟ್ಟುವನೆಂಬ ನಂಬಿಕೆಯೂ ಇದೆ. ಉಲ್ಕೆ ಪುಣ್ಯಮಾಡಿ ದೇವಲೋಕಕ್ಕೆ ಹೋಗಿದ್ದವರ ಆತ್ಮ ಎಂಬ ಕಾರಣದಿಂದ.

ಪ್ರಯಾಣ ಹೊರಟಾಗ, ಎಲ್ಲಿಗೆ ಹೋಗುವೆ ? ಅಂತ ಕೇಳಬಾರದು. ಕೇಳಿದರೆ, ಪ್ರಯಾಣದ ಕೆಲಸ ಕೈಗೂಡುವದಿಲ್ಲ ಎಂದು ವಿವರಿಸುತ್ತಾರೆ. ಹಾಗೆಯೇ, ಬೆಕ್ಕು ಅಡ್ಡ ಬರಬಾರದು; ಬೆಕ್ಕು ಅಡ್ಡ ಬಂದರೆ, ಹಿಂದಿರುಗಿ ಬಂದು, ಜಗಲಿಯ ಮೇಲೆ ಕೂತು ತಿರುಗಿ ಹೋಗಬೇಕು.

ಒಡೆದ ತೆಂಗಿನ ಕಾಯನ್ನು ಪುನಃ ಕೂಡಿಸಲು ನೋಡಿದ ಮಕ್ಕಳಿಗೆ ಹಾಗೆ ಮಾಡಬಾರದು ಎಂದು ಹಿರಿಯರು ಹೇಳುತ್ತಾರೆ. ಕಾರಣ ಕೇಳಿದರೆ, ಒಳ್ಳೆಯದಲ್ಲ ಎನ್ನುತ್ತಾರೆ. ದೇವರಿಗೆ ಅಥವಾ ಮನೆಯಲ್ಲಿ ಅಡಿಗೆಗೆ ತೆಂಗಿನ ಕಾಯಿ ಒಡೆವಾಗಲೂ ಅದು ಕಮಚಿ (ಬೋರಲಾಗಿ) ಬೀಳಬಾರದು. ಅದು ಅಶುಭಸೂಚಕ, ಎಚ್ಚರಿಕೆಯಿಂದ ಕಾಯಿ ಒಡೆಯಬೇಕು ಎಂದು ಮುಂಜಾಗ್ರತೆ ಹೇಳುತ್ತಾರೆ.

ಮಕ್ಕಳು ಒಮ್ಮೊಮ್ಮೆ ಒಂದೇ ಪಾದರಕ್ಷೆ (ಅದೂ ಹಿರಿಯರದು) ಹಾಕಕೊಂಡು ತಿರುಗುವರು. ಅವರಿಗೆ ಅದೊಂದು ಮೋಜು. ಆಗ, ಒಂದೇ ಪಾದರಕ್ಷೆ ಹಾಕಿಕೊಂಡು ಏಳು ಹೆಜ್ಜೆ ನಡೆಯಬಾರದು, ಅನಿಷ್ಟ ಎಂದು ಹೇಳುತ್ತಾರೆ.

ಇನ್ನೂ ಮಾತು ಬಾರದ ಶಿಶುಗಳಿಗೆ ಬಾಳೆಹಣ್ಣು ಕೊಡಬಾರದು; ಮಾತು ಸರಿಯಾಗಿ ಬರುವದಿಲ್ಲ ಎಂದು ಹುಡುಗರನ್ನು ತಡೆಯುತ್ತಾರೆ. ಇದು ಸರಿಯಾದ ಜ್ಞಾನದಿಂದ ಹೇಳುವುದಲ್ಲ. ಡಾಕ್ಟರರು ಬೀಜತೆಗೆದ ಬಾಳೆಹಣ್ಣನ್ನು ಕೊಟ್ಟರೆ ಒಳ್ಳೆಯದು ಎಂದೇ ಹೇಳುತ್ತಾರೆ (ಬೀಜ ಪಚನಕ್ಕೆ ಜಡ). ಜನಪದದದಲ್ಲಿ ಈ ನಂಬಿಕೆಯಿರಲು ಬಾಳೆಹಣ್ಣು ತಿಂದಾಗ ಒಂದುರೀತಿ ನಾಲಿಗೆ ಜಿಗುಟು ಆದಹಾಗೆ ಆಗಿ, ನಾಲಿಗೆ ದಪ್ಪವಾದಂತೆ ಕಾಣುವುದು ಕಾರಣ. ಮಾತುಬಾರದ ಮಕ್ಕಳಿಗೆ ಕನ್ನಡಿ ತೋರಬಾರದು ಎಂದೂ ಹೇಳುತ್ತಾರೆ.

ಮಕ್ಕಳು ಬಿದ್ದು ಹೆದರಿದರೆ ಮಣ್ಣನ್ನು ತಲೆಯ ಸುತ್ತಲೂ ಸುಳಿದು (ತಿರುಗಿಸಿ) ಚೆಲ್ಲಲು ಹೇಳುತ್ತಾರೆ. ರಣರಣ ಬಿಸಿಲಲ್ಲಿ ಬಂದ ಹುಡುಗಿ ತಾಯ ಹತ್ತಿರ ಹಾದಿಯ ಬಜ್ಜನ್ನು (ಸಣ್ಣ ಕಲ್ಲುಹರಳು) ತನಗೆ ಸುಳಿದು ಹಾಕು ಎಂಬುದು ಒಂದು ತ್ರಿಪದಿಯಲ್ಲಿದೆ.

ಇಬ್ಬರ ಮಧ್ಯೆ ಬೆಂಕಿ ತಕ್ಕೊಂಡು ಹೋದರೆ ಜಗಳವಾಗುತ್ತದೆ ಎನ್ನುತ್ತಾರೆ. (ನಿಜ ಕಾರಣ ಅಂದರೆ. ಸತ್ತವರನ್ನು ಸುಡಲಿಕ್ಕೆ ಜನರ ಮಧ್ಯದಲ್ಲೇ ಬೆಂಕಿ ತಕ್ಕೊಂಡು ಹೋದ ಮುಂದೆ ಹೋಗುತ್ತಾರೆ. ಆ ಅನಿಷ್ಟ ಸಂದರ್ಭದ ನೆನಪು ಇಲ್ಲಿದೆ). ಉಪ್ಪು,

ಕತ್ತಿ, ಕತ್ತರಿಗೆಗಳನ್ನು, ಸುಣ್ಣವನ್ನು, ಇನ್ನೊಬ್ಬರ ಕೈಯಲ್ಲಿ (ಯಾವುದೊಂದನ್ನಾದರೂ) ಕೊಟ್ಟರೆ ಜಗಳವಾಗುವದೆನ್ನುತ್ತಾರೆ. ಉಪ್ಪು, ಸುಣ್ಣದ ಶಕ್ತಿಯುಳ್ಳ ವಸ್ತು; ಮತ್ತೆರಡು ಜಗಳಾಡಲು ಆಯುಧಗಳಾಗುವಂಥವು.

ಹುಟ್ಟಿದ ವಾರದಂದು ಕ್ಷೌರ ಮಾಡಿಕೊಳ್ಳಬಾರದು. ಅಣ್ಣತಮ್ಮಂದಿರು ಒಂದೇ ದಿನ ಕ್ಷೌರ ಮಾಡಿಕೊಳ್ಳಬಾರದು. ಕೂದಲೂ ಶರೀರದ ಭಾಗವೆಂದು ತಿಳಿದು ಹುಟ್ಟಿದ ದಿನ ಅದನ್ನು ತೆಗೆಯಲು ನಿಷೇಧಮಾಡಿರಬೇಕು.

ತಿರುಗುವ ಹಾದಿಯಲ್ಲಿ ಮಲಗಿದರೆ ಹೆಬ್ಬಾವಾಗಿ ಹುಟ್ಟುತ್ತಾರೆ ಎನ್ನುತ್ತಾರೆ. ಹಾದಿಯಲ್ಲಿ ಯಾರಾದರೂ ಕತ್ತಲೆಯಲ್ಲಿ ಮೆಟ್ಟಬಹುದೆಂಬುದು ಮೂಲ ಕಾರಣ.

ಇಬ್ಬರು ಮಲಗುವಾಗ, ಒಬ್ಬರ ತಲೆ ಇನ್ನೊಬ್ಬರ ಕಾಲು ಹೊಂದಿಕೊಂಡು ಅಂದರೆ ವಿರುದ್ಧ ರೀತಿಯಲ್ಲಿ ಮಲಗಬಾರದು; ಹಾಗೆ ಮಲಗಿದರೆ, ಎರಡೂ ಕಡೆ ತಲೆ ಇರುವಂತೆ ಕಾಣುವದರಿಂದ, 'ಎರಡು ಮುಂದೆ ಹಾವಾಗಿ ಹುಟ್ಟುತ್ತೀರಿ' ಎಂದು ಅದನ್ನು ನಿಷೇಧಿಸುತ್ತಾರೆ. ಇದೇ ತರ್ಕದಿಂದ ವಿಚಾರ ಮಾಡಿ ನೋಡೋಣ. ಒಬ್ಬೊಬ್ಬರಿಗೆ ಊಟಕ್ಕೆ ಕೂತಾಗ, ಬೆಕ್ಕಿನ ಹಾಗೆ ನಾಯಿಯ ಹಾಗೆ ಬಾಯಲ್ಲಿ ಪಚಪಚ ಶಬ್ದ ಮಾಡಿದ ಹೊರತು ಊಟಮಾಡಲು ಮನಸ್ಸು ಬರುವದಿಲ್ಲ. ಅಂಥವರಿಗೆ, "ಹೀಗೆ ಪಚಪಚ ಶಬ್ದ ಮಾಡಿ ಉಂಡರೆ, ಮುಂದಿನ ಜನ್ಮದಲ್ಲಿ ನೀನು ಬೆಕ್ಕಾಗಿ ಹುಟ್ಟುವೆ ಅನ್ನಬಹುದು. (ಹೀಗೆ ಎಲ್ಲಿಯಾದರೂ ನಂಬುಗೆ ಇದ್ದರೂ ಇರಬಹುದು.)

ರಾತ್ರಿವೇಳೆ ಕನ್ನಡಿ ನೋಡಿಕೊಂಡು ಕೂದಲು ಬಾಚಿಕೊಳ್ಳಬಾರದು ಎಂದು ಹುಡುಗಿಯರಿಗೆ (ಮುಖ್ಯವಾಗಿ) ಹೇಳುತ್ತಾರೆ. ಇದಕ್ಕೆ ಕಾರಣ ಸ್ಪಷ್ಟವಿಲ್ಲ. ವೇಶ್ಯೆಯರು ರಾತ್ರಿವೇಳೆ ಅಲಂಕಾರ ಮಾಡಿಕೊಳ್ಳುತ್ತಾರೆ. ಹಾಗೆ ಮಾಡಿಕೊಳ್ಳಬಾರದು. (ಕೆಲವರು ಹಟ್ಟಿ ಹಿಡಿದರೆ, ಈ ಕಾರಣವನ್ನು ಸ್ಪಷ್ಟವಾಗಿ ಹೇಳಿಯೂ ಹೇಳುತ್ತಾರೆ.) ಗಂಡು ಹುಡುಗರು ರಾತ್ರಿ ವೇಳೆ ಹಲ್ಲು ತಿಕ್ಕಿಕೊಳ್ಳುವಾಗಲೂ ಸರಿಯಲ್ಲ ಎಂದು ನಿಷೇಧಿಸುತ್ತಿದ್ದರು

ಏನಾದರೂ ಹೇಳುವಾಗ, ಗಡಿಯಾರ ಗಂಟೆ ಬಾರಿಸಿದರೆ, ದೇವಸ್ಥಾನದ ಗಂಟೆ ಬಾರಿಸಿದ್ದು ಕೇಳಿದರೆ, ಹೇಳುವವರು "ಸತ್ಯ" ಹೇಳಿದ್ದು ನಿಜವಾಗುತ್ತದೆ ಎನ್ನುತ್ತಾರೆ. ಹಿರಿಯರೂ ಈ ರೀತಿ ಹೇಳುವ ಅಭ್ಯಾಸ ಹೊಂದಿರುವುದುಂಟು. ಇದರಲ್ಲಿಯೂ ಕೆಲವು ಸಾರೆ ಕಾಕತಾಲೀಯದ ಅನುಭವ ಇರುತ್ತದೆ.

ಯಾರನ್ನಾದರೂ ಕುರಿತು ವಿಚಾರಮಾಡುತ್ತಿರುವಾಗ, ಮಾತಾಡುತ್ತಿರುವಾಗ ಸಹ ಅವರೇ ಬಂದರೆ "ನಿಮಗೆ ನೂರು ವರ್ಷ ಆಯುಷ್ಯ" ಎನ್ನುತ್ತಾರೆ. ಇದನ್ನು

ನಂಬಿಯೇ ಹೇಳುತ್ತಾರೆಂದಲ್ಲ. ನಂಬದ ಹುಡುಗರೂ ನಗೆಚಾಟಿಕೆಯಿಂದ ಹೀಗೆ ಹೇಳುತ್ತಾರೆ.

ಮಕ್ಕಳಲ್ಲಿ ಏನಾದರೂ ಸತ್ಯವೆಂದು ಪ್ರಮಾಣಮಾಡಲು ತನ್ನ ಕೊರಳನ್ನು (ಹೆಬ್ಬೆರಳು, ಎರಡನೆ ಬೆರಳಿನಿಂದ) ಹಿಡಿದುಕೊಂಡು "ಕೊರಳಾಣೆ" ಮಾಡುವ ಪದ್ಧತಿ ಬಹಳ ಉಂಟು. ಆಗ ಹಿರಿಯರು ಅದನ್ನು ನಿಷೇಧಿಸುತ್ತಾರೆ. "ಸತ್ಯಕ್ಕಾದರೂ ಪ್ರಮಾಣ ಸಲ್ಲ." ಆಣೆ ಮಾಡಿದಂತೆ ನಡೆದರೂ ಸಹ ಅನಿಷ್ಟದ ಹೆದರಿಕೆಯಿರುತ್ತದೆ: ಕೊರಳಿಗೆ (ಆಯುಷ್ಯಕ್ಕೆ, ಜೀವಕ್ಕೆ) ಧಕ್ಕೆ ಎಂದು.

ರೊಕ್ಕದ ಚೀಲದಲ್ಲಿ ಸ್ವಲ್ಪವಾದರೂ ಚಿಲ್ಲರೆಯಾದರೂ ಇರಬೇಕು. ಖಾಲಿ ಇಟ್ಟರೆ ದಾರಿದ್ರ್ಯ ಬರುತ್ತಧೆ. ರೊಕ್ಕ ಕೈಯಲ್ಲಿ ನಿಲ್ಲುವದಿಲ್ಲ.

ಖಡು ಅಥವಾ ಸುಣ್ಣದಿಂದ ನೆಲ ಅಥವಾ ಗೋಡೆಯ ಮೇಲೆ ಗೀಚಿದರೆ ಸಾಲವಾಗುತ್ತದೆ ಎನ್ನುತ್ತಾರೆ. ನೆಲವನ್ನು ಏನಾದರೂ ಗೀಚಿ ಹೊಲಸುಮಾಡಬಾರದೆಂಬ ಉದ್ದೇಶ ಮೊದಲಿದ್ದಿರಬಹುದು. ಆದರೆ. ಹೀಗೆ ಹೇಳುವವರು ಈ ಕಾರಣ ನಿಜವೆಂದೇ ತಿಳಿದು ಮಕ್ಕಳಿಗೆ ಬೋಧೆ ಮಾಡುತ್ತಾರೆ, "ಹೀಗೆ ಮಾಡಬಾರದು".

ಹೆಣ್ಣುಮಕ್ಕಳಿಗೆ, "ಪಳಿದ್ಯ ಮಾಡುವಾಗ ಯಾವುದಾದರೂ ಹೋಳನ್ನು ಹಾಕಿ ಮಾಡಬೇಕು; ಕಾಯಿಪಲ್ಲೆ ಇಲ್ಲದಿದ್ದರೆ. ಕಾಯಿ ಭಾಗಮಾಡಿಯಾದರೂ ಹಾಕಬೇಕು. ಇಲ್ಲದಿದ್ದರೆ. ಅಳಿಯನೊಬ್ಬನೇ ಹಬ್ಬದ ದಿನ ಬರುತ್ತಾನೆ." ಎಂದೆನ್ನುತ್ತಾರೆ.

ಬರೆದು ಕಾಗದವನ್ನು ಮುಚ್ಚದೆ ಇಟ್ಟರೆ ಅದನ್ನು ಇಲಿ ಓದಿಬಿಟ್ಟರೆ (ನೋಡಿದರೆ) ವಿದ್ಯೆ ಬರುವದಿಲ್ಲ ಎಂದು ಹುಡುಗರಿಗೆ ಹೇಳುತ್ತಾರೆ. ಅಲಕ್ಷ್ಯದಿಂದ ಎಲ್ಲಾದರೂ ಚಲ್ಲಿಕೊಡದೆ, ಓರಣವಾಗಿ ಇಡಬೇಕೆಂಬುದೇ ಇದರ ಮೂಲಕಾರಣ.

ನಾಲ್ಕುದಾರಿ ಕೂಡಿದಲ್ಲಿ ದೆವ್ವನಿಗೆ ಎಡೆ(ಊಟ)ಮಾಡಿ ಇಡುವ ವಿಧಾನವಿದೆ. ಅಡಿಕೆಯ ಹಾಳೆಯಲ್ಲಿ ಅನ್ನವನ್ನು, ಅರಿಸಿನ, ಕುಂಕುಮವನ್ನು ಕೂಡಿಸಿ ಹಾಕಿ ನಾಲ್ಕುದಾರಿ ಕೂಡಿದಲ್ಲಿ ಇಡುತ್ತಾರೆ, ಅದರೊಳಗೆ ಒಂದು ಜಂಜಿ (ಎಣ್ಣೆಯಲ್ಲಿ ಅದ್ದಿಸಿ ಮಾಡಿದ ವಸ್ತ್ರದ ದೀಪ) ಇಟ್ಟಿರುತ್ತಾರೆ. ಆ ದೆವ್ವದ ಎಡೆಯನ್ನು ದಾಟಬಾರದು. ಅದನ್ನು ಕಂಡಕೂಡಲೆ, ಮೂರುಸಾರೆ ಎಂಜಲನ್ನು ತೂಪ (ಥೂ ಎಂದು) ಬೇಕು. ದೊಡ್ಡ ಹುಡುಗರು ಹೀಗೆ ಮಾಡುವದನ್ನು ಕಂಡು ಚಿಕ್ಕವರೂ ಹೀಗೆ ಮಾಡುತ್ತಾರೆ.

ಪುರಾಣ ಕಥೆಗಳಿಗೆ ಸಂಬಂಧಪಟ್ಟ ಕೆಲವು ಮೂಢನಂಬಿಕೆಗಳು ಬೆಳೆದಿರುವುದು ಕಾಣುತ್ತದೆ. ಸೀತೆ ಅಶೋಕವನದಲ್ಲಿ ದುಃಖದಿಂದ ಕಾಲ ಕಳೆದಿದ್ದಳು. ಅವರಿಂದ ಅಶೋಕ ಗಿಡದ ಹೂಗಳನ್ನು ಹೆಂಗಸರು ಮುಡಿವುದಿಲ್ಲ. ದೇವರ ಪ್ರಸಾದವಾದರೆ

ಮುಡಿಯುತ್ತಾರೆ. ಬಾಗಿಲ ಮೆಟ್ಟಿಲಿನ ಮೇಲೆ ನಿಂತು ಭಿಕ್ಷೆ ನೀಡಬಾರದು: ಇದಕ್ಕೆ ರಾವಣ ಸೀತೆಯನ್ನು ಕದ್ದೊಯ್ದ ಸಂದರ್ಭ ನಿಮಿತ್ತವಾಗಿದ್ದೀತು.

ಚೌತಿಯ ದಿನ ಚಂದ್ರನನ್ನು ನೋಡಬಾರದು; ನೋಡಿದರೆ ಚಂದ್ರನಿಗೆ ಗಣಪತಿಯ ಶಾಪವಿರುವುದರಿಂದ ನೋಡಿದವರಿಗೆ ಅಪವಾದ ಬರುವದೆಂದು ನಂಬುತ್ತಾರೆ. ಚೌತಿ ಚಂದ್ರನನ್ನು ನೋಡುವುದನ್ನು ಆದಷ್ಟು ತಪ್ಪಿಸಿಕೊಳ್ಳುತ್ತಾರೆ. ಸುಳ್ಳು ಅಪವಾದ ಬಂದರೆ, "ಚೌತಿ ಚಂದ್ರನನ್ನು ನೋಡಿದ ಫಲ" ಎನ್ನುತ್ತಾರೆ.

ತಲೆಯ ಮೇಲೆ ಕೈ ಹೊತ್ತುಕೊಂಡು ಕೂತರೆ ದಾರಿದ್ರ್ಯ ಬರುತ್ತದೆ. ಊಟಕ್ಕೆ ಕೂತಾಗಲಂತೂ ಹಾಗೆ ಮಾಡಲೇಬಾರದು. ಶಿವನ ಪ್ರಾಣಲಿಂಗವನ್ನು ರಾವಣ ತಂದವನು ಗಣಪತಿಯ ಕೈಯಲ್ಲಿ ಕೊಟ್ಟು ಮೂತ್ರಮಾಡಲು ಹೋದನಂತೆ. "ಮೂರು ಬಾರಿಗೆ ಕರೆವೆ (ಆ ಲಿಂಗವ) ಧಾರುಣಿಯೊಳಗಿಡುವೆ" ಎಂದು ಗಣಪತಿ ಹೇಳಿದ್ದ. ಮೂರು ಬಾರಿ ಕರೆದ್ರು ರಾವಣ ಬಾರದಿರಲು ಆ ಲಿಂಗವನ್ನು ಭೂಮಿಯ ಮೇಲಿಟ್ಟನು. ರಾವಣ ಬಂದು ಪಾತಾಳದವರೆಗೆ ಇಳಿದ ಲಿಂಗವನ್ನು ಎಬ್ಬಿಸಲಾರದೆ ಹತ್ತು ತಲೆಗಳ ಮೇಲೆ ಕೈ ಹೊತ್ತು ಕೊಂಡು ವೈಫಲ್ಯದಿಂದ ಹೋದ ಕಥೆಯಿದೆ. (ಸಮುದ್ರದ ಬೇಲೆಯ ಮೇಲೆ ರಾಮ ಎಂದು ಬರೆದರೆ ಸಮುದ್ರದ ತೆರೆ ಬಂದು ಅದನ್ನು ಅಳಿಸುತ್ತದೆ.)

ಕಾಲು ತೊಳೆಯುವಾಗ ಹಿಮ್ಮಡ ಪೂರ್ತಿ ನೆನೆಯಬೇಕು, ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಶನಿಮಹಾತ್ಮೆ ನಾಟಕ, ಮತ್ತು ಈ ಕುರಿತ ಪುರಾಣ ಕಥೆಯ ಪ್ರಚಾರದಿಂದ ವಿಕ್ರಮನಿಗೆ ಇದರಿಂದ ಶನಿ ಹಿಡಿದುಕೊಂಡು ಕಾಟ ಕೊಡಲು ಸಾಧ್ಯವಾಯಿತು ಎಂದು ವಿವರಿಸುತ್ತಾರೆ. ನಳಮಹಾರಾಜನ ಕಥೆಯಲ್ಲಿಯೂ ಈ ಆಶಯವುಂಟು. ಅಲ್ಲಿ ಕಾಟ ಕೊಡುವವ ಕಲಿ.

ದೀಪಾವಳಿ (ಬೂದೆ) ಹಬ್ಬದಲ್ಲಿ ಬಲೀಂದ್ರನಿಗೆ ಪೂಜೆ ಮಾಡಿ ಅವನಿಗೆ ಎಡೆ (ನೈವೇದ್ಯ) ಇಡುವರಷ್ಟೇ? ಈ ಎಡೆಯ ಊಟವನ್ನು ಹೆಣ್ಣು ಮಕ್ಕಳೇ ಉಣ್ಣಬೇಕು. ಗಂಡುಮಕ್ಕಳು ಊಟ ಮಾಡುವದೆಂದರೆ, ಬೇಡ. ಧಡ್ಡರಾಗುತ್ತಾರೆ ಎಂದು ಹೇಳು ತ್ತಿದ್ದರು. ಆದರೂ ನಾನು ಹಟಮಾಡಿ ಬೇಗನೆ ಮೊಗೆ ಕಾಯಿ ಕಡಬನ್ನು ತಿನ್ನಲಾಗು ತ್ತದೆ ಎಂಬ ಕಾರಣದಿಂದ ಬಲೀಂದ್ರನ ಎಡೆಯನ್ನು ಊಟ ಮಾಡಿದ್ದುಂಟು. ಅದರಿಂದ ವಿದ್ಯೆ ಕಲಿಯುವಲ್ಲಿ ಧಡ್ಡನಾಗಿರದಿದ್ದರೂ ವ್ಯಾವಹಾರಿಕ ಕ್ಷೇತ್ರದಲ್ಲಿ ನಾನು ತುಂಬಾ ಧಡ್ಡನಾಗಲು ಕಾರಣವಾಗಿರಬೇಕು. (ಅಲ್ಲವಿದ್ದರೆ ಇಂಥ ಪುಕ್ಕಟೆ ಲೇಖನ ಬರೆಯು ತ್ತಿದ್ದೆನೇ?)

ಎಂದೂ ಓದದ ಪೋರ ಬೂದೆದಿನ ಓದಿದ ಎಂಬ ಗಾದೆಯನ್ನು ಹೇಳುತ್ತಾರೆ. ಬೂದೆ ಹಬ್ಬದಲ್ಲಿ ಓದದೆ ಆಟದಲ್ಲಿ ಕಾಲಕಳೆಯಬೇಕು. ನರಕ ಚತುರ್ದಶಿಯಂದು

ಎಣ್ಣೆ ಹಚ್ಚಲೇಬೇಕು. ಶ್ರೀಕೃಷ್ಣ ನರಕನನ್ನು ಕೊಂದು ಮೈ ಕೈ ನೋವಿಗೆ ಎಣ್ಣೆ ಹಚ್ಚಿ ಮಿಂದಿದ್ದ.ಹಚ್ಚದಿದ್ದರೆ ಮೈಯೆಲ್ಲಾ ಬೂದಿ ಬರಕಲು (ಆಗ ಚಳಿಗಾಲ. ಚಳಿಗಾಲದಲ್ಲಿ ಮೈಗೆ ಎಣ್ಣೆ ಹಚ್ಚಿಕೊಳ್ಳದಿದ್ದರೆ, ಮೈ ಕೈ ಚರ್ಮ ಬಿರಿದ ಹಾಗಾಗಿ ಬೂದಿ ಹಚ್ಚಿ ಕೊಂಡಂತೆಯೇ ಕಾಣುತ್ತದೆ.)

ಮಧ್ಯಾಹ್ನದ ಮೇಲೆ ಹೆಂಗಸರು ತುಲಸಿ ಕೊಯ್ಯಬಾರದೆಂಬುದಕ್ಕೆ ದ್ರೌಪದಿ ತುಲಸಿ ಕೊಯ್ದು, ಕೃಷ್ಣನು ಅವಳ ಸತ್ಯ ಪರೀಕ್ಷೆ ಮಾಡಿದ ಒಂದು ಜನಪದ ಕಥೆಯಿದೆ. ಕರ್ಣನನ್ನೂ ಪ್ರೇಮಿಸಿದ ರಹಸ್ಯ ಬಯಲಾದದ್ದು.

ಎಮ್ಮೆ ಆಕಳಿಗೆ ಹೋಲಿಸಿದರೆ ಸಾವಕಾಶ ನಡಿಗೆಯದು. ಮದಡು ಎಮ್ಮೆಯ ಹಾಲು ದಪ್ಪ; (ಈ ಹೇಳಿಕೆ ಈಗಿನ ಕಾಲದಲ್ಲಿ ಮೂಢ ನಂಬಿಕೆ ಎಂದೆನಿಸಿಕೊಂಡೀತು) ಎಮ್ಮೆಯ ದಪ್ಪ ಹಾಲನ್ನು ಕುಡಿದ ಹುಡುಗನು ಮದಡು ಬುದ್ಧಿಯವನಾಗುತ್ತಾನೆ ಎಂದು ಹೇಳುತ್ತಾರೆ. ಹೆಡ್ಡನಿಗೆ "ಎಮ್ಮೆತಮ್ಮಣ್ಣ" ಅಂತ ಹೇಳುತ್ತಾರಷ್ಟೇ? ಕೋಣ ಮರಿ ಎನ್ನುವವರ ಸೌಕುಮಾರ್ಯದ ನುಡಿ ಅದು ಆದರೆ, ಎಮ್ಮೆಯ ಹಾಲನ್ನು ಕುಡಿದಿದ್ದರಿಂದ ಯಾರೂ ಹೆಡ್ಡರಾಗಲಿಕ್ಕಿಲ್ಲ ಎಂದೆನಿಸುತ್ತದೆ. ಈ ಮೂಢ ನಂಬಿಕೆಯೂ ಕೆಳಗೆ ಉದಾಹರಿಸಿದ ಕೆಲವು ಮೂಢ ನಂಬಿಕೆಗಳೂ ಹಾಸ್ಯ ದೃಷ್ಟಿಯಿಂದ ರೂಢಿಸಿದ ಸಂದರ್ಭಗಳಾಗಿದ್ದಿರಬೇಕು. ಆದರೆ, ಕೆಲವರು ಅವನ್ನು ನಿಜವೆಂದು ನಂಬುತ್ತಾರೆ.

ಊಟ ಮಾಡುವಾಗ, ವಿಶೇಷವಾಗಿ ಚಿಕ್ಕಮಕ್ಕಳು ಊಟಮಾಡುವಾಗ, ಬಾಳೆ ಎಲೆ ಆಚೀಚೆ ಓಡಾಡು(ಸರಿಯು)ತ್ತದೆ. ಆಗ, "ಬಾಳೆ ಓಡಾಡುತ್ತದೆ; ನಾಳೆ ಪಾಯಸದ ಊಟ ಇದೆ" ಎನ್ನುತ್ತಾರೆ. ಬಾಳೆಯಲ್ಲಿ ಪಾಯಸ ಸುರಿವಾಗ ಪಾಯಸ ಬಾಳೆಯಲ್ಲಿ ಆಚೀಚೆ ಹರಿದು ಓಡಿದಂತೆ ಕಾಣುತ್ತದೆ. ಹಲಸಿನಹಣ್ಣು ತಿಂದು ತಲೆಗೆ ಕೈ ಉಜ್ಜಿಕೊಂಡರೆ ನಾಳೆಗೂ ಸಿಗುತ್ತದೆ ಎಂದು ಹೇಳಿ, ಹುಡುಗರು ಹಾಗೆ ಉಜ್ಜಿ ಕೊಂಡರೆ ನಗೆಯಾಡುತ್ತಾರೆ.

ಚೌತಿ ಹಬ್ಬದಲ್ಲಿ ಮಧ್ಯಾಹ್ನ ಒಂದೇ ಊಟ ಆದರೆ ಆ ಮಧ್ಯಾಹ್ನದ ಊಟ ದೇವರ ನೈವೇದ್ಯ ಮುಗಿದ ಮೇಲೆ ಸಂಜೆಗೇ ಆಗುವ ಸಂದರ್ಭವಿರುತ್ತದೆ. ಆ ಹಬ್ಬ ದಲ್ಲಿ. "ಹೊಟ್ಟೆ ತುಂಬ ಊಟಮಾಡು; ಇಲ್ಲದಿದ್ದರೆ ಇಡೀ ವರ್ಷ ಹೊಟ್ಟೆತುಂಬ ಊಟ ಸಿಗುವದಿಲ್ಲ," ಎನ್ನುತ್ತಾರೆ. ಸಂಜೆ ಹಸಿವಾಗಿ ಊಟ ಹಾಕು ಎನ್ನುವ ಸಂದರ್ಭವನ್ನು ತಪ್ಪಿಸುವುದೇ ಇದರ ಉದ್ದೇಶ.

ಊಟಮಾಡಿದ ಮೇಲೆ ಹೊಟ್ಟೆ ತಿಕ್ಕಿಕೊಳ್ಳುವದು ಕೆಲವರ ಅಭ್ಯಾಸವಾಗಿರುತ್ತದೆ. ಅದರಲ್ಲೂ ಗಡದ್ದಾಗಿ ಊಟಮಾಡಿದ ಮೇಲೆ (ಹೊಟ್ಟೆ ಉಬ್ಬಿದಾಗ) ಹೊಟ್ಟೆಯ ಮೇಲೆ ಕೈಯಾಡಿಸುವದು ಹೆಚ್ಚು ಅಲ್ಲದೆ, ಇದು ವಿಶೇಷವಾಗಿ, ದೊಡ್ಡ ಹೊಟ್ಟೆಯ

ರುವವರಿಗೆ, (ಅಧಿಕಾರಿಗಳು, ರಾಜಕೀಯ ಪುಢಾರಿಗಳು, ಶೇಟಜಿ ಮುಂತಾದ ವರ್ತಕರು, ಭಟ್ಟರು) ಇಂಥವರಿಗೆ, ಇರುವ ಒಳ್ಳೆಯ ಅಭ್ಯಾಸ. ಆದರೆ, ಮಕ್ಕಳು ಹಾಗೆ ಮಾಡಿಕೊಂಡರೆ ಉಂಡ ಹೊಟ್ಟೆಯ ಮೇಲೆ ಕೈಯಾಡಿಸಿದರೆ ಹೊಟ್ಟೆ ದೊಡ್ಡದಾಗುತ್ತದೆ ಎಂದು ತಡೆಯಲು ನೋಡುತ್ತಾರೆ. ಇದು ಕುಚೋದ್ಯತನವಲ್ಲದೆ ಬೇರೇನಲ್ಲ.

ಮದುವೆಯಾದ ಗಂಡಸರು ಹೆಂಡತಿ ಗರ್ಭಿಣಿಯಾಗಿದ್ದಾಗ, ಪ್ರಾಣಿಗಳನ್ನು ಕೊಲ್ಲಬಾರದು, ಬೇಟೆಗೆ ಹೋಗಬಾರದು; ಬಾಳೆಯ ಸುಳಿಯನ್ನು ಕತ್ತರಿಸಬಾರದು: ಕೂದಲು ಕತ್ತರಿಸಿಕೊಳ್ಳದೆ, ತಲೆಗೂದಲು, ಮೀಸೆ, ಗಡ್ಡ ಹಾಗೇ ಬೆಳೆಯಲು ಬಿಡಬೇಕು ಇತ್ಯಾದಿ ನಂಬಿಕೆಗಳನ್ನು ಹೆಂಡತಿಯ ಹೊಟ್ಟೆಯಲ್ಲಿದ್ದ ಶಿಶುವಿನ ಕ್ಷೇಮಪಾಲನೆಯ ದೃಷ್ಟಿಯಿಂದ ಪಾಲಿಸುತ್ತಿದ್ದರು. ಆದರೆ, ಚಿಕ್ಕಮಕ್ಕಳು ಕೂದಲನ್ನು ಬೆಳೆಯಗೊಟ್ಟರೆ, "ನಿನ್ನ ಹೆಂಡತಿ ಎಷ್ಟು ತಿಂಗಳ ಬಸುರಿ? ಎಂದು ಕೇಳುವುದಿತ್ತು. ಈಗಲೂ ಹಳ್ಳಿಗಳಲ್ಲಿ ಹಾಸ್ಯಕ್ಕಾಗಿ ಹುಡುಗರನ್ನು ಹೀಗೆ ಕೇಳಿ ಪೀಡಿಸುವುದುಂಟು. ಆದರೆ, ಹಿಪ್ಪಿ ಕೂದಲನ್ನು ಬಿಟ್ಟಿರುವ ಫ್ಯಾಶನ್ ತರುಣರ ಹತ್ತರ ಇದೇ ಪ್ರಶ್ನೆಯನ್ನು ಕೇಳಲು ಹಳ್ಳಿಗರು ಹಿಂಜರಿಯುತ್ತಾರೆ.

ಅನೇಕರು ದೊಡ್ಡವರಾದಂತೆ, ಶಿಕ್ಷಣದ ಪರಿಣಾಮವಾಗಿಯೂ ಇತರ ಚಿಕಿತ್ಸಕರ ಹೇಳಿಕೆಯಿಂದಲೂ ಮೂಢನಂಬಿಕೆಗಳನ್ನು ಕಳೆದುಕೊಳ್ಳುತ್ತಾರೆ. ಎಷ್ಟೋ ಸಲ ಅನುಭವವು ಅನೇಕ ಮೂಢನಂಬಿಕೆಗಳು ಸುಳ್ಳು ಎಂಬುದನ್ನು ಮನಸದಟ್ಟು ಮಾಡಿಕೊಡುತ್ತದೆ. ಕತ್ತಿಯಿಂದ ಗಾಯವಾದರೆ ಗಾಯಕ್ಕೆ ಚಿಕಿತ್ಸೆ ಮಾಡದೆ, ಹಿಂದಿನ ಕೆಲವು ಕಡೆಗಳ ಜನರಂತೆ ಯಾರೂ ಕತ್ತಿಗೆ ಲೇಪನವನ್ನು ಹಚ್ಚುವದಿಲ್ಲ. ಜೋಡು ವೀಳ್ಯದೆಲೆಗಳನ್ನು ಜೋಡು ಬಾಳೆ ಹಣ್ಣುಗಳನ್ನು ತಿಂದರೆ ಜೋಡು ಮಕ್ಕಳಾಗುವರೆಂದು ನಂಬಿ ಅವನ್ನು ತಿನ್ನದೆ ಯಾರೂ ಒಗೆಯುವದಿಲ್ಲ.

ಬೆಳಗುಮುಂಜಾನೆ ಗಿಡಗಳ ಎಲೆಗಳ ಮೇಲೆ ಸಿಂಬಳದಂಥ ವಸ್ತು ಬಿದ್ದಿರುವುದು ಕಾಣುತ್ತದೆ. ಅದು ಸೂರ್ಯನ ಎಂಜಲು ಎಂದು ನಾವು ಚಿಕ್ಕವರಾಗಿದ್ದಾಗ ಮಕ್ಕಳು ಹೇಳುತ್ತಿದ್ದರು. ಸರ್ಪದ ಎಂಜಲು ಎಂದೂ ಹೇಳುತ್ತಿದ್ದುದುಂಟು. ಈಗ ಯಾರಾದರೂ ಹಾಗೆ ಒಂದು ವೇಳೆ ಆ ತರದ ಮಾತನ್ನು ಹೇಳಿದರೂ ಅದನ್ನು ನಂಬಿ ಹೇಳುತ್ತಿಲ್ಲ.

ರಾತ್ರಿ ಹೊತ್ತಿನಲ್ಲಿ ಸಿಳ್ಳು ಹಾಕಬಾರದು: ಸರ್ಪ ಬರುತ್ತದೆ ಎಂದು ಹೇಳುವುದುಂಟು. (ಹೆಣ್ಣು ಮಕ್ಕಳು ಹಗಲಿಗೂ ಸಿಳ್ಳು ಹಾಕಬಾರದು ಎಂಬುದಕ್ಕೆ ಇರುವ ಕಾರಣ ಸ್ಪಷ್ಟವಾಗಿಯೇ ಇದೆ). ರಾತ್ರಿ ಸಿಳ್ಳು ಹಾಕುವುದು ರಾತ್ರಿಯ ಶಾಂತತೆಯನ್ನು ಕದಡುತ್ತದೆ. ಸರ್ಪ ಬರುತ್ತದೆ ಎಂಬುದು ನಿಷೇಧ ಮಾಡಲು ಒಂದು ಕಾರಣ. ಹೆದರಿಕೆ ಹಾಕುವುದೇ ಇದರ ಉದ್ದೇಶ (ಕಾಳಿಂಗ ಸರ್ಪ ಅಡವಿಯಲ್ಲಿ ಸಿಳ್ಳು ಹಾಕಿದಂಥ ಶಬ್ದ ಮಾಡುವುದೆಂದೂ, ಪ್ರತಿಯಾಗಿ ಸಿಳ್ಳು ಹಾಕಿದರೆ ಆ ದಿಸೆಯ ಮೇಲೆ ಅಲ್ಲಿ ಬಂದು

ಮನುಷ್ಯರನ್ನು ಕಚ್ಚಿಕೊಲ್ಲುವುದೆಂದೂ ಹೇಳಿಕೆಯಿದೆ. ಸರ್ಪಗಳಿಗೆ ಶ್ರವಣ ಶಕ್ತಿಯಿಲ್ಲ ಎಂದು ತಿಳಿಯುವುದು ಸಮಂಜಸವಲ್ಲ. ಕಿವಿಯಿರುವ ಜಾಗದಲ್ಲಿ ಇರುವ ರಂಧ್ರದ ಮೂಲಕ ಅದಕ್ಕೆ ಕೇಳಲು ಅವಯವವಿರುತ್ತದೆ. ಇದೇ ನಂಬಿಕೆಯೇ ರಾತ್ರಿ ಮನೆಯಲ್ಲೂ ಸಿಳ್ಳು ಹಾಕಬಾರದೆಂದು ನಿಷೇಧಿಸುವದಕ್ಕೆ ಹಿನ್ನೆಲೆಯಲ್ಲಿರಬಹುದು.)

ಸೂರ್ಯ ಮುಳುಗಿದ ಎಂದು ಹೇಳುವ ರೂಢಿಯಿದ್ದಂತೆ ಈಗಲೂ ಹೇಳುತ್ತಾರೆ. ಆದರೆ, ಮೂರು ನಾಲ್ಕು ವರ್ಷ ವಯಸ್ಸಿನ ಹುಡುಗನಿಗೆ ಹೀಗೆ ಹೇಳಿದಾಗ, (ಅವನು ನನ್ನ ಮೊಮ್ಮಗ) ಸೂರ್ಯ ಮುಳುಗಲಿಲ್ಲ, ಬೇರೆ ದೇಶಕ್ಕೆ ಹೋದ ಎಂದು ಹೇಳಿದನು. ಗ್ರಹಣದ ಕುರಿತ ರಾಹು-ಕೇತು ಪುರಾಣ ಕಥೆಯನ್ನು ಹಳ್ಳಿಗರಲ್ಲಿ ನಂಬುವವರು ಇನ್ನೂ ಇದ್ದರೂ ಬಹಳ ಜನರಿಗೆ ಅದೊಂದು ಜನಪದ ಕಥೆಯು ಹಾಗೆಯೇ.

ನಾವು ನಂಬುವ ಎಷ್ಟೋ ಸಂಗತಿಗಳು ವೈಜ್ಞಾನಿಕವಾಗಿ ಸತ್ಯವಾಗಿರುವುದಿಲ್ಲ.[೧] ಉದಾ : ಗುಂಗಾಡು ತನ್ನ ಬಾಯಿಂದ ಗಾನ ಮಾಡುವಂತೆ ಸ್ವರ ತೆಗೆಯುತ್ತದೆ ಎಂದು ನಂಬಿರುತ್ತೇವೆ. ಗುಂಗಾಡನ್ನು ಅಪ್ಸರೆಗೆ ಹೋಲಿಸಿ ಅದರ ಮಧುರ ಸ್ವರವನ್ನು ಕವಿಗಳು ಬಣ್ಣಿಸುತ್ತಾರೆ. ಶ್ರೀ ಚೆನ್ನವೀರ ಕಣವಿಯವರು ಬರೆದಂತೆ, ನಾರದ ರವ ತರಿಸಿದಂತೆ ಎಂಬುದು ಅರ್ಧ ಸತ್ಯವಾಗಿದೆ. ನಾರದರು ತನ್ನ ವೀಣೆಯಿಂದ ನಾದವನ್ನು ಹೊಮ್ಮಿಸುವಂತೆ ಕೊಲ್ಲದಿದ್ದರೆ 'ನಾರದ'. (ಕೊಂದರೆ ನಾರುವ) ಈ ಋಷಿ (ತಪ್ಪಿದೆ, ನುಸಿ-ನಮ್ಮ ಜಿಲ್ಲೆಯಲ್ಲಿ ಇದಕ್ಕೆ ನುಸಿ ಎಂದೇ ಹೇಳುತ್ತಾರೆ. ಚಾದರದಲ್ಲೂ ಸೀರೆಯಲ್ಲೂ ನುಸಿದು 'ತನ್ನ ಇಂಜಕ್ಷನ್ ಪ್ರದಾನ ಮಾಡುವುದರಿಂದ ನುಸಿ ಎಂಬ ಹೆಸರು ಇದಕ್ಕೆ ಯೋಗ್ಯವಾದದ್ದು). ತನ್ನ ರೆಕ್ಕೆಗಳನ್ನು ಬಹುವೇಗವಾಗಿ ಚಲಿಯಿಸುವಂತೆ ಹಾರುವದರಿಂದ ಏಳುವ ತರಂಗಗಳಿಂದ ಈ ನಾದಲಹರಿಯನ್ನು ಹಬ್ಬಿಸುತ್ತದೆ—ಈ ಮೌನಿನಾರದ (ನುಸಿ.)

ಕೆಲವು ಮೂಢನಂಬಿಕೆಗಳಲ್ಲಿ ನಿಜವಾದ ತಥ್ಯವಿದ್ದರೂ ಅವುಗಳಿಗೆ ಕೊಡುವ ಕಾರಣಗಳು ಮಾತ್ರ ಅಸಮಂಜಸವಾಗಿರುವುವೆಂಬುವನ್ನು ಹಿಂದೆ ಕೊಟ್ಟ ಅನೇಕ ಉದಾಹರಣೆಗಳಿಂದ ಸ್ಪಷ್ಟಗೊಳಿಸಿದುದಾಗಿದೆ. ನಿದ್ದೆ ಮಾಡಿದ ಮಕ್ಕಳನ್ನು ಅವುಗಳನ್ನು ಮಾತಾಡಿಸದೆ ಎತ್ತಿಕೊಂಡರೆ, ಅರೆ ಎಚ್ಚರಿಕೆಯಲ್ಲಿ ಅವು ಗಾಬರಿಯಿಂದ ಹೆದರಿಕೊಳ್ಳುವ ಸಂಭವವುಂಟು. (ನೋಡಿ, ಚುಂಚನಗಿರಿ ಗ್ರಂಥ, ಪುಟ ೨೦) ಜುಟ್ಟಿಲ್ಲದ ಕಾಯನ್ನು ದೇವರಿಗೆ ಒಡೆಯಬಾರದು ಎಂಬ ನಂಬಿಕೆಯನ್ನು (ಪು ೧೪) ಶ್ರೀ ರಾಗೌ ಮತ್ತು ಎಂ. ಸಿ. ವಸಂತಕುಮಾರರು ಸಂಪಾದಿಸಿದ ಜನಪದ ನಂಬಿಕೆಗಳು ಎಂಬ ಗ್ರಂಥದಲ್ಲಿ

೧ ಈ ಅಂಶವನ್ನು ಶ್ರೀ ಎಸ್. ಡಿ. ಬಳೂರಗಿ ಅವರು ಮಲ್ಲಾಪುರ ಕಂಪನಿಯಲ್ಲಿನ ಕ. ವಿ. ವಿ. ಪ್ರಚಾರೋಪನ್ಯಾಸದಲ್ಲಿ ಹೇಳಿದ್ದರು.

ಕೊಟ್ಟಿದ್ದಾರೆ. ಈ ನಿಷೇದಕ್ಕೆ ಕಾರಣ ದೇವರು ಜುಟ್ಟಿದ್ದ ಕಾಯಿ ಒಡೆದರೆ ಮಾತ್ರ ಪ್ರಸನ್ನನಾಗುತ್ತಾನೆ ಎಂಬುದಲ್ಲ. ಮಿತ್ರ ಶ್ರೀ ಎಸ್. ಟಿ. ಹೆಗಡೆಯವರು ಇದನ್ನು ಹೀಗೆ ವಿವರಿಸುತ್ತಾರೆ. ಧಾರವಾಡ, ಬೆಳಗಾಂವಿ ಮುಂತಾದ ಬಯಲು ಸೀಮೆಯಲ್ಲಿ ತೆಂಗಿನಕಾಯಿ ಉಪಯೋಗಿಸುವದು ಕಡಿಮೆ. ಅಲ್ಲಿ ಜುಟ್ಟಿದ್ದ ಕಾಯಿ ಕಡಿ ಇಟ್ಟರೆ ಬೇಗನೆ ಹಾಳಾಗುವದಿಲ್ಲ. ಜಿರಲೆ ಅದರ ಕಣ್ಣಿನ ಜಾಗ ಕೊರೆಯಲು ಸಾಧ್ಯವಾಗದು.

ನಮ್ಮ ಕಡೆ ಭಟ್ಟರಿಗೆ ಕೊಡುವ ತೆಂಗಿನ ಕಾಯಿಗಳಿಗೆ ಜುಟ್ಟನ್ನು ಇಡುತ್ತಾರೆ. ಅವರಿಗೆ ಬಹಳ ಕಡೆಗಳ ಕಾಯಿಗಳು ಹೀಗೆಯೇ ಬಂದಿರುತ್ತವೆ: ಆದರಿಂದ ಇವು ಕೆಡದೆ ಬಹಳ ದಿನ ಉಳಿಯಲು ಇವಕ್ಕೆ ಜುಟ್ಟಿದ್ದರೆ ಅನುಕೂಲ ಎಂಬ ಕಾರಣ ಸರಿಯಾಗಿ ಕಾಣುತ್ತದೆ (ಶಾಸ್ತ್ರಜ್ಞಾನಿಗಳು ಅದಕ್ಕೆ ಬೇರೆ ಶಾಸ್ತ್ರಾಧಾರವನ್ನೂ ಕೊಡಬಹುದು).

ಮಕ್ಕಳನ್ನು ಹಿಡಿದುಕೊಂಡು ಹೋಗಬಹುದೆಂಬ ಹೆದರಿಕೆಯ ಸುದ್ದಿ ಹಬ್ಬಿದ ಕಾಲದಲ್ಲಿ ಏನೇನು ಹೆದರಿಕೆಯಾಯಿತು; "ಇಂದಲ್ಲ ನಾಳೆ" ಎಂದು ಹುಡುಗರು ಬಾಗಿಲಿನ ಹೊರಗೆ ಯಾಕೆ ಬರೆಯುತ್ತಿದ್ದರು ಎಂಬುದನ್ನು ನನ್ನ ಮೂಢನಂಬಿಕೆಗಳ ಪುಸ್ತಿಕೆಯಲ್ಲಿ ಬರೆದಿದ್ದೇನೆ.

ಹಿಂದಿನ ಕಾಲದಲ್ಲಿ ವಿಶೇಷವಾಗಿ, ಈಗಿನ ಕಾಲದಲ್ಲಿ ವಿರಳವಾಗಿ, ಗಂಡಸರು ಮತ್ತು ಗಂಡು ಮಕ್ಕಳು ಜುಟ್ಟನ್ನು ಇಟ್ಟುಕೊಳ್ಳುವದಕ್ಕೆ ಕಾರಣ ಎಂದರೆ. ನಾನು ಒಂದು ಚುಟಕದಲ್ಲಿ ಹಾಸ್ಯದಿಂದ ಬರೆದಂತೆ. ಸ್ವರ್ಗದಲ್ಲಿ ಜುಟ್ಟಿದ್ದ ಮನುಷ್ಯನನ್ನು (ಸತ್ತವನನ್ನು) ಜುಟ್ಟು ಹಿಡಿದು ಮೇಲೆತ್ತಿಕೊಳ್ಳಲು ಅನುಕೂಲ ಎಂಬುದಲ್ಲ: ಅಥವಾ ಹಿಂದಿನ ಕಾಲದ ಹೆಣ್ಣಾದ, (ಇಂದೂ ಹೆಣ್ಣಾಗದಿರುವ) ಅಪ್ಸರೆ ಹಳೇ ಫ್ಯಾಶನ್ನುಗಳಿಗೇ ಮರುಳಾಗುತ್ತಾಳೆ; ಕ್ರಾಪನ್ನು (ಅಥವಾ ಬಿಚ್ಚಿಕೂದಲನ್ನು) ಮೆಚ್ಚಳು ಎಂಬುದಲ್ಲ. ಜುಟ್ಟಿಲ್ಲದಿದ್ದರೆ ದೇವರ ಪ್ರಸಾದವನ್ನು ಕಿವಿಯ ಮೇಲೆ ಸಿಕ್ಕಿಸಿ (ಮುಡಿದು)ಕೊಳ್ಳ ಬೇಕಾಗುತ್ತದೆ. ಜುಟ್ಟಿದ್ದರೆ ಭದ್ರವಾಗಿ ಅದರ ಗಂಟಿನಲ್ಲಿ ಮಡಗಿಕೊಂಡಿರಬಹುದು ಎಂದು ಮುಕ್ತಾತ್ಮರಾದ ಪರಮಪೂಜ್ಯ ಭಗವಾನ್ ಶ್ರೀ ಶ್ರೀಧರಸ್ವಾಮಿಗಳು ವಿವರಿಸಿದ್ದುಂಟು.

"ಜನಪದ ನಂಬಿಕೆಗಳು" ಗ್ರಂಥದಲ್ಲಿ 'ಬರಲಲ್ಲಿ ಹೊಡೆಯಬಾರದು' (ಪು. ೨೧) ಎಂದಿದೆ. ಹಾಗೆ ಹೊಡೆದರೆ ಬರಲಿನಂತೆ ಸೀರಾಗುತ್ತಾರೆ ಎಂದು ಕಾರಣವಿದ್ದಿರಬಹುದು. ನಮ್ಮ ಜಿಲ್ಲೆಯಲ್ಲಿ "ಬರೀ ಕೈಲಿ ಹೊಡೆಯಬಾರದು: ಬರಲನ್ನಾದರೂ ತೆಗೆದುಕೋ" ಎನ್ನುತ್ತಾರೆ. ಬರೀ ಕೈಪೆಟ್ಟಿನಿಂದ (ಜೋರಿನಿಂದ) ಏನಾದರೂ ಅಂಗಕ್ಕೆ ಊನವಾಗಬಹುದು ಎಂಬ ಕಾರಣ ಹೆಚ್ಚು ಸಮಂಜಸವಾದದ್ದಾಗಿದೆ.

ಈಗ ವೇಗವಾಗಿ ಬದಲಾವಣೆಗಳಾಗುತ್ತವೆ. ಬಂಜೆಯು ಕುರಿತು ಮಾಡುವ ಹೀನದೃಷ್ಟಿಯು ಪ್ರತಿಕ್ರಿಯೆ ಈಗ ಸಹ ಹಳ್ಳಿಗಳಲ್ಲಿ ಕಂಡರೂ ಕಲಿತ ಜನರಲ್ಲಿ ಈ ಕುರಿತು ಅಂಥ ದೃಷ್ಟಿ ಇರುವದಿಲ್ಲ.

ಆದರೂ ಮೂಢನಂಬಿಕೆಗಳು ಕಡಿಮೆಯಾಗಿಲ್ಲ: ಹೆಚ್ಚಾಗುತ್ತಿವೆ ಎಂದು ಶ್ರೀ ಎಸ್. ಟಿ. ಹೆಗಡೆಯವರು ಹೇಳುತ್ತಾರೆ. ದೇವಸ್ಥಾನಗಳಲ್ಲಿ ಮುಂದೆ ಯಾವುದೇ ಕಾರ್ಯದಲ್ಲಿ ಯಾವ ರೀತಿ ಮುಂದುವರಿಯಬೇಕೆಂದು ಪ್ರಸಾದ ಕೇಳುವ "ಪುಡಿ" ಕಟ್ಟುವ ಭಟ್ಟರನ್ನು ಹೆಚ್ಚು ಹೆಚ್ಚು ಒಕ್ಕಲಿಗರು ಹೆಚ್ಚಿನ ಪ್ರಮಾಣದಲ್ಲಿ (ಬಹಳ ಸಲ) ಕೇಳಿಕೊಳ್ಳುತ್ತಿದ್ದಾರೆ. ದೇವರ ಕುರಿತು ಹೇಳಿಕೊಳ್ಳುವ ಹರಕೆಗಳ ಉತ್ಪನ್ನ ಹೆಚ್ಚಾಗುತ್ತಿದೆ. ಮಂತ್ರವಾದಿಗಳಿಗೂ ನೋಟ ನೋಡುವವರಿ (ಭೂತ ಚಿಕಿತ್ಸಕರಿ)ಗೂ ಗಿರಾಕಿಗಳು ಬಹಳವಾಗಿದ್ದಾರೆ. ಹಿಂದೆ ಶ್ರಾದ್ಧ ಮಾಡದಿರುವ ಜಾತಿಗಳವರೂ ಭಟ್ಟರನ್ನು ಕರೆದು ಶ್ರಾದ್ಧಮಾಡಿಸಲು ಪ್ರಾರಂಭ ಮಾಡಿದ್ದಾರೆ. ಹುಟ್ಟಿದ ಶಿಶುವಿನ ಹೊಕ್ಕಳು ಹುಗಿದು, ಆ ಜಾಗವನ್ನು ಪೂಜಿಸಿ, ಅದಕ್ಕೆ ನೈವೇದ್ಯಮಾಡಿ ಆರತಿಮಾಡಿ ಕೈಮುಗಿಯುವ ಆಚರಣೆ ಹಿಂದಿನಂತೆ ಇಂದೂ ಇದೆ.

ಕುಮಟಾದ ದೇವಸ್ಥಾನದಲ್ಲಿ ಒಲೆಯ ಮೇಲೆ ಕುದಿಯುವ ಎಣ್ಣೆಯಲ್ಲಿ ಕೈಹಾಕಿ ವಡೆಗಳನ್ನು ತೆಗೆಯುವಾಗ ಮೈಮೇಲೆ ಭಾರಬರುತ್ತದೆ. ಕೈಸುಡುವದಿಲ್ಲ. ಬಹಳ ಬುದ್ಧಿವಂತರಾಗಿರುವ ಎಂ. ಬಿ. ಬಿ. ಎಸ್. ಡಾಕ್ಟರರು (ಡಾ. ಶಾನಭಾಗ) ಸಹ ಆವೇಶಹೊಂದಿ ಈ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುತ್ತಾರೆ. ಈ ಭಕ್ತಿ ಸಮ್ಮೋಹನದಿಂದ ಅಸಾಧ್ಯಕಾರ್ಯವೆಂಬುದು ಸಾಧ್ಯವಾಗುತ್ತದೆ. ಇಂಥ ಘಟನೆಗಳು ಎಷ್ಟೋ ಮೂಢನಂಬಿಕೆಗಳಿಗೆ ಸಹ ಜೀವದಾನ ಕೊಡುತ್ತವೆ. ಅವುಗಳಿಂದ ಒಳ್ಳೆಯದಾಗುವದೂ ಉಂಟು; ಕೆಡುಕಾಗುವುದೂ ಸಾಧ್ಯ.

ತರ್ಕಬದ್ಧವಲ್ಲದ (ಅಸಮಂಜಸ) ನಂಬಿಕೆಗಳನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ ಸಮಂಜಸವಾದ ನಂಬಿಕೆಗಳನ್ನು ಹೊಂದಿರುವುದು ಅದಕ್ಕಿಂತ ಹೆಚ್ಚು ಮಹತ್ವದ್ದಾಗಿದೆ ಎಂದು ಪ್ರಖ್ಯಾತ ಅಮೇರಿಕನ್ ಮನಃಶಾಸ್ತ್ರಜ್ಞರಾದ ಎರಿಕ್ ಫ್ರೋಮ್ ಅವರು ಬರೆದುದು ಯೋಗ್ಯವಾಗಿದೆ. ಸ್ವಾತಂತ್ರ್ಯ, ಸಮತೆ, ಸೋದರ ಭಾವಗಳ ತತ್ವಗಳಿಂದ ಶಾಶ್ವತವಾಗುವ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಮಾನವನ ಶಕ್ತಿಯಲ್ಲೂ, ಬುದ್ಧಿಯಲ್ಲೂ ನಂಬಿಕೆಯಿಡುವುದು ಅಗತ್ಯದ್ದಾಗಿದೆ. ಹೆಚ್ಚು ಹೆಚ್ಚಾಗಿ ಸಂಗತಿ (fact)ಗಳನ್ನು ಸಂಗ್ರಹಿಸುವುದು ಸತ್ಯವನ್ನು ತಿಳಿಯುವಲ್ಲಿ ಪರಿಣಮಿಸುವದೆಂಬ ನಂಬಿಕೆ ಮೂಢ ನಂಬಿಕೆಯಾಗಿದೆ ಎಂದು ಅವರು ಹೇಳುತ್ತಾರೆ.

ಮಗು ಮೊದಲು ತನ್ನ ಹಿರಿಯರ ಎಲ್ಲ ವಿಚಾರಗಳನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳುತ್ತದೆ. ಆ ಮೇಲೆ, ಸ್ವತಂತ್ರ ವಿಚಾರ ಮಾಡಹತ್ತಿದಾಗ ಹಿರಿಯರ ನಂಬಿಕೆ

ಗಳನ್ನು ವಿಮರ್ಶಿಸುವ ಬುದ್ಧಿಯಲ್ಲಿ ಹಿಂದಿನ ಪ್ರತಿಷ್ಠೆಗಳನ್ನು ಸಂಶಯ ದೃಷ್ಟಿಯಿಂದ ನೋಡಲು ಬೆಳೆಯುತ್ತಿರುವ ಮನಸ್ಸು ಪ್ರಾರಂಭಿಸುತ್ತದೆ.

ಬಹುಸಂಖ್ಯಾತರು ಅಥವಾ ಅಧಿಕಾರದಲ್ಲಿರುವವರು (Authorities) ಹೇಳುವ ರೆಂದು ವಿಚಾರ ಮಾಡದೆ ಒಪ್ಪಿಕೊಳ್ಳುವಲ್ಲಿ ಸಕಾರಣವಲ್ಲದ ನಂಬಿಕೆ ಮೊಳೆಯಲು ನಿಮಿತ್ತವಾಗುತ್ತದೆ. ಯಾರೋ ದೊಡ್ಡ ಮನುಷ್ಯರು, ಧರ್ಮ ಗುರುಗಳೂ, ಪ್ರವಾದಿ ಗಳು, ರಾಜಕೀಯ ಪುಢಾರಿಗಳು ತಮ್ಮ ಮೇಲೆ ಬೀರುವ ಪ್ರಭಾವದ ಸಮ್ಮೋಹಿನಿ ಜಾಲದಲ್ಲಿ ಅವರು ಹೇಳಿದ್ದನ್ನೆಲ್ಲ ಪ್ರಶ್ನಾತೀತ ಸತ್ಯವೆಂದು ಒಪ್ಪಿಕೊಳ್ಳುವಲ್ಲಿ ಮೂಢ ನಂಬಿಕೆಗಳು ಬೆಳೆಯುತ್ತವೆ.

"ಮೂಢಃ ಪರಪ್ರತ್ಯಯನೇಯ ಬುದ್ಧಿಃ" ಇತರರ ಅಭಿಪ್ರಾಯವನ್ನು ವಿಮರ್ಶಿಸದೆ ಅವರಿಂದ ಎಳೆಯಲ್ಪಟ್ಟು, ಕಣ್ಣು ಮುಚ್ಚಿ ಅವರ ಸೂಚನೆ (Suggestion)ಯನ್ನು ಒಪ್ಪುವ ಮನುಷ್ಯನನ್ನೇ ಮೂಢನೆಂದು ಕರೆದಿರುವರು. ಇಂಥ ಬುದ್ಧಿಯೇ ಮೂಢ ನಂಬಿಕೆಗಳ ಉಗಮದ ಮತ್ತು ಬೆಳವಣಿಗೆಯ ಮೂಲ.

ಮೌಢ್ಯವನ್ನು ಕಳೆದುಕೊಂಡ ಮಾನವನ ನಂಬಿಕೆಗಳು ನೆಲೆಗೊಳ್ಳಲಿ.

ಈ ಲೇಖನ ಬರೆಯಲು ಮಾಹಿತಿ ನೀಡಿದವರು

೧	ಕು. ವಿದ್ಯಾ ತಿಮ್ಮಣ್ಣ ಹೆಗಡೆ	ಹೆಗಡೆ ಊರು
೨	ಕುಮಾರ ರವಿ ರಾಮಚಂದ್ರ ಗಾವಕಾರ	"
೩	ಶ್ರೀ ಎನ್. ಟಿ. ಹೆಗಡೆ	"
೪	ಸೌ॥ ಪರಮೇಶ್ವರಿ ನಾರಾಯಣ ಹೆಗಡೆ	"
೫	ಸೌ॥ ಕರಿಯಮ್ಮ ರಾಮಕೃಷ್ಣ ಗೌಡ	"
೬	ಶ್ರೀ ಪಾಂಡುರಂಗ ಅನಂತ ಶ್ಯಾನಭಾಗ	"
೭	ಎ. ಡಿ. (ಅಪ್ಪಿ) ಶ್ಯಾನಭಾಗ	"
೮	ಕು. ವೀಣಾ ತಿಮ್ಮಣ್ಣ ಹೆಗಡೆ	"
೯	ಕು. ಸವಿತಾ ಲಕ್ಷ್ಮೀನಾರಾಯಣ ಹೆಗಡೆ	"
೧೦	ಸೌ॥ ಅನಸೂಯಾ ಲಕ್ಷ್ಮೀನಾರಾಯಣ ಹೆಗಡೆ	"
೧೧	ಸೌ॥ ರಾಧ ಕೋಂ ತಿಮ್ಮಣ್ಣ ಹೆಗಡೆ	"

೧೨ ಕು. ಸತೀಶ ಶಿವರಾಮಭಟ್ಟ ಉಳಗೆರೆ ನೀಲಕೋಡು
(ಹೊನ್ನಾವರ ತಾಲೂಕು)

೧೩ ಕು. ಗಣೇಶ(ಬಾಬು) ಶಿವರಾಮಭಟ್ಟ " "

೧೪ ಶ್ರೀ ಗಜಾನನ ಗಣೇಶ ಭಟ್ಟ ಚಿತ್ರಿಗಿ, ಈಗ ಬಿಜ್ಜೋಡಿ, ಭಟಕಳ
ತಾಲೂಕು.

ಮಕ್ಕಳಿಗೆ ಆರೋಗ್ಯ ಶಿಕ್ಷಣದ ಅಗತ್ಯ ಹಾಗೂ ಕಾರ್ಯಕ್ರಮ

● ಸ. ಜ. ನಾಗಲೋಟಿಮಠ

ಪ್ರಜಾ ಪ್ರಭುತ್ವವನ್ನು ಮಾನ್ಯಮಾಡಿದ ರಾಷ್ಟ್ರಗಳಲ್ಲಿ ಆರೋಗ್ಯ ಶಿಕ್ಷಣಕ್ಕೆ ಹೆಚ್ಚು ಮಹತ್ವವಿದೆ. ಯಾಕೆಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಮುಖ್ಯ ವ್ಯಕ್ತಿ. ಈ ಮಾದರಿಯ ಸರಕಾರ ಯಶಸ್ವಿಯಾಗಬೇಕಾದರೆ ಪ್ರಜೆಗಳಲ್ಲಿ ಹಲವಾರು ಅರ್ಹತೆಗಳು ಹಾಗು ಗುಣಗಳು ಇರುವದು ಅತ್ಯವಶ್ಯ. ಈ ಎಲ್ಲ ಅರ್ಹತೆಗಳು ಹಾಗು ಗುಣಗಳು ಪ್ರಜೆಯ ಆರೋಗ್ಯವನ್ನು ಅವಲಂಬಿಸಿರುತ್ತವೆ. ಕಾರಣ ಪ್ರಜೆಗಳು ಆರೋಗ್ಯವಂತರಾಗಿರದಿದ್ದರೆ ಅವರಿಗೆ ಸರಕಾರ ನಡೆಸುವ ಅರ್ಹತೆ ಬಾರದು. ಅಂದಮೇಲೆ ಪ್ರಜಾಪ್ರಭುತ್ವವೂ ಬದುಕಲಾರದು. ಆರೋಗ್ಯವಂತ ವ್ಯಕ್ತಿಗೆ ತನ್ನ ಜೀವನದ ಮಹತ್ವದ ಅರಿವು ಇರುತ್ತದೆ. ಅವನು ಅದನ್ನು ಸದಾಕಾಲ ರಕ್ಷಿಸಲು ಹಾಗು ವೃದ್ಧಿಗೊಳಿಸಲು ಯತ್ನಿಸುತ್ತಿರುತ್ತಾನೆ. ಇಂಥಹ ವ್ಯಕ್ತಿಯು ತನ್ನ ಬಾಂಧವರ ಹಾಗು ದೇಶದ ಏಳಿಗೆಯ ಬಗ್ಗೆ ಯೋಚಿಸಬಲ್ಲವನೂ ಹಾಗು ಯೋಜನೆಗಳನ್ನು ಕಾರ್ಯಗತಗೊಳಿಸಬಲ್ಲವನೂ ಆಗಿರುವನು.

ಇಂದು ಜಗತ್ತಿನಲ್ಲಿ ತಾಂತ್ರಿಕ ಜ್ಞಾನವು ಅತಿ ವೇಗವಾಗಿ ಬೆಳೆಯುತ್ತಲಿದೆ. ದೇಶ ದೇಶಗಳಲ್ಲಿ ತೀವ್ರ ಪೈಪೋಟಿ ಇದೆ. ಕಾರಣ ಯಾವದೇ ದೇಶ ಪ್ರಗತಿಹೊಂದಲು ತನ್ನ ಜ್ಞಾನ ಭಂಡಾರ ಹೆಚ್ಚಿಸಬೇಕು. ಇದಕ್ಕೆ ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಪಾಲನ್ನು ಸಲ್ಲಿಸಬೇಕು. ಪ್ರಜೆಗಳು ಆರೋಗ್ಯದಿಂದ ಇದ್ದರೆ ಮಾತ್ರ ಪ್ರಗತಿಯ ಪೈಪೋಟಿ ಸಾಧ್ಯವೇ ವಿನಃ ಅನಾರೋಗ್ಯದಲ್ಲಿ ನರಳುವ ಜನರಿಂದಲ್ಲ. ಜನರು ಆರೋಗ್ಯವಂತರಾಗಬೇಕಾದರೆ ಅವರಿಗೆ ಆರೋಗ್ಯ ಶಿಕ್ಷಣ ಬೇಕು.

ತಾಂತ್ರಿಕ ಜ್ಞಾನದಷ್ಟೇ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಅಥವಾ ಬದಲಾಗುತ್ತಿರುವ ವಿಷಯವೆಂದರೆ ಸಾಮಾಜಿಕ ಬದಲಾವಣೆ. ಸಾಮಾಜಿಕ ಬದಲಾವಣೆಗಳನ್ನು ಒಪ್ಪಿಕೊಂಡು ಜಗತ್ತಿನ ಜನರೊಡನೆ ನಡೆಯಬೇಕಾದರೆ ವ್ಯಕ್ತಿಯು ಸಾಮಾಜಿಕ ಸ್ವಾಸ್ಥ್ಯವುಳ್ಳವನಾಗಿರಬೇಕು. ಇಂತಹ ವ್ಯಕ್ತಿಗಳಿಂದ ಕೂಡಿದ ನಾಡು ಯಾವ ಯಶಸ್ಸನ್ನೂ ಸಾಧಿಸಬಹುದು. ಜಗತ್ತಿನ ಇತರ ಜನಾಂಗಗಳಿಗೆ ಮಾದರಿಯಾಗಬಲ್ಲದು.

ಕಾರಣ ವ್ಯಕ್ತಿಗೆ ಅತಿ ಭೂಷಣವಾದುದು ಆರೋಗ್ಯ. ಆರೋಗ್ಯದ ಅರಿವು ಪ್ರತಿ ಪ್ರಜೆಯಲ್ಲಿ ಮೂಡುವಂತೆ ಮಾಡುವುದು ಆ ನಾಡಿನ ಸರಕಾರದ ಪವಿತ್ರ ಹಾಗೂ ಅತ್ಯವಶ್ಯ ಕಾರ್ಯ. ಈ ಕಾರ್ಯವು ನಿರಂತರವಾಗಿ ವ್ಯಕ್ತಿಯ ಜೀವನಾದ್ಯಂತ ನಡೆಯಬೇಕು. ದೀರ್ಘವಾಗಿ ನಡೆಯುವ ಯಾವುದೇ ಕಾರ್ಯಕ್ಕೆ ಅಡಿಪಾಯ ಭದ್ರವಾಗಿರಲೇಬೇಕು. ಅಂತೆಯೇ ಆರೋಗ್ಯ ಶಿಕ್ಷಣಕ್ಕೂ ಸಹ ಭದ್ರ ಬುನಾದಿಯು ಅಗತ್ಯವಿದೆ. ಬುನಾದಿಯನ್ನು ಹಾಕಲು ತಕ್ಕ ವೇಳೆಯೆಂದರೆ ಜೀವನದ ಪ್ರಾರಂಭಾವಸ್ಥೆ. ಅದೇ ಬಾಲಾವಸ್ಥೆ. ಅದು ಕಾರಣವೇ ಮಕ್ಕಳಿಗೆ ಆರೋಗ್ಯ ಶಿಕ್ಷಣ ಅತ್ಯಗತ್ಯ.

ಆರೋಗ್ಯ ಶಿಕ್ಷಣವು ಮಕ್ಕಳಿಗೆ ಅಗತ್ಯವೆಂದು ಒಪ್ಪಿದ ಮೇಲೆ ಅದರ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಹಮ್ಮಿಕೊಳ್ಳಬೇಕೆಂದು ಯೋಚಿಸುವದು ಈ ಲೇಖನದ ಎರಡನೆಯ ಹಂತ. ಅದಕ್ಕಿಂತ ಮೊದಲು (i) ಆರೋಗ್ಯವೆಂದರೇನು ? (ii) "ಆರೋಗ್ಯ ಶಿಕ್ಷಣ" ಪದದ ಅರ್ಥವೇನು ? ಹಾಗು (iii) ಆರೋಗ್ಯ ಶಿಕ್ಷಣದ ಧ್ಯೇಯಗಳೇನು ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ನೋಡುವದು ಸಮಂಜಸ.

ಆರೋಗ್ಯವೆಂದರೇನು?

ಇಂದು ಆರೋಗ್ಯದ ಅರ್ಥವು ಕೇವಲ ದೈಹಿಕ ಸದೃಢತೆಯನ್ನು ಮಾತ್ರ ಸೂಚಿಸದೆ ವಿಶಾಲ ಅರ್ಥದಲ್ಲಿ ಬಳಸಲ್ಪಡುತ್ತದೆ. ದೇಹದ ಸದೃಢತೆ ಒಟ್ಟು ಸ್ವಾಸ್ಥ್ಯದ ಅಥವಾ ಆರೋಗ್ಯದ ಒಂದು ಘಟಕ ಮಾತ್ರ. ಇವೆಲ್ಲವುಗಳನ್ನು ಯೋಚಿಸಿ ಜಾಗತಿಕ ಆರೋಗ್ಯ ಸಂಸ್ಥೆಯವರು ಆರೋಗ್ಯದ ವ್ಯಾಖ್ಯೆಯನ್ನು ಹೀಗೆ ಕೊಟ್ಟಿರುತ್ತಾರೆ: "ಆರೋಗ್ಯವೆಂದರೆ ಕೇವಲ ದೇಹ ರೋಗದಿಂದ ಮುಕ್ತವಿದ್ದರೆ ಮಾತ್ರವಲ್ಲ. ಅದು ಮಾನಸಿಕ ಸ್ವಾಸ್ಥ್ಯ ಹಾಗು ಸಾಮಾಜಿಕ ಸ್ವಾಸ್ಥ್ಯಗಳನ್ನು ಒಳಗೊಂಡ ಸಂಪೂರ್ಣ ಸಾಮರಸ್ಯ ಜೀವನ". ಕಾರಣ ವ್ಯಕ್ತಿಯ ಆರೋಗ್ಯದಲ್ಲಿ ದೇಹ, ಮನಸ್ಸು ಹಾಗು ಸಾಮಾಜಿಕ ಜೀವನಗಳು ಸಮ ಘಟಕಗಳು. ಈ ಮೂರು ಘಟಕಗಳು ಸಾಮರಸ್ಯ ಹೊಂದಿದ್ದು ಆರೋಗ್ಯವಾಗಿದ್ದರೆ ಮಾತ್ರ ವ್ಯಕ್ತಿಯು ಆರೋಗ್ಯವಂತನಾಗುವನು.

ಆರೋಗ್ಯ ಶಿಕ್ಷಣ ಪದದ ಅರ್ಥವೇನು?

'ಆರೋಗ್ಯ ಶಿಕ್ಷಣ' ಪದವು 'ಆರೋಗ್ಯ ಬೋಧನೆ' ಎಂಬ ಸರಳ ಅರ್ಥವನ್ನು ಕೊಡುವದು. ಕೆಲವು ತಜ್ಞರ ಅಭಿಪ್ರಾಯದಲ್ಲಿ ಈ ಪದದಲ್ಲಿ ಕೇವಲ ಆರೋಗ್ಯ ಪಾಠಗಳ ಬೋಧನೆ ಎಂಬ ಅರ್ಥ ಬರುತ್ತದೆಯೇ ವಿನಃ ಆರೋಗ್ಯ ಪಾಠಗಳ ಆಚರಣೆಯು ಸಾಧ್ಯವಿಲ್ಲ. ಈ ಕುಂದನ್ನು ಸರಿಪಡಿಸಲು ಇತ್ತೀಚೆಗೆ ಕೆಲವು ತಜ್ಞರು "ಆರೋಗ್ಯಕ್ಕಾಗಿ ಶಿಕ್ಷಣ" ಎಂಬ ಪದವನ್ನು ಬಳಕೆಯಲ್ಲಿ ತರಲು ಯತ್ನಿಸುತ್ತಿರುವರು. ಈ ಪದದಲ್ಲಿ ಬೋಧನೆ ಹಾಗು ಆಚರಣೆಗಳೆರಡನ್ನೂ ಅಡಗಿಸಲಾಗಿದೆ, ಕಾರಣ 'ಆರೋಗ್ಯ

ಶಿಕ್ಷಣ' (Health Education) ಪದಕ್ಕಿಂತ 'ಆರೋಗ್ಯಕ್ಕಾಗಿ ಶಿಕ್ಷಣ' (Education for Health) ಎಂಬುದು ಹೆಚ್ಚು ಸಮಂಜಸವೆನಿಸುವದು. ಆದರೂ 'ಆರೋಗ್ಯ ಶಿಕ್ಷಣ' ಪದವು ಬಹುಕಾಲ ಬಳಸಿದ ಪದವಾದುದರಿಂದ ಹೆಚ್ಚಿನ ಜನರು ಇನ್ನೂ ಇದನ್ನೇ ಬಳಸುತ್ತಿದ್ದಾರೆ. ಈ ಲೇಖನದಲ್ಲಿಯೂ ಇದೇ ಪದ ಬಳಸಲಾಗಿದೆ. ಆರೋಗ್ಯ ಶಿಕ್ಷಣದ ವ್ಯಾಖ್ಯೆಯನ್ನು ಹಲವಾರು ಜನರು ಹಲವಾರು ರೀತಿಗಳಲ್ಲಿ ವಿವರಿಸುತ್ತಾರೆ. ಕೆಲವರ ವಿಚಾರದಂತೆ "ಆರೋಗ್ಯ ಶಿಕ್ಷಣವು ಒಂದು ಮಾದರಿಯ ಶೈಕ್ಷಣಿಕ ವಿಧಾನ. ಇದರಲ್ಲಿ ಆರೋಗ್ಯ ಶಿಕ್ಷಕರು ಜನತೆಯಲ್ಲಿ ಉತ್ತಮ ಆರೋಗ್ಯದ ಬಗ್ಗೆ ತಿಳುವಳಿಕೆ ಮೂಡುವಂತೆ ಹಾಗು ಆರೋಗ್ಯಕಾರಕ ಆಚರಣೆಗಳಲ್ಲಿ ಆಸಕ್ತಿ ಬರುವಂತೆ ಪ್ರಭಾವ ಬೀರುತ್ತಾರೆ". ಇನ್ನು ಕೆಲವರ ಅಭಿಪ್ರಾಯದಲ್ಲಿ "ಆರೋಗ್ಯ ಶಿಕ್ಷಣವೆಂದರೆ ಉತ್ತಮ ಆರೋಗ್ಯದ ಬಗ್ಗೆ ತಿಳಿದ ಸಂಗತಿಗಳನ್ನು ಇಚ್ಛಿತ ವ್ಯಕ್ತಿ ಹಾಗು ಸಮಾಜದ ರೀತಿ ನೀತಿ ಮತ್ತು ಆಚರಣೆಗಳಲ್ಲಿ ರೂಪಾಂತರಿಸುವದು." ಮೊದಲನೆಯ ವ್ಯಾಖ್ಯೆಗಿಂತಲೂ ಎರಡನೆಯ ವ್ಯಾಖ್ಯೆಯು ಹೆಚ್ಚು ಸಮಂಜಸ.

ಆರೋಗ್ಯ ಶಿಕ್ಷಣದ ಧ್ಯೇಯವು ಸ್ವ-ಆರೋಗ್ಯವನ್ನು ವೃದ್ಧಿಗೊಳಿಸಲು ಹಾಗು ರಕ್ಷಿಸಲು ಹೆಣಗುವ ಜನರಿಗೆ ಸರ್ವವಿಧದಿಂದ ಸಹಾಯ ಮಾಡುವದಾಗಿದೆ. ಆರೋಗ್ಯ ರಕ್ಷಣದ ಪ್ರಥಮ ಅವಶ್ಯಕತೆಯೆಂದರೆ ಸಾರ್ವಜನಿಕರಲ್ಲಿ ಸ್ವ-ಆರೋಗ್ಯದ ಬಗ್ಗೆ ಆಸ್ಥೆ. ಆಸ್ಥೆಯೊಂದಿಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ಜನತೆಯಲ್ಲಿ ಆರೋಗ್ಯ ಶಿಕ್ಷಣದ ಅವಶ್ಯಕತೆಯನ್ನು ಹಾಗು ಅದನ್ನು ಬಾಲ್ಯಾವಸ್ಥೆಯಲ್ಲಿಯೇ ಪ್ರಾರಂಭಿಸುವ ಅಗತ್ಯವನ್ನೂ ತಿಳಿದ ಮೇಲೆ ಆರೋಗ್ಯ ಶಿಕ್ಷಣದ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸುವದು ಸೂಕ್ತ.

ಆರೋಗ್ಯ ಶಿಕ್ಷಣವನ್ನು ಮಕ್ಕಳಿಗೆ ಎರಡು ಹಂತಗಳಲ್ಲಿ ಕೊಡಬಹುದು. ಮೊದಲ ಹಂತವು ಮನೆಯಲ್ಲಿ ಪ್ರಾರಂಭವಾಗುತ್ತದೆ. ಎರಡನೆಯ ಹಂತವು ಶಾಲೆಯಲ್ಲಿ ಆರಂಭವಾಗುವದು. ಇವೆರಡನ್ನೂ ಬೇರೆ ಬೇರೆಯಾಗಿ ಸಮೀಕ್ಷಿಸಬೇಕು.

ಮನೆಯೇ ಮೊದಲ ಪಾಠಶಾಲೆ :

ಜೀವನಾವಶ್ಯಕವಾದ ಮೌಲ್ಯಗಳ ಅರಿವು ವ್ಯಕ್ತಿಗೆ ಮೊದಲು ಮನೆಯಲ್ಲಿಯೇ ಆಗುತ್ತದೆ. ಕುಟುಂಬದ ಪ್ರತಿ ವ್ಯಕ್ತಿಯೂ ಬೆಳೆಯುತ್ತಿರುವ ಮಗುವಿನ ಮನಸ್ಸಿನ ಮೇಲೆ ಪ್ರಭಾವ ಬೀರುತ್ತಲೇ ಇರುತ್ತಾನೆ. ಅಂತೆಯೇ ಮಗುವೂ ಸಹ ಒಬ್ಬೊಬ್ಬ ರಿಂದ ಒಂದಿಲ್ಲೊಂದು ಗುಣವನ್ನು ಅಳವಡಿಸಿಕೊಳ್ಳುತ್ತಲೇ ಇರುತ್ತದೆ. ಪ್ರಭಾವ ಬೀರುವ ಎಲ್ಲ ವ್ಯಕ್ತಿಗಳಿಗಿಂತಲೂ ತಂದೆ ತಾಯಿಗಳ ಪಾತ್ರ ಬಹು ಹಿರಿದು.

ನಿತ್ಯ ಆರೋಗ್ಯ ರೂಢಿಗಳು:

ಮಗುವು ಕುಟುಂಬದ ಸದಸ್ಯರ ಪರಿಸರದಲ್ಲಿ ಬೆಳೆಯುತ್ತಿರುವಾಗ ತನಗಿಂತಲೂ ಹಿರಿಯರಾದವರನ್ನು ಅನುಸರಿಸುವದು ಸಾಮಾನ್ಯ. ಕುಟುಂಬದವರೆಲ್ಲರೂ ನಿತ್ಯವೂ

ಆರೋಗ್ಯಕಾರಕ ಆಚರಣೆಗಳನ್ನು ಪಾಲಿಸುತ್ತಿದ್ದರೆ ಮಗುವು ಅವೇ ಆಚರಣೆಗಳನ್ನು ರೂಢಿಸಿಕೊಳ್ಳುವದು. ಉದಾಹರಣೆಗಾಗಿ ನಸುಕಿನಲ್ಲಿ ಏಳುವದು, ತಕ್ಕಮಟ್ಟಿಗೆ ವ್ಯಾಯಾಮ ಮಾಡುವದು. ಸರಿಯಾಗಿ ಹಲ್ಲುಜ್ಜುವದು. ಕಕ್ಕಸಕ್ಕೆ ತಪ್ಪದೇ ನಿತ್ಯ ಹೋಗುವದು. ಕಕ್ಕಸದಿಂದ ಹೊರಬಂದ ಮೇಲೆ ಕೈಕಾಲುಗಳನ್ನು ಸೋಪಿನಿಂದ ತೊಳೆಯುವದು. ಶುಚಿಯಾಗುವಂತೆ ಸ್ನಾನ ಮಾಡುವದು. ಉಗುರುಗಳನ್ನು ಕತ್ತರಿಸಿ ನಿರ್ಮಲವಾಗಿಡುವದು. ತಲೆಕೂದಲನ್ನು ಸ್ವಚ್ಛವಾಗಿ ನಿಯಮಿತವಾಗಿ ತೊಳೆಯುವದು, ನಿತ್ಯವೂ ಕೂದಲನ್ನು ಓರಣವಾಗಿ ಬಾಚಿಕೊಳ್ಳುವದು, ನಿರ್ಮಲವಾದ ಬಟ್ಟೆಗಳನ್ನು ಧರಿಸುವದು ಮುಂತಾದ ಆಚರಣೆಗಳು ಮಗುವಿನಲ್ಲಿ ಬಂದು ಬಿಡುತ್ತವೆ. ಮಕ್ಕಳು ಇವುಗಳನ್ನು ಆಚರಿಸಲು ಪ್ರಯತ್ನಿಸುವಾಗ ಅವಕ್ಕೆ ಉತ್ತಮ ತಿಳುವಳಿಕೆ ನೀಡಬೇಕು. ಸರಿಯಾದ ಆಚರಣೆಯ ವಿಧಾನ ತಿಳಿಸಿದರೆ. ಅದರ ಮಹತ್ವವನ್ನು ಮನವರಿಕೆ ಮಾಡಿ ಕೊಟ್ಟರೆ ಇನ್ನೂ ಉತ್ತಮ. ಬಾಲ್ಯದಲ್ಲಿ ಕಲಿತ ಈ ಆರೋಗ್ಯ ಪಾಠಗಳೇ ವ್ಯಕ್ತಿಯ ಆರೋಗ್ಯವನ್ನು ಕಾಪಾಡುವ ಕವಚಗಳಾಗುತ್ತವೆ.

ಆರೋಗ್ಯಕರ ವಸತಿ:

ಅನಾರೋಗ್ಯಕರವಾದ ಮನೆಯು ಹಲವಾರು ರೋಗಗಳಿಗೆ ದಾರಿ ಎಂಬ ಮಾತನ್ನು ಎಲ್ಲರೂ ಒಪ್ಪುವರು. ಆರೋಗ್ಯಕರವಾದ ಮನೆಯೆಂದರೆ ವೈಭವ ಅಲಂಕಾರಗಳಿಂದ ಕೂಡಿದ ಭವ್ಯ ಸೌಧವಲ್ಲ. ಆರೋಗ್ಯ ಶಿಕ್ಷಣದ ಪ್ರಕಾರ ಮನೆಯು ಕೆಲವು ಸೌಕರ್ಯಗಳನ್ನು ಪಡೆದಿರಬೇಕು. ಮನೆಗೆ ಸಾಕಷ್ಟು ಶುದ್ಧ ಹವೆ ಬರಬೇಕು. ಸಾಕಷ್ಟು ಸೂರ್ಯ ಪ್ರಕಾಶ ಬೀಳಬೇಕು. ಹವೆಯಾಡದ ಮನೆಗಳು ಶ್ವಾಸ ಮಾರ್ಗದ ಅನೇಕ ರೋಗಗಳಿಗೆ ಎಡೆ ಮಾಡುತ್ತವೆ. ಕ್ಷಯ. ಡಿಫ್ಥೀರಿಯಾ ಮುಂತಾದ ರೋಗಗಳ ಪ್ರಸಾರ ಹೆಚ್ಚುತ್ತದೆ. ಅನಾರೋಗ್ಯ ಬೆಳೆಯುತ್ತದೆ. ಸೂರ್ಯ ಪ್ರಕಾಶ ಬರದ ಮನೆಗಳಲ್ಲೂ ರೋಗಾಣುಗಳ ಹಾವಳಿ ಹೆಚ್ಚು. ಇನ್ನು ಸಾಕಷ್ಟು ಬೆಳಕು ಬಾರದ ಮನೆಗಳಲ್ಲಿ ಬೆಳೆಯುವ ಮಕ್ಕಳ ಕಣ್ಣಿಗೆ ಮಂದ ಬೆಳಕಿನಿಂದ ಹೆಚ್ಚು ಹೊರೆ ಬಿದ್ದು ದೃಷ್ಟಿದೋಷಗಳು ತೋರುತ್ತವೆ. ಮನೆಯಲ್ಲಿ ಜಿರಳೆಗಳು. ನೊಣಗಳು. ತಗಣಿ. ಸೊಳ್ಳೆ ಮುಂತಾದ ಕೀಟಕಗಳು ಇರಲು ಅನುಕೂಲವಾಗಿದ್ದರೆ ಆ ಮನೆಯು ರೋಗಗಳ ಕೂಪವಾಗುವದರಲ್ಲಿ ಸಂಶಯವಿಲ್ಲ. ಒಂದೊಂದು ಕೀಟವೂ ಹಲವಾರು ಪೀಡೆಗಳಿಗೆ ಕಾರಣವಾಗುವವು. ಇನ್ನು ಹಲವಾರು ಕೀಟಗಳನ್ನು ಪೋಷಿಸುತ್ತಿರುವ ಮನೆಗಳಲ್ಲಿ ಪೀಡೆಗಳ ಪ್ರಮಾಣವನ್ನು ಊಹಿಸಬಹುದು. ಇಂತಹ ಕೀಟಗಳ ಉಪದ್ರವ ಹಾಗೂ ಹಾನಿಗಳ ಬಗ್ಗೆ ಮಕ್ಕಳಿಗೆ ಹೇಳಬೇಕು. ಕೀಟ ನಿಯಂತ್ರಣ ವಿಧಾನಗಳಿಂದ ಅವನ್ನು ನಾಶ ಮಾಡುವ ರೀತಿಯನ್ನು ಅವರಿಗೆ ತೋರಿಸಬೇಕು. ಅದೇ ವೇಳೆಗೆ ಕೀಟ ನಿಯಂತ್ರಣದಲ್ಲಿ ಉಪಯೋಗಿಸಲ್ಪಡುವ ವಿಷಗಳನ್ನು ಮಕ್ಕಳು ಮುಟ್ಟದಂತೆ ದೂರವಿಟ್ಟಿರಬೇಕು. ಉತ್ತಮ ಮನೆಯು ಇನ್ನೂ ಏನು ಸೌಕರ್ಯಪಡೆದರೆ ಮನೆಯ ಸುತ್ತಲೂ ಉತ್ತಮ ವಾತಾವರಣ

ವಿರಬೇಕು. ಸುತ್ತಲಿನ ನಿರ್ಮಲತೆ ಜನರ ಆಹ್ಲಾದತೆಯನ್ನು ಹೆಚ್ಚಿಸುತ್ತದೆ. ಅದೇ ರೀತಿ ಮಲಿನ ವಾತಾವರಣ ಆರೋಗ್ಯವನ್ನು ಹಾಳು ಮಾಡುವದು. ಶುಚಿಗೊಳಿಸದ ಕಕ್ಕಸ, ಮಲಿಯುತ್ತಿರುವ ಬಚ್ಚಲು ನೀರು, ಕೊಳಚೆ, ಇವು ವ್ಯಕ್ತಿಯ ಮನಸ್ಸನ್ನು ಮುದುಡುವಂತೆ ಮಾಡುತ್ತವೆ. ಇವೆಲ್ಲವು ಮಹತ್ವದ ಪರಿಣಾಮವನ್ನು ಮಗುವಿನ ಮನಸ್ಸಿನ ಮೇಲೆ ಬೀರುತ್ತವೆ.

ಸಮತೋಲನ ಆಹಾರ ದೇಹದ ಶಕ್ತಿ ಹೆಚ್ಚಿಸುವಲ್ಲಿ, ರೋಗ ಪ್ರತಿಬಂಧಿಸುವಲ್ಲಿ ಬಹು ಪ್ರಮುಖ ಪಾತ್ರವಹಿಸುತ್ತದೆ. ಇಂತಹ ಆಹಾರದಲ್ಲಿ ಇಂತಹ ಜೀವನ ಸತ್ವ, ಲವಣ, ಖನಿಜಪದಾರ್ಥಗಳಿರುತ್ತವೆ ಎಂಬುದನ್ನು ತಿಳಿಸಬೇಕು. ಇಂತಹ ಆಹಾರ ಪದಾರ್ಥಗಳನ್ನು ಸೇವಿಸಿದರೆ ದೇಹವು ಈ ರೀತಿಯಾಗಿ ಬೆಳೆಯುತ್ತದೆ ಎಂದು ಹೇಳಬೇಕು. ಸಮತೋಲನ ಆಹಾರವನ್ನು ಸೇವಿಸದೆ ಹೋದರೆ ಯಾವ ತೊಂದರೆಗಳು ತೋರುತ್ತವೆ ಎಂಬ ಸಂಗತಿಗಳನ್ನು ಮಕ್ಕಳಿಗೆ ಸಚಿತ್ರವಾಗಿ ತಿಳಿಸಿದರೆ ಅವರು ಆಗಿನಿಂದಲೇ ಸರಿಯಾದ ಆಹಾರ ಸೇವಿಸಲು ಯತ್ನಿಸುವರು. ಇದರೊಡನೆ ಆಹಾರ ಪದಾರ್ಥ ಸರಿಯಾಗಿ ಇಡುವ, ಅವುಗಳನ್ನು ರಕ್ಷಿಸುವ ವಿಧಾನಗಳ ಪರಿಚಯ ಮಾಡಿಕೊಡಬೇಕು. ಆಹಾರವು ಕೆಟ್ಟಮೇಲೆ ಅದು ತೋರುವ ಗುಣಲಕ್ಷಣಗಳನ್ನು ವಿವರಿಸಬೇಕು. ಇದೇರೀತಿ ನೀರಿನಬಗ್ಗೆಯೂ ಕಾಳಜಿವಹಿಸಬೇಕು. ಶುದ್ಧ ನೀರಿನ ಅವಶ್ಯಕತೆ, ನೀರನ್ನು ರೋಗಾಣುಗಳಿಂದ ಮುಕ್ತಗೊಳಿಸುವ ಉಪಾಯ ಮುಂತಾದವುಗಳ ಪರಿಚಯ ಮಕ್ಕಳಿಗೆ ಆಗಬೇಕು.

ಮಾನಸಿಕ ಆರೋಗ್ಯ :

ಕುಟುಂಬದ ಜನರಲ್ಲಿಯ ಸಾಮರಸ್ಯವು ಮಗುವಿನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಮಾಡುವದು. ಒಂದು ಕುಟುಂಬದಲ್ಲಿ ಸಮಾಧಾನ ಶಾಂತಿ ನೆಲೆಸಬೇಕಾದರೆ ವ್ಯಕ್ತಿಗಳಲ್ಲಿ ಒಳ್ಳೆಯ ತಿಳುವಳಿಕೆ ಹಾಗು ಸಂಯಮಗಳು ಬೇಕು. ವೈಯಕ್ತಿಕ ಆಶೆ-ಆಕಾಂಕ್ಷೆಗಳನ್ನು ಹಿರಿಯರು ಹಾಗು ಕಿರಿಯರು ಅನೇಕ ಸಲ ಕುಟುಂಬದ ಒಟ್ಟು ಶ್ರೇಯಸ್ಸಿಗೋಸ್ಕರ ಕೈಬಿಡಬೇಕಾಗುತ್ತದೆ. ಹೀಗೆ ಕುಟುಂಬದ ಪ್ರತಿ ಸದಸ್ಯನೂ ತನ್ನ ಕರ್ತವ್ಯದೊಡನೆ ಸುಖ ಸಂತೋಷಗಳನ್ನು ಭೋಗಿಸಬೇಕಾಗುವನು. ಬೆಳೆಯುತ್ತಿರುವ ಮಕ್ಕಳು ಪ್ರತಿ ಸಂಗತಿ ಹಾಗು ಪ್ರಸಂಗಗಳಿಗೆ ಪ್ರತಿಕ್ರಿಯೆಯನ್ನು ಬಹು ಚುರುಕಾಗಿ ತೋರಿಸುತ್ತವೆ. ಆನಂದಭರಿತ ಹಾಗು ಸಾಮರಸ್ಯ ತುಂಬಿದ ಕುಟುಂಬದಲ್ಲಿ ಬೆಳೆಯುತ್ತಿರುವಾಗ ಇನ್ನುಳಿದವರೊಡನೆ ಹೊಂದಿಕೊಂಡು ಜೀವಿಸಲು ಕಲಿಯುತ್ತದೆ. ಇದು ಉತ್ತಮ ಮಾನಸಿಕ ಆರೋಗ್ಯ. ಕಲಹ, ದ್ವೇಷ, ಅಸೂಯೆಗಳಿಂದ ತುಳುಕುವ ಜನರಲ್ಲಿ ಬೆಳೆಯುವ ಮಗುವು ದುಷ್ಟ ಗುಣಗಳನ್ನೇ ಪಡೆಯುತ್ತದೆ. ಸಮಾಜಕ್ಕೆ ಮುಳ್ಳಾಗುತ್ತದೆ. ಇದು ಮಾನಸಿಕ ಅನಾರೋಗ್ಯ. ಮನಸ್ಸು ಸ್ವಾಸ್ಥ್ಯವಿಲ್ಲದಿರುವಿಕೆಯು ಹಲವಾರು ಕಾರಣ

ಗಳನ್ನು ಅವಲಂಬಿಸಿದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ಕಾಣಿಸಲಾಗಿದೆ. ಇವುಗಳನ್ನು ಸಾಧ್ಯವಾದಷ್ಟು ತಡೆದರೆ ಮಕ್ಕಳಿಗೆ ಉತ್ತಮ ಆರೋಗ್ಯ.

ಮೊದಲನೆಯದಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆಹೋಗುವದು. ಪಟ್ಟಣಗಳಲ್ಲಿ ಜನ ನಿಬಿಡತೆ ಹೆಚ್ಚು. ವಾಸಿಸಲು ಯೋಗ್ಯ ಸ್ಥಳ ದೊರೆಯುವದು ಕಷ್ಟ. ಇದರಿಂದಲೇ ಕೊಳಚೆ ಪ್ರದೇಶಗಳ ನಿರ್ಮಾಣ, ಕೊಳಚೆ ಪ್ರದೇಶದಲ್ಲಿಯ ವಾಸ, ಜೀವನದ ಪ್ರತಿ ತಾಸಿಗೂ ಅನಿಶ್ಚಿತತೆ, ಬಿಡುವಿಲ್ಲದ ಓಡಾಟಗಳು ಬೆಳೆಯುತ್ತಿರುವ ಮಕ್ಕಳ ಮನಸ್ಸನ್ನು ಮುದುಡಿಸುತ್ತವೆ. ಇಂಥ ಮಕ್ಕಳ ಮಾನಸಿಕ ಸ್ವಾಸ್ಥ್ಯ ಸರಿ ಇರಲು ಕಷ್ಟ. ಇಂಥ ಅನಾರೋಗ್ಯ ಮಕ್ಕಳ ಸಂಖ್ಯೆ ಪಟ್ಟಣಗಳಲ್ಲಿ ಹೆಚ್ಚು. ಎರಡನೆಯದಾಗಿ ನೌಕರಿಯಲ್ಲಿರುವ ತಾಯಂದಿರದು. ಕೆಲಸದಲ್ಲಿರುವ ತಾಯಿಯು ದಿನದ ಬಹುಭಾಗವನ್ನು ಮನೆಯ ಹೊರಗೆ ಕಳೆಯಬೇಕಾಗುತ್ತದೆ. ಅಂದರೆ ಮಗುವಿನಿಂದ ದೂರ ಇರಬೇಕಾಗುತ್ತದೆ. ಇಂಥ ಮಕ್ಕಳು ತಾಯಿಯ ಪ್ರೀತಿ. ಹಿತನುಡಿ ಮತ್ತು ಬೋಧನೆಗಳಿಂದ ವಂಚಿತರಾಗುವರು. ಇಂಥ ವಂಚನೆ ಮಕ್ಕಳ ಮನಸ್ಸನ್ನು ಕೆಡಿಸಿಬಿಡಲು ಶಕ್ಯವಿದೆ. ಈ ವಿಷಯದಲ್ಲಿ ಸಾಕಷ್ಟು ಸಂಶೋಧನೆಗಳ ಅಗತ್ಯವಿದೆ. ಕಾರಣ ಆರೋಗ್ಯಶಿಕ್ಷಣವಲ್ಲಿ ಕುಟುಂಬ ಬಹು ಮಹತ್ವದ ಸಂಸ್ಥೆ.

ಶಾಲೆಯಲ್ಲಿ ಆರೋಗ್ಯ ಶಿಕ್ಷಣ :

ಮನೆಯ ತರುವಾಯ ಮಕ್ಕಳು ಆರೋಗ್ಯ ಶಿಕ್ಷಣವನ್ನು ಪಡೆಯುವದು ಶಾಲೆಯಲ್ಲಿ. ಶಾಲಾ ಆರೋಗ್ಯಶಿಕ್ಷಣವನ್ನು ಕೆಳಗಿನಂತೆ ಮೂರು ಭಾಗಗಳಲ್ಲಿ ವಿಂಗಡಿಸುತ್ತಾರೆ.

(i) ಶಾಲಾ ಆರೋಗ್ಯ ತಪಾಸಣೆ
(ii) ಆರೋಗ್ಯ ಪಾಠಗಳ ಬೋಧನೆ
(iii) ಆರೋಗ್ಯಕರ ಪರಿಸರವುಳ್ಳ ಶಾಲಾಜೀವನ

ಶಾಲಾ ಆರೋಗ್ಯ ತಪಾಸಣೆ :

ಮಕ್ಕಳ ಪ್ರಸ್ತುತ ಆರೋಗ್ಯದ ಸ್ಥಿತಿಗತಿಗಳನ್ನು ತಿಳಿಯಲು ನಡೆಸುವ ಪರೀಕ್ಷೆಗಳು ಇದರ ಮಿತಿಯಲ್ಲಿ ಬರುತ್ತವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ದೇಹದ ಪೂರ್ಣ ಪರೀಕ್ಷೆ, ದೃಷ್ಟಿಪರೀಕ್ಷೆ. ಕಿವಿ ಪರೀಕ್ಷೆ. ಹಲ್ಲುಗಳ ಪರೀಕ್ಷೆ, ಎತ್ತರ ಹಾಗು ತೂಕಗಳ ಅಳತೆ, ನಿರ್ಮಲತೆಯ ಪರೀಕ್ಷೆ ಮುಂತಾದವುಗಳು. ಇವುಗಳನ್ನು ವೈದ್ಯಕೀಯ ಸಿಬ್ಬಂದಿಯವರು ನಡೆಸುತ್ತಾರೆ. ವರ್ಗದ ಶಿಕ್ಷಕರು, ಆಟದ ಶಿಕ್ಷಕರು ಮಗುವಿನ ಆರೋಗ್ಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ಟಿಪ್ಪಣಿ ಮಾಡಿ ವೈದ್ಯರ ಗಮನಕ್ಕೆ ತರಬೇಕು. ವರ್ಗದಲ್ಲಿ ಮಗುವು ಪಾಠದ ಕಡೆಗೆ ಲಕ್ಷ್ಯಕೊಡುವದೋ ಇಲ್ಲವೋ? ಶಾಲಾ ಚಟುವಟಿಕೆಗಳಲ್ಲಿ ಮಗುವು ಆಸಕ್ತಿಹೊಂದಿದೆಯೋ ಇಲ್ಲವೋ ? ಇತ್ಯಾದಿಗಳನ್ನು

ಶಿಕ್ಷಕರೇ ಅವಲೋಕಿಸುವರು. ಇದೇ ರೀತಿ ಮಕ್ಕಳ ಊಟ ಹಾಗು ವಿಹಾರಗಳ ಮೇಲ್ವಿಚಾರಣೆ ನಡೆಸುವ ಶಿಕ್ಷಕರು ಮಗುವಿನ ನಿತ್ಯ ಹಸಿವು ಆಸಕ್ತಿಗಳ ವಿಷಯದಲ್ಲಿ ತಮ್ಮ ಅವಲೋಕನೆಯನ್ನು ಟಿಪ್ಪಣಿ ಮಾಡುವರು. ಇವೆಲ್ಲ ಸಂಗತಿಗಳೂ ಆರೋಗ್ಯ ತಪಾಸಣೆಯ ಪಟ್ಟಿಯಲ್ಲಿ ಬರುತ್ತವೆ. ಆರೋಗ್ಯ ಪರೀಕ್ಷೆಗಳು ಪ್ರತಿ ವರ್ಷದ ಅಥವಾ ಆರು ತಿಂಗಳಿಗೊಮ್ಮೆ ನಡೆಯುವುವು. ಇದರಿಂದ ಮಕ್ಕಳ ವ್ಯಕ್ತಿಗತ ಆರೋಗ್ಯದ ಮಟ್ಟ ತಿಳಿಯುವದು. ಅಲ್ಲದೆ ಹಿಂದಿನ ಪರೀಕ್ಷೆಯ ವಿವರಗಳೊಡನೆ ತುಲನೆ ಮಾಡಲೂ ಸಾಧ್ಯ. ತುಲನೆಯಿಂದ ಮಗುವಿನ ಆರೋಗ್ಯ ವೃದ್ಧಿಸಿದೆಯೋ ಅಥವಾ ಕುಂದಿದೆಯೋ ತಿಳಿಯುವದು. ಇವೆಲ್ಲ ಸಂಗತಿಗಳು ಪಾಲಕರಿಗೆ ಉತ್ತಮ ಮಾರ್ಗದರ್ಶಿಗಳಾಗುತ್ತವೆ. ಅದೇರೀತಿ ಶಿಕ್ಷಕರಿಗೂ ಇವು ಬಹಳ ಅನುಕೂಲವಾಗುವವು. ಮಕ್ಕಳ ಆರೋಗ್ಯದ ಮಿತಿಗನುಸಾರವಾಗಿ ಶಿಕ್ಷಕರು ಅವರವರಿಗೆ ತಕ್ಕ ಆಟಪಾಠ, ಸಹೊಂದುವ ಆಹಾರ ಮುಂತಾದವುಗಳ ಏರ್ಪಾಡು ಮಾಡುತ್ತಾರೆ. ಆರೋಗ್ಯ ಪರೀಕ್ಷೆಯಲ್ಲಿ ಕಂಡುಬಂದ ದೋಷಗಳನ್ನು ತಿದ್ದಬಹುದಾಗಿದ್ದರೆ ಅವುಗಳನ್ನು ಮಗುವಿನ ಗಮನಕ್ಕೆ ತರಬೇಕು. ಆಗ ಮಗುವು ಕುಂದುಗಳನ್ನು ನಿವಾರಿಸುವಲ್ಲಿ ಅನ್ವಯಿಸುತ್ತದೆ. ಕುಂದುಗಳು ಕೆಲವೊಮ್ಮೆ ತೀಕ್ಷ್ಣವಾಗಿರುವುವು. ಇವುಗಳ ಉಪಚಾರ ಶಾಲಾ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರಲಾರದು. ಕಾರಣ ಇವುಗಳನ್ನು ತ್ವರಿತವಾಗಿ ಪಾಲಕರ ಗಮನಕ್ಕೆ ತರುವದು ಶಾಲಾಶಿಕ್ಷಕರ ಕರ್ತವ್ಯ.

ಆರೋಗ್ಯ ಪರೀಕ್ಷೆಯೊಡನೆ ವೈದ್ಯರು ಹಾಗು ಅಧಿಕಾರಿಗಳು ಮಕ್ಕಳ ರೋಗನಿರೋಧಕ ಶಕ್ತಿಯ ಕಡೆಗೂ ಗಮನಕೊಡಬೇಕು. ಯಾವ ಯಾವ ರೋಗ ನಿರೋಧಕ ಲಸಿಕೆಗಳನ್ನು ಮಗುವಿಗೆ ಕೊಟ್ಟಿದೆ ಎಂಬುದನ್ನು ಪರಿಶೀಲಿಸಬೇಕು. ಆಯಾ ವಯಸ್ಸು, ಋತುಮಾನಕ್ಕನುಸಾರವಾಗಿ ರೋಗನಿರೋಧಕ ಲಸಿಕೆ ಉಪಚಾರ ಮಾಡುವದು ಅತ್ಯವಶ್ಯ. ಯಾವದೇ ವಿದ್ಯಾರ್ಥಿಯು ಸಾಂಕ್ರಾಮಿಕ ರೋಗದಿಂದ ಬಳಲುತ್ತಿದ್ದರೆ ವಿದ್ಯಾರ್ಥಿಯನ್ನು ಕೂಡಲೆ ಶಾಲೆಯಿಂದ ಬೇರ್ಪಡಿಸಿ ವೈದ್ಯರ ಕಡೆಗೆ ಕಳಿಸುವದು ಮುಂತಾದವುಗಳು ಶಾಲಾ ಆರೋಗ್ಯದ ಪರಿಮಿತಿಯಲ್ಲಿ ಬರುತ್ತವೆ.

ಆರೋಗ್ಯ ಪಾಠಗಳ ಬೋಧನೆ:

ಶಾಲಾ ಆರೋಗ್ಯ ಶಿಕ್ಷಣದಲ್ಲಿ ಇದು ಒಂದು ಪ್ರಮುಖ ಭಾಗ. ಆರೋಗ್ಯ ಪಾಠಗಳ ಬೋಧನೆ ಮಕ್ಕಳ ಮನಸ್ಸಿಗನುಸಾರ ನಡೆಯಬೇಕು. ಮಕ್ಕಳು ಪ್ರಾರಂಭಾವಸ್ಥೆಯಲ್ಲಿ ಆರೋಗ್ಯಕಾರಕ ಅಭ್ಯಾಸಗಳ ಮಹತ್ವ ತಿಳಿಯಬೇಕು. ಅಭ್ಯಾಸಗಳಿಂದ ಆಗುವ ಲಾಭಗಳನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಆಗ ಮಕ್ಕಳಲ್ಲಿ ಆರೋಗ್ಯಕಾರಕ ಅಭ್ಯಾಸಗಳು ಬೆಳೆಯುತ್ತವೆ. ಪ್ರಾಥಮಿಕ ಶಾಲೆಯಿಂದ ಮಾಧ್ಯಮಿಕ ಶಾಲೆಗೆ ಹೋಗುವಷ್ಟರಲ್ಲಿ ಅವರಿಗೆ ಸಾಮಾಜಿಕ ಆರೋಗ್ಯ ನಿಯಮ

ಗಳನ್ನು ತಿಳಿಯುವ ಹಾಗು ಆಚರಿಸುವ ಆತುರತೆ ಮೂಡಿರುತ್ತದೆ. ಪರಸ್ಪರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವದರಿಂದ ಎಲ್ಲರಿಗೂ ಲಾಭವೆಂದು ಬೇಗನೆ ಅರ್ಥವಾಗುತ್ತದೆ. ಮೂರನೆಯ ಹಂತದಲ್ಲಿ ರೋಗಗಳ ಅಲ್ಪ ಪರಿಚಯ ಅವುಗಳನ್ನು ತಡೆಯುವ ವಿಧಾನ ಮುಂತಾದವನ್ನು ಬೋಧಿಸಬೇಕು. ಆರೋಗ್ಯ ಪಾಠಗಳ ಬೋಧನೆಯಲ್ಲಿ ಕಥೆ, ಕವನ ಚಿತ್ರ ಹಾಗೂ ರೂಪಕ ಮುಂತಾದವುಗಳ ಸಹಾಯ ತೆಗೆದುಕೊಂಡರೆ ಬೋಧನೆ ಹೆಚ್ಚು ಫಲಕಾರಿಯಾಗುವದು.

ಆರೋಗ್ಯಕರ ಪರಿಸರ :

ಶಾಲಾ ಆರೋಗ್ಯ ಶಿಕ್ಷಣದಲ್ಲಿ ಮೂರನೆಯ ಭಾಗವೆಂದರೆ ಆರೋಗ್ಯಕಾರಕ ಪರಿಸರವುಳ್ಳ ಶಾಲಾಜೀವನ. ಮಕ್ಕಳಿಗೆ ಕೊಡುವ ಆರೋಗ್ಯ ಶಿಕ್ಷಣದಲ್ಲಿ ಶಾಲೆಯ ವಾತಾವರಣವು ಬಹು ಮಹತ್ವದ ಪಾತ್ರವನ್ನು ವಹಿಸುತ್ತದೆ. ಪಾಠದ ಕೊಠಡಿ, ಫಲಹಾರ ಸ್ಥಳ, ಶಾಲೆಯ ಸುತ್ತಲ ಪರಿಸರ ಉತ್ತೇಜಕರವೂ, ಆಹ್ಲಾದಕರವೂ ಆಗಿರಬೇಕು. ಅದರಂತೆ ಮೂತ್ರ ವಿಸರ್ಜನೆ ಸ್ಥಳ, ಕಕ್ಕಸಗಳು ನಿರ್ಮಲವಾಗಿರಬೇಕು. ಪರಿಸರದ ನಿರ್ಮಲತೆಯನ್ನು ಕಾಪಾಡುವದರಲ್ಲೂ, ಅದನ್ನು ಹೆಚ್ಚಿಸುವದರಲ್ಲೂ ಮಕ್ಕಳು ಭಾಗವಹಿಸುವಂತೆ ಮಾಡಬೇಕು. ಇವೆಲ್ಲವುಗಳಲ್ಲೂ ಆಸ್ಥೆವಹಿಸುವ ಮಕ್ಕಳು ನಿರ್ಮಲತೆಯ ಮಹತ್ವವನ್ನು ಅರಿತು ಯಾವಾಗಲೂ ಅದನ್ನು ಆಚರಣೆಯಲ್ಲಿ ತರಲು ಯತ್ನಿಸುವರು.

ಒಟ್ಟಿನಲ್ಲಿ ಆರೋಗ್ಯ ಶಿಕ್ಷಣವನ್ನು ಪಡೆದ ಮಕ್ಕಳು ಆ ನಾಡಿನ ಭಾಗ್ಯವೆಂದು ಪರಿಗಣಿಸಬೇಕು. ಆರೋಗ್ಯ ಶಿಕ್ಷಣಕ್ಕೆ ಸರಕಾರದವರು ಆದ್ಯಗಮನ ಕೊಡಬೇಕು. ಅದು ಸರಿಯಾಗಿ ನಡೆಯುವಂತೆ ಸಾರ್ವಜನಿಕರೂ ಒತ್ತಾಯಿಸಬೇಕು. ಆಗ ನಾಡಿನ ಕೀರ್ತಿಗೆ ಆರೋಗ್ಯದಿಂದ ಶೋಭಿಸುವದು. ನಾಡಿನ ರಕ್ಷಣೆ ಏಳಿಗೆಗಳು ನಿರಾಯಾಸವಾಗಿ ನಡೆಯುವವು. ಇಂತಹ ಮಹತ್ವದ ಶಿಕ್ಷಣದಿಂದ ನಮ್ಮ ಮಕ್ಕಳನ್ನು ನಾವು ವಂಚಿತಗೊಳಿಸಿದರೆ ನಾಳೆ ಅವರು ನಮ್ಮನ್ನು ಏನೆಂದು ಕರೆದಾರು ?

ಸಂಪೂರ್ಣ ಆರೋಗ್ಯವೆಂದರೆ ದೈಹಿಕ, ಮಾನಸಿಕ ಹಾಗು ಸಾಮಾಜಿಕ ಸ್ವಾಸ್ಥ್ಯಗಳ ಸಾಮರಸ್ಯದ ಸ್ಥಿತಿ. ಇದನ್ನು ಪಡೆಯಲು ಮಕ್ಕಳಿಗೆ ಆರೋಗ್ಯ ಶಿಕ್ಷಣ ಅತ್ಯಗತ್ಯ. ಆರೋಗ್ಯ ಶಿಕ್ಷಣವು ಪ್ರಾರಂಭವಾಗುವದು ಮನೆಯಲ್ಲಿಯೇ. ಶಾಲೆಯಲ್ಲಿ ಅದು ಮುಂದುವರೆಯುವದು. ಮಕ್ಕಳು ಈ ಶಿಕ್ಷಣದಿಂದ ಯಾವದೇ ಕಾರಣ ಅಥವ ನೆಪದಿಂದಲೂ ವಂಚಿತಗೊಳ್ಳಬಾರದು.

ಮಕ್ಕಳು ಹಾಗೂ ಜನಸಂಖ್ಯಾ ಶಿಕ್ಷಣ

● ಕೆ. ಶೇಷಗಿರಿ ರಾವ್

ಮಕ್ಕಳು ರಾಷ್ಟ್ರದ ಸಂಪತ್ತು :

ಮಾನವ ಸಮಾಜಕ್ಕೆ ಪ್ರಕೃತಿ ನೀಡಿರುವ ಒಂದು ಅಮೂಲ್ಯವಾದ ಕಾಣಿಕೆ, ಮಕ್ಕಳು. ಇದುವರೆಗೆ ಮಾನವ ಸಮಾಜ ಬದುಕಿ ಉಳಿದಿರಲು ಕಾರಣರಾದ ಮಕ್ಕಳು ಯಾವುದೇ ರಾಷ್ಟ್ರದ ಅಥವಾ ಕುಟುಂಬದ ಅತ್ಯಮೂಲ್ಯ ಸಂಪತ್ತು. ಅವರು ಜನಾಂಗದ ಭವಿಷ್ಯದ ಪ್ರಗತಿ ಕುರಿತ ಭರವಸೆಯ ಸಂಕೇತ.

ಮಕ್ಕಳನ್ನು ಹೊಂದಿರುವ ದೃಷ್ಟಿಯಿಂದ ಪರಿಶೀಲಿಸಿದಾಗ ಭಾರತವನ್ನು ಅತ್ಯಂತ ಸಂಪದ್ಭರಿತ ರಾಷ್ಟ್ರವೆಂದು ಪರಿಗಣಿಸಬಹುದು. ಭಾರತೀಯರಿಗೆ ಮಕ್ಕಳೆಂದರೆ 'ಮಾಣಿಕ್ಯ', 'ಮಾನವನಿಗೆ ದೇವರಿತ್ತ ವರ', 'ದಾಂಪತ್ಯದ ಸಾಫಲ್ಯ'. ಇದರಿಂದ 'ಮಕ್ಕಳಿರಲವ್ವ ಮನೆ ತುಂಬ'. ಎಂದು ಬಯಸಿ 'ಅಷ್ಟ ಪುತ್ರ ಸೌಭಾಗ್ಯವತೀ ಭವ' ಎಂದು ಹಾರೈಸುವುದು ನಮ್ಮ ಸಂಪ್ರದಾಯ. ಪರಿಣಾಮವಾಗಿ ಇಂದು ಮಕ್ಕಳ ಸಮೃದ್ಧಿ. ಎಲ್ಲಿ ನೋಡಿದರಲ್ಲಿ ಮಕ್ಕಳು. ಹತ್ತು ಜನ ಇರುವ ಕಡೆ ನಾಲ್ವರು ಮಕ್ಕಳು. ೧೯೮೧ರಲ್ಲಿದ್ದ ಸುಮಾರು ೬೮ ಕೋಟಿ ಭಾರತೀಯರಲ್ಲಿ ೨೮ ಕೋಟಿ ಹದಿನಾಲ್ಕು ವಯಸ್ಸಿನೊಳಗಿನ ಮಕ್ಕಳು. ಭಾರತದ ಇಂತಹ ವಿಪುಲ ಸಂಪತ್ತು–ಭಾವಿ ನಾಗರಿಕರು, ಭಾವಿ ಮಾತಾಪಿತರು.

ಈಗ್ಗೆ ಕೆಲವೇ ದಶಕಗಳ ಹಿಂದೆ ಪರಿಸ್ಥಿತಿ ವ್ಯತ್ಯಾಸವಿತ್ತು. ಪ್ರತಿ ಕುಟುಂಬದ ತಪಸ್ಸು 'ದೇವರೇ, ಬಹಳ ಜನ ಗಂಡು ಮಕ್ಕಳನ್ನು ಕೊಡು', ಅವರಿಗೆ ಪೂರ್ಣಾಯುಸ್ಸು ಕೊಡು; ಅವರ ಸಂತತಿ ಸಾವಿರವಾಗಲಿ. ಈ ತಪಸ್ಸಿನ ಗುರಿ ವಂಶ ಮುಂದುವರಿಯ ಬೇಕು; ಹಾಗಾಗಲು ಬಹಳ ಮಕ್ಕಳಿರಬೇಕು. ಒಬ್ಬಿಬ್ಬರಿದ್ದರೆ ಸಾಲದು. 'ಅಷ್ಟ ಪುತ್ರರು ಇರಲಿ. ಮದುವೆಯಾಗಿ ಬಂದ ಸೊಸೆ ದೇವರಲ್ಲಿ ನೊಂದುಕೊಂಡು ಕೇಳಬೇಕು ತಪ್ಪಾದರೆ ದೇವರಿಗೆ ಹರಕೆ. ಅವಳು ತಾಯಿಯಾಗುವುದನ್ನು ಬಹು ಕಾತರದಿಂದ ಕಾಯ ಬೇಕು. ಭವಿಷ್ಯ ಅವಳ ಮಡಿಲಲ್ಲಿ ಹಸುಗೂಸು, ಹಾಗಾಗಿ ೧೯೪೧ ಅಂತಹ ಒಬ್ಬ ಅವರ

ದಂಪತಿಗೆ ತಂದೆ ತಾಯಿ ಆಗುವುದನ್ನು ಕುರಿತ ಕಾತರದ ನಿರೀಕ್ಷೆ. ಸೊಸೆ ತಾಯಿಯಾಗಲಿರುವ ಸೂಚನೆ ತಿಳಿದೊಡನೆ ಅವಳತ್ತ ಎಲ್ಲರ ದೃಷ್ಟಿಯೂ ಕೇಂದ್ರ. ವಂಶೋದ್ಧಾರಕನನ್ನು ಮನೆಗೆ ತರುವವಳೆಂದು ಅವಳಿಗೆ ಬಯಕೆಗಳನ್ನು ಪೂರೈಸುವ ಧಾರಾಳ ಪ್ರಯತ್ನ. ಹೆರಿಗೆಯ 'ಯಮಬಾಗಿಲ' ದಾಟಿದಾಗ ಮತ್ತು ತಾಯಿಯಂದಿರಲ್ಲಿ ಹರ್ಷ ಉಕ್ಕಿತು. ಮಗು ಹುಟ್ಟಿದೊಡನೆ ಅದು ಬದುಕೀತೇ ಎನ್ನುವ ಭಯ. ತಾಯಿಯನ್ನು ಉಳಿಸಿಕೊಳ್ಳಬೇಕೋ, ಮಗುವನ್ನು ಉಳಿಸಿಕೊಳ್ಳಬೇಕೋ ಎನ್ನುವ ಸಂದಿಗ್ಧ ಪರಿಸ್ಥಿತಿಯಲ್ಲಿ. ಹೇಗಾದರೂ ಸರಿ. ಮಗು 'ವಂಶದ ಕುಡಿ' ಉಳಿದರೆ ಸಾಕು ಎನ್ನುವ ಪ್ರಯತ್ನ. ಇಷ್ಟು ತಪಸ್ಸು ಮಾಡಿ ಹುಟ್ಟಿದುದು ಗಂಡಾಗಿ ಬದುಕಿ ಉಳಿದರೆ ಇಡೀ ಕುಟುಂಬವೇ ಸಡಗರದ ಆಗರ. ಹೆಣ್ಣಾಯಿತು, ಯಾವ ಲೆಕ್ಕ. ಮತ್ತೆ ಗಂಡಾಗುತ್ತದೆ. ಅಂತೂ ಸೊಸೆ ತಾಯ್ತನದ ಶಕ್ತಿ ಹೊಂದಿದ್ದಾಳಲ್ಲ. ಹೀಗೆ ವಂಶಾಭಿವೃದ್ಧಿಯು ಕಾರಣ ಹಲವು ಮಕ್ಕಳು ಬೆಳೆಯುತ್ತಿದ್ದುದು ಕೇವಲ ಆಕಸ್ಮಿಕವಾಗಿ ಕುಟುಂಬದ ಒಬ್ಬ ಸದಸ್ಯನಾದ 'ಆ ಶಿಶುವಿನ ಸಂರಕ್ಷಣೆ ಮನೆಯ ಹಿರಿಯರಿಗೆ ಸೇರಿದ್ದು. ಮಕ್ಕಳನ್ನು ಸಾಕುವ ಬಗ್ಗೆ ಚಿಂತಿಸದೆ ಮುಂದುವರಿಯಾಗಿ ಸಂತತಿ ಬೆಳೆಸಬೇಕು ಎನ್ನುವುದು ಸಂಪ್ರದಾಯ; ಅಂದಿನ ಅವಶ್ಯಕತೆ.

ಇಂದು ಪರಿಸ್ಥಿತಿಯಲ್ಲಿ ವ್ಯತ್ಯಾಸವಾಗಿದೆ. ಹುಟ್ಟಿದ ಮಗು ಹೇಗೋ, ಎಲ್ಲೋ ಗುಂಪಿನೊಳಗೆ ಗೊತ್ತಿಲ್ಲದಂತಾಗಿ ಬೆಳೆಯುವಂತಿಲ್ಲ. ಈ ಮಾನವ ಶಿಶುವಿಗೆ ಪ್ರಾಣಿ ವರ್ಗಕ್ಕೆ ಸಹಜವಾದ ಹುಟ್ಟಿನೊಡನೆ ಬರುವ ಶಾರೀರಿಕ ಸ್ವಾವಲಂಬನೆಯಿಲ್ಲ. ಬೇರೆಯವರ ಸಹಾಯ ಮತ್ತು ಸಹಕಾರದಿಂದ ಮಾತ್ರ ಬದುಕಬಲ್ಲ ಪರಾವಲಂಬಿ ಈ ಮಾನವ ಶಿಶು. ಇಂದು ಶಿಶು ಕೇವಲ ಬೆಳೆದು ಮಗುವಾಗಿ, ದೊಡ್ಡವನಾಗಿ, ಮುಂದುವರಿಯಾಗಿ ಸಂತಾನ ಬೆಳೆಸಿದರೆ ಸಾಲದು. ಹುಟ್ಟಿದ ಪ್ರತಿ ಮಾನವ ಶಿಶುವೂ ಸಂಪೂರ್ಣ ಬೆಳವಣಿಗೆ ಹೊಂದಬೇಕು. ದೈಹಿಕವಾಗಿ ಶಕ್ತಿವಂತನಾಗಬೇಕು. ಸಾಮಾಜಿಕವಾಗಿ ಕರ್ತವ್ಯಶಾಲಿಯಾಗಬೇಕು. ಮಾನಸಿಕವಾಗಿ ವಿಚಾರಶೀಲನೂ, ಪ್ರಜ್ಞಾವಂತನೂ ನೀತಿಯುತನೂ ಮತ್ತು ಜವಾಬ್ದಾರಿಯನ್ನು ಹೊರುವವನೂ ಆಗಬೇಕು. ಈ ಬೆಳವಣಿಗೆ ಕೋಟಿ ಮಕ್ಕಳ ಜನ್ಮಸಿದ್ಧ ಹಕ್ಕು. ಅವರು ಸಂಪೂರ್ಣ ಮಾನವರಾಗಿ ಬೆಳೆಯಲು ಅವಶ್ಯಕವಾದ ಪ್ರೀತಿ, ವಾತ್ಸಲ್ಯ ಹಾಗೂ ವಾತಾವರಣವನ್ನು ಒದಗಿಸುವುದು ಮಾತಾಪಿತರ, ಸಮಾಜದ, ರಾಷ್ಟ್ರದ ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಭಾರತ ಯಾವ ರೀತಿಯಲ್ಲಿ ಮುಂದುವರಿಯುತ್ತಿದೆ ಎಂದು ವಿಚಾರಿಸಿದರೆ ಈ ಮಾನವ ಸಂಪತ್ತಿನ ಬಗ್ಗೆ ಭಾರತೀಯರಿಗೆ ಕಳಕಳಿಯೇ ಇಲ್ಲವೇನೋ ಎನ್ನಿಸುತ್ತದೆ. ಈ ಸಂಪತ್ತನ್ನು ಜತನದಿಂದ ಕಾಪಾಡಿಕೊಳ್ಳಲಾರದ, ಬಲಯುತ ಬೆಳೆಸಲಾರದ ರಾಷ್ಟ್ರ ಹೇಗೆ ತಾನೆ ತನ್ನ ಪ್ರಗತಿಯನ್ನು ಸಾಧಿಸಬಲ್ಲದು? ಪ್ರತ್ಯಕ್ಷವಾಗಿ ಇಂದು ಜನಿಸುತ್ತಿರುವ ಪ್ರತಿ ಶಿಶುವೂ ಕಾಲಿಡುತ್ತಿರುವುದು ಬದುಕಲು ಅಸಾಧ್ಯವಾದ ವಾತಾವರಣದಲ್ಲಿ. ಆ ಮಗುವಿಗೆ ಹುಟ್ಟುತ್ತಿರುವಾಗಲೇ ಮಾತನಾಡುವ ಶಕ್ತಿ ಇದ್ದಿದ್ದರೆ ಅದು ಕೇಳುತ್ತಿದ್ದ ಪ್ರಶ್ನೆ ಏನು? "ನಾನು

ನಿಮಗೆ ನನ್ನ ಅವಶ್ಯಕತೆ ಇತ್ತೇ? ನನಗೆ ಉಸಿರಾಡಲು ಸ್ವಚ್ಛ ಹವೆ ಇದೆಯೇ? ಬದುಕಲು ಸಮೃದ್ಧಿಯಿದೆಯೇ? ಬೆಳೆಯಲು ತಾಯ್ತಂದೆಯರ ಒಲವಿದೆಯೇ? ವಿದ್ಯಾವಂತನಾಗಲು ಸೌಲಭ್ಯಗಳಿವೆಯೇ? ನಂತರ ಉದ್ಯೋಗವಿದೆಯೇ? ಬಡತನದಿಂದ, ಅವಿವೇಕದಿಂದ, ಅಜ್ಞಾನದಿಂದ, ಅನಾಸಕ್ತಿಯಿಂದ ಜೊತೆಗೆ ಶಾರೀರಿಕ, ಮಾನಸಿಕ ಹಾಗೂ ಸಾಮಾಜಿಕ ದೌರ್ಬಲ್ಯದಿಂದ ನರಳುತ್ತಿರುವ ಭಾರತಕ್ಕೆ ನನ್ನನ್ನೇಕೆ ಬರಮಾಡಿಕೊಂಡಿರಿ?''

ಈ ಪ್ರಶ್ನೆಗಳನ್ನು ಈ ಸಮೃದ್ಧನಿರುವ ೨೫ ಕೋಟಿ ಮಕ್ಕಳು ಕೇಳುತ್ತಿದ್ದಾರೆ. ಅವರು ಕೇಳುತ್ತಿರುವಂತೆ ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ; ಏಕೆ ಹೀಗಾಯಿತು? ಇದನ್ನು ನಾವು ಬಯಸಿದ್ದೇವೆಯೇ?

ಜನಸಂಖ್ಯಾ ಸಮಸ್ಯೆ :

ಪ್ರಪಂಚದ ಇತರ ಎಲ್ಲ ರಾಷ್ಟ್ರಗಳ ಜನರಂತೆ ಭಾರತೀಯರೂ ಹೆಚ್ಚು ಮಕ್ಕಳನ್ನು ಬಯಸುತ್ತಿದ್ದುದು ಸಹಜ; ಬರಸಿಡಿಲಂತೆ ಹೇಳದೆ ಕೇಳದೆ ಬರುತ್ತಿದ್ದ ಸಾವಿನ ಹೊಡೆತದಿಂದ ಸಮಾಜವನ್ನು ಉಳಿಸಿಕೊಳ್ಳಲು ಇದು ಅಗತ್ಯವಾಗಿತ್ತು. ಸಾಯುವವರ ಸಂಖ್ಯೆ ಒಂದು ಸಾವಿರ ಜನರಲ್ಲಿ ಐವತ್ತಕ್ಕೂ ಹೆಚ್ಚಾಗಿದ್ದಾಗ ಹೇಗಾದರೂ ಸರಿ ಮಕ್ಕಳನ್ನು ಪಡೆಯಬೇಕಿತ್ತು. ಮದುವೆ ಬಹುಶಃ ಈ ಕಾರ್ಯಕ್ರಮದತ್ತ ಮುನ್ನಡೆಯಲು ಕೈಗೊಂಡ ಮಹತ್ವಪೂರ್ಣ ಸಾಮಾಜಿಕ ನಿರ್ಧಾರ. ಕುಟುಂಬ ಈ ದಿಸೆಯಲ್ಲಿ ಮತ್ತೊಂದು ಹೆಜ್ಜೆ. ಹೇಗಾದರೂ ಮಾಡಿ ಕುಟುಂಬದ ಹೆಸರನ್ನು ಮುಂದುವರಿಸಿಕೊಂಡು ಹೋಗಬೇಕು ಎನ್ನುವ ದೃಢ ನಿರ್ಧಾರ. ಪ್ರಕೃತಿಯ ಎದುರು ಬದುಕಿಗಾಗಿ ಹೋರಾಟ. ನೂರಾರು ವರ್ಷಗಳ ಸತತ ಪ್ರಯತ್ನ. ಅಂತೂ ಜನಸಂಖ್ಯೆಯ ಬೆಳವಣಿಗೆ.

ಭಾರತ ಸ್ವತಂತ್ರ ರಾಷ್ಟ್ರವಾಗಿ ತನ್ನ ಆರ್ಥಿಕ ಬೆಳವಣಿಗೆಗಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿಕೊಂಡಾಗ ಜನಸಂಖ್ಯೆ ಸಮಸ್ಯೆಯಾಗಿ ಕಂಡಿರಲಿಲ್ಲ. ಹಿಂದಿದ್ದ ದಶಕದ ಬೆಳವಣಿಗೆಯನ್ನೇ ಗಮನದಲ್ಲಿರಿಸಿಕೊಂಡು. ೧೯೫೧–೬೦ ರಲ್ಲಿ ಜನಸಂಖ್ಯೆ ಪ್ರತಿ ವರ್ಷಕ್ಕೆ ಶೇ. ೧.೩ ರಷ್ಟು ಬೆಳೆಯುತ್ತದೆ ಎಂದು ನಿರ್ಧರಿಸಿ. ಅದರ ಆಧಾರದ ಮೇಲೆ ಯೋಜನಾ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಯಿತು. ಆದರೆ ಈ ದಶಕದಲ್ಲಿ ಜನಸಂಖ್ಯೆ ಬೆಳೆದ ವೇಗ ಪ್ರತಿವರ್ಷ ಶೇ. ೨.೨ ರಷ್ಟು. ಈ ಹೆಚ್ಚಿದ ಬೆಳವಣಿಗೆಯನ್ನೂ ಗಮನದಲ್ಲಿಟ್ಟುಕೊಂಡು ೧೯೬೧–೭೦ ದಶಕದಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದಂತೆ. ಆ ದಶಕದ ಬೆಳವಣಿಗೆ ಪ್ರತಿವರ್ಷ ಶೇ. ೨.೨ಕ್ಕೆ ಬದಲಾಗಿ ೨.೫ಕ್ಕೆ ಏರಿತು.

ಇದರಿಂದ ಒಮ್ಮೆಲೆ ಜನಸಂಖ್ಯೆಯ ಬೆಳವಣಿಗೆ ! ೧೯೦೧ ರಲ್ಲಿದ್ದ ಜನಸಂಖ್ಯೆ ೨೪ ಕೋಟಿ; ೧೯೫೧ ರಲ್ಲಿ ೩೬ ಕೋಟಿ; ೧೯೭೧ ರಲ್ಲಿ ೫೫ ಕೋಟಿ. ಸ್ವಾತಂತ್ರ್ಯಪೂರ್ವದ

೩೦ ವರ್ಷಗಳಲ್ಲಿ ಕೇವಲ ೭ ಕೋಟಿ ಹೆಚ್ಚಾದರೆ. ಸ್ವಾತಂತ್ರ್ಯಾನಂತರದ ೨೦ ವರ್ಷಗಳಲ್ಲಿ ೧೯ ಕೋಟಿ ಹೆಚ್ಚು.

ಪರಿಣಾಮ, ಜೀವನದ ಎಲ್ಲ ರಂಗಗಳಲ್ಲೂ ಮೌಲ್ಯದ ಕುಸಿತ. ಎಲ್ಲ ಸಾಧನ ಸಂಪತ್ತುಗಳನ್ನುಳ್ಳ ಅಮೇರಿಕಾ ದೇಶ ೫೦ ವರ್ಷಗಳಲ್ಲಿ ಸಾಧಿಸಿದ ಆಹಾರ ಪ್ರಗತಿಯನ್ನು ಕೇವಲ ೧೫ ವರ್ಷಗಳಲ್ಲಿ ಭಾರತ ಸಾಧಿಸಿದರೂ ಇದೇ ಸಂದರ್ಭದಲ್ಲಿ ಪ್ರತಿ ವ್ಯಕ್ತಿಗೆ ದೊರಕುತ್ತಿದ್ದ ಆಹಾರದಲ್ಲಿ ಇಳಿತ. ೧೯೫೦ರಲ್ಲಿ ೧೨.೮ ಔನ್ಸ್ ಪ್ರತಿ ವ್ಯಕ್ತಿಗೆ, ಪ್ರತಿ ದಿನ, ದೊರಕುವ ಸಾಧ್ಯತೆ ಇದ್ದರೆ. ೧೯೬೬ ರಲ್ಲಿ ಸಾಧ್ಯವಾದ ಪ್ರಮಾಣ ೧೨.೪ ಔನ್ಸ ಮಾತ್ರ. ಅಗತ್ಯವಿರುವ ೧೪ ಔನ್ಸಿಗೆ ಬದಲು ೧೨.೪ ಔನ್ಸ ಸರಾಸರಿ ದೊರಕಿದರೆ ಹಣವಿದ್ದವನು ಅಗತ್ಯಕ್ಕಿಂತಲೂ ಹೆಚ್ಚು ಕೊಂಡು, ಹೆಚ್ಚು ತಿಂದು. ಹೆಚ್ಚು ಹಾಳು ಮಾಡಿದ. ಅದೇ ಸಮಯದಲ್ಲಿ, ಹಣವಿಲ್ಲದವನಿಗೆ ಆಹಾರವೇ ಇಲ್ಲ. ತತ್ಫಲವಾಗಿ ಇಂದು ಸುಮಾರು ೨೦ ಕೋಟಿ ಜನರಿಗೆ ಆಹಾರದ ಕೊರತೆ. ಆಹಾರದ ಉತ್ಪಾದನೆಯಲ್ಲೂ ಸಮತೋಲನವಿಲ್ಲ. ಅಕ್ಕಿ, ರಾಗಿ, ಜೋಳ, ಗೋದಿ ಮೊದಲಾದ ಆಹಾರ ಪದಾರ್ಥಗಳನ್ನು ಬಿಟ್ಟರೆ ಉಳಿದೆಲ್ಲ ವಸ್ತುಗಳ ಅಂದರೆ, ದ್ವಿದಳ ಧಾನ್ಯಗಳು, ಹಾಲು, ಮಾಂಸಾಹಾರಿ ಪದಾರ್ಥಗಳು, ತರಕಾರಿ, ಹಣ್ಣು, ಎಣ್ಣೆ, ಸಕ್ಕರೆ ಮೊದಲಾದ ಅಗತ್ಯ ಆಹಾರಪದಾರ್ಥಗಳ ಉತ್ಪಾದನೆ ಅಗತ್ಯದ ಅರ್ಧಕ್ಕಿಂತಲೂ ಕಡಿಮೆ.

ಈ ಕೊರತೆಯಿಂದಾಗಿ ತಾಯಿಯಾಗಲಿರುವ ಮಹಿಳೆ ಹಾಗೂ ಬೆಳೆಯುತ್ತಿರುವ ಮಕ್ಕಳಿಗೆ ಅಗತ್ಯವಾದ ಸಮತೋಲ ಆಹಾರದ ಕೊರತೆ. ಉದಾಹರಣೆಗೆ ತಾಯಿಯಾಗಲಿರುವ ಮಹಿಳೆಗೆ ಪ್ರತಿದಿನ ೨೮೫ ಗ್ರಾಂ ಹಾಲು ಮತ್ತು ಹಾಲಿನ ವಸ್ತುಗಳ ಅಗತ್ಯವಿದ್ದು, ಅವಳಿಗೆ ದೊರೆಯುತ್ತಿರುವುದು ಕೇವಲ ೪೧ ಗ್ರಾಂ. ಇದೇ ರೀತಿ ಅಗತ್ಯವಾದ ೩೦೦ ಗ್ರಾಂ ತರಕಾರಿಯಲ್ಲಿ ಅವಳಿಗೆ ದೊರೆಯುತ್ತಿರುವುದು ಕೇವಲ ೨೮ ಗ್ರಾಂ. ಇನ್ನು ಶಾಲೆಗೆ ಹೋಗುವ ಮೊದಲು ಮಕ್ಕಳಿಗೆ ದೊರಕುತ್ತಿರುವ ಆಹಾರದ ವಿಷಯ ತೆಗೆದುಕೊಂಡರೆ ಪ್ರತಿದಿನ ಅಗತ್ಯವಾದ ಅನ್ನ–ರೊಟ್ಟಿಯಿಂದ ಹಿಡಿದು ಪ್ರತಿಯೊಂದು ಪದಾರ್ಥದಲ್ಲಿಯೂ ಕೊರತೆ. ಅಕ್ಕಿ ಇತ್ಯಾದಿ ಪದಾರ್ಥಗಳು ೧೮೫ ಗ್ರಾಮಿಗೆ ೧೬೨ ಗ್ರಾಂ; ದ್ವಿದಳ ಧಾನ್ಯ ೫೦ ಗ್ರಾಮಿಗೆ ೧೦ ಗ್ರಾಂ; ಎಣ್ಣೆ ಪದಾರ್ಥಗಳು ೨೩ ಗ್ರಾಮಿಗೆ ೩ ಗ್ರಾಂ; ಎಲೆ ತರಕಾರಿ ೬೩ ಗ್ರಾಮಿಗೆ ೨ ಗ್ರಾಂ; ಇತರ ತರಕಾರಿ ೪೦ ಗ್ರಾಮಿಗೆ ೧೦ ಗ್ರಾಂ; ಹಣ್ಣು ೫೦ ಗ್ರಾಮಿಗೆ ೭ ಗ್ರಾಂ; ಸಕ್ಕರೆ ೩೭ ಗ್ರಾಮಿಗೆ ೬ ಗ್ರಾಂ. ಅಗತ್ಯಕ್ಕಿಂತ ಅತಿ ಕಡಿಮೆ ಸಮತೋಲ ಆಹಾರವನ್ನು ಪಡೆದ ಮಕ್ಕಳು ಸಂಪೂರ್ಣವಾಗಿ ಶಾರೀರಕ ಹಾಗೂ ಮಾನಸಿಕ ಬೆಳವಣಿಗೆಯನ್ನು ಹೇಗೆ ಹೊಂದಲು ಸಾಧ್ಯ? ಈ ಆಹಾರದ ಕೊರತೆಯಿಂದ ಅನೇಕ ಮಕ್ಕಳು ಸಾವಿಗೆ ತುತ್ತಾಗುತ್ತಾರೆ. ಅವರು ಅದೃಷ್ಟಶಾಲಿಗಳು. ಏಕೆಂದರೆ, ಕೊರತೆಗೆ ಸಿಕ್ಕೂ ಬದುಕಿ ಉಳಿದವರಲ್ಲಿ ದೇಹ ಬೆಳೆಯುವುದಿಲ್ಲ. ಬುದ್ಧಿ ವಿಕಸಿಸುವುದಿಲ್ಲ. ಇವರು ತಮ್ಮ ಜೀವನದ ಜೊತೆ ಇತರರ ಜೀವನದ ಹೊರೆಯನ್ನೂ

ಹೊತ್ತು ಸಂತೋಷವಿಲ್ಲದೆ, ಬಾಲ್ಯದ ಮಧುರ ಜೀವನವಿಲ್ಲದೆ ನೋವಿನಿಂದ ನರಳುತ್ತಾ ಬಹುಬೇಗ ಹಿರಿಯರಾಗುತ್ತಾರೆ. ಅಕಾಲಿಕ ಮುದುಕರಾಗುತ್ತಾರೆ. ಹುಟ್ಟಿದ ನಾಲ್ಕು ವರ್ಷಗಳಲ್ಲಿ ಮಿದುಳಿನ ಶೇ ೯೦ ಭಾಗ ಬೆಳವಣಿಗೆಯಾಗುತ್ತದೆ. ಸಮತೋಲ ಆಹಾರ ಈ ಬೆಳವಣಿಗೆಗೆ ಸಹಕಾರಿ. ಅಂತಹ ಸಮತೋಲ ಆಹಾರವಿಲ್ಲದೆ ಹೋದಾಗ ಆ ರೀತಿ ಕೊರತೆಗೆ ಒಳಗಾದವರಲ್ಲಿ ಶೇ ೨೫ರಷ್ಟು ಮಕ್ಕಳಿಗೆ ಬುದ್ಧಿ ಬೆಳವಣಿಗೆ ಸಂಪೂರ್ಣ ನಾಶವಾಗುತ್ತದೆ: ಶೇ ೧೦ರಷ್ಟು ಮಕ್ಕಳಂತೂ ಸಂಪೂರ್ಣವಾಗಿ ಅಪ್ರಯೋಜಕರಾಗುತ್ತಾರೆ. ಇವರಲ್ಲಿ ಬಹುಭಾಗ ನಿರುದ್ಯೋಗಿಗಳಾಗುತ್ತಾರೆ. ಅಲ್ಲದೆ ಉದ್ಯೋಗ ಮಾಡಲು ಅಸಮರ್ಥರಾಗುತ್ತಾರೆ. ಈ ದುರಂತ ಕಥೆ ಇಲ್ಲಿಗೆ ಕೊನೆಗೊಳ್ಳುವುದಿಲ್ಲ. ಇವರೆಲ್ಲ ಮದುವೆಯಾಗಿ ಮುಂದಿನ ಮೂರು ತಲೆಮಾರಿನವರೆಗೆ ತಮ್ಮ ದುರಂತವನ್ನು ಹಂಚಿಕೊಳ್ಳುತ್ತಾರೆ. ಪರಿಣಾಮ ಮಾತ್ರ ಇಡೀ ರಾಷ್ಟ್ರ ಅನುಭವಿಸಬೇಕಾಗುತ್ತದೆ. ಇದನ್ನು ಅನುಭವಿಸಲೇಬೇಕಾದ ಪ್ರಸಂಗವನ್ನು ತಪ್ಪಿಸಬೇಕಲ್ಲವೆ ? ಹೇಗೆ ತಪ್ಪಿಸಬೇಕು ?

ಜನಸಂಖ್ಯಾ ಶಿಕ್ಷಣ:

ಜೀವನದ ಅನೇಕ ಸಮಸ್ಯೆಗಳ ಬೆನ್ನೆಲುಬಾಗಿದ್ದು, ಜೀವನದ ಎಲ್ಲಾ ಕ್ಷೇತ್ರಗಳ ಮೇಲೂ ಪ್ರಭಾವ ಬೀರುತ್ತಿರುವ ಜನಸಂಖ್ಯೆಯನ್ನು ಕುರಿತ ವಿವೇಕಪೂರ್ಣ ಅರಿವಿನ ಪ್ರಯತ್ನವೇ ಜನಸಂಖ್ಯಾ ಶಿಕ್ಷಣ. "ಪ್ರತಿ ವ್ಯಕ್ತಿ ಅಗತ್ಯವಾದ ವಾಸ್ತವಿಕ ಮನೋಭಾವಗಳನ್ನು ಅಂತರ್ಗತಗೊಳಿಸಿಕೊಂಡು ಮಾನವ ತನ್ನ, ತನ್ನ ಕುಟುಂಬದ ಹಾಗೂ ತನ್ನ ರಾಷ್ಟ್ರದ ಆಗುಹೋಗುಗಳನ್ನು ನಿಯಂತ್ರಿಸಬಲ್ಲ ಮತ್ತು ಅನುಸರಿಸಬೇಕಾದ ಮಾರ್ಗವನ್ನು ನಿರ್ಧರಿಸಬಲ್ಲ ಎನ್ನುವ ನಂಬಿಕೆಯನ್ನು ಬಲಪಡಿಸಿಕೊಂಡು ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ನ್ಯಾಯಗಳನ್ನು ಆಧಾರವಾಗುಳ್ಳ ಕಲ್ಯಾಣ ರಾಷ್ಟ್ರವನ್ನು ಕಟ್ಟಬೇಕೆಂಬ ವಿಶಾಲ ದೃಷ್ಟಿಯ ವ್ಯಾಪ್ತಿಯಲ್ಲಿ ಜನಸಂಖ್ಯಾ ಸಮಸ್ಯೆಯನ್ನು ಕುರಿತ ತಿಳುವಳಿಕೆ ಮೂಡಿಸುವ ಶೈಕ್ಷಣಿಕ ಪ್ರಯತ್ನವೇ ಜನಸಂಖ್ಯಾ ಶಿಕ್ಷಣ" (ಶೇಷಗಿರಿ ರಾವ್ ೧೯೭೦). ಜೀವನದ ಸಂಪನ್ನತೆಯನ್ನು ಹೆಚ್ಚಿಸಿಕೊಳ್ಳುವ ಮಾನವ ಪ್ರಯತ್ನದ ಮೇಲೆ ಉಂಟಾಗುವ, ಜನಸಂಖ್ಯಾ ಬೆಳವಣಿಗೆಯ ನೇರ ಹಾಗೂ ಪ್ರಾಸಂಗಿಕ ಪರಿಣಾಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅವಶ್ಯಕವಾದ ತೀರ್ಮಾನಗಳನ್ನು ಕೈಗೊಳ್ಳಲು ಹಾಗೂ ಜೀವನ ಮೌಲ್ಯಗಳನ್ನೂ, ಸಂಬಂಧಿತ ವರ್ತನೆಗಳನ್ನೂ ಬದಲಾಯಿಸಿಕೊಳ್ಳಲು ಸಹಾಯಕವಾಗುವುದೇ ಜನಸಂಖ್ಯಾ ಶಿಕ್ಷಣದ ಗುರಿ.

ಪ್ರತಿ ಮಾತಾ–ಪಿತರೂ 'ಎಷ್ಟು ಸಾಧ್ಯವೋ ಅಷ್ಟು ಮಕ್ಕಳನ್ನು ಹಡೆಯುವುದರ ಮೂಲಕ' ತಮ್ಮ ಪಾಲಿನ ಕಾಣಿಕೆಯನ್ನೂ ಸಮಾಜಕ್ಕೆ ಸಲ್ಲಿಸುತ್ತಾ ಹೋಗುವ ಪರಂಪರೆಗೆ ಬದಲಾಗಿ, ತಾತ್ಕಾಲಿಕ ಅವಶ್ಯಕತೆಯಾದ 'ಚಿಕ್ಕ ಕುಟುಂಬ'ವನ್ನು ತಾತ್ವಿಕವಾಗಿ ಒಪ್ಪಿ, ಸಾಮಾಜಿಕ ಪದ್ಧತಿಯಾಗಿ ಬೆಳೆಸಿಕೊಂಡು, ತಾವು ಚಿಕ್ಕ ಕುಟುಂಬಗಳನ್ನು

ಪಡೆಯುವುದರ ಜೊತೆಗೆ ಸುತ್ತಲಿನ ಇತರರಿಗೂ ಈ ಮಾರ್ಗದಲ್ಲಿ ಹೋಗುವಂತೆ ಪ್ರೋತ್ಸಾಹಿಸುವ ಕಾರ್ಯ ಸಾಧ್ಯವಾಗಬೇಕೆಂಬುದು ಜನಸಂಖ್ಯಾ ಶಿಕ್ಷಣದ ಕಾರ್ಯಕ್ರಮದ ಮೊದಲ ಅನಿಸಿಕೆ.

ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮ ಕುರಿತ ವಿಶ್ವದ ಮಾನವರಿಗೆ ಒಂದು ವಿಶೇಷತೆ. ಬಹುಶಃ ಇಷ್ಟು ಬೇಗ ಒಂದು ಕಾರ್ಯಕ್ರಮ ಎಲ್ಲಾ ರಾಷ್ಟ್ರಗಳಲ್ಲೂ ಕಾರ್ಯರೂಪಕ್ಕೆ ಬಂದುದು ಅಪೂರ್ವ. ಈ ಕಾರ್ಯಕ್ರಮದ ಪ್ರಾರಂಭದಲ್ಲಿಯೇ ಕುಟುಂಬ ಯೋಜನೆ ಹಾಗೂ ಶಿಕ್ಷಣ ವಿಭಾಗಗಳ, ಸರ್ಕಾರಿ, ಖಾಸಗಿ ಹಾಗೂ ಸ್ವಯಂಪ್ರೇರಿತ ಸೇವಾ ಸಂಸ್ಥೆಗಳ ಒಮ್ಮತದ ಸಹಕಾರದ ತೀರ್ಮಾನ. ಕೇವಲ ಒಂದು ದಶಕದೊಳಗೆ ಅನೇಕ ಕಾರ್ಯಕ್ರಮಗಳ ಪ್ರಾರಂಭ; ವಿಶ್ಲೇಷಣೆ; ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ, ವಿಶ್ವಸಂಸ್ಥೆಯ, ಸರಕಾರದ ನೆರವು. ಯಾವ ದೇಶದಲ್ಲಿಯೇ ಆಗಲಿ, ಯಾವ ಕ್ಷೇತ್ರದಲ್ಲಿಯೇ ಆಗಲಿ ಜನಸಂಖ್ಯೆಯ ಒತ್ತಡ ಗಮನೀಯ, ಗಣನೀಯ ಹಾಗೂ ಅನಿವಾರ್ಯ ಎನ್ನುವ ಅಂತರರಾಷ್ಟ್ರೀಯ ಅರಿವು.

ಶಾಲಾ ಕಾಲೇಜುಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ತಮ್ಮ ಮುಂದಿನ ವೈವಾಹಿಕ ಜೀವನದಲ್ಲಿ ಚಿಕ್ಕ ಕುಟುಂಬದ ಸೂತ್ರವನ್ನು ಸಾಮಾಜಿಕ ರೂಢಿಯನ್ನಾಗಿ ಅನುಸರಿಸಲು ಅನುವು ಮಾಡಿಕೊಡುವುದು ಜನಸಂಖ್ಯಾ ಶಿಕ್ಷಣದ ಮೊದಲು ಉದ್ದೇಶವಾದರೂ ಬಹುಬೇಗ ಕಾರ್ಯಕ್ರಮಗಳು ಮಕ್ಕಳ ಹಾಗೂ ವಿದ್ಯಾರ್ಥಿಗಳ ಹಂತ ದಾಟಿ ವಿಶಾಲ ಸಾಮಾಜಿಕ ಕ್ಷೇತ್ರ ತಲುಪಿತು. 'ಇಂದಿನ' ಮಾತಾಪಿತರು ಮತ್ತು 'ಮುಂದಿನ' ಮಾತಾಪಿತರನ್ನೂ ಶಾಲೆಯಲ್ಲಿಲ್ಲದ ಮಕ್ಕಳು ಹಾಗೂ ಯುವಕ-ಯುವತಿಯರನ್ನೂ ಅನೇಕ ಸಾಮಾಜಿಕ ಹಾಗೂ ಕ್ಷೇತ್ರ ಕಾರ್ಯಕರ್ತರನ್ನೂ ಜನಸಂಖ್ಯಾ ಶಿಕ್ಷಣ ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿತು. ಜನಸಂಖ್ಯಾ ಸಮಸ್ಯೆ ಕೇವಲ ವಿವಾಹಿತರಿಗೆ ಅಥವಾ ಇನ್ನೇನು ವಿವಾಹವಾಗಲಿರುವವರಿಗೆ ಮಾತ್ರ ಮೀಸಲಾಗಿರಬಾರದು ಎನ್ನುವ ಭಾವನೆಯ ಆಧಾರದ ಮೇಲೆ ಜನಸಂಖ್ಯಾ ಶಿಕ್ಷಣವು ವಯಸ್ಸಿನ. ಗಂಡು-ಹೆಣ್ಣಿನ. ಮದುವೆಯ, ಸಾಮಾಜಿಕ. ಶೈಕ್ಷಣಿಕ ಹಾಗೂ ಆರ್ಥಿಕ ಅಂತರಗಳನ್ನು ಮೀರಿ ಬೆಳೆಯಿತು. ಜನಸಂಖ್ಯಾ ಬೆಳವಣಿಗೆಯ ಕಾರಣ ತಮಗೆ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಉಂಟಾಗುವ ಸಮಸ್ಯೆಗಳು ಮತ್ತು ತಾವು ಈ ದಿಸೆಯಲ್ಲಿ ತಳೆಯಬೇಕಾಗಿರುವ ಕುಟುಂಬದ ಗಾತ್ರ ಕುರಿತ ಧೋರಣೆ. ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಡಮೂಡಿಸುವ ಒಂದು ಸಾಮಾಜಿಕ ಪರಿವರ್ತನಾ ಕಾರ್ಯಕ್ರಮದ ರೂಪ ತಾಳಿತು. ಶೈಕ್ಷಣಿಕ ರಂಗದಲ್ಲಿ ಸಾಮಾನ್ಯವಾಗಿರುವ ಶಿಕ್ಷಕರು ಮಾತ್ರ ತಿಳುವಳಿಕೆ ನೀಡಬಲ್ಲರು ಎನ್ನುವ ಸಾಂಪ್ರದಾಯಿಕ ನಂಬಿಕೆಯನ್ನು ಅಲುಗಾಡಿಸಿ. ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಜನಜೀವನವನ್ನು, ಜನಸಂಖ್ಯೆಯ ಏರುಪೇರುಗಳನ್ನು,

ಕುಟುಂಬದ ಗಾತ್ರದ ಪರಿಣಾಮಗಳನ್ನು, ಸಾಮಾಜಿಕ ಸಮಸ್ಯೆಗಳನ್ನು, ಕಣ್ಣಾರೆ ಕಂಡು, ಚರ್ಚಿಸಿ, ಅರಿಯಬಲ್ಲರೆಂಬ ಸೂತ್ರ ಶೈಕ್ಷಣಿಕ ಪದ್ಧತಿಗೆ ಹೊಸ ತಿರುವನ್ನು ಕೊಟ್ಟಿತು.

ಚಿಕ್ಕ ಕುಟುಂಬದ ಆದರ್ಶವನ್ನು ಶಿಕ್ಷಣ ಮೂಲಕ ಜನರಲ್ಲಿ ಒಡಮೂಡಿಸುವ ಕಾರ್ಯಕ್ರಮವಾಗಿದ್ದ ಜನಸಂಖ್ಯಾ ಶಿಕ್ಷಣ, ಇಂದು ಪ್ರತಿ ವ್ಯಕ್ತಿ ಜನಸಂಖ್ಯೆಯ ಬೆಳವಣಿಗೆಯಿಂದ ಉಂಟಾಗಿರುವ ಆರ್ಥಿಕ, ಸಾಮಾಜಿಕ, ಹಾಗೂ ಮಾನಸಿಕ ಸಮಸ್ಯೆ ಗಳನ್ನು ಸ್ವಯಂ ಅರಿತು, ಸಾಮಾಜಿಕ ಜವಾಬ್ದಾರಿಯಿಂದ ತನ್ನ ವರ್ತನೆಯನ್ನು ಹಾಗೂ ಸುತ್ತಲಿನ ಸಾಮಾಜಿಕ ವಾತಾವರಣವನ್ನು ಸಮಯಕ್ಕೆ ಉಚಿತವಾಗಿ ಬದಲಾಯಿಸಿ ಕೊಳ್ಳುವ ಪ್ರಯತ್ನಶೀಲತೆಗೆ ಸಹಕಾರಿಯಾಗುವ ಶೈಕ್ಷಣಿಕ ಪದ್ಧತಿಯಾಗಿ ಬೆಳೆದು ನಿಂತಿದೆ. ಜೊತೆಗೆ ನಾಲ್ಕು ಗೋಡೆಗಳ ನಡುವೆ ಪಠ್ಯಪುಸ್ತಕಕ್ಕೆ ಸೀಮಿತವಾದ, ಶಿಕ್ಷಕ ನೀಡಿದ ಶಿಕ್ಷಣವಾಗದೇ, ವಾತಾವರಣದಿಂದಲೇ ನೇರವಾಗಿ ಹಾಗೂ ಸಹಜವಾಗಿ ಕಲಿಯುವ ಶೈಕ್ಷಣಿಕ ವಿಧಾನವಾಗಿ ಪರಿವರ್ತನಗೊಳ್ಳುತ್ತಿದೆ.

ಮಕ್ಕಳು ಹಾಗೂ ಜನಸಂಖ್ಯಾ ಶಿಕ್ಷಣ:

ಜನಸಂಖ್ಯಾ ಶಿಕ್ಷಣವು ಶಾಲೆಯ ವ್ಯವಸ್ಥೆಗೆ ಸೀಮಿತವಾಗದೆ ಎಲ್ಲಾ ವಯೋ ಮಿತಿಯ ಗಂಡು-ಹೆಣ್ಣುಗಳಿಗೆ ಅಗತ್ಯ ಎನ್ನುವ ನಿಲುವನ್ನು ನಾವು ತಳೆದಿದ್ದರೂ ಸಹ, ಈ ರೀತಿಯ ಶಿಕ್ಷಣ ಮಕ್ಕಳಿಗೆ ಅತ್ಯಗತ್ಯ ಎನ್ನುವುದು ನಿರ್ವಿವಾದ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲದೆ ಅತ್ಯಂತ ಸ್ಪಷ್ಟವಾಗಿ ಜನಸಂಖ್ಯಾ ಸಮಸ್ಯೆಯ ಪ್ರಭಾವಕ್ಕೆ ಒಳಗಾಗುವವರು ಇಂದಿನ ಮಕ್ಕಳು ಮುಂದಿನ ನಾಗರೀಕರು, ಭಾವಿ ಮಾತಾ-ಪಿತರು. ಇವರು ಬರಲಿರುವ ಸಮಸ್ಯೆಗಳನ್ನು ತಪ್ಪಿಸಿಕೊಳ್ಳುವಂತಿಲ್ಲ. ಅದನ್ನು ನೇರವಾಗಿ ಎದುರಿಸಬೇಕಲ್ಲದೆ ತಮ್ಮ ಮನೋಭಾವ ಹಾಗೂ ವರ್ತನೆಗಳಿಂದ ಈ ಸಮಸ್ಯೆಯ ಉಬ್ಬರ-ಇಳಿತಗಳನ್ನು ಸಮನ್ವಯಗೊಳಿಸಬೇಕಾದ ಗುರುತರ ಜವಾಬ್ದಾರಿ ಹೊಂದಿರು ವವರು. ಅಲ್ಲದೆ, ತಮ್ಮ ಮುಂದಿನ ತಲೆಮಾರಿಗೆ ಅಗತ್ಯವಾದ ಜೀವನ ಮೌಲ್ಯ ಗಳನ್ನು ರೂಪಿಸುವುದರಲ್ಲಿ ಮಹತ್ತರ ಪಾತ್ರ ವಹಿಸುವವರು.

ಈಗ ಬೆಳೆಯುತ್ತಿರುವ ಮಕ್ಕಳು ಕಾಲ್ಪನಿಕ ಲೋಕದಲ್ಲಿ ಬೆಳೆಯಲು ಸಾಧ್ಯವಿಲ್ಲ. ಅವರಿಗೆ ತಮ್ಮ ಸುತ್ತ ಇರುವ ವಾತಾವರಣದ ಅರ್ಥವಾಗಬೇಕು. ಇತಿ-ಮಿತಿಗಳ ಬಡತನ ಅಜ್ಞಾನದ ವಾತಾವರಣದಲ್ಲಿಯೇ ತಾವು ಬೆಳೆಯಬೇಕು ಎನ್ನುವ ಸನ್ನಿವೇಶದ ನಿಜಸ್ವರೂಪ ತಿಳಿದಿರಬೇಕು. ಬಾಲ್ಯದ ಮಧುರತೆಯನ್ನು ಅಲ್ಪಕಾಲ ದಲ್ಲಿಯೇ ಕಳೆದುಕೊಂಡು ಅಕಾಲ ವಯಸ್ಕರಾಗುತ್ತಿರುವ ಇಂತಹ ಲಕ್ಷ ಲಕ್ಷ ಮಕ್ಕಳ ಕಾರ್ಯದಕ್ಷತೆಯನ್ನು ಅವಲಂಬಿಸಿಯೇ ಭಾರತದ ಆರ್ಥಿಕ ಮತ್ತು ಸಾಮಾಜಿಕ ವಿಕಾಸ

ಸಾಧ್ಯವಾಗಬೇಕಾಗಿದೆ. ಇಂತಹ ಭವಿಷ್ಯದ ಭಾರೀ ಹೊರೆ ಹೊರಬೇಕಾಗಿರುವವರು ಕೇವಲ ತಮ್ಮ ಜವಾಬ್ದಾರಿಯನ್ನು ಮಾತ್ರವಲ್ಲದೆ ಭಾರತೀಯನ ಹೆಚ್ಚುತ್ತಿರುವ ಆಯುಷ್ಯ ನಿರೀಕ್ಷೆಯ ಕಾರಣ 'ಸಾಯದ ಉಳಿಯುತ್ತಿರುವ' ಹೆಚ್ಚು ಹೆಚ್ಚು ವಯೋವೃದ್ಧರನ್ನು ಹೆಚ್ಚು ಹೆಚ್ಚು ಕಾಲ ಸಾಕಬೇಕಾದ ಮತ್ತು ಅವರಿಗೆ ಔಷದೋಪಚಾರ ನಡೆಸಬೇಕಾದ ಹೊಣೆಗಾರಿಕೆಯನ್ನೂ ನಿರ್ವಹಿಸಬೇಕಾಗುತ್ತದೆ. ಇದೂ ಅಲ್ಲದೆ ತಮ್ಮದೇ ಆದ ಕುಟುಂಬದ ಸದಸ್ಯರನ್ನು ಮತ್ತು ತಮ್ಮ ಮಕ್ಕಳನ್ನು ಸಾಕಬೇಕಾದುದಂತೂ ಸಹಜವೇ ! ಅಂದರೆ, ಹಳೆಯ ಭಾರೀ ಬಾಕಿ, ತನ್ನ ತಾತ್ಕಾಲಿಕ ಪರಿಸ್ಥಿತಿ ಹಾಗೂ ತನ್ನ ಭವಿಷ್ಯದ ಹೊರೆ ಇವೆಲ್ಲ ಜವಾಬ್ದಾರಿಗಳನ್ನೂ ನಿರ್ವಹಿಸಬೇಕಾದರೆ ಈಗ ಮಕ್ಕಳಾಗಿರುವ ಪ್ರತಿ ವ್ಯಕ್ತಿಯೂ ಹೆಚ್ಚಿನ ರೀತಿಯಲ್ಲಿ ಸತ್ವಶಾಲಿಯಾಗಬೇಕಾಗುತ್ತದೆ; ಕ್ರಿಯಾಶಾಲಿಯಾಗಬೇಕಾಗುತ್ತದೆ. ಇಂತಹ ಕ್ರಿಯಾಶಕ್ತಿತ್ವ, ಹಾಗೂ ಅದಕ್ಕೆ ಅಗತ್ಯವಾದ ಮನೋಭಾವಗಳನ್ನು ಕೇವಲ ಪಠ್ಯ ಪುಸ್ತಕಗಳ ಪರಂಪರಾನುಗತ ಅಕ್ಷರಜ್ಞಾನ ಒದಗಿಸಿ ಕೊಡಲು ಸಾಧ್ಯವಿಲ್ಲ. ಈ ಮಕ್ಕಳಿಗೆ ಜೀವನ ಶಿಕ್ಷಣ ಅಗತ್ಯವಾಗಿದೆ. ಅವರು ಹೆಚ್ಚು ಹೆಚ್ಚು ಸಾಮಾಜಿಕ, ಹಾಗೂ ಆರ್ಥಿಕ ಪ್ರಗತಿ ಕುರಿತ ಪ್ರಯತ್ನವನ್ನು ಕಣ್ಣಾರೆ ಕಂಡು, ಅನುಭವಿಸಿ ತಿಳಿದುಕೊಳ್ಳಬೇಕಾಗಿದೆ. ಇಂತಹ ಹೊಸ ರೀತಿಯ ಜನಸಂಖ್ಯಾ-ಹಿನ್ನೆಲೆ ಕುರಿತ ಸಾಮಾಜಿಕ ವಿಚಾರಕ್ರಾಂತಿಯನ್ನು ನಾವು ಜನಸಂಖ್ಯಾ ಶಿಕ್ಷಣದ ಮೂಲಕ ಮಕ್ಕಳಿಗೆ ನೀಡಬೇಕಾಗಿದೆ.

ಮಕ್ಕಳು ಅರಿಯಬೇಕಾದ ವಿಷಯಗಳು ಅನೇಕ. ಜನಸಂಖ್ಯೆ ಮಾನವನ ಲೆಕ್ಕಾಚಾರ ಮೀರಿ ಬೆಳೆಯುವುದರ ಕಾರಣದಿಂದ ಅಥವಾ ಅಗತ್ಯವಾಗಿ ಇರಬೇಕಾದ ಜನಸಂಖ್ಯೆಗಿಂತ ಅತಿ ಕಡಿಮೆ ಇರುವುದರಿಂದ. ವೈಯಕ್ತಿಕ ಕೌಟುಂಬಿಕ ಹಾಗೂ ರಾಷ್ಟ್ರೀಯ ಮಟ್ಟದ ಸಮಸ್ಯೆಗಳು ಉಂಟಾಗುತ್ತವೆ. ಈ ಸಮಸ್ಯೆಗಳು ಕ್ಲಿಷ್ಟವಾದುವು. ಕೆಲವೊಮ್ಮೆ ನೇರವಾಗಿ ಕಂಡುಬರುತ್ತವೆ: ಬಹುವೇಳೆ ಅವುಗಳನ್ನು ಆಳವಾದ ಮತ್ತು ಸತತವಾದ ಅಭ್ಯಾಸದಿಂದ ಮಾತ್ರ ತಿಳಿಯಲು ಸಾಧ್ಯ.

ಈ ಸಮಸ್ಯೆಗಳು ಕಾಲ್ಪನಿಕವಲ್ಲ; ಕಟ್ಟುಕತೆಯಲ್ಲ. ವಿಮರ್ಶೆಗೆ ನಿಲುಕುವ. ಕಣ್ಣೆದುರು ನಡೆಯುತ್ತಿರುವ ವಾಸ್ತವಿಕ ಘಟನೆಗಳು. ಇವನ್ನು 'ದೈವೇಚ್ಛೆ'ಗೆ ಬಿಟ್ಟು ಕುಳಿತುಕೊಂಡರೆ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ. ಇವು ಮಾನವ ನಿರ್ಮಿತ ಸಮಸ್ಯೆಗಳು. ಮಾನವ ಪ್ರಯತ್ನದಿಂದ ಮಾತ್ರ ನಿವಾರಿಸಲ್ಪಡಬಲ್ಲವು. ಈ ಮಾನವ ಪ್ರಯತ್ನ ಕೇವಲ ಬಯಸಿದರೆ ಆಗದು: ಸತತವಾದ, ಎದೆಗುಂದದ ಹಾಗೂ ಆತ್ಮವಿಶ್ವಾಸವುಳ್ಳ ಕಾರ್ಯನಿಷ್ಠೆ ಅಗತ್ಯ. ಕಾರ್ಯಕ್ಷೇತ್ರದ ಅರಿವು, ಆಗಬೇಕಾದ ಪೂರ್ವಭಾವಿ ಯೋಜನೆ, ಅಡೆತಡೆಗಳ ಜ್ಞಾನ, ನಿರ್ವಹಣೆಯ ಜವಾಬ್ದಾರಿ ಇವೆಲ್ಲ ಅವಶ್ಯಕ ಸಿದ್ಧತೆಗಳು.

ಈ ಸಿದ್ಧತೆಗಳ ಜೊತೆಯಲ್ಲಿ ಮಕ್ಕಳು ಹಲವಾರು ವಿಷಯಗಳನ್ನು ಕುರಿತು ಮೌಲ್ಯಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಅವರ ಮನೋಭಾವವನ್ನು

ಹೊಸ ಪದ್ಧತಿಗೆ, ರೂಢಿಗೆ ಅಳವಡಿಸಿಕೊಳ್ಳಲು ಸದಾ ಪ್ರಯತ್ನಪಡಬೇಕಾಗುತ್ತದೆ. ಮೌಲ್ಯದಲ್ಲಿ ಬದಲಾವಣೆ ಆಗಬೇಕಾಗಿರುವ ವಿಷಯಗಳು ಜನಸಂಖ್ಯಾ ಸಮಸ್ಯೆಗೆ ನೇರವಾಗಿ ಅಥವಾ ಇತರ ವಿಷಯಗಳ ಮೂಲಕ ಪ್ರಭಾವ ಬೀರಬಲ್ಲ ಶಕ್ತಿ ಉಳ್ಳವು. ಈ ಕಾರಣದಿಂದ ಮಕ್ಕಳು ಭವಿಷ್ಯವನ್ನು ಎದುರಿಸಲು ಅಗತ್ಯವಾದ ಶಕ್ತಿ ಸಂಪಾದನೆಗೆ ಈ ಮೌಲ್ಯಗಳಲ್ಲಿ ಬದಲಾವಣೆ ಅವಶ್ಯ. ಈ ರೀತಿ ಮೌಲ್ಯ ಬದಲಾವಣೆ ಹೊಂದ ಬೇಕಾಗಿರುವ ವಿಷಯಗಳಲ್ಲಿ ಮುಖ್ಯವಾದವು— ಶಿಕ್ಷಣ, ಆರೋಗ್ಯ, ಉದ್ಯೋಗ, ಕುಟುಂಬ, ಜೀವನ, ಆದರ್ಶ, ಯೋಜನೆ, ಬಡತನ, ಚಿಂತನೆ, ತೀರ್ಮಾನ ಮತ್ತು ಜವಾಬ್ದಾರಿ. ಶಿಕ್ಷಣ ಕೇವಲ ಅಕ್ಷರಾಭ್ಯಾಸ ಅಥವಾ ಅಕ್ಷರಜ್ಞಾನವಾಗದೆ ವ್ಯಕ್ತಿಯ ವಿಕಾಸದ ಸಹಕಾರಿಯಾಗಬೇಕು. ಅದು ಶಾಲೆಯಲ್ಲಿ ಕಲಿಯುವ ವಿದ್ಯಾಭ್ಯಾಸದ ಮೌಲ್ಯವನ್ನು ಬದಲಾಯಿಸಿಕೊಂಡು ವೈಯಕ್ತಿಕ ಹಾಗೂ ಸಾಮಾಜಿಕ ಅನುಭವಗಳ ಆಧಾರದ ಮೇಲೆ ಜೀವನ ಪೂರ್ತಿ ಕಲಿಯುವ, ತನ್ನನ್ನು ತಾನೇ ತಿದ್ದಿಕೊಳ್ಳುವ, ಸಂಯಮಿಸಿಕೊಳ್ಳುವ ಹಾಗೂ ಬದಲಾವಣೆ ಹೊಂದುವ ನಿರಂತರ ಕಾರ್ಯವಾಗ ಬೇಕು. ಹಾಗಾದಾಗ ಮಾತ್ರ ಅದು ನಿಜವಾದ, ಯಾರೂ ಕಳೆಯಲಾಗದ, ಕದಿಯ ಲಾಗದ ಆಸ್ತಿ ಆಗುತ್ತದೆ. ಅಂತೆಯೇ ಆರೋಗ್ಯ ಕುರಿತ ಮೌಲ್ಯ ಬದಲಾವಣೆಯಾಗಿ ಮಕ್ಕಳು ರೋಗರಹಿತರಾಗಿ, ಶಕ್ತಿವಂತರಾಗಿ, ಚಟುವಟಿಕೆಯಿಂದ ಸ್ವಾವಲಂಬಿಯಾಗಿ ಬದುಕಬಲ್ಲ ಸಾಧ್ಯತೆ ಕುರಿತ ಸತತ ಪ್ರಯತ್ನವಾಗಬೇಕು. ಅಲ್ಲದೆ, ಆರೋಗ್ಯ ವೈಯಕ್ತಿಕ ಅವಶ್ಯಕತೆ ಮತ್ತು ಸಾಮಾಜಿಕ ಜವಾಬ್ದಾರಿ ಎನ್ನುವ ಅರಿವಾಗಬೇಕು.

ಉದ್ಯೋಗದ ದೃಷ್ಟಿಯಿಂದ ಹೇಳಬೇಕಾದರೆ ಭಾರತದಲ್ಲಿ ಉದ್ಯೋಗ ಕುರಿತ ಮೌಲ್ಯದ ಬದಲಾವಣೆಗಾಗಿ ಒಂದು ಕ್ರಾಂತಿಯೇ ಆಗಬೇಕಾಗಿದೆ. 'ಹೇಗಾದರೂ ಸರಿ ಅಂತೂ ಹಣ ಸಂಪಾದನೆಗೆ ಒಂದು ಅವಕಾಶ'ವೆನ್ನುವುದು ಇಂದಿನ ಉದ್ಯೋಗದ ಕಲ್ಪನೆಯಾಗಿ ಹೋಗಿದೆ. ಕಾರ್ಯನಿಷ್ಠೆ, ವೈಯಕ್ತಿಕವಾಗಿ ಒಪ್ಪಿಕೊಂಡಿರುವ ಕಾರ್ಯ ವನ್ನು ಮುಗಿಸಬೇಕಾದುದು ಮಾನವ ಧರ್ಮ, ಎನ್ನುವ ಭಾವನೆ ಮರೆಯಾಗಿದೆ. ಕೆಲಸ ವಿಲ್ಲದೆ ಇರುವ ಉದ್ಯೋಗ, ಶ್ರಮವಿಲ್ಲದೆ ಹಣ, ಈ ದಿನದ ಮೌಲ್ಯವಾಗಿದೆ. ಇದಕ್ಕೆ, ಬೆಳೆಸಿಕೊಂಡ ಆಲಸ್ಯ ಮನೋಭಾವ ಕಾರಣವಿದ್ದರೂ ಇರಬಹುದು. ಅಥವಾ ಸಮತೋಲ ಆಹಾರದ ಕೊರತೆ, ಸಾಮಾನ್ಯ ಅನಾರೋಗ್ಯ, ಆರ್ಥಿಕ ಮುಗ್ಗಟ್ಟಿನ ಚಿಂತೆ, ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಯ ಕೊರತೆ ಇವೂ ಕಾರಣವಿರಬಹುದು. ಏನೇ ಕಾರಣವಿದ್ದರೂ ನಾವು ದುಡಿಯದೆ, ಪ್ರಯತ್ನಶೀಲರಾಗದೆ, ವೈಯಕ್ತಿಕ, ಕೌಟುಂಬಿಕ, ಮತ್ತು ರಾಷ್ಟ್ರೀಯ ಪ್ರಗತಿ ಸಾಧಿಸಲಾರೆವು ಎನ್ನುವ ಸತ್ಯ ಮಕ್ಕಳಲ್ಲಿ ಮನೆಗೊಳ್ಳಬೇಕು. ಕುಟುಂಬವನ್ನು ಕುರಿತ ಮೌಲ್ಯಗಳು ಹಲವಾರು. ಇವುಗಳೆಲ್ಲ ಪರಂಪರಾನುಗತವಾಗಿ, ಹೆಚ್ಚು ಜನ ಸತ್ತು ಕುಟುಂಬಗಳು ನಾಶವಾಗುತ್ತಿದ್ದ ಕಾಲದಿಂದ ಹೆಚ್ಚು ಬದಲಾವಣೆಯಾಗದೆ ಹಾಗೆಯೇ ಉಳಿದುಬಂದವು. ಅವುಗಳಲ್ಲಿ ಮೊದಲನೆಯದು

ಮದುವೆಯನ್ನು ಕುರಿತ ಸಾಮಾಜಿಕ ಮನೋಭಾವ. ಕುಟುಂಬ ಮುಂದುವರಿಸಿಕೊಂಡು ತನ್ಮೂಲಕ ಮಾನವ ಜನಾಂಗವನ್ನು ನಶಿಸಿ ಹೋಗದಂತೆ ಉಳಿಸಿಕೊಂಡು ಬರಲು ಸಮಾಜ ಅನುಭವದಿಂದ ಕಂಡುಕೊಂಡ ಸಾಮಾಜಿಕ ಅಗತ್ಯ—ಮದುವೆ. ಇಂದಿಗೂ ತಾಯಿ ಹಾಗೂ ತಂದೆಯರ ಪ್ರೀತಿ, ವಾತ್ಸಲ್ಯ, ಮತ್ತು ಪ್ರೋತ್ಸಾಹಗಳು ಮಕ್ಕಳಿಗೆ ಬೇಕು ಎನ್ನುವುದು ಸಹಜ. ಆದರೆ ಈಗಿರುವ ಪ್ರಶ್ನೆ ಎಲ್ಲರೂ ಮದುವೆಯಾಗಲು ಅರ್ಹರೇ ಎಂದು. ವಿದ್ಯೆ ಕಲಿಯಲು, ಉದ್ಯೋಗ ಮಾಡಲು ಅಸಮರ್ಥ ವ್ಯಕ್ತಿಗಳಿರುವಂತೆಯೇ, ಮದುವೆಯಾಗಿ ತನ್ನ ಬಾಳ ಸಂಗಾತಿಯ ಜೊತೆ ವೈವಾಹಿಕ ಜೀವನವನ್ನು ನಡೆಸಲು ಅಸಮರ್ಥರೂ ಇರುವಾಗ, ಮದುವೆ ಎಲ್ಲರಿಗೂ ಮೀರಲಾಗದ ಅನುಭವಿಸಲೇಬೇಕಾದ ಕರ್ಮವಾಗಬಾರದು. ಅಂತೆಯೇ ಮದುವೆ ಆದವರೆಲ್ಲ ಮಕ್ಕಳನ್ನು ಪಡೆಯಲೇಬೇಕೆಂಬ ಒತ್ತಡವೂ ಸರಿಯಲ್ಲ. ಜೊತೆಗೆ ಮಕ್ಕಳನ್ನು ಪಡೆಯಲು ಅಗತ್ಯವಾದ ಶಕ್ತಿ ಇಲ್ಲದಿರುವುದು ಸ್ವಾಭಾವಿಕವಾದ ಪ್ರಕೃತಿ ನಿಯಮ ಎನ್ನುವ ಮನೋಭಾವ ಮೂಡಬೇಕು. ಕುಟುಂಬದ ಗಾತ್ರವನ್ನು ಕುರಿತ ರೂಢಿಯೂ ಬದಲಾಗಬೇಕು. 'ಎಷ್ಟಾದರೂ ಸರಿ' ಎನ್ನುವ ಅಥವಾ 'ಗಂಡು ಮಗು ಬೇಕೇಬೇಕು', ಹೆಣ್ಣು ಮಗು ಬೇಕೇ ಬೇಕು'. ಎನ್ನುವ ಮನೋಭಾವ ಬದಲಾಗಿ, ಸ್ವಾಭಾವಿಕವಾಗಿ ತಾಯ್ತಂದೆಯರು 'ಪ್ರೀತಿಯಿಂದ ಮತ್ತು ಉತ್ತಮ ವಾತಾವರಣ ಒದಗಿಸಿ ಪಡೆಯಬಹುದಾದಷ್ಟು' ಮಕ್ಕಳನ್ನು ಪಡೆದರೆ ಸರಿ ಎನ್ನುವ ಸಾಮಾಜಿಕ ಪರಿಸರ ಮೂಡಬೇಕು. ಇದರಂತೆಯೇ ಪ್ರತಿಯೊಬ್ಬರೂ 'ಇಷ್ಟೇ' ಮಕ್ಕಳನ್ನು ಹೊಂದಬೇಕೆಂಬ ಕಡ್ಡಾಯವೂ ಸಲ್ಲದು. ಜನಸಂಖ್ಯಾ ಸಮಸ್ಯೆಯ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಅಗತ್ಯವಿರುವ ಮಕ್ಕಳನ್ನು ಹೊಂದಲು ಅವಕಾಶ ಇರುವುದರಿಂದ ಜೊತೆಗೆ ಮಕ್ಕಳನ್ನು ಉತ್ತಮವಾಗಿ ಬೆಳೆಸಬಲ್ಲ ಮನೋಭಾವ, ಶಕ್ತಿ. ಹಾಗೂ ಪ್ರಯತ್ನ ಇರುವೆಡೆ ಸಾಮಾನ್ಯ ರೂಢಿ ಹಾಗೂ ಸಾಮಾಜಿಕ ಕಟ್ಟಳೆಗಿಂತ ಹೆಚ್ಚು ಮಕ್ಕಳನ್ನು ಹೊಂದಲು ಅವಕಾಶವಿರಬೇಕು. ತಾಯ್ತನಕ್ಕೆ ಪ್ರತಿ ವ್ಯಕ್ತಿ ಗೌರವ ಸಲ್ಲಿಸುವಂತಾಗಬೇಕು. ಹೆಣ್ಣು 'ಅಬಲೆ' 'ಹಿಂದಿನ ಜನ್ಮದ ಪಾಪದ ಫಲ', 'ತಿಳುವಳಿಕೆ ಇಲ್ಲದವಳು'. ಕೈಲಾಗದವಳು' 'ಮನೆಗೆಲಸದವಳು', 'ಮಕ್ಕಳನ್ನು ಹೆರುವವಳು' ಎನ್ನುವ ಮನೋಭಾವ ಬದಲಾಗಿ, ಗಂಡಾಗಲಿ ಹೆಣ್ಣಾಗಲಿ ರಾಷ್ಟ್ರದ ಸಮಾನ ಸದಸ್ಯರು, ಸಮಾನ ಜವಾಬ್ದಾರಿ ಉಳ್ಳವರು. ಸಮಾನ ವ್ಯಕ್ತಿತ್ವ ಹಾಗು ಅಭಿಪ್ರಾಯ ಸ್ವಾತಂತ್ರ್ಯ ಉಳ್ಳವರು, ಒಬ್ಬರಿಗೊಬ್ಬರು ಪೂರಕ, ಪ್ರತಿಸ್ಪರ್ಧಿಗಳಲ್ಲ. ಎನ್ನುವ ಭಾವನೆ ಮೂಡಬೇಕು. ಮದುವೆ ಕೇವಲ ಹಣದ ವ್ಯವಹಾರವಲ್ಲ: ಕೇವಲ ಹಿರಿಯರ ತೀರ್ಮಾನವಲ್ಲ; ಅಥವಾ ಕೇವಲ ಕುಟುಂಬದ ಬೆಸುಗೆಯಲ್ಲ. ಇದು ಇವೆಲ್ಲವನ್ನೂ ಮೀರಿದ ಎರಡು ಜೀವನಗಳ ಸಮ್ಮಿಲನದ, ಮಾನಸಿಕ ಶಾಂತಿಯ, ಸಂಪೂರ್ಣ ಜೀವನದ, ಹಾಗೂ ಆಸೆ ಆಕಾಂಕ್ಷೆಗಳ ಪೂರೈಕೆಯ ಸಾಧನ ಎನ್ನುವ ಭಾವ ಬೆಳೆಯಬೇಕು.

ಜೀವನವನ್ನು ಕುರಿತ ಮೌಲ್ಯಗಳು ಹಲವಾರು. ಅವುಗಳಲ್ಲಿ ಅಗತ್ಯವಾದ ಮೌಲ್ಯಗಳು ಸೇರಿವೆ. ಅನಗತ್ಯಗಳೂ ಸೇರಿವೆ. ಬದುಕು 'ವಿಧಿನಿಯಾಮಕ' ಎಂದೂ ಮಾನವ 'ದೈವ ನಿರ್ಣಯದ ನಿಮಿತ್ತ', 'ವಿಧಿಯ ಕೈಗೊಂಬೆ', 'ಸ್ವಯಂ ಏನನ್ನೂ ಮಾಡಲಾರ' ಎನ್ನುವ ಭಾವನೆ; ಜೀವನ ಹೊರೆ, ನೀರಸ, ಎನ್ನುವ ಕಲ್ಪನೆ; ಅಂತೂ ಬದುಕಿರಬೇಕು ಎನ್ನುವ ಬೇಸರ ಭಾವ– ಇವುಗಳ ಬದಲಾಗಿ ಮಾನವ ತನ್ನ ಸುತ್ತಲಿನ ವಾತಾವರಣವನ್ನು ಹರ್ಷಮಯವನ್ನಾಗಿ ಇಟ್ಟುಕೊಳ್ಳಬಲ್ಲ; ಬದಲಿಸಿಕೊಳ್ಳಬಲ್ಲ; ತಾನೂ ನಕ್ಕು ಇತರರನ್ನೂ ನಗಿಸಿ ಬಾಳಬಲ್ಲ, ಕಷ್ಟ ಸುಖಗಳನ್ನು ಇತರರೊಡನೆ ಹಂಚಿಕೊಳ್ಳಬಲ್ಲ, ಇತರರ ಸಹಕಾರದಿಂದ ಅಸಾಧ್ಯ ಕಾರ್ಯಗಳನ್ನು ಸಾಧಿಸಿ ಚಂದ್ರಲೋಕಕ್ಕೂ ಹೋಗಬಲ್ಲ ಎನ್ನುವ ಆತ್ಮವಿಶ್ವಾಸದ, ಮಾನವ ಜೀವನ ಕುರಿತ ಶಾಂತಿ ಹಾಗೂ ಸೌಖ್ಯದ ಕಲ್ಪನೆ ಮೂಡಬೇಕು. ಅಂತೆಯೇ ವ್ಯಕ್ತಿಯ ಜೀವನ ಶುಷ್ಕವಲ್ಲ; ಆತ ಒಂದು ಆದರ್ಶವನ್ನು ಗುರಿಯಾಗಿಟ್ಟುಕೊಂಡು ಅದನ್ನು ಸಾಧಿಸಿ, ಜೀವನ ಸಾರ್ಥಕತೆಯ ಮನೋಭಾವ ಪಡೆಯಬಲ್ಲ. ಅಂತೆಯೇ ಸಮಾಜ ಒಂದು ಆದರ್ಶವನ್ನಿಟ್ಟುಕೊಂಡು ಅದನ್ನು ಸಮಾಜದ ವ್ಯಕ್ತಿಗಳ ಸಾಧನೆಯ ಮೂಲಕ ಸಾಧಿಸಲು ಸಾಧ್ಯ ಎನ್ನುವ ನಂಬಿಕೆ ಆಳವಾಗಿ ಮೂಡಬೇಕು.

ಭಾರತೀಯರಾದ ನಾವು ತಲೆತಲಾಂತರಗಳಿಂದ ಎಲ್ಲ ಕೆಲಸಗಳಿಗೂ ನಮ್ಮ ವೈಯಕ್ತಿಕ ಜವಾಬ್ದಾರಿಯನ್ನು ತಪ್ಪಿಸಿಕೊಂಡು 'ಎಲ್ಲಾ ನಮ್ಮ ಕೈಮೀರಿದ್ದು', 'ಆದಂತೆ ಆಗಲಿ'. 'ಏನು ಮಾಡಿದರೂ ಅದು ಹೇಗೆ ಆಗಬೇಕೋ ಹಾಗೆಯೇ ಆಗುತ್ತದೆ', 'ವೃಥಾ ಶ್ರಮ' ಮುಂತಾದ ಭಾವನೆಗಳನ್ನು ಹೃದ್ಗತ ಮಾಡಿಕೊಂಡಿದ್ದೇವೆ. ಪರಿಣಾಮವಾಗಿ ಮಾಡುವ ಕೆಲಸ ಯಶಸ್ಸಾಗುತ್ತದೆಂಬ ನಂಬಿಕೆ ಇಲ್ಲದೆ, ಆ ಹೊತ್ತಿಗೆ ಏನು ಸರಿತೋರಿದರೆ ಅದನ್ನು ಮಾಡುವುದು ಅಭ್ಯಾಸವಾಗಿ ಹೋಗಿದೆ. ಗತಕಾಲದ ವೈಭವ ನಮ್ಮನ್ನು ಸೆರೆಹಿಡಿದು, ಇಂದಿನ ಪರಿಸ್ಥಿತಿಯ ಒತ್ತಡದಿಂದ ಜೀವನವನ್ನು ಒಂದು ಕಾಲ್ಪನಿಕ ಕನಸನ್ನಾಗಿಸಿದೆ. ಇದರಿಂದಾಗಿ ಯಾವ ಕೆಲಸವೂ ಯೋಜಿತವಲ್ಲ. ಇಂದೇ ಸಮಸ್ಯಾತ್ಮಕವಾಗಿರುವಾಗ ನಾಳೆಯ ಚಿಂತೆಯೆಲ್ಲಿ? ಇಂತಹ ವಾತಾವರಣ ಬದಲಾಗಲು ಯೋಜನ ಕುರಿತ ನಮ್ಮ ಮೌಲ್ಯಗಳು ಬದಲಾಗಬೇಕು. ಹೇಗೋ ಏನೋ ಅಂತೂ ಯಾರೋ ಮಾಡಿಬಿಡುತ್ತಾರೆ ಎನ್ನುವ 'ಕೈಚಲ್ಲಿ ಕುಳಿತುಕೊಳ್ಳುವ ಮನೋಭಾವ' ಬದಲಾಗಿ ಎಷ್ಟು ಕ್ರಮಬದ್ಧವಾಗಿ ನಾವು ಯೋಜನೆಗಳನ್ನು ಸಿದ್ಧಪಡಿಸಿ, ಎಷ್ಟು ನಿಷ್ಠೆಯಿಂದ ಅವುಗಳನ್ನು ಕಾರ್ಯರೂಪಕ್ಕೆ ತರುತ್ತೇವೆಯೋ ಅಷ್ಟರಮಟ್ಟಿಗೆ ಮಾತ್ರ ನಮಗೆ ಯಶಸ್ಸು ದೊರಕುತ್ತದೆ ಎನ್ನುವ ಸತ್ಯ ಅರ್ಥವಾಗಬೇಕು. ಯೋಜನೆ ನನ್ನ, ಹಾಗೂ ನಮ್ಮೆಲ್ಲರ ಶ್ರೇಯಸ್ಸಿಗೆ ಅಗತ್ಯ; ಇಂದಿನ ವಾಸ್ತವಿಕ ಆಧಾರದ ಮೇಲೆ ಕಟ್ಟುವ ಕಟ್ಟಡ ಕಾಲ್ಪನಿಕವಲ್ಲ ಎನ್ನುವುದು ಮಕ್ಕಳ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಬೇಕು. ನಮ್ಮಲ್ಲಿರುವ ಬಡತನ ಕುರಿತ ಮನೋಭಾವವು ಯೋಜನೆಗಳನ್ನು ಕುರಿತ ವಾಸ್ತವಿಕ ಮನೋಭಾವ ಬೆಳೆಯು

ದಿರಲು ಕಾರಣ. ಭಾರತದಲ್ಲಿ ಬಡತನವೆಂದರೆ 'ಅನಿವಾರ್ಯ', 'ಪೂರ್ವಜನ್ಮದ ಪಾಪದ ಫಲ', 'ಹಿಂದಿನ ಜನ್ಮದಲ್ಲಿ ದಾನ ಕೊಟ್ಟಿರಲಿಲ್ಲವಾಗಿ ಈ ಜನ್ಮದಲ್ಲಿ ಪಡೆದ ಶಿಕ್ಷೆ' ಮೊದಲಾದ ಬಡತನವನ್ನು ಹೇಗಾದರೂ ಮಾಡಿ ಒಪ್ಪಿಕೊಳ್ಳುವ ಕಾರ್ಯ ಸಹಸ್ರಾರು ವರ್ಷಗಳಿಂದ ನಿರಂತರವಾಗಿ ನಡೆದುಬಂದಿದೆ. ಇದರೊಡನೆ ಶ್ರೀಮಂತಿಕೆ ಕುರಿತ ನಮ್ಮ ಮನೋಭಾವವೇ ಸಂಪೂರ್ಣ ದ್ವಂದ್ವ. ಶ್ರೀಮಂತನನ್ನು ದ್ವೇಷಿಸುವ ನಾವು ಶ್ರೀಮಂತಿಕೆಯನ್ನು ಅದೂ ಹಣದ ರೂಪದ ಆರ್ಥಿಕ ಸಂಪತ್ತನ್ನು ಆರಾಧಿಸುತ್ತೇವೆ. ಫಲವಾಗಿ ಮನುಷ್ಯ ಪ್ರಯತ್ನದ ಕಲ್ಪನೆ ಮರೆಯಾಗುತ್ತದೆ. ಈ ಭಾವನೆಗೆ ಬದಲಾಗಿ ಶಾರೀರಿಕವಾಗಿ, ಮಾನಸಿಕವಾಗಿ ಮನುಷ್ಯನನ್ನು ದುರ್ಬಲಗೊಳಿಸುವ ಬಡತನ ಒಂದು ಸಾಮಾಜಿಕ ರೋಗ; ಇದನ್ನು ಪ್ರಯತ್ನಪೂರ್ವಕವಾಗಿ, ಪರಸ್ಪರ ಸಹಕಾರದಿಂದ ತೊಡೆಯಬೇಕು: ತೊಡೆಯಲು ಸಾಧ್ಯ ಎನ್ನುವ ದೃಢ ನಂಬಿಕೆ ಮಕ್ಕಳಲ್ಲಿ ಮೂಡಬೇಕು.

ಹಾಗೆಯೇ ಇತರರು ಹೇಳಿದುದನ್ನು ಪ್ರಶ್ನಿಸದೆ, ಅರ್ಥಮಾಡಿಕೊಳ್ಳಲು ಪ್ರಯತ್ನಿಸದೆ ಒಪ್ಪಿಕೊಳ್ಳುವುದು ವ್ಯಕ್ತಿಯ, ಕುಟುಂಬದ ಹಾಗೂ ರಾಷ್ಟ್ರದ ವಿಕಾಸಕ್ಕೆ ಅಡ್ಡಿ, ಯಾವುದೇ ವಿಷಯವನ್ನು ಅರ್ಥಮಾಡಿಕೊಂಡು, ಅದನ್ನು ಕುರಿತು ಆಳವಾಗಿ ಚಿಂತಿಸಿ. ಇತರರೊಡನೆ ಚರ್ಚಿಸಿ, ತನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿ, ಅದನ್ನು ಕುರಿತ ಇತರರ ಅಭಿಪ್ರಾಯಗಳೊಡನೆ ಹೋಲಿಸಿ, ನಂತರ ಪ್ರತಿ ವಿಷಯ ಕುರಿತ ಸ್ವಂತ ಅಭಿಪ್ರಾಯಗಳನ್ನು ರೂಢಿಸಿಕೊಳ್ಳುವುದು ಅಗತ್ಯ. ಹಾಗೆಯೇ ಪ್ರತಿ ಹಂತದಲ್ಲಿಯೂ ಇನ್ನೊಬ್ಬರು ತನ್ನ ಪರವಾಗಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಕೊಡದೆ, ತನ್ನ ಅಗತ್ಯಗಳು, ಸಂದರ್ಭ, ಸಾಮಾಜಿಕ ಪರಿಸರ, ಕುಟುಂಬದ ಅವಶ್ಯಕತೆಗಳು, ಇವುಗಳನ್ನು ಪರಾಮರ್ಶಿಸಿ ತೀರ್ಮಾನ ತೆಗೆದುಕೊಳ್ಳುವ ಅಭ್ಯಾಸ ಬೆಳೆಯಬೇಕು. ಗಂಡಾಗಲಿ ಹೆಣ್ಣಾಗಲಿ, ಹಿರಿಯರಾಗಲಿ, ಕಿರಿಯರಾಗಲಿ, ತನ್ನನ್ನು ಅಥವಾ ತನಗೆ ಸಂಬಂಧಿಸಿದ ಕುಟುಂಬದ ಹಾಗೂ ಸಮಾಜವನ್ನು ಕುರಿತ ವಿಷಯಗಳ ಬಗ್ಗೆ ಸ್ವಂತ ಅಭಿಪ್ರಾಯಗಳನ್ನು ರೂಢಿಸಿಕೊಳ್ಳುವ ಹಾಗು ಆ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಇತರರ ಮುಂದೆ ಮಂಡಿಸುವ ಸಾಮರ್ಥ್ಯ ಕೇವಲ ಅಭ್ಯಾಸಬಲದಿಂದ ಮಾತ್ರ ಒದಗಿಬರುವ ಸೌಲಭ್ಯ.

ಇವೆಲ್ಲ ವಿಷಯಗಳಿಗೆ ಪೂರಕವಾದ, ಆದರೆ ಪ್ರತಿ ವ್ಯಕ್ತಿಯೂ ಅವಶ್ಯಕವಾಗಿ ಅಭ್ಯಾಸ ಮಾಡಿ ರೂಢಿಸಿಕೊಳ್ಳಬೇಕಾದ ಜೀವನದ ಅತ್ಯಂತ ಅಗತ್ಯ ಮೌಲ್ಯ-ಜವಾಬ್ದಾರಿಯನ್ನು ಒಪ್ಪಿ ನಿರ್ವಹಿಸುವುದು. ತಾನು ನಿರ್ವಹಿಸಲು ಒಪ್ಪಿಕೊಂಡಿರುವ ಕಾರ್ಯವನ್ನು ತಾನೇ ಮಾಡಬೇಕು: ಹಾಗಿಲ್ಲದೆ ಇತರರು ಮಾಡಲಿ ಎನ್ನುವುದು ತನ್ನ ವ್ಯಕ್ತಿ ಗೌರವಕ್ಕೆ ಧಕ್ಕೆ ಎನ್ನುವ ನಂಬಿಕೆ ಮೂಡದೆ ಹೋದಾಗ ಸಮಾಜದ ಮುನ್ನಡೆ ಅಸಾಧ್ಯ. ಅಂತೆಯೇ ತಾನು ಹೊತ್ತ ಜವಾಬ್ದಾರಿಯನ್ನು ತಾನು ನಿರ್ವಹಿಸಬೇಕಾದುದು ತನ್ನ ಮೊದಲ ಕರ್ತವ್ಯ ಎನ್ನುವುದು ಮಕ್ಕಳ ಮನಸ್ಸಿನಲ್ಲಿ ಮೂಡಬೇಕು. ಹಾಗಾದರೆ

ಮಾತ್ರ ಇಂದಿನ ಮಕ್ಕಳು ಮುಂದಿನ ತಮ್ಮ ವೈಯಕ್ತಿಕ ಜೀವನದಲ್ಲಿ ತಾಯ್ತನದ. ತಂದೆತನದ, ಮನೆತನದ. ಹಿರಿತನದ, ಸಮಾಜದ, ರಾಷ್ಟ್ರದ ಜವಾಬ್ದಾರಿಯನ್ನು ನಿರ್ವಹಿಸಬಲ್ಲರು.

ಇಂದಿನ ಸಿದ್ಧತೆ :

ಮಕ್ಕಳು ನಾಳೆಯ ಜವಾಬ್ದಾರಿ ಹೊರಲು ಅಗತ್ಯವಾದ ಜೀವನಮೌಲ್ಯಗಳನ್ನು ರೂಪಿಸಿಕೊಳ್ಳುವುದು ಇಂದು. ಒಂದು ಹೆಣ್ಣುಮಗುವನ್ನು ಮದುವೆಗೆ ಮತ್ತು ತಾಯ್ತನಕ್ಕೆ ಸದಾ ಸಿದ್ಧಗೊಳಿಸುತ್ತಿರುವ ಸಮಾಜ, ಪ್ರತಿ ವ್ಯಕ್ತಿಯ ವ್ಯಕ್ತಿತ್ವವಿಕಾಸದ ಕಡೆ, ಮುಂದೆ ಆ ವ್ಯಕ್ತಿ ಸ್ವಯಂ ಒಪ್ಪಿಕೊಂಡು ನಿರ್ವಹಿಸಬೇಕಾದ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಜವಾಬ್ದಾರಿಯ ಕಡೆ ಗಮನ ಹರಿಸುತ್ತಿಲ್ಲ. ಈ ಕಾರಣ ಒಂದು ಮದುವೆಗೆ ಮುನ್ನ ನಡೆಯುವ ಕೌಟುಂಬಿಕ ಸಿದ್ಧತೆಯಂತೆ, ಯುದ್ಧಕ್ಕೆ ಮುನ್ನ ನಡೆಯುವ ಸೈನಿಕ ಸಿದ್ಧತೆಯಂತೆ, ಪ್ರತಿ ಮಗುವಿನ ಮುಂದಿನ ಜವಾಬ್ದಾರಿ ಕುರಿತ ಸಾಮಾಜಿಕ ಸಿದ್ಧತೆ ಇಂದು ಪ್ರಯತ್ನಪೂರ್ವಕವಾಗಿ ನಡೆಯಬೇಕಾಗಿದೆ. ಈ ಸಿದ್ಧತೆ ಸಮಾಜದ ಅನುಭವದಲ್ಲಿರುವ 'ಹಸಿರು ಕ್ರಾಂತಿ', 'ಹಾಲಿನ ಕ್ರಾಂತಿ', 'ವಿಚಾರ ಕ್ರಾಂತಿ'ಗಳಿಗಿಂತ ಕಠಿಣವಾದ 'ವಿವೇಕ ಕ್ರಾಂತಿ'ಯ ಆಧಾರದ ಮೇಲೆ ನಡೆಯಬೇಕಾಗಿದೆ. ಕೆಲವೇ ಜನ ಉಳಿದ ಕ್ರಾಂತಿಗಳನ್ನು ಆಗ ಮಾಡಬಹುದಾದರೆ, ಈ ವಿವೇಕದ ಕ್ರಾಂತಿ ಮನೆ ಮನೆಯಲ್ಲಿ ನಡೆಯಬೇಕಾಗಿದೆ.

ಸಾಮಾನ್ಯವಾಗಿ ಜನಸಂಖ್ಯಾ ಶಿಕ್ಷಣದ ಜವಾಬ್ದಾರಿಯನ್ನು ಶಿಕ್ಷಕನ ಜವಾಬ್ದಾರಿ ಎಂದು ಸಮಾಜ ಈ ಹೊರೆಯನ್ನು ಶಿಕ್ಷಣರಂಗದ ಮೇಲೆ ಹೇರಿ ಶಾಲಾ ಉಪಾಧ್ಯಾಯನಿಂದ ಮೌಲ್ಯ ಬದಲಾವಣಾಕಾರ್ಯ ನಿರೀಕ್ಷಿಸುವುದು ಸಹಜ. ಆದರೆ ಉಪಾಧ್ಯಾಯನೂ ಸಮಾಜದ ಇಂದಿನ ಹಾಗೂ ಹಿಂದಿನ ಮೌಲ್ಯಗಳ ಸಂಕೇತ; ಆತನೂ ಒಬ್ಬ ಕುಟುಂಬ ಜೀವಿ; ತನ್ನ ಕುಟುಂಬದಲ್ಲಿಯ ಮೌಲ್ಯಗಳನ್ನೇ ಇತರ ಮಕ್ಕಳ ಮೇಲೆ ಹೇರುವ ಪ್ರಯತ್ನವನ್ನು ಆತ ಮಾಡುವುದು ಸಹಜ. ಜೊತೆಗೆ ಆತ ಈ ಜೀವನ ಮೌಲ್ಯಗಳನ್ನು ಬದಲಾಯಿಸಬೇಕೆಂಬ ಹಂಬಲ ಹಾಗೂ ಮೌಲ್ಯಗಳನ್ನು ಬದಲಾಯಿಸಲು ಅಗತ್ಯವಾದ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ: ಶಿಕ್ಷಣ ಕ್ರಮದಲ್ಲೇ ಬದಲಾವಣೆಯಾಗಬೇಕಾಗುತ್ತದೆ. ಆದರೆ ಇಂದಿನ ಉಪಾಧ್ಯಾಯ ನಾಲ್ಕು ಗೋಡೆಗಳ ಮಧ್ಯೆ, ಹಿಂದಿನ ಜ್ಞಾನವನ್ನು ಪಠ್ಯಪುಸ್ತಕಗಳ ಮೂಲಕ ಮಕ್ಕಳಲ್ಲಿ ಹರಡಲು ಬಾಯಿಪಾಠ ಮಾಡಿಸುವ ಉಪಾಧ್ಯಾಯ ಮಕ್ಕಳಲ್ಲಿ ಯಾವ ಸಾಮಾಜಿಕ ಮೌಲ್ಯವನ್ನೂ ಉಂಟುಮಾಡಲಾಗದ ಪರಿಸ್ಥಿತಿ ಮುಟ್ಟಿದ್ದಾನೆ. ಗೌರವಪೂರ್ಣ 'ಗುರುಗಳು' ಇಂದು ತಿಂಗಳ ಸಂಬಳಕ್ಕಾಗಿ ದುಡಿಯುತ್ತಿರುವ ಸರ್ಕಾರಿ ನೌಕರ. ಕೇವಲ ಅಕ್ಷರಜ್ಞಾನ, ಪುಸ್ತಕ ಜ್ಞಾನ, ಕಲಿಸುವ 'ಮಾಸ್ತರ', ಶಿಕ್ಷಿಸುವ ಹಕ್ಕಿದೆ

ಎನ್ನುವ 'ಶಿಕ್ಷಕ'. ಶಾಲೆಯಲ್ಲಿ ಹೆಚ್ಚುತ್ತಿರುವ ಮಕ್ಕಳ ಸಂಖ್ಯೆಯ ಕಾರಣ ತರಗತಿಯ ಗದ್ದಲವನ್ನೇ ನಿರ್ವಹಿಸಲಾರದೆ, ಮಕ್ಕಳನ್ನು ಮನೆಗೆ ಅಟ್ಟುವ, ಹೆಚ್ಚುತ್ತಿರುವ ಪಠ್ಯ ಪುಸ್ತಕಗಳು, ಕ್ಲಿಷ್ಟವಾಗುತ್ತಿರುವ ಪಾಠಕ್ರಮಗಳಲ್ಲಿ ತನ್ನನ್ನು ಸಿದ್ಧಗೊಳಿಸಿಕೊಳ್ಳಲು ಅಗತ್ಯವಾದ ಸಮಯ ಸಾಲದೆ, ಕಲಿಯಬೇಕೆಂಬ ಆಸಕ್ತಿಯಿಲ್ಲದೆ ಒದ್ದಾಡುತ್ತಿರುವ ನಿಸ್ಸಹಾಯಕ. ಇಂತಹ ಶಿಕ್ಷಕ ಜೀವನ ಮೌಲ್ಯಗಳ ಬದಲಾವಣೆಯ ಜವಾಬ್ದಾರಿ ಹೊರಬಲ್ಲನೇ?

ಇನ್ನು ಹಡೆದ ತಾಯ್ತಂದೆಯರು. ಹಡೆದವ್ವನಿಗೆ ಬಲಹೀನತೆ, ರಕ್ತಹೀನತೆ, ಮಕ್ಕಳನ್ನು ಪಡೆಯುವ ಕಾರ್ಯಕ್ರಮದಲ್ಲೇ ಅವಿರತ ದುಡಿಮೆ. ಜೊತೆಗೆ ಎಲ್ಲರಿಗೆ ಊಟ ತಯಾರಿಸುವ ಜವಾಬ್ದಾರಿ. ಒಂದಿಲ್ಲ, ಎಲ್ಲಕ್ಕೂ ಇತರರನ್ನು ಅವಲಂಬಿಸಬೇಕಾದ ಪರಿಸ್ಥಿತಿ–ತನ್ನತನವೇ ಇಲ್ಲ. ಹಾಗೆಯೇ ಅಪ್ಪನಿಗೂ ಪುರುಸೊತ್ತಿಲ್ಲ. ಬಡತನ, ಹೆಂಡತಿಗೆ ಬಳಲಿಕೆ, ತನಗೆ ಬಳಲಿಕೆ. ಹಾಗಿದ್ದೂ ಮನೆಮಂದಿಗೆಲ್ಲಾ ಆಹಾರ ಪದಾರ್ಥ ಒದಗಿಸಬೇಕು: ಅದೂ ಪ್ರತಿನಿತ್ಯ, ಮಕ್ಕಳಿಗೆ ಕೊಟ್ಟರೆ ಗಂಡ–ಹೆಂಡತಿಗೆ ಉಪವಾಸ. ಎಲ್ಲರೂ ಹಂಚಿಕೊಂಡರೆ ಸಿಗುವುದು ಚೂರುಪಾರು. ಪರಿಣಾಮ ದುಡಿದರೆ ಆಯಾಸ. ಇಂತಹ ಆಯಾಸಭರಿತ ದುಡಿಮೆಯ ಪ್ರತಿಫಲ ಅನಿಶ್ಚಿತ, ಅಪೂರ್ಣ. ಹಿಟ್ಟು ರೊಟ್ಟಿಗೇ ಅಭಾವವಿರುವಾಗ ಸಮತೋಲ ಆಹಾರವನ್ನಂತೂ ಕೇಳುವುದೇ ಬೇಡ. ಸಮಸ್ಯೆ ಹೆಚ್ಚಾದಾಗ ಹೆಂಡತಿ ನರಳಿ ಸಾಯುವ ಸಂಭವ. ಯಾವುದಾದರೂ ಮಗುವಿಗೆ ಏನಾದರೂ ರೋಗ; ನಾಲ್ವರಲ್ಲಿ ಒಂದು ಮಗುವಿಗೆ ತೀವ್ರತರ ಕಾಯಿಲೆ. ಮದ್ದು ಕೊಡಿಸಲು ಹಣವಿಲ್ಲ. ಕೈ ತೋರಿದ ಕಡೆ ಸಾಲ. ತಂದೆಯ ಕಾಲದ ಸಾಲವೇ ತೀರಿಲ್ಲ; ತಾನು ಮಾಡಿರುವುದೂ ಬರೀ ಸಾಲವೇ. ಹೀಗಾಗಿ ಮುಂದಿನ ಮಕ್ಕಳಿಗೆ ಸಾಲದ ಹೊರೆಯೇ ಆಶೀರ್ವಾದ. ಇಂತಹ ತಾಯ್ತಂದೆಯರು ಹೊಸ ಜೀವನ ಮೌಲ್ಯಗಳನ್ನು ಮಕ್ಕಳಲ್ಲಿ ರೂಢಿಸಬಲ್ಲರೇ?

ಇನ್ನುಳಿದುದು ಮಕ್ಕಳು ಬೆಳೆಯುತ್ತಿರುವ ಸಮಾಜ, ಈ ಸಮಾಜದಲ್ಲಿರುವ ಹಿರಿಯರು ಗೌರವಾನ್ವಿತರು, ಆದರೆ ಈ ಹಿರಿಯರಿಗೂ ಪುರಸೊತ್ತಿಲ್ಲ. ತಮ್ಮ ಗೌರವ ಉಳಿಸಿಕೊಳ್ಳದೇ ಎಲ್ಲಿಲ್ಲದ ಕಾಯಕ, ಧಂದೆ ನಡೆಸಬೇಕು. ಅದಕ್ಕೆ ಇರುವ ಸಮಯ ಸಾಲದು. ಹಣ ಬೇಕು, ಅಧಿಕಾರ ಬೇಕು, ಆಸ್ತಿ ಬೇಕು. ಸುತ್ತಲಿನ ಜನ 'ಜೈ' ಎನ್ನ ಬೇಕು. ಹೇಳಿದಂತೆ ಕೇಳಿ ಇತರರನ್ನೂ ಹೇಗಾದರೂ ಸರಿ ಕೇಳುವಂತೆ ಮಾಡಲು ಸೂಕ್ತ. ಅಗತ್ಯ ಸಿಬ್ಬಂದಿ ಬೇಕು, ಅವರನ್ನು ತೃಪ್ತಿಪಡಿಸುವ ಕೆಲಸವಾಗಬೇಕು. ಈ ವೈಯಕ್ತಿಕ ಪ್ರತಿಷ್ಠೆಯನ್ನು ಎಂತಾದರೂ ಹೆಚ್ಚಿಸಿಕೊಂಡು ಸಾಯುವವರೆಗೂ ಆಳಲು ಬಯಸುತ್ತಿರುವ ಹಿರಿಯರು ಮಕ್ಕಳಲ್ಲಿ ಜೀವನ ಮೌಲ್ಯ ಬೆಳೆಸುವ ಕೆಲಸ ಮಾಡಬಲ್ಲರೇ?

ಇನ್ನುಳಿದವರು ಬುದ್ಧಿಜೀವಿಗಳು. ಸಂಖ್ಯಾಬಲದಿಂದ ಕಡಿಮೆಯಾದರೂ ವಾಗ್ಬಲದಿಂದ ಯಾರಿಗೂ ಕಡಿಮೆ ಇಲ್ಲದ ಇವರು ಹೆಚ್ಚು ಹೆಚ್ಚು ವಾಕ್ ಶಕ್ತಿ, ಹೆಚ್ಚು

ಹೆಚ್ಚು ಚತುರತೆ ಬೆಳೆಸಿಕೊಳ್ಳುವುದರಲ್ಲೇ ನಿರತರು. ಜಿಜ್ಞಾಸೆ, ಬಗೆಹರಿಯುದ ಚರ್ಚೆ. ಪ್ರಶ್ನೆ; ಉತ್ತರ; ಮರುಪ್ರಶ್ನೆ; ಮರುಉತ್ತರ. ಅರಿತಷ್ಟೂ ಹೆಚ್ಚುತ್ತಿರುವ ಅರಿವಿನ ಕೊರತೆ. ಕೊರತೆಯ ಅರಿವಾದಷ್ಟೂ ಅದನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ. ಇಲ್ಲದುದನ್ನು ಇದೆಯೆಂದು ಕಾಣಬಯಸುವ, ಹಾಗೆಂದು ಇತರರಿಗೆ ತೋರಬಯಸುವ ಪ್ರಯತ್ನ. ತಾವು ಹೇಳಿದುದೇ ಸರಿ; ಇತರರೆಲ್ಲ ಅರಿಯದವರು, ಮೂರ್ಖರು: ಎನ್ನುವ ಧೋರಣೆ. ಚರ್ಚೆಯಲ್ಲಿ ಪ್ರಾರಂಭ ಚರ್ಚೆಯಲ್ಲಿಯೇ ಮುಕ್ತಾಯ. ಇಂದಿನ ಉಪಾಧ್ಯಾಯರ, ತಾಯ್ತಂದೆಯರ, ಹಿರಿಯರ, ಬುದ್ಧಿಜೀವಿಗಳ ಪರಿಸ್ಥಿತಿಯಲ್ಲಿ ಬದಲಾವಣೆ ಆಗಲೂ ಪರಿಸರ ಬದಲಾಗಬೇಕು. ಮೌಲ್ಯ ಬದಲಾವಣೆ ಆಗಬೇಕು. ಬಹುಶಃ ಯಾರೂ ಸ್ವಾರ್ಥರಹಿತರಲ್ಲ. ಪ್ರತಿವ್ಯಕ್ತಿಯೂ ತಾನೂ ವ್ಯಕ್ತಿಯಾಗಿ ಬದುಕ ಬೇಕಾದರೆ ಈ ಸ್ವಾರ್ಥ ಅಗತ್ಯ. ಆದರೆ ಆತ ಒಬ್ಬ ಸಾಮಾಜಿಕ ವ್ಯಕ್ತಿಯಾಗಿ ಬಾಳಲು ಈ ಸ್ವಾರ್ಥದಲ್ಲಿ ಕೊಂಚ ಹಿಡಿತ, ಸಂಯಮ ಬರಬೇಕು. ಈ ಸ್ವಾರ್ಥಪೂರ್ಣ ವಾತಾ ವರಣದಲ್ಲೇ ಬದಲಾವಣೆಯ ಪ್ರಯತ್ನ ನಡೆಯಬೇಕು. ಇದು ವಾಸ್ತವಿಕ ಪರಿಸ್ಥಿತಿ. ಮೊದಲನೆಯದಾಗಿ ಪ್ರತಿ ಶಾಲೆ ಸಾಮಾಜಿಕ ವಿಕಾಸ ಕೇಂದ್ರವಾಗಬೇಕು. ಉಪಾಧ್ಯಾಯ ರಾಗಲಿ, ಹಿರಿಯರಾಗಲಿ, ಸಾಮಾಜಿಕ ಕಾರ್ಯಕರ್ತರಾಗಲಿ, ಬೇರೆ ಊರಿನಿಂದ ಬಂದು ಕೆಲಸ ಮಾಡುವವರಾಗಲಿ ಯಾರಾದರೂ ಒಬ್ಬರು ಈ ಕೇಂದ್ರದ ಮುಖ್ಯ ಬಿಂದುವಾಗ ಬೇಕು. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಚರ್ಚೆ, ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಗುರುತಿಸಿ, ಪ್ರತಿ ಶಾಲೆಯ ಪ್ರತಿ ವಿದ್ಯಾರ್ಥಿಯೂ ಒಬ್ಬ ಸಾಮಾಜಿಕ ವ್ಯಕ್ತಿಯಾಗಲು ಅವಕಾಶ, ಅಗತ್ಯವಾದ ಸಾಧನೆ ಹಾಗೂ ವಾತಾವರಣವನ್ನು ಕಲ್ಪಿಸುವ ಪ್ರಯತ್ನವಾಗಬೇಕು. ವಿದ್ಯಾಭ್ಯಾಸದ ಮೂಲಕ ವಿದ್ಯಾರ್ಥಿ ತನ್ನನ್ನು ತಾನೇ ಬದಲಾಯಿಸಿಕೊಂಡು ಇತರ ವಿದ್ಯಾರ್ಥಿಗಳೊಡನೆ ಸರಿಸಮನಾಗಿ ಬೆಳೆಯುವ ಅವಕಾಶ ಒದಗಿಸಲು ಪ್ರಯತ್ನ ನಡೆಯಬೇಕು. ಗ್ರಾಮದ ಎಲ್ಲ ಮಕ್ಕಳ ಸಾಮಾಜಿಕ ವ್ಯಕ್ತಿತ್ವ ಬೆಳೆಸಲು ಸಹಕಾರಿಯಾಗುವಂತೆ ಸಮಾಜದಲ್ಲಿರುವ ಎಲ್ಲಾ ವಿದ್ಯಾಶಕ್ತಿಯನ್ನೂ ಕ್ರಿಯಾಶಕ್ತಿಯನ್ನೂ ಉಪಯೋಗಿಸಬೇಕು. ಜಾತೀಯತೆ ಯನ್ನು ಮೀರಿ ಸಾಮಾಜಿಕ ಶಕ್ತಿಯಾಗಿ ಬೆಳೆಯುವ ಮನೋಭಾವಕ್ಕೆ ಜನಸಂಖ್ಯಾ ಶಿಕ್ಷಣ ನಾಂದಿಯಾಗಬೇಕು.

ವಿದ್ಯಾರ್ಥಿಗಳಲ್ಲಿ ಸಹಕಾರ ಮನೋಭಾವ ಬೆಳೆಯಲು ಶಾಲೆಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳು ಒಂದು ಅಪೂರ್ವ ಸನ್ನಿವೇಶ ಒದಗಿಸಿಕೊಡುತ್ತವೆ. ಇಂತಹ ಕಾರ್ಯಕ್ರಮಗಳನ್ನು ಸಮಾಜದ ಇತರ ವ್ಯಕ್ತಿಗಳ ಸಹಕಾರದಿಂದ ವಿದ್ಯಾರ್ಥಿಗಳೇ ನಡೆಸಲು ಸಹಕಾರ ಒದಗಿಸಬೇಕು. ಆದರೆ ಈ ಕಾರ್ಯಕ್ರಮಗಳು ಕೇವಲ ನೀರಸ ಉಪನ್ಯಾಸ ಕಾರ್ಯಕ್ರಮವಾಗದೆ, ಕ್ರಿಯಾತ್ಮಕವಾದ, ಗ್ರಾಮಕ್ಕೆ ಅನುಕೂಲವಾಗು ವಂತಹ, ಗ್ರಾಮವಿಕಾಸ ಕಾರ್ಯಕ್ರಮಗಳಾದರೆ ಅತ್ಯಂತ ಪರಿಣಾಮಕಾರಿ. ಅಂತೆಯೇ

ವಿದ್ಯಾರ್ಥಿಗಳನ್ನು ಹೊರನೋಟ ನೋಡಲು ಕರೆದೊಯ್ಯುವುದು, ಗ್ರಾಮ ಜೀವನವನ್ನು ತಿಳಿಸಲು ಗ್ರಾಮದ ಮನೆ ಮಠಗಳಿಗೆ, ಪಂಚಾಯ್ತಿ ಕಛೇರಿಗೆ, ವೈದ್ಯಕೀಯ ಕೇಂದ್ರಗಳಿಗೆ, ವ್ಯವಸಾಯ ಕೇಂದ್ರಗಳಿಗೆ, ಕೈಗಾರಿಕಾ ಸಂಸ್ಥೆಗಳಿಗೆ, ಗ್ರಾಮ ಕೈಗಾರಿಕಾ ಕ್ಷೇತ್ರಗಳಿಗೆ ಕರೆದೊಯ್ಯುವುದು ಪಠ್ಯ ಕ್ರಮದ ಅನಿವಾರ್ಯ ಭಾಗವಾಗಬೇಕು. ವಿದ್ಯಾರ್ಥಿಗಳು ತಮ್ಮ ವಯಸ್ಸಿನ ಶಾಲೆಗೆ ಬಾರದಿರುವ ಮಕ್ಕಳ ಆರೋಗ್ಯ ಹಾಗೂ ವಿದ್ಯೆಯ ಬೆಳವಣಿಗೆಗೆ ಸಹಾಯಕರಾಗುವಂತೆ ಕಾರ್ಯಕ್ರಮ ಯೋಜಿಸಬೇಕು. ಅವರು ಶಾಲೆಯ ಹೊರಗೆ ಕಲಿತ ಪಾಠದ ವಿಮರ್ಶೆ ನಡೆಯಬೇಕು. ಅವರಲ್ಲಿ ಚರ್ಚೆ ನಡೆದು ಮತ್ತು ತನ್ನ ಕಣ್ಣರಳಿಸಿ ಸುತ್ತಲಿನ ನೋಟವನ್ನು ಅರಿಯಲು, ಪ್ರಶ್ನಿಸಲು, ಉತ್ತರಿಸಲು, ವಿವರಿಸಲು ಪ್ರಯತ್ನಿಸಿದರೆ, ಆಗ ಹೊಸ ಬಗೆಯ ಅನುಭವ ಮೂಡಲು ಸಾಧ್ಯ.

ಎರಡನೆಯದಾಗಿ, ಓದಲು ಶಾಲೆಗೆ ಬಾರದಿರುವ ಮಕ್ಕಳೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜೀವನ ಶಿಕ್ಷಣ ಕಲಿಯುವಂತಾಗಬೇಕು.

ಮೂರನೆಯದಾಗಿ, ಧಾರ್ಮಿಕ, ರಾಜಕೀಯ, ಆರ್ಥಿಕ ಕಾರಣಗಳಿಗೆ ನಡೆಯು ವಂತೆಯೇ ಮಕ್ಕಳ ಬೆಳವಣಿಗೆಗೆ ಸಹಾಯವಾಗಲೂ ಸಾಮಾಜಿಕ ಚಟುವಟಿಕೆಗಳು ನಡೆಯಬೇಕು. ಮಕ್ಕಳಿಗೆ ಇಂದು 'ಕಲಿಸುವುದು ಸಾಕು', 'ಕಲಿಯುವುದು ಬೇಕು'. ಈ ಕಲಿಕೆಗೆ ಅಗತ್ಯವಾದ ಸನ್ನಿವೇಶ ಶಾಲೆ, ಸಾರ್ವಜನಿಕ ಸಂಘ ಸಂಸ್ಥೆಗಳು, ವಿಕಾಸ ಕಾರ್ಯಕ್ರಮಗಳು. ಈ ಸನ್ನಿವೇಶಗಳು ಮಕ್ಕಳನ್ನು ಆಕರ್ಷಿಸಿ ಅವರು ಜೀವನದಲ್ಲಿ ಉತ್ಸಾಹಗೊಳ್ಳುವಂತೆ ಮಾಡಿದರೆ ಸಾಕು.

ನಾಲ್ಕನೆಯದಾಗಿ, ಇಂದು ಗ್ರಾಮಾಂತರ ಪ್ರದೇಶದಲ್ಲಿಉದ್ಯೋಗವಿಲ್ಲದ ಅಥವಾ ಉದ್ಯೋಗ ಬಯಸದ ತರುಣರಿಗೆ ಆವಶ್ಯಕ ತರಬೇತಿ ನೀಡಿ, ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮ ತೆಗೆದು ಕೊಳ್ಳಲು ಅನುವು ಮಾಡಿಕೊಡಬೇಕು ಹಾಗೂ ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಡಬೇಕು.

ಐದನೆಯದಾಗಿ ಹೊರಗಡೆಯಿಂದ ಸಹಾಯ ಬೇಕು. ಆದರೆ ನಿರಂತರ ಸಹಾಯ ಬೇಕಿಲ್ಲ. ಬೇಕಾಗಿರುವುದು ಸಹಾಯ ಹಸ್ತ ಮಾತ್ರ. ಸಮಾಜದ ಹಿರಿಯರಿಗೆ, ಕಾರ್ಯ ಕರ್ತರಿಗೆ ತಮ್ಮ ವಾತಾವರಣದಲ್ಲಿ ಮಕ್ಕಳಿಗೆ ಅಗತ್ಯವಾದ ಉತ್ಸಾಹ ತುಂಬಲು ಮಾಡ ಬೇಕಾಗಿರುವ ಕಾರ್ಯದ ಅರಿವು, ಸ್ವಯಂ ಉತ್ಸಾಹದಿಂದ ಮುಂದುವರಿದುಕೊಂಡು ಹೋಗುವಷ್ಟು ಉತ್ತೇಜನ ಮತ್ತು ಸಹಾಯ ಹೊರಗಡೆಯಿಂದ ಬರಬೇಕು.

ಕೊನೆಯದಾಗಿ, ಜನಸಂಖ್ಯಾ ಶಿಕ್ಷಣ ಕಾರ್ಯವನ್ನು ಆಸ್ಥೆಯಿಂದ. ಕಳಕಳಿಯಿಂದ ಕೈಗೊಳ್ಳಲು, ತನ್ಮೂಲಕ ಇತರ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ನಾಂದಿ ಹಾಕಲು ಈಗಿರುವ ಸ್ವಯಂ ಪ್ರೇರಿತ ಸೇವಾ ಸಂಸ್ಥೆಗಳು ಮುಂದುವರಿಯಬೇಕು; ವಿಚಾರ ಹಾಗೂ

ಅನುಭವಗಳ ವಿನಿಮಯದಿಂದ ಅಗತ್ಯವಾದ ಪರಿಸರಗಳು, ಕಾರ್ಯಕರ್ತರ ಪಡೆ ಹಾಗು ಕಾರ್ಯವಿಧಾನಗಳನ್ನು ಬೆಳೆಸಬೇಕು, ಹಾಗು ಅವುಗಳನ್ನು ಕಾರ್ಯಗತಗೊಳಿಸಬೇಕು. ನಡೆಯುತ್ತಿರುವ ಹಲವಾರು ಸೇವಾಕಾರ್ಯಗಳ ಕಾರ್ಯಕ್ರಮ ಸಂಯೋಜನೆ ನಡೆಯಬೇಕು; ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮದ ಆರಂಭ ಆಗಬೇಕು. ಯಾರಿಂದ? ಹೇಗೆ? ಯಾವಾಗ? ಎನ್ನುವುದಕ್ಕಿಂತ, ಭವಿಷ್ಯ ಕುರಿತ ಚಿಂತೆಯುಳ್ಳ ಪ್ರತಿಯೊಬ್ಬನಿಂದ, ಕಾರ್ಯ ಪ್ರಾರಂಭವಾಗಬೇಕು; ಇಂದೇ ಕಾರ್ಯಾರಂಭವಾಗಬೇಕು.

ಜನಸಂಖ್ಯಾ ಶಿಕ್ಷಣ–ಸಾಮಾಜಿಕ ಜವಾಬ್ದಾರಿ :

ಜನಸಂಖ್ಯಾ ಶಿಕ್ಷಣ ಕೇವಲ ಜನಸಂಖ್ಯಾ ನಿಯಂತ್ರಣ ಕುರಿತ ಶಿಕ್ಷಣವಲ್ಲ. ಜನರನ್ನು ಕುರಿತ, ಅವರ ಸಂಖ್ಯೆಯನ್ನು ಕುರಿತ ನಿರಂತರ ಪ್ರಶ್ನೆ. ಇದು ವಿದ್ಯಾ ಇಲಾಖೆಯ ಕಾರ್ಯವಲ್ಲ; ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆಯ ಜವಾಬ್ದಾರಿಯಲ್ಲ. ಯಾವುದೇ ಇಲಾಖೆಯ ಮಿತಿಗೂ ಮೀರಿದ ಎಲ್ಲಾ ಇಲಾಖೆಗಳ ಕಾರ್ಯ ಯೋಜನೆಯ ಹಿನ್ನೆಲೆಯಲ್ಲಿರುವ ಸಂಯೋಜಿತ ಸಾಮಾಜಿಕ ಕಾರ್ಯಕ್ರಮ. ಜನಸಂಖ್ಯೆಯ ಹೆಚ್ಚಳವೂ ಸಮಸ್ಯೆಯೇ; ಅದರ ಇಳಿತವೂ ಸಮಸ್ಯೆಯೇ. ಅದು ಹಿತಮಿತವಾಗಿರಲು ಒಬ್ಬ ವ್ಯಕ್ತಿಯ ತೀರ್ಮಾನ ಸಾಲದು; ಒಬ್ಬ ಶ್ರೇಷ್ಠನ ಉಕ್ತಿ ಸಾಲದು; ಒಂದು ಇಲಾಖೆಯ ಕಾರ್ಯ ಸಾಲದು; ಒಂದು ಸರ್ಕಾರದ ಪ್ರಯತ್ನ ಸಾಲದು: ಒಂದು ಸ್ವಯಂಪ್ರೇರಿತ ಸಂಸ್ಥೆಯ ಶ್ರಮ ಸಾಲದು. ಮುಖ್ಯವಾಗಿ ತಾಯ್ತಂದೆಯರ ಮಾನಸಿಕ ಬದಲಾವಣೆ ಆಗಬೇಕು; ಇವರಲ್ಲಿ ಹಲವರನ್ನಾದರೂ ಮನವೊಲಿಸುವ ಪ್ರಯತ್ನದಲ್ಲಿರುವಾಗಲೇ 'ಮದುವೆಯ ಮಹಾಪೂರ' ಪ್ರತಿವರ್ಷ ಹೊಸ ರಕ್ತದ ಕಿರಿಯರನ್ನು ಈ ತಾಯ್ತಂದೆಯರ ಪಟ್ಟಿಗೆ ದಾಖಲು ಮಾಡುತ್ತಾ ಹೋಗುತ್ತದೆ. 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎನ್ನುವ ಮೌಲ್ಯ ಈ ಸಾಮಾಜಿಕ ಕಾರ್ಯಪ್ರವೃತ್ತಿಗೆ ಉತ್ತೇಜಕ. ಈ 'ಮದುವೆ' ಸಾಮಾಜಿಕವಾದ ಶುಭಕಾರ್ಯ, ಮಂಗಳಕಾರ್ಯ, ಕಲ್ಯಾಣ ಕಾರ್ಯ; ಎಲ್ಲರೂ ಅನುಮೋದಿಸುವ. ವಿರೋಧವೇ ಇಲ್ಲ ಎನ್ನಬಹುದಾದ ಪವಿತ್ರ ಕರ್ತವ್ಯ. ಇದರ ಹಿನ್ನೆಲೆಯಲ್ಲಿ ತಾಯ್ತಂದೆಗಳ ಸಂಖ್ಯೆ, ಹಳಬರು ಹೊರಸರಿಯದೆ, ಹೊಸಬರು ರಭಸದಿಂದ ನುಗ್ಗುತ್ತಿರುವಾಗ ನಾವು, ಪ್ರಜ್ಞಾವಂತರು, ವಿವೇಕಿಗಳು, ಸಮಾಜದ ಆಗುಹೋಗುಗಳ ಬಗ್ಗೆ ಕಳಕಳಿ ಉಳ್ಳವರು: ಭವಿಷ್ಯವನ್ನು ಕುರಿತು ಚಿಂತಿಸುವವರು, ವಿಕಾಸವನ್ನು ಬಯಸುತ್ತಿರುವವರು, ಸಮಸ್ಯೆಯನ್ನು ಅರಿತು ಇತರರಿಗೆ ತಿಳಿಸಿ ಹೇಳುವ ಸಾಮರ್ಥ್ಯ ಇರುವವರು ಸುಮ್ಮನೆ ಕೈಕಟ್ಟಿ ಕುಳಿತಿರಬೇಕೇ? ಇದು ನಮ್ಮೆಲ್ಲರ ಸಾಮಾಜಿಕ ಪ್ರಜ್ಞೆಯನ್ನೇ ಪ್ರಶ್ನಿಸುವ ಸಾಮಾಜಿಕ ಪ್ರಶ್ನೆಯಲ್ಲವೇ? ಸಾಮಾಜಿಕ ಜವಾಬ್ದಾರಿಯಲ್ಲವೇ?

ಈ ಸಾಮಾಜಿಕ ಜವಾಬ್ದಾರಿಯನ್ನು ನಾವು ಜನಸಂಖ್ಯಾ ಶಿಕ್ಷಣದ ಮೂಲಕ ಪ್ರತಿ ಕುಟುಂಬಕ್ಕೂ ತಲುಪಿಸುವ ಕಾರ್ಯವೂ ವೇಗವಾಗಿ ನಡೆಯಬೇಕಾದವೇ? ಇಂದಿನ

ಪ್ರಜ್ಞಾವಂತರ ಸಂಖ್ಯೆಯನ್ನು ದ್ವಿಗುಣ, ತ್ರಿಗುಣಗೊಳಿಸುವ ಕಾರ್ಯ ತ್ವರಿತಗೊಳ್ಳ ಬೇಡವೇ? ಹಾಗೆಯೇ, ನಾಳಿನ ಹೊರೆ ಹೊರಲಿರುವ ಇಂದಿನ ಮಕ್ಕಳಲ್ಲಿ ಇಂತಹ ಪ್ರಜ್ಞಾವಂತರನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿ ಶೈಕ್ಷಣಿಕ ಹಾಗೂ ಸಾಮಾಜಿಕ ವಿಕಾಸ ಕಾರ್ಯಕ್ರಮಗಳ ಮೂಲಕ ಜನಸಂಖ್ಯಾ ಶಿಕ್ಷಣವನ್ನು ಕಾರ್ಯಗತ ಮಾಡ ಬೇಡವೇ?

ಮಕ್ಕಳಲ್ಲಿ ಜನಸಂಖ್ಯಾ ಶಿಕ್ಷಣದ ಮೂಲಕ ತನ್ನ ಪರಿಸರವನ್ನು ಅರ್ಥ ಮಾಡಿ ಕೊಳ್ಳಲು, ಮುಂದಿನ ಜೀವನದ ಕ್ಲಿಷ್ಟತೆಯನ್ನು ಅರಿತುಕೊಂಡು ಅದನ್ನು ಹಸನು ಮಾಡಿಕೊಳ್ಳಲು ಅಗತ್ಯವಾದ ಮನೋಧರ್ಮ ಹಾಗೂ ವಿಚಾರಶಕ್ತಿ ಮತ್ತು ಕ್ರಿಯಾ ಶಕ್ತಿಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುವುದು, ಸಹಕರಿಸುವುದು ಇಂದಿನ ಅತಿ ಮಹತ್ವದ ಅವಶ್ಯಕತೆ.

ಇಂತಹ ಸಮಸ್ಯಾತ್ಮಕ ಸಂದರ್ಭದಲ್ಲಿ ಕಾಣುತ್ತಿರುವ ಬೆಳ್ಳಿರೇಖೆ-ಬಹುಬೇಗ ರೂಪುಗೊಂಡಿರುವ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮ; ಈಗಾಗಲೇ ನೂರಾರು ಬುದ್ಧಿ ಜೀವಿಗಳು, ಸಹಸ್ರಾರು ಕಾರ್ಯಕರ್ತರು ಕಾರ್ಯಕ್ರಮಗಳನ್ನು ರೂಪಿಸಿ, ಕ್ಷೇತ್ರದಲ್ಲಿ ಅಳವಡಿಸಿ, ಫಲಿತಾಂಶಗಳನ್ನು ಪ್ರಕಟಿಸಿ, ಕಲಿತ ಪಾಠಗಳನ್ನು ಅರಿತುಕೊಳ್ಳುತ್ತಿದ್ದಾರೆ; ಇತರರೊಡನೆ ಅತಿ ವೇಗವಾಗಿ ಅನುಭವ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಈ ಮನುಷ್ಯನ ಪ್ರಯತ್ನ ಯಶಸ್ವಿಯಾಗುತ್ತಿದೆ ಎನ್ನುವ ಸೂಚನೆಗಳು ಭಾರತದ ಭವಿಷ್ಯ ವನ್ನು ಆಶಾದಾಯಕವನ್ನಾಗಿಸಿವೆ.

ಭಾರತೀಯ ಭಾಷೆಗಳಲ್ಲಿ ಮಕ್ಕಳ ಪುಸ್ತಕಗಳ ಕೊರತೆ

● ಕೆ. ಎಸ್. ದೇಶಪಾಂಡೆ

ಪೀಠಿಕೆ :

ಸಮಸ್ತ ಪ್ರಪಂಚದ ನಿಜವಾದ ಸಿರಿವಂತಿಕೆ ಇರುವುದು ಅದರ ಬೆಳ್ಳಿ, ಬಂಗಾರ, ವಜ್ರ–ವೈಢೂರ್ಯಗಳಲ್ಲಿ ಅಲ್ಲ. ಆದರೆ ನಾಡಿನ ನಂದಾದೀಪವಾಗಬಲ್ಲ ಮಕ್ಕಳೇ ಪ್ರಪಂಚದ ಐಶ್ವರ್ಯದ ಖಚಿತವಾದ ಖನಿ. ಹೀಗಾಗಿ ನಾವೆಲ್ಲ ನಮ್ಮ ಮಕ್ಕಳ ಮೇಲೆ ಇಡುವ ಲಕ್ಷ್ಯ ಹಾಗು ಕಾಳಜಿ, ಸುರಿಸುವ ಅಂತಃಕರಣ ಹಾಗು ಅವರ ಅಭಿವೃದ್ಧಿಯ ಸಲುವಾಗಿ ವ್ಯಯಿಸುವ ಸಂಪತ್ತು, ಪ್ರಪಂಚದ ಭವಿತವ್ಯವನ್ನು ಇನ್ನಿಷ್ಟು ಭವ್ಯ ಮಾಡುವದಕ್ಕಾಗಿ ಇಟ್ಟ ಠೇವಣಿಯಾಗಿ ಪರಿವರ್ತನೆಗೊಳ್ಳುತ್ತದೆ.

ಮಕ್ಕಳ ಮಹತಿಯನ್ನು ಜನಮನದಲ್ಲಿ ಚೆನ್ನಾಗಿ ಬಿಂಬಿಸಲೋ ಏನೋ ಎಂಬಂತೆ ೧೯ನೆಯ ಶತಮಾನದ ಆಂಗ್ಲ ಮಹಾಕವಿ ವಿಲಿಯಮ್ ವರ್ಡ್ಸ್‌ವರ್ಥ್ ಈ ರೀತಿ ಉದ್ಗಾರ ತೆಗೆದ : " Child is the Father of Man " – "ಮನುಜನಿಗೆ ಮಗು ತಂದೆ". ಇಂದಿನ ಮಕ್ಕಳು ನಾಳೆಯ ನೇತಾರರು, ನಿರ್ಮಾಪಕರು ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು, ಜಗತ್ತಿನಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಮಕ್ಕಳು ಅಲಕ್ಷಕ್ಕೆ ತುತ್ತಾಗಿದ್ದಾರೆ ಎಂಬ ವಾಸ್ತವಾಂಶವನ್ನು ಅರಿತು, ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಪೂರ್ಣ ಪ್ರಮಾಣದ ಕಾರ್ಯಕ್ರಮಗಳನ್ನು ಅತ್ಯಂತ ತುರ್ತಾಗಿ ಹಾಕಿಕೊಳ್ಳಬೇಕಾದ ಅಗತ್ಯವನ್ನು ಮನಗಂಡು, ನಮ್ಮ ಮಕ್ಕಳಲ್ಲಲ್ಲದೆ ಬೇರೆ ಭವಿಷ್ಯತವಾಗಿಲ್ಲ ಎಂಬ ಸತ್ಯವನ್ನು ಒಪ್ಪಿ ಕೊಂಡು, ವಿಶ್ವಸಂಸ್ಥೆಯು ೧೯೭೯ನೆಯ ಇಡೀ ವರ್ಷವನ್ನು "ಅಂತರರಾಷ್ಟ್ರೀಯ ಮಕ್ಕಳ ವರ್ಷ" ಎಂದು ಘೋಷಿಸಿತು. ಎಲ್ಲ ಕಡೆಯ ಮಕ್ಕಳನ್ನು, ಮಗುವಿನ ಬೆಳವಣಿಗೆಯ ಎಲ್ಲ ಅಂಶಗಳನ್ನು, ಕೊನೆಯಪಕ್ಷ ೧೯೭೯ನೆಯ ವರ್ಷದಿಂದ ಮುಂದಕ್ಕೆ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತದೆ ಎಂದು ವಿಶ್ವ ಸಂಸ್ಥೆ ಆಶಿಸಿತು.

ಅಲಕ್ಷಿತ ಹಸುಳೆ :

"ಬೆಳೆದ ದ್ವಿಗುಣವಾಗು" ಎಂದು ಬೈಬಲ್ ಆಜ್ಞೆ ಮಾಡಿತು. ಅದು ಮತ್ತು ಈವರ ಕಾಲದಿಂದಲೂ ನಾವು ಈ ಆಣತಿಯನ್ನು ಯಥಾರ್ಥವಾಗಿ, ಕಟ್ಟುನಿಟ್ಟಾಗಿ

ಸಂತೋಷದಿಂದ ಆಚರಣೆಗೆ ತಂದಿದ್ದೇವೆ. ಕುಟುಂಬದಲ್ಲಿ ಹೊಸ ಮಗುವೊಂದು ಬರುವುದೆಂದರೆ ಅದು ಸಂತೋಷ, ಸಂಭ್ರಮಗಳ ಹಿತವಾದ ಬಿಸಿಲು ಬರುವ ಕಾಲ. ಕಾಳಿದಾಸನಂತಹ ಶ್ರೇಷ್ಠ ಕವಿಗಳು ಕುಟುಂಬಕ್ಕೆ ಹೊಸದಾಗಿ ಬಂದ ಹಸುಳೆಯು ತರುವ ಸೂರ್ಯೋದಯವನ್ನು ನಿರರ್ಗಳವಾಗಿ ಹಾಡಿದ್ದಾರೆ.

ಈ ವಿಷಯದಲ್ಲಿ ನಾವೆಲ್ಲ ಆಸಕ್ತರು. ಆದ್ದರಿಂದ ನಮ್ಮಲಿರುವ ಅತ್ಯುತ್ಕೃಷ್ಟವಾದುದನ್ನು ಮಗುವಿಗೆ ಕೊಡಬೇಕು ಎಂದು ಎತ್ತರದ ಗಂಟಲಿನಿಂದ ಕಿರುಚುತ್ತೇವೆ. ಆದರೇನು? ನಮ್ಮ ಮಾತಿಗೂ ಕೃತಿಗೂ ನಡುವೆ ಅಪಾರವಾದ ಕಂದರವಿದೆ. ವಿಶ್ವಸಂಸ್ಥೆಯ ಪ್ರಧಾನ ಕಚೇರಿಗೆ ಈಚೆಗೆ ಭೇಟಿ ನೀಡಿದ್ದ ಅಮೇರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರು ಹೀಗೆ ಹೇಳಿದರು: "ಜಗತ್ತಿನಾದ್ಯಂತ ಸೈನ್ಯಗಳಿಗಾಗಿ ಸುಮಾರು ೨೦೦ ಮಿಲಿಯನ್ ಡಾಲರುಗಳಷ್ಟು ವೆಚ್ಚವಾಗುತ್ತಿದೆ. ೧೯೭೬ರಲ್ಲಿ ಪ್ರಪಂಚದ ರಾಷ್ಟ್ರಗಳು ಪ್ರತಿಯೊಂದು ಮಗುವಿಗೆ ಶಿಕ್ಷಣ ಕೊಡಲು ವೆಚ್ಚಮಾಡಿದುದಕ್ಕಿಂತ ಅರವತ್ತು ಪಟ್ಟು ಹೆಚ್ಚು ಮೊತ್ತವನ್ನು ಪ್ರತಿಯೊಬ್ಬ ಯೋಧನನ್ನು ಸಜ್ಜುಗೊಳಿಸಲು ವೆಚ್ಚಮಾಡಿದುವು. ಪ್ಯಾರಿಸಿನಲ್ಲಿ ೧೯೭೭ರ ಜೂನ್ ೧೩–೧೫ ರಂದು ನಡೆದ "ನಮ್ಮ ಮಕ್ಕಳಿಗೆ ನಾವು ಎಂಥ ವಿಶ್ವವನ್ನು ಬಿಟ್ಟು ಹೋಗುತ್ತಿದ್ದೇವೆ" ಎಂಬ ವಿಚಾರವನ್ನು ಕುರಿತ ಯುನೆಸ್ಕೋ ದುಂಡುಮೇಜಿನ ಗೋಷ್ಠಿಯಲ್ಲಿ ಜಗತ್ತಿನಾದ್ಯಂತ ಸಾಮಾನ್ಯ ಮನುಷ್ಯನು ತನ್ನ ಎರಡು ವಾರಗಳ ವೇತನವನ್ನು ನೂತನ ಆಯುಧಗಳನ್ನು ನಿರ್ಮಿಸುವುದಕ್ಕಾಗಿ ನೇರ ತೆರಿಗೆಯ ರೂಪದಲ್ಲಿ ತೆರುತ್ತಿದ್ದಾನೆ ಎಂಬ ಅಂಶ ಬೆಳಕಿಗೆ ಬಂದಿತು. ವಿಜ್ಞಾನಿಗಳಲ್ಲಿ ಕಾಲುಭಾಗ ಜನ ಸಂಪೂರ್ಣವಾಗಿ ಆಯುಧಗಳ ನಿರ್ಮಿತಿಯಲ್ಲಿ ತೊಡಗಿದ್ದಾರೆ ಎಂಬ ಅಂಶವೂ ತಿಳಿದುಬಂದಿತು. ನಮಗೆ ಮಕ್ಕಳು ಬೇಕೆಂಬ ಕಾತರವಿದೆ; ಆದರೆ ಯುದ್ಧಕ್ಕೂ ನಾವು ಅವರಿಗೆ ಉಸಿರುಕಟ್ಟಿಸುವ, ಭಯಂಕರ ರೂಪವನ್ನು ಖಚಿತಪಡಿಸುವ ವಾತಾವರಣವನ್ನೂ, ಪರಿಸರವನ್ನೂ ಸೃಷ್ಟಿಸುವುದಕ್ಕೆ ಶ್ರಮಿಸುತ್ತಿದ್ದೇವೆ.

ಅದಿರಲಿ. ದಿನನಿತ್ಯದ ಜೀವನದಲ್ಲಿಯೂ ನಾವು ಮಗುವನ್ನು ಅಗೌರವದಿಂದ ಕಾಣುತ್ತೇವೆ. ಬಸ್ಸುಗಳಲ್ಲಿ ಅವರನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆ ಎಂಬ ನಿದರ್ಶನವನ್ನೇ ನೋಡಬಹುದು. ಜನ ತುಂಬಿರುವ ಬಸ್ಸಿನಲ್ಲಿ ಎಷ್ಟು ಜನ ದೊಡ್ಡವರು ಮಕ್ಕಳಿಗೆ ಒಳಕ್ಕೆ ಬರಲು ದಾರಿಮಾಡಿಕೊಡುತ್ತಾರೆ? ಪ್ರತಿ ನಿಲ್ದಾಣದಲ್ಲೂ ಇಪ್ಪತ್ತರಿಂದ ಮೂವತ್ತರ ತರುಣರು, ಸಾಮರ್ಥ್ಯದ, ಚೈತನ್ಯದ ಉನ್ನತ ಸ್ಥಿತಿಯಲ್ಲಿರುವವರು, ಸಾಹಸ ಜೀವನದ ಹೊಸ್ತಿಲಲ್ಲಿರುವವರು, ಮಕ್ಕಳನ್ನು ಅತ್ತ ನೂಕಿ ಬಸ್ಸಿನೊಳಕ್ಕೆ ಮೊದಲು ನುಗ್ಗುತ್ತಾರೆ. ಎಲ್ಲೋ ಒಂದೆರಡು ಖಾಲಿ ಉಳಿದಿರುವ ಸೀಟುಗಳನ್ನು ಆಕ್ರಮಿಸಿಕೊಳ್ಳುತ್ತಾರೆ. ಕೇವಲ ಕೆಲವು ನಿಮಿಷಗಳ ಕಾಲ ಬಸ್ಸಿನಲ್ಲಿ ನಿಂತು ಬರುವ ಆಯಾಸವನ್ನು ಇವರು ತಡೆದುಕೊಳ್ಳಲಾರರು.

ಇನ್ನೊಂದು ಉದಾಹರಣೆ ನೋಡೋಣ : ನಮ್ಮ ಪ್ರಾಥಮಿಕ ಶಾಲೆಗಳನ್ನು ನೋಡಿ. ಅವುಗಳಲ್ಲಿ ಹೆಚ್ಚಿನವು ಎಂಥ ಜೀರ್ಣಾವಸ್ಥೆಯಲ್ಲಿವೆಯೆಂಬುದನ್ನು ಗಮನಿಸಿ. ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಿಗೆ ಹೋಗುವ ಬಾಲಕ ಬಾಲಕಿಯರಿಗೆ ತರುಣ ತರುಣಿಯರಿಗೆ ಯಾವಬಗೆಯ ಅನುಕೂಲತೆಗಳು ದೊರಕುತ್ತಲಿವೆಯೆಂಬುದನ್ನು ನೋಡಿ ಎರಡನ್ನೂ ಹೋಲಿಸಿದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಎಂಥ ಪರಿಸರದಲ್ಲಿ ಮಕ್ಕಳ ಶಿಕ್ಷಣ ಪಡೆಯಬೇಕಾಗಿದೆಯೆಂಬುದರ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ನಾವು ಕುದುರೆಯ ಮುಂದೆ ಗಾಡಿ ಕಟ್ಟಿದ್ದೇವೆ ಎನಿಸುತ್ತದೆ. ಎಲ್ಲೆಲ್ಲಿ ಅತ್ಯುತ್ತಮ ಅಂಶಗಳನ್ನು ನಾವು ಮಕ್ಕಳಿಗೆ ಒದಗಿಸಬೇಕೋ ಅಲ್ಲೆಲ್ಲ ಅವರ ಬಲಿಗೊಟ್ಟು ಅತ್ಯುತ್ತಮ ಅಂಶಗಳನ್ನು ನಮಗೇ ಒದಗಿಸಿಕೊಳ್ಳುತ್ತಿದ್ದೇವೆ.

ನೋಬೆಲ್ ಬಹುಮಾನ ವಿಜೇತ (೧೯೪೫) ಚಿಲಿಯ ಕವಯಿತ್ರಿ ಮೆಡೇಂ ಗೇಬ್ರೆಲಾ ಮಿಸ್ಟ್ರಲ್ (Gabriela Mistral) ನಾವು ಮಕ್ಕಳ ಬಗೆಗೆ ತಳೆದಿರುವ ಧೋರಣೆಗಾಗಿ ವಿಷಾದಿಸುತ್ತಾ ಹೀಗೆ ಎಚ್ಚರಿಕೆ ಕೊಟ್ಟರು : "ನಾವು ಎಷ್ಟೋ ತಪ್ಪುಗಳನ್ನು ಮಾಡಿದ್ದೇವೆ. ಆದರೆ ಎಲ್ಲಕ್ಕಿಂತ ದೊಡ್ಡ ತಪ್ಪು ಮಕ್ಕಳನ್ನು ಕಡೆಗಣಿಸಿರುವುದು. ಬದುಕಿನ ಮೂಲ ನೆಲೆಯನ್ನೇ ಅಲಕ್ಷಿಸಿರುವದು. ನಮಗೆ ಅಗತ್ಯವಾಗಿರುವ ಅನೇಕ ವಸ್ತುಗಳು ಕಾಯಬಲ್ಲುವು, ಮಗು ಕಾದಿರಲಾರದು. ಅವನ ಮೂಳೆ ರೂಪುಗೊಳ್ಳುತ್ತಿರುವುದು ಈಗ. ರಕ್ತ ಪರಿಚಲನೆ ಸಮರ್ಪಕವಾಗುತ್ತಿರುವದು ಈಗ. ಅವನ ಇಂದ್ರಿಯಗಳು ಪಟುಗೊಳ್ಳುತ್ತಿರುವದು ಈಗ. ಆದ್ದರಿಂದ ನಾವು ಈಗಲೇ ಕಾರ್ಯೋನ್ಮುಖರಾಗಬೇಕು. ಅವನಿಗೆ "ನಾಳೆ" ಎಂದು ಉತ್ತರ ಕೊಡಬಾರದು. ಅವನ ಹೆಸರು 'ಈ ದಿನ'ವೇ ಹೊರತು 'ನಾಳೆ'ಯಲ್ಲ.

ಮಕ್ಕಳು ಮತ್ತು ಅವರ ಶಾಲಾ ಅಗತ್ಯಗಳು :

ಆರರಿಂದ ಹದಿನಾಲ್ಕು ವರ್ಷ ವಯೋಮಾನದ ಮಕ್ಕಳಿಗೆ ಶಿಕ್ಷಣ ಉಚಿತವಾಗಿಯೂ, ಕಡ್ಡಾಯವಾಗಿಯೂ ಇರಬೇಕೆಂದು ನಮ್ಮ ಸಂವಿಧಾನ ವಿಧಿಸಿದೆ. ಈ ವಿಧಿಯನ್ನು ಆಚರಣೆಗೆ ತರುವುದರಲ್ಲಿ ಮಾತ್ರ ನಮ್ಮ ವೇಗ ಬಸವನ ಹುಳುವಿನದು: ಅದಕ್ಕೆ ನೂರಾರು ಅಡ್ಡಿ ತಡೆಗಳು. ಶಾಲಾ ಮಕ್ಕಳಿಗೆ ಕನಿಷ್ಠ ಪ್ರಮಾಣದ ಭೌತಿಕ ಅಗತ್ಯಗಳನ್ನು ಒದಗಿಸುವುದೂ ನಮ್ಮ ದೇಶದ ಎಲ್ಲ ರಾಜ್ಯಗಳಲ್ಲೂ ಸಾಧ್ಯವಾಗಿಲ್ಲ.

ಅ) ಹೆಚ್ಚು ಹೆಚ್ಚು ಮಕ್ಕಳು ಶಾಲೆಗೆ ಹೋಗತೊಡಗಿದಂತೆ ಅಲ್ಲಿ ಸ್ಥಳಾವಕಾಶ ಕಡಿಮೆಯಾಗುತ್ತಿದೆ. ಅನೇಕ ಶಾಲಾ ಕಟ್ಟಡಗಳೇ ತೀರಾ ಅನಾರೋಗ್ಯಕರ ಪರಿಸ್ಥಿತಿಗಳಲ್ಲಿವೆ.

ಆ) ಉಪಾಧ್ಯಾಯ-ವಿದ್ಯಾರ್ಥಿ ಪರಿಮಾಣ ಹೇಗಿದೆಯೆಂದರೆ ಶಾಲೆಗಳಲ್ಲಿ ಆತ್ಮೀಯವೂ ಚೈತನ್ಯಪೂರ್ಣವೂ ಆದ ಒಂದು ಪರಿಸರ ನಿರ್ಮಾಣವೇ ಇಂದು ಸಾಧ್ಯ

ವಾಗಿಲ್ಲ. ಪ್ರಾಥಮಿಕ ಹಂತದಲ್ಲಿ ತರಗತಿಗೊಬ್ಬ ಉಪಾಧ್ಯಾಯ ಎಂಬ ವ್ಯವಸ್ಥೆಯೇ ಇನ್ನೂ ಮುಂದುವರಿದಿದೆ. ೬೦ ರಿಂದ ೧೦೦ ಮಕ್ಕಳು ಕಿಕ್ಕಿರಿದು ತುಂಬಿದ ತರಗತಿಯಲ್ಲಿ ಪ್ರತಿದಿನವೂ ಆರು ಗಂಟೆ ಕಳೆಯಬೇಕಾದ ಉಪಾಧ್ಯಾಯನ ದುಸ್ಥಿತಿ ಎಂಥದೆಂಬುದನ್ನು ಊಹಿಸಿಕೊಳ್ಳಬಹುದು. ಕೆಲವು ಗಂಟೆಗಳಾದೊಡನೆ ಉಪಾಧ್ಯಾಯನಿಗೂ ಮಕ್ಕಳಿಗೂ ತೀವ್ರ ಬೇಸರಿಕೆಯುಂಟಾಗುವುದು ಖಂಡಿತ.

ಇ) ಶಿಕ್ಷಣದ ಮುಖ್ಯ ಸಲಕರಣೆಯಾದ ಪಠ್ಯಪುಸ್ತಕಗಳ ವಿಚಾರವಾದರೂ ಹೇಗೆ? ನಾವು ನಮ್ಮ ಚಿಕ್ಕಂದಿನಲ್ಲಿ ಓದುತ್ತಿದ್ದ ಪಠ್ಯಪುಸ್ತಕಗಳಿಗೆ ಹೋಲಿಸಿ ನೋಡಿದರೆ ಇಂದಿನವು ತೀರಾ ಕೆಟ್ಟದಾಗಿ ಬರೆದ ಪುಸ್ತಕಗಳು. ಕಲ್ಪನಾಶಕ್ತಿಯನ್ನು ಉಪಯೋಗಿಸದೆ ಚಿತ್ರ ಬರೆದಿರುವಂಥವು: ಅತ್ಯಂತ ಹೆಚ್ಚಿನ ಔದಾಸೀನ್ಯದಿಂದ ಅಚ್ಚುಮಾಡಿಸಿ ಪ್ರಕಟಿಸಿರುವಂಥವು. ಪಠ್ಯಪುಸ್ತಕಗಳನ್ನು ವಿಟಮಿನ್ ಗುಳಿಗೆಗಳಿಗೆ ಹೋಲಿಸುತ್ತಾರೆ. ವಿದ್ಯಾರ್ಥಿಯ ಮನಸ್ಸುಗಳಿಗೆ ಸತ್ವ ತುಂಬಿ ಅವರ ಕುತೂಹಲವನ್ನು ಬಡಿದೆಬ್ಬಿಸಿ, ವಿಷಯಗಳ ಬಗೆಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ತೃಷೆಯನ್ನು ಅವರಲ್ಲಿ ಪಠ್ಯಪುಸ್ತಕಗಳು ಮೂಡಿಸಬೇಕು. ನಮ್ಮ ಪಠ್ಯಪುಸ್ತಕಗಳಾದರೋ ಮಕ್ಕಳ ಕುತೂಹಲವನ್ನು ಕೆರಳಿಸುವುದಕ್ಕೆ ಬದಲಾಗಿ ಒಂದೇ ಪೆಟ್ಟಿಗೆ ಅದನ್ನು ಕತ್ತರಿಸುವಂಥವು. ಕೊಲೆಗಡುಕನ ಕತ್ತಿಯೊಂದೇ ಅವಕ್ಕೆ ಹೋಲಿಕೆ.

ಈ) ಮನಸ್ಸು ಮತ್ತು ಬುದ್ಧಿಶಕ್ತಿ ಬೆಳೆಯಲು ಮಕ್ಕಳಿಗೆ ಪಠ್ಯೇತರ ವಿಷಯಗಳನ್ನು ಕುರಿತ ಪುಸ್ತಕಗಳೂ ಬೇಕು ಎಂಬುದರಲ್ಲಿ ಸಂದೇಹವಿಲ್ಲ. ಶಾಲಾ ಗ್ರಂಥಾಲಯಗಳಲ್ಲಿ, ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಅವು ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ಮಕ್ಕಳ ಬಗ್ಗೆ ಸಾರ್ವಜನಿಕರ ಗಮನ ಸೆಳೆಯಲು ಪ್ರಯತ್ನಗಳು :

ರಾಷ್ಟ್ರೀಯ ಮಟ್ಟದಲ್ಲಿ ಜನತೆಯ ಗಮನವನ್ನು ಮಕ್ಕಳ ಕಡೆಗೆ ಭಾರತದ ಭವಿಷ್ಯ ನಿರ್ಮಾಪಕರಾದ ಅವರ ಪಾತ್ರದ ಬಗ್ಗೆ ಸೆಳೆಯಲು ಜವಾಹರಲಾಲ್ ನೆಹರೂ ಪ್ರಯತ್ನಿಸಿದರು. ಬಹುಮಟ್ಟಿಗೆ ಅವರಿಂದಾಗಿ ಮತ್ತು ಮಕ್ಕಳ ಬಗ್ಗೆ ಅವರಿಗಿದ್ದ ಪ್ರೇಮದಿಂದಾಗಿ ಬಾಲಕ್ಷೇಮ ಯೋಜನೆಗಳು ಪ್ರಾರಂಭವಾದುವು. "ಬಾಲಭವನ"ಗಳು ಹುಟ್ಟಿದುವು. ಉಚಿತವಾಗಿ ಮಕ್ಕಳಿಗೆ ಹಾಲು ಒದಗಿಸಲಾಯಿತು. ಮಕ್ಕಳ ಉದ್ಯಾನಗಳನ್ನು ಬೆಳೆಸತೊಡಗಿದರು. ಪ್ರತಿವರ್ಷ ನವೆಂಬರ್ ೧೪ ನೆಯ ತಾರೀಕನ್ನು ರಾಷ್ಟ್ರವ್ಯಾಪ್ತ ಮಕ್ಕಳ ದಿನ ಎಂಬುದಾಗಿ ಆಚರಿಸಲು ಮೊದಲಿಟ್ಟಿತು. ಈ ಪ್ರಯತ್ನಗಳಿಗೆಲ್ಲ ಕಳಸವಿಟ್ಟ ಹಾಗೆ "ಚಿಲ್ಡ್ರನ್ಸ್ ಬುಕ್ ಟ್ರಸ್ಟ್" ಸ್ಥಾಪನೆಗೊಂಡಿತು.

ಸುಪ್ರಸಿದ್ಧ "ಶಂಕರ್ಸ್ ವೀಕ್ಲಿ"ಯ ಶಂಕರ್ ಅವರು ಪ್ರತಿವರ್ಷ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸಿ ಬೇಕಾದಷ್ಟು ಕೆಲಸ ಮಾಡಿದರು. ಅವರ "ಚಿಲ್ಡ್ರನ್ಸ್

ವರ್ಲ್ಡ್" ಪತ್ರಿಕೆಗೆ ಸಮನಾದ ಇನ್ನೊಂದು ಪತ್ರಿಕೆ ಭಾರತದ ಯಾವುದೇ ಭಾಷೆಯಲ್ಲಿ ಇಲ್ಲ. ಅಂತರರಾಷ್ಟ್ರೀಯ ಗೊಂಬೆ ಮ್ಯೂಸಿಯಂ ಕೂಡ ಅವರದೇ ಸೃಷ್ಟಿ. ಇವೆಲ್ಲ ಬಹು ಶ್ರಮಸಾಧ್ಯ ಸಾಧನೆಗಳೇ ಆಗಿದ್ದರೂ ಮಕ್ಕಳು ಭಾರತದ ಆರೋಗ್ಯವಂತರೂ, ಬುದ್ಧಿವಂತರೂ ಆದ ಪೌರರಾಗಿ ಬೆಳೆಯಲು ನಾವಿನ್ನೂ ಅಪಾರವಾದ ಅವಕಾಶಗಳನ್ನು ಅವರಿಗೆ ಒದಗಿಸಿಕೊಡಬೇಕಾಗಿದೆ.

ಭಾರತದಲ್ಲಿ ಮಕ್ಕಳ ಪುಸ್ತಕಗಳು :

ಭಾರತದಲ್ಲಿ ಶಾಲೆ ಮತ್ತು ಕಾಲೇಜುಗಳಿಗೆ ಹೋಗುವ ಮಕ್ಕಳು ಈಗ ಸುಮಾರು ೧೦ ಕೋಟಿ ಇದ್ದಾರೆ. ಇದರಲ್ಲಿ ಎಲ್ಲೋ ಅಲ್ಪ ಶೇಕಡಾವಾರು ಜನ ವಿಶ್ವ ವಿದ್ಯಾನಿಲಯಗಳಿಗೆ ಮತ್ತು ಕಾಲೇಜುಗಳಿಗೆ ಹೋಗುವವರು. ಹಾಗಾಗಿ ಹೆಚ್ಚು ಕಡಿಮೆ ೯.೫ ಕೋಟಿ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ– ಸು. ೬ ರಿಂದ ೧೮ ವರ್ಷ ವಯೋಮಾನದ ಮಕ್ಕಳಿಗೆ-ಪುಸ್ತಕಗಳನ್ನು ಮಾಹಿತಿಯನ್ನು, ರಾಷ್ಟ್ರದ ೧೬ ಭಾಷೆಗಳಲ್ಲಿ ಪುಸ್ತಕಗಳು ಮತ್ತು ಪತ್ರಿಕೆಗಳ ಮೂಲಕ ನಾವು ಒದಗಿಸಬೇಕಾಗಿದೆ.

ಮಕ್ಕಳು ಎಲ್ಲ ಕಡೆಯೂ ಮಕ್ಕಳೇ. ಭಾರತದ ಮಕ್ಕಳೂ ಬೇರೆ ಎಲ್ಲಿನಂತೆಯೇ ಪುಸ್ತಕಗಳನ್ನು ಓದಲು ಆಶೆಪಡುತ್ತಾರೆ. ಅವರಿಗೆ ಪುಸ್ತಕಗಳು ಸಿಕ್ಕಬೇಕು ಅಷ್ಟೆ. ಕೇಂದ್ರ ಶಿಕ್ಷಣ ಸಚಿವ ಖಾತೆಯು ೧೯೫೭ರಲ್ಲಿ "ಮನರಂಜನೆಗಾಗಿ ಓದು" (Reading for pleasure) ಎಂಬ ವಿಷಯವಾಗಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅಲ್ಲಿ ವ್ಯಕ್ತವಾದ ಅಂಶಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಪಠ್ಯೇತರ ಓದು ಯಾವುದೇ ರೀತಿಯಲ್ಲೂ ಮಕ್ಕಳ ಪಠ್ಯಭಾಗಗಳ ಅಭ್ಯಾಸದ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಎಂಬುದೂ ಅಲ್ಲಿ ವ್ಯಕ್ತವಾಯಿತು. ಅದಕ್ಕೆ ಬದಲು ಪಠ್ಯಪುಸ್ತಕಗಳಲ್ಲದೆ ಬೇರೆ ಪುಸ್ತಕಗಳನ್ನು ಓದುವವರು ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮತರವಾಗಿ ಅಂಕ ಗಳನ್ನು ಗಳಿಸಿದರು. ೧) ಅವರ ಶಬ್ದಸಂಪತ್ತು ಹೆಚ್ಚಾಗಿತ್ತು. ೨) ಅವರ ಅಭಿವ್ಯಕ್ತಿ ಉತ್ತಮತರವಾಗಿತ್ತು. ೩) ಅವರ ಸಾಮಾನ್ಯ ಜ್ಞಾನವು ಹೆಚ್ಚು ವ್ಯಾಪಕವೂ ವೈವಿಧ್ಯ ಪೂರಿತವೂ ಆಗಿತ್ತು.

ಓದಲಾಗಲಿ, ಬರೆಯಲಾಗಲಿ ಇನ್ನೂ ಬಂದಿರದ ಪುಟಾಣಿ ಹಸುಗೂಸುಗಳು ಕೂಡ ಪುಸ್ತಕಗಳಿಗಾಗಿ ಆಶೆಪಡುತ್ತಾರೆ ಎಂಬುದನ್ನು ಸೂಚಿಸುವುದು ಅಗತ್ಯ. ಕೇವಲ ಚಿತ್ರಗಳಿಂದ ಪ್ರಾಣಿಗಳು (ಅದರಲ್ಲೂ ಮನುಷ್ಯರ ಹಾಗೆ ಉಡುಪು ಧರಿಸಿದವು), ರೈಲುಗಳು, ವಿಮಾನಗಳು, ಕಾರುಗಳು, ಹಡಗುಗಳು ಮುಂತಾದ ಚಿತ್ರಗಳಿಂದ ತುಂಬಿದ ಸಣ್ಣ ಬಣ್ಣದ ಪುಸ್ತಕಗಳನ್ನು ಅವರ ಕೈಯಲ್ಲಿ ಇರಿಸಿ ನೋಡಿ. ಅವುಗಳನ್ನು ಬಿಟ್ಟೇಳು ವುದಕ್ಕೆ ಅವರಿಗೆ ಮನಸ್ಸಾಗುವುದಿಲ್ಲ. (ರಷ್ಯನರು ಮಕ್ಕಳಿಗಾಗಿ ಇಂಗ್ಲೀಷಿನಲ್ಲಿ

ಪ್ರಕಟಿಸಿರುವ ಪುಸ್ತಕಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸದೇ ಇರಲಾರೆ.) ಅಂಥ 'ಅನಕ್ಷರ' ಹಸುಳೆಗಳೂ ಕಥೆ ಕೇಳಲು ಹಾಡು ಕೇಳಲು, ತುಂಬ ಇಷ್ಟಪಡುತ್ತಾರೆ ಎಂಬುದು ಎಲ್ಲರಿಗೂ ಅನುಭವಕ್ಕೆ ಬಂದಿರಬೇಕು. ಇಂಥ ಪ್ರಯತ್ನಗಳೆಲ್ಲ ಮಕ್ಕಳ ಮಾನಸಿಕ ಅಗತ್ಯಗಳನ್ನು ಪೂರೈಸುವ ಜೊತೆಗೆ ಕುಟುಂಬವನ್ನು ಪ್ರೇಮದ ಬಂಧನದಲ್ಲಿ ಒಂದಾಗಿ ಬೆಸೆಯುತ್ತವೆ.

ಭಾರತದಲ್ಲಿ ಮಕ್ಕಳ ಪುಸ್ತಕಗಳು ಹೆಚ್ಚು ಪ್ರಮಾಣದಲ್ಲಿ ಪ್ರಕಟವಾಗುತ್ತಿಲ್ಲ. ಹೊರಬರುತ್ತಿರುವ ಅಲ್ಪ ಸ್ವಲ್ಪವೂ ೯.೫ ಕೋಟಿ ಶಾಲಾ ಮಕ್ಕಳ ಅಗತ್ಯಗಳನ್ನು ಪೂರೈಸುವಷ್ಟಂತೂ ಅಲ್ಲವೇ ಅಲ್ಲ. ರಾಷ್ಟ್ರೀಯ ಗ್ರಂಥಾಲಯವು (National Library) ಒದಗಿಸಿದ ಅಂಕಿ ಅಂಶಗಳು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುವ ಮಕ್ಕಳ ಸಾಹಿತ್ಯದ ನಿರಾಶಾದಾಯಕ ಚಿತ್ರವನ್ನು ಕೊಡುತ್ತವೆ. ಈ ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ೧೯೭೬–೭೭ರಲ್ಲಿ ಪ್ರಕಟವಾದ ಪುಸ್ತಕಗಳ ಪ್ರಮಾಣವನ್ನು ನೋಡಬಹುದು:

ಭಾಷೆ	ಒಟ್ಟು ಪುಸ್ತಕಗಳ ಸಂಖ್ಯೆ	ಮಕ್ಕಳ ಪುಸ್ತಕಗಳು
ಅಸ್ಸಾಮಿ	೩೦೨	೪
ಬಂಗಾಳೀ	೧೩೩೯	–
ಇಂಗ್ಲೀಷು	೧೦೧೨೧	೩೮
ಗುಜರಾತಿ	೭೬೩	–
ಹಿಂದೀ	೩೨೧೫	೨೦೭
ಕನ್ನಡ	೧೨೬೧	–
ಮಲಯಾಳಂ	೬೦೧	೩೭
ಮರಾಠಿ	೧೩೧೫	೩೦
ಒರಿಯಾ	೨೮೦	–
ಪಂಜಾಬೀ	೩೨೦	೨೫
ಸಂಸ್ಕೃತ	೨೧೦	–
ತಮಿಳು	೧೨೯೪	–
ತೆಲುಗು	೪೪೬	–
ಉರ್ದು	೩೦೮	–
ಇತರ ಭಾಷೆಗಳು	೧೪೭	–
	ಒಟ್ಟು ೨೧೯೨೨	೩೪೧

ಪ್ರಾದೇಶಿಕ ಪ್ರಯತ್ನಗಳು :

ಮೇಲೆ ಕೊಟ್ಟಿರುವ ಮಾಹಿತಿಯಿಂದ ಇತರ ಭಾಷೆಗಳಲ್ಲಿನ ಮಕ್ಕಳ ಪುಸ್ತಕ ಪ್ರಕಟನೆಯ ಬಗೆಗೆ ಸುಲಭವಾಗಿ ತಿಳಿಯುವುದಿಲ್ಲ ಎಂಬುದು ಗೊತ್ತಾಗುತ್ತದೆ. ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಮಕ್ಕಳ ಪುಸ್ತಕಗಳ ಗ್ರಂಥಸೂಚಿಯೂ ಯಾವುದೂ ಇಲ್ಲವಾಗಿದೆ. ಆದರೆ ಎಲ್ಲ ಭಾಷೆಗಳಲ್ಲೂ ಅವು ಪ್ರಕಟವಾಗುತ್ತಿವೆ ಎಂದು ಧೈರ್ಯವಾಗಿ ಹೇಳಬಹುದು. 'ಹಿತೋಪದೇಶ', 'ಪಂಚತಂತ್ರ' ಇತ್ಯಾದಿ ಪ್ರಾಚೀನ ಕೃತಿಗಳು 'ಅರೇಬಿಯನ್ ನೈಟ್ಸ್', 'ರಾಬಿನ್‌ಸನ್ ಕ್ರೂಸೋ', 'ಟ್ರೆಷರ್ ಐಲೆಂಡ್', 'ಆ್ಯಲಿಸ್ ಇನ್ ವಂಡರ್‌ಲ್ಯಾಂಡ್' ಇತ್ಯಾದಿ ಪ್ರಸಿದ್ಧ ಕೃತಿಗಳ ಅನುವಾದಗಳು ಹೆಚ್ಚು ಕಡಿಮೆ ಎಲ್ಲ ಭಾಷೆಗಳಲ್ಲಿ ಸಿಕ್ಕಿಯೇ ಸಿಕ್ಕುತ್ತವೆ. ಹಾಗೆಯೇ ಎಲ್ಲ ಪ್ರಾಂತಗಳಲ್ಲೂ ಮಕ್ಕಳ ಸಾಹಿತ್ಯವನ್ನು ಪ್ರಕಟಿಸುವ ಖಾಸಗೀ ಪ್ರಕಾಶಕರಿದ್ದಾರೆ.

ಕನ್ನಡದ ಮಟ್ಟಿಗೆ ಹೇಳುವುದಾದರೆ, ಬೆಂಗಳೂರಿನ 'ಇಂಡಿಯಾ ಬುಕ್ ಹೌಸ್' ಮತ್ತು 'ರಾಷ್ಟ್ರೋತ್ಥಾನ ಸಾಹಿತ್ಯ', ಮೈಸೂರಿನ 'ಕಾವ್ಯಾಲಯ', ಧಾರವಾಡದ 'ಸಮಾಜ ಪುಸ್ತಕಾಲಯ' ಇವು ಈಗ ಪ್ರಶಂಸನೀಯವಾದ ಕೆಲಸ ಮಾಡುತ್ತಿವೆ. ಈ ಸಂದರ್ಭದಲ್ಲಿ ಮಂಗಳೂರಿನ 'ಬಾಲಸಾಹಿತ್ಯ ಮಂಡಲವು' ಪ್ರಕಟಿಸುತ್ತಿದ್ದ ಸುಂದರವಾದ ಪುಟ್ಟ ಪುಸ್ತಕಗಳು, ಸಾಲಿ ರಾಮಚಂದ್ರರಾಯರು ಗುಜರಾತಿಯಿಂದ ಅನುವಾದಿಸಿದ 'ಸಿಪಾಯಿಪ್ಪ' ದಂತಹ ಕಥೆಗಳು, ಹೊಳೆನರಸೀಪುರದಿಂದ ಪ್ರಕಟವಾಗುತ್ತಿದ್ದ ನಗೆಪತ್ರಿಕೆ 'ವಿಕಟ ಮಾವ' ಇವುಗಳ ಮಧುರ ನೆನಪು ನನ್ನ ಮನಸ್ಸನ್ನು ಮುತ್ತುತ್ತದೆ. ಈಗ ಮಕ್ಕಳ ಸಾಹಿತ್ಯವನ್ನು ಬರೆದಿರುವ ಲೇಖಕರಲ್ಲಿ ಪ್ರಸಿದ್ಧರಾದವರು ಕುವೆಂಪು, ರಾಜರತ್ನಂ, ಪಂಜೆ ಮಂಗೇಶರಾವ್, ಮೇವುಂಡಿ ಮಲ್ಲಾರಿ, ಅನುಪಮಾ ನಿರಂಜನ ಇತ್ಯಾದಿ.

ದೆಹಲಿಯ ಪ್ರಕಾಶಕರಾದ 'ಆತ್ಮಾರಾಂ ಆ್ಯಂಡ್ ಸನ್ಸ್' ಹಾಗೂ 'ರಾಜಪಾಲ್ ಆ್ಯಂಡ್ ಸನ್ಸ್' ಇವರು ಹಿಂದಿಯಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶಕರಲ್ಲಿ ಪ್ರಸಿದ್ಧರು. ಕುಳಿವೇಲಿ ಅವರು ಮಲಯಾಳದಲ್ಲಿ ತಾವೇ ಸುಮಾರು ೨೦೦ ಪುಸ್ತಕಗಳನ್ನು ಬರೆದು 'ಬಾಲನ್ ಪಬ್ಲಿಕೇಷನ್ಸ್' ಎಂಬ ತಮ್ಮದೇ ಸಂಸ್ಥೆಯಿಂದ ಪ್ರಕಟಿಸಿ ಮಲಯಾಳದ ಮಕ್ಕಳಿಗೆ ನೀಡಿದ್ದಾರೆ. 'ಕೇರಳ ರೈಟರ್ಸ್ ಕೋ ಆಪರೇಟಿವ್ ಸೊಸೈಟಿಯು' ನಡೆಸುತ್ತಿರುವ 'ದಿ ನ್ಯಾಷನಲ್ ಬುಕ್ ಸ್ಟಾಲ್' ಒಂದು ವಿಶಿಷ್ಟ ಸಾಹಸ. ೧೯೬೧ ರಿಂದಲೂ ಮಕ್ಕಳಿಗಾಗಿ ಉಡುಗೊರೆ ಪೆಟ್ಟಿಗೆಗಳನ್ನು ಅದು ಸ್ಥಿರಪಡಿಸಿ ಮಾರುತ್ತಿದೆ. ಪ್ರತಿಯೊಂದು ಪೆಟ್ಟಿಗೆಯಲ್ಲೂ ೧೦–೧೨ ಮಕ್ಕಳ ಪುಸ್ತಕಗಳಿರುತ್ತವೆ. ಕೇರಳ ಸಾಹಿತ್ಯ ಅಕಾಡೆಮಿಯೂ ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸುತ್ತದೆ. ಮಕ್ಕಳ ಸಾಹಿತ್ಯ ರಚನೆಗೆ ಬಹುಮಾನ ನೀಡುತ್ತದೆ. ಭೋಜರಾಜ್ ಮೊಟ್ವಾನಿ ಪ್ರಾರಂಭಿಸಿದ 'ಬಾಲಕನ್‌ಜೀಬಾರಿ'ಯು ಸಿಂಧಿ ಭಾಷೆಯಲ್ಲಿ ಮಕ್ಕಳಿಗಾಗಿ ಪುಸ್ತಕಗಳನ್ನೂ 'ಗುಲಿಸ್ತಾನ'ದಂತಹ ಪತ್ರಿಕೆಗಳನ್ನೂ ಪ್ರಕಟಿಸುತ್ತದೆ.

ಮಕ್ಕಳಿಗಾಗಿ ಹಲವು ನಿಯತಕಾಲಿಕೆಗಳು ದೇಶದ ವಿವಿಧ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ. ಜೊತೆಗೆ ಪ್ರತಿ ಭಾಷೆಯ ಮುಖ್ಯ ದಿನ, ವಾರ, ಮಾಸಪತ್ರಿಕೆಗಳು ಒಂದೋ ಎರಡೋ ಪುಟಗಳನ್ನು ಮಕ್ಕಳಿಗಾಗಿ ಮೀಸಲಿಡುವುದು ಇದ್ದೇ ಇದೆ. ಉತ್ಕಲ ವಿಶ್ವವಿದ್ಯಾನಿಲಯವು ಮಕ್ಕಳ ಪುಸ್ತಕಗಳ ಪ್ರಕಟಣೆಗೆಂದೇ ನಿರ್ದಿಷ್ಟ ಪ್ರಮಾಣದ ನಿಧಿಯನ್ನು ಪ್ರತ್ಯೇಕವಾಗಿ ಮೀಸಲಿಸಿರುವುದು ಇಲ್ಲಿ ಉಲ್ಲೇಖನೀಯವಾಗಿದೆ. ಒರಿಸ್ಸಾದಲ್ಲಿ ಕಂಡು ಬಂದಿರುವ ಬಾಲಸಾಹಿತ್ಯ ಕ್ಷಾಮವನ್ನು ತೊಡೆದು ಹಾಕಲು ವಿಶ್ವವಿದ್ಯಾನಿಲಯದ ಅಧಿಕಾರಿಗಳು ತೋರುತ್ತಿರುವ ಕಾತರಕ್ಕೆ ಇದು ಕನ್ನಡಿಯಾಗಿದೆ.

ಆದರೇನು? ಈ ಎಲ್ಲ ಪ್ರಯತ್ನಗಳು ಕೂಡಿದರೂ, ಮಕ್ಕಳ ಅಗತ್ಯಗಳೊಡನೆ ಹೋಲಿಸಿದರೆ, ಸಾಗರದ ಒಂದು ಹನಿಯಿದ್ದ ಹಾಗೆ. ಸಾಲದ್ದಕ್ಕೆ ಪ್ರಕಟವಾಗುತ್ತಿರುವ ಬಹುಪಾಲು ಸಾಹಿತ್ಯ ನಗರ ಪ್ರದೇಶಗಳ ಮಕ್ಕಳನ್ನು ಉದ್ದೇಶಿಸಿದವಾಗಿವೆ. ಅಗಾಧ ಸಂಖ್ಯೆಯ ಗ್ರಾಮೀಣ ಮಕ್ಕಳನ್ನು ನಾವು ಗಣನೆಗೆ ತೆಗೆದುಕೊಂಡೇ ಇಲ್ಲ.

ರಾಷ್ಟ್ರೀಯ ಪ್ರಯತ್ನಗಳು :

ಈ ಕ್ಷೇತ್ರದಲ್ಲಿ ಹೆಸರಿಸಬೇಕಾದ ಎರಡು ಪ್ರಯತ್ನಗಳೆಂದರೆ 'ನ್ಯಾಷನಲ್ ಬುಕ್ ಟ್ರಸ್ಟ' ಹಾಗೂ 'ಚಿಲ್ಡ್ರನ್ಸ್ ಬುಕ್ ಟ್ರಸ್ಟ' ಸಂಸ್ಥೆಗಳು ಮಾಡುತ್ತಿರುವ ಕೆಲಸ. ೧೯೫೭ ರಲ್ಲಿ ಸ್ಥಾಪಿತವಾದ ನ್ಯಾ. ಬು. ಟ್ರ. ತನ್ನ 'ನೆಹರೂ ಬಾಲ ಪುಸ್ತಕಾಲಯ' ಮಾಲೆಯಲ್ಲಿ ಇದುವರೆಗೆ ಇಂಗ್ಲೀಷಿನಲ್ಲಿ ೬೦ ಪುಸ್ತಕಗಳನ್ನು ಪ್ರಕಟಿಸಿದೆ. ಇವುಗಳನ್ನು ಹನ್ನೆರಡನ್ನು ಭಾರತೀಯ ಭಾಷೆಗಳಿಗೆ ಅನುವಾದ ಮಾಡಿಸಲಾಗುತ್ತಿದೆ. ೧೯೫೭ರಲ್ಲಿಯೇ ಸ್ಥಾಪಿತವಾದ 'ಚಿಲ್ಡ್ರನ್ಸ್ ಬುಕ್ ಟ್ರಸ್ಟ' ಸಂಸ್ಥೆಯ ಸಾಧನೆ ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಇದುವರೆಗೆ ೨೬೩ ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಭಾಷಾವಾರು ವಿವರ ಹೀಗಿದೆ :

ಇಂಗ್ಲೀಷ	೧೧೮	ಮರಾಠಿ	೩
ಹಿಂದೀ	೯೫	ತಮಿಳು	೮
ಬಂಗಾಳಿ	೧೯	ಕನ್ನಡ	೭
ಗುಜರಾತಿ	೧೩		
		ಒಟ್ಟು	೨೬೩

'ದಿ ಆಲ್ ಇಂಡಿಯಾ ಜುವೆನಲ್ ಲಿಟರರಿ ಕಾನ್‌ಫರೆನ್ಸ' (ಎಐಜೆಎಲ್‌ಸಿ) ಮಕ್ಕಳಿಗಾಗಿ ಬರೆಯುವ ಕವಿಗಳು, ಪ್ರಬಂಧಕಾರರು, ನಾಟಕಕಾರರು, ಕಥೆಗಾರರು, ಕಾದಂಬರಿಕಾರರು ಹಾಗೂ ಮಕ್ಕಳ ಸಾಂಸ್ಕೃತಿಕ ಹಾಗೂ ಮನರಂಜನಾತ್ಮಕ ಚಟುವಟಿಕೆ

ಗಳಲ್ಲಿ ಆಸಕ್ತಿಯುಳ್ಳ ಇತರರು ಒಟ್ಟುಗೂಡಿರುವ ಒಂದು ಸಂಸ್ಥೆ. ೧೯೬೧ರಲ್ಲಿ ಇದು ಕಲ್ಕತ್ತಾದಲ್ಲಿ ಸ್ಥಾಪಿತವಾಯಿತು. ೧೯೬೨ ರಲ್ಲಿ ಇದರ ಉದ್ಘಾಟನಾ ಸಮ್ಮೇಳನವು ಮಾರ್ಬಲ್ ಪ್ಯಾಲೇಸ್‌ನಲ್ಲಿ ನಡೆಯಿತು. ಪ್ರತಿವರ್ಷ ಸಮ್ಮೇಳನವು ನಡೆದು ಬಾಲ ಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುತ್ತದೆ.

ಅರವತ್ತರ ದಶಕದ ಆದಿಯಲ್ಲಿ 'ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ' ಹುಟ್ಟಿದ್ದು ದಕ್ಷಿಣ ಭಾರತದ ಮಕ್ಕಳಿಗೆ ಒಂದು ಅದೃಷ್ಟ ತೆಗೆದ ಹಾಗೆ ಎನಿಸಿತಾದರೂ, ಈಚೆಗೆ ಈ ಸಂಸ್ಥೆಯ ನಡೆ ಮಂದವಾಗಿರುವಂತೆ ತೋರುತ್ತದೆ.

'ಅಕೆಡೆಮಿ ಫಾರ್ ಡಾಕ್ಯುಮೆಂಟೇಶನ್ ಆ್ಯಂಡ್ ರಿಸರ್ಚ್ ಆಫ್ ಚಿಲ್ಡ್ರನ್ಸ್ ಲಿಟರೇಚರ್' ಎಂಬುದು ಕಲ್ಕತ್ತದಲ್ಲಿ ಸ್ಥಾಪಿತವಾಗಿರುವ ಇನ್ನೊಂದು ಸಂಸ್ಥೆ. ನಿರಂತರವಾಗಿ ಬೆಳೆಯುತ್ತಿರುವ ಮಕ್ಕಳ ಪುಸ್ತಕ ಅಗತ್ಯವನ್ನು ಪೂರೈಸುವ ವಿಧಾನ ಗಳನ್ನು ಕಂಡುಹಿಡಿಯಲು ಕಾಳಜಿ ವಹಿಸುತ್ತಿರುವ ಸಂಸ್ಥೆಯಿದು.

ಪ್ರಾದೇಶಿಕ ಭಾಷೆಗಳಲ್ಲಿನ ಮಕ್ಕಳ ಪುಸ್ತಕಗಳು ಉತ್ಪಾದನೆಯ ದೃಷ್ಟಿಯಿಂದ ಇನ್ನೂ ಬಹಳ ಉತ್ತಮಗೊಳ್ಳಬೇಕಾಗಿದೆ. ಅಭಿವೃದ್ಧ ರಾಷ್ಟ್ರಗಳಲ್ಲಿ ಪ್ರಕಟವಾಗುವ ಮಕ್ಕಳ ಪುಸ್ತಕಗಳಿಗೂ ನಮ್ಮವಕ್ಕೂ ಹೋಲಿಕೆಯೇ ಸಾಧ್ಯವಿಲ್ಲ. ಸ್ವಲ್ಪಮಟ್ಟಿಗೆ. ಹೋಲಿಸಬಹುದಾದ, ಕೆಲವು ವೇಳೆ ಅವುಗಳನ್ನು ಮೀರಿಸಬಹುದಾದ ಪ್ರಕಟಣೆಗ ಳೆಂದರೆ 'ಚಿಲ್ಡ್ರನ್ಸ್ ಬುಕ್ ಟ್ರಸ್ಟಿ'ನವು.

ಇದಿಷ್ಟು ಸಾಮಾನ್ಯ ಮಕ್ಕಳ ಗ್ರಂಥದಗತ್ಯಗಳನ್ನು ಕುರಿತದ್ದಾಯಿತು. ಆದರೆ ಅಂಗವಿಕಲತೆಗೊಳಗಾಗಿರುವ ಲಕ್ಷಾಂತರ ಮಕ್ಕಳ ಗತಿ ಏನು ? ಅವರಿಗೆ ಪುಸ್ತಕಗಳನ್ನು ಒದಗಿಸಿಕೊಡಬೇಡವೆ ? ಈ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಸಿಕ್ಕಿದಂತೆ ಕಾಣುತ್ತಿಲ್ಲ.

ನಮ್ಮ ದೇಶದಲ್ಲಿ ಮೂರು ಮಿಲಿಯಕ್ಕಿಂತಲೂ ಹೆಚ್ಚು ಮಂದಿ ಅಂಗವಿಕಲ ಮಕ್ಕಳು ಇದ್ದಾರೆಂದು ಅಂದಾಜುಮಾಡಲಾಗಿದೆ. 'ಎ' ಅನ್ನಾಂಗದ (Vitamin A) ಕೊರತೆಯಿಂದಾಗಿಯೇ ಪ್ರತಿವರ್ಷವೂ ಸುಮಾರು ೧೨,೦೦೦ ಮಕ್ಕಳು ಕುರುಡಾಗುತ್ತಿ ದ್ದಾರೆ ಎಂದು ಹೇಳಲಾಗಿದೆ. ಶಾಲೆಗೆ ಹೋಗಬೇಕಾಗಿದ್ದ ಈ ನತದೃಷ್ಟ ಮಕ್ಕಳ ಯೋಗಕ್ಷೇಮವನ್ನು ಪುಸ್ತಕಗಳು ನೋಡಿಕೊಳ್ಳಬೇಕಾಗಿದೆ. ಬ್ರೇಲ್ ಲಿಪಿಯ ಪುಸ್ತಕ ಗಳು, ಮಾತಾಡುವ ಪುಸ್ತಕಗಳು, ಚಿತ್ರಗಳು, ಹಾಗು ಇತರ ದೃಕ್–ಶ್ರವಣ ಸಾಧನ ಗಳು ಈ ಮಕ್ಕಳಿಗೆ ಸಹಾಯ ಮಾಡಬಲ್ಲವಾದರೂ ಅವು ಏನೇನೂ ಸಾಲದು. ಡೆಹರಾಡೂನನಲ್ಲಿ ಕುರುಡರಿಗಾಗಿರುವ ನ್ಯಾಶನಲ್ ಲೈಬ್ರರಿಯ ಸೀಮಿತ ಸೇವೆ ಈಗ ಈ ನತದೃಷ್ಟ ಮಕ್ಕಳಿಗೆ ಆಶಾಕಿರಣ.

ಗ್ರಂಥಾಲಯ ಸೇವೆಗಳ ಅವಕಾಶ :

ಯುನೆಸ್ಕೊ ೧೯೭೨ ರಲ್ಲಿ ಮಂಡಿಸಿದ 'ಚಾರ್ಟರ್ ಆಫ್ ದಿ ಬುಕ್' ಹೀಗೆ ಹೇಳುತ್ತದೆ: ೧) ಪ್ರತಿಯೊಬ್ಬನಿಗೂ ಓದುವ ಹಕ್ಕಿದೆ (ಅಧಿನಿಯಮ ೧); ೨) ಶಿಕ್ಷಣಕ್ಕೆ ಪುಸ್ತಕಗಳು ಮೂಲ ಅಗತ್ಯಗಳು ಅಧಿನಿಯಮ ೨): ೩) ಪುಸ್ತಕಗಳು ಅಂತರ ರಾಷ್ಟ್ರೀಯ ಅರಿವು ಮತ್ತು ಶಾಂತಿಯುತ ಸಹಕಾರಗಳನ್ನು ಘೋಷಿಸುತ್ತವೆ. (ಅಧಿನಿಯಮ ೧೦). ಆದರೆ ಪೂರ್ಣ ಪ್ರಮಾಣ ಗ್ರಂಥಾಲಯ ಸೇವೆಯನ್ನು ರೂಪಿಸಿದಾಗ ಮಾತ್ರವೆ ಈ ನಿರ್ಣಯಗಳನ್ನು ಜಾರಿಗೆ ತರುವುದು ಸಾಧ್ಯ.

ಮಕ್ಕಳಿಗಾಗಿ ನಮ್ಮ ದೇಶದಲ್ಲಿ ಪ್ರತ್ಯೇಕ ಗ್ರಂಥಾಲಯ ವ್ಯವಸ್ಥೆ ಇಲ್ಲವೇ ಇಲ್ಲವೆಂಬಷ್ಟು ವಿರಳ. ಹೇಳಿಕೊಳ್ಳಬಹುದಾದ ಇಂಥ ಗ್ರಂಥಾಲಯಗಳೆಂದರೆ, ದೆಹಲಿ ಪಬ್ಲಿಕ್ ಲೈಬ್ರರಿ, ಕಲ್ಕತ್ತೆಯ ರಾಮಕೃಷ್ಣ ಮಿಷನ್ ಚಿಲ್ಡ್ರನ್ಸ್ ಲೈಬ್ರರಿ, ನ್ಯಾಷನಲ್ ಲೈಬ್ರರಿಯ ಮಕ್ಕಳ ವಿಭಾಗ. ಕೆಲವು ಪ್ರಗತಿಗಾಮಿ ವಿಶ್ವವಿದ್ಯಾನಿಲಯಗಳು ಸ್ಥಾಪಿಸಿರುವ ಕೆಲವು ಗ್ರಂಥಾಲಯಗಳನ್ನೂ, ಅಲ್ಲಲ್ಲಿ ರೋಟರಿ ಕ್ಲಬ್ಬಿನವರ ವ್ಯವಸ್ಥೆಗೊಳಿಸಿರುವ ಗ್ರಂಥಾಲಯಗಳನ್ನೂ ಇಲ್ಲಿ ಹೇಳಿಬಿಡಬಹುದು. ೨೨ ರಾಜ್ಯಗಳು ಮತ್ತು ೯ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇವಲ ೪ ರಾಜ್ಯಗಳು ಗ್ರಂಥಾಲಯ ಕಾಯದೆಯನ್ನು ಜಾರಿಗೆ ತಂದಿವೆ. ಈ ನಾಲ್ಕರಲ್ಲಿಯೂ ಗ್ರಂಥಾಲಯ ಚಳುವಳಿ ಪ್ರೋತ್ಸಾಹಕರವಾಗಿಲ್ಲ.

ಶಾಲಾ ಗ್ರಂಥಾಲಯಗಳು :

ಖಾಸಗಿಯಾಗಿ ಸ್ಥಾಪಿತವಾಗಿರುವ ಕೆಲವು ಪ್ರೌಢ ಶಾಲೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಲೆಗಳಲ್ಲಿ ಹೆಸರಿಸಬೇಕಾದಂತಹ ಗ್ರಂಥಾಲಯ ವ್ಯವಸ್ಥೆ ಇಲ್ಲವೇ ಇಲ್ಲ. ಇನ್ನು ಪಠ್ಯೇತರ ಪುಸ್ತಕಗಳಾಗಲೀ, ಅಂಥ ಗ್ರಂಥಾಲಯಗಳಾಗಲೀ ಪ್ರಾಥಮಿಕ ಶಾಲೆಗಳಲ್ಲಿ ಇಲ್ಲವೇ ಇಲ್ಲ. ಒಟ್ಟಿನ ಮೇಲೆ ಚಿತ್ರ ತುಂಬ ಶೋಚನೀಯ. ಮಗುವಿನ ಕಲ್ಪನೆಯನ್ನು ಕೆದರುವ, ಅವನ ಹೃದಯಕ್ಕೆ ತಟ್ಟಿ, ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು ಎಂಬ ಹಸಿವೆಯನ್ನು ಅವನಲ್ಲಿ ಚುರುಕುಗೊಳಿಸುವ ಪುಸ್ತಕಗಳು. ಗ್ರಂಥಾಲಯಗಳು. ಅಗತ್ಯವಾದ ಪ್ರಮಾಣದಲ್ಲಿ ಮತ್ತು ವೈವಿಧ್ಯದಲ್ಲಿ ಕಂಡುಬರುತ್ತಿಲ್ಲ.

ಹೀಗೆ ಸಾಹಸ ಪ್ರವೃತ್ತಿಯನ್ನು ಪ್ರಚೋದಿಸಿ ಉದಾತ್ತ ಚಿಂತನೆಯನ್ನು ಪ್ರೇರೇಪಿಸುವ ಪುಸ್ತಕಗಳು ಇಲ್ಲವೇ ಇಲ್ಲವೆನಿಸುವಂಥ ಪರಿಸರದಲ್ಲಿ ನಮ್ಮ ಮಕ್ಕಳು ಬೆಳೆಯುತ್ತಿದ್ದಾರೆ. ಪುಸ್ತಕವಿಲ್ಲದ ಬದುಕು ಬಂಜೆ ಬದುಕು.

ಅಭಿವೃದ್ಧ ರಾಷ್ಟ್ರಗಳ ಪರಿಸ್ಥಿತಿ :

ಮೇಲೆ ಕೊಟ್ಟಿರುವ ಚಿತ್ರಕ್ಕೆ ತದ್ವಿರುದ್ಧವಾಗಿರುವ ಚಿತ್ರ ನಮಗೆ ಅಭಿವೃದ್ಧ ರಾಷ್ಟ್ರಗಳಲ್ಲಿನ ಪರಿಸ್ಥಿತಿಯಿಂದ ದೊರಕುತ್ತದೆ. ಯುನೈಟೆಡ್ ಕಿಂಗಡಮ್, ಅಮೇರಿಕಾ

ಮತ್ತು ಸೋವಿಯತ್ ರಷ್ಯಗಳಲ್ಲಿ ಮಕ್ಕಳ ಸಾಹಿತ್ಯ ಅಪಾರವಾಗಿದೆ. ಪ್ರತಿಯೊಂದು ಶಾಲೆಯಲ್ಲಿಯೂ ಪ್ರಾಥಮಿಕ ಹಂತದಿಂದಲೇ ಸಮೃದ್ಧವಾದ, ವೈವಿಧ್ಯಪೂರ್ಣವಾದ, ಒಳ್ಳೆಯ ಗ್ರಂಥಾಲಯವು ಲಭ್ಯವಿದೆ. ವಿವಿಧ ಅಭಿರುಚಿಗಳಿಗೆ, ಅಗತ್ಯಗಳಿಗೆ ತಕ್ಕಂತೆ ಅವು ರೂಪಿತವಾಗಿವೆ. ಸಾರ್ವಜನಿಕ ಗ್ರಂಥಾಲಯ ಸೇವೆಯ ಜಾಲ ಎಷ್ಟು ಸಮರ್ಪಕವಾಗಿದೆಯೆಂದರೆ ನಾಲ್ಕೋ ಐದೋ ಮನೆಗಳಿರುವ, ಒಂದು ಡಜನ್ ಮಕ್ಕಳಿರಬಹುದಾದ ಸಣ್ಣ ಹಳ್ಳಿಗೂ ವಾರಕ್ಕೊಮ್ಮೆ ಒಂದು ಸಂಚಾರಿ ಗ್ರಂಥಾಲಯ ಹೋಗುತ್ತದೆ. ಅಮೇರಿಕದಲ್ಲಿ ಗ್ರೀಲಿಯ ವೆಲ್ಸ್‌ಕೌಂಟಿ ಲೈಬ್ರರಿಯ ಸಂಚಾರಿ ಗ್ರಂಥಾಲಯದಲ್ಲಿ ಕುಳಿತು ನಾಲ್ಕೇ ಮನೆಗಳಿದ್ದ ಒಂದು ಹಳ್ಳಿಗೆ ನಾನೇ ಸ್ವತಃ ಹೋಗಿ ಸಂತೋಷಪಟ್ಟಿದ್ದೇನೆ.

ಇಂಗ್ಲೆಂಡಿನಲ್ಲಿ ಶಾಲೆಗಳಲ್ಲಿ ಸುಸಜ್ಜಿತ ಗ್ರಂಥಭಂಡಾರಗಳಿರುವುದರ ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ಆವರಣದಲ್ಲಿ ಪುಸ್ತಕದಂಗಡಿಗಳನ್ನು ತೆರೆದಿದ್ದಾರೆ. ಈ ಬ್ರಿಟಿಷ್ ಶಾಲೆಗಳಲ್ಲಿ ಅಂತಹ ಸುಮಾರು ನಾಲ್ಕು ಸಾವಿರ ಪುಸ್ತಕದಂಗಡಿಗಳಿವೆಯೆಂದು ಅಂದಾಜು ಮಾಡಲಾಗಿದೆ. ಇವು ಶಾಲಾ ಮಕ್ಕಳ ಅಗತ್ಯಗಳು ಮತ್ತು ಅಭಿರುಚಿಗಳಿಗೆ ತಕ್ಕಂತೆ ಸಜ್ಜುಗೊಳಿಸಿರುವ ಅಂಗಡಿಗಳು. ಮಕ್ಕಳಲ್ಲಿ ವಾಚನ ಅಭಿರುಚಿಯನ್ನು ಬೆಳೆಸುವುದಲ್ಲದೆ ದುಬಾರಿ ಹವ್ಯಾಸವಾಗಿ ಪುಸ್ತಕ ಕೊಳ್ಳುವ ಆಸಕ್ತಿಯನ್ನು ಅವರಲ್ಲಿ ಮೂಡಿಸಿ ತಮ್ಮ ತಮ್ಮ ಸ್ವಂತದ ಗ್ರಂಥ ಸಂಗ್ರಹಗಳನ್ನು ಅವರು ಕಟ್ಟಿಕೊಳ್ಳುವುದಕ್ಕೆ ಈ ಅಂಗಡಿಗಳು ಪ್ರೋತ್ಸಾಹ ನೀಡಿವೆ. ಹೀಗೆ ಮುದ್ರಿತ ಅಕ್ಷರಕ್ಕೂ ಮಗುವಿನ ಮನಸ್ಸಿಗೂ ನಡುವೆ ಇದ್ದ ಅಡ್ಡ ಗೋಡೆಯನ್ನು ಮುರಿದು ಹಾಕಲಾಗಿದೆ.

ಮಕ್ಕಳ ಸಾಹಿತ್ಯ ರಚನೆಯ ವಿಷಯದಲ್ಲಿ ವಿಶ್ವವಿದ್ಯಾಲಯ ಮಟ್ಟದ ತರಬೇತಿ :

ಈ ದಿಸೆಯಲ್ಲಿಯೂ ಬ್ರಿಟನ್ ಪ್ರಗತಿಪರ ಹೆಜ್ಜೆ ಇಟ್ಟಿದೆ. ಶೆಫೀಲ್ಡ್ ವಿಶ್ವವಿದ್ಯಾಲಯದ "ಲೊಂಕಾಸ್ಟರ ಮೆಟ್ರೊಪೋಲಟನ್ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಎಜ್ಯುಕೇಶನ್" ಸಂಸ್ಥೆ ಇತ್ತೀಚೆಗೆ ಮಕ್ಕಳ ಸಾಹಿತ್ಯ ರಚನೆ ಕುರಿತು ಡಿಪ್ಲೋಮಾ ಮಟ್ಟದ ತರಬೇತಿ ವರ್ಗಗಳನ್ನು ಪ್ರಾರಂಭ ಮಾಡಿದೆ. ತರಬೇತಿಯ ಅವಧಿ ಒಂದು ವರ್ಷಕ್ಕೆ ಸೀಮಿತವಾಗಿದೆ. ಮಕ್ಕಳ ಸಾಹಿತ್ಯ ಚರಿತ್ರೆ, ಮಕ್ಕಳ ಆಸಕ್ತಿಗಳನ್ನು ಆಕರ್ಷಿಸುವ ರೀತಿ ನೀತಿಗಳು, ಮಕ್ಕಳ ಪುಸ್ತಕಗಳಿಗೆ ಬೇಕಾದ ಚಿತ್ರಗಳ ತಯಾರಿಕೆ, ಮಕ್ಕಳ ಗ್ರಂಥಾಲಯ ವ್ಯವಸ್ಥೆ ಇವೇ ಮುಂತಾದ ವಿಷಯಗಳನ್ನು ಕುರಿತು ಈ ವರ್ಗಗಳಲ್ಲಿ ಪ್ರವಚನ ನೀಡಲಾಗುತ್ತಿದೆ.

ಫ್ರಾನ್ಸಿನಲ್ಲಿ 'ಪುಸ್ತಗಳ ಮೂಲಕ ಆನಂದ' (Joy Through Books) ಎಂಬ ಹೆಸರಿನ ಸಂಸ್ಥೆಯಿದೆ. ಮಕ್ಕಳಿಗೂ ಪುಸ್ತಕಗಳಿಗೂ ನಡುವೆ ಸಜೀವ ಸಂಬಂಧವನ್ನು ಉಂಟು ಮಾಡುವುದೇ ಈ ಸಂಸ್ಥೆಯ ಉದ್ದೇಶ.

ಪಾಶ್ಚಾತ್ಯ ದೇಶಗಳಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ವಿಕಾಸಗೊಂಡಿಲ್ಲದ ಜಪಾನಿನಲ್ಲಿ ಕೂಡಾ ಮಕ್ಕಳಿಗೆ ಪುಸ್ತಕಗಳ ಅಗತ್ಯ ಇದೆಯೆಂಬುದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಪರಿಗಣನೆಯ ಫಲವಾಗಿ 'ಬಂಕೋ' (Bunko) ಎಂಬ ಸಂಸ್ಥೆಗಳ ಉದಯವಾಗಿದೆ. ಸರಕಾರವಲ್ಲದ ಇತರ ವರ್ಗಗಳು, ಗುಂಪುಗಳು, ವ್ಯಕ್ತಿಗಳು ಸ್ಥಾಪಿಸಿರುವ ಸಣ್ಣ ಪುಟ್ಟ ಗ್ರಂಥಾಲಯಗಳು ಈ 'ಬಂಕೋ'ಗಳು. ಖಾಸಗಿ ಮನೆಗಳಲ್ಲಿ ಇವು ಹುಟ್ಟಿದುವು. ಮಕ್ಕಳ ಪುಸ್ತಕಗಳಲ್ಲಿ ಮತ್ತು ಮಕ್ಕಳಿಗೆ ಕತೆ ಹೇಳುವಲ್ಲಿ ಆಸಕ್ತಿಯಿರುವ ಗೃಹಿಣಿಯರು ತಮ್ಮ ನೆರೆಹೊರೆಯ ಮಕ್ಕಳನ್ನು ಆಗಾಗ ತಮ್ಮ ಮನೆಗೆ ಕರೆದು ತಾವು ಓದಿದ ಪುಸ್ತಕಗಳ ವಿಚಾರವಾಗಿ ಅವರೊಡನೆ ಮಾತನಾಡುತ್ತಿದ್ದರು. ತಮ್ಮಲ್ಲಿರುವ ಪುಸ್ತಕಗಳನ್ನು ಆ ಮಕ್ಕಳಿಗೆ ಓದಿ ಹಿಂದಕ್ಕೆ ತರಲು ಎರವಲಾಗಿ ಕೂಡ ಕೊಡುತ್ತಿದ್ದರು. ಬಹುಬೇಗ ಈ ಗ್ರಂಥಾಲಯಗಳನ್ನು 'ಕೇಟೀ ಬಂಕೋಸ್ (Katie Bunkos) ಎಂದು ಕರೆಯಲಾಯಿತು. ಇವೆಲ್ಲ ಬಹು ವಿರಳವಾದ ಪ್ರಯತ್ನಗಳು. ಆದರೆ ಸಾಂಕ್ರಾಮಿಕದಂತೆ ಇವು ಹರಡಿ ತರುಣಿಯರಾದ ಗೃಹಿಣಿಯರು ಒಂದಾದರು, ಗುಂಪುಗಳನ್ನು ಮಾಡಿಕೊಂಡರು. ಅಂಥ ಸಹಕಾರದ ಮೂಲಕ 'ಸಮುದಾಯ ಮಕ್ಕಳ ಗ್ರಂಥಾಲಯ' –ಚೀಕೀಬಂಕೋಸ್ (Chikie Bunkos)ಗಳನ್ನು ರೂಪಿಸಿದರು. ಇದರಿಂದ ಸ್ಫೂರ್ತಿ ಪಡೆದ ಕಿಂಡರ್‌ಗಾರ್ಟನ್ ಮತ್ತು ನರ್ಸರಿ ಶಾಲೆಗಳು 'ಏನ್ ಬಂಕೋಸ್' ಎಂಬ ಹೆಸರಿನ ಶಿಶುವಿಹಾರ ಗ್ರಂಥಾಲಯಗಳನ್ನು ಸ್ಥಾಪಿಸಿದರು. ಜಪಾನಿನಲ್ಲಿ ಈಗ ಅಂಥ ಸುಮಾರು ೦೦ ಬಂಕೋಗಳಿವೆ. ಇವು ಮಕ್ಕಳ ವಿಭಾಗಗಳನ್ನು ಒಳಗೊಂಡಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆಯ ಏಳು ಪಟ್ಟು ಇವೆ.

ವಿದೇಶಗಳಲ್ಲಿ ಬಾಲ ಸಾಹಿತ್ಯದ ಹೊಳೆ :

ಮೇಲೆ ಹೇಳಿದ್ದರಿಂದ ಅಭಿವೃದ್ಧ ದೇಶಗಳು ಓದಿಕೆಯ ಅಗತ್ಯಗಳನ್ನು ಒದಗಿಸಲು ಸಾಕಷ್ಟು ಅವಕಾಶ ಮಾಡಿಕೊಂಡಿವೆ ಎಂಬುದು ಸ್ಪಷ್ಟವಾಗುತ್ತದೆ. ಅಂದ ಮೇಲೆ ಅಲ್ಲಿ ಬಾಲಸಾಹಿತ್ಯವೂ ಹೇರಳವಾಗಿ ಇರಲೇಬೇಕಷ್ಟೆ. ಕೆಲವು ದೇಶಗಳು ೧೯೬೦ರಲ್ಲಿ ಪ್ರಕಟಿಸಿದ ಬಾಲಸಾಹಿತ್ಯ ಕೃತಿಗಳ ಸಂಖ್ಯೆ ಹೀಗಿದೆ :

ದೇಶ	ಕೃತಿಗಳ ಸಂಖ್ಯೆ	ಕರಪತ್ರಗಳು	ಒಟ್ಟು
ಅಮೆರಿಕಾ	೨೨೯೨	—	೨೨೯೨
ಭಾರತ	೪೫೫	—	೪೫೫
ಬ್ರಿಟನ್	೨೩೪೬	೩೪೨	೨೬೮೮
ಸೋವಿಯತ್ ರಷ್ಯಾ (ಬೈಲೋ ರಷ್ಯಾ ಹಾಗೂ ಉಕ್ರೇನ್ ಹೊರತು)	೧೫೧೮	೧೪೧೩	೩೦೩೧
ಜಪಾನ್	೧೫೬೯	೨೦೩	೧೭೭೨

ಈ ಪುಸ್ತಕಗಳ ಮುದ್ರಣ ಸೌಂದರ್ಯವೂ ಮೇಲುಮಟ್ಟದ್ದು. ದಪ್ಪ ಅಕ್ಷರಗಳಲ್ಲಿ ಅತ್ಯಂತ ಕಲಾತ್ಮಕವಾಗಿ ರಚಿಸಿದ ಚಿತ್ರಗಳೊಂದೊಡಗೂಡಿ ಅವು ಮುದ್ರಿತವಾಗುತ್ತವೆ. ಇವುಗಳಲ್ಲಿ ಅನೇಕ ಪುಸ್ತಕಗಳನ್ನು ಒಂದಕ್ಕಿಂತ ಹೆಚ್ಚು ಬಣ್ಣಗಳಲ್ಲಿ ಅಚ್ಚು ಮಾಡಲಾಗುತ್ತದೆ. ರಷ್ಯದ ಪುಸ್ತಕಗಳನ್ನು ತುಂಬ ಸುಂದರವಾಗಿ ಮುದ್ರಿಸಿ ಪ್ರಕಟಿಸುವುದಲ್ಲದೆ ತುಂಬ ಅಗ್ಗದ ಬೆಲೆಗೂ ಅವುಗಳನ್ನು ಒದಗಿಸಲಾಗುತ್ತವೆ. ಒಟ್ಟಿನಲ್ಲಿ ಈ ದೇಶಗಳಲ್ಲಿ ಪುಸ್ತಕಗಳು ಕ್ರಿಸ್‌ಮಸ್ ಮತ್ತು ಅಂತಹ ಹಬ್ಬದ ದಿನಗಳಲ್ಲಿ ಮಕ್ಕಳಿಗೆ ಕೊಡಲು ಸೊಗಸಾದ ಉಡುಗೊರೆಯಾಗಿರುತ್ತವೆ. ಮಕ್ಕಳ ಪುಸ್ತಕಗಳನ್ನು ಬರೆಯುವವರಿಗೆ ಮತ್ತು ಪ್ರಕಟಿಸುವವರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದ ಪ್ರಶಸ್ತಿಯೆಂದರೆ 'ಇಂಟರ್ ನ್ಯಾಷನಲ್ ಬೋರ್ಡ್ ಆನ್ ಬುಕ್ಸ್ ಫಾರ್ ಯಂಗ್ ಪೀಪಲ್, (IBBY) ಎಂಬ ಸಂಸ್ಥೆಯು ಸ್ಥಾಪಿಸಿರುವ ಹ್ಯಾನ್ಸ್ ಕ್ರಿಶ್ಚನ್ ಆ್ಯಂಡರ್‌ಸನ್ (Hans Christian Anderson) ಚಿನ್ನದ ಪದಕ. ಅತ್ಯಂತ ವಿಶಿಷ್ಟವಾಗಿ ಮಕ್ಕಳ ಪುಸ್ತಕ ಬರೆದಿರುವ ಲೇಖಕನಿಗೆ ಅಥವಾ ಮಕ್ಕಳ ಪುಸ್ತಕಗಳಿಗೆ ಚಿತ್ರ ಬರೆದ ಕಲಾವಿದನಿಗೆ ಈ ಪದಕವು ಸಲ್ಲುತ್ತದೆ. ಈ ಸುವರ್ಣ ಪದಕ ವಿಜೇತರನ್ನು 'ಕಿರಿಯ ನೊಬೆಲರು' (ಲಿಟ್ಲ ನೊಬೆಲ್ಸ್) (Little Nobels) ಎಂಬ ಅಡ್ಡ ಹೆಸರಿನಿಂದ ಕರೆಯಲಾಗುತ್ತದೆ.

ಮಕ್ಕಳಿಗೆ ಅಗತ್ಯವಾಗಿರುವ ವಿವಿಧ ಪ್ರಕಾರದ ಪುಸ್ತಕಗಳು ಮತ್ತು ಭಾರತದಲ್ಲಿ ಅವು ದೊರಕುವ ಸ್ಥಿತಿಗತಿ :

ಹೀಗೆ ವಿದೇಶಗಳಲ್ಲಿ ಸಮೃದ್ಧವಾಗಿ ಬಾಲಸಾಹಿತ್ಯವು ದೊರಕುವ ಹಿನ್ನೆಲೆಯಲ್ಲಿ ಭಾರತದಲ್ಲಿ ಮಕ್ಕಳಿಗೆ ಅದು ದೊರಕುವಿಕೆ ಅಥವಾ ಇಲ್ಲದಿರುವಿಕೆಯ ಒಂದು ವಿಹಂಗಮ ನೋಟವನ್ನು ಇಲ್ಲಿ ಕೊಡಲು ಪ್ರಯತ್ನಿಸಲಾಗಿದೆ.

೧ ನಿರ್ದಿಷ್ಟವಾಗಿ ಶಾಲೆಗೆ ಹೋಗುವ ಮಕ್ಕಳನ್ನು ಉದ್ದೇಶಿಸಿ ರಚಿತವಾದ ವಿಶ್ವಕೋಶಗಳು, ನಿಘಂಟುಗಳು ಮೊದಲಾದ ಪರಾಮರ್ಶನ ಕೃತಿಗಳು ಅಗತ್ಯ. ಇಂಗ್ಲಿಷ್‌ನಲ್ಲಿ ಇಂಥವು ಹಲವಿವೆ. 'ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೊಪೀಡಿಯ' ಮತ್ತು 'ಚಿಲ್ಡ್ರನ್ಸ್ ಬ್ರಿಟಾನಿಕಾ' ಇಂಥವು.

ಸುದೈವಕ್ಕೆ ಕನ್ನಡ ಮಕ್ಕಳಿಗೆ ವಿಶ್ವಕೋಶ ಇಲ್ಲದ ಹಾಗಾಗಲಿಲ್ಲ. ಡಾ. ಶಿವರಾಮ ಕಾರಂತರಿಗೆ ಮಕ್ಕಳ ವಂದನೆಗಳು ಸಲ್ಲಬೇಕು. ಅವರ ಬಾಲಪ್ರಪಂಚದ ಮೂರು ಸಂಪುಟಗಳು (೧೯೩೪) ಭಾರತೀಯ ಭಾಷೆಯೊಂದರಲ್ಲಿ ರಚಿತವಾದ ಮೊದಲನೆಯ ವಿಶ್ವಕೋಶ. ಮಕ್ಕಳಿಗಾಗಿ ರಚಿತವಾದ ಇನ್ನೊಂದು ಸಾಮಾನ್ಯ ವಿಶ್ವಕೋಶ 'ಜ್ಞಾನ ಗಂಗೋತ್ರಿ' (೧೯೭೦) ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನ ಸಂಸ್ಥೆಯು ಏಳು

ಸಂಪುಟಗಳಾಗಿ ಪ್ರಕಟಿಸಿದೆ, ಇದು ಮೇಲೆ ಹೇಳಿದ 'ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೋಪೀಡಿಯ" ಮಾದರಿಯಲ್ಲಿ ರಚಿತವಾಗಿದೆ. ಇದರ ೨೦,೦೦೦ ಸೆಟ್‌ಗಳನ್ನು ಶಾಲೆಗಳಿಗೆ ಹಂಚುವುದಕ್ಕಾಗಿ ಕೊಂಡುಕೊಂಡ ಕರ್ನಾಟಕ ಸರಕಾರವು ಈ ಯೋಜನೆಗೆ ಅಪಾರವಾದ ಪ್ರೋತ್ಸಾಹ ಪೋಷಣೆ ನೀಡಿತು. ಶ್ರೀ ಕೆ. ಎಸ್. ನಿರಂಜನ ಇದರ ಪ್ರಧಾನ ಸಂಪಾದಕರು. ಮಕ್ಕಳ ಮೇಲೆ ಅವರಿಗಿರುವ ಕಳಕಳಿ ಎಷ್ಟಿತ್ತೆಂದರೆ ಈ ಕೆಲಸ ಮಾಡುತ್ತಿದ್ದ ಸುಮಾರು ನಾಲ್ಕು ವರ್ಷಗಳ ಕಾಲ ಅವರು ತಮ್ಮ ಎಲ್ಲಾ ರಚನ ಶೀಲ ಬರವಣಿಗೆಯನ್ನು ಬದಿಗಿಟ್ಟುಬಿಟ್ಟರು.

ಭಾರತದ ಮಿಕ್ಕ ಭಾಷೆಗಳಲ್ಲಿ ಮಕ್ಕಳಿಗೆ ವಿಶ್ವಕೋಶವನ್ನು ಒದಗಿಸಿದ ಎರಡನೆ ಭಾಷೆ ಬಂಗಾಲಿ. ಜೋಗೇಂದ್ರನಾಥ ಗುಪ್ತರು ಸಂಪಾದಿಸಿದ "ಶಿಶುಭಾರತಿ" ವಿಶ್ವ ಕೋಶವು ೧೯೩೭ರಲ್ಲಿ ಪ್ರಕಟವಾಗಿದ್ದು ೧೦ ಸಂಪುಟಗಳನ್ನೊಳಗೊಂಡಿದೆ. ಉಲ್ಲೇಖ ಗಳ ಜೋಡಣೆ ವಿಷಯಾನುಗುಣವಾಗಿದೆ. ಇನ್ನೂ ಈಚಿನ ಒಂದು ಪ್ರಯತ್ನ "ಘೋಟೇದಾರ್ ವಿಶ್ವಕೋಶ" (ಐದು ಸಂಪುಟಗಳು). ಇದನ್ನು ಕೆ. ಎನ್. ಭಟ್ಟಾ ಚಾರ್ಯರು ಸಂಪಾದಿಸಿ ೧೯೭೫ರಲ್ಲಿ ಪ್ರಕಟಿಸಿದರು. ವಿಜ್ಞಾನ ವಿಶ್ವಕೋಶವೊಂದರ ರಚನೆಗೆ ಹಂಚಿಕೆ ಹಾಕಿದ ಜುಗ್ಗತ್ ಸುನಾಲ್, 'ಸಾರಿಗೆ' ಯನ್ನು ಕುರಿತ ಮೊದಲನೆ ಸಂಪುಟ ಪ್ರಕಟವಾದೊಡನೆ ಒಂದು ಮಕ್ಕಳ ವಸ್ತುಸಂಗ್ರಹಾಲಯದ ಸ್ಥಾಪನೆಯ ವಿಚಾರದಲ್ಲಿ ತೊಡಗಿಬಿಟ್ಟರು.

ತಮಿಳು ಮಕ್ಕಳಿಗಾಗಿ ಮದರಾಸಿನ ತಮಿಳು ಅಕಾಡೆಮಿಯು ಹತ್ತು ಸಂಪುಟಗಳ ವಿಶ್ವಕೋಶವೊಂದನ್ನು ೧೯೭೬ರಲ್ಲಿ ಪ್ರಕಟಿಸಿ ಮುಗಿಸಿತು. ಮಲಯಾಳಂ, ಮರಾಠೀ ಮತ್ತು ಒರಿಯಾ ಭಾಷೆಗಳಲ್ಲೂ ಕಿರಿಯರ ವಿಶ್ವಕೋಶಗಳಿವೆ.

ಇಂಥ ಕೆಲಸ ಬೇರೆ ಪ್ರಾಂತೀಯ ಭಾಷೆಗಳಲ್ಲಿ ನಡೆದಿರುವುದರ ಮಾಹಿತಿ ಇಲ್ಲಿ ದೊರೆತಿಲ್ಲ.

೨. ಮಕ್ಕಳಿಗೆ ಅದ್ಭುತ ರಮ್ಯ ಕಥೆಗಳು ಮತ್ತು ಜಾನಪದ ಕಥೆಗಳು ಮತ್ತು ಜಾನಪದ ಕಥೆಗಳು ಇಷ್ಟ. 'ಪಂಚತಂತ್ರ', 'ಹಿತೋಪದೇಶ'ಗಳ ಕತೆಗಳು, 'ಅರೇಬಿಯನ್ ನೈಟ್ಸ್', 'ಈಸೋಪ್ಸ್ ಫೇಬಲ್ಸ್', ಇವೆಲ್ಲ ಸುಪ್ರಸಿದ್ಧವಾದವೇ. ಅಂಥ ರಮ್ಯ ಹಾಗೂ ಜಾನಪದ ಕತೆಗಳಲ್ಲಿ ಮಕ್ಕಳಿಗೆ ಎಲ್ಲ ರಾಷ್ಟ್ರಗಳಲ್ಲೂ ಇರುವ ಸಮಾನತೆ ಅರಿವಿಗೆ ಬರುತ್ತದೆ. ಮಾನವನ ಜನಾಂಗದ ತಾಯಿ ಬೇರುಗಳು ಎಷ್ಟು ಹಿಂದಿನ ಕಾಲಕ್ಕೆ ಸೇರಿದುವೆಂದರೆ ಆಗ ಪ್ರದೇಶ, ಜಾತಿ: ಚರ್ಮದ ಬಣ್ಣ, ಭಾಷೆ ಇವುಗಳ ಆಧಾರದ ಭೇದ ಭಾವನೆ ಎಂಬುದೇ ಇರಲಿಲ್ಲ ಎಂಬುದನ್ನು ತಿಳಿಸಿಕೊಡುತ್ತದೆ.

ಮೇಲೆ. ಅಷ್ಟೇ ಅಲ್ಲ. 'ಅಂಡರ್‌ಸ್ಟ್ಯಾಂಡಿಂಗ್ ಸೈನ್ಸ್' 'ಸ್ಟ್ಯಾನ್ಲಿಸ್ ಸಿಂಪಲ್ ಸೈನ್ಸ್' ಎಕ್ಸ್‌ಪೆರಿಮೆಂಟ್ಸ್'ದಂಥ ಕೃತಿಗಳೂ ಭಾರತದ ಮಕ್ಕಳಿಗೆ ಲಭ್ಯವಾಗಿವೆ. ಕಾರಂತರ ಕೃಪೆಯಿಂದ ಅವರ ಅಮೋಘ ಕೃತಿ 'ವಿಜ್ಞಾನ ಪ್ರಪಂಚ' (೧೯೬೩) ಕನ್ನಡ ಮಕ್ಕಳಿಗೆ ದೊರೆತಿದೆ.

೩. ಎನ್. ಬಿ. ಆರ್. ಸಂಸ್ಥೆಯು ಒಂದನ್ನು ಮುಂದಿಟ್ಟು ಇದರ ಅಗತ್ಯವನ್ನು ಮನಗಂಡು ಭಾರತದ ವಿವಿಧ ಭಾಷೆಗಳಲ್ಲಿ ಮಕ್ಕಳಿಗಾಗಿ ವಿಜ್ಞಾನದ ಪುಸ್ತಿಕೆಗಳನ್ನು ಪ್ರಕಟಿಸಿತು. ಇದರ ಉದ್ದೇಶ ರಾಷ್ಟ್ರದಲ್ಲಿ ಒಂದು ವೈಜ್ಞಾನಿಕ ಮನೋಭಾವವನ್ನು, ವಾತಾವರಣವನ್ನು ರೂಪಿಸುವುದು: ಇದರಿಂದ ನಿಶ್ಚಯವಾಗಿ ಜಾತೀಯತೆ, ಮೂಢ ನಂಬಿಕೆ, ಮಾಟ ಮಂತ್ರಗಳ ಹಾವಳಿ ಕಡಿಮೆಯಾಗುತ್ತದೆ ಎಂಬುದು. ಈ ಆದರ್ಶರೂಪದ ವಿಚಾರ ಮತ್ತು ಉತ್ಸಾಹ ಕಾಲಕಳೆದಂತೆ ಮಂಕಾಗಿದೆ. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸಬೇಕೆಂಬ ಉತ್ಸಾಹ ಈಗ ಆವಿಯಂತೆ ಗಾಳಿಯಲ್ಲಿ ಕರಗಿ ಹೋಗಿದೆ.

೪. ಆಧುನಿಕ ಮಕ್ಕಳು ಓದುವುದಕ್ಕೆ ಇಷ್ಟಪಡುವ ಒಂದು ಬಗೆಯ ಪುಸ್ತಕಗಳು ಕಾಮಿಕ್‌ಗಳು (Comics). ಇಂಗ್ಲೆಂಡಿನಲ್ಲಿ ಮಕ್ಕಳು ತಮ್ಮ ಜೇಬುಹಣದಲ್ಲಿ ಹೆಚ್ಚಿನ ಭಾಗವನ್ನು ಬೇರೆ ಪುಸ್ತಕಗಳಿಗಿಂತ ಹೆಚ್ಚಾಗಿ ಕಾಮಿಕ್‌ಗಳನ್ನು ಕೊಳ್ಳಲು ವೆಚ್ಚ ಮಾಡುತ್ತಾರೆ ಎಂದು ತಿಳಿದುಬಂದಿದೆ. (ನಮ್ಮಲ್ಲಿನ ಸಮಾಜದ ಉನ್ನತ ವರ್ಗದವರು ಹೇಳಿಕೊಳ್ಳುವ ಬಗೆಯಲ್ಲಿ ಅಲ್ಲಿನ ಕೆಲವರ ಮಕ್ಕಳನ್ನು ಬಿಟ್ಟರೆ ಮಕ್ಕಳ ಬಳಿ ಜೇಬು ಹಣ ಎಂಬ ಹೆಸರಿಗೆ ಅರ್ಹವಾದ ಮೊತ್ತವೇ ಇರುವುದಿಲ್ಲವಲ್ಲ. ಅದಿರಲಿ!). ಕಾಮಿಕ್‌ಗಳು ಮಕ್ಕಳಲ್ಲಿ ಸುಪ್ತವಾಗಿರುವ ಓದುವ ಶಕ್ತಿಯನ್ನು ಹೊರಗೆಳೆಯುತ್ತವೆ. ಅವರು ನಿಯತವಾಗಿ ಓದುಗರಾಗುವಂತೆ ಮಾಡುತ್ತವೆ. ನಮ್ಮ ಪ್ರಾಚೀನ ಮಹಾಕಾವ್ಯಗಳನ್ನು ಅವುಗಳ ಮೂಲಕ ಅವರಲ್ಲಿ ಜನಪ್ರಿಯಗೊಳಿಸಬಹುದು. ಆದರೆ, ಅವುಗಳ ಪ್ರಕಟಣೆಯ ಮೇಲೆ ಒಂದು ಹತೋಟಿ ಇಟ್ಟುಕೊಳ್ಳುವುದು ಅಗತ್ಯವಾಗುತ್ತದೆ. ಇಂಗ್ಲೆಂಡಿನಲ್ಲಿ 'ಚಿಲ್ಡ್ರನ್ ಆ್ಯಂಡ್ ಯಂಗ್ ಪರ್ಸನ್ಸ್ (ಹಾರ್ಮ್‌ಫುಲ್ ಪಬ್ಲಿಕೇಶನ್ಸ್) ಆ್ಯಕ್ಟ್' ೧೯೫೫ ಎಂಬ ಶಾಸನದಲ್ಲಿ ಈ ಬಗ್ಗೆ ನಿರ್ದೇಶವಿದೆ. ಅಮೆರಿಕದಿಂದ ಭಯಂಕರ ಚಿತ್ರ ವಸ್ತುಗಳನ್ನುಳ್ಳ ಕಾಮಿಕ್‌ಗಳು ದೊಡ್ಡದಾಗಿ ಹರಿದುಬರುತ್ತಿದ್ದುದನ್ನು ತಡೆಗಟ್ಟಲು ಈ ಶಾಸನ ಜಾರಿಗೆ ಬಂದಿತು. ನಮ್ಮ ದೇಶದ ಶ್ರೇಷ್ಠ ಕೃತಿಗಳಾದ ರಾಮಾಯಣ, ಮಹಾಭಾರತ ಹಾಗೂ ಇತರ ಪೌರಾಣಿಕ ವಸ್ತುಗಳು ಈ ಕಾಮಿಕ್‌ಗಳ ರೂಪದಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ

೫. ಮಕ್ಕಳಿಗಾಗಿಯೇ ರೂಪಿತವಾದ ಪತ್ರಿಕೆಗಳು ಅಗತ್ಯವಾಗಿವೆ. ಬಾಲಭಾರತಿ, ಚಂದಮಾಮ, ನಂದನ, ಪರಾಗ ಮುಂತಾದ ಹಲವು ಭಾಷೆಗಳಲ್ಲಿ ಪ್ರಕಟ

ವಾಗುತ್ತವೆ. ಆದರೆ 'ಚಿಲ್ಡ್ರನ್ಸ್ ವರ್ಲ್ಡ್' ಅಂತಹ ಪತ್ರಿಕೆಗಳು ನಮ್ಮ ಭಾಷೆಗಳಲ್ಲಿ ಇನ್ನೂ ಬರಬೇಕಾಗಿದೆ.

ಸಿ.ಎಸ್.ಆರ್. ಸಂಸ್ಥೆಯು ತನ್ನ ಭಾರತೀಯ ಭಾಷೆಗಳ (Indian Languages Unit) ವಿಭಾಗದ ಮೂಲಕ ಹಿಂದಿಯಲ್ಲಿ 'ವಿಜ್ಞಾನ ಪ್ರಗತಿ' ಎಂಬ ವಿಜ್ಞಾನ ಪತ್ರಿಕೆಯನ್ನು ಮಕ್ಕಳಿಗಾಗಿ ಪ್ರಕಟಿಸುತ್ತಿದೆ. ಹಿಂದೀ ಭಾಷಾ ವಲಯದಲ್ಲಿ ಇದು ತುಂಬ ಪ್ರಿಯವಾಗಿದೆ. ಈ ಪತ್ರಿಕೆಯ ವಿವಿಧ ಭಾಷಾ ವೃತ್ತಿಗಳನ್ನು ಪ್ರಕಟಿಸಲು ಮೊದಲು ಸಿ. ಎಸ್. ಐ. ಆರ್. ನಿರ್ಧರಿಸಿದ್ದರೂ ಕೂಡ ಅದು ಇನ್ನೂ ಈಡೇರಿಲ್ಲವಾದುದು ವಿಷಾದಕರ.

೧೦. ಶಾಲಾ ಮಕ್ಕಳಿಗೆ ನಾವು ಈಗ ಒದಗಿಸುತ್ತಿರುವ ಪಠ್ಯಪುಸ್ತಕಗಳೂ ಹಲವು ತೆರನಾದ ದೋಷಗಳಿಂದ ತುಂಬಿವೆ. ಅವು ಉತ್ತಮ ಮಟ್ಟದವಲ್ಲ. ಆಕರ್ಷಕವಾಗಿಲ್ಲ. ಸರಿಯಾದ ಮಾಹಿತಿ ಅವುಗಳಲ್ಲಿ ದೊರಕುವುದಿಲ್ಲ: ನೋಡುವುದಕ್ಕೂ ಅವು ಚೆನ್ನಾಗಿಲ್ಲ. ಬಹಳ ಅವಸರದಿಂದ ಬರೆದು, ಚಿತ್ರ ತುಂಬಿ ಅವನ್ನು ಮುದ್ರಿಸಲಾಗುತ್ತಿದೆ.

೧೧. ಕೆಲವು ಮೂಲಭೂತವಾದ ನೈತಿಕ ಮತ್ತು ಮಾನವಿಕ ಮೌಲ್ಯಗಳನ್ನು ಸಾರುವಂತಹ ಸಾಹಿತ್ಯ ಮಕ್ಕಳಿಗೆ ಇಂದು ಅಗತ್ಯವಿದೆ.

ಎಷ್ಟು ಬಗೆಯ ಪುಸ್ತಕಗಳು ನಮ್ಮ ದೇಶದ ಮಕ್ಕಳಿಗೆ ಅಗತ್ಯವಾಗಿವೆ ಎಂಬುದರ ಒಂದು ಸ್ಥೂಲ ಚಿತ್ರ ಮೇಲೆ ಕೊಟ್ಟಿರುವ ವಿವರಣೆಯಿಂದ ಬರಬಹುದು.

ಮಕ್ಕಳ ಪುಸ್ತಕಗಳ ಉಪಯೋಗ :

ಬೇರೆ ದೇಶಗಳಿಂದ ಆಮದಾಗಿ, ಇಲ್ಲೇ ಉತ್ಪಾದಿತವಾಗಿ ನಮ್ಮ ಮಾರುಕಟ್ಟೆಯಲ್ಲಿ ಹಾಗೂ ಗ್ರಂಥಾಲಯಗಳಲ್ಲಿ ದೊರಕುತ್ತಿರುವ ಪುಸ್ತಕಗಳನ್ನೇ ಆದರೂ ಮಕ್ಕಳಿಗೆ ಸಿಕ್ಕುವ ಹಾಗೆ ನಾವು ಮಾಡಿಲ್ಲ. ಇದಕ್ಕೆ ಕಾರಣಗಳು:

೧. ಮಕ್ಕಳ ಪುಸ್ತಕಗಳ ಗ್ರಂಥಸೂಚಿಗಳು ಸಿಕ್ಕುವುದಿಲ್ಲ. ಅಂಥ ಗ್ರಂಥಸೂಚಿಗಳು ಇಲ್ಲದಾಗ ಗ್ರಾಹಕರಿಗೂ ಗ್ರಂಥಗಳಿಗೂ ನಡುವೆ ಸಂಪರ್ಕ ಏರ್ಪಡುವುದು ಸಾಧ್ಯವಿಲ್ಲ.

೨. ನಮ್ಮ ದೇಶದಲ್ಲಿ ಬಹುತೇಕ ಪುಸ್ತಕ ವ್ಯಾಪಾರಿಗಳು ಶಾಲಾ ಕಾಲೇಜು ಪಠ್ಯ ಪುಸ್ತಕಗಳನ್ನು ಮಾರಾಟ ಮಾಡುವುದಕ್ಕೆ ತೃಪ್ತರಾಗಿದ್ದಾರೆ. ಅವುಗಳಿಗೆ ಅಪಾರ ಬೇಡಿಕೆಯಿದೆಯೆಂಬುದೇ ಇದಕ್ಕೆ ಕಾರಣ. ಮುಂಬಯಿ, ಕಲ್ಕತ್ತ, ಮತ್ತು ಇತರ ರಾಜಧಾನಿಗಳಲ್ಲಲ್ಲದೆ, ಬೇರೆ ಕಡೆ ಮಕ್ಕಳ ಪುಸ್ತಕಗಳು, ವಿದ್ವತ್ ಕೃತಿಗಳು

ಎಷ್ಟೋ ವೇಳೆ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಪುಸ್ತಕಗಳು ಕೂಡ ದೊರಕುವುದಿಲ್ಲ.

೩. ಗ್ರಂಥಾಲಯಗಳ ಸಂಖ್ಯೆಯೂ ಹೆಚ್ಚಿಲ್ಲ. ಒಂದಿಲ್ಲದಿದ್ದರೆ ಇನ್ನೊಂದು ಗ್ರಂಥಾಲಯಕ್ಕೆ ಹೋಗಿ ನೋಡಿಕೊಂಡು ಬರಲು ಅವಕಾಶವಿಲ್ಲ. ಇರುವ ಗ್ರಂಥಾಲಯಗಳಲ್ಲೂ ಸಹ ದೊಡ್ಡವರ ಬೇಡಿಕೆಗಳನ್ನೇ ಪೂರೈಸಲು ಸಾಧ್ಯವಾಗದಷ್ಟು ಒತ್ತಡ ಇರುವಾಗ ಕಿರಿಯರ ಅಗತ್ಯಗಳನ್ನು ಅಲಕ್ಷಿಸುವುದು ಸಹಜವೇ ಆಗಿದೆ.

ಈ ಪರಿಸ್ಥಿತಿಯನ್ನು ಸುಧಾರಿಸಲು ರಾಷ್ಟ್ರವ್ಯಾಪೀ ಪ್ರಮಾಣದ ಒಟ್ಟು ಪ್ರಯತ್ನ ಅತ್ಯಗತ್ಯ. ಈ ನಿಟ್ಟಿನಲ್ಲಿ ಒಂದು ಯೋಜನೆ ಹಾಕಿಕೊಳ್ಳಲು ಅಂತರ-ರಾಷ್ಟ್ರೀಯ ಮಕ್ಕಳ ವರ್ಷದ ಈ ಸಂದರ್ಭ ಅತ್ಯಂತ ಸೂಕ್ತ.

ಆದ್ದರಿಂದ ಈ ವಿಷಯವಾಗಿ ಕೆಲವು ಸೂಚನೆಗಳು ಹೀಗಿವೆ:

ಈಗ ಇರುವ ಮಕ್ಕಳ ಪುಸ್ತಕಗಳ ಉಪಯೋಗವನ್ನು ಹೆಚ್ಚಿಸಬೇಕಾದರೆ ತಕ್ಷಣವೇ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

೧. ಭಾರತದ ಎಲ್ಲ ಭಾಷೆಗಳಲ್ಲೂ ದೊರಕುವ ಮಕ್ಕಳ ಪುಸ್ತಕಗಳ ಒಂದು ಪಟ್ಟಿಯನ್ನು ತಯಾರಿಸಿ ಎಲ್ಲ ಗ್ರಂಥಾಲಯಗಳು ಮತ್ತು ಶಾಲೆಗಳಿಗೆ ವ್ಯಾಪಕವಾಗಿ ಹಂಚಬೇಕು.

೨. ರಾಷ್ಟ್ರಾದ್ಯಂತ ಮುಖ್ಯ ನಗರಗಳಲ್ಲೆಲ್ಲ ವಿವಿಧ ಭಾಷೆಗಳಲ್ಲಿನ ಮಕ್ಕಳ ಸಾಹಿತ್ಯವನ್ನು ಪ್ರದರ್ಶಿಸಬೇಕು.

೩. ಚಂದಾ ಗ್ರಂಥಾಲಯಗಳು ಮತ್ತು ಸಾರ್ವಜನಿಕ ಗ್ರಂಥಾಲಯಗಳು ಈಗಿಂದೀಗಲೇ ಮಕ್ಕಳ ವಿಭಾಗಗಳನ್ನು ತೆರೆಯಬೇಕು.

೪. ತಮ್ಮ ಪುಸ್ತಕ ಬಜೆಟ್ಟಿನ ನಿರ್ದಿಷ್ಟ ಶೇಕಡಾವಾರು ಮೊತ್ತವನ್ನು ಪ್ರತಿ ವರ್ಷವೂ ಮಕ್ಕಳ ಪುಸ್ತಕಗಳನ್ನು ಕೊಳ್ಳುವುದಕ್ಕಾಗಿಯೇ ಮೀಸಲಿರಿಸಬೇಕು.

೫. ಶಾಲಾ ಗ್ರಂಥಾಲಯಗಳನ್ನು ತೆರೆದು ಅಲ್ಲಿ ಪಠ್ಯ ಪುಸ್ತಕಗಳಲ್ಲದೆ ಮಕ್ಕಳ ಪುಸ್ತಕಗಳನ್ನೂ ಸಂಗ್ರಹಿಸಿ ಮಕ್ಕಳಿಗೆ ತೆರೆದಿಡಬೇಕೆಂದು ಆಜ್ಞೆ ಮಾಡುವಂತೆ ವಿವಿಧ ರಾಜ್ಯಗಳ ಶಿಕ್ಷಣ ಇಲಾಖಾ ನಿರ್ದೇಶಕರನ್ನು ಕೋರಬೇಕು.

೬. ರಾಜ್ಯ ಶಿಕ್ಷಣ ನಿರ್ದೇಶನಾಲಯಗಳಲ್ಲಿ ಪ್ರತ್ಯೇಕ ವಿಭಾಗಗಳನ್ನು ತೆರೆಯಬೇಕು. ಶಾಲಾ ಗ್ರಂಥಾಲಯಗಳ ಸ್ಥಾಪನೆ ಹಾಗೂ ಅವುಗಳ ಅಭಿವೃದ್ಧಿಗಳನ್ನು ಗಮನಿಸಬೇಕು.

೭. ಮಕ್ಕಳ ವಾಚನ ಅಗತ್ಯಗಳನ್ನು ಅವರಿರುವ ಆವರಣದಲ್ಲಿಯೇ ಪೂರೈಸುವ ಸಲುವಾಗಿ, ನಗರ ಕೇಂದ್ರದಿಂದ ಎರಡು ಮೂರು ಕಿಲೋಮೀಟರು ದೂರದಲ್ಲಿ ನೆಲೆಗೊಂಡಿರುವ ಒಂದೆರಡು ವಿಶ್ವವಿದ್ಯಾನಿಲಯಗಳು ಮಕ್ಕಳ ಗ್ರಂಥಾಲಯಗಳನ್ನೇ ಪ್ರತ್ಯೇಕವಾಗಿ ಸ್ಥಾಪಿಸಿವೆ. ಈ ಮಾದರಿಯನ್ನು ಇತರ ಎಲ್ಲ ವಿಶ್ವವಿದ್ಯಾಲಯಗಳೂ ಅನುಸರಿಸುವುದು ಅಗತ್ಯ. ಬೇಕಾದರೆ ಇದಕ್ಕಾಗಿ ಶಿಕ್ಷಕ ವರ್ಗದಿಂದ. ಸಿಬ್ಬಂದಿ ವರ್ಗದಿಂದ ವಂತಿಗೆಗಳನ್ನು ಸಂಗ್ರಹಿಸಿ ಉಪಯೋಗಿಸಬಹುದು.

೮. ಪುಸ್ತಕ ವ್ಯಾಪಾರಿಗಳು ಮಕ್ಕಳ ಪುಸ್ತಕಗಳನ್ನು ಕೂಡಿಸಿ ಮಾರಾಟಕ್ಕೆ ಇಡುವಂತೆ, ಪ್ರದರ್ಶಿಸುವಂತೆ ಪ್ರೋತ್ಸಾಹಿಸಿ ಪ್ರಚೋದಿಸಬೇಕು. ರೈಲು ನಿಲ್ದಾಣಗಳಲ್ಲಿನ ಮತ್ತು ಬಸ್ ನಿಲ್ದಾಣಗಳಲ್ಲಿನ ಪುಸ್ತಕದಂಗಡಿಗಳಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರದರ್ಶಿಸುವಂತೆ ಮಾಡಬೇಕು.

ಈ ಕ್ರಮಗಳಿಂದ ಈಗ ಇರುವ ಪುಸ್ತಕಗಳ ದಾಸ್ತಾನು ಉಪಯೋಗಕ್ಕೆ ಬರುವಂತೆ ಮಾಡಬಹುದಾಗಿದೆ.

ಹೊಸ ಪುಸ್ತಕಗಳ ಉತ್ಪಾದನೆ:

೧. ಒಳ್ಳೆಯ ಗುಣಮಟ್ಟದ ಮಕ್ಕಳ ಪುಸ್ತಕಗಳನ್ನು ಹೊಸದಾಗಿ ರಚಿಸಲು ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು, ನ್ಯಾಷನಲ್ ಬುಕ್ ಟ್ರಸ್ಟ್. ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಮೊದಲಾದ ರಾಷ್ಟ್ರೀಯ ಸಂಸ್ಥೆಗಳು ಈ ಬಗೆಯ ಕ್ರಮಗಳನ್ನು ಕೈಗೊಳ್ಳಬಹುದು. ಭಾರತದ ಎಲ್ಲ ಭಾಷೆಗಳಲ್ಲೂ ವ್ಯವಸ್ಥಿತವಾಗಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಹೊಣೆಯನ್ನು ಯಾವುದಾದರೂ ಒಂದು ರಾಷ್ಟ್ರಮಟ್ಟದ ಸಂಸ್ಥೆ ಹೊರಬೇಕು. ಇಂಗ್ಲೀಷೋ, ಹಿಂದಿಯೋ ಅಥವಾ ಬೇರೆ ಯಾವುದಾದರೂ ಒಂದು ಭಾಷೆಯಲ್ಲಿನ ಪುಸ್ತಕಕ್ಕಾಗಿ ತಯಾರಿಸಿದ ಚಿತ್ರ, ವಸ್ತು ಮುಂತಾದುವನ್ನೆಲ್ಲ ಬೇರೆ ಭಾಷೆ ಆವೃತ್ತಿಗಳಿಗೆ ಸುಲಭವಾಗಿ ಬಳಸಿಕೊಳ್ಳಬಹುದು. ಇದರಿಂದ ಉತ್ಪಾದನಾ ವೆಚ್ಚ ತಗ್ಗುವುದಲ್ಲದೆ ರಾಷ್ಟ್ರೀಯ ಭಾವೈಕ್ಯ ಸಾಧನೆಯಾಗುವುದು.

೨. ಕೊಟ್ಟಾಯಂನಲ್ಲಿರುವ 'ಕೇರಳ ಬಾಲ ಸಾಹಿತ್ಯ ಪರಿಷತ್. (೧೯೭೩) ನಂತಹ ಸಾಹಿತ್ಯ ಅಕಾಡೆಮಿಗಳು ಮಕ್ಕಳಿಗಾಗಿಯೇ ಎಲ್ಲ ರಾಜ್ಯಗಳಲ್ಲೂ ಸ್ಥಾಪಿತವಾಗಬೇಕು. ಕೇರಳದ ಈ ಸಂಸ್ಥೆಯು ಇಟ್ಟುಕೊಂಡ ಮುಖ್ಯ ಉದ್ದೇಶ ಆರೋಗ್ಯಕರವಾದ ಬಾಲಸಾಹಿತ್ಯವನ್ನು ಸೃಷ್ಟಿಸಿ ವ್ಯಾಪಕವಾಗಿ ಹರಡುವುದು.

೩) 'ಪಂಚತಂತ್ರ'. 'ಹಿತೋಪದೇಶ'. 'ಈಸೋಪನ ಕಥೆಗಳು' ಮುಂತಾದುವನ್ನಂತೂ ಒಂದೇ ಸಾರಿಗೆ ಎಲ್ಲ ಪ್ರದೇಶ ಭಾಷೆಗಳಲ್ಲಿ ಹೊರತರಬಹುದು. ಅದೇ

ರೀತಿ ಬ್ರಿಟನ್, ಅಮೇರಿಕಾ, ರಷ್ಯಾ, ಜಪಾನ್ ಮುಂತಾದ ದೇಶಗಳಲ್ಲಿನ ಸುಪ್ರಸಿದ್ಧ ಪುಸ್ತಕಗಳನ್ನು ಅನುವಾದ ಮಾಡಿಸಬಹುದು. ಭಾರತೀಯ ಭಾಷೆಗಳಲ್ಲೇ ಬಹಳ ಸೊಗಸಾದ ಮಕ್ಕಳ ಪುಸ್ತಕಗಳಿವೆ. ,ಇವುಗಳನ್ನು ಇತರ ಭಾಷೆಗಳಿಗೂ, ಇಂಗ್ಲೀಷಿಗೂ, ಭಾಷಾಂತರ ಮಾಡಿಸಬಹುದು.

೪. ಜ್ಞಾನಗಂಗೋತ್ರಿ ಮಾದರಿಯ ವಿಶ್ವಕೋಶಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಸಿದ್ಧಪಡಿಸಲು ರಾಜ್ಯ ಸರಕಾರಗಳು ಯೋಜನೆ ಹಾಕಿಕೊಳ್ಳಬೇಕು. 'ಅಂಡರ್ ಸ್ಟ್ಯಾಂಡಿಂಗ್ ಸೈನ್ಸ್' ಸಂಪುಟಗಳ ಪ್ರಾದೇಶಿಕ ಭಾಷಾ ಆವೃತ್ತಿಗಳನ್ನು ತರಲು ಕೂಡ ವ್ಯವಸ್ಥೆ ಮಾಡಬೇಕು.

೫. ಹಾಗೆಯೇ 'ವಿಜ್ಞಾನ ಪ್ರಗತಿ' ಮತ್ತು 'ಚಿಲ್ಡ್ರನ್ಸ್ ವರ್ಲ್ಡ್' ಅಂತಹ ಪತ್ರಿಕೆಗಳನ್ನು ಸಮಾನ ವಸ್ತು ಮತ್ತು ಚಿತ್ರಗಳನ್ನು ಬಳಸಿಕೊಂಡು ಎಲ್ಲ ಪ್ರದೇಶ ಭಾಷೆಗಳಲ್ಲೂ ತರಬೇಕು.

೬. ಫಿಲ್ಮುಗಳು. ಮ್ಯಾಪುಗಳು. ಚಾರ್ಟುಗಳು, ಚಿತ್ರಗಳು ಮುಂತಾದ ದೃಶ್ಯ ಶ್ರವ್ಯ ಸಲಕರಣೆಗಳನ್ನು (ಶೈಕ್ಷಣಿಕ ಮಹತ್ವವುಳ್ಳಂಥವೇ ಆದವುಗಳನ್ನು) ಅಗಾಧ ಪ್ರಮಾಣದಲ್ಲಿ ತಯಾರಿಸಲು ಯೋಜನೆ ಹಾಕಿಕೊಳ್ಳಬೇಕು.

೭. ವಿವಿಧ ಪ್ರದೇಶ ಭಾಷೆಗಳಲ್ಲಿನ ಗ್ರಂಥಗಳಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳು ಪ್ರಶಸ್ತಿ ಕೊಡುತ್ತಿರುವ ಹಾಗೆಯೇ ಪ್ರತಿವರ್ಷವೂ ಅತ್ಯುತ್ತಮ ಮಕ್ಕಳ ಸಾಹಿತ್ಯಕ್ಕಾಗಿ ಬಹುಮಾನ, ಪ್ರಶಸ್ತಿಗಳನ್ನು ಸ್ಥಾಪಿಸಬೇಕು.

೮. ಹಾಗೆಯೇ ಮಕ್ಕಳ ಪುಸ್ತಕಗಳ ಅತ್ಯುತ್ತಮ ಮುದ್ರಕ ಹಾಗೂ ಅತ್ಯುತ್ತಮ ಪ್ರಕಾಶಕ ಇವರಿಗೂ ಬಹುಮಾನಗಳನ್ನು ನೀಡಬೇಕು.

೯. ಒಂದು ತಿಂಗಳ ಕಾಲ ನಡೆಯುವ ಲೇಖಕ ಶಿಬಿರವನ್ನು ಮಕ್ಕಳ ಸಾಹಿತ್ಯ ಲೇಖಕರಿಗಾಗಿ ನಡೆಸಬೇಕು. ಇದನ್ನು ನ್ಯಾಶನಲ್ ಬುಕ್ ಟ್ರಸ್ಟ್ ನಡೆಸಬಹುದು. ಅಥವಾ ಕೇಂದ್ರ ಅಥವಾ ರಾಜ್ಯ ಸಾಹಿತ್ಯ ಅಕಾಡೆಮಿಗಳು ನಡೆಸಬಹುದು.

೧೦. ಮಕ್ಕಳ ಸಾಹಿತ್ಯವನ್ನು ಕುರಿತೇ ರಾಷ್ಟ್ರಮಟ್ಟದ ಒಂದು ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಬೇಕು. ಅದರಲ್ಲಿ ಬಾಲಸಾಹಿತ್ಯದ ವಿತರಕರು, ಪ್ರಕಾಶಕರು, ಕೊಳ್ಳುಗರು, ಗ್ರಂಥ ಭಂಡಾರಿಗಳು ಭಾಗವಹಿಸಬೇಕು. ಇದು ಆದಷ್ಟು ಬೇಗ ನಡೆಯಬೇಕು.

೧೧. ಮಕ್ಕಳ ಪುಸ್ತಕಗಳ ಹಾಗೂ ಪತ್ರಿಕೆಗಳ ಪ್ರಕಾಶಕರಿಗೆ ರಾಜ್ಯ ಸರ್ಕಾರಗಳು ಪ್ರೋತ್ಸಾಹನ ಕೊಡುವ ಕಾರ್ಯಕ್ರಮವನ್ನು ರೂಪಿಸಬೇಕು.

೧೨. ಅಂಗವಿಕಲರಾದ ಮಕ್ಕಳ ಜ್ಞಾನಾಗತ್ಯಗಳನ್ನು ಸಾಕಷ್ಟು ಜಾಗರೂಕತೆಯಿಂದ ಗಮನಿಸಿ ರಾಷ್ಟ್ರದ ಎಲ್ಲ ಭಾಷೆಗಳಲ್ಲೂ ಬ್ರೇಲ್ ಪುಸ್ತಕಗಳು ಮತ್ತು ಶೈಕ್ಷಣಿಕ ಚಿತ್ರಗಳು, ಫಿಲಂ ಸ್ಟ್ರಿಪ್‌ಗಳು ಮತ್ತಿತರ ದೃಕ್–ಶ್ರವಣ ಸಾಧನಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು.

ಸಮಾರೋಪ :

ಭಾರತದಲ್ಲಿ ಮಕ್ಕಳಿಗಾಗಿ ಮಾಡಬೇಕಾದದ್ದು ಬೇಕಾದಷ್ಟಿದೆ. ಅಂತರರಾಷ್ಟ್ರೀಯ ಮಕ್ಕಳ ವರ್ಷದ ಈ ಸಂದರ್ಭವು ಮಗುವಿನ ಸರ್ವತೋಮುಖ ವಿಕಾಸಕ್ಕಾಗಿ ವಿವಿಧ ಯೋಜನೆಗಳನ್ನು ರೂಪಿಸಲು ಒದಗಿರುವ ಅವಕಾಶವಾಗಬೇಕು. ಮಗು ಕುಟುಂಬದ ಕಣ್ಣು. ಎಲ್ಲ ಕಡೆಯೂ ಮಗುವಿಗೆ, ಮಕ್ಕಳಿಗೆ ಆದ್ಯತೆ ಬರಬೇಕು. "ದೇಹದ ಪುಷ್ಟಿಯಿಂದ ಬುದ್ಧಿಯ ಪುಷ್ಟಿಯವರೆಗೆ" ಮಗುವಿನ ವಿಕಾಸದ ಎಲ್ಲ ಮುಖಗಳನ್ನೂ ಒಳಗೊಳ್ಳುವಂತೆ ಸರಕಾರವು ಈ ವರ್ಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ವಯಸ್ಕರಾದ ನಮಗೆಲ್ಲ ಪ್ರಪಂಚದಲ್ಲಿ ಏಳೇ ಏಳು ಆಶ್ಚರ್ಯಾದ್ಭುತ ವಸ್ತುಗಳು: ಮಕ್ಕಳಿಗಾದರೂ ಏಳು ಕೋಟಿ. ಭರದಿಂದ ಬೆಳೆಯುತ್ತಿರುವ ಮಕ್ಕಳಿಗೆ ಇಲ್ಲಿನ ಎಲ್ಲ ವಸ್ತುಗಳೂ ಅದ್ಭುತ ವಸ್ತುಗಳೇ. ಇವುಗಳಲ್ಲಿನ ಅನೇಕವುಗಳ ಪರಿಚಯ ಮಕ್ಕಳಿಗಾಗುವದು ಅವರಿಗೆ ಎಟುಕುವಂಥ, ಅವರ ಮನ ಸೆರೆ ಹಿಡಿಯುವಂಥ ಪುಸ್ತಕಗಳಿಂದ ಮಾತ್ರ ಸಾಧ್ಯ.

"ಇಂಟರ್ ನ್ಯಾಷನಲ್ ಬೋರ್ಡ್ ಆಫ್ ಬುಕ್ಸ್ ಫಾರ್ ಯಂಗ್ ಪೀಪಲ್" (IBBY) ಸಂಸ್ಥೆಯು ಈ ಅಂತರರಾಷ್ಟ್ರೀಯ ಮಕ್ಕಳ ವರ್ಷಕ್ಕಾಗಿ ನೀಡಿದ ಹೇಳಿಕೆಯಿಂದ ಅತ್ಯಂತ ಸಮರ್ಪಕವಾದ ಒಂದು ಭಾಗವನ್ನು ಉದ್ಧರಿಸಿ ಈ ಲೇಖನವನ್ನು ಮುಗಿಸಬಹುದು.

"ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ. ಮೊದಲನೆಯದಾಗಿ ಎಲ್ಲ ಕಡೆಯೂ ಇರುವ ಮಕ್ಕಳು ಓದುವ ಸಾಮರ್ಥ್ಯವುಳ್ಳವರಾಗುವಂತೆ ಮಾಡಲು. ಎರಡನೆಯದಾಗಿ ವಿಸ್ತಾರವೂ ಸಮೃದ್ಧವೂ ಆದ ಗ್ರಂಥರಾಶಿಯು ಅವರ ಆಸಕ್ತಿ ಅಗತ್ಯಗಳಿಗನುಗುಣವಾಗಿ ಅವರಿಗೆ ದೊರಕುವಂತೆ ಮಾಡಲು ನಾವು ಪ್ರತಿಜ್ಞೆ ಕೈಗೊಳ್ಳಬೇಕು.

"ಭವಿಷ್ಯತ್ತಿನ ಜಗತ್ತು ರೂಪುಗೊಳ್ಳುವುದು ನಮ್ಮ ಮಕ್ಕಳ ಕೈಗಳಿಂದ. ಮನಸ್ಸುಗಳಿಂದ ಎಂಬುದನ್ನು ಅರಿತುಕೊಳ್ಳಬೇಕು. ಆಗ ನಮ್ಮ ಮಕ್ಕಳಿಗೆ ವಿಚಾರಗಳು, ಆದರ್ಶಗಳು. ಮಾಹಿತಿಗಳು, ಪ್ರೋತ್ಸಾಹಕರವಾದ ಸ್ಫೂರ್ತಿಯ ನೆಲೆಗಳು ದೊರೆತು ಜಗತ್ತು ತಮ್ಮ ಪಾಲಿಗೆ ಉತ್ತಮತರ ನೆಲೆಯಾಗುವಂತೆ ರೂಪಿಸಿಕೊಳ್ಳಲು ಅವರಿಗೆ

ಸಾಧ್ಯವಾಗುತ್ತದೆ. ಅವರ ದೈಹಿಕ ಹಾಗೂ ಲೌಕಿಕ ಯೋಗಕ್ಷೇಮವನ್ನು ಮಾತ್ರ ಒಳಗೊಳ್ಳುವಂತಿರದೆ ಅವರ ಬಗ್ಗೆ ನಮಗಿರುವ ಕಳಕಳಿಯು ಅವರ ಸಾಮಾಜಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ವಿಕಾಸವನ್ನು ಒಳಗೊಳ್ಳುವಂತೆ ಆಗಬೇಕು. ಸಮಸ್ತ ಮಾನವ ಜನಾಂಗದ ಸುಪ್ತ ಸಾಮರ್ಥ್ಯ ಇರುವುದೇ ಮಕ್ಕಳಲ್ಲಿ. ಆದ್ದರಿಂದ ತಮ್ಮಲ್ಲಿ ಸುಪ್ತವಾಗಿರುವ ವ್ಯಕ್ತಿಗತವಾದ ಆಧ್ಯಾತ್ಮಿಕ, ಲೌಕಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವರಿಗೆ ಸಂಪೂರ್ಣ ಅವಕಾಶವನ್ನೂ ಸ್ವಾತಂತ್ರ್ಯವನ್ನೂ ನಾವು ಕೊಡಬೇಕು. ಅಜ್ಞಾನ ಅಥವಾ ಅನಕ್ಷರತೆಯಿಂದಾಗಿ ಜಗತ್ತಿನ ಯಾವುದೇ ಭಾಗದ ಯಾವುದೇ ಮಗುವಿಗೂ ಜ್ಞಾನದ ಬಾಗಿಲು ಮುಚ್ಚಬಾರದು.

"ಮಾನವ ಜನಾಂಗದ ಸಾಧನೆ ಸಿದ್ಧಿಗಳ ದಾಖಲೆಗಳನ್ನು ಮಕ್ಕಳು ಪಡೆಯುವುದು ಪುಸ್ತಕಗಳ ಮೂಲಕ. ಹಾಗೆಯೇ ಜನಾಂಗದ ಭವಿಷ್ಯತ್ ಆಸೆ ಆಕಾಂಕ್ಷೆಗಳ ಪೂರೈಕೆಗಾಗಿ ಪುಸ್ತಕಗಳೇ ಅವರಿಗೆ ಉಪಕರಣಗಳು. ಆದ್ದರಿಂದ ನಾಳೆಯ ಉತ್ತಮತರ ಜಗತ್ತಿಗಾಗಿ ಇಂದು ಅಗತ್ಯವಾಗಿರುವ ಪುಸ್ತಕಗಳನ್ನು ನಾವು ಮಕ್ಕಳಿಗೆ ಕೊಡೋಣ."

ಕನ್ನಡದಲ್ಲಿ ಮಕ್ಕಳ ಬಗೆಗಿನ ಸಂದರ್ಭ ಗ್ರಂಥಗಳು ಹಾಗೂ ನಿಯತಕಾಲಿಕೆಗಳು

ಅ) ಸಂದರ್ಭ ಗ್ರಂಥಗಳು :

೧ ಬಾಲಪ್ರಪಂಚ, ೩ ಸಂಪುಟಗಳು
ಲೇ : ಶಿವರಾಮ ಕಾರಂತ
ಬೆಂಗಳೂರು, ಸತ್ಯ ಶೋಧನ ಪ್ರಕಾಶನ ಮಂದಿರ ೧೯೩೪

೨ ವಿಜ್ಞಾನ ಪ್ರಪಂಚ. ೫ ಸಂಪುಟಗಳು
ಲೇ : ಶಿವರಾಮ ಕಾರಂತ
ಪುತ್ತೂರು, ಹರ್ಷ ಪ್ರಕಟನಾಲಯ ೧೯೫೯

೩ ಜ್ಞಾನ ಗಂಗೋತ್ರಿ (ಕಿರಿಯರ ವಿಶ್ವಕೋಶ.) ೭ ಸಂಪುಟಗಳು
ಲೇ : ನಿರಂಜನ ಮತ್ತು ಇತರರು
ಬೆಂಗಳೂರು, ಕರ್ನಾಟಕ ಸಹಕಾರ ಪ್ರಕಟನಾಲಯ ಮಂದಿರ ೧೯೭೦-೭೪

ಬ) ನಿಯತಕಾಲಿಕೆಗಳು :

೧ ಬಾಲಮಿತ್ರ (ಮಾಸಿಕ) ೧೯೫೭
ಬಿ. ವಿ. ರಾಧಾಕೃಷ್ಣ
೭೩, ಆಚಾರಪ್ಪನ ಬೀದಿ, ಮದ್ರಾಸ–೧

೨ ಚಂದಮಾಮ (ಮಾಸಿಕ) ೧೯೪೮
ಬಿ. ವಿ. ರೆಡ್ಡಿ
೨–೩, ಆರ್ಕೋಟ ರಸ್ತೆ, ಒಡಪಲಾನಿ, ಮದ್ರಾಸ–೨೬

೩ ಓಂ ಪ್ರಕಾಶ (ಮಾಸಿಕ) ೧೯೭೨
ಜೆ. ಉಮಾಶಂಕರ
ನಂ. ೮೩೬, ೩೭ ಕ್ರಾಸ್, ೪ ನೆಯ ಬ್ಲಾಕ,
ಜಯನಗರ, ಬೆಂಗಳೂರು–೧೧

೪ ಬೊಂಬೆ ಮನೆ (ಮಾಸಿಕ)
ವಿಜಯಾ ಬಾಪಿನೀಡು
೮೦, ಧನಲಕ್ಷ್ಮಿ ಓಣಿ, ಮದ್ರಾಸ–೨೬

REFERENCES

1 India : Education Ministry : *Reading for Pleasure : Proceedings of a National Seminar*, 1957

2 *India : Reference Annual* 1977–78 ; New Delhi, Information etc., Ministry, 1978

3 Puttanayak, D. P. *Ed* : Trends in juvenile literature in India : Papers submitted to the 14th session of the AIJDC, Mysore 8–10, March 1975

4 Tucker, Nicholas : Ed : *Suitable for children ? Controversies in children's literature* ; Sussex, University Press, 1977

5 UNESCO : *Book Development in Asia* : Report on the production and distribution of books in the region, 1967

6 UNESCO : *Book Promotion News*

7 UNESCO : *News Letters*, (XVIII, 4 Oct. 1976; XX, 2 April 1978, XX, 3 July 1978); Regional Office for Culture & Book Development in Asia; Karachi

8 UNESCO : *Statistical Year Book*, 1976

9 *Times of India* : Focus on children must be meaningful. 1 Jan. 1979, p. 9.

10 National Library of India, Calcutta : *Information regarding Books published in India*

ಮಕ್ಕಳು ಮತ್ತು ಆಟಗಳು

● ಕೆ. ಜಿ. ನಾಡಗೀರ

"ಏನು ಮಗುವಿನ ಹಾಗೆ ಆಟವಾಡುತ್ತ ಕುಳಿತೆಯೋ" ಎಂದು ಹೇಳುವಾಗ, ದೊಡ್ಡವರಿಗೆ ಕೆಲಸವು ಹೇಗೆ ಅಪೇಕ್ಷಣೀಯವೋ ಹಾಗೆ ಮಗುವಿಗೆ ಆಟವೂ ಅಷ್ಟು ನೈಸರ್ಗಿಕವಾಗಿದೆ ಎಂದು ಅರ್ಥವಾಗುತ್ತದೆ. ಆಟದಲ್ಲಿ ತೊಡಗಿದಾಗಿನ ಮಕ್ಕಳತನ್ಮಯತೆ ನೋಡಿದಾಗ, ಮಕ್ಕಳೆಂದರೆ ಆಟ, ಆಟವೆಂದರೆ ಮಕ್ಕಳು ಎಂದು ತಿಳಿದು ಬಂದರೆ ಆಶ್ಚರ್ಯವೇನಲ್ಲ. ಆಟವು ಮಕ್ಕಳಿಗೆ ಎಷ್ಟು ಸಹಜವೋ ಅಷ್ಟೇ ಸ್ವಾರಸ್ಯಮಯ ಮತ್ತು ಸಂತಸಮಯವೂ ಕೂಡ. ಆಟವು ಮಕ್ಕಳಿಗೆ ಅಷ್ಟೇ ಗಹನ ಹಾಗೂ ಗಂಭೀರ. ಪ್ರಕೃತಿ ಮಾತೆಯು ಮಕ್ಕಳಲ್ಲಿ ಆಟದ ಮೋಹವನ್ನೇ ಇಟ್ಟಿದ್ದಾಳೆ.

ಆಟವು ಮನುಷ್ಯರ ಮಕ್ಕಳಿಗೇ ಮೀಸಲೆಂದು ತಿಳಿಯಲು ಬಾರದು. ಯಾಕೆಂದರೆ ಪ್ರಾಣಿವಿಕಸನಕ್ರಮ ತಿಳಿದು ಅವುಗಳ ಜೀವನದ ಅಭ್ಯಾಸ ಮಾಡಿದ ತಜ್ಞರು, "ವಿಕಸನದ ಮೇಲ್ಮಟ್ಟದಲ್ಲಿ ಬರದ ಪ್ರಾಣಿಗಳೂ ಆಟದಲ್ಲಿ ತೊಡಗುತ್ತವೆ," ಎಂದು ಅಭಿಪ್ರಾಯ ಪಡುತ್ತಾರೆ. ಕೇವಲ ಕೆಳತರಗತಿಯಲ್ಲಿಯ ಕ್ರಿಮಿ ಕೀಟಕಗಳು ಪ್ರತಿಕ್ಷಿಪ್ತಕ್ರಿಯೆಯ ಮೂಲಕ ಜೀವನ ಸಾಗಿಸುತ್ತವೆ; ಮತ್ತು ಮೇಲ್ತರಗತಿಯ ಪ್ರಾಣಿಗಳಲ್ಲಿ ಜೀವನಾವಶ್ಯಕ ಮೂಲ ಪ್ರವೃತ್ತಿಗಳು ಹೆಚ್ಚುತ್ತ ಹೋಗಿ, ಎಳೆತನದಲ್ಲಿ ಇವುಗಳ ಅಭ್ಯಾಸವೇ ಆಟದ ರೂಪತಾಳುತ್ತವೆ ಎನ್ನುತ್ತಾರೆ. ಪ್ರಾಣಿಗಳಲ್ಲಿಯ ಪ್ರಚಲಿತ ಆಟಗಳು ಸಾಮಾನ್ಯವಾಗಿ ಈ ಮುಂದಿನ ರೂಪದಲ್ಲಿ ಕಾಣಬರುತ್ತವೆ.

ಅ) **ಸಾಮಾನ್ಯ ಚಟುವಟಿಕೆ :** ಇದು ಅಲ್ಹಾದಕರವಾದ ಹವೆಯು ತಲೆ ದೋರಿದಾಗ ಮತ್ತು ಶಾರೀರಿಕ ಸ್ವಾತಂತ್ರ್ಯ ಬಂದಾಗ ಪ್ರಕಟವಾಗುತ್ತದೆ. ಹಕ್ಕಿಗಳ ಮರಿಗಳು ಅತ್ತಿಂದಿತ್ತ ಹಾರಾಡುವದು ದೊಡ್ಡ ಹಕ್ಕಿಗಳು ಹವೆಯಲ್ಲಿ ಲಾಗ ಹಾಕುವದು, ಅನೇಕ ರೀತಿಯಲ್ಲಿ ಧ್ವನಿತಗೆದು ಹಾಡುವದು ಇದರಲ್ಲಿ ಪ್ರಕಟವಾಗುತ್ತದೆ. ಇದರಂತೆ ಪ್ರಾಣಿಗಳು ಕೂಡ ಮೇಕೆಯ ಮರಿಗಳು ನೆಗೆದಾಡುವದು, ಕರುಗಳು ಜಿಗಿದಾಡುವದು, ಸರಪಣಿ ಬಿಚ್ಚಿದ ನಾಯಿ ಅತ್ತಿಂದಿತ್ತ ಇತ್ತಿಂದತ್ತ ಓಡುವದು, ನೆಲದ ಮೇಲೆ ಹೊರಳಾಡುವದು, ಉದಾಹರಣೆಗಳು.

ಬ) ಜೀವನಾವಶ್ಯಕ ಚಟುವಟಿಕೆಗಳ ರೀತಿಯವು; ಬೇಟೆ ಅಂದರೆ, ಒಂದರ ಬೆನ್ನಟ್ಟುವದು, ತಪ್ಪಿಸುವದು, ಜಪ್ಪಿಸಿ ನೆಗೆಯುವದು ಗಾಯವಾಗದಂತೆ ಪರಸ್ಪರ ಹೋರಾಡುವದು, ಕಾದಾಡುವದು. ಕಚ್ಚಾಡುವದು, ಲೈಂಗಿಕ ಅಭೀಷ್ಟೆಯ ಚಲನೆಯ ರೂಪದ ಆಟಗಳು ಈ ರೀತಿಯ ಆಟಗಳಾಗಿವೆ. ಇವು ಎಲ್ಲ ಪ್ರಾಣಿ ಮರಿಗಳಲ್ಲಿ ನಡೆಯುತ್ತವೆ.

ಕ) ಪ್ರಾಣಿ ಮರಿಗಳಲ್ಲಿ ಸಾಮೂಹಿಕ ಪ್ರಕಾರದ ಆಟಗಳೂ ನಡೆಯುತ್ತವೆ. ಉದಾ: ಪರಸ್ಪರ ಮೈನೆಕ್ಕುವದು; ಶಿಶುಗಳನ್ನು ಸಂರಕ್ಷಿಸುವದು, ಸಾಮೂಹಿಕವಾಗಿ ಆಟವಾಡುವದು, ಇತ್ಯಾದಿ. ಕಪಿಗಳು ತಾಳಕ್ಕೆ ತಕ್ಕಂತೆ ಕುಣಿಯುವದು ಕೂಡ ಕಂಡು ಬಂದಿದೆ.

ಡ) ವಸ್ತುಗಳ ಪರಿಚಯ ಮಾಡಿಕೊಳ್ಳಲು ಪ್ರಾಣಿಗಳು ಅವನ್ನು ಕಾಲಿನಿಂದ ಒಡೆಯುವದು, ಮೂಸುವದು, ನೆಕ್ಕುವದು. ಕಚ್ಚುವದು ಕೂಡಾ ಕಂಡುಬರುತ್ತದೆ. ತಮ್ಮ ಮಾರ್ಗದಲ್ಲಿ ಬಂದ ಪದಾರ್ಥಗಳನ್ನು ಅವು ಸರಿಸುತ್ತವೆ, ನೂಕುತ್ತವೆ ಇಲ್ಲವೇ ಜಗ್ಗಿ ತಳ್ಳುತ್ತವೆ.

ಮಂಗಗಳ ಆಟವು ಹೆಚ್ಚು ಬುದ್ಧಿ ವಿಚಾರದಿಂದ ಕೂಡಿದವಾಗಿದ್ದು ಮನುಷ್ಯರ ಮಕ್ಕಳಲ್ಲಿ ಇವು ಅನೇಕ ರೀತಿಯಲ್ಲಿ ಸಾಗುತ್ತವೆ ಮತ್ತು ವಿಶಿಷ್ಟವಾಗಿರುತ್ತವೆ. ಈ ಕಾರಣಗಳಿಂದಾಗಿ. ನಮ್ಮ ಮಕ್ಕಳ ಆಟಗಳು ಆಟಪ್ರವೃತ್ತಿ ಎಂಬ ವಿಶೇಷ ಮೂಲ ಪ್ರವೃತ್ತಿಯಿಂದ (Instinct) ನಡೆಯುತ್ತವೆಂದು ತಜ್ಞರು ಹೇಳುತ್ತಾರೆ.

ಮಕ್ಕಳ ಆಟದ ನೈಜ ಸ್ವರೂಪ :

ಮಕ್ಕಳ ವೈವಿಧ್ಯಮಯ ಆಟಗಳನ್ನು ನಿರೀಕ್ಷಿಸಿ ಅಭ್ಯಸಿಸಿದಾಗ ನಮಗೆ ಕೆಲವು ಮುಖ್ಯ ಅಂಶಗಳು ಗಮನಕ್ಕೆ ಬರುತ್ತವೆ. ಇವು ಯಾವವೆಂದರೆ:

ಅ) ಆಟವು ಪುನರುತ್ಸಾಹದಾಯಕವಿರುತ್ತದೆ (Restorative). ಮಕ್ಕಳಿಗೆ ತಮಗೆ ಬೇಡವಾದ ಚಟುವಟಿಕೆ ಮಾಡಿದರೆ ಬೇಸರ ಬರುತ್ತದೆ. ಇದನ್ನು ಹೊಡೆದು ಹಾಕಲು ಅವರು ಉತ್ಸುಕರಾಗಿರುತ್ತಾರೆ. ಮತ್ತು ಕೆಲ ಸಮಯ ತಮಗೆ ಇಷ್ಟವಾದು ದನ್ನು ಆಡಿದರೆಂದರೆ ಅವರಲ್ಲಿ ಪುನಃ ಉತ್ಸಾಹವು ಮೂಡಿದುದು ಕಂಡುಬರುತ್ತದೆ.

ಬ) ಆಟವು ಸಾಧನೆಯ ತೃಪ್ತಿಯನ್ನು ತರುತ್ತದೆ. ಆಟವನ್ನು ಆಡುವ ಮಕ್ಕಳು ಅನೇಕ ಚಲನೆಗಳನ್ನು ಮಾಡಲು ಹವಣಿಸುತ್ತಾರೆ. ವಸ್ತುಗಳನ್ನು ಬಳಸಲು ಪ್ರಯತ್ನಿಸುತ್ತಾರೆ. ಮತ್ತು ಅವನ್ನು ಮೇಲಿಂದ ಮೇಲೆ ಮಾಡಿ ಪ್ರಭುತ್ವ ಪಡೆಯು ತ್ತಾರೆ. ಇದರಿಂದ ಅವರಿಗೆ ಸಾಧನೆಯ ತೃಪ್ತಿ ಬರುತ್ತದೆ. ಅಭಿಮಾನವು ಮೂಡುತ್ತದೆ.

ಕ) ಆಟವು ಉದ್ದೇಶದಿಂದ ಕೂಡಿರುತ್ತದೆ. ಆಟದಲ್ಲಿ ತೊಡಗಿರುವ ಮಕ್ಕಳಿಗೆ ತಾವು ಆಡುವ ಆಟಗಳ ಮುಖ್ಯ ಉದ್ದೇಶ ಇಂಥದೇ ಎಂದು ತಿಳಿಯದಿದ್ದರೂ, ಅದರಲ್ಲಿ ಸಾರ್ಥಕತೆಯನ್ನು ಮಾತ್ರ ಕಾಣುತ್ತಾರೆ. ಈ ಸಾರ್ಥಕತೆಯು ಸ್ವಯಂಪರಿಪೂರ್ಣತೆಗೆ (Egomastery) ಪರಿಪೂರಕವಿರುತ್ತದೆ. ಇದೇ ಆಟದ ಉದ್ದೇಶ.

ಡ) ಆಟವು ರಭಸದಿಂದ ಕೂಡಿರುತ್ತದೆ (Exuberant). ಕೆಲವು ಸಲ ಮಕ್ಕಳು ಇದ್ದಕ್ಕಿದ್ದ ಹಾಗೆ ರಭಸದಿಂದ ಜಿಗಿಯುತ್ತಾರೆ, ಓಡುತ್ತಾರೆ. ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಓಡುತ್ತಾರೆ, ಗದ್ದಲಮಾಡುತ್ತಾರೆ, ಅರಚುತ್ತಾರೆ, ಮತ್ತು ಗುದುಮುರಿಗೆ ಹಾಕುತ್ತಾರೆ. ಇದು ಬಹಳ ಹೊತ್ತು ಉಳಿಯುವದಿಲ್ಲ. ಆದರೂ ಆಗಾಗ ನಡೆಯುತ್ತದೆ. ಅದನ್ನೇ ಕೆಲವರು 'ಹೆಚ್ಚಿನ ಉಗಿಯನ್ನು ಹೊರಗೆ ಬಿಟ್ಟಂತೆ' ಎನ್ನುತ್ತಾರೆ. ಇನ್ನು ಕೆಲವರು 'ಸ್ಫೋಟ' ಎನ್ನುತ್ತಾರೆ. ಇಂಥ ಆಟವು ಮೇಲಿಂದಮೇಲೆ ನಡೆಯುತ್ತದೆ. ಮತ್ತು ಒಂದು ವಿಶಿಷ್ಟ ಸನ್ನಿವೇಶಕ್ಕೆ ಪ್ರತಿಕ್ರಿಯೆ ಎಂಬಂತೆ ತೋರುತ್ತದೆ.

ಆಟದ ಉದ್ದೇಶ :

ಬೆಳವಣಿಗೆ : ಮಕ್ಕಳು ಮನೆಗೆ ಚಂದವೇನೋ ಅಹುದು. ಆದರೆ ಅವು ಬೆಳೆಯದೇ ಹಾಗೆಯೇ ಉಳಿದರೆ ತಂದೆ ತಾಯಿಗಳಿಗೆ ಅದೊಂದು ದೊಡ್ಡ ಚಿಂತೆಯೇ ಆಗಿರುತ್ತವೆ. ಜೀವನದಲ್ಲಿ ಜನನ ಹೇಗೋ ಹಾಗೆ ಬೆಳವಣಿಗೆಯೂ ಮುಖ್ಯ. ಅಷ್ಟೇ ನೈಸರ್ಗಿಕ. ಇಂಥ ಬೆಳವಣಿಗೆಯನ್ನು ನಿಸರ್ಗವು ಆಟದ ಮೂಲಕ ಸಾಧಿಸುತ್ತದೆ. ಇದಕ್ಕೆ ಕಾರಣ ಹೀಗೆ:

೧) ಆಟದಿಂದ ಮಗುವಿನ ದೇಹ ಮನಸ್ಸುಗಳಿಗೆ ವ್ಯಾಯಾಮವಾಗಿರುತ್ತದೆ. ಆಟವು ಕೈಗಳಿಗೆ ವಸ್ತುವನ್ನು ಹಿಡಿಯುವದಕ್ಕೂ, ಕಾಲುಗಳಿಗೆ ಓಡುವದಕ್ಕೂ ಪ್ರೇರಿಸುತ್ತದೆ. ಹೃದಯಕ್ಕೆ ಹೆಚ್ಚು ರಕ್ತ ಪೂರೈಸಲು ಹೇಳುತ್ತದೆ. ಪುಪ್ಪುಸಕ್ಕೆ ಹೆಚ್ಚು ಪ್ರಾಣವಾಯು ಗ್ರಹಿಸಿ ರಕ್ತ ಶುದ್ಧವಾಗಲು ಕೊಡುತ್ತದೆ. ಪ್ರತಿಯೊಂದು ಇಂದ್ರಿಯವೂ ಅಸ್ಥಿ ಸ್ನಾಯುಗಳಿಗೆ ಪೂರಕವಾಗಿ ಹೆಚ್ಚಿನ ಕೆಲಸ ಮಾಡಬೇಕು. ಇದರಿಂದ ನೇರವಾಗಿ ಶ್ರಮವಹಿಸುವ ಸ್ನಾಯುಗಳೂ, ಅಸ್ಥಿಗಳೂ, ಹೃದಯ ರಕ್ತ ನಾಳಗಳೂ, ಪುಪ್ಪುಸವೂ ಬಲಿಷ್ಠ ಹಾಗೂ ಕಾರ್ಯಕ್ಷಮವಾಗುತ್ತವೆ. ಇವುಗಳಿಗೆ ಪೂರಕವಾದ ಮನಸ್ಸು ಮತ್ತು ಉಳಿದ ಮಾರ್ಮಿಕ ಇಂದ್ರಿಯಗಳೂ ಕೂಡ ಹೆಚ್ಚು ಕಾರ್ಯಕ್ಷಮವಾಗುತ್ತವೆ.

೨) ಶರೀರದ ಬೆಳವಣಿಗೆಯು ಮಗುವಿನ ಪರಿಪೂರ್ಣತೆಯನ್ನು ತರುತ್ತದೆ. ನಿಸರ್ಗದ ಯೋಜನೆಯೇ ಇದು. ಇದಕ್ಕೆ ಲಿಬರಲ್ ಎಜ್ಯುಕೇಶನ್ ಅನ್ನುತ್ತಾರೆ. (Liberal Educatian is that which fully liberates the great human instincts which govern Children's play-Joseph Lee) ಒಂದೊಂದು

ಪ್ರಕಾರ ಶಾರೀರಿಕ ಆಟದೊಡನೆ ಮೆದುಳಿನ ಒಂದೊಂದು ಭಾಗದ ಕಾರ್ಯವೂ, ಕಾರ್ಯಕ್ಷಮತೆಯೂ ಹೆಚ್ಚುತ್ತ ಹೋಗುತ್ತದೆ, ಸುಧಾರಿಸಿ ಬೆಳೆಯತೊಡಗುತ್ತದೆ. ಇದೇ ವ್ಯಾಯಾಮಗಳೆರಡರ ಸಮನ್ವಯ ಮತ್ತು ಅಖಂಡ ಮನುಷ್ಯನ ಬೆಳವಣಿಗೆ.

ಮಕ್ಕಳ ಪರಿಪೂರ್ಣ ಬೆಳವಣಿಗೆ ಇಲ್ಲದೇ ಪೂರ್ಣಶಕ್ತಿ ಬರುವದಿಲ್ಲ. ಅದಿಲ್ಲದೇ ಜೀವನವು ಪರಿಣಾಮಕಾರಿಯೂ ಆಗುವದಿಲ್ಲ. ನಾನಾ ರೀತಿಯ ಆಟಗಳನ್ನಾಡಿ ಮಕ್ಕಳು ಸರ್ವಾಂಗೀಣವಾಗಿ ಬೆಳೆಯಬೇಕೆಂಬುದೇ ಪ್ರಕೃತಿ ಮಾತೆಯ ಇಚ್ಛೆ.

೩) ಮಕ್ಕಳಿಗೆ ಆಟವು ಕೇವಲ ಮನರಂಜನೆಯಲ್ಲ. ಕಾಣದ ಒಂದು ಅಂತಿಮ ಧ್ಯೇಯಕ್ಕೆ ಕೈಚಾಚಿ ಹಿಡಿಯಬೇಕೆಂಬ ಆಸಕ್ತಿ. ಜಗತ್ತಿನಲ್ಲಿಯ ಹೊಸ ಹೊಸತನ್ನು ಜಯಿಸುವ ಕ್ರಿಯಾಶಿಷ್ಟ್ಯ, ಆಟ. ಅಂತೂ ಆಟ ಮೊದಲು, ಬೆಳವಣಿಗೆ ನಂತರ.

ಆಟವು ಜೀವನದ ಸಿದ್ಧತೆ :

ಮನೆಯಲ್ಲಿಯ ಬೆಕ್ಕಿನ ಮರಿಯನ್ನು ನೋಡಿರಿ. ನಿಸರ್ಗ ಅದನ್ನು ಒಳ್ಳೆ ಬೇಟೆಗಾರರನ್ನಾಗಿ ಮಾಡಿದೆ. ಮರಿಯಾದಾಗ ಅದರಲ್ಲಿಯೇ ತನ್ಮಯತೆ. ಯಾವ ವಸ್ತು ಸಿಗಲಿ, ಅದರಲ್ಲೂ ಉರುಳುವ ಚೆಂಡು, ಉಣ್ಣೆಯ ದಾರದ ಉಂಡೆ ಇವೆಲ್ಲವೂ ಅದರ ಬೇಟೆಯ ವಸ್ತು: ಆಡುವದೂ ಅದೇ ರೀತಿಯಲ್ಲಿ. ಇದೇ ಮಾತು ನಾಯಿಯ ಮರಿಗಳಿಗೂ ಅನ್ವಯಿಸುತ್ತದೆ.

ನಮ್ಮ ಮಕ್ಕಳೂ ಈ ಮನೋವೃತ್ತಿಗೇನೂ ಅಪವಾದವಲ್ಲ. ಆದರೆ ಜೀವನದ ಅಂತಿಮ ಧ್ಯೇಯ ವೈವಿಧ್ಯಮಯ. ಲಕ್ಷಾವಧಿ ವರುಷ ನಡೆಸಿದ ಜೀವನಕ್ಕೆ ಅಣಿಯಾಗುವದು. ಬೇಟೆಗಾರ ಬೆನ್ನಟ್ಟುವ ಆಟದಲ್ಲಿ, ಹೋರಾಟಗಾರ–ಜಗಳವಾಡುವ ಗುದ್ದಾಟದ ಆಟಗಳಲ್ಲಿ, ಪರಿಶೋಧಕ–ಬೊಂಬೆ, ಗಿಡ, ಸಾಕಿದ ಪ್ರಾಣಿ, ಮರಿ ಇವುಗಳನ್ನು ಸಾಕುವಲ್ಲಿ ಕವಿ–ಹಾಡುತ್ತ ನರ್ತಿಸುವಲ್ಲಿ, ಕಟ್ಟಡ ನಿರ್ಮಾಪಕ– ಮರದ ತುಂಡುಗಳಿಂದ ಮನೆ, ಸೇತುವೆಗಳನ್ನು ನಿರ್ಮಿಸುವಲ್ಲಿ, ಶಾಸ್ತ್ರಜ್ಞ– ವಸ್ತುಗಳ ಪರಿಶೋಧನೆ ಸಂಚಯ ಮತ್ತು ವರ್ಗೀಕರಣದಲ್ಲಿ, ನಾಗರಿಕ-ಅನೇಕ ನಿಯಮಾನ್ವಿತ ಸುಸಂಘಟಿತ ಆಟಗಳಲ್ಲಿ ಸ್ಪರ್ಧೆಗಳಲ್ಲಿ.

ಈ ದೃಷ್ಟಿಯಿಂದ ಮನುಷ್ಯರ ಮಕ್ಕಳ ಆಟಗಳು ಹೆಚ್ಚು ವಿಶಾಲವಾದವೂ ವಿಭಿನ್ನ ಕೌಶಲ್ಯವುಳ್ಳವೂ ಇರುತ್ತವೆ.

ಇಂಥ ಜೀವನ ಸಿದ್ಧತೆಯು ಮನುಷ್ಯನಿಗೆ ವಿಶಿಷ್ಟವಾದ ಆಟ ಪ್ರವೃತ್ತಿ (Play Instinct) ಇದರಿಂದ ಸಾಧಿಸುತ್ತದೆಂದು ತಜ್ಞರ ಅಭಿಪ್ರಾಯವಿರುತ್ತದೆ.

ಆಟಗಳ ರೂಪಗಳು ಈ ಮುಂದಿನಂತಿರುತ್ತವೆ. ಚಲನಾತ್ಮಕ, ಪರಿಶೋಧನಾತ್ಮಕ, ರೂಢಿಸುವ, ವಸ್ತು ಬಳಕೆ, ಅನುಕರಣೆ, ಕಾಲ್ಪನಿಕ ನಟನೆ, ಸಾಮೂಹಿಕ, ತಾಳಗತಿ, ಸ್ಫೋಟಕ, ಸ್ಪರ್ಧಾತ್ಮಕ.

ಆಟ ಪ್ರವೃತ್ತಿಗಳು (Play Instincts):

ಕೆಳತರಗತಿಯ ಕ್ರಿಮಿಕೀಟಗಳು ತಮ್ಮ ಜೀವನವನ್ನು ಪ್ರತಿಕ್ಷಿಪ್ತ ಕ್ರಿಯೆಗಳ (Reflexes) ಮೂಲಕ ನಡೆಸುತ್ತವೆ. ಆದರೆ ಮೇಲ್ತರಗತಿಯ ಪ್ರಾಣಿಗಳ ಜೀವಾವಧಿಯು ಹೆಚ್ಚು ದೀರ್ಘವಾಗಿರುವದರಿಂದ. ಜೀವನಾವಶ್ಯಕ ಕ್ರಿಯೆಗಳು ನಡೆಯಲು ಕೆಲವು ಮೂಲ ಪ್ರವೃತ್ತಿಗಳು (Instncts) ರೂಢಿಯಾಗಿಬಿಟ್ಟಿವೆ. ಇವಕ್ಕೆ ಕೆಲವರು ಹಸಿವೆಗಳು (Hungers) ಎನ್ನುತ್ತಾರೆ. ಹವೆ, ನೀರು, ಆಹಾರ, ನಿದ್ರೆ, ಭಯ, ಲೈಂಗಿಕ ಕ್ರಿಯೆಗಳೇ ಆ ಹಸಿವೆಗಳು. ಇವು ನಡೆಯಲೇಬೇಕು. ವಸ್ತುಗಳ ಅಭಾವವುಂಟಾದಾಗ. ಜೀವಿಗಳಿಗೆ ವೇದನೆಯುಂಟಾಗುತ್ತದೆ. ಮತ್ತು ಅದನ್ನು ತಪ್ಪಿಸಲು ಜೀವಿಗಳು ಕಾರ್ಯೋನ್ಮುಖವಾಗುತ್ತವೆ. ಆದ್ದರಿಂದ ಕಾರ್ಯಕ್ಕೆ ಇವೂ ಒಂದುತರದ ಚೋದ್ಯಗಳೇ ಆಗಿವೆ. ಇವುಗಳನ್ನು ನೆರವೇರಿಸದಿದ್ದರೆ ಜೀವಿಸಲು ಅಸಾಧ್ಯವಾಗುತ್ತದೆ. "Succeed or Starve" ಎಂಬ ಒತ್ತಡವೇ ನಮಗೆ ಬಹಳವಾಗಿರುತ್ತದೆ.

ಈ ಹಸಿವೆಗಳು ಮನುಷ್ಯರಲ್ಲಿಯೂ ಇರುತ್ತವೆ. ಇವಲ್ಲದೇ ತನ್ನ ಗುಣ ವಿಶೇಷದ ಪ್ರಕಾರ, ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಮತ್ತು ಪ್ರಕಟ ಮಾಡಲು ಇನ್ನೂ ಬೇರೆ ಮೂಲ ಪ್ರವೃತ್ತಿಗಳು ಕಾಣುವುದಾಗಿ ತಜ್ಞರು ಅಭಿಪ್ರಾಯ ಪಡುತ್ತಾರೆ. ಇವಕ್ಕೆ ಆಟ ಪ್ರವೃತ್ತಿ (Play Instincts) ಎನ್ನುತ್ತಾರೆ. ಸೃಜನಾತ್ಮಕ ಬುದ್ಧಿ. ತಾಳ, ಬೇಟೆ, ಹೋರಾಟ. ವಾತ್ಸಲ್ಯ. ಕುತೂಹಲ ಸಾಂಘಿಕತೆ, ಸಂಚಯ ಬುದ್ಧಿ, ಅಲಂಕಾರ. ಇವೇ ಆ ಪ್ರವೃತ್ತಿಗಳು. ಈ ಆಟ ಪ್ರವೃತ್ತಿಗಳಿಗೆ 'Achieving Instincts' ಅಥವಾ 'Out- putting Instincts' ಎಂದೂ ಕರೆಯುತ್ತಾರೆ. ಇವುಗಳಿಂದ ದೈಹಿಕ ತೃಪ್ತಿಯಲ್ಲದೇ ಉದ್ದೇಶ ಸಾಧನೆ ಮತ್ತು ಅದರ ಮೂಲಕ ಸಾರ್ಥಕ್ಯತೆಯೂ ಕಾಣ ಬರುತ್ತದೆ.

ಆಟ ಪ್ರವೃತ್ತಿಗಳಿಂದ ಕ್ರಿಯಾ ತೃಪ್ತಿ ಮತ್ತು ಕ್ರಿಯಾ ಸೌಂದರ್ಯ ಸಂತೋಷವೂ ಉಂಟಾಗುತ್ತದೆ.

ಶಾರೀರಿಕ ಹಸಿವುಗಳು, ಪಶುತ್ವ ಮಟ್ಟದವು: ಆಟ ಪ್ರವೃತ್ತಿಗಳು ದೈವತ್ವ ಮಟ್ಟದವು. ಯಾಕೆಂದರೆ ಇವು ಸಾಧನಾತ್ಮಕವಿರುತ್ತವೆ. ಸಾಧನೆಯ ಅರಿವು ಇದ್ದಾಗಲೇ ಮನುಷ್ಯನು ಬರೀ ಜೀವದಿಂದಿರದೇ ಜೀವನವನ್ನು ಪಡೆಯುತ್ತಾನೆ. ವಿಶ್ವದೊಡನೆ ಬೆರೆತು ಒಂದಾಗುತ್ತಾನೆ.

ಆಟ ಪ್ರವೃತ್ತಿಗಳು ಮನುಷ್ಯನಿಗೆ ವಿಶಿಷ್ಟವಾದವು ನಡಿಗೆ. ಓಟ, ಜಿಗಿತ, ವಸ್ತುಗಳನ್ನು ಹಿಡಿಯುವದು, ಒಗೆಸುವದು. ಎಸೆಯುವದು, ಹೋರಾಡುವದು. ರಚಿಸುವದು, ಕಟ್ಟುವದು, ಮೊದಲಾದ ಕ್ರಿಯೆಗಳಲ್ಲಿ ಪ್ರಕಟವಾಗುತ್ತವೆ. ಈ ಕ್ರಿಯೆಗಳ ಕಡೆಗೆ

ಲಕ್ಷ್ಯ ಹೋಗುವದು ಮಾಡಲು ಹಾತೊರೆಯುವದು ಇವೆಲ್ಲಾ ಬೇರೆ ಬೇರೆ ವಯಸ್ಸಿಗೆ ಪ್ರಕಟವಾಗುತ್ತವೆ. ಆಯಾ ವಯಸ್ಸಿನಲ್ಲಿ ಈ ಕೌಶಲ್ಯಗಳು ರೂಢಿಯಾಗದಿದ್ದರೆ ಮುಂದೆ ಬಹಳ ನಿಧಾನವಾಗುತ್ತದೆ. ಈ ಕ್ರಿಯೆಗಳು ಪ್ರಕಟವಾಗಲು ಅನುಕೂಲತೆ ಇಲ್ಲದಿದ್ದರೆ ಮುಂದೆ ಬರೀ ಇಚ್ಛೆ, ಅತೃಪ್ತ ವಾಸನೆಗಳಾಗಿ ಉಳಿದು ಜೀವನದಲ್ಲಿ ಅತೃಪ್ತಿಯು ತೋರಬಹುದಾಗಿದೆ.

ಆಟದ ಬಗ್ಗೆ ಇರುವ ವಿಚಾರಗಳು, ವಾದಗಳು :

ಮಕ್ಕಳಿಗೆ ಲೆಕ್ಕ ಕಲಿಸುವಾಗ ಸೇಬಿನ ಹಣ್ಣನ್ನು ಉಪಯೋಗಿಸಿ ಆಟದಂತೆ ಕಲಿಸಿರಿ ಎಂದು ಪ್ಲೇಟೋರವರು ಹೇಳಿದರೆ, ಅರಿಸ್ಟಾಟಲ್‌ರು ಮಕ್ಕಳಿಗೆ ಆಟಿಗೆ ಕೊಟ್ಟು ಜಗತ್ತಿನ ಜ್ಞಾನ ಮಾಡಿಕೊಡಿರೆಂದು ಅಭಿಪ್ರಾಯಪಟ್ಟಿದ್ದರು.

೧೭ ನೇ ಶತಮಾನದಲ್ಲಿ ಕೊಮೀನಿಯಸ್‌ರಿಂದ ೧೮ ನೇ ಶತಕದಲ್ಲಿ ರೂಸೋ, ಪೆಸ್ಟಾಲಾಜಿ. ಮತ್ತು ಫ್ರೋಬೆರಂತಹವರು ಮಕ್ಕಳ ಆಟ ಮತ್ತು ಶಿಕ್ಷಣ ಇವನ್ನೂ ಕೂಡಿಯೇ ವಿಚಾರ ಮಾಡಿದರು. ಶೆಲಿಂಗ್ ಎನ್ನುವವರು ನಾನಾತರದ ಆಟಗಳೇ ಮಕ್ಕಳ ಶಿಕ್ಷಣವೆಂದು ನೇರವಾಗಿ ಪ್ರತಿಪಾದಿಸಿದರು. ವಿವಿಧ ಆಕಾರ, ಗಾತ್ರ, ಬಣ್ಣಗಳುಳ್ಳ ವಸ್ತು ಮತ್ತು ಉಪಕರಣ ಹಾಗೂ ಆಟಿಗೆಗಳಿಂದ ಅನೇಕ ಪ್ರಕಾರದ ಜ್ಞಾನ ಕೊಡಲು ಶ್ರೀಮತಿ ಮೊಂಟೇಸೋರಿಯವರು ಪ್ರಯತ್ನಿಸಿದ್ದಾರೆ.

ಪ್ರಾಣವಿಕಾಸ ವಾದದ ನಂತರ ಆಟದ ಬಗ್ಗೆ ಅನೇಕ ವಿಚಾರ ವಾದಗಳು ಪ್ರಕಟವಾಗಿವೆ. ಇಲ್ಲಿ ವಿವಿಧ ಶಾಸ್ತ್ರಗಳ ಪ್ರಕಾರ ಅವುಗಳ ಹೆಸರು ಮಾತ್ರ ಕೊಟ್ಟಿದೆ:

I ಜೀವಶಾಸ್ತ್ರ ಆಧಾರಿತ

ಅ) ಆಟಗಳು ಅಧಿಕ ಉತ್ಸಾಹವನ್ನು ಹೊರಗೆ ಹಾಕುವ ಸಾಧನ

ಬ) ಆಟವು ಮನೋಲ್ಹಾಸದ ರೀತಿ

ಕ) ಆಟವು ವಿಕಾಸ ಕ್ರಮದ ಪುನರುಚ್ಚಾರ

ಡ) ಆಟವು ಮೂಲ ಪ್ರವೃತ್ತಿಗಳ ಅಭ್ಯಾಸ

II ವರ್ತನವಾದೀ ವಿಚಾರಗಳು

೧) ಆಟವು ಅನುಕರಣ ರೀತಿಯ ಕಲಿಕೆ

೨) ಆಟವು ಪರಿಶೋಧನೆಯ ಕ್ರಮ

೩) ಆಟವು ಕ್ರಿಯಾ ಯೋಗ್ಯತೆಯ ಸಾಧನೆ

III ಮನೋವಿಶ್ಲೇಷಣ ಶಾಸ್ತ್ರದ ವಾದಗಳು

ಅ) ಆಟವು ಮಾನಸಿಕ ಬಿಗುವನ್ನು ಸಡಿಲು ಗೊಳಿಸುವದು.

ಬ) ಆಟವು ಅಹಂ ಪ್ರಭುತ್ವದ ರೀತಿ. (Egomastery)

IV ವಿಚಾರವಾದೀ ಸಿದ್ಧಾಂತಗಳು

೧) ಆಟವು ಪಾತ್ರ ನಿರ್ವಹಣೆಯ ಕ್ರಮ

೨) ಆಟವು ಅನುಭವಗಳನ್ನು ಅರಗಿಸಿಕೊಂಡು ಸನ್ನಿವೇಶಕ್ಕೆ ಹೊಂದಿಕೊಳ್ಳುವ ರೂಢಿ.

ಆಟ ಪ್ರವೃತ್ತಿಗನುಗುಣವಾಗಿ ವಯೋಮಾನಗಳು

1 **ಶೈಶವಾವಧಿ:** (ಹುಟ್ಟಿನಿಂದ ಮೂರು ವರುಷಗಳ ವರೆಗೆ)

ಮಗುವಿನ ಮೊದಲ ನೋಟ, ನಗು ಇವನ್ನು ನೋಡಿದ ತಾಯಿಗೆ ಅದೆಂತಹ ಸಂತೋಷ. ತನ್ನನ್ನು ಅರ್ಥ ಮಾಡಿಕೊಳ್ಳುವ ಪಾತ್ರೆ ಇವಳೇ ಎಂದು ನಿಸರ್ಗ ಸಹಜತೆಯಿಂದ ಮಗು ಕಂಡು ಹಿಡಿಯುವದೇ ಒಂದು ಚಮತ್ಕಾರ. ತಾಯಿಯ ಎದೆ ಆಹಾರಕ್ಕಾದರೆ ಕಣ್ಣಿನ ನೋಟ ಅನುಕಂಪಕ್ಕೆ. ಅದರ ಮೂಲಕ ಎರಡೂ ಹೃದಯಗಳು ಪರಸ್ಪರ ಅರಿತುಕೊಳ್ಳುತ್ತವೆ.

ತಾಯಿ ಬರೀ ದೈಹಿಕ ಒಡನಾಡಿಯಷ್ಟೇ ಅಲ್ಲ, ಆಧ್ಯಾತ್ಮಿಕ ಪ್ರತಿಮುಖಿ ಕೂಡ. ಅವಳೇ ಆಟಕ್ಕೆ ಪ್ರಥಮ ಸಂಗಾತಿ. ಇದೇ ತಾಯಾಟ (Mother Play). ತಾಯಿ ಮಗು ಇಬ್ಬರೂ ಒಬ್ಬರೊಬ್ಬರ ಹತ್ತಿರ ಬಂದಾಗ, ಬಿಟ್ಟು ಹೋಗುವಾಗ, ಹಟ ಮಾಡಿ ಪರಸ್ಪರ ಸಂತೈಸಿದಾಗ, ಸಿಟ್ಟಾಗಿ ಅಕ್ಕಸತನ ತೋರಿದಾಗ, ಅದನ್ನು ಮರೆತು ಮಮತೆಯ ಮಾತು ಆಡಿದಾಗ, ನಡೆಯುವದೇ ತಾಯಾಟ.

ನಂತರ ಬರುವದು ತಂದೆಯೊಡನಾಟ. ತಂದೆ ಬಿಗಿದಪ್ಪಿದಾಗ ಖುಶಿಯಿಂದ ತೂಗಿದಾಗ ಬರುವ ಆತ್ಮವಿಶ್ವಾಸ, ತಂದೆಯ ರಕ್ಷಕ ಶಕ್ತಿ, ಧೈರ್ಯದ ಧನಿ, ಇವೆಲ್ಲ ಮಕ್ಕಳಿಗೆ ಒಳ್ಳೇ ಆಟ.

ಮಾತು ಬರುವ ಮೊದಲು, ಮಗು ಎಲ್ಲವನ್ನೂ ನಿರೀಕ್ಷಿಸಿಕೊಳ್ಳುತ್ತದೆ, ಬೋರಲಾಗುತ್ತದೆ. ಹೊಟ್ಟೆ ಹೊಸೆಯುತ್ತದೆ, ಅಂಬೆಗಾಲಿಕ್ಕುತ್ತದೆ, ನಿಲ್ಲುತ್ತದೆ, ನಡೆಯುತ್ತದೆ, ವಸ್ತುಗಳನ್ನು ಹಿಡಿಯುತ್ತದೆ, ಬೀಸುತ್ತದೆ, ಚಚ್ಚುತ್ತದೆ. ಹೀಗೆ ತನ್ನ ಸ್ವಂತದ ಮತ್ತು ಪರಿಸರದ ಪರಿಶೋಧನೆ ನಡೆಯುತ್ತದೆ.

ಮೂರನೇ ವರುಷದ ಹೊತ್ತಿಗೆ ಎಲ್ಲ ಬಣ್ಣಗಳೂ, ಶಬ್ದಗಳೂ ಮನಸ್ಸಿನಲ್ಲಿ ಮೂಡುತ್ತವೆ. ನಂತರ ಒಂದೊಂದೇ ಶಬ್ದ ಜೋಡಣೆ, ಮಾತಿಗೆ ಆರಂಭಿಸುತ್ತದೆ. ನೀರಲ್ಲಿ, ಕೆಸರಲ್ಲಿ ಆಡುವದು, ಉಸುಕು ಕೆದಕುವದು, ಉಪಕರಣಗಳನ್ನು ಅನುಕರಣೆಯಿಂದ ಬಳಸುವದು ನಡೆಯುತ್ತದೆ.

II ನಟನೆಯ ಅವಧಿ (Dramatic Age) :

ಮೂರರಿಂದ ಆರರವರೆಗೆ ಈ ವಯಸ್ಸಿನಲ್ಲಿ ಕಾಲ್ಪನಿಕತೆಯು ಪ್ರಾರಂಭವಾಗುತ್ತದೆ. ಈ ಕಾಲ್ಪನಿಕ ಸಂಬಂಧದಿಂದ (make-believe) ತಾವೇ ಅನೇಕ ಪ್ರಾಣಿಗಳಾಗಿ, ಯಂತ್ರಗಳಾಗಿ, ವ್ಯಕ್ತಿಗಳಾಗಿ ನಟಿಸುತ್ತಾರೆ. ಈ ನಟನಾ ಪ್ರವೃತ್ತಿಯು ಜಗತ್ತನ್ನು ಪರಿಪೂರ್ಣವಾಗಿ ಅರಿಯುವದಕ್ಕೆ ಇರುತ್ತದೆ. ತಾನೇ ಆಯಾ ಯಂತ್ರ, ಪ್ರಾಣಿ, ವ್ಯಕ್ತಿಯಾಗಿ ನಟಿಸುವದು. ಬರೀ ಅನುಕರಣೆಯಲ್ಲ. ಅವುಗಳ ಅಂತರಿಕ ಸಂಶೋಧನೆ. ಇದು ನಟನೆಯಲ್ಲಿ ಕಾಣಬರುವ ತನ್ಮಯತೆಯಿಂದ ಕಾಣಬರುತ್ತದೆ. ಮಕ್ಕಳಿಗೆ ವಸ್ತು, ವ್ಯಕ್ತಿಗಳ ಬಾಹ್ಯ ರೂಪಕ್ಕಿಂತಲೂ, ಅವುಗಳ ನೈಜ ಸ್ವರೂಪ ಮುಖ್ಯ. ಆದ್ದರಿಂದ ಒಂದು ಮರದ ತುಂಡು ಪ್ರಾಣಿಯೂ ಆಗಬಹುದು. ಯಂತ್ರವೂ ಆಗಬಹುದು, ಕೋಲು ಕುದುರೆಯೂ ಆಗಬಹುದು.

"ತತ್ತಿಯು, ಕೋಳಿಗೆ ಅದರಮೇಲೆ ಕೂರುವುದಕ್ಕಲ್ಲ. ಅದರೊಳಗಿನ ಮರಿಯನ್ನು ಹೊರ ತಂದು ಪೋಷಿಸುವುದಕ್ಕೆ". ನಟನೆಯು ಕುತೂಹಲ ಪ್ರವೃತ್ತಿಯ ಸಾಧನ, ನಾಟಕದ ಪಾತ್ರಗಳ ಶಬ್ದ ಅಭಿನಯಕ್ಕಿಂತ ಅವರ ಅನ್ನಿಸಿಕೆ ತಿಳಿಯುವದು ಮುಖ್ಯ. ಆದ್ದರಿಂದ ಅಂಬಾ ಎಂದರೆ ಆಕಳು, ಮೆವ್ ಎಂದರೆ ಬೆಕ್ಕು, ಪ್ರತಿಯೊಂದಕ್ಕೂ ತನ್ನದೇ ಆದ ಸಂಕೇತ. ಈ ಅವಧಿಯಲ್ಲಿ ಇಡೀ ಜಗತ್ತೇ ಅವನ ರಂಗಸ್ಥಳ, ತಾನೇ ಅದರೊಳಗಿನ ಎಲ್ಲಾ ಪಾತ್ರ.

ನಟನಾ ಪ್ರವೃತ್ತಿಯಲ್ಲಿ ತಾಳವೂ ಇದೆ. ಜೀವಿಯಲ್ಲಿಯೇ ಇರುವ ತಾಳ ಪ್ರವೃತ್ತಿಯಲ್ಲಿ (Bio-Rythm) ಜೀವನದಲ್ಲಿ ಹೊರಗೆ ಪ್ರಕಟವಾಗುತ್ತದೆ. ತಾಳಕ್ಕೆ ತಕ್ಕಂತೆ ಓಡುವದು, ಕುಂಟುವದು ಜಿಗಿಯುವದು, ತಾಳ ಹಾಕುವದು ಗುನು ಗುನು ಹಾಡುವದು ಇವೆಲ್ಲ ನಟನೆಯೊಂದಿಗೇ ಬರುತ್ತವೆ.

III ಅಹಂಭಾವದ ಅವಧಿ

ಆರರಿಂದ ಹನ್ನೊಂದರವರೆಗೆ ಕಾಲ್ಪನಿಕ ಸಾಮ್ರಾಜ್ಯ ಕರಗುತ್ತ ನೈಜ ಸ್ಥಿತಿಯೆಡೆಗೆ ಮನಸ್ಸು ಹೋಗಿ ಅದರಲ್ಲಿ ತಾನು ಎನ್ನುವದು ಕ್ರಮಶಃ ಹೆಚ್ಚಾಗತೊಡಗುತ್ತದೆ. ಪ್ರತಿಯೊಂದನ್ನು ತಾನು ಮಾಡಬೇಕು, ಅನುಭವಿಸಬೇಕು, ಎಲ್ಲಾದರಲ್ಲೂ ತನ್ನತನವಿರಬೇಕು. ಜೊತೆಗೆ ತುಂಟತನವೂ ಬರುತ್ತದೆ. ಇನ್ನೊಬ್ಬರಿಗೆ ಕೀಟಲೆ ಮಾಡುವದು, ಅವರ ಆಟ ಕೆಡಿಸುವದು. ಅಣಕುವದು. ಎಲ್ಲದರಲ್ಲೂ ತಾನು ಎಂಬ ಅಹಂಭಾವ ಒಡೆದು ಕಾಣುತ್ತದೆ. ಹುಲ್ಲು ಹಾಸಿಗೆಯ ಮೇಲೆ ಬಿದ್ದು ಹೊರಳಾಡುವದು, ಹುಲ್ಲು ಕೆಚ್ಚುವದು, ಮರ ಏರುವದು, ಕಾಯಿ ಹೂವು ಕೆಚ್ಚಿ ತಿನ್ನುವದು, ಜೇನಿಗೆ, ಹಕ್ಕಿಗೆ ಕಲ್ಲು ಒಗೆಯುವದು, ನೀರಲ್ಲಿ ಜಿಗಿದಾಡುವದು ಎಲ್ಲದರಲ್ಲೂ ಸಾಹಸ ಪ್ರಯತ್ನವಿದೆ, ಇವೆಲ್ಲ ಬೆಳವಣಿಗೆಗೆ ಪೂರಕವೆ.

ಸೈಜತೆಯು ಪ್ರೀತಿಯು ಈ ವಯಸ್ಸಿನ ಮಕ್ಕಳಿಗೆ ಎಲ್ಲೆಲ್ಲೂ ಹೋಗಲು ಪ್ರೇರಿಸುತ್ತದೆ. ಇದು ಬಾಹ್ಯ ಪ್ರಪಂಚದ ಪರಿಶೋಧನೆಯ ಪ್ರವೃತ್ತಿ. Odysseus ನ ಹಾಗೆ ಜಗತ್ತೆಲ್ಲಾ ಸುತ್ತಬೇಕು, ಅನುಭವ ಪಡೆಯಬೇಕು. ಜ್ಞಾನ ಸಂಪಾದಿಸಬೇಕು. ನಾನು ಕಂಡದ್ದು ನಿಜ, ಆದ್ದರಿಂದ ನಾನು ಹೇಳುವದೂ ನಿಜ. ನಾನೂ ಓಡುತ್ತೇನೆ, ಜಿಗಿಯುತ್ತೇನೆ, ಓದುತ್ತೇನೆ, ಕೆಲಸಮಾಡುತ್ತೇನೆ, ನಾನು ಮುಖ್ಯ. ನಾಯಾರಿಗೂ ಕಡಿಮೆಯಲ್ಲ, ಇದು ಖಚಿತ.

ಇನ್ನೊಬ್ಬರೊಡನೆ ಪ್ರಸಂಗಬಿದ್ದರೆ ಜಗಳ ಕಾಯಬೇಕು, ಹೋರಾಡಬೇಕು, ಗೆಲ್ಲಬೇಕು, ಈ ಮನೋವೃತ್ತಿಯೂ ಬೆಳೆಯುತ್ತದೆ; ಹೋರಾಟದಿಂದಲೇ ಜೀವನ. ರೋಗದ ವಿರುದ್ಧವೋ, ದೌರ್ಬಲ್ಯದ ವಿರುದ್ಧವೊ, ಬಡತನ, ಅಜ್ಞಾನಗಳ ವಿರುದ್ಧವೋ ಇರಬೇಕಾದರೆ ಹೋರಾಡಬೇಕು. ಅದರಲ್ಲೂ ತನ್ನತನ ತೋರಿಸಬೇಕು, ಸೋಲು ಮುಖ್ಯವಲ್ಲ "ನಾನೂ ಬಿಡ್ತಿನೇನು" ಮುಖ್ಯ.

IV ನಿಷ್ಠೆಯ ಅವಧಿ

೧೧ರ ಮುಂದೆ : ತಾಯಿಯೊಡನಿರುವ ಸಹವಾಸದಿಂದಲೇ ಮಗುವಿಗೆ ಪ್ರಾರಂಭವಾಗುವ ಸಾಮೂಹಿಕತೆಯು ಮುಂದೆ ಸುತ್ತಲಿನ ಪರಿಸರದಲ್ಲಿ. ಮನೆಯಲ್ಲಿ ನಟನಾಗಿ ಬೆಳೆದು, ತನ್ನತನವನ್ನು ಕಾಪಾಡಿಕೊಂಡು ಅದನ್ನು ಬೆಳೆಸಲು ಅಹಂಭಾವಿಯಾಗಿ ಮುಂದೆ ಅದನ್ನು ಉಳಿಸಿಕೊಂಡು, ಒಂದು ಸಮಾಜದ ಉಪಯುಕ್ತ ಹಾಗೂ ಪ್ರತಿಷ್ಠೆಯ ಸದಸ್ಯನಾಗಿ ಉಳಿಯಲು ಪ್ರಯತ್ನಿಸುವದೇ ನಿಷ್ಠೆಯ ಅವಧಿಯಾಗಿದೆ. ಆಡಲಿ ಸಿನೀಮಾ ನೋಡಲಿ. ಊಟಮಾಡಲೀ, ಹರಟೆ ಹೊಡೆಯಲಿ ಎಲ್ಲವನ್ನೂ ತನ್ನ ವಯಸ್ಸಿನ ಸ್ನೇಹಿತರೊಡನೆ ಮಾಡಬೇಕು. ಅವರನ್ನು ಬಿಟ್ಟು ಒಂದು ನಿಮಿಷಕೂಡ ಇರಲಾಗುವದಿಲ್ಲ.

ಯಾವುದನ್ನೂ ಉದ್ವೇಗದಿಂದ ವಿಚಾರಿಸುವದು, ಆವೇಶದಿಂದ ಮಾಡುವದು, ಕ್ರಿಯೆಯಲ್ಲಿ ಒರಟುತನವಿದ್ದರೂ ಗುಂಪಿನ ಆದರ್ಶವಿರುತ್ತದೆ. ಮಗುವಿನ ರೀತಿಯೇ ಬದಲಾಯಿಸಿ ಒಂದು ಗುಂಪಿನ ಸದಸ್ಯ ಎಂಬ ಪ್ರಜ್ಞೆಯು ಬರುತ್ತದೆ.

ವೈಯಕ್ತಿಕ ಬೆಳವಣಿಗೆ ಮತ್ತು ಸಾಮೂಹಿಕ ನಿಷ್ಠೆ ಇವೆರಡೂ ಕೂಡಿ ನಡೆಯುವದಿಲ್ಲವೇನೋ ಎಂಬಂತೆ ಹೊರ ನೋಟಕ್ಕೆ ಕಾಣುತ್ತದೆ. ಆದರೆ ಅದು ಹಾಗಾಗದೇ ವ್ಯಕ್ತಿಯ ಪರಿಪೂರ್ಣತೆಗೆ ಸಮಾಜವು ಎಷ್ಟು ಪ್ರೋತ್ಸಾಹಿಸಬೇಕೋ ಅಷ್ಟೇ ವ್ಯಕ್ತಿಯು ತನ್ನ ಸಮಾಜದ ಕಲ್ಯಾಣಕ್ಕೂ ಅಷ್ಟೇ ಅಭಿಮಾನದಿಂದ, ನಿಷ್ಠೆಯಿಂದ ನಡೆಯಬೇಕೆಂಬ ಲವಲವಿಕೆ ಬೇಕು. ವೈಯಕ್ತಿಕತೆಯು ಸಿಡಿದು ಹೋಗುವ ಮಾರ್ಗ ಸಾಮೂಹಿಕತೆಯು ಒಂದುಗೂಡುವ ಮಾರ್ಗ.

ನಿಯಮಾನ್ವಿತ ಸುಸಂಘಟಿತ ಆಟಗಳು (Games) ವೈಯಕ್ತಿಕತೆ ಮತ್ತು ಸಾಮೂಹಿಕತೆಗಳ ಸಮನ್ವಯವನ್ನು ಸಾಧಿಸುವ ಸಾಧನಗಳಾಗಿವೆ. ಸ್ಪರ್ಧೆಗಾರ ಕೇವಲ ಸ್ಪರ್ಧೆಗಾರನಷ್ಟೇ ಅಲ್ಲ. ಅದರ ನಿರ್ಣಾಯಕನೂ ಕೂಡ. ಸ್ಪರ್ಧೆಯು ಕಣ್ಣಿಗೆ ಕಾಣುವಂತೆ ನಡೆದಾಗ ಅದರ ಪರಿಣಾಮ ತನ್ನಿಂದ ತಾನಾಗಿಯೇ ತಿಳಿಯುತ್ತದೆ. ಅದು ಏನಿದ್ದರೂ ಅದನ್ನು ನಗನಗುತ್ತ ಸ್ವೀಕರಿಸಬೇಕು, ಹಾಗಾದರೆ ಅದು ಸಮನ್ವಯ. ಅದಲ್ಲದೇ ಸಿಡಿದೆದ್ದರೆ ಅದು ಪ್ರತ್ಯೇಕತೆ. ವೈಯಕ್ತಿಕತೆಯು ನಮ್ಮ ಪರಿಪೂರ್ಣತೆಗೆ ಎಷ್ಟು ಅವಶ್ಯವೋ, ಅಷ್ಟೇ ಸಾಮೂಹಿಕತೆಯೂ ಮಾನವನ ಪರಿಪೂರ್ಣತೆಗೆ ಅವಶ್ಯವಾಗಿದೆ.

ಮಕ್ಕಳ ಸಾಮಾಜಿಕ ಕೂಟಗಳು

● ಜಿ. ಎಸ್. ಬಿದರಕೊಪ್ಪ

ಸಮಾಜವನ್ನು ಸ್ಥೂಲವಾಗಿ ವ್ಯವಸ್ಥಿತ ಸಮಾಜ ಮತ್ತು ಅವ್ಯವಸ್ಥಿತ ಸಮಾಜ ಎಂದು ಎರಡು ಬಗೆಯಲ್ಲಿ ವಿಂಗಡಿಸಬಹುದು. ವ್ಯವಸ್ಥಿತ ಸಮಾಜದಲ್ಲಿ ವ್ಯಕ್ತಿ, ಸಮೂಹ, ಸಮುದಾಯಗಳು, ಸಂಘ–ಸಂಸ್ಥೆಗಳು, ಸಾಮಾಜಿಕ ರೂಢಿ-ಪದ್ಧತಿಗಳು, ಕಾಯ್ದೆ-ಕಟ್ಟಳೆಗಳು ಸಾಮಾಜಿಕ ಮೌಲ್ಯಗಳ ಬಲೆಯಲ್ಲಿ ಸೂತ್ರಬದ್ಧವಾಗಿ ಹೆಣೆದುಕೊಂಡಿರುತ್ತವೆ. ಇವಾವುದೇ ಅಂಗಗಳಲ್ಲಿ ವೈಪರೀತ್ಯ ಉಂಟಾದಾಗ ಅವ್ಯವಸ್ಥಿತ ಸಮಾಜ ನಿರ್ಮಾಣವಾಗುತ್ತದೆ. ಎಲ್ಲ ರಾಷ್ಟ್ರಗಳ ಗುರಿಯು ವ್ಯವಸ್ಥಿತ ಸಮಾಜ ರಚನೆಯೇ ಆಗಿರುವಾಗ ಅಂತಹ ಸಮಾಜದ ಅಂಗ ಘಟಕಗಳ ಸ್ವಾಸ್ಥ್ಯ, ಬೆಳವಣಿಗೆಯ ಕಡೆಗೆ ಗಮನವೀಯಬೇಕಾದುದು ಸ್ವಾಭಾವಿಕವಷ್ಟೇ ಅಲ್ಲದೆ ಅವಶ್ಯಕವೂ ಆಗಿದೆ. ವ್ಯವಸ್ಥಿತ ಇಲ್ಲವೆ ಸಂಘಟಿತ ಸಾಮಾಜಿಕ ಕೂಟಗಳ ಮಹತ್ವವನ್ನು ಇಲ್ಲಿ ಬೇರೆ ಬಿತ್ತಿಹೇಳಬೇಕಾದ ಅವಶ್ಯಕತೆ ಇಲ್ಲ.

ಮಕ್ಕಳ ಸಾಮಾಜಿಕ ಕೂಟ*ಗಳು (ಸಮೂಹಗಳು) ಸಮಾಜದ ಒಂದು ಅವಿಭಾಜ್ಯ ಅಂಗ. ಈ ಕೂಟಗಳ ಮಹತ್ವ, ನಮೂನೆ, ನಿರ್ಮಾಣ, ಮಕ್ಕಳ ಬೆಳವಣಿಗೆಯಲ್ಲಿ ಅವುಗಳ ಪಾತ್ರ. ಅಂತಹ ಕೂಟಗಳಿಗೆ ನಿರ್ದೇಶನ, ಮಾರ್ಗದರ್ಶನ ನೀಡುವವರ ಅವಶ್ಯಕತೆ. ಧುರೀಣತ್ವದ ಬೆಳವಣಿಗೆ ಇತ್ಯಾದಿ ವಿಷಯಗಳನ್ನು ಸಾಮಾಜಿಕ ಬೆಳವಣಿಗೆಯ ಚೌಕಟ್ಟಿನಲ್ಲಿ (Model) ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

ವ್ಯಕ್ತಿತ್ವ ಬೆಳವಣಿಗೆಯಲ್ಲಿ ಸಮೂಹಗಳ ಮಹತ್ವ :

ವ್ಯಕ್ತಿಯು ತನ್ನ ವ್ಯಕ್ತಿತ್ವದ ಪ್ರಜ್ಞೆಯನ್ನು ತಾನು ಇನ್ನೊಬ್ಬರಿಗಿಂತ ಬೇರೆಯಾಗಿರುವದನ್ನು ಇನ್ನೊಬ್ಬರೊಂದಿಗಿರುವ ತನ್ನ ಸಹವಾಸದಿಂದ ಬೆಳೆಸಿಕೊಳ್ಳುತ್ತಾನೆ; ಬೇರೆಯವರಂತೆ ಅನುಕರಿಸುತ್ತಾನೆ. ಬೇರೆಯವರೊಂದಿಗೆ ತನ್ನನ್ನು ಹೋಲಿಸಿಕೊಂಡು

* ಈ ಲೇಖನದಲ್ಲಿ 'ಕೂಟ' ಎಂಬ ಶಬ್ದವನ್ನು 'ಸಮೂಹ', 'ಗುಂಪು' ಎಂಬ ನಿಶ್ಚಿತಾರ್ಥದಲ್ಲಿ ಬಳಸಲಾಗಿದೆ.

ನೋಡುತ್ತಾನೆ ಮತ್ತು ಅವರೊಂದಿಗೆ ಅಂತರವನ್ನು ಕಂಡುಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಸುಖವಾಗಿ ಬಾಳಬೇಕೆಯಾದರೆ ಸಮೂಹ–ಸಂಬಂಧವನ್ನು ಜೀವನದುದ್ದಕ್ಕೂ ಹೊಂದಬೇಕು. ಇದಕ್ಕೆ ಸಮೂಹಾನುಭವದ ಅವಶ್ಯಕತೆ ಆಧಾರಭೂತವಾದದ್ದೂ, ಸಾರ್ವತ್ರಿಕವಾದದ್ದೂ ಆಗಿದೆ. ಪ್ರತಿಯೊಬ್ಬರಿಗೂ ವಿವಿಧ ಸಮೂಹದ ಸಮೂಹಾನುಭವ ಬೇಕು. ಚಿಕ್ಕ, ನಿಕಟವಾದ ಅಂಟುಸ್ವಭಾವದ (Cohesive)ಗೆಳೆಯರ ಗುಂಪುಗಳು ವ್ಯಕ್ತಿಯ ಬೆಳವಣಿಗೆ ಮತ್ತು ವೈಯಕ್ತಿಕ ತೃಪ್ತಿಗೆ ಸುಸಂಧಿಯನ್ನು ಒದಗಿಸಿಕೊಟ್ಟರೆ; ವ್ಯಾಪಕವಾದ,ಕಡಿಮೆ ಹೊಂದಿಕೆ ಸ್ವಭಾವದ ಗುಂಪುಗಳು ವಿವಿಧ ತೆರನಾದ ಅನುಭವಗಳಲ್ಲಿ ವ್ಯಕ್ತಿಯು ಬೆರೆತುಕೊಂಡು ಹೋಗುವಂತಹ ಮಾರ್ಗಗಳನ್ನು ಸೂಚಿಸುತ್ತವೆ. ವ್ಯಕ್ತಿಯು ಸಮೂಹದಲ್ಲಿ ಬೆಳವಣಿಗೆ ಹೊಂದುವನಲ್ಲದೆ ಸಮೂಹಗಳ ಮುಖಾಂತರವೂ ಬೆಳವಣಿಗೆ ಹೊಂದುತ್ತಾನೆ.

ಮಗುವಿನ ಬೆಳವಣಿಗೆ :

ಪ್ರಪ್ರಥಮವಾಗಿ ಪ್ರಾಥಮಿಕ ಸಮೂಹವಾದ ತನ್ನ ಕುಟುಂಬದ ಸದಸ್ಯರೊಂದಿಗೆ ಮಗು*ವಿನ ಸಂಬಂಧ ಬರುವದು. ತಾಯಿ–ತಂದೆಯರಿಂದ ವಾತ್ಸಲ್ಯ, ಸತ್ತೆ, ಸಂರಕ್ಷಣೆ ನಿರ್ದೇಶನ, ಆದರ್ಶಗಳನ್ನು ಕಂಡುಕೊಳ್ಳುವದು ಮುಂತಾದ ಅನುಭವಗಳನ್ನು ಪಡೆಯುತ್ತದೆ. ತಾನು ತಂದೆ ತಾಯಿಯಿಂದ ಪಡೆದುಕೊಂಡು ಬಂದಿರುವಂತಹ ಸಾಮರ್ಥ್ಯ ಮತ್ತು ಅವರು ಅವನನ್ನು ನಡೆಸಿಕೊಳ್ಳುವ ರೀತಿಯಮೇಲೆ ಅವನ ಸ್ವಭಾವ ನಿರ್ಮಾಣವಾಗುತ್ತದೆ. ಕುಟುಂಬದಲ್ಲಿ ಅಣ್ಣ–ತಮ್ಮ ಅಕ್ಕ–ತಂಗಿಯರಿದ್ದರೆ ಮಗುವಿನ ಬೆಳವಣಿಗೆಯ ಮೇಲೆ ಅವರ ಪರಿಣಾಮವು ಕೆಲವೊಂದು ವಿಧದಲ್ಲಿ ತಾಯಿ–ತಂದೆಯರ ಪರಿಣಾಮಕ್ಕಿಂತಲೂ ಹೆಚ್ಚಾಗಿ ಆಗುತ್ತದೆ.

ಮಗುವು ಎರಡನೇ ಹಂತದಲ್ಲಿ ತನ್ನ ೪–೫ನೇ ವಯಸ್ಸಿನಲ್ಲಿ ತಾನೇ ಸ್ವತಂತ್ರವಾಗಿ ಗೆಳೆಯರ ಗುಂಪುಗಳನ್ನು ಆರಿಸಿಕೊಳ್ಳುತ್ತದೆ. ಸಮವಯಸ್ಕರಾದ ಆಟದ ಗೆಳೆಯರ, ಮಗುವಿನ ಬೆಳವಣಿಗೆಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಾರೆ. ಏಕೆಂದರೆ ಅವರು ಅವನಿಗೆ ಸರಿಹೋಲುವಂತಹ ಆಸಕ್ತಿಯನ್ನೇ ಹೊಂದಿರಬಹುದು. ಇಲ್ಲವೇ ಅಂತಹ ಸಮವಯಸ್ಕರಲ್ಲಿರಬಹುದಾದ ಪ್ರತೀಕಾರ ಮನೋಭಾವನೆಯನ್ನೇ ಹೊಂದಿರಬಹುದು. ಮಗುವಿಗೆ ಕುಟುಂಬದಲ್ಲಿಯ ಅಣ್ಣ–ತಮ್ಮ, ಅಕ್ಕ–ತಂಗಿ ಇಲ್ಲವೆ ಆಟದ ಗೆಳೆಯರು, ತಂದೆ–ತಾಯಿಗಳ ಅಧಿಕಾರಕ್ಕೆ, ಸಂಪ್ರದಾಯಗಳಿಗೆ, ಸೂಚನೆಗಳಿಗೆ ಅವರ ಹಾಗೂ ಇತರರ ಆದರ್ಶಗಳಿಗೆ ಯಾವ ಪ್ರತಿಕ್ರಿಯೆಯನ್ನು ತೋರಿಸಬಹುದೆಂಬುದನ್ನು ತಿಳಿಹೇಳಿ

---

*ಮೈಸೂರಿನ (ಕರ್ನಾಟಕ) ಮಕ್ಕಳ ಕಾಯ್ದೆ ೧೯೬೪. ೧೬ ವಯಸ್ಸಿನ ಕೆಳಗಿನ ವಯಸ್ಕರನ್ನು 'ಮಗು' ಎಂದು ಪರಿಗಣಿಸಿದೆ. ಅದೇ ವ್ಯಾಖ್ಯೆಯನ್ನು ಈ ಲೇಖನದಲ್ಲಿ ಅನುಸರಿಸಲಾಗಿದೆ.

ಕೊಡಬಹುದಾಗಿದೆ. ಬೇರೆ ಬೇರೆ ಮಕ್ಕಳೊಂದಿಗೆ ಬರುವ ಸಂಪರ್ಕದಿಂದ ಮಗುವಿನ ಸಮಾಜೀಕರಣವು ವಿವಿಧ ಮುಖದಲ್ಲಿ ಬೆಳೆಯುತ್ತಾಹೋಗುತ್ತದೆ. ಮಗುವು ಇತರ ಮಕ್ಕಳೊಂದಿಗೆ ಆಡುವಷ್ಟು ದೊಡ್ಡವನಾಗಿ ಕುಟುಂಬದ ಗುಂಪಿನಿಂದ ಹೊರಬಂದ ಮೇಲೆ ಇನ್ನೊಂದು ತರಹದ ಪ್ರಭಾವಗಳಿಗೊಳಗಾಗುತ್ತಾನೆ. ಇತರ ಮಕ್ಕಳು ವಿವಿಧ ನಮೂನೆಯ ಹಿನ್ನೆಲೆಯಿಂದ–ವಿವಿಧ ಆದರ್ಶ, ರೀತಿ–ನೀತಿ ಸ್ವಭಾವಗಳಿಂದ ಬಂದಿರುವುದರಿಂದ ಅಂತಹ ಮಕ್ಕಳೊಂದಿಗೆ ಒತ್ತಾಯಪೂರ್ವಕವಾಗಿ ಹೊಂದಿಕೊಳ್ಳಬೇಕಾಗುತ್ತದೆ. ಹೆಚ್ಚು ಹೆಚ್ಚು ಕ್ಲಿಷ್ಟವಾಗಿರುವಂತಹ ಸ್ಥಿತಿಗಳಿಗೆ ಹೊಂದಿಕೊಂಡುಹೋಗುವ ಗುಣವನ್ನು ನಿಧಾನವಾಗಿ ಕಲಿಯಬೇಕಾಗುತ್ತದೆ. ತನ್ನ ಪ್ರಭಾವ ತೋರಿಸುವಂತಹ ಅಥವಾ ಇತರ ಸಮವಯಸ್ಕ ಆಟಗಾರರ ಪ್ರಭಾವಕ್ಕೊಳಗಾಗುವ ಪ್ರಸಂಗ ಬಂದಾಗ ತಾನು ಯಾವ ರೀತಿ ಹೊಂದಿಕೊಂಡು ನಡೆಯಬೇಕೆಂಬುದನ್ನು ಮಗು ಕಲಿತುಕೊಳ್ಳುತ್ತದೆ.

ಮಗುವು ಶಾಲೆಗೆ ಹೋಗುವ ಪ್ರಸಂಗ ಬಂದಾಗ ಒಂದುತೆರನಾದ ಕ್ಲಿಷ್ಟಪರಿಸ್ಥಿತಿ ಉಂಟಾಗುತ್ತದೆ. ತನ್ನ ಮಾತು, ಕೃತಿ, ಆಚಾರ ವಿಚಾರಗಳನ್ನು ವರ್ಗದ ಇತರರೊಂದಿಗೆ ಸರಿಪಡಿಸಿಕೊಂಡುಹೋಗುವದನ್ನು ಕಲಿಯಬೇಕಾಗುತ್ತದೆ. ಶಾಲೆ ಎಂದರೆ ನಾಲ್ಕು ಗೋಡೆಗಳ ಮಧ್ಯದ ನಿಯಂತ್ರಿತ ವಾತಾವರಣ, ಗುರುಗಳೆಂದರೆ 'ಅಧಿಕಾರಿ' ಎಂಬ ಚಿತ್ರಣವನ್ನು ಮಗು ತನ್ನ ಮನಃಪಟಲದ ಮೇಲೆ ಪಡೆಯುವದು. ಅಲ್ಲಿ ಶಿಸ್ತು, ಸಂಯಮ, ನಿಯಮಿತತನ, ವಿಧೇಯತೆ, ಸ್ವಚ್ಛತೆ, ಪ್ರಾರ್ಥನೆ, ಪಾಠ ಕಲಿಯುವದು ಮುಂತಾದ ಪದ್ಧತಿಗಳಿಗೆ ಒಗ್ಗೂಡಿಕೊಂಡು ಹೋಗುವದನ್ನು ಕಲಿಯಬೇಕಾಗುತ್ತದೆ. ಆಟದ ಗುಂಪುಗಳಿಗಿಂತ ಶಾಲೆ ವಿಭಿನ್ನವಾದ ಚಿತ್ರಣವನ್ನು ನೀಡುತ್ತದೆ. ಮಗು ಈ ಸಮೂಹಗಳು ತನಗೆ ನೀಡುವ, ಹಾಕಿಕೊಡುವ ಮೌಲ್ಯಗಳ ಘರ್ಷಣೆಯಲ್ಲಿ ಸಿಲುಕಿಕೊಳ್ಳುವ ಸಂಭವವಿದೆ. ತಿಳಿದ ತಂದೆ–ತಾಯಿಗಳು ಹಾಗೂ ಪಾಲಕರು ಮಗುವನ್ನು ಶಾಲೆಗೆ ಕಳುಹಿಸುವದಕ್ಕೆ ೩-೪ ತಿಂಗಳು ಮುಂಚಿತವಾಗಿಯೇ ನಿಧಾನವಾಗಿ 'ಶಾಲೆ'ಯ ಬಗೆಗೆ ಕಲ್ಪನೆ, ಹೀಗಿಕೆ ಹಾಕಿಕೊಡುವದು ಅವಶ್ಯ.

ಈ ಹಂತದಿಂದ ಮುಂದೆ ಮಗುವಿನ ಬೆಳವಣಿಗೆಯಮೇಲೆ ಬೀರಬಹುದಾದ ಪರಿಣಾಮಗಳಲ್ಲಿ ಸಮಾಜಿಕ ಕೂಟಗಳನ್ನು ವಿಶಾಲವಾಗಿ ಎರಡುಪ್ರಕಾರಗಳಲ್ಲಿ ವಿಂಗಡಿಸಿ ವಿಶ್ಲೇಷಿಸಬಹುದಾಗಿದೆ :

೧. ಸಂಘಟಿತ ಕೂಟಗಳು ಮತ್ತು
೨. ಅಸಂಘಟಿತ ಕೂಟಗಳು

ಸಂಘಟಿತ ಕೂಟಗಳು :

ಸಂಘಟಿತ ಕೂಟಗಳನ್ನು ವಿಶ್ಲೇಷಿಸುವಾಗ ಅಂತಹ ಕೂಟಗಳಲ್ಲಿ ಮಗುವಿಗೆ ಭಾಗವಹಿಸಲು ಅನುಕೂಲ ಮಾಡಿಕೊಡುವಂತಹ ಸಂಘ–ಸಂಸ್ಥೆಗಳ ಉಲ್ಲೇಖಮಾಡುವದು

ಅವಶ್ಯವಾಗಿದೆ. ಉದಾ : ಪ್ರಾಥಮಿಕ-ಪೂರ್ವ ಶಾಲಾಕೇಂದ್ರಗಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇತರ ಸಂಸ್ಥೆಗಳು ಮತ್ತು ಖಾಸಗೀ ಸಂಸ್ಥೆಗಳು. ಸಂಘಟಿತ ಕೂಟಗಳನ್ನು ಈ ಕೆಳಗಿನಂತೆ ವಿಭಜಿಸಬಹುದು.

೧. ಪ್ರಾಥಮಿಕ-ಪೂರ್ವ ಶಾಲಾಕೇಂದ್ರಗಳು
೨. ಶಾಲೆಯಲ್ಲಿ ಮಕ್ಕಳ ಕೂಟಗಳು
೩. ರಾಷ್ಟ್ರೀಯ ದಿನಾಚರಣೆ, ಜಯಂತಿ ಮತ್ತು ಉತ್ಸವಗಳಲ್ಲಿ ಮಕ್ಕಳ ಕೂಟಗಳು
೪. ಬಾಲಭವನ ಮತ್ತು S. O. S. ಗ್ರಾಮಗಳಲ್ಲಿ ಮಕ್ಕಳ ಕೂಟಗಳು ಮತ್ತು
೫. ಬಾಲಕರ ಸೇವಾಸಂಸ್ಥೆಗಳು

೧. ಪ್ರಾಥಮಿಕ-ಪೂರ್ವ ಶಾಲಾ ಕೇಂದ್ರಗಳು:

ಪ್ರಾಥಮಿಕ-ಪೂರ್ವ ಶಾಲಾ ಕೇಂದ್ರಗಳು ಮೊಂಟೆಸ್ಸರಿ, ಕಿಂಡರ್‌ಗಾರ್ಟನ್, ನರ್ಸರಿ, ಬಾಲವಾಡಿ ಮತ್ತು ಅಂಗನವಾಡಿಗಳು ಮನೆ ಹಾಗೂ ಪ್ರಾಥಮಿಕ ಶಾಲಾ ಸಂಸ್ಥೆಗಳ ಮಧ್ಯದ ಅಂತರವನ್ನು ಉಪಯುಕ್ತವಾಗಿ ತುಂಬಿಕೊಡುವಲ್ಲಿ ಸಹಾಯಕವಾಗಿವೆ. ಈ 'ಶಾಲೆ'ಗಳಲ್ಲಿ ಪುಸ್ತಕ-ಪಾಟಿ-ಪೆನ್ಸಿಲುಗಳ ಅವಶ್ಯಕತೆ ಇಲ್ಲ. ಆಟಿಕೆಯ ಸಾಮಾನುಗಳೊಂದಿಗೆ ಸ್ವಾಭಾವಿಕವಾದ ಶಾಲೆಯ ಪರಿಸರದಲ್ಲಿ ಆಟಗಳೊಂದಿಗೆ ಕಥೆ-ಕವನ ಪಾಠಗಳನ್ನು ಕಲಿಸಲಾಗುತ್ತದೆ. ಮಕ್ಕಳಿಗೆ ಪ್ರಾಣಿ, ಗಿಡ, ಬಳ್ಳಿ, ಹೂವುಗಳೊಂದಿಗೆ ಆಡುವುದು ಪ್ರಿಯವಾದುದು. ಮಗುವು ತರತರದ ಬಣ್ಣಗಳನ್ನು ಮತ್ತು ಆಕಾರಗಳನ್ನು ಕೈಮುಟ್ಟಿ ಹಿಡಿದು ಆಡಿ ನೋಡಿ ಕಲಿಯುತ್ತದೆ. ಮೂರರಿಂದ ಆರು ವರ್ಷದ ಒಳಗಿನ ಮಕ್ಕಳಲ್ಲಿ ಗ್ರಹಣ ಶಕ್ತಿಯು ಅಗಾಧವಾಗಿ ಬೆಳೆಯುತ್ತದೆ. ಬೆಳೆಯುವ ಮಕ್ಕಳಲ್ಲಿ ಚಿಕಿತ್ಸಕ ಬುದ್ಧಿ ಸ್ವಾಭಾವಿಕವಾಗಿರುವುದರಿಂದ ವಿಶ್ವವು ಒಂದು ವಿಚಿತ್ರವಾದ ವಸ್ತುವಾಗಿ ಕಾಣಿಸುತ್ತದೆ.

ಕಡ್ಡಾಯದ ಶಿಸ್ತು-ಸಂಯಮವಿಲ್ಲದಿದ್ದರೂ ಶಿಸ್ತಿನ ಪೀಠಿಕೆಯನ್ನು ಈ ಕೇಂದ್ರದಲ್ಲಿ ಹಾಕಲಾಗುತ್ತದೆ. ಸಡಿಲಾಗಿ ಸಂಘಟಿಸಿದ, ಬಿಗುವಿಲ್ಲದ ಅರೆ-ಶಿಸ್ತಿನ ಈ ಶಾಲಾ ಕೇಂದ್ರಗಳು ಮಕ್ಕಳಿಗೊಂದು ಕೊಡುಗೆ ಎನ್ನಬಹುದು. ಚಿಕ್ಕ ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ಸಂಯುಕ್ತ ಕುಟುಂಬದ ಅನುಪಸ್ಥಿತಿಯಲ್ಲಿ, ಪತಿ-ಪತ್ನಿ ಮಗುವಿನೊಂದೊಡಗೂಡಿದ ಆಧುನಿಕ ಪ್ರಾಥಮಿಕ ಕುಟುಂಬಕ್ಕೂ ಪ್ರಾಥಮಿಕ ಪೂರ್ವ ಶಾಲಾಕೇಂದ್ರಗಳು ಒಂದು ವರದಾನವೆಂದು ಹೇಳಬಹುದು. ಶೈಕ್ಷಣಿಕ ವಿಭಾಗದ ಮೇಲಿನ ಕೊಠಾರಿ ಆಯೋಗ ತಿಳಿಸುವಂತೆ ಮಕ್ಕಳು ಈ ಹಂತದಿಂದ ಪ್ರಾಥಮಿಕ ಶಾಲಾ ಹಂತಕ್ಕೆ ಬಂದಾಗ ಶಾಲೆಯಲ್ಲಿ ಅವರ ಪ್ರಗತಿ ಚೆನ್ನಾಗಿ ಆಗುತ್ತದೆ. ವರ್ಷದಲ್ಲಿ ಶಾಲೆ ತಪ್ಪಿಸುವವರ ಮತ್ತು

ಬಿಡುವವರ ಸಂಖ್ಯೆ ಕಡಿಮೆಯಾಗುತ್ತದೆ ಎಂಬುದು ಪ್ರಾಥಮಿಕ–ಪೂರ್ವ ಶಾಲೆಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ. ಗ್ರಾಮ, ನಗರ, ಪಟ್ಟಣಗಳಲ್ಲಿ ಈ ಸಂಸ್ಥೆಗಳನ್ನು ಸರ್ಕಾರಿ ಹಾಗೂ ಖಾಸಗೀ ಸಂಸ್ಥೆಗಳು ಸ್ಥಾಪಿಸುತ್ತಲಿವೆ. ಖಾಸಗೀ ವ್ಯಕ್ತಿಗಳೂ ಇಂತಹ ಸಂಸ್ಥೆಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ.

೨. ಶಾಲೆಯಲ್ಲಿ ಮಕ್ಕಳ ಕೂಟಗಳು :

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಮಕ್ಕಳ ಸರ್ವತೋಮುಖ ಕಲ್ಯಾಣಕ್ಕಾಗಿ ವಿವಿಧ ನಮೂನೆಯ ಸಾಮಾಜಿಕ. ಅಭ್ಯಾಸ ಕೂಟಗಳನ್ನು ಉದ್ದೇಶಪೂರ್ವಕವಾಗಿ ಏರ್ಪಡಿಸುತ್ತವೆ. ಎನ್.ಸಿ.ಸಿ. ಚರ್ಚಾಕೂಟ, ಶಾಲಾ ಪಾರ್ಲಿಯಮೆಂಟ, ಆಟದ ಗಂಪುಗಳು, ಸಾಂಸ್ಕೃತಿಕ ಗುಂಪುಗಳು, ಅಭ್ಯಾಸ ಗುಂಪು ಮುಂತಾದವುಗಳು ಮಕ್ಕಳ ಸಹಜಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಪಡಿಸುವಲ್ಲಿ ಸಹಾಯವಾಗುತ್ತವೆ. ರಜಾ ಶಿಬಿರಗಳು, ಬೇಸಿಗೆಯ ಶಿಬಿರಗಳು ಬಿಡುವಿನ ದಿನಗಳಲ್ಲಿ ಮಕ್ಕಳ ವ್ಯಕ್ತಿತ್ವ ವಿಕಾಸ ಹೊಂದುವಂತೆ ಉಪಯುಕ್ತ ರೀತಿಯಲ್ಲಿ ನೈಸರ್ಗಿಕ ವಾತಾವರಣದಲ್ಲಿ ಆಡಲು, ಕುಣಿಯಲು. ಆನಂದಿಸಲು ಅನುವು ಮಾಡಿಕೊಡುತ್ತವೆ. ಭಾರತ ಸ್ಕೌಟ್ಸ ಮತ್ತು ಗೈಡ್ಸ ಸಂಸ್ಥೆಯು ವಿದ್ಯಾರ್ಥಿ ಸದಸ್ಯರಿಗೆ ಶಿಸ್ತು ಸಂಘಟನೆ ನಿಯಮ ಪಾಲನೆಗಳನ್ನು ತಿಳಿಹೇಳುತ್ತದೆ: ಸಿಬಿರಗಳನ್ನು ಏರ್ಪಡಿಸಿ ಸಹಜೀವನ, ಸ್ವ-ಸಹಾಯ, ಧುರೀಣತ್ವ ತರಬೇತಿ ಇತ್ಯಾದಿ ವಿಷಯಗಳ ಮಹತ್ವದ ಅರಿವನ್ನು ಮಾಡಿಕೊಡುತ್ತದೆ. ಸ್ವಯಂಪ್ರೇರಿತರಾಗಿ ಮಕ್ಕಳು ಯಾವುದೇ ಆಟದ, ಸಾಂಸ್ಕೃತಿಕ ಕ್ಲಬ್ಬುಗಳ, ಗ್ರಂಥಾಲಯಗಳ ಸದಸ್ಯರಾಗಬಹುದು. ತಮ್ಮ ಮನಸ್ಸಿನ ಪ್ರವೃತ್ತಿಯನ್ನು ಬೆಳಸಿಕೊಳ್ಳಬಹುದು.

೩. ರಾಷ್ಟ್ರೀಯ ದಿನಾಚರಣೆ, ಜಯಂತಿ ಮತ್ತು ಉತ್ಸವಗಳಲ್ಲಿ ಮಕ್ಕಳ ಕೂಟಗಳು :

ವಿವಿಧ ಶೈಕ್ಷಣಿಕ ಮತ್ತು ಸಮಾಜಕಲ್ಯಾಣ ಸಂಸ್ಥೆಗಳು ರಾಷ್ಟ್ರೀಯ ದಿನಾಚರಣೆಗಳ, ಗಾಂಧೀಜಿ ಹಾಗೂ ಇತರ ಮಹಾಪುರುಷರ ಜಯಂತಿ, 'ಮಕ್ಕಳ ದಿನಾಚರಣೆ', ಗಣೇಶೋತ್ಸವ, ರಾಜ್ಯೋತ್ಸವ ಮುಂತಾದವುಗಳ ನಿಮಿತ್ಯವಾಗಿ ಪ್ರತಿವರ್ಷವೂ ವಿದ್ಯಾರ್ಥಿ ಮತ್ತು ಸೇವಾರ್ಥಿ ಮಕ್ಕಳ ಕೂಟಗಳನ್ನು ತಮ್ಮ ತಮ್ಮ ಸಂಸ್ಥೆಗಳಲ್ಲಿ ಸಂಘಟಿಸಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸುತ್ತವೆ. ನಾಟಕ, ಸಂಗೀತ, ಭಾಷಣ ಸ್ಪರ್ಧೆ, ಪ್ರದರ್ಶನ ಮುಂತಾದವುಗಳನ್ನು ಏರ್ಪಡಿಸುತ್ತವೆ. ಮಕ್ಕಳನ್ನು ಚಿಕ್ಕ ಚಿಕ್ಕ ಗುಂಪುಗಳ ನಿಯಮಿತಿ ಕಾರ್ಯ ಸಮಿತಿ (Functional Committee)ಗಳನ್ನಾಗಿ ಮಾಡಿ ವಹಿಸಿದ ಕೆಲಸವನ್ನು ಯಶಸ್ವಿಯಾಗುವಂತೆ ಮಾಡುವ ಜವಾಬ್ದಾರಿಯನ್ನು ಕೊಡಲಾಗುತ್ತದೆ. ಮಕ್ಕಳು ಪರಸ್ಪರ ತಿಳುವಳಿಕೆ, ಹೊಂದಾಣಿಕೆಯಿಂದ ತಮ್ಮ ಧುರೀಣನ ಸಲಹೆ ಮೇರೆಗೆ ಗುರುಗಳ ಮತ್ತು ಮೇಲ್ವಿಚಾರಕರ ಮಾರ್ಗ

ದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಸಹಜೀವನದ ಪಾಠ, ಧುರೀಣತ್ವ ಬೆಳವಣಿಗೆ, ರಾಷ್ಟ್ರೀಯ ಪ್ರಜ್ಞೆ ಮತ್ತು ಸಂಸ್ಕೃತಿಯ ಜ್ಞಾನದ ಅನುಭವ ಇಲ್ಲಿ ದೊರಕುತ್ತವೆ.

ಮಕ್ಕಳ ಸಾರ್ವತೋಮುಖ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸಮಾಜಕಾರ್ಯಕರ್ತರು, ಸಮಾಜಸುಧಾರಕರು, ಸಂಘ ಸಂಸ್ಥೆಗಳು ವರ್ಷದುದ್ದಕ್ಕೂ ಈ ದಿನಾಚರಣೆ, ಜಯಂತಿ ಮತ್ತು ಉತ್ಸವಗಳ ಉತ್ಸಾಹ ಹಾಗೂ ಚೈತನ್ಯವನ್ನು ಕಾಪಾಡಿಕೊಂಡು ನಡೆಸಿಕೊಂಡು ಬರುವಂತಾಗಬೇಕು. ಈ ದಿಶೆಯಲ್ಲಿ ಸಾಮಾಜಿಕ ಅರಿವು ಉಂಟಾಗಬೇಕು, ಸಮಾಜ ಮಕ್ಕಳ ಕಲ್ಯಾಣದ ಹೊಣೆಗಾರಿಕೆಯನ್ನು ಹೊರುವದು ಅತ್ಯಂತ ಅವಶ್ಯ. ಖಾಸಗೀ ಮಕ್ಕಳ ಸಂಸ್ಥೆಗಳ ಪಾತ್ರ ಇಲ್ಲಿ ಹಿರಿದಾದುದು. ಸರ್ಕಾರದ ಪ್ರಯತ್ನದೊಂದಿಗೆ ಕೈಗೂಡಿಸಿ ತಮ್ಮ ಪಾಲಿನ ಕರ್ತವ್ಯವನ್ನು ಮಕ್ಕಳು ಮುಂದಿನ ಜವಾಬ್ದಾರಿ ನಾಗರಿಕರಾಗುವಂತೆ ಸಿದ್ಧಪಡಿಸುವ ಭಾರ ಇವುಗಳ ಮೇಲಿದೆ.

೪. ಬಾಲಭವನ ಮತ್ತು S.O.S ಗ್ರಾಮಗಳು :

ರಾಷ್ಟ್ರದ ಅತ್ಯಂತ ಮಹತ್ವದ ಸ್ವತ್ತೆಂದರೆ ಮಕ್ಕಳು ಎಂದು ಭಾರತದ ಮಕ್ಕಳ ರಾಷ್ಟ್ರೀಯ ಧೋರಣೆ ಅಂಗೀಕರಿಸಿದೆ. ಕರ್ನಾಟಕ ಸರ್ಕಾರದ ಸ್ತ್ರೀಯರ ಮತ್ತು ಮಕ್ಕಳ ಕಲ್ಯಾಣ ವಿಭಾಗವು ಜಿಲ್ಲೆಗೊಂದರಂತೆ ೯ ಬಾಲಭವನಗಳನ್ನು ಈಗ ನಡೆಸುತ್ತದೆ. ಅಂತರ-ರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಉಳಿದೆಲ್ಲ ಜಿಲ್ಲೆಗಳಲ್ಲಿಯೂ ಇಂತಹ ಬಾಲಭವನಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಬಾಲಭವನಗಳು ಶಾಲಾ ಮಕ್ಕಳಿಗೆ ಆಟದ ಅನುಕೂಲತೆಗಳನ್ನು ಒದಗಿಸಿಕೊಡುವದಲ್ಲದೇ ತಮ್ಮವೇ ಆದ ಮಕ್ಕಳ ಚಿತ್ರಮಂದಿರಗಳಲ್ಲಿ ಶೈಕ್ಷಣಿಕ ಚಿತ್ರಗಳನ್ನು ಮಕ್ಕಳಿಗೆ ತೋರಿಸುತ್ತಾರೆ. ಮಕ್ಕಳಲ್ಲಿ ಅಡಗಿರುವಂತಹ ಬುದ್ಧಿಮತ್ತೆ ಮತ್ತು ಕರ್ತೃತ್ವ ಶಕ್ತಿಗೆ ಚಾಲನೆ ಕೊಡಲು ಬಾಲಭವನಗಳು ಸಂಗೀತ, ಚಿತ್ರಕಲೆ ಪೇಂಟಿಂಗಗಳಂತಹ ಕಲೆಗಳನ್ನು ಕಲಿಯಲಿಕ್ಕೆ ಪ್ರೋತ್ಸಾಹಿಸುತ್ತವೆ. ಹೀಗೆ ಮಕ್ಕಳನ್ನು ಸಂಘಟಿಸಿ ಅವರ ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ಅನೇಕ ಸೇವೆಗಳನ್ನು ಸಲ್ಲಿಸುತ್ತವೆ.

ಅನಾಥ ಮಕ್ಕಳಿಗೆ ಪಾಲನೆ-- ಪೋಷಣೆ. ಪ್ರೀತಿ, ವಿಶ್ವಾಸ, ಶಿಕ್ಷಣ ಮತ್ತು ರಕ್ಷಣೆ ಒದಗಿಸಲು S. O. S. ಎಂಬ ಮಕ್ಕಳ ಹಳ್ಳಿಗಳನ್ನೇ ಕೇಂದ್ರಸರ್ಕಾರವು ಪ್ರಾರಂಭಿಸಿದೆ. ಇಲ್ಲಿ ಸಾಮಾನ್ಯವಾಗಿ ೨೦ ಕುಟುಂಬಗಳಿರುತ್ತವೆ. ನಿಜವಾದ ತಂದೆ-ತಾಯಿಯರ ಅನುಪಸ್ಥಿತಿಯಲ್ಲಿ ಬದಲಿ 'ತಾಯಿ'ಯ ಕ್ಷೇಮಪಾಲನೆಯಲ್ಲಿ ಸ್ವಲ್ಪ ಹೆಚ್ಚು-ಕಡಿಮೆ ವಯಸ್ಸಿನ ೮-೧೦ ಗಂಡು. ಹೆಣ್ಣುಮಕ್ಕಳಿರುತ್ತಾರೆ. 'ಕುಟುಂಬ'ದ ಕಲ್ಪನೆಯನ್ನು ಒದಗಿಸಲಾಗಿದೆ. ಬುದ್ಧಿಪೂರ್ವಕವಾಗಿ ಇಲ್ಲಿ ಮಕ್ಕಳಕೂಟಗಳನ್ನು ಸಂಘಟಿಸಿ ಪ್ರೀತಿ-ವಾತ್ಸಲ್ಯ ತೋರಿಸುವದಲ್ಲದೆ ಮಗುವಿಗೆ ಭವಿಷ್ಯದ ಭದ್ರತೆಯನ್ನು ಒದಗಿಸಲಾಗಿದೆ. ಶಿಕ್ಷಣ, ಆರೋಗ್ಯ, ಮನೋರಂಜನೆ ಮುಂತಾದವುಗಳ ವ್ಯವಸ್ಥೆ ಮಾಡುವಾದ

ಲಾಗಿದೆ. ಲೇಹ (ಲಡಾಕ), ಧರ್ಮಶಾಲಾ (ಹಿಮಾಚಲ ಪ್ರದೇಶ). ಮಸ್ಸೂರಿ (ಉತ್ತರಪ್ರದೇಶ), ಜೈಪುರ (ರಾಜಸ್ಥಾನ), ಬವಾನಾ (ದಿಲ್ಲಿ), ಗ್ರೀನ ಫೀಲ್ಡ್ಸ (ಹರಿಯಾನಾ), ಅಹಮ್ಮದಾಬಾದ (ಗುಜರಾಥ), ಬುಧನಗರ ಮತ್ತು ಕಲ್ಕತ್ತಾ (ಪಶ್ಚಿಮ ಬಂಗಾಲ), ಪಂಚಗಣಿ, ಲೋಣಾವಳ. ಪನ್ಹಾಳ-ಕೊಲ್ಹಾಪುರ ಮತ್ತು ಸಾಸವಾಡ್ (ಮಹಾರಾಷ್ಟ್ರ) ಗಳಲ್ಲಿ S. O. S. ಹಳ್ಳಿಗಳು ಕೆಲಸಮಾಡುತ್ತಿವೆ. ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಜಮ್ಮು ಮತ್ತು ಕಾಶ್ಮೀರ, ಓರಿಸ್ಸಾ. ಆಂಧ್ರಪ್ರದೇಶ, ಪಂಜಾಬ ಹಾಗು ಕರ್ನಾಟಕಗಳಲ್ಲಿಯೂ ಇಂತಹ ಇನ್ನೈದು ಹಳ್ಳಿಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ನಮ್ಮ ದೇಶದಲ್ಲಿ ಕುಟುಂಬದ ಕಟ್ಟು-ಸಂಬಂಧಗಳು ಬಲವಾಗಿರುವಾಗ ಮತ್ತು ನಮ್ಮ ದೊಡ್ಡ ಕುಟುಂಬದ ಸಂಪ್ರದಾಯಕ್ಕೆ ಹೊಂದಿಕೊಳ್ಳುವದರಿಂದ ಈ ರೀತಿಯ S. O. S. ಗ್ರಾಮಗಳ ಕುಟುಂಬ ಪೋಷಣಾ ಕಾರ್ಯಕ್ರಮಗಳು ಯೋಗ್ಯವೇ ಆಗಿವೆ. ಇಂತಹ ಗ್ರಾಮಗಳನ್ನು ಇನ್ನೂ ಬೆಳಸಿ ವಿಸ್ತರಿಸಬೇಕು.

೫. ಬಾಲಕರ ಸೇವಾಸಂಸ್ಥೆಗಳು :

ಬಾಲಕರ ಸೇವಾಸಂಸ್ಥೆಗಳನ್ನು (Juvenile Service Bureau) ಕರ್ನಾಟಕ ಸರಕಾರದವರು ಬೆಂಗಳೂರು, ದಾವಣಗೆರೆ. ಹುಬ್ಬಳ್ಳಿ-ಧಾರವಾಡ ಮುಂತಾದ ಪಟ್ಟಣಗಳಲ್ಲಿ ಪ್ರಾರಂಭಿಸಿದ್ದಾರೆ. ಅವುಗಳ ಮುಖ್ಯಗುರಿಯು ಶಾಲೆಗಳಲ್ಲಿ ಮಾನಸಿಕ. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಂದ ತೊಂದರೆಗೀಡಾದಂತಹ ಮಕ್ಕಳಿಗೆ ಮಾರ್ಗದರ್ಶನ. ಸಲಹೆ-ಸೂಚನೆ ನೀಡುವದು ಮತ್ತು ಬಾಲಾಪರಾಧ ಕಂಡುಬರುವಂತಹ ಸಂಭವನೀಯ ಪ್ರದೇಶಗಳಲ್ಲಿ. ಉದಾ : ಕೊಳಗೇರಿಗಳಲ್ಲಿ (Slums), ಮನೋರಂಜನೆ ಮತ್ತು ಆಟದ ಕೇಂದ್ರಗಳನ್ನು ತೆರೆಯುವದು, ಅಲ್ಲಿ ಪೌಷ್ಟಿಕ ಆಹಾರ ಒದಗಿಸುವದು ಇತ್ಯಾದಿ ಆಗಿದೆ. ಕೊಳಗೇರಿಗಳಂತಹ ಪ್ರದೇಶಗಳಲ್ಲಿ ಬಾಲಾಪರಾಧವೆಸಗಬಹುದಾದಂತಹ ಮಕ್ಕಳನ್ನು ಗುರುತಿಸಿ ವ್ಯಕ್ತಿಗತ ಹಾಗೂ ವೃಂದಗತ ಸೇವೆಯನ್ನು ಒದಗಿಸಲಾಗುತ್ತದೆ. ಈ ಕೇಂದ್ರಗಳಲ್ಲಿ ಸಮಾಜಸೇವೆಯಲ್ಲಿ ಪದವಿ ಪಡೆದ ಕಾರ್ಯಕರ್ತರನ್ನು ನಿಯಮಿಸಲಾಗಿದೆ. ನಗರದಲ್ಲಿ ಬೆಳೆದುಬರಬಹುದಾದಂತಹ ಅವ್ಯವಸ್ಥಿತ ಗುಂಪುಗಳಿಗೆ ಈ ಕಾರ್ಯಕರ್ತರು ಗುಂಪಿನ ಸದಸ್ಯರಲ್ಲಿ ಪರಸ್ಪರರಲ್ಲಿ ತಿಳುವಳಿಕೆ, ನಡವಳಿಕೆ ಮತ್ತು ಹೊಣೆಗಾರಿಕೆ ವೃದ್ಧಿಸುವಲ್ಲಿ ಮಾರ್ಗದರ್ಶನ ನೀಡುವಲ್ಲಿ ಸಹಾಯಕರಾಗಿದ್ದಾರೆ. ವ್ಯಕ್ತಿಯ ಶಕ್ತಿ ಹ್ರಾಸವಾಗದೇ ವ್ಯಕ್ತಿಯ ಸಮೂಹದ ಮತ್ತು ಸಮುದಾಯದ ಬೆಳವಣಿಗೆಗೆ ಸಹಾಯಕರಾಗುವ ರೀತಿಯಲ್ಲಿ ವ್ಯಕ್ತಿಶಕ್ತಿಯ ಸದುಪಯೋಗ ಮಾಡಲ್ಪಡುತ್ತದೆ. ಆತ್ಮಶಕ್ತಿಯ ಬೆಳವಣಿಗೆಗೆ ಚಾಲನೆ ಕೊಡಲಾಗುತ್ತದೆ. ವ್ಯಕ್ತಿಯ ಬೆಳವಣಿಗೆಗೆ ಸಮೂಹವನ್ನು ಮತ್ತು ಸಾಮಾಜಿಕ ಗುಂಪುಗಳ ಅಭಿವೃದ್ಧಿಗೆ ವ್ಯಕ್ತಿಯು ತನ್ನ ಆಶೆ-ಆಕಾಂಕ್ಷೆಗಳನ್ನು ಬದಿಗೊತ್ತಿ ಸಮೂಹದ ಗುರಿ ಮುಟ್ಟುವತ್ತ ಹೋಗಬೇಕಾದ ಮಹತ್ವವನ್ನು ತೋರಿಸುತ್ತಾರೆ. ಮಕ್ಕಳ ಸಾಮಾಜಿಕ ಕೂಟಗಳು ಮಕ್ಕಳ ವೈಯಕ್ತಿಕ ಬೆಳವಣಿಗೆಯನ್ನು ಸಮುದಾಯದ

ಅಭಿವೃದ್ಧಿಯೊಂದಿಗೆ ನಿರ್ದಿಷ್ಟವಾದ ದಿಶೆಯಲ್ಲಿ ಸಾಗುವಂತೆ ಮಾಡಲು ಸಮಾಜ ಕಾರ್ಯಕರ್ತರು, ಸಂಘಸಂಸ್ಥೆಗಳು ಪ್ರಯತ್ನಮಾಡುವದು ಸೂಕ್ತವಾದುದು.

ಅಸಂಘಟಿತ ಕೂಟಗಳು :

ಅಸಂಘಟಿತ ಕೂಟಗಳನ್ನು ಮುಖ್ಯವಾಗಿ ಎರಡು ಬಗೆಯಲ್ಲಿ ವಿಭಾಗಿಸ ಬಹುದು.

೧. ಹುಡುಗರ ಅಸಂಘಟಿತ ಕೂಟಗಳು ಮತ್ತು

೨. ಹುಡುಗಿಯರ ಅಸಂಘಟಿತ ಕೂಟಗಳು

೧. ಹುಡುಗರ ಅಸಂಘಟಿತ ಕೂಟಗಳು :

ಇಂತಹ ಕೂಟಗಳನ್ನು ಗ್ರಾಮ ಮತ್ತು ಪಟ್ಟಣಗಳೆರಡರಲ್ಲಿಯೂ ಕಾಣುತ್ತೇವೆ. ಮುಖ್ಯವಾಗಿ ಒಕ್ಕಲುತನ ಮಾಡುವಂತಹ. ಕುಶಲ ಕೈಗಾರಿಕೆಯ ಹಾಗೂ ಉದ್ಯೋಗ ದಂಧೆಗಳಲ್ಲಿ ತೊಡಗಿರುವಂತಹ ಮತ್ತು ಕೂಲಿಮಾಡುವಂತಹ ಅನೇಕ ಅವಿದ್ಯಾವಂತ ಮಕ್ಕಳು ಗ್ರಾಮೀಣ ಭಾಗದಲ್ಲಿ ಕಂಡುಬಂದರೆ, ಪಟ್ಟಣಗಳಲ್ಲಿ ಹೋಟೆಲ್-ವಸತಿಗೃಹ ಗಳಲ್ಲಿ, ಅಂಗಡಿ-ಗ್ಯಾರೇಜುಗಳಲ್ಲಿ, ಇಮಾರತು ಕಟ್ಟುವಲ್ಲಿ, ಬಸ್ ಮತ್ತು ರೇಲ್ವೆ ನಿಲ್ದಾಣ ಗಳಲ್ಲಿ ಕೂಲಿಗಳಾಗಿ ಕೆಲಸಮಾಡುವ ಮಕ್ಕಳನ್ನು ಕಾಣುತ್ತೇವೆ. ಗ್ರಾಮೀಣ ಭಾಗದಲ್ಲಿ ಮೊದಲನೆ ತರಹದ ಸಮವಯಸ್ಕ ಮಕ್ಕಳು ಆಗಾಗ ಅನೌಪಚಾರಿಕವಾಗಿ ಒಂದೊಂದು ಕಡೆಗೆ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಸೇರುತ್ತಾರೆ. ಇಂತಹ ಮಕ್ಕಳಿಗೆ ಪೂರ್ಣ ಉದ್ಯೋಗ ದಲ್ಲಿ ತೊಡಗುವಂತಹ ಅವಕಾಶಗಳು ಕಡಿಮೆ. ಅವಕಾಶಗಳಿದ್ದರೂ ಚಿಕ್ಕ ವಯಸ್ಕ ರಾದುದರಿಂದ ಪೂರ್ಣಾವಧಿ ಕೆಲಸಮಾಡಲಾಗುವದಿಲ್ಲ. ಆ ರೀತಿಯ ನಿರೀಕ್ಷಣೆ ಯನ್ನು ಮಾಡಲಾಗದು. ಅಂತಹ ಮಕ್ಕಳಿಗೆ ಸಾಕಷ್ಟು ವಿಶ್ರಾಂತಿವೇಳೆ ದೊರಕುತ್ತದೆ. ಸಾಮಾನ್ಯವಾಗಿ ಅವರು ೧೨ ರಿಂದ ೧೬ ವರ್ಷದ ಗುಂಪಿಗೆ ಸೇರಿದವರು. ಈ ಹದಿ ವಯಸ್ಸಿನ ಮಕ್ಕಳು ಮಾನಸಿಕ ತುಮುಲದಲ್ಲಿ ಸಿಲುಕಿಕೊಂಡಿರುತ್ತಾರೆ. ಅವರ ನಡೆವಳಿ ಕೆಯು ಒಂದು ಕಡೆಗೆ ತಂದೆ-ತಾಯಿಗಳ, ಗುರು ಹಿರಿಯರ ಕಟ್ಟಳೆಗಳ ಹಾಗೂ ಸಾಮಾ ಜಿಕ ನಿಬಂಧನೆಗಳಿಂದ ನಿರ್ದೇಶಿತವೂ, ನಿಯಂತ್ರಣವೂ ಆಗಿದ್ದರೆ, ಇನ್ನೊಂದು ಕಡೆಗೆ ಆಧುನಿಕ ವ್ಯಕ್ತಿಸ್ವಾತಂತ್ರ್ಯದ ವಿಚಾರಗಳ ಸೆಳೆತಕ್ಕೆ ಬಲಿಯಾಗಿರುತ್ತಾರೆ. ಸಮವಯಸ್ಕರ ಕೂಟಗಳಲ್ಲಿ ಇಂತಹ ದ್ವಂದ್ವ ಪರಿಸ್ಥಿತಿಯು ಪರಿಶೀಲನೆ ನಡೆಯುತ್ತಿರುತ್ತದೆ. ಮೊದ ಮೊದಲು ಅವ್ಯವಸ್ಥಿತ, ಅನೌಪಚಾರಿಕವಾಗಿ ಪ್ರಾರಂಭವಾದ ಈ ಕೂಟಗಳು ಬರ ಬರುತ್ತ ತಮ್ಮ ತಮ್ಮ ಸದಸ್ಯರ ಸರ್ವಸಾಮಾನ್ಯ ಒಪ್ಪಿತವಾದ ಗುರಿ, ಅಭಿರುಚಿ, ಧ್ಯೇಯಗಳಿಂದ ವ್ಯವಸ್ಥಿತಗೊಂಡ ಔಪಚಾರಿಕ ಗುಂಪುಗಳಾಗಿಯೂ ಪರಿವರ್ತನೆಗೊಳ್ಳ ಬಹುದು. ತಮ್ಮ ಬಗೆಗೆ ತಮ್ಮ ತಮ್ಮ ಕುಟುಂಬದ ಸದಸ್ಯರ ಹಾಗು ಇತರರ

ವರ್ತನೆ, ವಿಚಾರ, ವೈಯಕ್ತಿಕ ಸಮಸ್ಯೆಗಳ ಬಗೆಗೆ ಈ ಕೂಟಗಳಲ್ಲಿ ಮಾತನಾಡುತ್ತಿದ್ದ ಮಕ್ಕಳು ಕ್ರಮೇಣವಾಗಿ ಸಾಮಾನ್ಯವಾಗಿ ಒಪ್ಪಿಗೆಯಾಗುವಂತಹ, ಆಸಕ್ತಿ ಹೊಂದಿರಬಹುದಾದಂತಹ ವಿಷಯಗಳ ಬಗೆಗೆ ಚರ್ಚಿಸುತ್ತಾರೆ. ಭಜನೆ, ನಾಟಕ, ಸಮೂಹ ಆಟಗಳು ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮ ಇಲ್ಲವೆ ಸಾಮೂಹಿಕವಾಗಿ ಉಪಯುಕ್ತವಾಗಿರುವಂತಹ ವಿಧಾಯಕ ಕಾರ್ಯಕ್ರಮ ಕೈಕೊಳ್ಳಲು ವಿಚಾರಿಸಬಹುದು, ಇಲ್ಲವೆ ಸಮಾಜ ವಿರೋಧಿ ಚಟುವಟಿಕೆಗಳಲ್ಲಿಯೂ ತೊಡಗಬಹುದಾಗಿದೆ. ಹೊಲ-ಗದ್ದೆಗಳಿಂದ ಕಾಳು-ಕಡಿ ಕದಿಯುವದು, ಬಣವೆಗಳಿಗೆ ಬೆಂಕಿ ಹಚ್ಚುವದು, ದನಕರಗಳನ್ನು ಕದಿಯುವದು ಮುಂತಾದವುಗಳನ್ನು ಇಲ್ಲಿ ಉದಾಹರಿಸಬಹುದು. ಇಂತಹ ಚಟುವಟಿಕೆಗಳು ಸಾಂಪ್ರದಾಯಿಕವಾದ ನಮ್ಮ ಸಮಾಜ ಕಟ್ಟಳೆಗಳ ರಚನೆಯಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತವೆ ಎನ್ನಬಹುದು. ಅದೇನೇ ಇದ್ದರೂ ಗ್ರಾಮೀಣ ಭಾಗದ ಅಸಂಘಟಿತ ಮಕ್ಕಳ ಕೂಟಗಳು ವೈಯಕ್ತಿಕ ಬೆಳವಣಿಗೆಗೆ ತಮ್ಮದೇ ಆದ ರೀತಿಯಲ್ಲಿ ಸಹಾಯಕವಾಗಿರುತ್ತವೆ.

ಪಟ್ಟಣಗಳಲ್ಲಿ ವಿದ್ಯಾರ್ಥಿಗಳಲ್ಲದ ೧೨-೧೬ ವಯಸ್ಸಿನ ಅನೇಕ ಅಸಂಘಟಿತ ಮಕ್ಕಳ ಕೂಟಗಳು ನೋಡಲು ಸಿಗುತ್ತವೆ. ಜೂಜು, ಸಿಗರೇಟು, ಬೀಡಿ ಸೇದುವದು ಅಶ್ಲೀಲ ಚಿತ್ರಗಳನ್ನು ನೋಡುವದು, ಮಾದಕ ಪೇಯಗಳಿಗೆ ಮಾರುಹೋಗುವದು ಮುಂತಾದ ದುಶ್ಚಟಗಳಿಗೆ ಈ ಕೂಟಗಳು ಉತ್ತೇಜನ ಕೊಡುತ್ತವೆ. ತಕ್ಕಮಟ್ಟಿಗೆ ದುಡಿದು ಹಣಗಳಿಸುತ್ತಿರುವ ಇಂತಹ ಮಕ್ಕಳು ದುಷ್ಟ ಪ್ರವೃತ್ತಿಯ ಕಡೆಗೆ ಸುಲಭವಾಗಿ ಸೆಳೆಯಲ್ಪಡುತ್ತಾರೆ. ತಂದೆ ತಾಯಿಗಳ ಗುರು ಹಿರಿಯರ ನಿಯಂತ್ರಣ ಕಡಿಮೆಯಾಗುತ್ತದೆ, ಸ್ವೇಚ್ಛಾಚಾರ ಬೆಳೆಯುತ್ತದೆ. ಪಟ್ಟಣದ ಆಕರ್ಷಣೆಗಳು, ಪಟ್ಟಣದಲ್ಲಿ ಆಳವಾದ ವೈಯಕ್ತಿಕ ಸಂಬಂಧದ ಬೆಳವಣಿಗೆಗೆ ಕೊರತೆ ಇರುವದು. ಪಟ್ಟಣದ 'ವಾತಾವರಣ' ಇಂತಹ ಹವ್ಯಾಸಗಳಿಗೆ ಅನುಕೂಲವಾಗಿರುವದು ಈ ಕೂಟಗಳಿಗೆ ಸಹಾಯಕವಾಗಿವೆ. ಬಾಲಾಪರಾಧದ ಬೀಜ ಇಲ್ಲಿ ಮೊಳೆಯುತ್ತದೆ. ತುಂಟರ ಟೋಳಿ (Gang)ಗಳು ನಿರ್ಮಾಣವಾಗಿ ಪಟ್ಟಣದ ಸಾಮಾಜಿಕ ಸ್ವಾಸ್ಥ್ಯವನ್ನು ಇನ್ನೂ ಹದಗೆಡಿಸುತ್ತವೆ. ಪಟ್ಟಣದ ಕೊಳೆಗೇರಿಗಳಲ್ಲಿ ಇಂತಹ ಉದಾಹರಣೆಗಳು ಅನೇಕ. ಇಂತಹ ಗುಂಪುಗಳಿಂದ ಉಂಟಾಗಬಹುದಾದಂತಹ ದುಷ್ಪರಿಣಾಮಗಳನ್ನು ಪ್ರತಿಬಂಧಿಸಲು ನಿವಾರಣೋಪಾಯಗಳನ್ನು ಯೋಜಿಸುವದು ಅತಿಮುಖ್ಯ. ಅಂತೆಯೇ ಬಾಲಕರ ಸೇವಾ ಸಂಸ್ಥೆಗಳನ್ನು ಪಟ್ಟಣಗಳಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿ ಪ್ರಾರಂಭಿಸಲಾಗಿದೆ.

೨. ಹುಡುಗಿಯರ ಅಸಂಘಟಿತ ಕೂಟಗಳು :

ಭಾರತೀಯ ಸಂಸ್ಕೃತಿಯ ಪರಂಪರೆಯ ಆಶ್ರಯ ಕಟ್ಟು ನಿಟ್ಟುಗಳಿಗೆ ಒಳಗಾಗಿ ಅವುಗಳನ್ನೇ ಮುಂದುವರಿಸಿಕೊಂಡು ಹೋಗುವ ಒಂದು ತರಹದ ಹುಡುಗಿಯರ ಗುಂಪುಗಳನ್ನು ಹಳ್ಳಿಗಳಲ್ಲಿ ಕಂಡರೆ ತಮ್ಮ ತಮ್ಮ ಅಭಿರುಚಿಗಳಿಗೆ ಅನುಗುಣವಾಗಿ ಈ

ಕಟ್ಟುಸಿಟ್ಟುಗಳನ್ನು ಅಳವಡಿಸಿಕೊಂಡು ಮತ್ತು ಪಾಶ್ಚಾತ್ಯ ಪದ್ಧತಿಯ ರೀತಿ ನೀತಿಗಳನ್ನು ಅನುಕರಿಸುವ ಹುಡುಗಿಯರ ಗುಂಪುಗಳನ್ನು ಪಟ್ಟಣದಲ್ಲಿ ಕಾಣುತ್ತೇವೆ. ಹಳ್ಳಿಗಳಲ್ಲಿ ೧೦ ರಿಂದ ೧೨ ವರ್ಷದ ಹುಡುಗಿಯರು ಸಣ್ಣ ಸಣ್ಣ ಗುಂಪುಗಳಲ್ಲಿ ಅನೌಪಚಾರಿಕವಾಗಿ ಬಂದು ಸೇರಿ ತಮ್ಮವೇ ಆಟಗಳಾದ ಕವಡೀ ಆಟ, ಪುಗಡೀ ಆಟ, ಹಗ್ಗದ ಆಟ, ಅಡಗೀ ಆಟ, ಗೊಂಬೆ ಲಗ್ನದ ಆಟ ಮುಂತಾದವುಗಳನ್ನು ಪರಸ್ಪರರ ತಿಳುವಳಿಕೆ, ಹೊಂದಾಣಿಕೆಗಳಿಂದ ಕೂಡಿ ಆಡಿ ನಲಿಯುವರು. ನಾಗರ ಪಂಚಮಿ, ಗೌರಿಹಬ್ಬ, ಗುಳ್ಳವ್ವನ ಹಬ್ಬ, ಪಾಂಡವರ ಹಬ್ಬ, ಕುಸುರೆಳ್ಳು, ಬನ್ನಿಹಬ್ಬ, ದೀಪಾವಳಿ, ಅಲ್ಲಿಕೇರಿ (ವನಭೋಜನ)ಜಾತ್ರೆ ಮುಂತಾದವುಗಳಲ್ಲಿ ಹುಡುಗಿಯರು ಹೊಸ ಬಟ್ಟೆ ಉಟ್ಟುಕೊಂಡು ಸಡಗರದಿಂದ ಗುಂಪು ಗುಂಪಾಗಿ ಓಡಾಡುವದನ್ನು ಕಾಣುತ್ತೇವೆ. ವ್ಯಕ್ತಿತ್ವದ ಬೆಳವಣಿಗೆಗೆ ಹುಡುಗಿಯರು ಈ ರೀತಿಯ ಆಟ, ಹಬ್ಬ ಹುಣ್ಣಿಮೆಯ ಪ್ರಸಂಗದಲ್ಲಿ, ಗುಪುಗಳಲ್ಲಿ ಭಾಗವಹಿಸುವದು, ಅನುಭವ ಪಡೆಯುವದು ಬಹಳ ಮಹತ್ವವಾದುದು. ಹುಡುಗಿಯರು ಅನೇಕ ಸಾಮಾಜಿಕ ವಿಧಿ ಕಾರ್ಯಕ್ರಮಗಳಿದ್ದಾಗ ಗುಂಪುಗಳಲ್ಲಿ ಬಂದು ಸೇರುತ್ತಾರೆ. ಉದಾ : ಹುಡುಗಿಯರು ಋತುಮತಿಯರಾದಾಗ, ಮದುವೆಗಳಲ್ಲಿ ಚಿಕ್ಕವಯಸ್ಸಿನಲ್ಲಿ ಲಗ್ನವಾಗಿ ಹಬ್ಬ ಹುಣ್ಣಿಮೆಗಾಗಿ ತವರು ಮನೆಗೆ ಬಂದಾಗ, ಹೂ ಮುಡಿಸುವ ಕಾರ್ಯವಿದ್ದಾಗ, ಮಗುವಿನ ಜನನವಿದ್ದಾಗ ಸಮವಯಸ್ಕ ಹುಡುಗಿಯರು ಬಂದು ಸೇರುತ್ತಾರೆ. ವಿವಿಧ ಅನುಭವಗಳ, ವಿಚಾರಗಳ ವಿನಿಮಯ ಮಾಡಿಕೊಳ್ಳುತ್ತಾರೆ. ಇದು ವ್ಯಕ್ತಿತ್ವ ಬೆಳವಣಿಗೆಗೆ ಸಹಾಯಕ.

ಪಟ್ಟಣಗಳಲ್ಲಿ ಶಿಕ್ಷಣ, ತಾಂತ್ರಿಕ ಸೌಲಭ್ಯ ಇನ್ನೂ ಅನೇಕ ಅನುಕೂಲತೆ ಹಾಗೂ ಒತ್ತಡಗಳು, ಕೌಟುಂಬಿಕ ಪರಿಸ್ಥಿತಿಯಲ್ಲಿ ಬದಲಾವಣೆ ಮುಂತಾದವುಗಳು ಹುಡುಗಿಯರು ಗುಂಪುಗಳಲ್ಲಿ ಭಾಗವಹಿಸುವದರ ಮೇಲೆ ಪರಿಣಾಮ ಬೀರಿವೆ. ಕುಟುಂಬ ಹಾಗೂ ಇತರ ಸಾಮಾಜಿಕ ಸಂಸ್ಥೆಗಳ ಹಿಡಿತ ಕಡಿಮೆ ಆಗಿ ಹುಡುಗಿಯರು ಸ್ವತಂತ್ರ ಮತ್ತು ವಾಸ್ತವ ವಿಚಾರಗಳತ್ತ ವಾಲುವಂತಾಗಿದೆ. ತಮ್ಮ ಒಳಿತು, ಕೆಡಕು, ಒಲವು–ಸ್ನೇಹ, ಆಶೆ-ಆಕಾಂಕ್ಷೆ ಹೆಚ್ಚಾಗಿ ಬಲ್ಲವರಾಗಿರುತ್ತಾರೆ. ತಮ್ಮ ಸ್ಥಿತಿ–ಗತಿಗಳನ್ನು ಕಡಿಮೆ–ಹೆಚ್ಚುಗಾರಿಕೆಯನ್ನು ಹೋಲಿಸಿ ನೋಡಲು, ಆದರ್ಶಗಳನ್ನು ಇಟುಕೊಳ್ಳಲು ಇಲ್ಲಿ ಇತರ ಗುಂಪುಗಳಿವೆ. ಹುಡುಗರೊಂದಿಗೆ ಬೆಳೆಯಲು ಸಮಾನ ಅವಕಾಶಗಳಿವೆ. ಸಮಾಜದ ಶೋಷಣೆಗೆ ಪೂರ್ಣ ಒಳಗಾಗದೆ ತಮ್ಮ ಜಾಣ್ಮೆ, ಚಾಣಾಕ್ಷತನದಿಂದ, ಧೈರ್ಯದಿಂದ ವೈಯುಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಮುಂದುವರೆಯಲು ಅವಕಾಶಗಳಿವೆ.

ಉಪಸಂಹಾರ :

ಮಕ್ಕಳ ಸಾಮಾಜಿಕ ಕೂಟಗಳು ಅವರ ಆರೋಗ್ಯಯುತ ಬೆಳವಣಿಗೆಗೆ ಮತ್ತು ಮನುಷ್ಯನಾಗಿ ಬಾಳಲು ಅತ್ಯವಶ್ಯವಾಗಿವೆ. ಪ್ರಾಥಮಿಕ ಗುಂಪಾದ ಕುಟುಂಬದಿಂದ

ಮೊದಲಾಗಿ ಮಗುವು ಅನೇಕ ನಮೂನೆಯ ಸಂಘಟಿತ ಹಾಗೂ ಅಸಂಘಟಿತ ಕೂಟಗಳಲ್ಲಿ ಬೆರೆತು ಅನುಭವ ಪಡೆಯುತ್ತಾ ಹೋಗುತ್ತದೆ. ಮಗುವಿನ ವ್ಯಕ್ತಿತ್ವವು ಈ ಕೂಟಗಳ ಪ್ರಭಾವದಿಂದ ಮಾರ್ಪಾಡಾಗುತ್ತದೆ. ಪ್ರೌಢಾವಸ್ಥೆಯಲ್ಲಿ ತುಂಬ ರೂಪುಗೊಳ್ಳಬೇಕಾದ ವ್ಯಕ್ತಿತ್ವದ ಹೋಲಿಕೆಯನ್ನು ಬಾಲ್ಯಾವಸ್ಥೆಯಲ್ಲಿಯೇ ಅವನ ಗುಂಪುಗಳ ಸಂಬಂಧ, ಸಹವಾಸದಲ್ಲಿ ಕಾಣುತ್ತೇವೆ. ಆದುದರಿಂದ ಮಗುವು ತಾನು ಸ್ವಯಂ ಪ್ರೇರಿತನಾಗಿ ಯಾವುದಾದರೂ ಸಾಮಾಜಿಕ ಕೂಟಗಳ ಸದಸ್ಯನಾಗಬೇಕೆಂದು ಬಯಸುವ ಪೂರ್ವದಲ್ಲಿ ತನ್ನ ಹಿತಚಿಂತಕರ ಸಲಹೆ–ಸೂಚನೆ, ಮಾರ್ಗದರ್ಶನ ಪಡೆದು ಸದಸ್ಯನಾದರೆ ತಾನು ನಿರೀಕ್ಷಿಸಿದ ವ್ಯಕ್ತಿತ್ವದ ಬೆಳವಣಿಗೆಯಾದೀತು. ಆದರೆ ಈ ದಿಸೆಯಲ್ಲಿ ತಂದೆ ತಾಯಿಗಳ, ಮಾರ್ಗದರ್ಶಕರ, ಸಮೂಹ, ಸಮುದಾಯಗಳ, ಸರಕಾರದ ಮತ್ತು ಖಾಸಗೀ ಸಂಸ್ಥೆಗಳ ಪಾಲು ಮತ್ತು ಹೊಣೆಗಾರಿಕೆ ಹೆಚ್ಚಿನದಾಗಿದೆ.

ಮಕ್ಕಳ ಮನೋರೋಗಗಳು ಮತ್ತು ಅವುಗಳ ನಿವಾರಣೆ

● ಗ. ಚ. ಸುವರ್ಣ

ಮಕ್ಕಳಲ್ಲಿ ಮಾನಸಿಕ ರೋಗಗಳು ಬಹಳ ಕಡಿಮೆಯೆಂದೇ ಹೇಳಬಹುದು. ಮಾನಸಿಕ ಸಮಸ್ಯೆಗಳು ಶೇಕಡಾ ೧೦–೧೨ ಮಕ್ಕಳಲ್ಲಿ ಕಂಡು ಬಂದರೂ ಅದು ಮಕ್ಕಳ ಬೆಳವಣಿಗೆಯಲ್ಲಿ ಕಂಡು ಬರುವ ಒಂದು ರೀತಿಯ ಅತಿರೇಕವೆಂದೇ ಪರಿಗಣಿಸಬೇಕು. ಉದಾಹರಣೆಗೆ, ಮಕ್ಕಳು ಮನೆಬಿಟ್ಟು ಓಡಿದರೆ, ವಿಪರೀತ ಹಟಮಾಡಿದರೆ, ಶಾಲೆಗೆ ತಪ್ಪಿಸಿಕೊಂಡರೆ, ಬೆರಳು ಚೀಪಿದರೆ, ವಯಸ್ಸಾದರೂ ಹಾಸಿಗೆಯಲ್ಲಿ ಜಲಬಾಧೆ ಮಾಡಿಕೊಂಡರೆ ಇವೆಲ್ಲ ಯಾವುದೋ ಮೂಲ ಕಾರಣದಿಂದಾಗಿ ಉಂಟಾಗುತ್ತವೆ. ಇವು ಮಾನಸಿಕ ಅನಾರೋಗ್ಯವನ್ನು ಉಂಟುಮಾಡುವ ಸಂಭವವಿದ್ದರೂ ಅದನ್ನು ಚಿಗುರಿನಲ್ಲೇ ಚಿವುಟಿ ಹಾಕಿ ಮಕ್ಕಳನ್ನು ಸಾಧಾರಣ ಮಕ್ಕಳಂತೆ ಹಾದಿಗೆ ತರಬಹುದು. ಅಥವಾ ಅದನ್ನೇ ಅತಿಯಾಗಿ ಎಣಿಸಿ ವಿಚಿತ್ರ ಮಕ್ಕಳನ್ನಾಗಿಯೂ ಮಾಡಬಹುದು. ಆದುದರಿಂದ ಸೂಕ್ಷ್ಮಮತಿಗಳಾದ ಮಕ್ಕಳನ್ನು ಅವರ ಮನಸ್ಸಿಗೆ ನೋವಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಮಕ್ಕಳ ಮಾನಸಿಕ ಅನಾರೋಗ್ಯಗಳನ್ನು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು.

೧. ನರವ್ಯಾಧಿ (Neurosis)

೨. ಮನೋವಿಕಾರ ಬುದ್ಧಿ ವಿಕಲತೆ (Psychosis)

೩. ಜೈವಿಕ ಮನೋರೋಗಗಳು (Organic mental illness)

ಮೇಲ್ಕಂಡ ರೋಗಗಳಲ್ಲಿ ಕೆಳಗೆ ಕಾಣಿಸಿದ ಕಾಯಿಲೆಗಳು ಸೇರಿವೆ.

೧. ನರವ್ಯಾಧಿ (Neurosis)

i) ಅತೀ ಕುತೂಹಲ ಕಳವಳ (anxiety)

ii) ಉನ್ಮಾದ ರೋಗ, ಇಂದ್ರಿಯ ಸುಪ್ತಿ (Hysteria)

iii) ಮುಚ್ಚುಗೀಳು (Obsessive compulsive neurosis)

iv) ಬಾಲಾಪರಾಧತೆ (delinquency)

೨. ಮನೋವಿಕಾರ ಬುದ್ಧಿ ವಿಕಲತೆ (Psychosis)

i) ತನು ಕೇಂದ್ರಿತ ಮಗು

ii) ಒಡಕು ಮನ (Schizophrenia)

iii) ಉನ್ಮಾದ ಖಿನ್ನತಾ ಮನೋರೋಗ (Maniac depressive psychosis)

iv) ಬುದ್ಧಿ ಸ್ಥಿಮಿತದಲ್ಲಿರದಿರುವಿಕೆ (Psychopaths)

v) ಶಾರೀರಿಕ ಮನೋಬೇನೆ (Psychosomatic disorders) ತಲೆನೋವು, ಎದೆ ಬಡಿತ, ಹೊಟ್ಟೆನೋವು ಇತ್ಯಾದಿ.

೩. ಜೈವಿಕ ಮನೋರೋಗಗಳು (Organic mental illness).

i) ಕಡು ಚಲನೆ

ii) ಮಾನಸಿಕ ಕ್ರಿಯೆಯಿಂದ ಚಲನೆಯನ್ನುಂಟುಮಾಡುವ ಮಲರೋಗ (Psychosmotor epilepsy)

iii) ಮೆದುಳಿನ ಗಡ್ಡೆ, ಪಡಿಗ್ರಂಥಿ (Brain tumour)

iv) ಕಿರುತಲೆ, ನೀರತಲೆ (Hydrocephalus)

v) ಹೆಡ್ಡತನ (Cretinism)

vi) ಮೆದುಳು (ಪೊರೆ) ಉರಿತ ಜ್ವರೋತ್ತರ ವರ್ತನೆ ಬೇನೆ (Postencephalitic behaviour disorder)

vii) ಫಿನೈಲ್ ಕೀಟೋನ ಯೂರಿಯಾ ರೋಗ

ನರವ್ಯಾಧಿ ಕಳವಳ (Neurosis anxiety)

ಮಕ್ಕಳಲ್ಲಿ ಹೆದರಿಕೆ ಮತ್ತು ಕಳವಳ ತೀರಾ ಸಾಮಾನ್ಯ. ಚಿಕ್ಕ ಮಕ್ಕಳಾಗಿರುವಾಗ ಅವರು ಹೆದರಿಕೆ ಮತ್ತು ಕಳವಳವನ್ನು ನಾನಾರೀತಿಯಲ್ಲಿ ತೋರಿಸುತ್ತಾರೆ. ಉಸಿರು ಕಟ್ಟುವದು. ಹಟಹಿಡಿಯುವುದು, ರಾತ್ರಿವೇಳೆ ದಿಢೀರನೆ ಕಿರುಚಿಕೊಂಡು ಎಚ್ಚರಗೊಳ್ಳುವುದು ಇವೆಲ್ಲ ಕಳವಳದ ನಾನಾರೂಪ. ಅತಿಯಾಗಿ ಹೆದರಿದಾಗ ಮಗುವಿನ ಮುಖ ಕೆಂಪಾಗಿ ಬಿಡುತ್ತದೆ. ಹೆದರಿ, ಗಾಬರಿಯಿಂದ ಮಕ್ಕಳು ತಾಯಿಯನ್ನು ಅಪ್ಪಿಕೊಳ್ಳುತ್ತಾರೆ. ಅವರಿಗೆ ಕೂಡಲೇ ರಕ್ಷಣೆ ಬೇಕಾಗುತ್ತದೆ. ಕೆಲಮಕ್ಕಳು ಗಂಟಲಿನಲ್ಲಿ ಒತ್ತುತ್ತದೆ, ಎದೆನೋಯುತ್ತದೆ, ಕಿವಿ ಬಿಸಿಯಾಗುತ್ತದೆ, ಉಸಿರು ಬಿಡಲು ಕಷ್ಟ. ಹೊಟ್ಟೆನೋವು. ವಾಂತಿ, ತಲೆಸುತ್ತುತ್ತದೆ. ಮೈಕೈ ನೋವು ಎಂದು ತಮ್ಮ ಮನಸ್ಸಿನ ವೇದನೆ

ಗಳನ್ನು ತಮ್ಮ ದೇಹದ ಮೂಲಕ ವ್ಯಕ್ತಪಡಿಸುತ್ತಾರೆ. ಮಕ್ಕಳಿಗೆ ಆಹಾರ, ರಕ್ಷಣೆ, ಪ್ರೀತಿಗಳಲ್ಲಿ ಯಾವುದೇ ಕೊರತೆ ಉಂಟಾದರೂ ಅವರು ಅದನ್ನು ನೇರವಾಗಿ ವ್ಯಕ್ತಪಡಿಸದೆ ಮೇಲ್ಕಂಡ ಅನಾರೋಗ್ಯ ರೂಪದಲ್ಲಿ ವ್ಯಕ್ತಪಡಿಸುತ್ತಾರೆ. ಒಮ್ಮೆ ಒಂದು ಮಗುವಿಗೆ ಉಸಿರುಬಿಡಲು ಕಷ್ಟವೆಂದು ಒಬ್ಬ ವೈದ್ಯರಿಗೆ ತೋರಿಸಲಾಗಿ ಅವರು ಮಗುವಿಗೆ ಹೃದಯ ದುರ್ಬಲತೆ ಆಗಿದೆ ಎಂದು ಡಿಜಿಟಾಲಿಸ್-Digitalis ಎಂಬ ಔಷಧಿ ಕೊಟ್ಟರು. ಮಗುವಿಗೆ ಔಷಧಿಯಿಂದಾಗಿ ವಿಷ ಏರಿ ಆಸ್ಪತ್ರೆಗೆ ಸೇರಿಸಲಾಯಿತು. ಆ ಮಗುವಿಗೆ ಮೂರ್ಛೆಯಿಂದ ಮೊದಲುಗೊಂಡು ತಲೆಯಲ್ಲಿ ಗಡ್ಡೆಯಿರಬಹುದೆಂಬ ಶಂಕೆಯಿಂದ ಎಲ್ಲಾ ಪರೀಕ್ಷೆ ನಡೆಯಿಸಲಾಯಿತು. ಕಡೆಗೆ ಅಪೆಂಡಿಸೈಟಿಸ್ (appendicitis)ಎಂದು ಶಸ್ತ್ರ ಚಿಕಿತ್ಸೆಯೂ ಆಯಿತು. ನಂತರ ಗಂಟಲು (Tonsils) ಶಸ್ತ್ರಚಿಕಿತ್ಸೆಯೂ ಆಯಿತು. ಮಗು ಉತ್ತಮಗೊಳ್ಳಲಿಲ್ಲ. ಕಡೆಗೆ ಥೈರಾಯ್ಡ್ ಗ್ರಂಥಿ– Thyroid ಕಡಿಮೆ ಇದೆಯೆಂದು ಅದಕ್ಕೆ ಔಷಧೋಪಚಾರವಾಗಬೇಕೆಂದರು. ಮನೆಯವರು ಗಾಬರಿಯಾಗಿ ಅವರಿಗೆ ದಿಕ್ಕು ತೋಚದಾಯಿತು. ಮಗುವಿನ ಅಣ್ಣ ಆ ಮಗುವನ್ನು ಆ ಊರಿನಿಂದಲೇ ಬೇರೆಕಡೆಗೆ ಒಯ್ದು ಸಾಕಲಾರಂಭಿಸಿದ. ಮೊದಲು ಶಂಕಿಸಲಾದ ಎಲ್ಲಾ ಕಾಯಿಲೆಗಳೂ ಮಾಯವಾದವು. ಕೂಲಂಕುಷವಾಗಿ ಪರಿಶೀಲಿಸಿದಾಗ ಮಗುವಿಗೆ ತನ್ನ ಮನೆಯ ವಾತಾವರಣವೇ ಸರಿಯಿರಲಿಲ್ಲ ಎಂಬ ಅಂಶ ತಿಳಿಯಿತು. ಆ ಮಗುವಿಗೆ ಬೇರೆ ಹೊಸ ವಾತಾವರಣ ಬೇಕಿತ್ತು. ಚಿಕಿತ್ಸೆ ಕೇವಲ ಧೈರ್ಯ, ನಂಬಿಕೆ, ಉತ್ಸಾಹ ಮಾತ್ರವಾಗಿತ್ತು.

ಕೆಲಮಕ್ಕಳಿಗೆ ತಾಯಿಯನ್ನು ಬಿಟ್ಟಿರಲು ಆಗುವುದಿಲ್ಲ. ಅಂಥ ಮಕ್ಕಳು ಕಳವಳದಿಂದ ಸಂಕಟ ಪಡುತ್ತಾರೆ. ಶಾಲೆಗೆ ಹೋಗಲು ಇಷ್ಟಪಡುವುದಿಲ್ಲ. ತಾಯಿಯ ಹಿಂದೆಯೇ ಸೆರಗು ಹಿಡಿದು ಮನೆಯಲ್ಲಿ ನೆರಳಿನಂತೆ ಸದಾ ಓಡಾಡುತ್ತಾರೆ. ತಾಯಿಗಾದರೂ ಇದರಿಂದ ಒಳಗೇ ಸಂತೋಷ ಉಂಟಾಗುತ್ತದೆ. ಹೀಗೆ ಮಗುವು ತಾಯಿಗೆ ವಿಪರೀತ ಅಂಟಿಕೊಳ್ಳುವಂತೆ ಆಗಿ "ಶಾಲೆಯ ಅಂಜಿಕೆ" (School phobia) ಇನ್ನೂ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಕೆಲವು ತಾಯಂದಿರು ಪದೇ ಪದೇ ಮಗುವಿಗೆ ಹುಷಾರಿಲ್ಲ ಎಂದೊ, "ಇವತ್ತು ಶಾಲೆಗೆ ಬೇಡ ಶೀತ", "ಹೊರಗೆ ಚಳಿ", "ಬಿಸಿಲು", "ನೆಂಟರು ಬಂದಿದ್ದಾರೆ" ಎಂದೋ ಆಗಾಗ್ಗೆ ರಜಕ್ಕೆ ಅಥವಾ ಸುಳ್ಳು ರಜಕ್ಕೆ ಪ್ರೋತ್ಸಾಹಿಸುತ್ತಿದ್ದರೆ, ಮಗು ಶಾಲೆಯಲ್ಲಿನ ಆಸಕ್ತಿಯನ್ನು ಸಂಪೂರ್ಣ ಕಳೆದುಕೊಳ್ಳುತ್ತದೆ. ಅದು, ಇದು ಆಸೆ ತೋರಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವುದೂ ತಪ್ಪು, ಶಾಲೆಯನ್ನೇ ಆಕರ್ಷಣೀಯ ಭಾಗವನ್ನಾಗಿ ಪರಿಗಣಿಸಬೇಕು. "Spare the rod, Spoil the Child" ಎಂಬಂತೆ ಒಮ್ಮೊಮ್ಮೆ ಕೋಮಲ ಹೃದಯದ ಬದಲು ಕೋಲಿನ ಪ್ರಯೋಗವೂ ಬೇಕಾಗಬಹುದು.

ಮಕ್ಕಳಿಗೆ ದುಃಖವಾದಾಗ ಅದನ್ನು ಅವರು ಅಳುವಿನಿಂದಲೇ ವ್ಯಕ್ತಪಡಿಸಬೇಕೆಂದಿಲ್ಲ. ತಮ್ಮ ಯಾವುದಾದರೂ ಭಾಗದಿಂದ, ಅಥವಾ ಅದರ ಮೂಲಕ ತೋರ್ಪಡಿಸು

ತ್ತಾರೆ: ತಲೆನೋವು, ಬೆನ್ನುನೋವು, ತಲೆಸುತ್ತುವಿಕೆ, ಹೊಟ್ಟೆನೋವು, ಕಾಲುನೋವು; ಭೇದಿ ಇವೇ ಮುಂತಾದವುಗಳಲ್ಲದೇ ದೊಡ್ಡವರು ದಿನನಿತ್ಯ ಹೇಳುವ ಅನೇಕ ಕಾಯಿಲೆಗಳನ್ನು ಅನುಕರಣೆ ಮಾಡುತ್ತಾರೆ. ಬೇಸರ, ಅಶಾಂತಿ, ಅತೀ ಶಿಕ್ಷೆ, ಒಂಟಿತನ, ಆಟವಾಡಲು ಸರಿಯಾದ ಜಾಗವಿಲ್ಲದಿರುವಿಕೆ, ಭಯ, ಶಾಲೆಯಲ್ಲಿನ ಕಠಿಣ ಪಾಠಕ್ರಮ, ತಂದೆ ತಾಯಿಗಳ ವೈಮನಸ್ಸು, ತಂದೆ ತಾಯಿಗಳು ಸದಾ ಮಗುವನ್ನು ಪೀಡಿಸುತ್ತಿದ್ದರೆ ಮಕ್ಕಳಿಗೆ ಮೈಮನಸ್ಸಿನ ಕಾಯಿಲೆಗಳು ಹೆಚ್ಚಾಗುತ್ತವೆ. ಅವರಿಗೆ ಈ ಚಿಂತೆಯಲ್ಲಿ ಪಾಠ ಪ್ರವಚನಗಳು ತಲೆಗೆ ನಾಟದೇ ಶಾಲೆಯಲ್ಲಿ ನಪಾಸಾಗಬಹುದು. ಅವರ ಮಾನಸಿಕ ಸಮಸ್ಯೆ ಪರಿಹಾರವಾಗದಿದ್ದರೆ ಮಕ್ಕಳು "ದವಾಖಾನೆಯ ಪಕ್ಷಿ" (Hospital Bird) ಗಳಾಗುತ್ತಾರೆ. ಯಾವ ಔಷಧೋಪಚಾರ ಇದಕ್ಕೆ ಬೇಕಿಲ್ಲ. ಮಕ್ಕಳಿಗೆ ಈ ಮೈಮನಸ್ಸಿನ ಬೇನೆ ಬಾರದಂತೆ ಹಿರಿಯರೇ ಎಚ್ಚರದಿಂದ ನಡೆದುಕೊಳ್ಳಬೇಕು.

ಗೀಳುಕಾಯಿಲೆ (obsession) ಅಪರೂಪವಾದರೂ ಒಮ್ಮೊಮ್ಮೆ ಅದರ ಸೂಕ್ಷ್ಮತೆ ಮಕ್ಕಳಲ್ಲೇ ಕಾಣುತ್ತದೆ. ಪದೇಪದೇ ಬೇಡದ ಯೋಚನೆ ತಲೆಯಲ್ಲಿ ಬಂದು ಮಕ್ಕಳನ್ನು ವ್ಯಾಕುಲತೆಗೆ ಈಡುಮಾಡುತ್ತದೆ. ಮನೆಪಾಠಪ್ರವಚನ (Home work) ಸರಿಯಾಗಿ ಮಾಡಿದ್ದೇನೋ ಇಲ್ಲವೋ, ಪುಸ್ತಕಗಳನ್ನು ಓರಣವಾಗಿ ಇಟ್ಟಿದ್ದೇನೋ ಇಲ್ಲವೋ ಎಂದು ಅವರು ಪದೇಪದೇ ಯೋಚಿಸುತ್ತಾರೆ. ಹಾಗೆ ಯೋಚಿಸುವುದು ಮಾತ್ರವಲ್ಲದೇ ಆಗಾಗ್ಗೆ ಹೋಗಿ ಅದನ್ನು ಪರೀಕ್ಷಿಸಿಯೂ ಬರುತ್ತಾರೆ. ಅವರಿಗೆ ಈ ಗೀಳು ಸರಿಯಲ್ಲವೆಂದು ತಿಳಿದರೂ ಪದೇಪದೇ ಹಾಗೆ ಮಾಡದಿದ್ದರೆ ಅವರಿಗೆ ಸಮಾಧಾನವಾಗುವುದಿಲ್ಲ. ಈ ಬಲವಂತದ ವಿಚಿತ್ರ ಯೋಚನೆ ಮಾಡಿದ್ದನ್ನೇ ಮತ್ತೆ ಮಾಡಿಸುತ್ತದೆ. ಎತ್ತರದ ಜಾಗದಲ್ಲಿ ನಿಲ್ಲಲು ಭಯ, ಯಾವ ಕೆಲಸವಾದರೂ ಇದು ಅಚ್ಚುಕಟ್ಟಾಗಬೇಕು ಮತ್ತು ಶಾಲೆಗೆ ಹೋಗುವಾಗ ದಾರಿಯಲ್ಲಿ ಸಿಗುವ ಎಲ್ಲಾ ಕಂಬಗಳನ್ನೂ, ಮರಗಳನ್ನೂ ಮುಟ್ಟಿಹೋಗುವುದನ್ನು ಅಭ್ಯಾಸಮಾಡಿಕೊಂಡುಬಿಡುತ್ತಾರೆ. ಇದು ಒಮ್ಮೊಮ್ಮೆ ಆನುವಂಶಿಕವಾಗಿಯೂ ಇರಬಹುದು. ಒಮ್ಮೊಮ್ಮೆ ಮಕ್ಕಳಲ್ಲಿ ಇದು ಸೂಕ್ಷ್ಮ ರೀತಿಯಲ್ಲಿ ಕಾಣಿಸಿಕೊಂಡು ನಂತರ ಹೇಳಹೆಸರಿಲ್ಲದಂತೆ ಹೋಗಬಹುದು. ಅಪರೂಪವಾಗಿ ಅದೇ ಅವರು ದೊಡ್ಡವರಾದನಂತರ ಮರುಕಳಿಸಬಹುದು. ಈ ಗೀಳು ಅಥವಾ ಚಟವನ್ನು ಬಿಡಿಸಬೇಕಾದರೆ ಅನೇಕ ರೀತಿಯ ಚಿಕಿತ್ಸೆಗಳು ಅವಶ್ಯಕ: ಮನೋವಿಶ್ಲೇಷಣೆ (Phyco-analysis) ನಡೆಸಿ ಗೀಳನ್ನು ಕ್ರಮತಪ್ಪಿಸಿ (deconditioning) ಬಿಡಿಸಬೇಕಾಗಿದೆ.

ಹಿಸ್ಟೀರಿಯಾ

ಈ ಕಾಯಿಲೆ ನಾನಾ ರೀತಿಯಲ್ಲಿ ವ್ಯಕ್ತಪಡುತ್ತದೆ: ಹಿಸ್ಟೀರಿಯಾ ವ್ಯಕ್ತಿತ್ವದ ಮಕ್ಕಳು ಸೂಕ್ಷ್ಮಮತಿಗಳಾಗಿರುತ್ತಾರೆ. ಕೆಲವು ವಿಶಿಷ್ಟ ಗುಣಗಳು ಅವರಲ್ಲಿ ಎದ್ದು

ಕಾಣುತ್ತದೆ. ವಿಪರೀತ ಭಕ್ತಿ, ಗಾಂಭೀರ್ಯ, ಕರುಣೆ, ಸಹಾನುಭೂತಿ ಈ ಪಾತ್ರಗಳಲ್ಲಿ ಸಾಮಾನ್ಯ. ಇದರಿಂದ ಇತರರ ಗಮನವನ್ನು ತಮ್ಮೆಡೆಗೆ ಸೆಳೆಯುವ ಶಕ್ತಿ ಅವರಲ್ಲಿರುತ್ತದೆ. ಪ್ರೀತಿ, ದ್ವೇಷ, ಕೋಪ, ನೋವು, ಭಯ, ಪಶ್ಚಾತ್ತಾಪವನ್ನು ಅವರು ಅತೀ ನಾಟಕೀಯವಾಗಿ ವ್ಯಕ್ತಪಡಿಸುತ್ತಾರೆ. ತಮ್ಮ ಕಾಯಿಲೆಯ ವಿಚಾರದ ಬಗ್ಗೆ ಅವರಿಗೆ ಚಿಂತೆಯೇ ಇರುವುದಿಲ್ಲ. ಇದನ್ನು "Pelly indifference" ಎಂದು ಹೇಳುತ್ತಾರೆ. ಉದಾಹರಣೆಗೆ, ಒಂದು ರೋಗಿಗೆ ಪಾರ್ಶ್ವವಾಯು ಬಂದು ಲಕ್ವ ಹೊಡೆದಿದೆ ಎಂದು ಇಟ್ಟುಕೊಳ್ಳೋಣ. ರೋಗಿಗೆ, "ಅಯ್ಯೋ, ನನಗೆ ಲಕ್ವ ಹೊಡೆದಿದೆ ಮುಂದೇನು ಗತಿ" ಎಂಬ ಯೋಚನೆ ಕಿಂಚಿತ್ತೂ ಇಲ್ಲದಿರುವುದೇ ಈ ರೋಗದ ವೈಶಿಷ್ಟ್ಯ. ಕುರುಡಾದರೂ ಚಿಂತೆ ಬೇರೆಯವರಿಗೆ. ಬಹಳ ಭಯವಾದರೂ ಇವರು ಸ್ಥಿತಪ್ರಜ್ಞರಾಗಿರುತ್ತಾರೆ.

ಚರ್ಮದ ಮೂಲಕ ಅರಿವು ಅಂದರೆ ಮುಟ್ಟಿದರೆ ನೋವು, ಕೇಳುವ ಧ್ವನಿ, ನಾಲಿಗೆಯ ರುಚಿ ಮತ್ತು ಮೂಗಿನ ವಾಸನೆ, ಕಣ್ಣಿನ ದೃಷ್ಟಿ ಇವು ಮಾಯವಾಗಬಹುದು. ಇದು ಧಿಡೀರನೆ ಶುರುವಾಗುವುದೇ ಇದರ ವೈಶಿಷ್ಟ್ಯ; ಹಾಗೆಯೇ ಅದು ಕೂಡಲೇ ವಾಸಿಯೂ ಆಗಬಹುದು. ಯಾವ ನರಗಳಿಗೂ ಸಂಬಂಧವಿಲ್ಲದೇ ದೇಹದ ಯಾವುದೋ ಭಾಗದಲ್ಲಿಯಾದರೂ ಕಾಣಬರುತ್ತದೆ ಮತ್ತು ಲಕ್ವದಿಂದ ಮಾಂಸಖಂಡಗಳ ಸವೆತ ಮತ್ತು ಕ್ಷೀಣತೆಗಳೂ ಕಾಣಬರುವುದಿಲ್ಲ. ಸ್ವಲ್ಪ ಮುಟ್ಟಿದರೆ ಅತೀ ನೋವೆಂದು ಕಿರುಚುತ್ತಾರೆ. ಅಥವಾ ಎಷ್ಟು ಆಳವಾಗಿ ಚುಚ್ಚಿದರೂ ನೋವೇ ಆಗುವುದಿಲ್ಲವೆಂದು ಹೇಳಬಹುದು.

ಹಿಸ್ಟೀರಿಯಾ ರೋಗದಲ್ಲಿ ಇದ್ದಕ್ಕಿದ್ದಹಾಗೆ ಕಣ್ಣಿನ ದೃಷ್ಟಿಯೇ ಹೋಗಿಬಿಡಬಹುದು. ಅಥವಾ ಒಂದು ವಸ್ತು ಎರಡಾಗಿಯೋ, ನಾಲ್ಕಾಗಿಯೋ ಕಾಣಬಹುದು. ಅತೀಸಣ್ಣದಾಗಿ ಕಾಣುವುದು, ಅತೀ ದಪ್ಪವಾಗಿ ಕಾಣುವುದು, ಬಣ್ಣಗಳನ್ನು ಗುರುತಿಸಲು ಸಾಧ್ಯವಾಗದೇ ಹೋಗುವುದು ಇನ್ನೂ ಅನೇಕ ವಿಚಿತ್ರ ರೀತಿಯ ಅನುಭವಗಳಾಗಬಹುದು. ಕಣ್ಣಿನ ಒಳಭಾಗವನ್ನು ನೇತ್ರದರ್ಶಕಯಂತ್ರ (Opthalmoscope)ದ ಸಹಾಯದಿಂದ ನೋಡಿದರೆ ಒಳಗೆ ಯಾವ ದೋಷವೂ ಕಾಣಬರುವುದಿಲ್ಲ. ಅವರು ನಿದ್ರೆ ಮಾಡುವಾಗ ಧಿಡೀರನೆ ಎಬ್ಬಿಸಿದರೆ ಕಣ್ಣಿನ ದೃಷ್ಟಿ ಸಾಧಾರಣವಾಗಿಯೇ ಇರುತ್ತದೆ. ಒಮ್ಮೊಮ್ಮೆ ನೋವು ಕಣ್ಣಿನಿಂದ ಮೈಗೆ ಇಳಿಯಬಹುದು. ಎಷ್ಟು ಮುಟ್ಟಿದರೂ ನೋವಾಗುವುದಿಲ್ಲ. ಇದು ಅಂತಹದೇ ನರದ ಹಾದಿಯನ್ನು ಅನುಸರಿಸುವುದು ಎಂದು ಹೇಳಲಾಗದು. ನಿದ್ರೆ ಮಾಡುತ್ತಿರುವಾಗ ಮುಟ್ಟಿದರೆ ನೋವೆಂದು ಕಿರುಚಿಕೊಳ್ಳಬಹುದು. ನಾನಾ ತರಹದ ವಿಚಿತ್ರ ಅನುಭವ ಅವರದು. ಸ್ವಲ್ಪ ಮುಟ್ಟಿದರೆ ಜಾಸ್ತಿ ನೋವು, ಜಾಸ್ತಿ ಮುಟ್ಟಿದರೆ ಕಡಿಮೆ ನೋವು, ಮುಟ್ಟದಿದ್ದರೂ ವಿಪರೀತ ನೋವು ಕಾಣಬಹುದು. ಅದು ಅನೇಕರೀತಿಯಲ್ಲಿ ವ್ಯಕ್ತಗೊಂಡಿರುತ್ತದೆ. ಇದು ದೈಹಿಕ ಮನೋರೋಗದಲ್ಲಿ ಸಾಧ್ಯವಿಲ್ಲ.

ಹಿಸ್ಟೀರಿಯಾದ ಕಿವುಡಿನ ವೈವಿಧ್ಯತೆಯೂ ಹೀಗೆಯೇ: "ಅರ್ಧ ಕಿವುಡು", "ಕೆಲ ವಿಚಾರದಲ್ಲಿ ಮಾತ್ರ ಕಿವುಡು", "ಕೆಲವರ ಮಾತಿಗೆ ಮಾತ್ರ ಕಿವುಡು" ಕಾಣಬರುತ್ತವೆ. ಇದನ್ನು ಜಾಣ ಕಿವುಡೆಂದು ಕೆಲವರು ಹೇಳುವುದುಂಟು.

ರುಚಿ ಮತ್ತು ವಾಸನೆಯ ಅಡಚಣೆಗಳು ಈ ರೋಗದ ಮಕ್ಕಳಲ್ಲಿ ಕಡಿಮೆ. ಆದರೆ ದೇಹದ ಭಂಗಿಯಲ್ಲಿ ಅನೇಕ ವಿಚಿತ್ರ ವಿಧಾನದ ಭಂಗಿಯನ್ನು ತೋರಿಸುತ್ತಾರೆ. ಗೂನು, ಸೊಟ್ಟ ಮೈಮಾಟ, ಕತ್ತಿನ ಕೊಂಕು ಇವೇ ಮುಂತಾದ ವಿಚಿತ್ರ ಭಂಗಿಗಳು ಕಂಡುಬರುತ್ತವೆ. ಕೈಕಾಲು ನಡುಕ, ಜಗಿತ, ವಿಚಿತ್ರ ಚಲನೆ, ಸೊಟ್ಟ ನಡೆಯುವಿಕೆ, ಕಾಲುಗಳ ಬಲಹೀನತೆ, ಕಾಲುಗಳ ಜೋಮು, ಅಥವಾ ಒಂದೇ ಕಾಲಿನಲ್ಲಿ ನಿಶ್ಶಕ್ತಿ ಕಾಣಬಹುದು. ಪರೀಕ್ಷಿಸಿನೋಡಿದರೆ ಯಾವ ನರಗಳ ದೌರ್ಬಲ್ಯತೆಯೂ ಕಾಣಬರುವುದಿಲ್ಲ. ದೇಹದಲ್ಲಿ ಯಾವ ಮಾಂಸಖಂಡಗಳೂ ನಶಿಸಿರುವುದು ಕಾಣುವುದಿಲ್ಲ.

Astatic–abasic ಎಂಬ ಕಾಯಿಲೆಯಲ್ಲಿ ಮಕ್ಕಳು ಹಾಸಿಗೆಯಲ್ಲಿ ಮಲಗಿರುವಾಗ ಕೈಕಾಲುಗಳನ್ನು ಚೆನ್ನಾಗಿ ಚಲಿಸುತ್ತಾರೆ. ಆದರೆ ಅವರಿಗೆ ನಿಲ್ಲಲು ತ್ರಾಣವಿರುವುದಿಲ್ಲ. ನಿಲ್ಲಿಸಿದರೆ ಬಿದ್ದುಬಿಡುತ್ತಾರೆ. ಹಾಸಿಗೆ ಹಿಡಿದುಬಿಡುತ್ತಾರೆ. ಮಕ್ಕಳಲ್ಲಿ ಇದು ಸಾಮಾನ್ಯ.

ಧ್ವನಿಯೇ ಇಲ್ಲದಂತಾಗಿ ಇದ್ದಕ್ಕಿದ್ದ ಹಾಗೆ ಮೂಕರಾಗಬಹುದು. ಆದರೆ ಅವರಿಗೆ ಕೆಮ್ಮುವಾಗ, ಅಳುವಾಗ ಅಥವಾ ಹಾಡಲು ಯಾವ ಕಷ್ಟವೂ ಇರುವುದಿಲ್ಲ. ಇದನ್ನು ಯಾವುದೋ ಕಾಯಿಲೆ ಎಂದು ನಾನಾ ತರಹದ ಔಷಧೋಪಚಾರಗಳಿಂದ ಮಗುವು ಬಳಲಬಹುದು. ಮಗುವಿನ ಜಾಣತನದಲ್ಲಿ ಯಾವ ವಿಧವಾದ ಕುಂದೂ ಇರುವುದಿಲ್ಲ. ಮಕ್ಕಳು ಬರೆದು ಅಥವಾ ಸಂಜ್ಞೆಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸುವ ಶಕ್ತಿ ಇರುತ್ತದೆ. ಯಾವ ಅಂಗಾಂಗವೂ, ಅಂದರೆ ನಾಲಿಗೆ ಅಥವಾ ತುಟಿಯು ಪಾರ್ಶ್ವಆಘಾತ (paralysis) ಆಗಿರುವುದಿಲ್ಲ. ಉಸಿರೆಳೆದುಕೊಳ್ಳುವಾಗ ಧ್ವನಿತಂತುಗಳು (Vocal cords) ಪೂರ್ತಿ ಸಾಮಾನ್ಯಸ್ಥಿತಿಯಲ್ಲಿರುತ್ತವೆ (normal). ವಿಚಿತ್ರವಾದ ತೊದಲು(Stammering) ಮಾತಿದ್ದು ಅದು Hysteria ಎಂಬುದನ್ನು ಎತ್ತಿತೋರಿಸುತ್ತದೆ.

ಚೆಂಡಿನಾಕಾರದ ಉನ್ಮಾದತೆ (Glodus Hystericus) ಎಂಬ ಕಾಯಿಲೆಯಲ್ಲಿ ಹೊಟ್ಟೆ ಮತ್ತು ಅನ್ನನಾಳಗಳಿಂದ ಏನೋ ಒಂದು ಗಾಳಿಯ ಉಂಡೆಯಂತೆ ಒತ್ತಿಕೊಂಡು ಮೇಲಕ್ಕೆ ಬಂದಂತೆ, ಗಂಟಲಿನಲ್ಲಿ ಒತ್ತಿದಂತೆ ಸದಾ ಹಿಂಸೆಯಾಗುತ್ತದೆ. ಆದರೆ ವೈದ್ಯಕೀಯವಾಗಿ ಪರೀಕ್ಷಿಸಿನೋಡಿದಾಗ ಯಾವ ಕುಂದೂ ಇರುವುದಿಲ್ಲ. ನುಂಗಲಾರದ ತುತ್ತಿನಂತೆ ಯಾವುದೋ ಯೋಚನೆಯೇ ಇದಕ್ಕೆ ಕಾರಣ.

ಮಾನಸಿಕ ಕಾರಣದಿಂದಾಗಿ ಕೆಮ್ಮು ಬರಬಹುದು. ಇದನ್ನು ಉನ್ಮಾದತೆಯ ಕೆಮ್ಮು (Hysterical cough) ಎನ್ನುತ್ತಾರೆ. ಇತರರ ಗಮನವನ್ನು ತಮ್ಮ ಕಡೆಗೆ ಆಕರ್ಷಿಸಬೇಕಾದರೆ ಈ ರೋಗಿಗಳಿಗೆ ತಮಗರಿವಿಲ್ಲದೆಯೇ ಈ ಉನ್ಮಾದತೆಯ ಕೆಮ್ಮು ಬರಬಹುದು.

ವಿಪರೀತ ಜಲಬಾಧೆಯಾಗುವುದು, ಮಕ್ಕಳು ಆಹಾರ ತೆಗೆದುಕೊಳ್ಳುವುದರಲ್ಲಿ ತೊಂದರೆ ಕೊಡುವುದು ಅನೇಕವೇಳೆ ಹಿಸ್ಟೀರಿಯಾದ ಒಂದು ರೂಪವಾಗಿರುತ್ತದೆ.

ಹಿಸ್ಟೀರಿಯಾದ ಒಂದು ವೈಶಿಷ್ಟ್ಯವೆಂದರೆ ನಿದ್ರೆಯ ವೇಳೆ ಈ ರೋಗದ ಯಾವುದೇ ಲಕ್ಷಣಗಳು ಕಾಣದೇ ಮಾಯವಾಗುತ್ತವೆ. ಅಂದರೆ ಈ ರೋಗಿಗಳಲ್ಲಿ ನಿದ್ರೆಮಾಡುತ್ತಿರುವಾಗ, ಲಕ್ವಹೊಡೆದ ಕೈಕಾಲುಗಳು ಚಲಿಸುತ್ತವೆ. ಕುರುಡಾದ ಕಣ್ಣುಗಳು ತಟ್ಟನೆ ಎದ್ದಾಗ ಕಾಣಿಸುತ್ತವೆ. ಮಾತನಾಡಲು ಸಾಧ್ಯವಿಲ್ಲದವರು ತಟ್ಟನೆ ಮಾತನಾಡಿಬಿಡುತ್ತಾರೆ. ಹಿಸ್ಟೀರಿಯಾದಲ್ಲಿ ಮೂರ್ಛೆಯೂ ಬರುವದುಂಟು. ಆದರೆ ಜೈವಿಕ ಮನೋರೋಗದ ಮೂರ್ಛೆಯಂತೆ ಇಲ್ಲಿ ಪೂರ್ಣವಾಗಿ ಜ್ಞಾನತಪ್ಪುವುದಿಲ್ಲ. ಜ್ಞಾನ ತಪ್ಪಿದಂತೆ ನಟಿಸುತ್ತಾರೆ. ಆದರೆ ಅವರಿಗೆ ಆ ನಟನೆಯ ಅರಿವಿರುವುದಿಲ್ಲ. ನೋಡಿದವರಿಗೆ ಗಾಬರಿಯಾಗುವಂತೆ ಈ ಸೂಚನೆ ಕಂಡುಬಂದರೂ ಇದರಿಂದ ಪ್ರಾಣಾಪಾಯವಿಲ್ಲ. ಕಣ್ಣುರೆಪ್ಪೆಗಳನ್ನು ಅಗಲಿಸಿ ನೋಡಿದಾಗ ಬರಿಯ ಗುಡ್ಡೆಗಳು ಕಂಡು ಬರುತ್ತವೆ. ಪಾದಗಳಲ್ಲಿ ಬೆಬನ್ಸ್ಕಿನ ಪರೀಕ್ಷೆ (Babinski test) ಮಾಡಿದಾಗ ಪರಿಣಾಮ ನಕಾರಾತ್ಮಕವಾಗಿರುತ್ತದೆ. ಕೈಕಾಲು ದೇಹವನ್ನು ವಿಚಿತ್ರವಾಗಿ ಆಡಿಸಿ ನಕಲಿ ವ್ಯಾಮನಂತೆ ವಿಚಿತ್ರವಾದ ಆಕಾರಗಳನ್ನು ಈ ಮಕ್ಕಳು ವ್ಯಕ್ತಪಡಿಸಬಹುದು. ಇವರು ಅನೇಕ ಬಾರಿ ಮನೋಭ್ರಾಂತಿ (figue) ಎಂಬ ಸ್ಥಿತಿಯಲ್ಲಿ ತಮ್ಮನ್ನು ತಾವೇ ಮರೆತು ಎಲ್ಲಿಯೋ ಹೋಗಿಬಿಡುತ್ತಾರೆ. ಎಷ್ಟೋ ದಿನದ ನಂತರ ಜ್ಞಾಪಿಸಿಕೊಂಡು ವಾಪಸು ಬರುತ್ತಾರೆ. ನಿದ್ರೆಯಲ್ಲಿ ಎಚ್ಚೆತ್ತು ಮನೆಯ ನಾನಾಕಾರ್ಯಗಳನ್ನು ಮಾಡಿಟ್ಟು ಮತ್ತೆ ಮಲಗಿ ಎಚ್ಚೆತ್ತಾಗ ಅವನ್ನು ಯಾರು ಮಾಡಿದರೆಂಬ ಸಂಶಯ ಅವರಿಗೇ ಉಂಟಾಗುತ್ತದೆ. ಇವರು ತಾವೇ ಬೇರೊಬ್ಬ ವ್ಯಕ್ತಿಯಂತೆ ಮಾತನಾಡಿ ಅದಕ್ಕೆ ತಾವೇ ಉತ್ತರಕೊಟ್ಟುಕೊಳ್ಳುತ್ತಾರೆ. ಅಂದರೆ ಅವರಲ್ಲಿರುವ ಒಂದು ವ್ಯಕ್ತಿತ್ವ ಇನ್ನೊಂದು ವ್ಯಕ್ತಿಯೊಡನೆ ಮಾತನಾಡಿಕೊಳ್ಳುತ್ತದೆ. ಹೀಗೆ "ಅನೇಕ ವ್ಯಕ್ತಿತ್ವ" ಬಹಳ ರಲ್ಲೇ ಕಂಡು ಬರುತ್ತದೆ. ಇದನ್ನು "ಬಹುಮುಖಿ ವ್ಯಕ್ತಿತ್ವ" (Multiple personality) ಎನ್ನುತ್ತಾರೆ. ಅವರ ಒಂದೊಂದು ವ್ಯಕ್ತಿತ್ವವೂ ಬೇರೆ ಬೇರೆಯಾಗೇ ವರ್ತಿಸುತ್ತದೆ. ಒಂದು ವ್ಯಕ್ತಿತ್ವದ ವರ್ತನೆ ಮತ್ತೊಂದು ವ್ಯಕ್ತಿತ್ವಕ್ಕೆ ಅರಿವಿರುವುದಿಲ್ಲ. ಒಮ್ಮೊಮ್ಮೆ ಇಡೀ ಒಂದು ಮಕ್ಕಳ ಗುಂಪೇ ಇಂದ್ರಿಯ ಸುಪ್ತತೆ (Hysteria)ಯನ್ನು ತೋರಿಸಬಹುದು. ಒಂದು ಮಗುವಿಗೆ ವಿಚಿತ್ರ ವ್ಯಕ್ತಿತ್ವ ಕಂಡುಬಂದರೆ ಎಲ್ಲಾ ಮಕ್ಕಳೂ

ಅದೇ ರೀತಿ ಮಾಡಿ ವಿಜ್ಞಾನಿಗಳಿಗೆ ಇದಾವ ಸಾಂಕ್ರಾಮಿಕ ರೋಗವೆಂದು ಗಾಬರಿ ಹಿಡಿಸಿದ ಸಂದರ್ಭಗಳೂ ಎಷ್ಟೋ.

ಬಾಲಾಪರಾಧ (Delinquency) : ಕಳ್ಳತನ, ಜೂಜು, ಸುಳ್ಳು ಹೇಳುವುದು, ದರೋಡೆ, ಶಾಲೆತಪ್ಪಿಸುವುದು, ಸಿಕ್ಕಲ್ಲಿಗೆ ಬೆಂಕಿ ಹಚ್ಚುವುದು ಮುಂತಾದ ಕೃತ್ಯಗಳಲ್ಲಿ ಕೆಲ ಮಕ್ಕಳಿಗೆ ಅತಿಯಾದ ಸಂತೋಷ ಉಂಟಾಗುತ್ತದೆ. ಅವರಿಗೆ ಇದರಲ್ಲಿ ಅವಮಾನವಿಲ್ಲ. ನಾಚಿಕೆ ಪಶ್ಚಾತ್ತಾಪ ಎಳ್ಳಷ್ಟೂ ಇರುವುದಿಲ್ಲ. ಇವರಿಗೆ ಜಾಣತನ ಸಾಕಷ್ಟಿದ್ದರೂ ಈ ಮೇಲಿನ ಕೆಲಸಗಳನ್ನು ಪದೇ ಪದೇ ಮಾಡುತ್ತಾರೆ. ಇವರು ಯಾವ ಶಿಕ್ಷೆಗೂ ಹೆದರುವದಿಲ್ಲ. ಬೀಡಿ ಸೇದುವದು, ಹೆಂಡ ಕುಡಿಯುವುದು, ಲೈಂಗಿಕ ಆಸಕ್ತಿ ಇವೆಲ್ಲಾ ಇವರಲ್ಲಿ ಮನೆಮಾಡಿಕೊಂಡಿರುತ್ತವೆ. ಈ ಸಮಾಜ ವಿರೋಧಿ ಕೃತ್ಯಗಳು ಅವರ ವ್ಯಕ್ತಿತ್ವದಲ್ಲಿ ಮೂಡಿ ಬಂದಿರುತ್ತವೆ. ಕಾನೂನಿಗೆ ವಿರೋಧವಾಗಿ ನಡೆಯುವುದೇ ಇವರ ಧ್ಯೇಯ. ಇವರು ದೊಡ್ಡವರಾಗುತ್ತಾ ಬಂದಂತೆ ದರೋಡೆಗಳನ್ನು ಕೇವಲ ಖುಷಿಗಾಗಿಯೇ ಮಾಡುವ ಹವ್ಯಾಸ ಇವರಲ್ಲಿ ಬೆಳೆಯುತ್ತದೆ. ಬೇರೆಯವರಿಗೆ ಪ್ರಾಣಭಯವನ್ನು ತೋರಿಸಿ ಅವರನ್ನು ತಮ್ಮ ಪಂಗಡಕ್ಕೆ ಸೇರಿಸಿಕೊಳ್ಳುವುದಲ್ಲದೇ, ಅವರನ್ನೂ ತಪ್ಪುದಾರಿಗೆ ಎಳೆಯುತ್ತಾರೆ. ಸಮಾಜಕ್ಕೆ ಘಾತಕರ ಕಂಟಕ ಪ್ರಾಯ ವ್ಯಕ್ತಿಗಳಾಗುವುದಲ್ಲದೇ, ನ್ಯಾಯಪಾಲಕರಿಗೂ ಸವಾಲಾಗುತ್ತಾರೆ. ಇತರರಲ್ಲಿ ಮಾತು ಹಾಗಿರಲಿ ಇವರಿಗೆ ತಮ್ಮವರಲ್ಲಿಯೇ ಪ್ರೀತಿ, ವಾತ್ಸಲ್ಯ ಭಾವನೆ ಮತ್ತು ಕರುಣೆ ಇರುವುದಿಲ್ಲ. ತಮ್ಮ ಸುಖ ಮಾತ್ರ ಅವರ ಧ್ಯೇಯ. ಇವರನ್ನು ಹುಚ್ಚರಾಸ್ಪತ್ರೆಗೆ ಸೇರಿಸುವಷ್ಟು ಹುಚ್ಚು ಇವರಿಗೆ ಇರುವುದಿಲ್ಲ. ಅಥವಾ ಸಮಾಜದಲ್ಲಿಟ್ಟುಕೊಳ್ಳುವಷ್ಟು ಸಾಧಾರಣ ಮನುಷ್ಯರೂ ಆಗಿರುವುದಿಲ್ಲ. ಹೀಗಾಗಿ ಇವರು ಸಮಸ್ಯೆಯ ಮಕ್ಕಳಾಗುತ್ತಾರೆ. ಇದೊಂದು ಹುಚ್ಚೇ ಅಥವಾ ಮೆದುಳಿನಲ್ಲಿ— ಮೆದುಳಿನ ಜ್ವರ, ಮೂರ್ಛೆ ಮತ್ತಿತರ ರೋಗದಿಂದಾದ ಪರಿಣಾಮವೋ ತಿಳಿಯದು. ಈ ಕಠಿಣ ವ್ಯಕ್ತಿತ್ವ ಯಾವ ಚಿಕಿತ್ಸೆಗೂ ಜಗ್ಗುವುದಿಲ್ಲ. ಇದೊಂದು ಚಟವಾಗೇ ಉಳಿದುಬಿಡುತ್ತದೆ. ಯಾವ ಶಿಕ್ಷೆಯೂ ಇವರನ್ನು ದಾರಿಗೆ ತರುವುದಿಲ್ಲ. ಇವರಿಗಾಗಿಯೇ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತ್ಯೇಕ ಸಂಸ್ಥೆಗಳನ್ನು ಏರ್ಪಡಿಸಿ ಅಲ್ಲಿ ಇವರನ್ನು ರಕ್ಷಿಸುತ್ತಾರೆ ಮತ್ತು ಪುನರ್ವಸತಿ [Rehabilitation] ಮಾಡುತ್ತಾರೆ.

ವಿಜ್ಞಾನಿಗಳು ಈ ಕೊಲೆಪಾತಕರ, [illegible] ತಲೆ ಬುರುಡೆಯ ಅಳತೆ, ಮೆದುಳಿನ ತೂಕ ಅಳೆದು ತಪ್ಪಿತಸ್ಥರ ಸ್ವಭಾವವನ್ನು ಕಂಡುಹಿಡಿಯುವ ದಿಶೆಯಲ್ಲಿ ಸಂಶೋಧನೆಗಳೂ ವಿಫಲಗೊಂಡಿವೆ. ಪರಿಸರದ ಕಾರಣಗಳೆಷ್ಟು, ಅನುವಂಶೀಯ ಅಂಶವೆಷ್ಟು, ಅಥವಾ ದೇಹದಲ್ಲಿನ ಕುಂದು ಏನು?-ಎಂದು ನಿರ್ಧಾರಕ್ಕೆ ಬರಲಾಗಿಲ್ಲ. ಈ ತೊಡಕಿನ ಮಕ್ಕಳ ಸಂಸಾರದ ಅನೇಕ ಸಮಸ್ಯೆಗಳು ಗುಟ್ಟು, ಬಡತನ, ಮುರಿದ ಮನೆ

(Broken House) ಮುಂತಾದವುಗಳು ಅರ್ಧ ಕಾರಣವಾದರೆ ಮಿಕ್ಕ ಅರ್ಧ ಇನ್ನೂ ಬಿಡಿಸಲಾರದ ಸಮಸ್ಯೆಯಾಗಿದೆ.

ಈ ಮಕ್ಕಳ ಮನಸ್ಸನ್ನು ಅರಿತು ತಂದೆ ತಾಯಿಗಳೂ ನೆರೆಹೊರೆಯವರೂ, ಉಪಾಧ್ಯಾಯರೂ. ಸಮಾಜ ಸುಧಾರಕರೂ ಸೇರಿ ಇದಕ್ಕೆ ಪರಿಹಾರ ತೋರಿಸಬೇಕು. ಸರಿ ಮಾಡಲು ಸಾಧ್ಯವಿಲ್ಲದವರನ್ನು ವಿಶೇಷ ವಸತಿ ಗೃಹಗಳಲ್ಲಿಟ್ಟು ರಕ್ಷಿಸಬೇಕು. ಸಮಾಜದ ಶತ್ರುಗಳಾದರೂ ನಾವು ಅವರನ್ನೂ ಮಿತ್ರರಂತೆ ಹಾದಿಗೆ ತರಬೇಕು.

ಅವಿಧೇಯತೆ, ಸುಳ್ಳು ಹೇಳುವುದು. ಶಿಸ್ತಿಗೆ ವಿರುದ್ಧ ನಡೆಯುವುದು ಅನೇಕ ಮಕ್ಕಳ ಮೋಜು ಅರ್ಥವಿಲ್ಲದ ಶಿಸ್ತು ಕೆಲವೊಮ್ಮೆ ಮಕ್ಕಳನ್ನು ಈ ದಾರಿಗೆ ಎಳೆಯುತ್ತದೆ. ಏಕ ರೀತಿಯ ಶಿಸ್ತು ಅವರಿಗೆ ಅವಶ್ಯಕ. ಪ್ರೀತಿ ಆದರಗಳಿಂದ ಮಕ್ಕಳನ್ನು ತಿದ್ದಲು ಸಾಧ್ಯ. ಅವರ ಮನಸ್ಸನ್ನು ತಿಳಿದು ಹೀಗಾಗದಂತೆ ರಕ್ಷಿಸಬೇಕು.

ಸಣ್ಣ ಮಕ್ಕಳು ಸುಳ್ಳು ಹೇಳುವುದು ಅಪರೂಪ. ವಯಸ್ಸಾಗುತ್ತಾ ಬಂದಂತೆ ಅವರು ಅದನ್ನು ದೊಡ್ಡವರಿಂದ, ಪರಿಸರದಿಂದ ಕಲಿಯುತ್ತಾರೆ ಅಷ್ಟೇ. ಸಣ್ಣ ಸುಳ್ಳಿನಿಂದ ಹಿಡಿದು ದೊಡ್ಡ ಸುಳ್ಳಿನವರೆಗೆ ಅಭ್ಯಾಸ ಮಾಡಿಕೊಳ್ಳುತ್ತಾರೆ. ಬೇರೆಯವರಿಂದ ತನಗಾಗುವ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಸುಳ್ಳು ಹೇಳುವುದನ್ನು ಮೊದಲು ಕಲಿತುಕೊಳ್ಳಲು ತನ್ನ ಕಡೆ ಆಕರ್ಷಿಸಲು ಮತ್ತು ಬೇಟ್ಗೆ ಗಮನ ಕೊಡಲೆಂದು ಅದ್ಭುತವಾದ ಊಹಾಪೋಹದ ಸುಳ್ಳು. ಕಟ್ಟು ಕಥೆಯನ್ನು ನಿಜವೆಂದೇ ಸಾಧಿಸಿಬಿಡುತ್ತಾರೆ. ಹೀಗೆ ಒಂದು ಸುಳ್ಳನ್ನು ಮುಚ್ಚಲು ನೂರಾರು ಸುಳ್ಳು ಹೇಳಿ ಕಡೆಗೆ ಇವರು ನಂಬಲರ್ಹವಲ್ಲದ ವ್ಯಕ್ತಿಯಾಗಿ ಬಿಡುತ್ತಾರೆ.

ಕದಿಯುವುದು:

ಅಮೇರಿಕದಲ್ಲಿ ಇಂದಿಗೂ ೭೫ ಸಾವಿರ ಮಕ್ಕಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವ ಪಟ್ಟಿಯಿದೆಯಂತೆ. ಇವರೆಲ್ಲ ಸಣ್ಣ ಕಳ್ಳರ ಗುಂಪಿನವರು. ಇದಲ್ಲದೇ ಮನೆಗಳಲ್ಲಿ. ಶಾಲೆಗಳಲ್ಲಿ ಆಗುವ ಸಣ್ಣ ಪುಟ್ಟ ಕಳ್ಳತನ ನ್ಯಾಯಾಲಯದವರೆಗೂ ಬರುವುದಿಲ್ಲ. Pyromanic, ಅಂದರೆ ಬೆಂಕಿ ಹಚ್ಚುವುದು, Poriomanic, ಅಂದರೆ ಹುಚ್ಚ ಅಲೆದಾಟ, Kieptomanic-ಕೈಗೆ ಸಿಕ್ಕಿದುದನೆಲ್ಲಾ ಕದಿಯುವುದು, ಇದು ಕೆಲವರ ಗೀಳು ಅಥವಾ ಚಟ. ಕದಿಯುವುದರಲ್ಲಿ ತಮ್ಮ ನಿಸ್ಸೀಮತೆಯನ್ನು ಅವರು ಗರ್ವದಿಂದ ವ್ಯಕ್ತಪಡಿಸುತ್ತಾರೆ. ದುರಾಸೆಯಿಂದಲೂ ಮಕ್ಕಳು ಆಗಾಗ್ಗೆ ಕಳ್ಳತನ ಮಾಡುತ್ತಾರೆ. ಸಮಯ ಬಂದಾಗ ಕೂಡಲೇ ಸುಳ್ಳು ಹೇಳಿಬಿಡುತ್ತಾರೆ. ದರೋಡೆ, ಮನೆ ಒಡೆದು ಕಳ್ಳತನ ಮಾಡುವುದು, ಹೆದರಿಸಿ ಬೇರೆಯವರಲ್ಲಿರುವುದನ್ನು ದೋಚುವುದು, ಪ್ರಾಣ ಹಿಂಡಿ ಅವರಲ್ಲಿರುವುದನ್ನು ದೋಚುವುದು ಮುಂತಾದ ಮಟ್ಟಕ್ಕೆ ಬರಬಹುದು. ಇದು ವಂಶಪಾರಂಪರ್ಯವಾಗಿ ಬಂದ ಚಾಳಿಯೂ ಆಗಿರಬಹುದು.

ದುರಾಸೆ, ಕೋಪ, ಹೊಟ್ಟೆಕಿಚ್ಚಿನಿಂದ, ಅವಶ್ಯಕತೆಯಿಂದ ಮತ್ತು ಚಲನಚಿತ್ರದಲ್ಲಿ ನೋಡಿ ಅನೇಕ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ, ಬಡತನವೂ ಇದಕ್ಕೆ ಒಂದು ಕಾರಣ.

ಬೆಂಕಿ ಹಚ್ಚುವುದು ಮೊದಲು ಖುಷಿಗಾಗಿ (thrill) ಪ್ರಾರಂಭವಾಗುತ್ತದೆ. ಇದು ಪ್ರೀತಿ ಆಧಾರದವಿಲ್ಲದ ಮಕ್ಕಳಲ್ಲಿ ಜಾಸ್ತಿ. ತಮಗೆ ಬೇಡದವರ ಭಾವಚಿತ್ರ ವನ್ನೋ, ವಸ್ತುವನ್ನೋ ಸುಟ್ಟು ಸಂತಸ ಪಡುತ್ತಾರೆ.

ಕ್ರೂರತನ, ಹಿಂಸೆ ಅಂದರೆ ಪ್ರಾಣಿ ಹಿಂಸೆಯಿಂದ ಅವರಿಗೆ ಅವರ ಮನಸ್ಸಿನಲ್ಲಿ ದುಃಖವೇ ಆಗುವುದಿಲ್ಲ. ಕೆಲವು ಮಕ್ಕಳು ದಿನ ನಿತ್ಯ ಸಾಮಾನುಗಳನ್ನು ಧ್ವಂಸ (destructive) ಮಾಡುವ ಪ್ರವೃತ್ತಿಯುವರಾಗಿರುತ್ತಾರೆ. ಅವರ ಸ್ವಭಾವವೇ ಹಾಗಾಗಿ ಅವರ ಕೈ ಭದ್ರವಿರುದಿಲ್ಲ. ಪಾತ್ರೆ ಸಾಮಾನು, ಗಾಜಿನ ಸಾಮಾನು, ಲೋಟ ತಟ್ಟೆಗಳನ್ನು ಎತ್ತಿ ಹಾಕುವುದೇ ಅವರ ಸ್ವಭಾವ. ಕೈಗಡಿಯಾರ ವನ್ನು ತೆಗೆದುಕೊಂಡು ಅದಕ್ಕೆ ಹೆಚ್ಚು ಕೀಲಿ ಕೊಡುವುದು (Overwind) ಆಟದ ಸಾಮಾನುಗಳನ್ನು ಹೊಸದರಲ್ಲೇ ಧ್ವಂಸ ಮಾಡಿ ಬಿಡುವುದು, ಆತುರ, ಅಶಾಂತತೆ, ಒಂದೇ ಸಮಯದಲ್ಲಿ ನಾನಾ ಕೆಲಸಗಳನ್ನು ಮಾಡಲು ಹೋಗಿ ಎಲ್ಲವನ್ನೂ ಹಾಳು ಮಾಡುವದೇ ಅವರ ರೂಢಿ. ತಮ್ಮ ಕೋಪ, ತಾಪ, ಪ್ರೀತಿಯನ್ನು ತಮ್ಮ ಆಟದ ಗೊಂಬೆಗಳ ಮೇಲೆ ತೀರಿಸಿಕೊಳ್ಳುತ್ತಾರೆ. ರಭಸದಿಂದ ಗೊಂಬೆಗಳನ್ನು ಜಜ್ಜಿ ಬಿಡಬಹುದು, ಪುಸ್ತಕ ಹರಿದು ಬಿಸಾಡಬಹುದು. ಕುರ್ಚಿ ಮೇಜುಗಳನ್ನು ಮುರಿದು ಹಾಕಲು ಪ್ರಯತ್ನ ಮಾಡುತ್ತಾರೆ. ಸಾಮಾನ್ಯ ಮಕ್ಕಳಲ್ಲಿ ಇದು ಅಲ್ಪವಾಗಿ ಕಂಡು ಬರುತ್ತದೆ. ಆದರೆ ಇದು ವಿಪರೀತ ಕಂಡು ಬಂದರೆ ಮಾತ್ರ ಅವರನ್ನು ಅಸಾಮಾನ್ಯ ಮಕ್ಕಳೆಂದು ಪರಿಗಣಿಸಿ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ.

ಕ್ರೂರತನದಿಂದಲೋ, ಕೋಪದಿಂದ ಹಾಗೆ ಮಾಡುತ್ತಾರೋ ಅಥವಾ ಯೋಚಿಸಿ ಬೇಕೆಂತಲೇ ತಮ್ಮ ಸಂತೋಷಕ್ಕಾಗಿ ಹಾಗೆ ಮಾಡುತ್ತಾರೋ ತಿಳಿಯಬೇಕು. ತನಗೆ ಅಲ್ಪ ತೊಂದರೆ ಮಾಡಿದವರಿಗೆ ಅತೀ ಕ್ರೂರತನ ತೋರಿಸಿ, ಅಥವಾ ನಿರಪರಾಧಿಗಳ ಮೇಲೆ ಮುಗ್ಧ ಪ್ರಾಣಿಗಳ ಮೇಲೆ ತಮ್ಮ ಕ್ರೂರತನವನ್ನು ತೋರಿಸುವುದರಲ್ಲಿ ಇವರ ಸ್ವಭಾವ ವ್ಯಕ್ತ ಪಡುತ್ತದೆ. ಉದ್ವೇಗದಿಂದ ಅವರು ಹಾಗೆ ಮಾಡಬಹುದು. ಇತರರು ಹಿಂಸೆಪಡುತ್ತಿದ್ದರೆ ಇವರಿಗೆ ಸಂತೋಷ ಉಂಟಾಗುತ್ತಿದ್ದರೆ ಅದು ಅಸಾಮಾನ್ಯವೆಂದು ಭಾವಿಸಬೇಕು. ಕೆಲ ಮಕ್ಕಳಲ್ಲಿ ಇದು ವಂಶಪಾರಂಪರ್ಯವಾಗಿ ಕಂಡು ಬರುತ್ತದೆ. ಇಂತಹ ಮಕ್ಕಳಿಗೆ ವಿಶೇಷ ಸಂಸ್ಥೆಗಳಲ್ಲಿ ಇಟ್ಟು ಚಿಕಿತ್ಸೆ ಮಾಡಬೇಕಾಗುತ್ತದೆ.

ಶಾಲೆ ತಪ್ಪಿಸುವುದು:

ಮಕ್ಕಳಿಗೆ ಶಾಲೆ ಆಕರ್ಷಣೀಯವಾಗಿರದಿದ್ದರೆ ಅವರಿಗೆ ದೈಹಿಕ ಮತ್ತು ಮಾನಸಿಕ ಬುದ್ಧಿಗೆ ಮೀರಿದ ಮನೆಯ ಅಭ್ಯಾಸ (Home work) ಮನೆಯಲ್ಲಿನ

ಅಶಾಂತಿ, ನಿರಾಶೆ. ಶಾಲೆ ತಪ್ಪಿಸಿಕೊಳ್ಳುವಂತೆ ಮಾಡುತ್ತವೆ. ಮಗು ಜಾಣವಿದ್ದು ಶಾಲೆಯ ಇತರ ಮಕ್ಕಳು ಸಾಧಾರಣ ಅಥವಾ ಪೆದ್ದರಿದ್ದರೆ ಜಾಣ ಮಗುವಿಗೆ ಶಾಲೆ ಬೇಸರವಾಗುತ್ತದೆ. ಇದರಿಂದಾಗಿ ಜಾಣ ಮಗು ಅನೇಕ ದುರಭ್ಯಾಸಕ್ಕೆ ಒಳಗಾಗ ಬಹುದು. ಶಾಲೆಯ ವೇಳೆಯಲ್ಲಿ ಅಲೆದು ಸಹವಾಸ ದೋಷದಿಂದ ಹಾಳಾಗುತ್ತಾರೆ. ಭಂಡ ಧೈರ್ಯ ಅಭ್ಯಾಸವಾಗಿ ಇವರಿಗೆ ಓದುವ ಹವ್ಯಾಸವೇ ತಪ್ಪಿಹೋಗುತ್ತದೆ. ತಂದೆ ತಾಯಿಗಳ ದೃಷ್ಟಿಯೂ ಮುಖ್ಯ. ತಂದೆ ತಾಯಿ, ಗುರುಹಿರಿಯರಲ್ಲಿ ಪ್ರೀತಿ, ಭಕ್ತಿ, ವಿಶ್ವಾಸ ಬೆಳೆಸಬೇಕು. ತಂದೆ ತಾಯಿಗಳೇ ಮಕ್ಕಳಿಗೆ ಕೆಲವೊಮ್ಮೆ ಅವಿಶ್ವಾಸ ಹುಟ್ಟಿಸಿ ಮಕ್ಕಳು ತಪ್ಪು ದಾರಿ ಹಿಡಿಯುವಂತೆ ಮಾಡುತ್ತಾರೆ. ತಂದೆ ತಾಯಿಗಳೇ ಕೆಲವು ವೇಳೆ ಸುಳ್ಳು ರಜೆಯ ಅರ್ಜಿಯನ್ನು ಬರೆದು ಶಾಲೆಯನ್ನು ತಪ್ಪಿಸಲು ಪ್ರೋತ್ಸಾಹಿಸುತ್ತಾರೆ. ಅದು ತಪ್ಪು. ತಾಯಿ ತನ್ನ ಕೆಲಸಕ್ಕೆ ಅನುವಾಗಲೆಂದು ಮಕ್ಕಳನ್ನು ಶಾಲೆ ತಪ್ಪಿಸಿ ಉತ್ತೇಜನ ಕೊಡಬಹುದು. ಮನೆಗೆ ಬರುವ ನೆಂಟರಿಂದಲೋ ಅಥವಾ ವಿಹಾರಕ್ಕೆ ಹೋಗುವ ಉದ್ದೇಶದಿಂದಲೋ ಶಾಲೆ ತಪ್ಪಿಸುವ ರುಚಿಯನ್ನು ದೊಡ್ಡವರೇ ತೋರಿಸಿಬಿಡುತ್ತಾರೆ. ಹೀಗಾಗಿ ಮತ್ತೆ ಶಾಲೆಗೆ ಹೋಗುವ ಆಸೆ ತಪ್ಪಿ ಬೀದಿಗೆ ಬಿದ್ದು ಪುಂಡರಾಗಿ ಅಲೆದಾಡುತ್ತಾರೆ. ಮಕ್ಕಳಿಗೆ ಬಲವಂತದ ವ್ಯಾಸಂಗ ಅಪ್ರಯೋಜಕ. ಹಳ್ಳಿಗಳಲ್ಲಿ ಮಕ್ಕಳನ್ನು ಚಿಕ್ಕಂದಿನಲ್ಲೇ ಕೆಲಸಕ್ಕೆ ಹಾಕಿಕೊಂಡು ಬಿಡುತ್ತಾರೆ. ಮಕ್ಕಳು ಓದಿನಲ್ಲಿ ಸ್ವಾರಸ್ಯವಿಲ್ಲದೇ ಕೆಲಸಮಾಡಿ ದುಡ್ಡು ಸಂಪಾದಿಸುವ ದಾರಿಯಲ್ಲೇ ಆಸಕ್ತಿ ತೋರುತ್ತಾರೆ. ಹಾಗೂ ಬಲವಂತ ಮಾಡಿ ಶಾಲೆಗೆ ಕಳುಹಿಸಿದರೆ ಮನೆ ಬಿಟ್ಟು ಓಡುತ್ತಾರೆ. ತಂದೆ ತಾಯಿಗಳಲ್ಲಿಯ ವೈಮನಸ್ಸು. ಬಡತನಗಳು ಅನೇಕ ಮಕ್ಕಳನ್ನು ದಿಕ್ಕಾಪಾಲಾಗಿ ಮಾಡಿವೆ. ಅನೇಕ ದೊಡ್ಡ ಮನುಷ್ಯರ ಮಕ್ಕಳೂ ಮನೆ ಬಿಟ್ಟು ಹೋಗಿ ಪೋಲೀಸರ ಕೈಗೆ ಸಿಕ್ಕಿ ಹಾಕಿಕೊಂಡಿರುವ ಸಂದರ್ಭಗಳೂ ಅನೇಕ ಇವೆ. ಮನೆಯ ವಿಷಮ ವಾತಾವರಣವೇ ಇದಕ್ಕೆ ಕಾರಣ. ಅನಾಥಾಲಯಗಳಿಂದ ಓಡಿ ಹೋಗುವ ಮಕ್ಕಳ ಚರಿತ್ರೆ ನಮಗೆ ತಿಳಿದೇ ಇದೆ. ಕೆಲವೊಮ್ಮೆ ಹೆಣ್ಣು ಮಕ್ಕಳೂ ಸಿನೇಮಾ ಸೇರುವ ಚಟದಿಂದ ಮನೆ ಬಿಟ್ಟು ಓಡಿ ಬೀದಿಪಾಲಾಗಿ ಕೊನೆಗೆ ಸ್ತ್ರೀ ರಕ್ಷಣಾ ಗೃಹಗಳಿಗೆ ಸೇರಿಸಲ್ಪಟ್ಟಿದ್ದಾರೆ. ಮನೆಯ ಬಡತನ. ಹೊರಗಿನ ಕ್ಷಣಿಕ ಆಕರ್ಷಣೆ, ಪೀಡಿಸುವ ತಂದೆ ತಾಯಿಗಳು, ತಲೆಗೆ ಹತ್ತದ ಕಠಿಣ ಪಾಠ ಇವೆಲ್ಲಾ ಓಡಿ ಹೋಗಲು ಮುಖ್ಯ ಕಾರಣಗಳಾಗಿವೆ. ನಾಲ್ಕಾರು ಜನ ಒಟ್ಟಿಗೆ ಕೂಡಿ ಓಡುವ ಸಂಭವವೂ ಉಂಟು. ಹೀಗೆ ಎಷ್ಟೋ ಹೆಣ್ಣು ಮಕ್ಕಳು ವೇಶ್ಯಾಗೃಹದ ಪಾಲಾಗಿದ್ದಾರೆ. ಆದುದರಿಂದ ಹಿರಿಯರು ಹೀಗಾಗದಂತೆ ನೋಡಿಕೊಳ್ಳಬೇಕು.

ಕವಲುಮನ (Schizophrenia)—೧೮೯೬ ರಲ್ಲಿ ಇದನ್ನು . ಕ್ರೆಪ್‌ಲಿನ್ (Kreaplain) ಎಂಬ ವಿಜ್ಞಾನಿಯು ಯೌವನದಲ್ಲಿ ಬರುವ ಕೆಲವು ವಾಸಿಯಾಗುವ

ಮನಸ್ಸಿನ ರೋಗಗಳನ್ನು "ಯೌವನದ ವಿಕಲತೆ" ಎಂದು ಒಂದು ಗುಂಪಿಗೆ ಸೇರಿಸಿದನು. ಇದು ದೊಡ್ಡವರಲ್ಲಿ ಹೆಚ್ಚು ಕಂಡುಬಂದರೆ ಮಕ್ಕಳಲ್ಲಿ ಕಡಿಮೆ. ಇದು ಮಕ್ಕಳಲ್ಲಿ ಕಂಡರೂ ಬೇರೆ ರೂಪದಲ್ಲಿ ಕಾಣುತ್ತದೆ. ಪರಿಸರದಲ್ಲಿ ಆಸಕ್ತಿ ಇಲ್ಲದೇ ವಿಚಿತ್ರವಾದ ನಡತೆಯುಳ್ಳ ಕೂಡಿರುತ್ತಾರೆ. ಆತಂಕ, ಅಪಾರ್ಥ ಮಾಡಿಕೊಳ್ಳುವಿಕೆ, ಮರುಕಳಿಕೆ (Stereotype), ಅಸಂಬದ್ಧತೆ, ಮಂದತನ ಕಾಣಬರುತ್ತದೆ. ಇತರರೊಡನೆ ಅವರ ಸಂಪರ್ಕ ಅತೀ ಕಡಿಮೆ. ಇವರಿಗೆ ಪ್ರೀತ್ಯಾದರಗಳು ಬೇಕಿಲ್ಲ. ತಮ್ಮದೇ ಒಂದು ಪ್ರಪಂಚದಲ್ಲಿ ಇದ್ದು ಬಿಡುತ್ತಾರೆ. ಯಾರೊಡನೆಯೂ ಬೆರೆಯುವುದಿಲ್ಲ. ಯಾರಾದರೂ ಕೆಣಕಿದರೆ, ಅವರ ಮೌನ ಮುರಿದರೆ, ಅವರು ಸಿಟ್ಟಿಗೇಳುತ್ತಾರೆ. ಕಿವಿಯಲ್ಲಿ ಏನೋ ಕೇಳಿಸಿದಂತೆ, ಕಣ್ಣಮುಂದೆ ಏನೋ ಕಂಡಂತೆ ಗಾಬರಿಯಾಗಿ ಓಡುತ್ತಾರೆ. ಭಯ, ಗೀಳು, ಭ್ರಮೆಗಳು, ಅತಿರೇಕಗಳು ಅವರಲ್ಲಿ ತುಂಬಿರುತ್ತವೆ. ಈ ಎಲ್ಲಾ ವರ್ತನೆಗಳು ಸಹಜವಾಗಿ ಮೂರು ವರ್ಷದ ಮೇಲ್ಪಟ್ಟ ಮಕ್ಕಳಲ್ಲಿ ಚೆನ್ನಾಗಿ ಕಾಣಬರುತ್ತವೆ. ಈ ಮಕ್ಕಳು ನಿದ್ರೆ ಮಾಡುವುದೇ ಅಪರೂಪ. ಅತೀ ಚಟುವಟಿಕೆ ಅಥವಾ ಅತೀ ಮಂದತನ ಇವರಲ್ಲಿ ಕಂಡುಬರುತ್ತದೆ.

ವಂಶಪಾರಂಪರ್ಯ, ಹೆಂಡಕುಡುಕ ತಂದೆ, ಅಥವಾ ಮಕ್ಕಳಿಗೆ ವಿಷಮಶೀತ ಜ್ವರ ಬಂದನಂತರ ಮಿದುಳಿನ ಮೇಲೆ ಉಂಟಾಗುವ ಪರಿಣಾಮದಿಂದ ಹೀಗಾಗುವುದೆಂದು ಕೆಲವು ವಿಜ್ಞಾನಿಗಳ ಊಹೆ.

"ಆಟಿಸಂ" (Autism) ಅಂದರೆ "ತಾನತನತೆ" ಬಾಲ್ಯ ಕವಲುತನ (Childhood Schizophrenia)ದಂತೆಯೇ ಇರುತ್ತದೆ. ಈ ಮಕ್ಕಳು ಸದಾ ಒಬ್ಬರೇ ಇರಲು ಬಯಸುತ್ತಾರೆ. ಪರಿಸರದಲ್ಲಿ ಆಸಕ್ತಿಯೇ ಅವರಿಗೆ ಇರುವುದಿಲ್ಲ. ಮನುಷ್ಯರೂ ಒಂದು ಜಡವಸ್ತುವೆಂದು ಅವರು ಭಾವಿಸಿ ಅವರ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಅವರನ್ನು ಒಂದು ನಿರ್ಜೀವ ವಸ್ತುವಿನಂತೆ ಪರಿಗಣಿಸುತ್ತಾರೆ. ತಾವೇ ತಮ್ಮಲ್ಲಿ ಮಾತನಾಡಿಕೊಳ್ಳುತ್ತಾರೆ. ತಾವೊಬ್ಬರೇ ಆಟ ಆಡುತ್ತಾರೆ. ಯಾರ ಮೇಲೆಯೂ ಅವರಿಗೆ ಕಿಂಚಿತ್ತಾದರೂ ಪ್ರೀತಿ ಇರುವುದಿಲ್ಲ. ಅವರಿಗೆ ತಾವಿರುವ ಸ್ಥಳವನ್ನು ಬದಲಾಯಿಸಿದರೆ ಮಾತ್ರ ಅತೀ ಕೋಪ, ಕಳವಳ. ಈ ರೋಗವನ್ನು ಗುಣಪಡಿಸಲು ಅಸಾಧ್ಯ. ಇದು ಬಹಳ ಅಪರೂಪದ ರೋಗ.

ಉನ್ಮಾದ ಖಿನ್ನತ ಮನೋರೋಗ (Maniac Depressive Psychosis : MDP) ಎಂಬ ಕಾಯಿಲೆ ಮಕ್ಕಳಲ್ಲಿ ಬಹಳ ಅಪರೂಪ. ಅತೀ ಚಟುವಟಿಕೆ, ವಿಪರೀತ ಜ್ಞಾಪಕಶಕ್ತಿ, ಹೆಚ್ಚು ಮಾತು, ನಿದ್ರೆಭಂಗ, ಅತಿಯಾದ ಶಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಇದರ ಮತ್ತೊಂದು ಮುಖ ಅತಿಯಾದ ದುಃಖ. ಕಾರಣವಿಲ್ಲದೇ ಮಕ್ಕಳು ದುಃಖಪಡುತ್ತಾರೆ. ಜೀವನದಲ್ಲಿ ಆಸೆಯಿಲ್ಲದಂತೆ ತೋರಿಸುತ್ತಾರೆ. ಎಷ್ಟೋ ಮಕ್ಕಳು ಆತ್ಮ

ಹತ್ಯೆಗೂ ಪ್ರಯತ್ನ ಪಡುತ್ತಾರೆ. ಅವರಿಗೆ ಜೀವನದಲ್ಲಿ ಜಿಗುಪ್ಸೆ ಇರುತ್ತದೆ. ಮಕ್ಕಳಲ್ಲಿ ಆತ್ಮಹತ್ಯೆ ಅಪರೂಪವಾದರೂ ಇತ್ತೀಚೆಗೆ ೧೦–೧೪ ವರ್ಷದ ಮಕ್ಕಳಲ್ಲಿ ಅದು ಹೆಚ್ಚಾಗಿ ಕಂಡುಬಂದಿದೆ.

ಪ್ರತಿಕ್ರಿಯೆ ಶೂನ್ಯ ಮನೋರೋಗ (Reachis Depression) ಎನ್ನುವ ಕಾಯಿಲೆಯಲ್ಲಿ ದುಃಖಕ್ಕೆ ಯಾವುದಾದರೂ ಕಾರಣವಿರುತ್ತದೆ. ಆದರೆ MDP Depression ನಲ್ಲಿ ಕಾರಣವಿಲ್ಲದ ದುಃಖ ಮತ್ತು ಸಂತೋಷ ಇದರ ವೈಶಿಷ್ಟ್ಯ. ಉದಾ : ಒಮ್ಮೆ ಒಂದು ಮಗು ಹಗಲು ರಾತ್ರಿ ಸಂಗೀತ, ಸಾಹಿತ್ಯ, ಪಾಠಪ್ರವಚನಗಳಲ್ಲಿ ಮಗ್ನನಾಗಿ ನಿದ್ರೆ ಮಾಡದೇ, ಕೊಂಚವೂ ಶಕ್ತಿಗುಂದದೇ ಉತ್ಸಾಹದಿಂದಲೇ ಇರುತ್ತಿದ್ದ. ದಿನನಿತ್ಯ ತನ್ನ ನಾಲ್ಕಾರು ಪುಸ್ತಕಗಳ ಪ್ರತಿ ತೆಗೆಯುತ್ತಿದ್ದ. ಸದಾ ಬಿರುಸಿನ ಮಾತು. ಹೀಗಾಗಿ ಅವನು M.D.P. ಎಂಬ ಮಾನಸಿಕ ರೋಗದಿಂದ ನರಳುತ್ತಿದ್ದಾನೆಂದು ತಿಳಿದು ಬಂತು. ಚಿಕಿತ್ಸೆ ನಡೆದ ನಂತರ ಉತ್ತಮಗೊಂಡ ಮಗು ಈಗ ಚೆನ್ನಾಗಿದ್ದಾನೆ.

ಜೈವಿಕ ಮನೋರೋಗಗಳು :

ದೇಹದ ರೋಗದಿಂದಾಗಿ ಮನೋರೋಗ ವ್ಯಕ್ತಪಡುತ್ತದೆ. ಉದಾ: ಮೂರ್ಛೆ ಕಾಯಿಲೆಯಿಂದಾಗಿ ಮನಸ್ಸು ಉದ್ವೇಗಗೊಂಡು ಹುಚ್ಚರಂತೆ ಆಡುತ್ತಾರೆ. ಇದನ್ನು ಮಾನಸ ಕ್ರಿಯೆಯಿಂದ ಚಲನವನ್ನುಂಟು ಮಾಡುವ ಮೂಲರೋಗ (Psychomotor epilepsy) ಎಂದೂ ಹೇಳುತ್ತಾರೆ. ಈ ಕಾಯಿಲೆ (ಮೂರ್ಛೆ) ಬಂದಾಗ ಮಗುವಿಗೆ ಮಾನಸಿಕ ಪ್ರಜ್ಞೆ ಇರುವುದಿಲ್ಲ. ಈ ಮೂರ್ಛೆ ಕಳೆದನಂತರ ತಮಗೇನಾಯಿತೆಂಬ ಅರಿವೂ ಇರುವುದಿಲ್ಲ. ಇದು ಒಂದು ರೀತಿಯ ಮಾನಸಿಕ ಮೂರ್ಛೆ. ಈ ಸಂದರ್ಭಗಳಲ್ಲಿ ಎಷ್ಟೋ ಬಾರಿ ಆತ್ಮಹತ್ಯೆ ಮತ್ತು ಕೊಲೆಗಳೂ ನಡೆದಿವೆ. ಇದು ಒಂದು ಭಯಂಕರ ರೋಗವಾದರೂ ಔಷಧೋಪಚಾರದಿಂದ ಇದನ್ನು ಹತೋಟಿಯಲ್ಲಿಡಬಹುದು. ಇದಕ್ಕೆ ಕಾರಣವನ್ನು ಕಂಡುಹಿಡಿದು ಚಿಕಿತ್ಸೆ ಮಾಡಿದರೆ ಉತ್ತಮಗೊಳ್ಳುತ್ತಾರೆ ಮತ್ತು ಮುಂದಾಗುವ ಅನೇಕ ಅಪಾಯಗಳನ್ನು ತಪ್ಪಿಸಬಹುದು.

ಮಿದುಳು (ಪೊರೆ) **ಉರಿತ ಜ್ವರೋತ್ತರ ಚರ್ಯೆ ಬೇನೆ**—(Post Encephalitic Behaviour Disorder) ಎಂಬ ಕಾಯಿಲೆಯಲ್ಲಿ ಕೆಲಮಕ್ಕಳಿಗೆ ವಿಪರೀತ ಜ್ವರಬಂದು ಅದು ಮಿದುಳಿನ ಮೇಲೆ ಪರಿಣಾಮ ಬೀರಿ ಮಕ್ಕಳ ಮಿದುಳಿಗೆ ಆಘಾತ ಉಂಟಾಗುತ್ತದೆ. ಹಾಗಾಗಿ ಮಕ್ಕಳು ಹುಚ್ಚರಂತೆ ನೋಡುವವರಿಗೆ ಕಾಣುತ್ತಾರೆ. ಇದಕ್ಕೆ ಕಾರಣ ಮಿದುಳಿನ ನರಗಳ ದುರ್ಬಲತೆ. ಮಿದುಳುರಿತ ಜ್ವರ (Encephalitis) ಕಾಯಿಲೆಗೆ ಮತ್ತು ಮಿದುಳು ಪೊರೆಯುರಿತ ಜ್ವರ (Meningitis) ಎಂಬ ಕಾಯಿಲೆಗೆ ಬಲಿಯಾದವರು ಒಮ್ಮೊಮ್ಮೆ ಹೀಗಾಗಿ ಬಿಡುತ್ತಾರೆ. ಮಿದುಳಿನ ಕಣಗಳು ಅಪಾಯಕ್ಕೆ

ಒಳಗಾದರೆ ಅದನ್ನು ಯಾವ ಚಿಕಿತ್ಸೆಯಿಂದಲೂ ವಾಸಿಮಾಡಲು ಸಾಧ್ಯವಿಲ್ಲ. ಮಕ್ಕಳು ಅಸಮಾಧಾನ (restless) ಗೊಂಡು ಒಂದು ಕ್ಷಣವೂ ಒಂದು ಕಡೆ ಕೂಡದೇ, ನಿಲ್ಲದೇ ಅತೀ ಚಲನೆಯಿಂದಿರುವುದು ನೋಡುವವರಲ್ಲಿ ಕನಿಕರ ಉಂಟಾಗುವಂತಾಗುತ್ತದೆ ಇದರಿಂದ ತಂದೆತಾಯಿಗಳಿಗೂ, ಪಾಲಕರಿಗೂ ಬಹಳ ಕಷ್ಟವಾಗಿ ಮಗುವನ್ನು ಕಾಪಾಡಲು ತೊಂದರೆಯಾಗುತ್ತದೆ. ಈ ಮಕ್ಕಳು ತಮಗೆ ತಾವೇ ಅಪಾಯ ಮಾಡಿ ಕೊಳ್ಳುವುದಲ್ಲದೇ ಇತರರಿಗೂ ಹಾಗೇ ಮಾಡುತ್ತಾರೆ. ಎಲ್ಲರೂ ಅಸಹಾಯಕತೆಯಿಂದ ನಿಲ್ಲಬೇಕಾಗುತ್ತದೆ. ಒಮ್ಮೊಮ್ಮೆ ಇದು ತೀರ ವಿಪರೀತಕ್ಕೆ ಹೋದಾಗ ಮಿದುಳಿನ ಕೆಲವು ಶಸ್ತ್ರಚಿಕಿತ್ಸೆಗಳಿಂದ ಮಗುವಿನ ಈ ವಿಪರೀತ ನಡುವಳಿಕೆಯನ್ನು ಕಡಿಮೆಮಾಡಲು ಸಾಧ್ಯವಿದ್ದರೂ ಇದರಿಂದ ಮಗುವಿನ ದೇಹಸ್ಥಿತಿಗೆ ಕುಂದುಂಟಾಗಿ ಹಾಸಿಗೆ ಹಿಡಿಸುತ್ತದೆ. ಒಮ್ಮೊಮ್ಮೆ ಇಂತಹ ಶಸ್ತ್ರಚಿಕಿತ್ಸೆ ಪ್ರಾಣಕ್ಕೂ ಅಪಾಯಕರ. ಮಿದುಳಿನಲ್ಲಿ ಗಡ್ಡೆ, ಕೀವು ಇದ್ದರೆ ಮಿದುಳಿನ ಕೆಲವು ಭಾಗಗಳಲ್ಲಿ ಅದರ ಇರುವಿಕೆಯಿಂದ ಮಕ್ಕಳ ನಡತೆಯು ವಿಚಿತ್ರವಾಗಿದ್ದು ಮಕ್ಕಳು ಏಕೆ ವಿಚಿತ್ರವಾಗಿ ವರ್ತಿಸುತ್ತಾರೆಂದು ಎಲ್ಲರಿಗೂ ಸಂಶಯವನ್ನುಂಟು ಮಾಡುತ್ತದೆ. ವಿಚಾರ ತಿಳಿಯದೇ ಅವರನ್ನು ಅನೇಕ ಶಿಕ್ಷೆಗೆ ಗುರಿ ಮಾಡಿದ ಸಂದರ್ಭಗಳಿವೆ. Rheumatic Chorea ಕಾಯಿಲೆ, ಕ್ರಮೇಣ ಬರುವ ಕಣ್ಣಿನ ಕುರುಡು, ವಯಸ್ಸಾದರೂ ಜಲಬಾಧೆ ಮಾಡಿಕೊಳ್ಳುವ ಚಾಳಿ ಇವೆಲ್ಲಾ ಇದರ ಪರಿಣಾಮವಾಗಿ ಉಂಟಾಗಬಹುದು.

ಹುಟ್ಟಿದಾರಭ್ಯ ಕಿರುತಲೆ, ನೀರು ತಲೆಗಳಿಂದ ಮಕ್ಕಳು ಪೆದ್ದತನವನ್ನು ವ್ಯಕ್ತ ಪಡಿಸುತ್ತಾರೆ. ಮಿದುಳಿನ ಬೆಳವಣಿಗೆಗೆ ಅಡಚಣೆಯಾಗಿ ಬುದ್ಧಿ ಮಾಂಧ್ಯತೆ ಉಂಟಾಗು ತ್ತದೆ.

ಫಿನೈಲ್ ಕಿಟೋನಯೂರಿಯಾ (Phenyl Ketonuria) ಎಂಬ ಜೀವದ್ರವ್ಯ ಪರಿಣಾಮಿಕ (Metabolic) ಕಾಯಿಲೆಯು ಬಾರದಂತೆ ಮುನ್ನೆಚ್ಚರಿಕೆ ವಹಿಸಿದರೆ ಮಕ್ಕಳಿಗೆ ಬರುವ ಬುದ್ಧಿ ಮಾಂಧ್ಯತೆಯನ್ನು ತಪ್ಪಿಸಬಹುದು.

ಪೆಡ್ಡತನ (Cretinism) ದಿಂದ ಉಂಟಾಗುವ ಬುದ್ಧಿಮಾಂಧ್ಯತೆಯನ್ನು ಬೇಗ ಕಂಡು ಹಿಡಿದು ಚಿಕಿತ್ಸೆ ಕೊಟ್ಟರೆ ಇದರಿಂದಾಗುವ ದುಷ್ಪರಿಣಾಮಗಳನ್ನು ಮುನ್ನೆಚ್ಚರಿಕೆ ಯಿಂದ ತಡೆಗಟ್ಟಬಹುದು.

ಪರಂಗಿ ಹುಣ್ಣು ಎಂಬ ರೋಗ, ಮೆದುಳುರಿತ ಜ್ವರ, ಮತ್ತು ಮೆದುಳು ಪೊರೆ ಯುರಿತ ಜ್ವರ (Syphilis, Encephalitis and Meningitis) ಇವುಗಳಿಂದ ಮಕ್ಕಳಿಗೆ ಅನೇಕ ಮಾನಸಿಕ ಅನಾಹುತವಾಗುವದನ್ನು ಸಕಾಲದಲ್ಲಿ ಚಿಕಿತ್ಸೆ ಮಾಡಿದರೆ ತಡೆಗಟ್ಟಬಹುದು.

ಇನ್ನು ದೈಮನ ಬೇನೆಗಳನ್ನು ಕುರಿತು ನೋಡಿದರೆ ಮಕ್ಕಳು ತಮ್ಮ ದುಃಖ, ಕೋಪ ತಾಪಗಳನ್ನು ದೇಹದ ಅವಯುವಗಳ ಮೂಲಕ ವ್ಯಕ್ತಪಡಿಸುತ್ತಾರೆ. ಉದಾಹರಣೆಗೆ ದಮ್ಮು (Asthama), ಪಿಷಬು ಇವು ಈ ಜಾತಿಗೆ ಸೇರಿದ ಮಾನಸಿಕ ರೋಗಗಳು.

ತಳಿ ಶಾಸ್ತ್ರದ ಸಲಹೆಯಿಂದ (Genetic Counselling) ವಂಶಪಾರಂಪರ್ಯವಾಗಿ ಬರುವ ಮಾನಸಿಕ ರೋಗಗಳನ್ನು ತಡೆಗಟ್ಟಬಹುದು. ಕಾಯಿಲೆ ಬಂದ ಮೇಲೆ ಅದು ಜಾಸ್ತಿಯಾಗದಂತೆ ನೋಡಿಕೊಳ್ಳಬೇಕು. ಹಾಗೆ ವಾಸಿಯಾಗದ ಕಾಯಿಲೆಯು ಮಕ್ಕಳನ್ನು ಪುನರ್ವಸತಿ ಗೃಹ ಮತ್ತು ಇದಕ್ಕಾಗಿಯೇ ಮೀಸಲಾದ ಸಂಸ್ಥೆಗಳ ಮತ್ತು ಜನರ ಸಹಾಯದಿಂದ ಅವರ ಜೀವನವನ್ನು ಸುಗಮವಾಗಿ ಮಾಡಬಹುದು.

ಭಾರತದಲ್ಲಿ ಬಾಲ ಕಾರ್ಮಿಕರು

● ಬಸನಗೌಡ ಪಾಟೀ

ಜಗತ್ತಿನ ಯಾವುದೇ ದೇಶದ ಕಾರ್ಮಿಕರು ಆ ದೇಶದ ಆರ್ಥಿಕ ಹಾಗೂ ಸಾಮಾ ಜಿಕ ಬೆಳವಣಿಗೆಯಲ್ಲಿ ಒಂದು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ಆ ದೇ ಹಾಗೂ ಸಮಾಜದಲ್ಲಿ ಅವರೊಂದು ಅತ್ಯಾವಶ್ಯಕ ಅಂಗ. ಅಲ್ಲದೇ ಬಹುತೇಕ ರಾ ಗಳಲ್ಲಿ ಕಾರ್ಮಿಕರು ಸಮಾಜದ ಒಂದು ಪ್ರಮುಖ ವರ್ಗವೆಂದು ಸ್ವೀಕರಿಸಲ್ಪಟ್ಟಿದ್ದಾ ಸಮಾಜವಾದೀ ರಾಷ್ಟ್ರಗಳಲ್ಲಂತೂ ರಾಜ್ಯಾಂಗವೇ ಕಾರ್ಮಿಕರ ಹತೋಟಿಯಲ್ಲಿ ಬಂಡವಾಳ ಶಾಹೀ ಪದ್ಧತಿಯ ಸಮಾಜದಲ್ಲಿಯೂ ಹಾಗೂ ಸಮಾಜವಾದೀ ಪ್ರ ಪ್ರಭುತ್ವ ಪದ್ಧತಿಯುಳ್ಳ ರಾಷ್ಟ್ರ ಸಮಾಜಗಳಲ್ಲಿಯೂ ನಾವು ಕಾರ್ಮಿಕರನ್ನು ಅವ ತೊಡಗಿರುವ ಉದ್ಯೋಗ. ಅವರಲ್ಲಿಯ ಸಂಘಟನೆ. ಲಿಂಗ ಮತ್ತು ವಯಸ್ಸಿನ ಆ ರದ ಮೇಲೆ ವರ್ಗೀಕರಿಸಬಹುದು. ಆ ಪ್ರಕಾರ, ಉದಾಹರಣೆಗೆ ಹೇಳಬೇಕಾದ ಜವಳಿ ಗಿರಣಿಗಳ ಕಾರ್ಮಿಕರು, ಗಣಿಗಳ ಕಾರ್ಮಿಕರು. ಬಂದರಿನ ಕಾರ್ಮಿಕರು: ಸಂ ಘಟಿತ ಕಾರ್ಮಿಕರು: ಪುರುಷ ಮತ್ತು ಮಹಿಳಾ ಕಾರ್ಮಿಕರು ಇತ್ಯಾದಿ ಗುಂಪುಗಳ ನಾವು ಗಣನೆಗೆ ತೆಗೆದುಕೊಳ್ಳಬಹುದು. ಪ್ರಸ್ತುತ ಕಾರ್ಮಿಕರಲ್ಲಿ ನಾವು ಮಕ್ಕ ಮತ್ತು ಬಾಲಕರು ಒಂದು ಹಿರಿಯ ಭಾಗವನ್ನು ವಹಿಸುತ್ತಾರೆ. ಯಾವ ದೇಶದ ಆರ್ಥಿಕ-ವ್ಯವಸ್ಥೆಯು ಆ ದೇಶದ ಕಾರ್ಮಿಕ ವರ್ಗವನ್ನು ಅವಲಂಬಿಸ್ಸ ಸದ ಹಲವಾರು ಬೆಳವಣಿಗೆ ಹೊಂದುತ್ತಿರುವ ಬಡರಾಷ್ಟ್ರಗಳಲ್ಲಿ ಬಾಲ ಕಾರ್ಮಿ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ. ಇಂಥ ದೇಶಗಳಲ್ಲಿ ನಿರುದ್ಯೋ ಸಮಸ್ಯೆ ಅತ್ಯಂತ ತೀಕ್ಷ್ಣವಿದ್ದಾಗ್ಯೂ ಕೂಡ ಬಾಲ ಕಾರ್ಮಿಕರ ಸಂಖ್ಯೆಯು ಹೆಚ್ಚಿ ಪ್ರಮಾಣದಲ್ಲಿ ಬೆಳೆಯುತ್ತಿದೆ.

ಬೆಳೆಯುತ್ತಿರುವ ಬಾಲ ಕಾರ್ಮಿಕರ ಸಂಖ್ಯೆಯ ಮೂಲ ಹಾಗೂ ಪ್ರಮು ಕಾರಣವೆಂದರೆ ಬಡತನ ಮತ್ತು ಹೆಚ್ಚುತ್ತಿರುವ ಜನಸಂಖ್ಯೆ. ಅಜ್ಞಾನ, ನಿರಕ್ಷ ಇತ್ಯಾದಿ ವಿಷಯಗಳೂ ಸಹ ಪ್ರಬಲವಾಗಿ ಕಾರಣವೆಂದು ಹೇಳಬಹುದು. ದಲ್ಲಿರುವ ಸಾಮಾನ್ಯವಾಗಿ ದೊಡ್ಡಗಾತ್ರದ ಕುಟುಂಬದಲ್ಲಿ ಹುಡುಗರನ್ನು

ತಮ್ಮ ಶಕ್ತ್ಯಾನುಸಾರವಾಗಿ ದುಡಿದು ಕುಟುಂಬದ ಅವಶ್ಯಕತೆಗಳನ್ನು ಪೂರೈಸಬೇಕಾಗುತ್ತದೆ. ಆದ್ದರಿಂದ ಇಂಥ ಕುಟುಂಬಗಳಲ್ಲಿ ಮಕ್ಕಳು ೮-೧೦ ವಯಸ್ಸಿಗೆ ಬರುವಷ್ಟರಲ್ಲಿಯೇ ಮನೆ ಜನಗಳು ಅವರಿಗೆ ಒಂದು ಉದ್ಯೋಗ ಗೊತ್ತುಮಾಡಿ ಇಟ್ಟಿರುತ್ತಾರೆ. ಅಂದರೆ ಬಡ ಕುಟುಂಬಗಳಲ್ಲಿಯ ಪ್ರತಿಯೊಬ್ಬ ಸದಸ್ಯನು ತನ್ನ ೮ ಅಥವಾ ೧೦ ನೇ ವಯಸ್ಸಿನಿಂದಲೇ ಉದ್ಯೋಗಾವಲಂಬಿಯಾಗುತ್ತಾನೆ. ಇನ್ನು ಕೆಲವು ಕುಟುಂಬಗಳಲ್ಲಿ ಕುಟುಂಬದ ಒಡೆಯನು ಆಕಸ್ಮಿಕ ದುರ್ಘಟನೆಗೆ ಬಲಿಯಾದರೆ ಕಿರಿ ವಯಸ್ಸಿನ ಬಾಲಕರ ಮೇಲೆ ಕುಟುಂಬದ ಎಲ್ಲ ಹೊಣೆಯೂ ಬೀಳುವದುಂಟು. ಇಂಥ ಎಲ್ಲ ಜವಾಬ್ದಾರಿಗಳನ್ನು ಒತ್ತಾಯದಿಂದಲೇ ಹೊರುವರು. ಪ್ರೊ. ಮಾಲ್ಥಸ್ (Prof. Malthus) ಅವರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ಹೇಳುತ್ತಾರೆ. ಪ್ರತಿಯೊಂದು ಜೀವಿಯು ಹುಟ್ಟುವಾಗ ೨ ದುಡಿಯುವ ಕೈಗಳ ಜೊತೆಗೇ ಹುಟ್ಟುತ್ತದೆ. ಬಡ ಕುಟುಂಬಗಳಲ್ಲಿಯ ಇಂಥ ತಾಯಿಗಳು ತಮ್ಮ ಮಕ್ಕಳನ್ನು ೮-೧೦ ವರ್ಷ ಪೋಷಿಸಿದರೆ ಸಾಕು. ಅನಂತರ ಅವರು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುವುದಲ್ಲದೆ ಕುಟುಂಬದ ಆದಾಯವನ್ನೂ ಸಹ ಹೆಚ್ಚಿಸುತ್ತಾರೆ. ಆದರೆ ಈ ಬಡವರ ಮಕ್ಕಳ ಭಾಗ್ಯ ಶ್ರೀಮಂತ ವರ್ಗದ ಕುಟುಂಬದ ಮಕ್ಕಳಿಗೆ ಅನ್ವಯಿಸದು. ಅವರು ಪ್ರಾಪ್ತ ವಯಸ್ಕರಾಗುವವರೆಗೂ ಸಹ ತಮ್ಮ ತಂದೆ ತಾಯಿಗಳ ಮೇಲೆ ಅವಲಂಬಿತರಾಗಿರುತ್ತಾರೆ.

ಬಾಲ ಕಾರ್ಮಿಕರ ಸಂಖ್ಯೆ ಎಷ್ಟು ?

ಭಾರತದಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನ (U. S. A.) ಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬಾಲಕರು ಇದ್ದಾರೆ- ೨೩.೦. ೭೯೩೮೦೦೦. ೧೯೭೧ರ ಜನಗಣತಿಯ (೧೯೭೧) ಪ್ರಕಾರ ಭಾರತದಲ್ಲಿ ಒಟ್ಟು ಜನಸಂಖ್ಯೆಯ ಪ್ರತಿಶತ ೪೨ರಷ್ಟು ಜನರು ಬಾಲಕ ಬಾಲಿಕೆಯರಿದ್ದಾರೆ. ಎಲ್ಲ ರಾಜ್ಯಗಳಲ್ಲಿ ಕರ್ನಾಟಕದಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ಇದ್ದಾರೆ- ಪ್ರತಿಶತ ೫೦.೪ ಮತ್ತು ತಮಿಳುನಾಡಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅಂದರೆ ಒಟ್ಟು ಜನಸಂಖ್ಯೆಯ ೩೭.೮% ದಷ್ಟು ಮಕ್ಕಳು ಇದ್ದಾರೆ. ಇದೇ ಜನಸಂಖ್ಯೆಯ ಪ್ರಕಾರ ನಮ್ಮ ದೇಶದಲ್ಲಿ ೧೪ ವಯಸ್ಸಿನೊಳಗಿನ ಮಕ್ಕಳ ಒಟ್ಟು ಸಂಖ್ಯೆ ೨೩೦ ಮಿಲಿಯನ್. [ಇವರಲ್ಲಿ ೧೦೦ ಮಿಲಿಯನ್ ಮಕ್ಕಳು ೬ ಕ್ಕಿಂತ ಕಡಿಮೆ ವಯಸ್ಸಿನವರು] ಈ ೨೩೦ ಮಿಲಿಯನ್ ಮಕ್ಕಳಲ್ಲಿ ೧೦.೭ ಮಿಲಿಯನ್ ಮಕ್ಕಳು ವಿವಿಧ ಉದ್ಯೋಗಗಳಲ್ಲಿದ್ದಾರೆ. ಅಂದರೆ ಈ ಬಾಲಕಾರ್ಮಿಕರ ಪ್ರಮಾಣ ಆ ವಯಸ್ಸಿನ ಮಕ್ಕಳ ಒಟ್ಟು ಜನಸಂಖ್ಯೆಯ ೪.೬೬% ಇದ್ದರೆ ಬಾಲ ಕಾರ್ಮಿಕರು ಒಟ್ಟು ಕಾರ್ಮಿಕರ ಪ್ರತಿಶತ ೫ ರಷ್ಟು ಇದ್ದಾರೆ.

ಅತ್ಯಂತ ಹೆಚ್ಚಿನ ಪ್ರಮಾಣದ ಬಾಲ ಕಾರ್ಮಿಕರು ಆಂಧ್ರ ಮತ್ತು ಮಧ್ಯ ಪ್ರದೇಶದಲ್ಲಿ ಇದ್ದಾರೆ [೧೧.೩೭%] ಹಾಗೂ ಕೇರಳದಲ್ಲಿ ಅತ್ಯಂತ ಕಡಿಮೆ

ಪ್ರಮಾಣದಲ್ಲಿ (೧.೩%) ಇರುವರು. ಬಾಲಿಕೆಯರ ಒಟ್ಟು ಸಂಖ್ಯೆ ಬಾಲಕರ ಸಂಖ್ಯೆಗಿಂತ ಕಡಿಮೆ ಇದ್ದಾಗ್ಯೂ ಕೂಡ, ಆ ವಯಸ್ಸಿನ ಬಾಲಕ ಬಾಲಿಕೆಯರ ಒಟ್ಟು ಜನಸಂಖ್ಯೆ ಯನ್ನು ಗಣನೆಗೆ ತೆಗೆದುಕೊಂಡಾಗ ಬಾಲಿಕೆಯರ ಪ್ರಮಾಣ ಬಾಲಕರ ಪ್ರಮಾಣಕ್ಕಿಂತ ಮಹಾರಾಷ್ಟ್ರದಲ್ಲಿ ಹೆಚ್ಚಿಗೆ ಇದೆ.

ಬಾಲ ಕಾರ್ಮಿಕರ ಉದ್ಯೋಗಗಳು ಹಾಗೂ ಅವರ ಸಂಖ್ಯೆ :

೧೯೭೧ರ ಜನಗಣತಿಯ ಪ್ರಕಾರ ೧೦ ಮಿಲಿಯನ್ ಬಾಲ ಕಾರ್ಮಿಕರು ಗ್ರಾಮೀಣ ಪ್ರದೇಶಗಳಲ್ಲಿಯೂ ಹಾಗೂ ಇನ್ನುಳಿದ ೦.೭ ಮಿಲಿಯನ್ ಮಕ್ಕಳು ನಗರ ಪ್ರದೇಶಗಳ ಲ್ಲಿಯೂ ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬಾಲ ಕಾರ್ಮಿಕರು ಒಕ್ಕಲುತನ ಹಾಗೂ ಅದಕ್ಕೆ ಸಂಬಂಧ ಪಟ್ಟ ಉದ್ಯೋಗಗಳಲ್ಲಿ ತೊಡಗಿ ದ್ದಾರೆ. ಇವರ ಒಟ್ಟು ಸಂಖ್ಯೆ ಪ್ರತಿಶತ ೮೭.೯ ರಷ್ಟು ಇದೆ. ಈ ಉದ್ಯೋಗದಲ್ಲಿ (Industry) ಮಕ್ಕಳು ಹೆಚ್ಚಾಗಿ ಕಸ ಹಾಗೂ ಕೊಳೆ ತೆಗೆಯುವ ಕಾರ್ಯಗಳಲ್ಲಿ, ಬಿತ್ತನೆ ಕಾರ್ಯದಲ್ಲಿ ಸಹಾಯಕರೆಂದು, ಬೆಳೆಯನ್ನು ಒಕ್ಕುವಾಗ, ಬೆಳೆ ಕಾವಲುಗಾರರಾಗಿ, ದನ ಕರುಗಳ ಕಾವಲು ಹಾಗೂ ರಕ್ಷಣೆ ಕಾರ್ಯಗಳಲ್ಲಿ ಅಥವಾ ಇನ್ನಿತರ ಯಾವದೇ ಅವರ ದೈಹಿಕ ಸಾಮರ್ಥ್ಯಕ್ಕೆ ಅನುಗುಣವಾದ ಸಣ್ಣ ಪುಟ್ಟ ಕಾರ್ಯಗಳಲ್ಲಿ ಸೇರಿಕೊಂಡಿರುತ್ತಾರೆ.

ನಗರ ಪ್ರದೇಶಗಳಲ್ಲಿ ಉದ್ಯೋಗಾವಲಂಬಿಗಳಾದ ೧೩.೦೩% ಜನ ಬಾಲ ಕಾರ್ಮಿಕರಲ್ಲಿ ೩.೧೪% ಮಕ್ಕಳು ಗೃಹಸೇವೆಯಲ್ಲಿ, ೨.೯೩% ಜನ ತಯಾರಿಕಾ ಉದ್ಯೋಗಗಳಲ್ಲಿ (manufacturing, processing, repairs, etc). ೧.೯೭% ಜನ ಮಕ್ಕಳು ವ್ಯಾಪಾರ ಮತ್ತು ವಾಣಿಜ್ಯದಲ್ಲಿ, ೦.೩೪% ಜನ ಬಾಲ ಕಾರ್ಮಿಕರು ಕಟ್ಟಡ ನಿರ್ಮಾಣದಲ್ಲಿ, ೦.೩೯% ಪರಿವಹನ ಹಾಗೂ ಸಂಗ್ರಹಣೆ ವಿಭಾಗದಲ್ಲಿ ಹಾಗೂ ಉಳಿದ ೩.೭೭% ಬಾಲ ಕಾರ್ಮಿಕರು ಇತರ ಉದ್ಯೋಗಗಳಲ್ಲಿ ಸೇರಿಕೊಂಡಿದ್ದಾರೆ.

ನಗರ ಪ್ರದೇಶಗಳಲ್ಲಿ ಬಾಲ ಕಾರ್ಮಿಕರು ಹೆಚ್ಚಾಗಿ ಅಸಂಘಟಿತ ಉದ್ಯೋಗ ಗಳಲ್ಲಿ ಸೇರಿಕೊಂಡಿರುತ್ತಾರೆ. ಸಣ್ಣ ಪ್ರಮಾಣದ ಕಾರ್ಖಾನೆಗಳಲ್ಲಿಯೂ ಸಹ ಅವರು ಕಂಡು ಬರುತ್ತಾರೆ. ಏಕೆಂದರೆ ಇಂಥ ಕಾರ್ಖಾನೆಗಳು ಹೆಚ್ಚಾಗಿ ಕಾರ್ಮಿಕ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿರುವದಿಲ್ಲ. ಇಂಥ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ಹಲ ಬಗೆಯ ಕೆಲಸಗಳಲ್ಲಿ ನಿಯಮಿಸಲ್ಪಟ್ಟಿರುವರು. ಕಡ್ಡಿಪೆಟ್ಟಿಗೆ ತಯಾರಿಕೆ, ಚಹದ ಕಾರ್ಖಾನೆಗಳಲ್ಲಿ, ಬೀಡಿ ತಯಾರಿಕಾ, ಅಭ್ರಕದ ಕಾರಖಾನೆ, ಕಟ್ಟಿಗೆ ಮತ್ತು ಬೂಟು ತಯಾರಿಕೆಯ ಕೆಲಸ, ಫರ್ನಿಚರ ಮತ್ತು ಜೋಡಣೆ, ಮುದ್ರಣ, ಪ್ರಕಾಶನ ಮತ್ತು ಸಣ್ಣ ವ್ಯಾಪಾರ, ಚರ್ಮ ಮತ್ತು ಚರ್ಮದ ಸಾಮಾನುಗಳ ತಯಾರಿಕೆ, ರಬ್ಬರ ಮತ್ತು ರಬ್ಬರ ಸಾಮಾನುಗಳ ತಯಾರಿಕೆ, ಯಂತ್ರ, ವಾಹನ, ಉಪಕರಣ, ಕೀಲಿ ಮತ್ತು

ಕೀಲಿಕೈ ಕಾರ್ಖಾನೆ, ಲಾಂಡ್ರಿ, ಬಣ್ಣ ಹಾಕುವ, ಕೈಮಗ್ಗ ಹಾಗೂ ಜಮಖಾನೆ ನೇಯ್ಗೆಯ ಕೆಲಸ, ಕೈಬಳೆ ತಯಾರಿಕಾ ಇತ್ಯಾದಿ ಹಲವು ಬಗೆಯ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ತಮ್ಮ ಜೀವನೋಪಾಯ ಸಂಪಾದಿಸುತ್ತಿದ್ದಾರೆ. ಇದಲ್ಲದೆ ಬಹು ಸಂಖ್ಯೆ ಮಕ್ಕಳು ಗೃಹ ಸೇವೆಯಲ್ಲಿ, ಎಲ್ಲ ಬಗೆಯ ಚಹದಂಗಡಿಗಳಲ್ಲಿ, ರಸ್ತೆ ಬದಿಗಿರುವಂಥ ಚಿಕ್ಕ ಪುಟ್ಟ ಅಂಗಡಿಗಳಲ್ಲಿ, ವೃತ್ತ ಪತ್ರ ಮಾರಾಟಗಾರರಾಗಿ, ಕೂಲಿಗಳಾಗಿ, ಪಾದರಕ್ಷೆ ಹೊಳಪುಕಾರರಾಗಿ, ಇಲ್ಲವೆ ಹಲಬಗೆಯ ಸಹಾಯಕರಾಗಿ ಅಸಂಘಟಿತ ಉದ್ಯೋಗಗಳಲ್ಲಿ ಹಲವೊಂದು ಸಲ ಸಂಬಳದ ಮೇಲೆ, ಇನ್ನುಳಿದ ಸಂದರ್ಭಗಳಲ್ಲಿ ಸ್ವ-ಉದ್ಯೋಗಿಗಳಾಗಿ ದುಡಿಯುತ್ತಿರುತ್ತಾರೆ.

ಉದ್ಯೋಗಕ್ಕೆ ಸೇರುವ ಬಗೆ

ಸಾಮಾನ್ಯವಾಗಿ ಬಾಲ ಕಾರ್ಮಿಕರು ತಮ್ಮ ತಂದೆ ತಾಯಿಗಳ ಮುಖಾಂತರವಾಗಿಯಾಗಲೀ ಅಥವಾ ಪಾಲಕರ ಮುಖಾಂತರವಾಗಿಯಾಗಲೀ ಉದ್ಯೋಗಕ್ಕೆ ಸೇರಿಕೊಳ್ಳುತ್ತಾರೆ. ಉದ್ಯೋಗ ಒಡೆಯರು ಮಕ್ಕಳ ತಂದೆ ತಾಯಿಗಳ ಅಥವಾ ಪಾಲಕರ ಪರಿಚಯವಿಲ್ಲದಿದ್ದರೆ ಮಕ್ಕಳನ್ನು ಉದ್ಯೋಗಕ್ಕೆ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಹೆಚ್ಚಾಗಿ ಬಡಕುಟುಂಬಗಳಲ್ಲಿ ೮ ರಿಂದ ೧೦ ವಯಸ್ಸಿನ ಮಕ್ಕಳು ತಮ್ಮ ತಂದೆ ತಾಯಿಗಳು ಜತೆಗೆ ಕೆಲಸಕ್ಕೆ ಹೋಗಲು ಪ್ರಾರಂಭಿಸುತ್ತಾರೆ. ಮೊದ ಮೊದಲು ಅವರು ತಂದೆ ತಾಯಿಗಳಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಕೆಲ ದಿನಗಳಲ್ಲಿ ಆ ಕೆಲಸದ ಅರಿವು ಬಂದಿತೆಂದರೆ ತಂದೆ ತಾಯಿಗಳು ಅವರಿಗೆ ಬೇರೆ ಉದ್ಯೋಗ ದೊರಕಿಸಿಕೊಡುತ್ತಾರೆ. ಇನ್ನು ಅನಾಥ, ನಿರ್ಗತಿಕ ಹಾಗೂ ಮನೆಗಳಿಂದ ಓಡಿ ಹೋದ ಮಕ್ಕಳು ಸ್ವಪ್ರಯತ್ನದಿಂದ ಉದ್ಯೋಗ ದೊರಕಿಸಿಕೊಳ್ಳುತ್ತಾರೆ. ಆದರೆ ಇಂಥ ಬಾಲಕರು ಹೆಚ್ಚಿಗೆ ಸಂಬಳ ದೊರೆಯಲು ಅಸಮರ್ಥರಾಗುತ್ತಾರೆ. ಅಲ್ಲದೇ ಕೆಲವೊಂದು ಮಾಲೀಕರು ಸಂಬಳ ಕೊಡದೇನೆ ದುಡಿಸಿಕೊಳ್ಳುತ್ತಾರೆ. ಬಡಪಾಯಿ ಮಕ್ಕಳು ನಯವಂಚಕ ಮಾಲೀಕರ ಮಾತುಗಳಿಗೆ ಮರುಳಾಗಿ ತಮ್ಮ ದೇಹ ದಂಡಿಸುತ್ತಾರೆ.

ಉದ್ಯೋಗ ಪರಿಸ್ಥಿತಿಗಳು :

ಬಾಲ ಕಾರ್ಮಿಕರ ಉದ್ಯೋಗ ಪರಿಸ್ಥಿತಿಗಳು ಇತರ ಬಗೆಯ ಕಾರ್ಮಿಕರ ಉದ್ಯೋಗ ಪರಿಸ್ಥಿತಿಗಳಿಗಿಂತಲೂ ಶೋಚನೀಯವೆಂದು ಹೇಳಬಹುದು. ಅವರ ಕೆಲಸದ ಅವಧಿ, ಕೆಲಸದ ಸ್ಥಿತಿಗಳು, ದುಡಿಮೆಯ ಬಗೆ, ಹಾಗೂ ಅವರ ಸಂಬಳ, ಅವರ ದೈಹಿಕ, ಮಾನಸಿಕ, ನೈತಿಕ, ಸಾಮಾಜಿಕ ಬೆಳವಣಿಗೆ ಎಲ್ಲವುಗಳ ದೃಷ್ಟಿಯಿಂದಲೂ ಸಹ ಬಾಲಕಾರ್ಮಿಕರು ದುರ್ದೈವಿಗಳು. ಚಿಕ್ಕಬಾಲತನ ಹಾಗೂ ಸಂಬಂಧಪಟ್ಟ ಉದ್ಯೋಗ

ಗಳಲ್ಲಿ ಬಾಲ ಕಾರ್ಮಿಕರು ವಯಸ್ಕರ ಜೊತೆಯೇ ಅವರಿಗೆ ಸರಿಸಮಾನವಾಗಿ ಕೆಲಸ ಮಾಡುತ್ತಾರೆ. ಕೆಲವು ಬಾಲಕರು ವಯಸ್ಕರಿಗಿಂತಲೂ ಶೀಘ್ರಗತಿಯಲ್ಲಿ ಕೆಲಸ ಮಾಡುವವಲ್ಲದೇ ಸಹ ಕಾರ್ಮಿಕರು ಹೇಳುವ ಸಣ್ಣಪುಟ್ಟ ಕೆಲಸಗಳನ್ನೂ ಸಹ ಮಾಡುತ್ತಾರೆ. ಇದಲ್ಲದೇ ಅವರ ಕೆಲಸದ ಅವಧಿಯು ಸಹ ಕೆಲವೊಮ್ಮೆ ವಯಸ್ಕರು ಕೆಲಸದ ಅವಧಿಗಿಂತ ಹೆಚ್ಚಿಗಿರುತ್ತದೆ. ಆದಾಗ್ಯೂ ಕೂಡ ಅವರ ವೇತನ ವಯಸ್ಕರ ವೇತನದ ಅರ್ಧದಷ್ಟು. ಇವರ ಮೇಲೆ ಭೂಮಾಲಕರ ಹಾಗೂ ಸಹೋದ್ಯೋಗಿಗಳ ಕಿರುಕಳ. ಸಾಮಾನ್ಯವಾಗಿ ಭೂಮಾಲೀಕರು ಬಾಲಕಾರ್ಮಿಕರು ಕೆಲಸಕ್ಕೆ ದೊರೆಯುವಂತಿದ್ದರೆ ಅವರಿಗೆ ಆದ್ಯತೆಯನ್ನು ಕೊಡುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕೆಲವುಕಡೆ ಇನ್ನೂ ಜಾರಿಯಲ್ಲಿರುವ ಒಂದು ಪದ್ಧತಿ ಏನೆಂದರೆ ಬಡ ತಂದೆ ತಾಯಿಗಳು ಅಥವಾ ಪಾಲಕರು ತಮ್ಮ ಮಕ್ಕಳನ್ನು (೧೦-೧೨ ವಯಸ್ಸಿನ) ದೊಡ್ಡ ಪ್ರಮಾಣದ ರೈತರ ಮತ್ತು ಭೂ ಮಾಲೀಕರ ಮನೆಗಳಲ್ಲಿ ವಾರ್ಷಿಕ ಸಂಬಳದ ಒಪ್ಪಂದದ ಮೇಲೆ ಕೆಲಸಕ್ಕೆ ಬಿಡುತ್ತಾರೆ. ಇಂಥ ಬಾಲಕರು ಹೆಚ್ಚುಕಡಿಮೆ ದಿನಕ್ಕೆ ೧೫ ಅಥವಾ ೧೬ ತಾಸು ಕೆಲಸ ಮಾಡಬೇಕಾಗುತ್ತದೆ. ಅಲ್ಲದೇ ಇವರ ಹೊಟ್ಟೆ ಬಟ್ಟೆಯ ಹೊಣೆಗಾರಿಕೆಯು ಅವರ ಮಾಲೀಕರ ಮೇಲೆಯೇ ಇರುತ್ತದೆ. ಆದ್ದರಿಂದ ಈ ಬಾಲ ಕಾರ್ಮಿಕರ ಜೀವನಕ್ರಮ ಹಾಗೂ ಗತಿ ಅವರ ಮಾಲೀಕರ ಮತ್ತು ಆಯಾ ಕುಟುಂಬಗಳ ಸದಸ್ಯರ ಹತೋಟಿಯಲ್ಲಿ ಇರುತ್ತದೆ. ಈ ಮಕ್ಕಳು ಇಂಥ ಒಂದು ನಿಯಂತ್ರಿತ ವಾತಾವರಣದಲ್ಲಿ ದುಡಿದು, ಬೆಳೆದು. ಒಕ್ಕಲುತನಕ್ಕೆ ಸಂಬಂಧಪಟ್ಟ ಎಲ್ಲ ಕೆಲಸ-ಕಾರ್ಯಗಳನ್ನು ಕಲಿತುಕೊಂಡು ಪ್ರಾಪ್ತವಯಸ್ಕರಾದನಂತರ (ಬಹುಶಃ ದ್ವಿಭುಜರಾದ ನಂತರ) ಸ್ವತಂತ್ರರಾಗುತ್ತಾರೆ.

ನಗರ ಪ್ರದೇಶಗಳಲ್ಲಿ ಕಾರ್ಖಾನೆ, ಇತರಬಗೆಯ ತಯಾರಿಕಾ ಗೃಹಗಳಲ್ಲಿ ಕೆಲಸ ಮಾಡುವ ಮಕ್ಕಳ ಸ್ಥಿತಿಗತಿಗಳು ಗ್ರಾಮೀಣ ಪ್ರದೇಶದಲ್ಲಿಯ ಬಾಲಕಾರ್ಮಿಕರ ಪರಿಸ್ಥಿತಿಗಿಂತಲೂ ಶೋಚನೀಯವೆಂದು ಹೇಳಬಹುದು. ಗ್ರಾಮೀಣ ಪ್ರದೇಶದಲ್ಲಿಯ ಬಾಲ ಕಾರ್ಮಿಕರು ನಿಸರ್ಗದತ್ತವಾದ ನೀರು. ಒಳ್ಳೆಯ ಹವೆ ಹಾಗೂ ಹೊಟ್ಟೆತುಂಬ ಆಹಾರಗಳಿಂದ ಆರೋಗ್ಯವಂತರಾಗಿ ಬೆಳೆಯುತ್ತಾರೆ. ಅಸಂಘಟಿತ ಉದ್ಯೋಗಗಳಾದ ಸಣ್ಣ ಸಣ್ಣ ಹೊಟೆಲ್ಲುಗಳು. ಗೃಹಸೇವೆ. ಚಿಕ್ಕಪುಟ್ಟ ಕಾರ್ಖಾನೆ. ಯಂತ್ರ ರಿಪೇರಿ ಅಂಗಡಿಗಳು ಇತ್ಯಾದಿಗಳಲ್ಲಿ ಕೆಲಸಕ್ಕಿರುವ ಮಕ್ಕಳು ದಿನವೊಂದಕ್ಕೆ ೧೫ ರಿಂದ ೧೬ ತಾಸು ದುಡಿಯಬೇಕಾಗುವದು. ಅವರು ಕೆಲಸಮಾಡುವ ಸ್ಥಳಗಳೂ ಸಹ ಆರೋಗ್ಯಕರವಾಗಿರುವುದಿಲ್ಲ. ಮಾಲೀಕರ ಕಿರಿಕಿರಿಯ ಜೊತೆಗೆ ಅಲ್ಪ ಸಂಬಳ. ನಮ್ಮ ದೇಶದ ಯಾವುದೇ ನಗರದಲ್ಲಿ ಬಾಲ ಕಾರ್ಮಿಕನ ದಿನಗೂಲಿ ೨ ರೂಪಾಯಿಗಿಂತ ಹೆಚ್ಚಿಗೆ ಇಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಜಮಖಾನೆ ನೆಯ್ಗೆಯ ಉದ್ದಿಮೆಯಲ್ಲಿ ಬಾಲಕರು ತಮ್ಮ

೮ ಅಥವಾ ೧೦ ವಯಸ್ಸಿಗೇನೆ ತರಬೇತಿಗಾಗಿ ಸೇರಿಸಿಕೊಳ್ಳುತ್ತಾರೆ. ಆದರೆ ಬೇರೆ ಜಗತ್ತಿನ ಸಂಪರ್ಕವಿಲ್ಲದ ಸಣ್ಣ ಬೆಳಕಿಲ್ಲದ ಕೋಣೆಗಳಲ್ಲಿ ಏಕಾಗ್ರಚಿತ್ತನಾಗಿ ನೆಯ್ಗೆಯ ಕಲೆಯನ್ನು ಕಲಿಯುವದರಲ್ಲಿ ತನ್ನ ನಯವಾದ ಬೆರಳುಗಳನ್ನು ಉಪಯೋಗಿಸುತ್ತ ದಿನದ ಬಹುಭಾಗವನ್ನು ಕಳೆಯುವವನಲ್ಲದೆ ಆಟ. ಪಾಟ, ಶಿಕ್ಷಣ, ವಿನೋದ ಎಲ್ಲವುಗಳಿಂದ ವಂಚಿತನಾಗುತ್ತಾನೆ. ದಿನವೊಂದಕ್ಕೆ ೧೦ ಘಂಟೆಗಳ ಕಾಲ ಆತನು ದುಡಿಯುತ್ತಾ ನಾಳೆಯ ಒಳ್ಳೆಯ ಜಗತ್ತಿನ ನಿರೀಕ್ಷೆಯಲ್ಲಿ ಆಶೆ ಇಟ್ಟುಕೊಂಡಿರುತ್ತಾನೆ. ಆದರೆ ಈ ಉದ್ದಿಮೆ ನಿಷ್ಕರುಣೆಗಳಾದ ಖಾಸಗಿ ವ್ಯವಸ್ಥಾಪಕರ ಹತೋಟಿಯಲ್ಲಿರುವದು. ಅವರು ಬಾಲಕರ ವ್ಯಾದುತ್ವದಿಂದ ಎಳ್ಳಷ್ಟೂ ವಿಚಲಿತರಾಗುವದಿಲ್ಲ. ಕಾಶ್ಮೀರ ಕೊಳ್ಳದ ಜಮಖಾನೆಗಳಿಗೆ ಜಗತ್ತಿನ ಎಲ್ಲ ಭಾಗಗಳಿಂದ ಬೇಡಿಕೆ ಇರುವದರಿಂದ ಬಾಲಕರೆಲ್ಲ ಶಿಕ್ಷಣ ನಿರ್ಲಕ್ಷಿಸಿ ನೆಯ್ಗೆಯ ಕಲೆಯನ್ನು ಕಲಿಯಲು ಹಾತೊರೆಯುತ್ತಾರೆ. ಆದಕಾರಣ ಈ ಉದ್ಯಮದಲ್ಲಿ ಬಾಲ ಕಾರ್ಮಿಕರ ವೇತನ ಬಹಳ ಕಡಿಮೆ ಇದ್ದು ಉತ್ಪತ್ತಿ ಹೆಚ್ಚಿರುವದರಿಂದ ಅವರ ದುಡಿಮೆಯ ದುರ್ಲಾಭ ಪಡೆಯುವ ಪ್ರವೃತ್ತಿ ಅವರ ಮಾಲೀಕರಲ್ಲಿ ಹೆಚ್ಚುತ್ತಿದೆ.

ಮಕ್ಕಳು ಯಾವುದೇ ಉದ್ಯೋಗದಲ್ಲಿ ಇರಲಿ ಅವರ ದೈಹಿಕ, ಮಾನಸಿಕ. ನೈತಿಕ ಬೆಳವಣಿಗೆ ಕುಂಠಿತವಾಗುತ್ತದೆ. ಅವರು ಶಿಕ್ಷಣ ಪಡೆಯಬೇಕಾದ ವಯಸ್ಸಿನಲ್ಲಿ ದುಡಿಮೆಗೆ ತೊಡಗುವದರಿಂದ ಅವರ ವ್ಯಕ್ತಿತ್ವ ವಿಕಾಸನ ಆಗುವದು ತೀರ ಕಡಿಮೆ. ಹಲವು ಬಾಲಕರಂತೂ ತಂದೆ ತಾಯಿಗಳ ಅಥವಾ ಪಾಲಕರ ಹತೋಟಿಯಿಂದ ದೂರವಿರುವದರಿಂದ ಬಹುಬೇಗನೆ ದುಶ್ಚಟಗಳನ್ನು ಕಲಿಯುತ್ತಾರೆ. ಆದರೆ ಸಾಮಾನ್ಯವಾಗಿ ಎಲ್ಲ ಬಾಲ ಕಾರ್ಮಿಕರು ಬಹುಬೇಗ ವ್ಯಾವಹಾರಿಕ ಪ್ರಬುದ್ಧಾವಸ್ಥೆಯನ್ನು ತಲುಪುತ್ತಾರೆನ್ನುವದು ನಿರ್ವಿವಾದ ಸಂಗತಿ. ಆದರೆ ಅದಕ್ಕೆ ಅವರು ತೆತ್ತುವ ಬೆಲೆ ಎಂಥದು? ಇಂಥ ಬಾಲಕರ ಸಲುವಾಗಿ ಸಮಾಜ ಹಾಗೂ ಸರಕಾರದ ಹೊಣೆಗಾರಿಕೆ ಎಂಥದು ಹಾಗೂ ಆ ಹೊಣೆಗಾರಿಕೆಯನ್ನು ಸಮಾಜ ಹಾಗೂ ಸರಕಾರ ಯಾವ ರೀತಿಯಲ್ಲಿ ನಿಭಾಯಿಸುತ್ತಿವೆ ?

ರಾಷ್ಟ್ರವ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಯೋಜನೆಗಳು :

ಅಂತರರಾಷ್ಟ್ರೀಯ ಮಟ್ಟದಲ್ಲಿ ನವ್ಹೆಂಬರ ೨೦, ೧೯೫೯ ರಂದು ಸಂಯುಕ್ತ ರಾಷ್ಟ್ರ ಸಂಸ್ಥೆಯು (U. N. O.) "ಮಾನವೀಯ ಹಕ್ಕುಗಳ" ಅಂಗವಾಗಿ "ಮಕ್ಕಳ ಹಕ್ಕುಗಳ" ಘೋಷಣೆ ಮಾಡಿತು. ಸ್ಥೂಲವಾಗಿ ಈ ಹಕ್ಕುಗಳು ೧೦ ತತ್ವಗಳನ್ನು ಒಳಗೊಂಡಿವೆ. ವಿಶೇಷತಃ ಪ್ರತಿಯೊಂದು ಮಗುವು ಕೆಳಗಿನ ಹಕ್ಕುಗಳಿಗೆ ಬಾಧ್ಯಸ್ಥನಾಗಿರುತ್ತಾನೆ :

೧. ವಾತ್ಸಲ್ಯ ಪ್ರೇಮ ಹಾಗೂ (ಪರರು, ತನ್ನನ್ನು) ಅರಿತುಕೊಳ್ಳುವ ಹಕ್ಕು
೨. ಯಥೋಚಿತ ಪೋಷಣೆ ಹಾಗೂ ವೈದ್ಯಕೀಯ ರಕ್ಷಣೆಯ ಹಕ್ಕು
೩. ಉಚಿತ ಶಿಕ್ಷಣದ ಹಕ್ಕು
೪. ಆಟ ಮತ್ತು ಮನರಂಜನೆಗಳಿಗೆ ಸಂಪೂರ್ಣ ಸದವಕಾಶಗಳು
೫. ಒಂದು ಹೆಸರು ಹಾಗೂ ರಾಷ್ಟ್ರೀಯತೆ (ಪಡೆಯುವ) ಹಕ್ಕು
೬. ಅಂಗವಿಕಲರಿದ್ದರೆ ವಿಶೇಷ ರಕ್ಷಣೆಯ ಹಕ್ಕು
೭. ಆಪತ್ಕಾಲದಲ್ಲಿ ಪ್ರಪ್ರಥಮವಾಗಿ ಸಹಾಯ ಪಡೆಯುವ ಹಕ್ಕು
೮. ಸಮಾಜದ ಒಬ್ಬ ಉತ್ತಮ ಸದಸ್ಯನಾಗಲು ಕಲಿಯುವ ಮತ್ತು ವೈಯಕ್ತಿಕ ಕಾರ್ಯಕ್ಷಮತಾ ಶಕ್ತಿಯನ್ನು ಬೆಳೆಸಿಕೊಳ್ಳುವ ಹಕ್ಕು
೯. ವಿಶ್ವವ್ಯಾಪಿ ಭಾವೈಕ್ಯ ಹಾಗು ಶಾಂತಿಯುತ ವಾತಾವರಣದಲ್ಲಿ ಬೆಳೆಯುವ ಹಕ್ಕು
೧೦. ಈ ಎಲ್ಲ ಹಕ್ಕುಗಳನ್ನು ವರ್ಗ, ವರ್ಣ, ಲಿಂಗ, ಧರ್ಮ, ರಾಷ್ಟ್ರ ಅಥವಾ ಸಾಮಾಜಿಕ ಭೇದಗಳೆನ್ನೆಣಿಸದೇ ಉಪಭೋಗಿಸುವ ಹಕ್ಕು

ಈ ಎಲ್ಲ ಹಕ್ಕುಗಳನ್ನು ಆಚರಣೆಯಲ್ಲಿ ತರಲು ಸಹಾಯಕವಾಗುವಂತೆ ಅಂತರ ರಾಷ್ಟ್ರೀಯ ಘೋಷಣೆಯು ಕೆಲವೊಂದು ತತ್ವಗಳನ್ನು ಸಹ ಒಳಗೊಂಡಿದೆ. ಸಂಯುಕ್ತ ರಾಷ್ಟ್ರಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಈ ಘೋಷಣೆಯಲ್ಲಿ ಒಳಗೊಂಡಿರುವ ಬಾಲಕರ ಹಕ್ಕುಗಳನ್ನು ಕಾನೂನು ಮುಖಾಂತರವಾಗಲೀ ಅಥವಾ ಇನ್ನಾವುದೇ ಯೋಗ್ಯ ಸಾಧನದ ಮುಖಾಂತರವಾಗಲೀ ಆಚರಣೆಯಲ್ಲಿ ತರುವ ಹೊಣೆಯನ್ನು ತತ್ವಶಃ ಒಪ್ಪಿಕೊಂಡಿವೆ. ಆದರೆ ಈ ಘೋಷಣೆ ಹೊರಟು ೨೦ ವರುಷಗಳಾದರೂ ಬಹಳಷ್ಟು ರಾಷ್ಟ್ರಗಳಲ್ಲಿ ಯಾವ ರೀತಿಯ ಪ್ರಗತಿಯೂ ಈ ದಿಶೆಯಲ್ಲಿ ಆಗಿಲ್ಲ. ಈಗ ಸಂಯುಕ್ತರಾಷ್ಟ್ರ ಸಂಸ್ಥೆಯು ಎಲ್ಲ ದೇಶಗಳ ಗಮನವನ್ನು ಬಾಲಕರ ಸಮಸ್ಯೆಗಳ ಕಡೆ ಸೆಳೆಯಲು ಹಾಗೂ 'ಬಾಲಕರ ಹಕ್ಕುಗಳ' ಘೋಷಣೆಯ ೨೦ನೇ ವಾರ್ಷಿಕೋತ್ಸವವನ್ನು ಆಚರಿಸಲು "ಅಂತರರಾಷ್ಟ್ರೀಯ ಶಿಶುವರ್ಷ"ದ ಆಚರಣೆಯನ್ನು ಘೋಷಿಸಿದೆ. ಅಂತೆಯೇ ಜಗತ್ತಿನ ಎಲ್ಲ ರಾಷ್ಟ್ರಗಳು ೧೯೭೯ ನೆಯ ವರ್ಷವನ್ನು ಮಕ್ಕಳ ವರ್ಷವೆಂದು ಆಚರಿಸುತ್ತಿವೆ. ಇದರ ಅಂಗವಾಗಿ ಹಲವೊಂದು ಕಾರ್ಯಕ್ರಮಗಳು ಜಾರಿಯಲ್ಲಿ ಬರುತ್ತಿವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿಯೇ ಸಂಯುಕ್ತರಾಷ್ಟ್ರ ಸಂಸ್ಥೆಯ ಮುಖ್ಯ ಘಟಕವಾದ "ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು" (I.L.O.) ಕಳೆದ ೬೦ ವರುಷಗಳಿಂದ ಬಾಲ ಕಾರ್ಮಿಕರ ಹಿತರಕ್ಷಣೆಯ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಈ ಸಂಸ್ಥೆಯು ತನ್ನ ವಾರ್ಷಿಕ ಅಧಿವೇಶನದಲ್ಲಿ ಸ್ವೀಕರಿಸುವ ಗೊತ್ತುವಳಿ

ಗಳನ್ನು ಸದಸ್ಯರಾಷ್ಟ್ರಗಳು ಆಚರಣೆಯಲ್ಲಿ ತರಬೇಕಾಗುತ್ತದೆ. ಈ ಗೊತ್ತುವಳಿಗಳು ಎರಡು ಬಗೆಯವುಗಳು ಇರುತ್ತವೆ. ೧) ಒಪ್ಪಂದಗಳು (Conventions) ಮತ್ತು ೨) ಶಿಫಾರಸುಗಳು (Recommendations). ಸದಸ್ಯರಾಷ್ಟ್ರಗಳು ಒಪ್ಪಂದಗಳನ್ನು ಕಾನೂನು ಮುಖಾಂತರವಾಗಲೀ ಅಥವಾ ಇನ್ನಾವುದೇ ರೀತಿಯಲ್ಲಾಗಲೀ ಜಾರಿಯಲ್ಲಿ ತರುವ ಹೊಣೆಗಾರಿಕೆಯ ಬಂಧನಕ್ಕೊಳಗಾಗಿರುತ್ತವೆ. ಆದರೆ ಈ ನಿಯಮ ಶಿಫಾರಸುಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅವು ಕೇವಲ ಮಾರ್ಗದರ್ಶಿ ತತ್ವಗಳು. ಇಲ್ಲಿಯವರೆಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಬಾಲ ಕಾರ್ಮಿಕರ ಹಿತ ಸಂಬಂಧವಾಗಿ ೧೮ ಒಪ್ಪಂದಗಳನ್ನು ಹಾಗೂ ೯ ಶಿಫಾರಸುಗಳನ್ನು ಸ್ವೀಕರಿಸಿದೆ. ಆದರೆ ಭಾರತವು ಇವುಗಳಲ್ಲಿ ಕೇವಲ ೪ ಒಪ್ಪಂದಗಳನ್ನು ಮಾತ್ರ ಜಾರಿಯಲ್ಲಿ ತರಲು ಸಮರ್ಥವಾಗಿದೆ. ಇವು ಯಾವುವೆಂದರೆ :

೧. ಕನಿಷ್ಠ ವಯೋಮಿತಿ (ಉದ್ದಿಮೆ) ಒಪ್ಪಂದ ೧೯೧೯ (ನಂ. ೫) ಈ ಒಪ್ಪಂದವು ಬಾಲ ಕಾರ್ಮಿಕರ ಕನಿಷ್ಠ ವಯಸ್ಸನ್ನು ೧೨ಕ್ಕೆ ನಿಗದಿ ಪಡಿಸಿತ್ತು

೨. ಕನಿಷ್ಠ ವಯೋಮಿತಿ (ಓರಣಗಾರ ವ ಉರಿಗಾರ), ಒಪ್ಪಂದ ೧೯೨೧. ಈ ಒಪ್ಪಂದವು ವ್ಯಾಪಾರೀ ಹಡಗುಗಳ ಕಾಯಿದ್ದೆಗೆ ಸಂಬಂಧಪಟ್ಟಂತೆ ಬಾಲಕರ ವಯಸ್ಸನ್ನು ೧೬ ಕ್ಕೆ ನಿಗದಿ ಪಡಿಸುತ್ತದೆ. (ನಂ. ೧೫)

೩. ಎಳೆಯರ ವೈದ್ಯಕೀಯ ಪರೀಕ್ಷೆ. ೧೯೨೧ (ಕನಿಷ್ಠ ವಯಸ್ಸು ೧೮) ಒಪ್ಪಂದ ನಂ. ೧೬.

೪. ಎಳೆಯರ ರಾತ್ರಿ ದುಡಿಮೆ (ಉದ್ದಿಮೆ). ೧೯೪೮ (೧೮ ವಯಸ್ಸಿನ ಕೆಳಗಿನವರಿಗೆ ೧೨ ಘಂಟೆ ಅವಧಿಯ ರಾತ್ರಿ ದುಡಿಮೆ ವರ್ಜ್ಯ) ಒಪ್ಪಂದ. ನಂಬರು ೯೦.

ಭಾರತದಲ್ಲಿ :

ಭಾರತವು ಬಾಲ ಕಾರ್ಮಿಕರ ಕನಿಷ್ಠ ವಯೋಮಿತಿಗೆ ಸಂಬಧಪಾದ ಬೇರೆ ಬೇರೆ ಉದ್ಯೋಗಗಳಿಗೆ ಅನ್ವಯವಾಗುವಂಥ ಇನ್ನುಳಿದ "ಒಪ್ಪಂದಗಳನ್ನು" ಜಾರಿಯಲ್ಲಿ ತರಲು ತನ್ನ ಅಸಮರ್ಥತೆಯನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಗೆ ವ್ಯಕ್ತಪಡಿಸಿದೆ. ಆದಾಗ್ಯೂ ಕೂಡ ೧೯೩೭ರ ಒಪ್ಪಂದವನ್ನು ಅಪರೋಕ್ಷವಾಗಿ ಜಾರಿಯಲ್ಲಿ ತಂದಿದೆ. ಈ ಒಪ್ಪಂದವು ಬಾಲ ಕಾರ್ಮಿಕರ ವಯೋಮಿತಿಯನ್ನು ೧೨ ರಿಂದ ೧೪ಕ್ಕೆ ಏರಿಸಿತ್ತು. ನಮ್ಮ ದೇಶದಲ್ಲಿ ಕಾರ್ಖಾನೆ, ಗಣಿ, ತೋಟ. ಅಥವಾ ಇನ್ನಾವುದೇ ಸಂಘಟಿತ ಉದ್ದಿಮೆಗಳಲ್ಲಿ ಉದ್ಯೋಗಕ್ಕೆ ಸೇರಲು ಬೇಕಾಗುವ ವಯೋಮಿತಿಯು ಬಾಲಕರಿಗೆ ೧೪

ವಯಸ್ಕರಿಗೆ ೧೮ ಎಂದು ನಿಗದಿಯಾಗಿದೆ. ಇನ್ನುಳಿದ ಕೆಲವೊಂದು "ಒಪ್ಪಂದ"ಗಳು ಆಡಳಿತಾತ್ಮಕವಾಗಿ ಬಿಗುವಾದವುಗಳೆಂದು ಜಾರಿಯಲ್ಲಿ ತರದಿರಲು ನಿರ್ಧರಿಸಿದಂತೆ ಕಂಡು ಬರುತ್ತದೆ. ಕನಿಷ್ಠ ವಯೋಮಿತಿ ನಿರ್ಬಂಧನೆಯು ನಮ್ಮ ರಾಜ್ಯ ಘಟನೆಯ ನಿರ್ದೇಶಕ ತತ್ವಗಳ ಚೌಕಟ್ಟಿನಲ್ಲಿ ಸಹ ಇವೆ.

ಅಲ್ಲದೇ ಸಂಘಟಿತ ಉದ್ದಿಮೆಗಳಿಗೆ ಅನ್ವಯವಾಗುವ ಕಾರ್ಖಾನೆಗಳ ಕಾಯ್ದೆ ೧೯೪೮. ಗಣಿಗಳ ಕಾಯ್ದೆ ತೋಟಗಳ ಕಾರ್ಮಿಕರ ಕಾಯ್ದೆ, ೧೯೫೧ ಇತ್ಯಾದಿ ಕಾಯ್ದೆಗಳು ೧೫ ರಿಂದ ೧೮ ವಯಸ್ಸಿನೊಳಗಿನ ಬಾಲಕರನ್ನು ೫ ಗಂಟೆಗಳಿಗಿಂತ ಹೆಚ್ಚಿಗೆ ದುಡಿಸಿಕೊಳ್ಳುವದನ್ನು ಸಹ ಪ್ರತಿಬಂಧಿಸುತ್ತವೆ. ಹಾಗೂ ಈ ಅವಧಿಯಲ್ಲಿ ಅವರಿಗೆ ಕನಿಷ್ಟ ೩೦ ನಿಮಿಷಗಳ ಕಾಲ ವಿಶ್ರಾಂತಿ ಕೊಡಬೇಕೆಂದು ವಿಧಿಸುತ್ತವೆ. ಇದೂ ಅಲ್ಲದೇ, ಇಂಥ ಬಾಲಕರು ದೈಹಿಕವಾಗಿ ವಯಸ್ಕರಂತೆ ಕೆಲಸ ಮಾಡಲು ಸಮರ್ಥರಿದ್ದರೆ ಆ ಬಗ್ಗೆ ಸಂಬಂಧಪಟ್ಟ ವೈದ್ಯಾಧಿಕಾರಿಯಿಂದ ಪ್ರಮಾಣ ಪತ್ರ ಪಡೆಯಬೇಕಾಗುತ್ತದೆ. ಇಂಥ ಪ್ರಮಾಣ ಪತ್ರ ಕೇವಲ ಒಂದು ವರುಷದ ಮಟ್ಟಿಗೆ ಮಾತ್ರ ಕ್ರಮಬದ್ಧವಾಗಿ ಉಳಿಯುವದು. ಯಾವುದೇ ಪ್ರಮಾಣ ಪತ್ರವನ್ನು ಒಂದು ವರುಷ ಮುಗಿಯುವದರೊಳಗಾಗಿ ಸರಕಾರದ ಅಧಿಕಾರಿಗಳು ವೈದ್ಯಕೀಯ ತಪಾಸಣೆಯ ಆಧಾರದ ಮೇಲೆ ರದ್ದುಪಡಿಸಬಹುದು. ಇಂಥ ವೈದ್ಯಕೀಯ ಪರೀಕ್ಷೆಯ ಖರ್ಚನ್ನು ಕಾರ್ಖಾನೆಯ ಮಾಲೀಕರೇ, ವ್ಯವಸ್ಥಾಪಕರೇ ನೋಡಿಕೊಳ್ಳಬೇಕಾಗುವದಲ್ಲದೇ ಎಳೆಯ ವಯಸ್ಸಿನ/ಬಾಲ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಹಲವಾರು ವಿಶೇಷ ದಾಖಲೆಗಳನ್ನು ಅವರು ಇಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ಸಂಘಟಿತ ಉದ್ದಿಮೆ ರಂಗದಲ್ಲಿ ಇತ್ತೀಚೆಗೆ ಬಾಲ ಕಾರ್ಮಿಕರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವ ಮಾಲೀಕರ ಪ್ರವೃತ್ತಿ ಮತ್ತು ರೂಢಿ ನಿಂತು ಹೋಗಿದೆ ಎಂದು ಹೇಳಬಹುದು. ಈ ಸಂಗತಿಯನ್ನು "ರಾಷ್ಟ್ರೀಯ ಕಾರ್ಮಿಕ ಆಯೋಗವು" (ನ್ಯಾಯಮೂರ್ತಿ ಗಜೇಂದ್ರಗಡಕರ ಆಯೋಗ) ಸಹ ತನ್ನ ವರದಿಯಲ್ಲಿ ದೃಢ ಪಡಿಸಿದೆ. ಆದರೆ ಚಹ. ಕಾಫೀ, ರಬ್ಬರ ಮತ್ತು ಸಿಂಕೋನಾ ತೋಟಗಳಲ್ಲಿ ಬಾಲ ಕಾರ್ಮಿಕರನ್ನು ನಾವು ಇನ್ನೂ ಕಾಣಬಹುದು.

ರಾಜ್ಯಸರಕಾರಗಳ ವ್ಯವಸ್ಥೆ :

ಮುಖ್ಯವಾಗಿ ಕಾರ್ಖಾನೆಗಳ ಕಾಯ್ದೆಯನ್ನು ಆಧರಿಸಿ ಎಲ್ಲ ರಾಜ್ಯಸರಕಾರಗಳು "ಅಂಗಡಿ ಮತ್ತು ವಾಣಿಜ್ಯಸಂಸ್ಥೆಗಳ ಕಾಯ್ದೆಗಳನ್ನು ಪಾಸುಮಾಡಿವೆ. ಈ ಕಾಯ್ದೆಯು ಚಿಕ್ಕಪುಟ್ಟ ಕಾರ್ಯಾಗಾರಗಳಿಗೆ— ಕಾರ್ಖಾನೆ ಕಾಯ್ದೆಯು ಅನ್ವಯವಾಗದಂಥವು— ವಿವಿಧ ಬಗೆಯ ಅಂಗಡಿಗಳು ಈ ಕಾಯ್ದೆಗಳ ವ್ಯಾಪ್ತಿಯಲ್ಲಿ ಬರುತ್ತವೆ. ಈ ಕಾಯ್ದೆಗಳಾದರೂ ಸಹ ೧೪ಕ್ಕಿಂತ ಕಡಿಮೆ ವಯಸ್ಸಿನ ಬಾಲಕರನ್ನು ಕೆಲಸಕ್ಕೆ ನಿಯಮಿಸಿಕೊಳ್ಳುವದನ್ನು ಪ್ರತಿಬಂಧಿಸುತ್ತವೆ. ಆದರೆ ಈ ಕಾಯ್ದೆಗಳ ಆಚರಣೆ ಯಾವ ದೃಷ್ಟಿಯಿಂದಲೂ

ತೃಪ್ತಿಕರವಿಲ್ಲ. ಅಂತೆಯೇ ನಾವು ಚಿಕ್ಕಪುಟ್ಟ ಅಂಗಡಿಗಳಲ್ಲಿ, ಸಣ್ಣ ಸಣ್ಣ ಹೋಟೆಲುಗಳಲ್ಲಿ ಬಾಲ ಕಾರ್ಮಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತೇವೆ.

ಸರ್ವಸಾಮಾನ್ಯ ಕಾಯ್ದೆಗಳು :

ನಮ್ಮ ದೇಶದಲ್ಲಿ ಬಾಲಕಾರ್ಮಿಕರಿಗೆ ಸಂಬಂಧಪಟ್ಟಂತೆ ಅಂದರೆ ಉಳಿದ ಉದ್ಯೋಗ ರಂಗಗಳಿಗೆ ಹಾಗೂ ಬಾಲಕಾರ್ಮಿಕರ ಪಾಲಕರಿಗೆ ಅನ್ವಯವಾಗುವಂಥ ಇನ್ನೆರಡು ಕಾಯ್ದೆಗಳು ಜಾರಿಯಲ್ಲಿ ಇವೆ. ಇವು ಯಾವುಗಳೆಂದರೆ : ೧) ಮಕ್ಕಳ ಉದ್ಯೋಗ ಕಾಯ್ದೆ ೧೯೩೮ ಮತ್ತು ೨) ಮಕ್ಕಳ (ದುಡಿಮೆ ಒತ್ತೆ) ಕಾಯ್ದೆ ೧೯೩೩. ಇವುಗಳಲ್ಲಿ ಮೊದಲನೆಯದರ ವ್ಯಾಪ್ತಿಯು ಬಹಳ ವಿಸ್ತಾರವಾಗಿದ್ದು ಅದು ೧೫ ಕ್ಕಿಂತ ಕಡಿಮೆ ವಯಸ್ಸಿನ ಬಾಲಕರನ್ನು ಬಂದರುಗಳ (Ports) ವ್ಯಾಪ್ತಿಯಲ್ಲಿರುವ ಯಾವುದೇ ಉದ್ಯೋಗದಲ್ಲಿ ತೊಡಗಿಸುವದನ್ನು ಪ್ರತಿಬಂಧಿಸುತ್ತದೆ. ಅಲ್ಲದೇ ೧೫ ರಿಂದ ೧೭ ವಯಸ್ಸಿನ ಯಾವುದೇ ಮಗುವು ಪುನಃ ಕೆಲಸಕ್ಕೆ ಹಾಜರಾಗುವ ಮೊದಲು ಕನಿಷ್ಠ ೧೨ ತಾಸುಗಳ ವಿಶ್ರಾಂತಿಯನ್ನು ಪಡೆಯಲು ಅವಕಾಶವಿರಬೇಕೆಂದು ವಿಧಿಸುತ್ತದೆ. ಇದೂ ಅಲ್ಲದೇ ಈ ಕಾಯ್ದೆಯು ೧೪ ವಯಸ್ಸಿನ ಒಳಗಿನ ಮಕ್ಕಳನ್ನು ಬೀಡಿ, ಜಮಖಾನೆ ನೇಯ್ಗೆ, ಸಿಮೆಂಟು, ಬಟ್ಟೆ ಮುದ್ರಿಸುವ, (ಬಟ್ಟೆಗಳಿಗೆ) ಬಣ್ಣಹಾಕುವ ಹಾಗೂ ನೇಯ್ಗೆಯ, ಕಡ್ಡಿಪೆಟ್ಟಿಗೆ ಇತ್ಯಾದಿ ತಯಾರಿಸುವ ಕಾರ್ಖಾನೆಗಳಲ್ಲಿ, ಸ್ಫೋಟಕ ಮತ್ತು ಸಿಡಿಮದ್ದಿನ ಕೆಲಸ, ಅಭ್ರಕ ಕತ್ತರಿಸುವ ಮತ್ತು ಸೀಳುವ, ಅರಗು ತಯಾರಿಸುವ, ಸಾಬೂನು ತಯಾರಿಸುವ, ತೊಗಲು ಹದಮಾಡುವಿಕೆ ಮತ್ತು ಶುದ್ಧೀಕರಣ ಹಾಗೂ ಇತರ ಕಾರ್ಖಾಗಾರಗಳಲ್ಲಿ ಉದ್ಯೋಗಕ್ಕೆ ಸೇರುವದನ್ನು ಪ್ರತಿಬಂಧಿಸುತ್ತದೆ. ಇದೇ ಕಾಯ್ದೆಯ ಪ್ರಕಾರ, ರೇಲ್ವೆ ಆಡಳಿತ ಮತ್ತು ಬಂದರು ಅಧಿಕಾರಿಗಳು, ೧೭ ವಯಸ್ಸಿನ ಒಳಗಿನ ಮಕ್ಕಳನ್ನು ಕೆಲಸಕ್ಕೆ ನಿಯಮಿಸಿಕೊಂಡಿದ್ದರೆ, ಅಂಥವರ ಹೆಸರು, ಜನ್ಮ ತಾರೀಖು ಇತ್ಯಾದಿಗಳ ವಿಶೇಷ ದಾಖಲೆಯನ್ನು ಇಡಬೇಕಾಗುತ್ತದೆ.

ಇನ್ನು ಮಕ್ಕಳ (ದುಡಿಮೆ ಒತ್ತೆ) ಕಾಯ್ದೆಯು ತಂದೆ ತಾಯಿಗಳು ಅಥವಾ ಪಾಲಕರು ತಾವು ಇನ್ನೊಬ್ಬರಿಂದ ತೆಗೆದುಕೊಂಡ ಸಾಲ ಅಥವಾ ಕೈಗಡದ ಬದಲಿಗೆ ಮಕ್ಕಳ ದುಡಿಮೆಯನ್ನು ಅಡವು, ಗಿರವಿ ಅಥವಾ ಒತ್ತೆ ಇಡುವದರಿಂದ ಉದ್ಭವವಾಗುವ ದುಷ್ಪರಿಣಾಮ ಹಾಗೂ ಸಮಸ್ಯೆಗಳನ್ನು ತಡೆಗಟ್ಟಲು ಪ್ರಯತ್ನಿಸುತ್ತದೆ. ೧೫ಕ್ಕಿಂತ ಕಡಿಮೆ ವಯಸ್ಸಿನ ಬಾಲಕನ ದುಡಿಮೆಯನ್ನು ಅಡವು ಇಟ್ಟು ಆತನ ತಂದೆಯಾಗಲೀ ಅಥವಾ ಪಾಲಕನಾಗಲೀ ಒಪ್ಪಂದಮಾಡಿಕೊಂಡಿದ್ದರೆ ಅಂಥ ಒಪ್ಪಂದವನ್ನು ಈ ಕಾಯ್ದೆಯು ನ್ಯಾಯಬಾಹಿರವೆಂದು ಪರಿಗಣಿಸುತ್ತದೆ. ಈ ಕಾಯ್ದೆಯು ೧೯೩೩ರಲ್ಲಿಯೇ ಜಾರಿಯಲ್ಲಿ ಬಂದಿದ್ದರೂ ಸಹ ಅದರ ಆಚರಣೆ ಮಾತ್ರ ಅಸಮರ್ಪಕವೆಂದೇ ಹೇಳಬೇಕು.

ಈ ಎಲ್ಲ ಕಾಯ್ದೆಗಳಿದ್ದೂ ಸಹ ಬಾಲಕಾರ್ಮಿಕರ ಸಂಖ್ಯೆ ಹಾಗು ಸಮಸ್ಯೆಗಳು ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹಾಗೂ ಸಮಸ್ಯೆಗಳ ಜತೆಗೇನೆ ಬೆಳೆಯುತ್ತಿವೆ. ಎಳೆವಯಸ್ಸಿನ ಮಕ್ಕಳು ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ತಮ್ಮ ಕುಟುಂಬಗಳ ಸಲುವಾಗಿಯಾಗಲೀ ಅಥವಾ ತಮ್ಮ ಸಲುವಾಗಿಯಾಗಿಯೇ ಆಗಲೀ ಪರಿಶ್ರಮದ ದುಡಿಮೆಯಲ್ಲಿ ತೊಡಗುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸಲು ನಾವು ಒಟ್ಟಾರೆ ಅಸಮರ್ಥರಾಗಿದ್ದೇವೆ. ಭಾರತ ಸರಕಾರವು "ಅಂತರರಾಷ್ಟ್ರೀಯ ಮಕ್ಕಳ ವರ್ಷ"ದ ಅಂಗವಾಗಿ ಹಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಕೇವಲ ಒಂದು ಕ್ರಮ (ಕಾರ್ಯಕ್ರಮವಲ್ಲ) ಮಾತ್ರ ಬಾಲಕಾರ್ಮಿಕರಿಗೆ ಸಂಬಂಧಿಸಿದೆ. ಅದಾವುದೆಂದರೆ ಈ ವರ್ಷದ ಆದಿಯಲ್ಲಿ ಅದು ಬಾಲಕಾರ್ಮಿಕರ ಸಮಸ್ಯೆಯನ್ನು ಅಭ್ಯಸಿಸಿ ವರದಿ ಸಲ್ಲಿಸಲು ಕನ್ನಡಿಗರಾದ ಶ್ರೀ ಗುರುಪಾದಸ್ವಾಮಿ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ನಿಯಮಿಸಿದರೆ ಈ ಆಯೋಗವು ಕರ್ನಾಟಕದಲ್ಲಿ ಮೈಸೂರು ಹಾಗೂ ಇನ್ನೊಂದು ಕಡೆ ವಿಶೇಷ ಸಂಶೋಧನೆಯನ್ನು ಕೈಗೊಳ್ಳಲಿದೆ. ಈ ಆಯೋಗದ ವರದಿಯು ಈ ವರ್ಷದ ಕೊನೆಗೆ ಸರಕಾರದ ಕೈಸೇರಲಿದೆ.

ಸಮಸ್ಯೆಯ ಪರಿಹಾರ ಎಂತು ?

ಬಾಲ ಕಾರ್ಮಿಕರ ಸಮಸ್ಯೆಗಳಿಗೆ ಎರಡು ಬಗೆಯ ಪರಿಹಾರ ಕ್ರಮಗಳನ್ನು ಸೂಚಿಸಬಹುದು. ೧) ಪ್ರತಿಬಂಧಕ ಮತ್ತು ೨) ಚಿಕಿತ್ಸಾತ್ಮಕ. ಇವುಗಳಲ್ಲಿ ಚಿಕಿತ್ಸಾತ್ಮಕ ಕ್ರಮಗಳು ಈಗಾಗಲೇ ಜಾರಿಯಲ್ಲಿರುವ ಕೆಲವೊಂದು ಕಾಯ್ದೆ ಕಾನೂನುಗಳನ್ನು ಸರಿಯಾಗಿ ಆಚರಣೆಯಲ್ಲಿ ತರುವ ದಿಶೆಯಲ್ಲಿ ಇದ್ದರೆ. ಪ್ರತಿಬಂಧಕ ಕ್ರಮಗಳು ಮೂಲತಃ ಸಾಮಾಜಿಕ ಆರ್ಥಿಕ ಸ್ವರೂಪದವುಗಳಾಗಿವೆಯಲ್ಲದೇ ದೀರ್ಘಾವಧಿಯವುಗಳಾಗಿವೆ. ಈ ಎರಡೂ ಬಗೆಯ ಕ್ರಮಗಳನ್ನು ಏಕಕಾಲದಲ್ಲಿಯೇ ಕೈಗೊಳ್ಳಬೇಕು. ಅಂದರೇನೆ ಸಮಸ್ಯೆಯ ಪರಿಹಾರ ಸಾಧ್ಯ.

೧. ಮಕ್ಕಳ ದುಡಿಮೆಯ ಮೇಲೆ ಸಂಪೂರ್ಣ ನಿಷೇಧ
೨. ಮಕ್ಕಳನ್ನು ಉದ್ಯೋಗದಲ್ಲಿ ತೊಡಗಿಸುವವರ ಹಾಗೂ ಉದ್ಯೋಗಕ್ಕೆ ಸೇರಿಸಿಕೊಳ್ಳುವವರ ಮೇಲೆ ಉಗ್ರಕ್ರಮ
೩. ವಯೋಮಿತಿಗೆ ಸಂಬಂಧಪಟ್ಟ ಎಲ್ಲ ಕಾಯ್ದೆಗಳ ನಿಕೃಷ್ಟವಾದ ಆಚರಣೆ
೪. ೧೪ ವಯಸ್ಸಿನ ಎಲ್ಲ ಮಕ್ಕಳಿಗೆ ಕಡ್ಡಾಯ ಹಾಗೂ ಉಚಿತ ಶಿಕ್ಷಣ ಹಾಗೂ ಅದಕ್ಕೆ ಅವಶ್ಯವಿರುವ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು
೫. ಈಗ ವಿವಿಧ ಉದ್ಯೋಗಗಳಲ್ಲಿ ಇರುವ ಬಾಲ ಕಾರ್ಮಿಕರಿಗೆ ತಮ್ಮ ಹಿತ ರಕ್ಷಣೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಂಘ, ಸಂಸ್ಥೆಗಳನ್ನು

ಕಟ್ಟಿಕೊಳ್ಳಲು ಕಾನೂನು ರೀತ್ಯಾ ಅನುಕೂಲ ಮಾಡಿಕೊಡುವದು. ಏಕೆಂದರೆ ಈಗಿರುವ ಕಾಯ್ದೆಯ ಚೌಕಟ್ಟಿನಲ್ಲಿ ೧೫ ವಯಸ್ಸಿನ ಕೆಳಗಿನ ಮಕ್ಕಳು ಇಂಥ ಸೌಲಭ್ಯಕ್ಕೆ ಅರ್ಹರಿಲ್ಲ

೬. ಸಾಮಾಜಿಕ ಸಹಾಯ (Social Assitance) ಯೋಜನೆ: ಈ ಯೋಜನೆ ನಿರ್ಗತಿಕ, ವಯಸ್ಕ ದುಡಿಮೆಗಾರರು ಇಲ್ಲದಂಥ ಹಾಗೂ ಕಡುಬಡವ ಕುಟುಂಬಗಳಿಗೆ ಅನ್ವಯವಾಗತಕ್ಕದ್ದು

೭. ಎಲ್ಲ ಅನಾಥ ಹಾಗೂ ನಿರ್ಗತಿಕ ಮಕ್ಕಳ ಸಲುವಾಗಿ ಸರಕಾರ ವಿಶೇಷ ಗೃಹಗಳನ್ನು ತೆರೆದು ಅವರ ಶಿಕ್ಷಣ, ತರಬೇತಿ ಹಾಗೂ ಜೀವನೋಪಾಯ ಮಾರ್ಗಗಳನ್ನು ಕಲ್ಪಿಸಿಕೊಡಬೇಕು.

ಗ್ರಂಥ ಋಣ

1. S. D. Punekar 1979 — "Legislation Concerning Child Labour" in *Labour Chronicle* Vol. 12 (1) June, 1979. Institute of Workers' Education Bombay.

2. (Smt) S. A. Vaid 1979 — "Trade Unions & Child Labour" in *Labour Chronicle* Vol. 12 (1) June 1979

3. Wasim Baccha 1979 — "Save the Child" in *Iccw News Bulletin* Vol. 27 (2) May 1979, Indian Council for Child welfare, New Delhi-2.

ಬಾಲಾಪರಾಧ-ಒಂದು ಆಧುನಿಕ ವಿವೇಚನೆ*

● ಅನು : ಲಲಿತಾಂಬಾ ವೃಷಭೇಂದ್ರಸ್ವಾಮಿ

ಪಟ್ಟಣಗಳು ಬೆಳೆ-ಬೆಳೆದಂತೆ ಮತ್ತು ನಾಗರೀಕ ಜೀವನ ಜಟಿಲವಾದಂತೆ ಬಾಲಾಪರಾಧಗಳು, ದುಷ್ಕೃತ್ಯಗಳು. ಮಾನಸಿಕ ಅಸ್ವಾಸ್ಥತೆ ಮುಂತಾದ ಸಮಸ್ಯೆಗಳು ಉದ್ಭವಿಸುತ್ತವೆ. ನಿಕಟಸಂಪರ್ಕವುಳ್ಳ ಹಳ್ಳಿಗಳ ಪರಿಮಿತ ಜನಸಮುದಾಯದಲ್ಲಿ ಅಪರಾಧ ಮತ್ತು ಮಾನಸಿಕ ಅಸ್ವಾಸ್ಥತೆಯ ಸಮಸ್ಯೆಗಳು ಹೆಚ್ಚಾಗಿ ಇರುವದಿಲ್ಲ.

ಅಪರಾಧವು ಸಾಮಾಜಿಕ ವಿಷಯ ಎಂಬುದನ್ನು ನಾವು ಮೊದಲು ಮನಗಾಣಬೇಕು. ಪ್ರತಿಯೊಂದು ಸಮಾಜವೂ ತನ್ನ ನಂಬಿಕೆಗೆ ಮತ್ತು ಭಾವನೆಗೆ ಒಪ್ಪಿಗೆಯಾದ ಕೆಲವೊಂದು ರೀತಿ-ನೀತಿಗಳನ್ನು, ನಡೆನುಡಿಗಳನ್ನು ರೂಪಿಸಿಕೊಂಡಿರುತ್ತದೆ. ಈ ಸಮಾಜಿಕ ಕಟ್ಟಳೆಗಳನ್ನು ಕಡೆಗಣಿಸುವ ವ್ಯಕ್ತಿ ಸಮಾಜ ಮತ್ತು ಕಾನೂನನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ. ಅಪರಾಧಿಯು ತನ್ನ ದುಷ್ಕೃತ್ಯಗಳಿಂದ ಸಮಾಜದಲ್ಲಿಯ ಜನರಿಗೋ ಅಥವಾ ಅವರ ಸ್ವತ್ತಿಗೋ ಧಕ್ಕೆಯುಂಟುಮಾಡುತ್ತಾನೆ. ಯಾವುದರಿಂದ ಧಕ್ಕೆಯುಂಟಾಗುತ್ತದೆ, ಯಾವ-ಯಾವ ಕೃತ್ಯಗಳು ಅಪರಾಧವೆಂದು ಪರಿಗಣಿಸಲ್ಪಡುತ್ತವೆ ಎನ್ನುವ ಸಂಗತಿ ಆಯಾ ಸಮಾಜದ ಕಾನೂನು-ಕಟ್ಟಳೆಗಳನ್ನು ಅವಲಂಬಿಸುತ್ತದೆ.

ದುಷ್ಕೃತ್ಯಗಳನ್ನು ಮಾಡುವ ಪ್ರವೃತ್ತಿ ಸ್ವಭಾವಜನ್ಯವಾದುದಲ್ಲ. ಕಲಿತ ನಡೆಗಳಿಂದ ಉಂಟಾಗುತ್ತದೆ. ದುಷ್ಕೃತ್ಯಗಳನ್ನು ಮಾಡುವುದರಿಂದ ಅಂತಹವರಿಗೆ ಮೊದ-ಮೊದಲು ತೃಪ್ತಿಯುಂಟಾಗುತ್ತದೆ. ಆದುದರಿಂದ ಅವರು ಮೇಲಿಂದ ಮೇಲೆ ಆ ರೀತಿಯ ಕೆಲಸಗಳಲ್ಲಿ ತೊಡಗುತ್ತಾರೆ. ಕ್ರಮೇಣವಾಗಿ ಅದು ಅವರ ಸ್ವಾಭಾವಿಕ ಪ್ರವೃತ್ತಿಯಾಗಿಬಿಡುವುದು. ಒಮ್ಮೆ ಅಂತಹ ಚಟಕ್ಕೆ ಒಳಗಾಗಿಬಿಟ್ಟವರು. ತಾವೇ ಅದನ್ನು ಬಿಡಬೇಕೆಂದು ಮನಸ್ಸುಮಾಡಿದರೂ, ಬಯಸಿದರೂ ಬಿಡಲಿಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗಿಬಿಡುತ್ತದೆ.

---

* Modern Concept of Juvenile Delinquency by Vinod Kumar Singh, M. A. Dip. in Guidance (Alld) D. M. & S. P. (Calcutta) *The Educational Review.* June Vol. LXXVI No.6

ಸುಸಂಸ್ಕೃತವಾದ ವಿಶಾಲ ಸಮಾಜದಲ್ಲಿಯ ಹಾಗೂ ಅಸಂಸ್ಕೃತವಾದ ಸಣ್ಣ ಗುಂಪಿನಲ್ಲಿ ಇರುವ ಸಮಾಜಿಕ ಮೌಲ್ಯಗಳ ತಾರತಮ್ಯವೇ ಅಪರಾಧದ ಇನ್ನೊಂದು ಮುಖ. ಅಪರಾಧೀ ಕೃತ್ಯಗಳು 'ಗ್ಯಾಂಗಿ'ನವರಿಂದ ಮೆಚ್ಚುಗೆ ಪಡೆಯಬಹುದು: ಹೊಗಳಲ್ಪಡಬಹುದು. ಆದರೆ ಕಾನೂನಾಗಲೀ, ಕುಟುಂಬವಾಗಲೀ, ಸಮಾಜವಾಗಲೀ ಅವುಗಳನ್ನು ಒಪ್ಪುವದಿಲ್ಲ. ಆಗ ಅಪರಾಧಿಯಾದ ಹುಡುಗನು ತನ್ನ ಕೃತ್ಯವನ್ನು ಬಹುಜನ ಸಮಾಜವು ಒಪ್ಪುವದಿಲ್ಲವೆಂಬ ಹೆದರಿಕೆಯಿಂದ ಇನ್ನೂ ಹೆಚ್ಚಿನ ಎಚ್ಚರಿಕೆಯಿಂದ ಮಾಡಲು ಪ್ರಯತ್ನಿಸುತ್ತಾನೆ.

ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದು ಸಮಾಜದ ಒಂದು ಅತೀ ಮುಖ್ಯ ಹೊಣೆ. ಅದರಲ್ಲಿಯೂ ಪ್ರಜಾಪ್ರಭುತ್ವವು ಎಲ್ಲರಿಗೂ ಸಾಧ್ಯವಾದಮಟ್ಟಿಗೆ ಅಗತ್ಯವಾದ ಶಿಕ್ಷಣ ಒದಗಿಸಲು ಪ್ರಯತ್ನಿಸುತ್ತದೆ. ಈ ಪ್ರಯತ್ನ ಜನಪ್ರಿಯವಾದುದು ಮತ್ತು ಆದರ್ಶಮಯವಾದುದೇನೋ ಹೌದು. ಆದರೆ ಸಂಪೂರ್ಣವಾಗಿ ಅದನ್ನು ಈಡೇರಿಸಲು ಸಮಾಜ ಅಸಮರ್ಥವಾಗಿದೆ. ನಮ್ಮ ಶಾಲೆಗಳಲ್ಲಿ ಬಹಳಷ್ಟು ಮಕ್ಕಳಿಗೆ ಸಂಪೂರ್ಣ ಮಟ್ಟದಲ್ಲಿ ವಿದ್ಯೆ ಕೊಡುವುದು ಸಾಧ್ಯವಾಗಿಲ್ಲ. ಆದುದರಿಂದ ಅಂತಹ ಮಕ್ಕಳಲ್ಲೇ ಅನೇಕರು ಬಾಲಾಪರಾಧಿಗಳಾಗಿದ್ದಾರೆ. ಈಗ ಅಂತಹ ಮಕ್ಕಳ ಬಗ್ಗೆ ವಿಶೇಷ ಆಸಕ್ತಿ ತೀವ್ರತರವಾಗಿ ಬೆಳೆಯುತ್ತಿದೆ.

ಪರಿಣಿತರಾದ ತಜ್ಞರು ಈ ದಿಶೆಯಲ್ಲಿ ಆಸಕ್ತಿ ವಹಿಸಬೇಕು. ಅವರು ತಮ್ಮ ಬುದ್ಧಿ ಚಾತುರ್ಯ, ಕೌಶಲ್ಯ, ಪರಿಶೀಲನ ಮುಂತಾದ ಶಕ್ತಿಗಳನ್ನು ಬಾಲಾಪರಾಧಿಗಳ ವಿಷಯದಲ್ಲಿ ಉಪಯೋಗಿಸುವುದು ಅವಶ್ಯವಿದೆ. ಈ ಅಪರಾಧಿಗಳಲ್ಲಿ ಸಾಕಷ್ಟು ಬುದ್ಧಿಶಕ್ತಿ ಇರುತ್ತದೆ. ಆದರೆ ಅದನ್ನು ಅವರು ತಮ್ಮ ಬೌದ್ಧಿಕ ಬೆಳವಣಿಗೆಗೆ ಉಪಯೋಗಿಸಿಕೊಂಡು ಸಾಮಾಜಿಕ ಹಾಗೂ ವಿದ್ಯಾಭ್ಯಾಸದ ಗುರಿಮುಟ್ಟಲು ಬಳಸಿಕೊಳ್ಳುವದಿಲ್ಲ. ಕುಮಾರ್ಗದಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಅಪರಾಧಿಯೆಂದರೆ ಸಾಮಾನ್ಯವಾಗಿ ಜೀವನದಲ್ಲಿ 'ಗೆಲುವಿನ ಮಾದರಿ'ಯ ಬದಲು ಸೋಲಿನ ಮಾದರಿಯನ್ನು ಪಡೆದವನು ಎಂದು ಹೇಳಬಹುದು.

ಸಮಾಜದಲ್ಲಿ ಈ ಸಮಸ್ಯೆ ಹಲವರ ವಿಚಾರಗಳನ್ನು ಪ್ರಚೋದಿಸಿತು. ಅನೇಕರು ಈ ಅಪರಾಧ ಪ್ರವೃತ್ತಿಗೆ ಕಾರ್ಯ ಕಾರಣಗಳನ್ನು ಕಂಡುಹಿಡಿಯಬೇಕೆಂದು ಮಹತ್ತರ ಪ್ರಯತ್ನಗಳನ್ನು ಮಾಡಿದರು. ಆದರೆ ಅವರೆಲ್ಲಾ ಈ ಪ್ರವೃತ್ತಿ ಒಂದು ರೀತಿಯ 'ನೈತಿಕ ಭ್ರಾಂತಿ'ಯ ರೂಪದ ಮಾನಸಿಕ ರೋಗ ಎಂಬ ಅಭಿಪ್ರಾಯಕ್ಕೆ ಎಡೆಗೊಡುವ ನಿರ್ಣಯಕ್ಕೆ ಬಂದರು. ೧೯೧೮ರಲ್ಲಿ ಗ್ರೊಹವಸ್ನನು ಇದು ನೈತಿಕ ಅಧಃಪತನ ಎಂದು ಭಾವಿಸಿದನು. ಇಪ್ಪತ್ತನೆಯ ಶತಮಾನದಲ್ಲಿ ಅಪರಾಧಗಳ ಅಭ್ಯಾಸದ ಬಗೆಗೆ ವಿಶೇಷವಾದ ಬದಲಾವಣೆಯು ಕಂಡುಬಂದಿದೆ. ಸಮಾಜ ವಿರೋಧಿ ಕೃತ್ಯಗಳನ್ನು ಈ

ಮೊದಲು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಮಾರ್ಗ ಮತ್ತು ತಮಗಾದ ಅನ್ಯಾಯಕ್ಕೆ ತಕ್ಕಂತೆ ತೋರಿಸುವ ಪ್ರತೀಕಾರ ಮನೋಭಾವ ಎಂದು ಭಾವಿಸುತ್ತಿದ್ದರು. ಆದರೆ ಅದನ್ನು ಈಗ ಹಾಗೆ ಭಾವಿಸುವುದಿಲ್ಲ. ಅಂತಹ ಕೃತ್ಯಗಳು ಮಗುವಿನ ವ್ಯಕ್ತಿತ್ವವನ್ನು ಅಭ್ಯಸಿಸಲು ದೊರೆತಿರುವ ನಿಷ್ಪಕ್ಷಪಾತವಾದ ಕುರುಹು ಎಂದು ಪರಿಗಣಿಸಲ್ಪಟ್ಟಿವೆ. ಇದೇ ಅಪರಾಧಗಳ ಅಭ್ಯಾಸದ ಬಗೆಗೆ ಉಂಟಾಗಿರುವ ಮಹತ್ತರ ಬದಲಾವಣೆ.

ಸಿದ್ಧಾಂತ :

ಡೆಲಿಂಕ್ವೆನ್ಸಿ ಎನ್ನುವದು ಒಂದು ಸೂಕ್ಷ್ಮಪದ. ಏಕೆಂದರೆ ಇದರಲ್ಲಿ ವ್ಯಾಖ್ಯಾಕಾರನು ಈ ಪದದ ವ್ಯಾಖ್ಯೆ ಮಾಡುವಾಗ ತನಗೆ ಬೇಕಾದುದನ್ನು ಸೇರಿಸಲು ಹಾಗೂ ಬೇಡವಾದುದನ್ನು ಬಿಡಲೂ ಸಾಧ್ಯವಿದೆ. ತಾಂತ್ರಿಕವಾಗಿ ಹೇಳುವುದಾದರೆ ಇಂತಿಷ್ಟು ವಯಸ್ಸಿನಿಂದ ಇಂತಿಷ್ಟು ವಯಸ್ಸಿನವರೆಗಿನ ಮಕ್ಕಳು ಶಾಸನ ಮತ್ತು ಕಾಯದೆಗಳನ್ನು ಕಡೆಗಣಿಸಿ ಮಾಡುವ ದುಷ್ಕೃತ್ಯಗಳಿಗೆ ಬಾಲಾಪರಾಧವೆನ್ನುತ್ತಾರೆ. ಶೌರಿಯು ವ್ಯಕ್ತಿ ಮತ್ತು ಸಮಾಜಕ್ಕೆ ಒಪ್ಪಿತವಾದ ನಾಲ್ಕು ರೀತಿಯ ನಡತೆಗಳನ್ನು ಹೇಳುತ್ತಾನೆ.

೧) ನಡತೆಯು ಸಾಮಾಜಿಕವಾಗಿ ಒಪ್ಪಿತವಾಗಿರಬಹುದು. ಆದರೆ ಆ ವ್ಯಕ್ತಿಯ ಅವಶ್ಯಕತೆಗಳನ್ನು ಪೂರೈಸುವಂತಿಲ್ಲದಿದ್ದರೆ, ಅದು ಯಾವುದೋ ರೀತಿಯಿಂದ ಆ ವ್ಯಕ್ತಿಯ ಅಂತರಂಗ ಶಾಂತಿಯನ್ನು ಕಲಕುತ್ತದೆ ಅಥವಾ ಅಂತರಂಗದ ಖಾಯಿಲೆಯ ರೂಪದಲ್ಲಿ ವ್ಯಕ್ತವಾಗುತ್ತದೆ.

೨) ಕೆಲವೊಮ್ಮೆ ಕೆಲವು ನಡತೆಗಳು ವ್ಯಕ್ತಿಗೆ ಸಂತೋಷ. ತೃಪ್ತಿಗಳನ್ನುಂಟು ಮಾಡಬಹುದು. ಆದರೆ ಸಮಾಜಕ್ಕೆ ಸಮ್ಮತವಾಗಿರುವದಿಲ್ಲ. ಅಂತಹ ಕಾರ್ಯ 'ಸಮಸ್ಯಾತ್ಮಕ ನಡತೆ' ಅಥವಾ ಬಾಲಾಪರಾಧವೆನ್ನಿಸುತ್ತದೆ.

೩) ಕೆಲವು ವೇಳೆ ಕೆಲವು ನಡತೆಗಳು ವ್ಯಕ್ತಿಗೂ ತೃಪ್ತಿ ನೀಡದೇ, ಸಮಾಜಕ್ಕೂ ಒಪ್ಪಿತವಾಗಿರುವದಿಲ್ಲ. ಆಗ ಅಂತಹ ಕೃತ್ಯಗಳು ಒಂದು ರೀತಿಯ ಮಾನಸಿಕ ಅಸ್ಪಷ್ಟತೆ ಅಥವಾ ನರದೌರ್ಬಲ್ಯದಿಂದುಂಟಾದ ಅಪರಾಧಗಳೆಂದು ಸೂಚಿಸಲ್ಪಡುತ್ತವೆ.

೪) ಕೆಲವು ಕೃತ್ಯಗಳು ವ್ಯಕ್ತಿಗೂ ತೃಪ್ತಿ ಉಂಟು ಮಾಡುವುದಲ್ಲದೆ ಸಮಾಜಕ್ಕೂ ಒಪ್ಪಿತವಾಗುವಂತೆ ಯೋಗ್ಯವಾಗಿರುತ್ತವೆ. ಅಂತಹ ಕೃತ್ಯಗಳು ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಯಾವ ರೀತಿಯ ಸಮಸ್ಯೆಯನ್ನೂ ಉಂಟುಮಾಡುವದಿಲ್ಲ.

ಸುಳ್ಳು ಹೇಳುವುದು, ಕದಿಯುವದು, ಅವಿಧೇಯತೆ, ಆಕ್ರಮಣಕಾರೀ ಮನೋಭಾವ, ಟೆಂಪರ ಟ್ಯಾಂಟ್ರಮ್, ಮನೆ ಬಿಟ್ಟು ಓಡಿ ಹೋಗುವುದು, ಮೈಗಳ್ಳತನ, ಕ್ರೂರ

ತನ್ನ ವಿನಾಶಕಾರೀ ಮನೋಭಾವ, ಬೆಂಕಿ ಹಚ್ಚುವುದು, ಊಟ ಬಿಡುವುದು ಮುಂತಾದ ವರ್ತನೆಗಳು ಬಾಲಾಪರಾಧಗಳ ಪಟ್ಟಿಯಲ್ಲಿ ಬರುತ್ತವೆ.

ಸಾಮಾನ್ಯವಾಗಿ ಮಗುವಿಗೆ ಮೊದಲು ಸ್ವ ಇಚ್ಛೆಯಿಂದ ಇದ್ದ ವಿಷಯಗಳನ್ನು ಮುಚ್ಚಿ ಹೇಳಲು ಗೊತ್ತಿರುವುದಿಲ್ಲ. ಅದಕ್ಕೆ ಮೊದಲ ನಾಲ್ಕು ವರ್ಷಗಳವರೆಗೂ ಹಾಗೆ ಸುಳ್ಳು ಹೇಳಬಹುದೆಂಬ ಕಲ್ಪನೆಯೂ ಇರುವುದಿಲ್ಲ. ಆದರೆ ವಿಚಾರ ಶಕ್ತಿ ಬೆಳೆದಂತೆ ವಾತಾವರಣದ ಪ್ರಭಾವದಿಂದ ಅದನ್ನು ಕಲಿಯುತ್ತದೆ. ಸುಳ್ಳಿನ ಎರಡು ಮುಖ್ಯ ಪ್ರಮಾಣಗಳೆಂದರೆ ಮಗುವಿಗೆ ತಾನು ಹೇಳಿದ ಸುಳ್ಳಿನ ಅರಿವು ಮತ್ತು ಸುಳ್ಳು ಹೇಳುವುದರಿಂದ ತನಗೆ ದೊರೆಯಬಹುದಾದ ಲಾಭದ ಆಸೆ ಅಥವಾ ಹೇಳದಿದ್ದರೆ ತನಗಾಗಬಹುದಾದ ಅಸಂತೋಷವನ್ನು ನಿವಾರಿಸಿಕೊಳ್ಳುವ ಗುರಿ. ನೈತಿಕ ಶಾಸ್ತ್ರ ಪ್ರಕಾರವಾಗಿ 'ಕದಿಯುವಿಕೆ' ಮಹತ್ವವಾದ ವಿಚಾರ. ಏಕೆಂದರೆ ಇದರಿಂದ ಒಬ್ಬ ವ್ಯಕ್ತಿಯು ಸ್ವತ್ತು ನಷ್ಟವಾಗಿ ಆ ವಸ್ತುವಿನ ಮೇಲಿನ ಅವನ ಯಜಮಾನ್ಯ ಅನ್ಯಾಯವಾಗಿ ಇಲ್ಲವಾಗುತ್ತದೆ. ಕದಿಯುವ ಭಾವನೆಯೂ ಸಹ ಮಗುವಿಗೆ ಶೈಶವಾವಸ್ಥೆಯಲ್ಲಿ ಇರುವದಿಲ್ಲ. ವಸ್ತು ಪರಿಜ್ಞಾನ ಮತ್ತು ಅದನ್ನು ತನ್ನದಾಗಿಸಿಕೊಳ್ಳಬೇಕೆಂಬ ವಿಚಾರ ಮಗುವಿನಲ್ಲಿ ಬೆಳೆದ ನಂತರ ಕಳ್ಳತನದ ಭಾವನೆ ಬೆಳೆಯಲು ಸಾಧ್ಯ. ಈ ಭಾವನೆಗಳು ಬೆಳೆಯಲು ಅನೇಕ ಕಾರಣಗಳಿರಬಹುದು : (೧) ಮಗುವಿಗೆ ಒಂದು ವಸ್ತು ತನ್ನಲ್ಲಿಲ್ಲದೇ ಬೇರೆಯವರಲ್ಲಿದ್ದಾಗ ಅದು ತನ್ನದಾಗಬೇಕೆಂಬ ಆಸೆಯುಂಟಾದರೆ (೨) ಮನೆಯಲ್ಲಿ ತನಗೆ ದೊರೆಯಬೇಕಾದ ಸ್ಥಾನವು ದೊರೆಯದಿದ್ದರೆ (೩) ಎಲ್ಲರಿಂದಲೂ ಮನ್ನಣೆ ಪಡೆಯಬೇಕು, ಪ್ರತಿಷ್ಠೆ ಗಳಿಸಬೇಕು ಎಂಬ ಆಸೆ ಇದ್ದಾಗ ಅದು ದೊರೆಯದಿದ್ದರೆ (೪) ಸಾಹಸ ಪ್ರವೃತ್ತಿಗಾಗಿ (೫) ಹೊಟ್ಟೆ ಕಿಚ್ಚಿನ ಮನೋಭಾವದಿಂದ (೬) ಬಡತನ ಅಥವಾ ಕದಿಯುವ ಗೀಳು ಇನ್ನೂ ಮುಂತಾದವುಗಳು.

ಅವಿಧೇಯತೆಯು ಅಧಿಕಾರ ವಿರುದ್ಧದ ಪ್ರತಿಭಟನೆ. ಆದರೆ ವಿಧೇಯತೆ ಇಲ್ಲದೆ ಮಗುವು ಉತ್ತಮ ರೀತಿಯ ಮತ್ತು ಹೊಂದಿಕೊಂಡು ಬಾಳುವ ಸ್ವಭಾವವನ್ನು ಕಲಿಯಲು ಆಗುವದಿಲ್ಲ. ವಿಧೇಯತೆಯು ಅಧಿಕಾರ ಮತ್ತು ಮಗುವಿಗಿರುವ ಹೊಂದಾಣಿಕೆಯನ್ನು (Emotional relationship) ಅವಲಂಬಿಸಿರುತ್ತದೆ. ಒಂದು ಅವಧಿಯಲ್ಲಿ ಪ್ರತಿ ಸಾಮಾನ್ಯ ಮಗುವಿಗೂ ಪ್ರತಿರೋಧಕ ಶಕ್ತಿ ಬರುತ್ತದೆ. ಅದನ್ನು ನಾವು ಅವಿಧೇಯತೆಯೆಂದು ತಿಳಿಯಬಾರದು. ಸಂಪೂರ್ಣ ವಿಧೇಯತೆಯು ಆ ಹುಡುಗನಲ್ಲಿ ಸ್ವಂತ ವಿಚಾರ. ಸ್ವಂತ ಅಸ್ತಿತ್ವಗಳೇ ಇಲ್ಲದಂತೆ ಮಾಡುವುದಲ್ಲದೆ ಅವನು ಮುಂದೆ. ಅನಾರೋಗ್ಯಕರ ರೀತಿಯಲ್ಲಿ ಶರಣಾಗುವಂತಹ ಮನೋಭಾವ ಪಡೆಯುತ್ತಾನೆ. ಇದರಿಂದ ಅವನು ಮುನ್ನುಗ್ಗಿ ಕಾರ್ಯಪ್ರವೃತ್ತನಾಗುವ ಮತ್ತು ಸ್ವಂತ ಅಭಿಪ್ರಾಯವನ್ನು ಹೊಂದುವ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ಇದು ಸ್ವಯಂ ಸ್ಫೂರ್ತಿಯಿಂದ ಕೆಲಸ ಮಾಡುವ ಪ್ರವೃತ್ತಿಯನ್ನೇ ಹತ್ತಿಕ್ಕಿ ಎಲ್ಲದಕ್ಕೂ ಶರಣಾಗುವ

ಮಾನಸಿಕ ದುರ್ಬಲತೆಯನ್ನುಂಟು ಮಾಡುತ್ತದೆ ಮತ್ತು ವ್ಯಕ್ತಿಯಲ್ಲಿ ತಪ್ಪಿತಸ್ಥ ಮನೋಭಾವವನ್ನುಂಟು ಮಾಡಿ ಸ್ವಭಾವ- ಸಹಜವಾದ ಸ್ವಪ್ರತಿಪಾದನಾ ಶಕ್ತಿಗೆ ಆಘಾತವನ್ನುಂಟು ಮಾಡುತ್ತದೆ. ಮಕ್ಕಳಲ್ಲಿನ ಅವಿಧೇಯತೆಗೆ ತಂದೆ-ತಾಯಿಗಳ ಮನೋವೃತ್ತಿಯೇ ಕಾರಣ. ಪರಿಮಿತಿ ಇಲ್ಲದಷ್ಟು ಅಂಕೆ ಅಥವಾ ಸಲುಗೆ, ತಂದೆ ತಾಯಿಗಳ ಮತ್ತು ಮಕ್ಕಳ ಸಂಬಂಧದಲ್ಲಿ ಹೊಂದಾಣಿಕೆಯಾಗಲಿ ಅವರ ಅಭಿಪ್ರಾಯಗಳಲ್ಲಿ ಸ್ಥಿರತೆಯಾಗಲೀ ಇಲ್ಲದಿರುವಿಕೆ ಅಂತಹ ಉದಾಹರಣೆಗಳಲ್ಲಿ ಕೆಲವು.

ಇದ್ದಕ್ಕಿದ್ದಂತೆ ಹೊರಹೊಮ್ಮುವ ಕೋಪಕ್ಕೆ 'ಟೆಂಪರ ಟ್ಯಾಂಟ್ರಮ್' ಎಂದು ಹೇಳುತ್ತಾರೆ. ಮೇಲಿಂದ ಮೇಲೆ ನಿರಾಶೆಯುಂಟಾಗುವ ಘಟನೆಗಳಿಂದ ಬಾಂಬು ಸಿಡಿದಂತಹ ಕೋಪದ ಪ್ರತಿಕ್ರಿಯೆ ಉಂಟಾಗುತ್ತದೆ. ಈ ಪ್ರತಿಕ್ರಿಯೆ ಮೇಲಿಂದ ಮೇಲೆ ಹೊರಹೊಮ್ಮಲು ಅವಕಾಶವಾದರೆ ವ್ಯಕ್ತಿಯು ವಿನಾಶಕಾರಿಯಾಗುತ್ತಾನೆ. ಟ್ಯಾಂಟ್ರಂ ಪ್ರತಿಕ್ರಿಯೆಯು ಹೆಚ್ಚಾಗಿ ಮನಸ್ಸಿನ ತಳಮಳ, ಆತಂಕ, ಕಳವಳಗಳಿಂದುಂಟಾದ ಕೋಪ, ಅಸಹಾಯಕತೆಯ ಸ್ಥಿತಿ ಮತ್ತು ಸುರಕ್ಷಿತತೆ ಇಲ್ಲ ಎಂಬ ಭಾವನೆಯಿಂದ ಉಂಟಾಗುತ್ತದೆ.

ಕೆಲವು ಮಕ್ಕಳು ಹೇಳದೆ-ಕೇಳದೆ ಮನೆ ಬಿಟ್ಟು ಹೋಗುತ್ತಾರೆ. ಇದಕ್ಕೆ ಹೊಸ ಸ್ಥಳಗಳನ್ನು ನೋಡಬೇಕೆಂಬ ಅಪೇಕ್ಷೆಯಿಂದಲೋ ಹೊಸ ಅನುಭವಗಳನ್ನು ಪಡೆಯಬೇಕೆಂಬ ಆಸೆಯಿಂದಲೋ ಉಂಟಾದ ಅಲೆದಾಡುವ ಬಯಕೆಯೇ ಕಾರಣವಿರಬೇಕು. ಅಲ್ಲದೆ ಆನಂದದಾಯಕವಲ್ಲದ ಮನೆಯ ವಾತಾವರಣ, ತಂದೆ-ತಾಯ್ಗಳ ಹಿತವಲ್ಲದ ಮನೋವೃತ್ತಿ, ದಾಯಾದಿ ಮಾತ್ಸರ (Sibling rivalry), ತಂದೆ-ತಾಯ್ಗಳಿಬ್ಬರೂ ಅಥವಾ ಇವರಲ್ಲೊಬ್ಬರು ಇಲ್ಲದಿರುವಿಕೆ, ಸಾಹಸ ಕಾರ್ಯದಲ್ಲಿ ಆಸಕ್ತಿಗಳೂ ಕಾರಣವಿರಬಹುದು.

ಶಾಲೆಯಿಂದ ತಪ್ಪಿಸಿಕೊಂಡು ಓಡಿಹೋಗುವ ಪ್ರವೃತ್ತಿಗೆ ಟ್ರೂಅನ್ಸಿ ಎನ್ನುತ್ತಾರೆ ಈ ಪ್ರವೃತ್ತಿಗೆ (೧) ಶಾಲೆಯ ಬಗ್ಗೆ ಇಷ್ಟವಿಲ್ಲದಿರುವಿಕೆ (೨) ಶಿಕ್ಷೆ ಅಲ್ಲಿ ಆಗಬಹುದೆಂಬ ಭಯ (೩) ಶಾಲೆಯ ಬಗ್ಗೆ ಮಗುವಿನ ಅಭಿಪ್ರಾಯ ರೂಪಿಸುವ ವಿಷಯದಲ್ಲಿ ತಂದೆ-ತಾಯ್ಗಳ ಮನೋವೃತ್ತಿ (೪) ಸಾಹಸ ಕಾರ್ಯಗಳ ಅಪೇಕ್ಷೆ ಮುಂತಾದವುಗಳು ಕಾರಣವಾಗಿರಬಹುದು.

ಕಾರಣಗಳು :

ಹಜಾರಿಬಾಗ್‌ನ ರಿಫಾರ್ಮೇಟರಿ ಶಾಲೆಯಲ್ಲಿ ಬಾಲಾಪರಾಧದ ಕಾರಣಗಳನ್ನು ಕಂಡುಹಿಡಿಯುವ ಅಭ್ಯಾಸ ನಡೆಯಿತು. ಒಟ್ಟು ೧೩೭ ಮಂದಿ ಮಕ್ಕಳನ್ನು ಅಭ್ಯಸಿಸಿದರು. ಆ ಅಭ್ಯಾಸದ ಸಾರಾಂಶ ಕೆಳಗಿನಂತಿದೆ.

ಸೈಕೋಫಿಸಿಕಲ್ ಫ್ಯಾಕ್ಟರ್ಸ್ (ಮನೋವ್ಯಾಪಾರವನ್ನು ಕುರಿತ ಶಾರೀರಿಕ ಅಂಶಗಳು)	ಹೋಂ ಫ್ಯಾಕ್ಟರ್ಸ್ (ಮನೆಯ ಸಂಬಂಧಿ ಅಂಶಗಳು)
೨೦.೩%	೩೬.೧%
ನೆರೆಹೊರೆಯ ಅಂಶಗಳು	ಶಾಲಾ ಸಂಬಂಧಿ ಅಂಶಗಳು
೩೬.೯%	೬.೭%

ಮೇಲೆ ಹೇಳಿದ ಅಂಶಗಳನ್ನು ವಿಶ್ಲೇಷಿಸಿದಾಗ ಹೆಚ್ಚಿನ ಸಂದರ್ಭಗಳಲ್ಲಿ ಪ್ರತ್ಯೇಕ ವಾದ ಯಾವುದೇ ಒಂದು ಅಂಶವೇ ಕಾರಣ ಎಂದು ಹೇಳಲು ಆಗುವುದಿಲ್ಲ ಎಂಬ ವಿಷಯ ಕಂಡುಬಂದಿತು. ಆದುದರಿಂದ ಬಾಲಾಪರಾಧೀ ನಡವಳಿಕೆಗೆ ಯಾವುದೋ ಒಂದು ನಿರ್ದಿಷ್ಟ ಕಾರಣವನ್ನು ಕೊಟ್ಟು ವಿವರಿಸಲು ಅಸಾಧ್ಯವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಈ ಪ್ರವೃತ್ತಿ ಅನೇಕ ಅಂಶಗಳ ಪರಸ್ಪರ ಕ್ರಿಯೆಯ ಫಲಿತಾಂಶ.

ಮನೆ, ನೆರೆಹೊರೆ, ಶಾಲೆ, ಮಾನಸಿಕ ಎಂದು ಪ್ರತ್ಯೇಕವಾದ ನಾಲ್ಕು ಗುಂಪುಗಳನ್ನು ಮಾಡಿ, ಒಂದಕ್ಕೊಂದು ಸಂಬಂಧವಿಲ್ಲವೆಂಬಂತೆ ವಿಚಾರ ಮಾಡಬಾರದು. ನಿಜವಾಗಿ ಹೇಳುವುದಾದರೆ ಬಾಲಾಪರಾಧೀ ಪ್ರವೃತ್ತಿಗೆ ಮೇಲೆ ಹೇಳಿದ ಎಲ್ಲಾ ಅಂಶಗಳೂ, ಜೊತೆಗೂಡಿ ಪರಿಣಾಮವನ್ನುಂಟು ಮಾಡುತ್ತವೆ. ಮನೆ ಮತ್ತು ನೆರೆ–ಹೊರೆ ಶೇಕಡಾ ೭೩.೦ ರಷ್ಟು ಪರಿಣಾಮ ಬೀರುತ್ತವೆ ಎಂಬ ವಿಷಯವು ಮೇಲಿನ ಅಂಶಗಳಿಂದ ಕಂಡುಬಂದಿದೆ. ಇದರಿಂದ ಮನೆ ಮತ್ತು ಸುತ್ತಮುತ್ತಲಿನ ಪರಿಸರಗಳು ಬಾಲಾಪರಾಧಕ್ಕೆ ಅಪಾಯಕರವಾದ ಕಾರಣಗಳು ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಆದುದರಿಂದ ಈ ಪ್ರವೃತ್ತಿಯನ್ನು ತಡೆಗಟ್ಟಲು ಮನೆ ಮತ್ತು ನೆರೆ–ಹೊರೆಯ ಬಗ್ಗೆ ಹೆಚ್ಚು ನಿಗಾ ಇಡುವುದು ಆವಶ್ಯಕ.

ಸೈಕೊಫಿಸಿಕಲ್ ಅಂಶಗಳು:

ಅನುವಂಶ, ದೇಹ ಪ್ರಕೃತಿ, ದೈಹಿಕ ನ್ಯೂನತೆ, ಮಾನಸಿಕ ಕೊರತೆ, ಉನ್ನತ ಬೌದ್ಧಿಕಶಕ್ತಿ ಅಥವಾ ಅಸ್ವಾಭಾವಿಕವಾದ ಮಾನಸಿಕ ಅವ್ಯವಸ್ಥೆ, ಸೈಕೊಪೆಥಿಕ ವ್ಯಕ್ತಿತ್ವ (ಮನೋವ್ಯಾಧಿಗ್ರಸ್ತ) ಭಗ್ನ ಮನೋರಥದಿಂದುಂಟಾದ ಪ್ರವೃತ್ತಿ, (frustration) ಮುಂತಾದವುಗಳನ್ನು ವಿಶ್ಲೇಷಿಸಿದರೆ ಬಹು ಜಾಗರೂಕತೆಯಿಂದ ಪತ್ತೆ ಹಚ್ಚಬೇಕಾದಂತಹ ಕೆಲವು ಮುಖ್ಯ ಅಂಶಗಳಿವೆಯೆಂಬುದು ಗೋಚರವಾಯಿತು.

ಮನೆಯ ಅಂಶಗಳು:

ಬಡತನ, ಕಿಕ್ಕಿರಿದು ತುಂಬಿದ ಮನೆ, ಹಳೆಯ ಪೀಳಿಗೆಯವರೊಡನೆ ವೈರತ್ವ, ಮನೆ ವಿಭಾಗವಾಗುವಿಕೆ, ವಿಚ್ಛೇದನ, ಮನೆತೊರೆಯುವಿಕೆ ಮುಂತಾದವು ಇವುಗಳ

ಪಟ್ಟಿಯಲ್ಲಿ ಬರುತ್ತವೆ. ಈ ಪರಿಸರದಲ್ಲಿ ಬಾಲಾಪರಾಧಕ್ಕೆ ಕಾರಣವಾಗುವ ಅಂಶಗಳೆಂದರೆ ಎಮೋಷನಲ್ ಸೆಕ್ಯೂರಿಟಿಯ ಕೊರತೆ. ಒಂದು ನಿರ್ದಿಷ್ಟವಾದ ಅಥವಾ ಯೋಗ್ಯವಾದ ಶಿಸ್ತಿನ ಕೊರತೆ. ತಂದೆ ತಾಯಿಗಳು ಮಗುವಿನ ಬಗ್ಗೆ ತಿರಸ್ಕಾರದಿಂದ ನಡೆಯುವುದು, ಅವನ ಬಗ್ಗೆ ಅಲಕ್ಷ್ಯ ರೀತಿಯಿಂದ ವರ್ತಿಸುವುದು. ಅವನ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವಿಕೆ ಮೊದಲಾದವುಗಳು.

ನೆರೆಹೊರೆಯ ಅಂಶಗಳು- ಉದಾಹರಣೆಗಳು: ಸಾಕಷ್ಟು ಎಚ್ಚರಿಕೆಯ ಮತ್ತು ರಕ್ಷಣೆಯ ಅಭಾವ, ಮನಸ್ಸಿನಲ್ಲಿ ಘರ್ಷಣೆಯನ್ನುಂಟು ಮಾಡುವ ಕಾನೂನು ಅಥವಾ ನೀತಿಗೆ ತಲೆಬಾಗುವ ಪ್ರಸಂಗ. ದುಷ್ಟ ಸಹವಾಸ. ನೈತಿಕ ಬಾಲಾಪರಾಧಕ್ಕೆ ಕಾರಣವಾಗಬಲ್ಲವು.

ಶಾಲಾ ಸಂಬಂಧವಾದ ಅಂಶಗಳು:

ಶಾಲೆಯಲ್ಲಿ ಆಯಾ ವಯಸ್ಸಿಗೆ ಮೀರಿದ ಕಷ್ಟಕರವಾದ ಕೆಲಸಗಳು, ಶಾಲೆಯ ಬಗ್ಗೆ ಇಷ್ಟವಿಲ್ಲದಿರುವಿಕೆ, ಟ್ರೂಅನ್ಸಿ, ಕೆಲವು ಉಪಾಧ್ಯಾಯರು ಕೆಲವೊಂದು ಮಕ್ಕಳನ್ನು ತಿರಸ್ಕಾರ ದೃಷ್ಟಿಯಿಂದ ನಡೆಸಿಕೊಳ್ಳುವುದು ಮುಂತಾದವು ಬಾಲಾಪರಾಧ ಪ್ರವೃತ್ತಿಯನ್ನುಂಟು ಮಾಡುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಹೊರ ಪ್ರಪಂಚದ ಅಂಶಗಳು, ಅದರಲ್ಲಿಯೂ ಮುಖ್ಯವಾಗಿ ಮನೆ ಮತ್ತು ನೆರೆ-ಹೊರೆಯಲ್ಲಿಯವು, ಬಾಲಾಪರಾಧೀ ರೀತಿಯ ನಡವಳಿಕೆಗೆ ಬಹಳ ಮಟ್ಟಿಗೆ ಹೊಣೆ. ಇವು ಮಗುವಿನ ಮಾನಸಿಕ ಬೆಳವಣಿಗೆಯ ಮೇಲೆ ಬಹು ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತವೆ. ಸಾಮಾನ್ಯವಾಗಿ ಸೈಕೋಫಿಸಿಕಲ್ ಅಥವಾ ಸಂದರ್ಭೋಚಿತವಾದ ಅಂಶಗಳ ಬಗ್ಗೆ ಹೆಚ್ಚು ಪ್ರಾಧ್ಯಾನತೆ ಕೊಡುವ ಪ್ರವೃತ್ತಿ ಇದೆ. ಬೆಳವಣಿಗೆಯ ಹಂತಗಳಲ್ಲಿ ಪರಸ್ಪರ ಪರಿಣಾಮ ಬೀರುವ ವಿಧಾನವು ಅತಿ ಮುಖ್ಯವಾದ ಅಂಶ. ನಡತೆಯ ವಿಧಾನವನ್ನು ರೂಪಿಸುವುದರಲ್ಲಿ ಜೀವನದ ಮೊದಲನೆಯ ಅವಧಿಯು ಅತ್ಯಂತ ಮುಖ್ಯವಾದುದು. ಆದುದರಿಂದ ಪ್ರತಿಯೊಂದು ಕುಟುಂಬದ ಕಡೆಗೂ ಲಕ್ಷ್ಯವನ್ನು ಕೇಂದ್ರೀಕರಿಸಿ ತಂದೆ-ತಾಯಿಗಳಾದವರಿಗೆ ತಮ್ಮ ಮಕ್ಕಳ ಬೆಳವಣಿಗೆಗೆ ಅನುಕೂಲಕರವಾದ ಒಳ್ಳೆಯ ಪರಿಸರವನ್ನುಂಟು ಮಾಡಲು ಮಾರ್ಗದರ್ಶನ ನೀಡುವ ಶಿಕ್ಷಣ ಕೊಡಬೇಕು.

ವಿಯೆನ್ನದ ಮನೋವಿಶ್ಲೇಷಣ ಶಾಸ್ತ್ರಜ್ಞನಾದ ಅಭಾರ್ನನ ಪ್ರಕಾರ ಮಗುವು ಅವಶ್ಯಕತೆಯಿಂದ ಹೆಚ್ಚು ಪ್ರೀತಿ ಮತ್ತು ರಕ್ಷಣೆಯನ್ನು ಪಡೆದರೆ ಅವನು ಹಾಳಾಗುವುದಲ್ಲದೇ ಹೊರ ಜಗತ್ತಿಗೆ ಹೊಂದಿಕೊಳ್ಳಲು ಸ್ವಲ್ಪವೂ ದಣಿವು ಮಾಡಿಕೊಳ್ಳದಂತಹ ಮನೋವೃತ್ತಿಯನ್ನು ಪಡೆಯುತ್ತಾನೆ. ಅಂತಹ ಹುಡುಗನು ಫ್ರಾಯಿಡನ ಮಾತಿನಲ್ಲಿ ಹೇಳಬೇಕೆಂದರೆ ವಿಲಾಸೀ ಮಟ್ಟದಲ್ಲಿ ಬದುಕುತ್ತಾನೆ. ಅತೀ ಪ್ರೀತಿಯನ್ನು ಪಡೆದ ಮಗುವು ಶಿಕ್ಷೆ. ಅಧಿಕಾರ. ಕಾರ್ಯ ಇವುಗಳನ್ನು ಪ್ರತಿಭಟಿಸುತ್ತಾನೆ. ಮತ್ತು

ವಿರೋಧಿಸುತ್ತಾನೆ. ಸಾಮಾನ್ಯವಾಗಿ ತಂದೆ-ತಾಯಿಗಳು ಉದ್ವಿಗ್ನತೆಯಿಂದ ಕೂಡಿದ ಕಾತರ ಮತ್ತು ಅರಕ್ಷಿತತೆಯ ಕಾರಣದಿಂದಾಗಿ ಮಗುವನ್ನು ಅತಿಯಾಗಿ ಪ್ರೀತಿಸುತ್ತಾರೆ. ತಂದೆ-ತಾಯಿಗಳ ಇಂತಹ ಭಯ ಮತ್ತು ಪುಕ್ಕಲುತನದ ಎದುರು ಮಗುವು ನಿರ್ಭಯ ಮತ್ತು ನಿರ್ದಾಕ್ಷಿಣ್ಯದ ಪ್ರವೃತ್ತಿ ಬೆಳೆಯುತ್ತವೆ. ಆದುದರಿಂದ ಮಗುವು ಬಾಲಿಷ ರೀತಿಯಿಂದ ವರ್ತಿಸಿದರೆ ತನ್ನ ಇಷ್ಟಾರ್ಥಗಳ ಪೂರೈಕೆಯಾಗುವುದರಿಂದ ಆ ಮಾರ್ಗವನ್ನು ಅನುಸರಿಸುತ್ತದೆ. ಅತೀಯಾದ ಪ್ರೀತಿಯಿಂದ ಯುವಕರು ಅಪರಾಧಿಗಳಾಗಿ ಪರಿವರ್ತಿತರಾಗಿರುವ ಉದಾಹರಣೆಗಳು ಅಷ್ಟೊಂದು ವಿಶೇಷವಾಗಿಲ್ಲವೆಂದು ಅಭಾರ್ನ್ನನು ಹೇಳುತ್ತಾನೆ.

ಬಾಲಾಪರಾಧಿಗಳು ಒಂದು ಕಡೆ ಪ್ರೀತಿ ಮತ್ತು ಮಮತೆಗಳಿಂದ ವಂಚಿತರಾಗಿ ದುಃಖಕ್ಕೆ ಗುರಿಯಾದರೆ ಮತ್ತೊಂದು ಕಡೆ ಅಲಕ್ಷ್ಯ, ಶಿಕ್ಷೆ ಮತ್ತು ಕಾರ್ಯ ಇವುಗಳಿಂದ ವ್ಯಥೆಗೊಳಗಾಗುತ್ತಾರೆ. ಎಂದೂ ಅಭಾರ್ನನೇ ಹೇಳಿದ್ದಾನೆ. ಅವನೇ ವಿವರಿಸುವಂತೆ ಬಾಲಾಪರಾಧಿ ಮಗುವಿನ ಕುಟುಂಬದ ರೀತಿಯೆಂದರೆ ಕ್ರೂರಿಯಾದ ತಂದೆ. ದುರ್ಬಲ ಮತ್ತು ಲೋಲುಪ್ತಳಾದ ತಾಯಿ.

ಬಾಲಾಪರಾಧ ಹಾಗೂ ಆಕ್ರಮಣಕಾರಿ ನಡತೆ :

ಹುಡುಗನಿಗೆ ಸುಮಾರು ಹನ್ನೆರಡು ವರ್ಷಗಳಾದಾಗ ಅವನಲ್ಲಿ ಅನೇಕ ಆಸಕ್ತಿಗಳು ಬೆಳೆದಿರುತ್ತವೆ. ಆದರೆ ಕೆಲವರು ಮನೆಗಳಲ್ಲಿ ಅವನನ್ನು ಇನ್ನೂ ಎಳೆಯ ಮಗುವಿನಂತೆ ಪರಿಗಣಿಸಿ ನೋಡುತ್ತಾರೆ. ಆಗ ಮಗುವಿನ ಮನಸ್ಸಿನಲ್ಲಿ ಹೋರಾಟ ಉಂಟಾಗುತ್ತದೆ. ತನಗೆ ತನ್ನ ಮನೆಯಲ್ಲಿ ಸಿಗಬೇಕಾದ ಸ್ಥಾನ ಸಿಕ್ಕಿಲ್ಲವೆಂದು ಒಳಗೊಳಗೇ ಅಸಮಾಧಾನಗೊಳ್ಳುತ್ತಾನೆ. ಅತೃಪ್ತಿಪಟ್ಟುಕೊಳ್ಳುತ್ತಾನೆ. ಈ ಅಸಮಾಧಾನವು ಆಕ್ರಮಣಕಾರಕ, ತಿರುಗಿಬೀಳುವ ಹಾಗೂ ಸಾಮಾಜಿಕವಲ್ಲದ ಕೃತ್ಯಗಳಿಗೆ ಕಾರಣವಾಗುತ್ತದೆ. ಇಂತಹ ಆಕ್ರಮಣವನ್ನು ಉದಯಶಂಕರರು ಬಾಲಾಪರಾಧವಿರುವ ಪರಿಸರವನ್ನು ನಾಶಮಾಡಬೇಕು. ಮುರಿದು ಹಾಕಬೇಕು ಅಥವಾ ಬದಲಾಯಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಮಾಡಿದ ಆಕ್ರಮಣಕಾರಿ ಪ್ರತಿಭಟನೆಯೆಂದು ಹೇಳಿದ್ದಾರೆ. ಈ ಪ್ರತಿಭಟನೆ. ತನ್ನ ವ್ಯಕ್ತಿಗತವಾದ ಅವಶ್ಯಕತೆಗಳನ್ನು ಪೂರೈಸದಿರುವ ಸಾಮಾಜಿಕ ಪರಿಸ್ಥಿತಿಗಳ ವಿರುದ್ಧವಾದುದು. ಆದರೆ ಅವನು ತನ್ನಂತಹವರೊಂದಿಗೇ ಇದ್ದಾಗ ತನ್ನ ಅಭಿಲಾಷೆಗೆ ಅನುಗುಣವಾದ ಅನುಮೋದನೆ ಪಡೆಯುತ್ತಾನೆ, ತೃಪ್ತಿ ಹೊಂದುತ್ತಾನೆ.

ಉದಯ ಶಂಕರರ ಅಧ್ಯಯನ :

ಉದಯ ಶಂಕರರು ತಾವು ದೆಹಲಿಯಲ್ಲಿ ಅಧ್ಯಯನ ಮಾಡಿದ ೧೪೦ ಮಂದಿ ಬಾಲಾಪರಾಧಿಗಳ ಬಗ್ಗೆ ವರದಿ ಕೊಟ್ಟಿದ್ದಾರೆ. ಆ ಅಪರಾಧಿಗಳ ವಯಸ್ಸು ೭ ರಿಂದ

೧೯ ವರ್ಷಗಳವರೆಗೆ ಇತ್ತು. ಅದರಲ್ಲಿ ಶೇಕಡಾ ೧೬ ರಷ್ಟು ಜನರು ಜೇಬುಗಳ್ಳತನಕ್ಕೆ ಸಂಬಂಧಿಸಿದ ಅಪರಾಧಿಗಳಲ್ಲೂ ತೊಡಗಿದ್ದರು. ಆ ೧೪೦ ಜನರಲ್ಲಿ ಶೇ. ೬೦ ರಷ್ಟು ಹುಡುಗರು ಮನೆಯಿಂದಲೋ ಅಥವಾ ಶಾಲೆಯಿಂದಲೋ ಓಡಿಹೋದ ಸಂಬಂಧದಲ್ಲಿ ತಪ್ಪುಗಾರರಾಗಿದ್ದರು.

ಬಾಲಾಪರಾಧಿಗೆ ಅಂತರಾತ್ಮವೇ ಇರುವದಿಲ್ಲ. ಉದ್ವೇಗವನ್ನು ಹತೋಟಿಗೆ ತರಬಲ್ಲ ಅಂತರಾತ್ಮವೇ ಇಲ್ಲದಿರುವದರಿಂದ ಅಪರಾಧಿಯು ತನ್ನ ಉದ್ವೇಗದ ಕರುಣೆಯಲ್ಲಿ ಬಿದ್ದಿರಬೇಕಾಗುತ್ತದೆ. ಆದ್ದರಿಂದ ಅವನು ಸಾಮಾಜಿಕ ಸೈಜತೆಯೊಡನೆ ಸಂಘರ್ಷಿಸಬೇಕಾಗುತ್ತದೆ. ಸಂಘರ್ಷಣೆಯಲ್ಲಿ ಅವನು ಒಳಗೊಳಗೇ ವ್ಯಥೆಪಡಬೇಕಾಗುವದಿಲ್ಲ. ತದ್ವಿರುದ್ಧವಾಗಿ ಪ್ರಬಲ ಅಂತರಾತ್ಮವಿರುವ ವ್ಯಕ್ತಿಯಲ್ಲಿ ಅಂತರಾತ್ಮಕ್ಕೂ ಮನಸ್ಸಿನ ಉದ್ವೇಗಕ್ಕೂ ಪ್ರಬಲ ಹೋರಾಟವಾಗುತ್ತದೆ. ಇದರಿಂದ ಅವನು ಅನೇಕ ರೀತಿಯ ವ್ಯಥೆಗೆ ಒಳಗಾಗುತ್ತಾನೆ. ಇದನ್ನು ನರಸಂಬಂಧಿ ತೊಂದರೆ ಎನ್ನುತ್ತಾರೆ. ಇಂತಹ ನರದೌರ್ಬಲ್ಯಕ್ಕೆ ಒಳಗಾದವನು ತನ್ನೆಲ್ಲಾ ನೋವುಗಳನ್ನು ತನ್ನಂತರಂಗದಲ್ಲೇ ಅರಗಿಸಿಕೊಳ್ಳುತ್ತಾನೆ. ಆದರೆ ಸಾಮಾನ್ಯ (typical) ಬಾಲಾಪರಾಧಿಯು ತನ್ನ ಸಂಘರ್ಷಣೆಗಳನ್ನು ಹೊರಹೊಮ್ಮಿಸುತ್ತಾನೆ.

ಐತಿಹಾಸಿಕವಾದ ಆಕಸ್ಮಿಕಗಳಿಂದ ಮನೋರೋಗ ಚಿಕಿತ್ಸಾ ಶಾಸ್ತ್ರದ ತಂತ್ರಗಳು ಮೊದಲು ನರರೋಗಿಗೆ ಸಂಬಂಧಿಸಿ ಬೆಳೆದು ಬಂದುವು. ಆದರೆ ಈಚೀಚೆಗೆ ಈ ತಂತ್ರಗಳನ್ನು ಅಪರಾಧಿಗಳ ಸಂಬಂಧವಾಗಿಯೂ ಬಳಸಿಕೊಳ್ಳುತ್ತಿದ್ದಾರೆ. ಈ ರೀತಿಯ ಪ್ರಯತ್ನವು ವಿಧವಿಧವಾದ ಪರಿಷ್ಕಾರಗಳು ತಲೆ ಎತ್ತಲು ಸಹಕಾರಿಯಾಗಿದೆ. ಅಂತಹವುಗಳಿಂದ ಗುಣಪಡಿಸುತ್ತಾರೆ. ಅವನಲ್ಲಿ ಅಂತರಾತ್ಮವನ್ನು ಉಂಟುಮಾಡುವವರೆಗೆ ಅಥವಾ ಬಲಗೊಳಿಸುವವರೆಗೆ ಪೂರ್ವಸ್ಥಿತಿಸ್ಥಾಪನೆ ಸಾಧ್ಯವೇ ಇಲ್ಲ.

ದುಷ್ಕರ್ಮಿಗಳಾಗಿ ರೂಪುಗೊಳ್ಳುತ್ತಿರುವ ಮಕ್ಕಳನ್ನು ಆದಷ್ಟು ಬೇಗ ಗುರುತಿಸಲು ಬೇಕಾದ ಪ್ರಯತ್ನಗಳನ್ನು ಮಾಡಬೇಕೆಂಬುದು ನಿರ್ವಿವಾದವಾದ ಸಂಗತಿ. ಯಾವ ಮಕ್ಕಳು ಅಧಿಕಾರಯುತ ಜಗತ್ತಿನಲ್ಲಿ ಸ್ವಯಂಪ್ರೇರಣೆಯಿಂದ ಮುಂದುವರಿಯಲು ಸಾಧ್ಯವಿಲ್ಲದೆ ದುಃಖಕ್ಕೆ ಒಳಗಾಗಿರುವರೋ ಅವರನ್ನು ಗುರ್ತಿಸಿ, ಸಮಯದಲ್ಲಿ ಸಹಾಯ ಮಾಡಬೇಕು. ಈ ಕೆಲಸಕ್ಕೆ ಸಾಕಷ್ಟು ಅನುಭವ ಮತ್ತು ಉತ್ತಮ ತರಬೇತಿಯುಳ್ಳ, ಉದ್ಯೋಗ ಮಂಡಲಿಯುಳ್ಳ, ಮಕ್ಕಳ ಮಾರ್ಗದರ್ಶನ ಮಾಡುವ ರುಗ್ಣಾಲಯಗಳನ್ನು ಸ್ಥಾಪಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕಾದ ಅಗತ್ಯ ಇಂದು ಬಹಳವಾಗಿ ಇದೆ.

ಬಾಲಾಪರಾಧಿಗಳ ಸುಧಾರಣೆಯಲ್ಲಿ ರಿಮಾಂಡ ಹೋಮ್ (ವೀಕ್ಷಣಾ ಗೃಹ) ಗಳ ಪಾತ್ರ

● ಬಿ. ಎಚ್. ಅವಾತಿ

ಔದ್ಯೋಗಿಕರಣ, ನಗರೀಕರಣ ಇತ್ಯಾದಿ ಕಾರಣಗಳಿಂದಾಗಿ ಸಂಕೀರ್ಣವಾಗುತ್ತ ಸಾಗಿರುವ ಆಧುನಿಕ ಸಮಾಜದಲ್ಲಿ ಬಾಲಾಪರಾಧ ಸಮಸ್ಯೆಯ ನಿಗ್ರಹವು ಒಂದು ಆಹ್ವಾನವೇ ಆಗಿದೆ. ಅಪರಾಧ ಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು, ಮಾನಸ ಶಾಸ್ತ್ರಜ್ಞರು, ಕಾನೂನು ತಜ್ಞರು, ಸಮಾಜ ಕಾರ್ಯಕರ್ತರು, ಸಮಾಜ ಕಾರ್ಯ ನಿಪುಣರು ಈ ಸಮಸ್ಯೆಯ ಪರಿಹಾರದತ್ತ ತಮ್ಮ ಗಮನವನ್ನು ಕೇಂದ್ರೀಕರಿಸತೊಡಗಿದ್ದಾರೆ. ಆರ್ಥಿಕವಾಗಿ, ವೈಜ್ಞಾನಿಕವಾಗಿ ಪ್ರಗತಿಯ ದಿಶೆಯತ್ತ ಸಾಗುತ್ತಿರುವ, ಆದರೂ ಕೃಷಿ ಮತ್ತು ಗ್ರಾಮೀಣ ಜೀವನವೇ ಪ್ರಾಧಾನ್ಯವಾದ ಭಾರತವು ಔದ್ಯೋಗಿಕವಾಗಿ ಮುಂದುವರೆದ ಮತ್ತು ನಗರ ಜೀವನವೇ ಪ್ರಾಮುಖ್ಯವಾದ ಕೆಲವು ಪಾಶ್ಚಿಮಾತ್ಯ ಸಮಾಜಗಳು ಎದುರಿಸುತ್ತಿರುವ ಬಾಲಾಪರಾಧ ಸಮಸ್ಯೆಯ ಗರಿಷ್ಠ ಸ್ಥಿತಿಯನ್ನು ಮುಟ್ಟಿಲ್ಲ. ಆದರೂ ದೊಡ್ಡ ದೊಡ್ಡ ಉದ್ಯಮಗಳು ಬೆಳೆದಂತೆ, ನಗರಗಳ ಸಂಖ್ಯೆಯಲ್ಲಿ ಮತ್ತು ಸಂಕೀರ್ಣತೆಯಲ್ಲಿ ಹೆಚ್ಚಳ ಕಂಡು ಬಂದಂತೆ, ಜನಸಂಖ್ಯೆ ತ್ವರಿತ ರೀತಿಯಲ್ಲಿ ಹೆಚ್ಚಾದಂತೆ, ನಿರುದ್ಯೋಗತನ ಅಧಿಕವಾದಂತೆ ಭಾರತದಲ್ಲಿಯೂ ಸಹ ಇತ್ತೀಚಿನ ದಶಕಗಳಲ್ಲಿ ಬಾಲಾಪರಾಧ ಸಮಸ್ಯೆಯು ವಿಕ್ಷಿಪ್ತ ಸ್ಥಿತಿಯನ್ನು ತಳೆಯುತ್ತಿದೆ.

ಸಮಾಜ ಚಿಂತಕರು, ಸಮಾಜ ವಿಜ್ಞಾನಿಗಳು, ಸಮಾಜ ಕಾರ್ಯ ನಿಪುಣರು ಇನ್ನೊಂದು ವಿಶೇಷ ಕಾರಣಕ್ಕಾಗಿ ಈ ಸಮಸ್ಯೆಯತ್ತ ಗಮನ ಹರಿಸಿದ್ದಾರೆ. ಬಾಲಕರ ಅಪರಾಧಿ ಮನೋವೃತ್ತಿಯನ್ನು, ಅಪರಾಧಿ ನಡತೆಯನ್ನು ಎಳೆಯರಿದ್ದಾಗಲೇ ನಿಗ್ರಹಿಸದಿದ್ದರೆ, ಅದು ಹಾಗೆಯೇ ಮುಂದುವರೆದು ಪ್ರಬುದ್ಧಾವಸ್ಥೆಯಲ್ಲಿಯೂ ಅಪರಾಧಿಗಳಾಗಿಯೇ ಮುಂದುವರಿಯುವರೆಂದು ಇತ್ತೀಚಿನ ಅಧ್ಯಯನದಿಂದ ಕಂಡು ಬಂದಿದೆ. (Carr L. J. Delinquency Control, New York, 1950. p 45) ಪ್ರಬುದ್ಧಾವಸ್ಥೆಯಲ್ಲಿ ಅಪರಾಧದಲ್ಲಿ ತೊಡಗಿದ ಎಷ್ಟೋ ಜನರ ಅಪರಾಧಿ ನಡತೆಯೂ ಸಹ

ಬಾಲ್ಯದಲ್ಲಿಯೇ ರೂಪುಗೊಂಡಿತ್ತೆಂದು ಸಮೀಕ್ಷೆಯು ತಿಳಿಸುತ್ತದೆ. ಅಲ್ಲದೇ ಪ್ರಭುದ್ಧಾವಸ್ಥೆಯ ಬಹುಸಂಖ್ಯಾಕ ಅಪರಾಧಿಗಳು ತಾವು ಬಾಲಕರಾಗಿದ್ದಾಗಲೇ ಅಪರಾಧಿ ಕೃತ್ಯಗಳಲ್ಲಿ ತೊಡಗಿದ್ದಾಗಿಯೂ ಮತ್ತು ಅದೇ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾಗಿಯೂ ತಿಳಿಸಿದ್ದಾರೆ. ವಯಸ್ಕರ ಅಪರಾಧಗಳನ್ನು ತಡೆಯುವದಕ್ಕೆ ಪೂರ್ವದಲ್ಲಿ ಬಾಲಾಪರಾಧವನ್ನೇ ನಿಗ್ರಹಿಸುವದು ವಿಹಿತವೆಂದು ತಿಳಿಯಲ್ಪಡುತ್ತದೆ. ಆದ್ದರಿಂದ ಬಾಲಾಪರಾಧಿಗಳ ಸುಧಾರಣೆಯು ಇತ್ತೀಚಿನ ದಶಕಗಳಲ್ಲಿ ಸಮಾಜದ ಮುಖ್ಯ ಕರ್ತವ್ಯಗಳಲ್ಲೊಂದು ಎಂದು ಭಾವಿಸಲಾಗಿದೆ.

'ಅಪರಾಧಿ' ಎಂದಾಕ್ಷಣ ಅವನನ್ನು ಅವನ ದುಷ್ಕೃತ್ಯಗಳಿಗಾಗಿ ಶಿಕ್ಷಿಸಬೇಕು. ದಂಡಿಸಬೇಕೆಂಬುದು ಹಳೆಯ ಸಿದ್ಧಾಂತ. ಆದರೆ ಇತ್ತೀಚೆಗೆ ಸಮಾಜವಿಜ್ಞಾನಿಗಳು ಅಪರಾಧಿಗಳನ್ನು, ಅದರಲ್ಲೂ ಬಾಲಾಪರಾಧಿಗಳನ್ನು, ಶಿಕ್ಷಿಸದೇ ರಕ್ಷಿಸಬೇಕು. ಅವರ ಸ್ವಭಾವದಲ್ಲಿ ಬದಲಾವಣೆಯನ್ನುಂಟು ಮಾಡಬೇಕು. ಅವರಿಗೆ ಮಾರ್ಗದರ್ಶನ ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ. ಈ ಸಿದ್ಧಾಂತದ ಮೇರೆಗೆ ಮಕ್ಕಳ ಸಲುವಾಗಿಯೇ ಪ್ರತ್ಯೇಕವಾಗಿ ರಚಿಸಲ್ಪಟ್ಟ ಕಾನೂನುಗಳು (Children's Acts). ಮಕ್ಕಳ ನ್ಯಾಯಾಲಯಗಳು (Juvenile Courts). ರಿಮಾಂಡ ಹೋಮುಗಳು (ವೀಕ್ಷಣಾ ಗೃಹಗಳು). ಪ್ರಮಾಣಿತ ಶಾಲೆಗಳು (Certified Schools). ಸರಕಾರದಿಂದ ಮನ್ನಣೆ ಪಡೆದ ಅನಾಥಾಶ್ರಮಗಳು ಮತ್ತು ಪೋಲಿಸ್ ಸಿಬ್ಬಂದಿ ಇತ್ಯಾದಿ ಅಪರಾಧಿ ಮಕ್ಕಳ ಸುಧಾರಣಾ ಕಾರ್ಯವನ್ನು ನಿರ್ವಹಿಸುತ್ತಾ ಇವೆ. ಮಕ್ಕಳ ಕಾನೂನಿನ ಕಕ್ಷೆಯಲ್ಲಿ ಮತ್ತು 'ಮಾರ್ಗದರ್ಶನದಲ್ಲಿ ಇನ್ನಿತರ ಸಂಸ್ಥೆಗಳು ಮತ್ತು ಸಿಬ್ಬಂದಿ ವರ್ಗದವರು ಕಾರ್ಯತತ್ಪರರಾಗಿದ್ದಾರೆ.

ಪೋಲೀಸನಾಗಲೀ, ಪ್ರೊಬೇಶನ್ ಅಧಿಕಾರಿಯೇ ಆಗಲಿ ಅಥವಾ ಮಕ್ಕಳ ಕಾನೂನಿನನ್ವಯ ನಿರ್ದೇಶಿಸಲ್ಪಟ್ಟ ಇನ್ನಿತರ ಯಾರಾದರೂ ಆಗಲಿ, ಅಪರಾಧಿ ಮಗುವನ್ನು ತನ್ನ ವಶಕ್ಕೆ ತೆಗೆದುಕೊಂಡ ತಕ್ಷಣ ಅವನನ್ನು ಮಕ್ಕಳ ನ್ಯಾಯಾಲಯದಲ್ಲಿ ಹಾಜರ ಪಡಿಸಬೇಕು. ನ್ಯಾಯಾಧೀಶರು ನ್ಯಾಯಾಲಯದ ಮುಂದೆ ಬಂದ ಮಗುವನ್ನು ಜಾಮೀನಿನ ಮೇಲೆ ಬಿಡುಗಡೆಮಾಡಿ ಸಂಬಂಧಿಕರಿಗೆ ಒಪ್ಪಿಸಬಹುದು. ಅಥವಾ ರಿಮಾಂಡ ಹೋಮಿಗೆ ಕಳುಹಿಸಿಕೊಡಬಹುದು. ಯಾವುದೇ ಕಾರಣಕ್ಕಾಗಿ ಬಾಲಾಪರಾಧಿಯನ್ನು ಎಂಥದೇ ಪ್ರಸಂಗದಲ್ಲಿ ವಯಸ್ಕರಿಗಾಗಿ ನಿರ್ಮಿಸಿದ ಬಂದಿಖಾನೆಗಾಗಲಿ ಅಥವಾ ಕಾರಾಗೃಹಕ್ಕಾಗಲಿ ಕಳುಹಿಸಿಕೊಡಲು ಕಾಯಿದೆ ಪ್ರಕಾರ ಅವಕಾಶವಿಲ್ಲ. ಕೊಲೆಯಂಥ ಘೋರಕೃತ್ಯದಲ್ಲಿ ಸಹಭಾಗಿಯಾಗಿದ್ದರೂ ಸಹಿತ ಯಾವನೊಬ್ಬ ವ್ಯಕ್ತಿಯು ವಯಸ್ಸಿನನ್ವಯ ಬಾಲಕನೆಂದು ಪರಿಗಣಿಸಲ್ಪಟ್ಟಿದ್ದಾನರೆ ಆತನನ್ನು ರಿಮಾಂಡ ಹೋಮಿಗೆ ಕಳುಹಿಸಿಕೊಡುತ್ತಾರೆ; ಮತ್ತು ಆತನ ವಿಚಾರಣೆಯು ಬಾಲಕರ ನ್ಯಾಯಾ

ಬಯಲಿನಲ್ಲಿಯೇ ನಡೆಯುತ್ತದೆ. ಬಾಲಕರ ನ್ಯಾಯಾಲಯದಲ್ಲಿ ವಕೀಲರಿಗೆ ವಾದ ಮಾಡಲು ಅವಕಾಶವಿರುವದಿಲ್ಲ.

ತಪ್ಪು ಗ್ರಹಿಕೆಯ ಪ್ರಕಾರ ರಿಮಾಂಡ ಹೋಮ್‌ದ ಬಗ್ಗೆ ಮಾಹಿತಿ ಇಲ್ಲದವರು ಇದು ಅಪರಾಧಿ ಮಕ್ಕಳಿಗೆ ಶಿಕ್ಷೆ ಕೊಡುವ ಸ್ಥಾನವೆಂದು ಭಾವಿಸುವ್ವದುಂಟು. ವಯಸ್ಕ ಅಪರಾಧಿಗಳಿಗೆ ಕಾರಾಗೃಹವಿದ್ದಂತೆ, ಬಾಲಾಪರಾಧಿಗಳಿಗೆ ರಿಮಾಂಡ ಹೋಮ್ ಎಂದು ಭಾವಿಸುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ರಿಮಾಂಡ ಹೋಮ್ ಶಿಕ್ಷಾ ಗೃಹವಾಗಿರದೆ ರಕ್ಷಣಾ ಗೃಹವಾಗಿದೆ. ಹಿಂದು ಮುಂದಿಲ್ಲದ, ಉಡಾಳರಾದ, ನಿರ್ಗತಿಕರಾದ, ಅಪರಾಧ ಮನೋವೃತ್ತಿಯ ಎಳೆಯ ವಯಸ್ಸಿನ ಬಾಲ-ಬಾಲಕಿಯರ ಸುಧಾರಣಾ ಕ್ರಮದಲ್ಲಿಯ ಪ್ರಥಮ ಕಾರ್ಯವಾದ ತನಿಖಾ ವ್ಯವಸ್ಥೆಯ ಪರೀಕ್ಷಾ ಕೇಂದ್ರವೇ 'ರಿಮಾಂಡ ಹೋಮ್.'

ಸಮಾಜ ಸುಧಾರಕರಿಗೆ ಸಮಾಜ ಸೇವಕರಿಗೆ 'ರಿಮಾಂಡ' ಎಂಬ ಶಬ್ದ ಸರಿಬರುವದಿಲ್ಲವೆಂದು ಕಾಣುತ್ತದೆ. ಏಕೆಂದರೆ 'ರಿಮಾಂಡ'ಎಂಬುದು ಅಪರಾಧ, ಅಪರಾಧಿಗಳಿಗೆ ಅನ್ವಯಿಸುವ ಶಬ್ದವಾಗಿದೆ. ಅಂಥವರು ಈ ಸಂಸ್ಥೆಯನ್ನು 'ಮಕ್ಕಳ ಮನೆ' (Children Home) ಎಂದು ಕರೆಯಬೇಕೆಂದು ಬಯಸಿದ್ದರು. ವಾಸ್ತವಿಕವಾಗಿ ಇದು "ಮಕ್ಕಳ ಮನೆಯೇ" ಆಗಿದೆ. ಕಾಯಿದೆಯ ದೃಷ್ಟಿಯಿಂದ ರಿಮಾಂಡ ಹೋಮ್ ಎಂಬ ಹೆಸರನ್ನು ಬಿಡಲಿಕ್ಕೆ ಬರುವಂತಿಲ್ಲ. ಇದು ಭದ್ರತೆ, ಸುರಕ್ಷತೆ, ವೀಕ್ಷಣೆ, ಪರೀಕ್ಷೆಗಳ ಸೌಲಭ್ಯ ಒದಗಿಸುವ ಸ್ಥಾನ. ಪರಿಶೋಧನೆ, ಪರಿಹಾರಗಳನ್ನು ಹುಡುಕುವ ಸಂಸ್ಥೆಯಾಗಿದೆ. ಮಕ್ಕಳ ಕಾನೂನಿನ ವ್ಯಾಪ್ತಿಯಲ್ಲಿ ಬರುವ ಪರದೇಶಿ, ನಿರ್ಗತಿಕರಾದ, ಅಡ್ಡ ದಾರಿಗೆ ಬಿದ್ದ, ಅಡಮುಟ್ಟ ಅನ್ಯಾಡಿಗರಾದ, ಇನ್ನೊಬ್ಬರ ಉಪಟಳಕ್ಕೊಳಗಾದ ಮತ್ತು ಇನ್ನೊಬ್ಬರ ಶೋಷಣೆಗೊಳಗಾದ, ಅಪರಾಧ ಮನೋವೃತ್ತಿಯವರೇ ಮೊದಲಾದ ಭಿನ್ನ ಭಿನ್ನ ಗುಣ ಸ್ವಭಾವದ ಮಕ್ಕಳಿಗಿಲ್ಲಿ ಆಶ್ರಯ ಕೊಡಲಾಗುವದು. ಆ ಮೇಲೆ ಪರಿವೀಕ್ಷಣಾಧಿಕಾರಿಗಳು (Probation officers) ದೈಹಿಕ ರೋಗ ರುಜಿನಗಳಿಂದ ಬಳಲುತ್ತಿರುವರಾರು? ಮಾನಸಿಕ ವೈಪರಿತ್ಯಗಳಿಗೆ ತುತ್ತಾದವರಾರು? ಎಂಬುದನ್ನು ಕಂಡು ಹಿಡಿದು ಅವರ ವರ್ಗೀಕರಣ ಮಾಡುವರು. ಮಾನಸಿಕ ವೈಪರಿತ್ಯ, ಸಾಂಸರ್ಗಿಕ ರೋಗಗಳಿಂದ ಬಳಲುವವರನ್ನು ಪ್ರತ್ಯೇಕಿಸುವರು ಮತ್ತು ಅವರಿಗೆ ಉಪಚಾರವನ್ನು ಮಾಡಿಸುವರು. ದೀರ್ಘ ಹಾಗೂ ಉತ್ಕಟ ಸ್ವರೂಪದ ಉಪಚಾರ ಬೇಕಿದ್ದಲ್ಲಿ ಅಂತಹವರನ್ನು ಅಂಥಾ ಬೇನೆಗಳ ಚಿಕಿತ್ಸೆಗೆ ಹೆಸರಾದ ಆಸ್ಪತ್ರೆಗಳಿಗೆ ಕಳುಹಿಸಿ ಕೊಡಲಾಗುವದು. ಈ ದಿಶೆಯಲ್ಲಿ ಪರಿವೀಕ್ಷಣಾಧಿಕಾರಿಗಳು ಮನಃಶಾಸ್ತ್ರಜ್ಞರ, ಮನಸ್ಸೋಪಚಾರಕರ ಮತ್ತು ವೈದ್ಯರ ಸಹಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

'ರಿಮಾಂಡ ಹೋಮ್'ನಲ್ಲಿ ಪರಿವೀಕ್ಷಣಾಧಿಕಾರಿಗಳ ಹೊಣೆಯು ಅತಿ ಗುರುತರವಾದದ್ದು. 'ರಿಮಾಂಡ ಹೋಮ್'ಗೆ ಬರುವ ಮಕ್ಕಳ ಭವಿಷ್ಯವನ್ನು ನಿರ್ಧರಿಸುವಲ್ಲಿ

ಇವರು ಸಕ್ರಿಯ ಪಾತ್ರ ವಹಿಸುತ್ತಾರೆ. ಅಪರಾಧಿ ಮನೋಭೂಮಿಕೆಯುಳ್ಳ ಮತ್ತು ಇತರೇ ಮಕ್ಕಳ ಸುಧಾರಣೆಯ ದಿಶೆಯಲ್ಲಿ ಯಾವಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ವಿಭಿನ್ನ ಹಿನ್ನೆಲೆಯುಳ್ಳ ವಿಭಿನ್ನ ಸ್ವರೂಪದ ಮಕ್ಕಳಿಗೆ ಯಾವಯಾವ ಕ್ರಮಗಳು ಯೋಗ್ಯವೆಂಬುದಾಗಿ ನಿರ್ಧರಿಸುವ ಮಹತ್ವದ ಕಾರ್ಯದಲ್ಲಿ ಬಾಲಕರ ನ್ಯಾಯಾಲಯದ ನ್ಯಾಯಾಧೀಶರಿಗೆ ಪರಿವೀಕ್ಷಣಾಧಿಕಾರಿಗಳು ಸಹಾಯಕರಾಗುತ್ತಾರಲ್ಲದೇ ಅವರಿಗೆ ಮಾರ್ಗದರ್ಶಕರೂ ಆಗುತ್ತಾರೆ. ಈ ಗುರುತರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಪರಿವೀಕ್ಷಣಾಧಿಕಾರಿಗಳು 'ರಿಮಾಂಡ ಹೋಮ್'ಗೆ ಬಂದ ಬಾಲಕರನ್ನು ಪರಿಶೀಲಿಸಿ ಪರೀಕ್ಷಿಸಬೇಕಾಗುತ್ತದೆ. ಅಂದರೆ ಪ್ರತಿಯೊಬ್ಬ ಬಾಲಕನನ್ನು ಅಧ್ಯಯನ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಪರಿವೀಕ್ಷಣಾಧಿಕಾರಿಯು ಈ ಕೆಳಗಿನ ಮಾಹಿತಿಗಳನ್ನು ಕಲೆ ಹಾಕಿ ವಿಶ್ಲೇಷಿಸುತ್ತಾನೆ: ದಾರಿ ತಪ್ಪಿದ ಹುಡುಗನ ಕುಟುಂಬದ ಸದಸ್ಯರು. ತಂದೆಯು ಇಲ್ಲದಿರಬಹುದು. ತಾಯಿಯು ಇಲ್ಲದಿರಬಹುದು. ಅಥವಾ ಬಾಲಕನು ಅನಾಥನಾಗಿರಬಹುದು. ಇಂತಹ ಬಾಲಕರು ಮತ್ತೊಬ್ಬರ ದೌರ್ಜನ್ಯಕ್ಕೆ ಒಳಗಾಗಿರಬಹುದು. ತಂದೆ ತಾಯಿಗಳಿದ್ದರೂ ಹಲವಾರು ಕಾರಣಗಳ ಮೂಲಕ ಬಾಲಕನ ನಡತೆಯನ್ನು ನಿರ್ಲಕ್ಷಿಸಿರಬಹುದು. ಅಥವಾ ಅಪರಾಧಿ ವೃತ್ತಿಗೆ ಅವರೇ ಅವನನ್ನು ಪ್ರೇರೇಪಿಸಿರಬಹುದು. ಕುಟುಂಬದ ಆರ್ಥಿಕ ಸ್ಥಿತಿ. ಸಮಾಜದಲ್ಲಿ ಕುಟುಂಬದ ಸ್ಥಾನ. ದಾರಿ ತಪ್ಪಿದ ಹುಡುಗನ ವಾತಾವರಣ. ತಪ್ಪು ಮಾಡಲು ಅದ ಪ್ರೇರಣೆ. ತಪ್ಪು ಮಾಡುವಾಗ ಅವನ ವಯಸ್ಸು. ಅವನ ಶಿಕ್ಷಣ. ಸ್ನೇಹಿತರು, ಸಹಚರರು, ಅಪರಾಧಿ ಜೀವನದಲ್ಲಿ ಅವನಿಟ್ಟ ಆಸ್ಥೆ, ಅಪರಾಧವೆಸಗುವಲ್ಲಿ ಅವನ ಪಾತ್ರ. ಅಪರಾಧಿ ಜೀವನವನ್ನು ಕುರಿತಾದ ಅವನ ಮನೋಭಾವನೆ, ಅಪರಾಧಿ ಜೀವನಕ್ಕೆ ಅವನು ಹೊಸಬನೋ ಅಥವಾ ಹಳಬನೋ ಇತ್ಯಾದಿ ವಿಷಯಗಳನ್ನು ಸಂಗ್ರಹಿಸಬೇಕಾಗುತ್ತದೆ. ಹೀಗೆ ಬಾಲಕನ ಹಿನ್ನೆಲೆಯನ್ನು ತಿಳಿದುಕೊಳ್ಳುವಾಗ ಪರಿವೀಕ್ಷಣಾಧಿಕಾರಿಯು ಅವನ ಸ್ನೇಹಿತನಾಗಿ. ಆಪತ್ ಬಾಂಧವನಾಗಿ ಅವನ ನಂಬುಗೆಯನ್ನು ಗಳಿಸಿಕೊಂಡು ಸಂದರ್ಶನ ತೆಗೆದುಕೊಳ್ಳಬೇಕಾಗುತ್ತದೆ. ಸಂದರ್ಶನ ಬಹಳ ಸೂಕ್ಷ್ಮವಾಗಿ ಚತುರತೆಯಿಂದ ಮಾಡಬೇಕಾದ ಕಾರ್ಯ. ಸಂದರ್ಶನ ತೆಗೆದುಕೊಳ್ಳುವ ಒಂದು ನಿರ್ದಿಷ್ಟ ಕ್ರಮವಿದೆ. ಇದರ ಮೂಲಕ ತಪ್ಪಿತಸ್ಥನನ್ನು ತಿಳಿದುಕೊಳ್ಳಬಹುದು. ಅಲ್ಲದೇ ಅಪರಾಧಿ ಜೀವನಕ್ಕೆ ಕುರಿತಾದ ಅವನ ಹಿನ್ನೆಲೆಯನ್ನು ಅಭ್ಯಸಿಸುವಾಗ ಪರಿವೀಕ್ಷಣಾಧಿಕಾರಿಯು 'ಅಪರಾಧ' ಎಂಬ ವಿಷಯಕ್ಕೆ ಸಂಬಂಧಿಸಿದ ಸಮಾಜ ಶಾಸ್ತ್ರದ, ಅಪರಾಧ ಶಾಸ್ತ್ರದ ಮತ್ತು ಮನಃಶಾಸ್ತ್ರದ ಕೆಲವು ಮೂಲಭೂತ ತತ್ವಗಳನ್ನು, ಸಿದ್ಧಾಂತಗಳನ್ನು ತಿಳಿದುಕೊಂಡಿರಬೇಕಾಗುತ್ತದೆ.

ಪರಿವೀಕ್ಷಣಾಧಿಕಾರಿಯು ಅಪರಾಧಿ ಬಾಲಕನನ್ನು ಅಭ್ಯಾಸಮಾಡುವುದರ ಜೊತೆ ಅವನ ಕುಟುಂಬಕ್ಕೂ ಸಹ ಸ್ವತಃ ಭೆಟ್ಟಿಕೊಟ್ಟು ಅಲ್ಲಿಯ ಪರಿಸ್ಥಿತಿಯ ನಿಜಾಂಶವನ್ನು ತಿಳಿದುಕೊಳ್ಳಬೇಕಾಗುತ್ತದೆ. ಮಕ್ಕಳನ್ನು ವಾಪಸ್ಸು ಕಳುಹಿಸಿದರೆ ಅವರನ್ನು ಸರಿಯಾ

ಮಾರ್ಗದಲ್ಲಿ ಬೆಳೆಸುವ ಅವರ ಸ್ವಭಾವವನ್ನು ತಿದ್ದುವ, ಅವರಿಗೆ ವಿದ್ಯಾಭ್ಯಾಸ ಕೊಡಿಸುವ, ಅವರ ಆಕಾಂಕ್ಷೆಗಳನ್ನು ಅರಿತುಕೊಂಡು ಅವುಗಳನ್ನು ಪೂರೈಸಲಿಕ್ಕೆ ಪ್ರಯತ್ನಪಡುವ ಆಸ್ಥೆ, ಸಹನೆ, ಶಕ್ತಿ ಕುಟುಂಬದ ಸದಸ್ಯರಲ್ಲಿ ಅಥವಾ ಪಾಲಕರಲ್ಲಿ ಇದೆಯೋ ಇಲ್ಲವೋ ಎಂಬುದು ಅಷ್ಟೇ ಪ್ರಾಮುಖ್ಯವಾದದ್ದು. ಇದಲ್ಲದೆ, ಸಾಮಾಜಿಕ ಪರಿಸರದ ಮಾಲಿನ್ಯತೆ, ಕುಟುಂಬಕ್ಕೆ ದುಷ್ಟ ಹುಡುಗರ ಮತ್ತು ದುಷ್ಟಶಕ್ತಿಗಳ ಸಾಮೀಪ್ಯ, ಬಾಲಕನು ಶಾಲೆಗೆ ಹೋಗುತ್ತಿದ್ದುದಾದರೆ, ಗುರುಗಳ ಅಭಿಪ್ರಾಯ: ಯಾವುದಾದರೂ ಕೆಲಸ ಮಾಡುತ್ತಿದ್ದರೆ ಮಾಲೀಕನ ಅಭಿಪ್ರಾಯ, ಅಲ್ಲದೆ ಹುಡುಗನ ವಿಷಯಕ್ಕೆ ನೆರೆಹೊರೆಯವರ ಅಭಿಪ್ರಾಯವನ್ನು ಸಂಗ್ರಹಿಸಬೇಕಾಗುತ್ತದೆ. ಬಾಲಕನಿಂದ, ಕುಟುಂಬದವರಿಂದ ಮತ್ತು ನೆರೆಯವರಿಂದ ಸಂಗ್ರಹಿಸಿದ ವಿಷಯದ ಆಧಾರದಮೇಲೆ ಪರಿವೀಕ್ಷಣಾಧಿಕಾರಿಯು ಸುದೀರ್ಘ ವರದಿಯನ್ನು ತಯಾರಿಸಿ ಬಾಲಕರ ನ್ಯಾಯಾಲಯದ ನ್ಯಾಯಾಧೀಶರೆದುರು ಸಾದರಪಡಿಸುತ್ತಾರೆ. ಹೀಗೆ ಹಾದಿತಪ್ಪಿದ ಮಕ್ಕಳ ಬುದ್ಧಿ, ಸ್ವಭಾವ, ಶರೀರ ಇತ್ಯಾದಿಗಳನ್ನು ವೀಕ್ಷಿಸಿ ಸಾಮಾಜಿಕ ಪರಿಸರ, ಕುಟುಂಬ ಮುಂತಾದವುಗಳನ್ನು ಪರಿಶೀಲಿಸಿ ಅವರಿಗೆ ತಕ್ಕ ಪರಿಹಾರಗಳನ್ನು ಹುಡುಕಲು ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗುವದು. ಅಲ್ಲದೆ, ಭವಿಷ್ಯದಲ್ಲಿ ಮಕ್ಕಳು ಉತ್ತಮ ನಾಗರಿಕರಾಗಲು ಅವರಿಗೆ ಯಾವಯಾವ ಉಪಚಾರ, ಶಿಕ್ಷಣ ಕೊಡಬೇಕೆಂಬ ಬಗೆಗೆ ಪರಿವೀಕ್ಷಣಾಧಿಕಾರಿಯು ನ್ಯಾಯಮಂಡಲಕ್ಕೆ ತನ್ನ ಅಭಿಪ್ರಾಯ, ಸೂಚನೆಗಳನ್ನು ಕೊಡುತ್ತಾನೆ.

ಬಾಲಕರ ನ್ಯಾಯಾಲಯವು 'ರಿಮಾಂಡ ಹೋಮ್'ನ ಪರಿಸರದಲ್ಲಿಯೇ ವ್ಯವಸ್ಥಿತಗೊಂಡಿರುತ್ತದೆ. ಈ ನ್ಯಾಯಮಂಡಳಿಗಳ ರಚನೆ, ಕಾರ್ಯವ್ಯಾಪ್ತಿ, ಕಾರ್ಯಾಚರಣೆಗಳು ಮಕ್ಕಳ ಕಾನೂನಿನ ಆದೇಶದಂತೆಯೇ ರೂಪಗೊಂಡಿರುತ್ತವೆ. ನ್ಯಾಯಮಂಡಳಿಗಳು ಸಾಮಾನ್ಯವಾಗಿ ವಾರಕ್ಕೊಂದಾವರ್ತಿ ನ್ಯಾಯವಿಚಾರಣೆ ನಡೆಸುತ್ತವೆ. ಈ ನ್ಯಾಯಮಂಡಳಿಗಳ ಪ್ರಮುಖ ವೈಶಿಷ್ಟ್ಯಗಳು :

(೧) ಈ ನ್ಯಾಯಮಂಡಳಿಗಳು ಮನೆಯಂತೆ ಭಾಸವಾಗುತ್ತವೆ

(೨) ಏಕರೂಪ ಹಾಗೂ ಸುಲಭ ನ್ಯಾಯ ವಿಚಾರಣೆ

(೩) ಗೌರವ ಮಹಿಳಾ ನ್ಯಾಯಾಧೀಶರ ನೆರವು

(೪) ಸಮವಸ್ತ್ರದಲ್ಲಿ ವಕೀಲರ, ಪೋಲೀಸರ ಪ್ರತಿಬಂಧ

(೫) ತಪ್ಪು ಮಾಡಿದ ನಂತರ ಮಗು ದಂಡನೆಗೆ ಅರ್ಹನಾದ ವ್ಯಕ್ತಿಯಾಗಿರದೆ ತಿದ್ದಲು ಸಾಧ್ಯವಿದ್ದ ವ್ಯಕ್ತಿ. ಗುಣಪಡಿಸಲು ಸಾಧ್ಯವಿರುವ ರೋಗಿ ಎಂಬುದು ಈ ನ್ಯಾಯಮಂದಿರದ ಮೂಲಭೂತ ತತ್ವವಾಗಿದೆ.

ಇದಲ್ಲದೇ ನ್ಯಾಯಾಧೀಶರು ಕೇವಲ ಕಾಯಿದೆ ತಜ್ಞರಲ್ಲದೇ ಮಕ್ಕಳಲ್ಲಿ ವಿಶೇಷ ಆಸ್ಥೆ. ಮಕ್ಕಳ ಕಲ್ಯಾಣದಲ್ಲಿ ನಂಬುಗೆ ಮತ್ತು ಮಕ್ಕಳ ಹಿತಚಿಂತಕರಾಗಿರಬೇಕೆಂದು ಸಾಮಾನ್ಯ ವಿಧಿ ನಿಯಮ. ಮಕ್ಕಳ ವಿಷಯಕ್ಕೆ ವಿಶೇಷ ಒಲವು ಇರುವವರನ್ನೇ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಲು ವಿನಂತಿಸಿಕೊಳ್ಳಲಾಗುತ್ತದೆ. ನ್ಯಾಯವಿಚಾರಣೆಯ ಕಾಲಕ್ಕೆ ಅಪರಾಧಿ ಮಗುವನ್ನು ಅವನ ತಂದೆ ತಾಯಿಗಳನ್ನು ಅಥವಾ ಪಾಲಕರನ್ನು ವಿಚಾರಿಸಲಾಗುತ್ತದೆ. ಅಲ್ಲದೇ ಪರಿವೀಕ್ಷಣಾಧಿಕಾರಿಯು ತಯಾರಿಸಿದ ವರದಿಯನ್ನು ಆಧಾರವಾಗಿಟ್ಟುಕೊಂಡು ಅಥವಾ ಅವರು ಕೊಟ್ಟ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮಗುವಿನ ಉತ್ತಮ ಭವಿಷ್ಯ ನಿರ್ಧರಿಸುವಲ್ಲಿ ಯೋಗ್ಯ ಕ್ರಮ ಕೈಕೊಳ್ಳಲಾಗುತ್ತದೆ. ನ್ಯಾಯಾಧೀಶರು ಮಗುವನ್ನು ಅವನ ಹಿಂದಿನ ನಡಾವಳಿಯನ್ನು ಜ್ಞಾಪಿಸಿ ಮುಂದಿನ ನಡತೆಯ ಬಗ್ಗೆ ಕೇವಲ ಎಚ್ಚರಿಕೆ ಕೊಟ್ಟು ಬಿಡಬಹುದು. ಅಥವಾ ತಂದೆ ತಾಯಿಗಳು ಮಡುಗನ ನಡತೆಯನ್ನು ತಿದ್ದುವಲ್ಲಿ ಯೋಗ್ಯರೆಂದು ಕಂಡುಬಂದರೆ, ಅವರಿಂದ ಕೆಲವೊಂದು ಹಣಕ್ಕ (ಸಾಮಾನ್ಯವಾಗಿ ೨೫೦ ರೂಪಾಯಿಯಿಂದ ೧೦೦೦ ರೂಪಾಯಿಯವರೆಗೆ) ಮುಚ್ಚಳಿಕೆ ಬರೆಯಿಸಿಕೊಂಡು ಬಾಲಕನನ್ನು ತಂದೆ ತಾಯಿಗಳ ವಶಕ್ಕೆ ಒಪ್ಪಿಸಬಹುದು. ಅಥವಾ ಬಾಲಕನು ಯಾವುದಾದರೂ ಕೆಲಸಮಾಡುತ್ತಿದ್ದರೆ ಅವನಿಗೆ ದಂಡ ಹಾಕಿ ಎಚ್ಚರಿಕೆ ಕೊಟ್ಟು ಬಿಡಲೂಬಹುದು. ಅಥವಾ ಬಾಲಕನನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಅಥವಾ ಯಾವುದಾದರೂ ವೃತ್ತಿಯಲ್ಲಿ ತರಬೇತಿ ಪಡೆಯಲಿಕ್ಕೆ ಪ್ರಮಾಣಿತ ಶಾಲೆಗಾಗಲೀ ಇಲ್ಲವೇ ಯೋಗ್ಯರ ಸಂಸ್ಥೆ (Fit persons institution) ಗಾಗಲೀ ಕಳಿಸಿಕೊಡಬಹುದು. ಹೀಗೆ ಹಾದಿ ತಪ್ಪಿದ ಮಗುವಿನ ಭವಿಷ್ಯವನ್ನು ರೂಪಿಸುವಲ್ಲಿ ಯಾವುವೇ ನಿರ್ಣಯವನ್ನು ಕೈಕೊಳ್ಳಬಹುದು.

'ರಿಮಾಂಡ ಹೋಮ್'ಗೆ ತರಲ್ಪಟ್ಟ ಮಕ್ಕಳಿಗೆ ಪ್ರತಿದಿನ ಸೌಮ್ಯ ಹಾಗೂ ಆರೋಗ್ಯವರ್ಧಕ ಆಹಾರ ಕೊಡಲಾಗುತ್ತಿದೆ. ಉಡತೊಡಲು, ಹಾಸಲು ಹೊದೆಯಲು ಸಾಕಷ್ಟು ಅರಿವೆ ಅಂಚಡಿ ಕೊಡಲಾಗುವದು. ಅಗತ್ಯವೆನಿಸಿದಾಗ ಔಷಧೋಪಚಾರಗಳನ್ನು ಒದಗಿಸಲಾಗುವದು. 'ರಿಮಾಂಡ ಹೋಮ್'ದಲ್ಲಿರುವವರು ಶಾಶ್ವತ ಸ್ವರೂಪದ ನಿವಾಸಿಗಳಲ್ಲ. ಆದುದರಿಂದ ಅವರಿಗೆ ದೀರ್ಘಾವಧಿಯ ಶಿಕ್ಷಣ ಕ್ರಮವನ್ನು ಹಾಕಿಕೊಡುವದು ಕಷ್ಟ. ಆದರೂ, ಇಲ್ಲಿರುವಷ್ಟು ಕಾಲ ಬಾಲಕ-ಬಾಲಕಿಯರು ಆರೋಗ್ಯವಂತರೂ. ಉದ್ಯಮಶೀಲರೂ ಆಗಿರಲೆಂದು ಅವರಿಗೆ ಸಾಧ್ಯವಿದ್ದಷ್ಟುಮಟ್ಟಿಗೆ ಬೌದ್ಧಿಕ ಹಾಗೂ ಔದ್ಯೋಗಿಕ ಶಿಕ್ಷಣವನ್ನು ಕೊಡಲಾಗುವದು. ಅಂದರೆ ನೂಲುವದು. ನೆಯುವದು. ಹೊಲಿಗೆ. ಹೆಣಿಕೆ. ಕಸೂತಿ. ಅಡುಗೆ ಹಾಗೂ ಒಕ್ಕಲುತನ ಮುಂತಾದ ಉದ್ಯೋಗಗಳ ವಿಷಯವಾಗಿ ಶಿಕ್ಷಣ ಕೊಡಲಾಗುವದು. ಇವುಗಳ ಜೊತೆಗೆ ಓದು-ಬರಹವನ್ನು ಸಹ ಹೇಳಿಕೊಡಲಾಗುವದು. ಆರೋಗ್ಯ ರಕ್ಷಣೆಗಾಗಿ ವ್ಯಾಯಾಮ. ಆಟಗಳಲ್ಲದೇ ಮನೋರಂಜನೆಗಾಗಿ ರೇಡಿಯೋ. ವನಭೋಜನಗಳ ವ್ಯವಸ್ಥೆಯನ್ನೂ

ಮಾಡಲಾಗುತ್ತದೆ. ಹೀಗೆ 'ರಿಮಾಂಡ ಹೋಮ್' ಮಕ್ಕಳ ಅಸಹ್ಯ ಭವಿಷ್ಯವನ್ನು ತಪ್ಪಿಸಿ ಅವರಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸುವ ಹಾದಿಯಲ್ಲಿ ಪ್ರಥಮ ಸೋಪಾನ ವಾಗಿದೆ.

"ರಿಮಾಂಡ ಹೋಮ್" ಎಂದಾಕ್ಷಣ ಇಂದು ಜನಸಾಮಾನ್ಯರಲ್ಲಿ ಅಸಡ್ಡೆಯ, ಅಸಹ್ಯ ಮನೋಭಾವನೆ ವ್ಯಕ್ತವಾಗುತ್ತಿರುವದನ್ನು ಕಾಣಬಹುದು. ಅದೇ ಪ್ರಕಾರ 'ರಿಮಾಂಡ ಹೋಮ್'ದಿಂದ ಮರಳಿ ಬಂದ ಮಕ್ಕಳ ಬಗ್ಗೆಯೂ ಅಸಡ್ಡೆಯ ಮನೋಭಾವನೆಯೊಂದಿಗೆ ಅನಾಸ್ಥೆಯೂ ಬೆಳೆಯುತ್ತಾ ನಡೆದಿದೆ. 'ರಿಮಾಂಡ ಹೋಮ್'ಗೆ ಹೋಗಿ ಬರುವದು ಮಕ್ಕಳ ಸಾಮಾಜಿಕ ಜೀವನದಲ್ಲಿ ಕಳಂಕವಾಗಿ ಮಾರ್ಪಟ್ಟಿದೆ. ಜನಸಾಮಾನ್ಯರ ಈ ಭಾವನೆಗಳು, ವಿಚಾರಗಳು ದಾರಿತಪ್ಪಿದ ಮಕ್ಕಳು ತಮ್ಮ ನಡತೆಯನ್ನು ಯೋಗ್ಯ ಮಾರ್ಗದತ್ತ ತಿದ್ದಿಕೊಳ್ಳುವಲ್ಲಿ ಆತಂಕಗಳಾಗತೊಡಗಿವೆ. ಆದುದರಿಂದ 'ರಿಮಾಂಡ ಹೋಮ್' ವಿಷಯಕ್ಕೆ, 'ರಿಮಾಂಡ ಹೋಮ್'ದಿಂದ ಬಿಡುಗಡೆಯಾದ ಮಕ್ಕಳ ವಿಷಯಕ್ಕೆ ಜನಸಾಮಾನ್ಯರಲ್ಲಿ ಇದ್ದ ತಪ್ಪು ಕಲ್ಪನೆಗಳನ್ನು ನಿವಾರಿಸುವದು ಅತೀ ಅವಶ್ಯವಾಗಿದೆ. ಈ ವಿಷಯಕ್ಕೂ ಯೋಗ್ಯ ಜನಾಭಿಪ್ರಾಯ ರೂಪಿಸುವದು ಸಹಿತ ಅಷ್ಟೇ ಮುಖ್ಯವಾಗಿದೆ. ಇದು ಸಮಾಜದಲ್ಲಿ ಮಕ್ಕಳ ವಿಷಯವಾದುದರಿಂದ ಯಾವುದನ್ನೂ ನಿರ್ಲಕ್ಷಿಸಲಿಕ್ಕೆ ಬರುವಂತಿಲ್ಲ. ಯಾಕಂದರೆ, ಎಲ್ಲರೂ ಒಪ್ಪಿಕೊಂಡಂತೆ "ಇಂದಿನ ಚಿಕ್ಕ ಮಕ್ಕಳೇ ರಾಷ್ಟ್ರದ ಭಾವೀ ನಾಗರಿಕರು, ಮಕ್ಕಳೇ ರಾಷ್ಟ್ರದ ಸಜೀವ ಸಂಪತ್ತು."

ಆಧಾರ ಗ್ರಂಥಗಳು

1. Neumeyer, Martin H.— *Juvenile Delinquency in Modern Society*, Princeton, 1961

2. Jyotsna H. Shaw— *Juvenile Delinquency A Challenge* Central Bureau of Correctional Services, Department of Social Welfare, New Delhi–1970

3. Sethna M. J.— *Society and the Criminal*, Bombay, 1964

4. 'ವಿವಿಧ ಲೇಖಕರು'— ರಜತೋತ್ಸವ ಸಂಚಿಕೆ ದಿ. ಧಾರವಾಡ ಡಿಸ್ಟ್ರಿಕ್ಟ ಪ್ರೊಬೇಶನ್ ಅ್ಯಂಡ ಆಫ್ಟರ್ ಕೇರ ಅಸೋಶಿಯೇಶನ್, ೧೯೫೯

(ಕೆಲವು ರಿಮಾಂಡ ಹೋಮ್‌ಗಳನ್ನು, ಪರಿವೀಕ್ಷಣಾಧಿಕಾರಿಗಳನ್ನು ಮತ್ತು ಬಾಲಕರ ನ್ಯಾಯಾಲಯದ ನ್ಯಾಯಾಧೀಶರನ್ನು ಪ್ರತ್ಯಕ್ಷ ಸಂದರ್ಶಿಸಿ ಕಲೆಹಾಕಿದ ವಿಷಯದ ಆಧಾರದ ಮೇಲೆಯೂ ಈ ಲೇಖನ ಆಧಾರಿತ.)

●

ನಿಮಗಿದು ಗೊತ್ತೆ?

ಸುಮಾರು ೯೨ ದಶಲಕ್ಷ ಮಕ್ಕಳು ಭಾರತದಲ್ಲಿ ಬದುಕಲು ಕಠಿಣವಾಗಿರುವಂಥ ಪರಿಸ್ಥಿತಿಯಲ್ಲಿ ಬಡತನದ ರೇಖೆಯ ಕೆಳಮಟ್ಟದಲ್ಲಿರುವರು.

ಈ ಪೈಕಿ ಸುಮಾರು ೪೬ ದಶಲಕ್ಷ ಮಕ್ಕಳು ೦–೬ ವಯೋಗುಂಪಿನಲ್ಲಿ ಹೃದಯವಿದ್ರಾವಕ ಸ್ಥಿತಿಯಲ್ಲಿರುವರು.

ಈ ೪೬ ದಶಲಕ್ಷ ಮಕ್ಕಳಲ್ಲಿ, ೩೪ ದಶಲಕ್ಷ ಹಳ್ಳಿಗಾಡಿನಲ್ಲಿ, ೨.೮ ದಶಲಕ್ಷ ಗುಡ್ಡಗಾಡಿನಲ್ಲಿ ಮತ್ತು ೯.೨ ದಶಲಕ್ಷ ನಗರ ಮತ್ತು ಪಟ್ಟಣಗಳಲ್ಲಿರುವರು.

ಸುಮಾರು ೩೩.೫ ದಶಲಕ್ಷ ಮಕ್ಕಳು ಪರಿಶಿಷ್ಟ ಜಾತಿಗೆ ಸೇರಿದವರು.

ಸುಮಾರು ೧೫.೯ ದಶಲಕ್ಷ ಮಕ್ಕಳು ಪರಿಶಿಷ್ಟ ವರ್ಗಕ್ಕೆ ಸೇರಿದವರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಬಹುಸಂಖ್ಯಾತ ಮಕ್ಕಳು ಅತಿ ಕನಿಷ್ಟ ಬೆಳವಣಿಗೆಯನ್ನೂ ಹೊಂದದಂಥ ಪರಿಸರದಲ್ಲಿ ಜೀವಿಸುತ್ತಿರುವರು— ಉದಾ: ಪಟ್ಟಣಗಳ ಕೊಳೆಚೆ ಪ್ರದೇಶ. ನಗರಗಳ ಗುಡಿಸಲುಗಳು. ಹಿಂದುಳಿದ ಹಳ್ಳಿಗಳು ಹಾಗೂ ವಾಹನಸೌಕರ್ಯವಿಲ್ಲದ ಗುಡ್ಡಗಾಡು ಪ್ರದೇಶಗಳು.

YOJANA (Vol. XXII/24 1 Jan. 1979)

—ಅನು : **ವಸಂತ ಪಾಟೀಲ**

ಉದ್ಯೋಗಸ್ಥ ತಾಯಂದಿರ ಮಕ್ಕಳ ಸಮಸ್ಯೆಗಳು

● ಸುಲೋಚನಾ ಬಿದರಕೊಪ್ಪ

ನಾವು ನಮ್ಮ ಮಕ್ಕಳನ್ನು ಕರುಳಿನ ಕುಡಿ, ಬಾಳ ಬೆಳಕು, ನಂದಾದೀಪ ಎಂದು ಅಂದುಕೊಂಡು ಸಂತೋಷಪಡುತ್ತೇವೆ. ಆದರೆ ಮಕ್ಕಳ ಚಿಕ್ಕ ವಯಸ್ಸು, ಪಾಲಕರ ಅಜ್ಞಾನ, ಅಸಹಾಯಕತೆ, ಆರ್ಥಿಕ ಹಾಗು ರಾಜಕೀಯ ಸಮಸ್ಯೆಗಳಿಂದ ಇಂದು ಜಗತ್ತಿನಾದ್ಯಂತ ಅನೇಕ ಕೋಟಿ ಮಕ್ಕಳು ಶೋಷಣೆಗೆ ಒಳಗಾಗಿದ್ದಾರೆ. ಇದನ್ನು ಮನಗಂಡ ತಜ್ಞರು ೧೯೫೯ ರಲ್ಲಿ ಮಕ್ಕಳ ಕಲ್ಯಾಣಕ್ಕಾಗಿ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡರು. ಜಗತ್ತಿನ ಎಲ್ಲ ದೇಶ, ಧರ್ಮ ಮತ್ತು ಜನಾಂಗಕ್ಕೆ ಸೇರಿದ ಮಕ್ಕಳಿಗೆ ಸೂಕ್ತ ಹಾಗು ಮೂಲ ಅವಶ್ಯಕಗಳಾದ ಅನ್ನ, ಅರಿವೆ, ಅಕ್ಷರ, ಆಶ್ರಯ. ಔಷಧೋಪಚಾರ. ಮನರಂಜನೆ ಮುಂತಾದವು ದೊರಕುವಂತೆ ಮಾಡಲಾಗಿದೆ. ವಿಶ್ವಸಂಸ್ಥೆಯ ಈ ಘನಕಾರ್ಯದಿಂದ ಇಂದು ಜಗತ್ತಿನಾದ್ಯಂತ ಸರಕಾರಗಳು, ಖಾಸಗಿ ಸಂಸ್ಥೆಗಳು ಹಾಗು ವ್ಯಕ್ತಿಗಳು ಮಕ್ಕಳ ಕಲ್ಯಾಣಕ್ಕಾಗಿ ವಿಶೇಷ ಗಮನ ನೀಡುವಂತಾಗಿದೆ.

ಜನಸಾಮಾನ್ಯರು, ಸಮಾಜ ಮತ್ತು ಸರಕಾರ ತಮ್ಮ ದೈನಂದಿನ ಕಾರ್ಯಗಳಲ್ಲಿ ಮಕ್ಕಳ ಕಲ್ಯಾಣಕ್ಕೆ ಹೆಚ್ಚಿನ ಗಮನವೀಯಲು ಅಸಮರ್ಥವಾದುದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಂಡವು. ಇಂತಹ ಸಮಸ್ಯೆಗಳಿಂದ ಮಕ್ಕಳನ್ನು ಕಾಪಾಡಲು ವಿಶ್ವಸಂಸ್ಥೆಯು ೧೯೭೯ ನೆಯ ವರ್ಷವನ್ನು ಅಂತರರಾಷ್ಟ್ರೀಯ ಮಕ್ಕಳ ವರ್ಷವೆಂದು ಸಾರಿ ಇಡೀ ಒಂದು ವರ್ಷ ಮಕ್ಕಳ ಸಮಸ್ಯೆ, ಅವರಿಗೆ ಒದಗುವ ಅಡೆತಡೆ, ಅನಾನುಕೂಲತೆಗಳನ್ನು ಅಭ್ಯಸಿಸಿ, ಸೂಕ್ತ ಕಾನೂನು, ಪ್ರಚಾರ, ತಿಳುವಳಿಕೆ ಮುಂತಾದವುಗಳನ್ನು ನೀಡುವಂತಾಗಿದೆ. ಈ ದಿಶೆಯಲ್ಲಿ ಕೇಂದ್ರ ಹಾಗು ರಾಜ್ಯ ಸರಕಾರಗಳು ಅನೇಕ ಸೌಲಭ್ಯಗಳನ್ನು ಒದಗಿಸಿವೆ. ಅನೇಕ ಕಲ್ಯಾಣ ಸಂಸ್ಥೆಗಳೂ ರೂಪುಗೊಂಡಿವೆ. ಆದ್ದರಿಂದ ಮಕ್ಕಳ ಬಗೆಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಅನೇಕ ಸಂಶೋಧನಾ ಸಂಸ್ಥೆಗಳು. ಕಲ್ಯಾಣ ಸಂಸ್ಥೆಗಳು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಭ್ಯಾಸಗಳನ್ನು ಪ್ರಾರಂಭಿಸಿವೆ.

ಈ ಲೇಖನಕ್ಕೆ ಮುಖ್ಯವಾಗಿ "ಉದ್ಯೋಗಸ್ಥ ಮಹಿಳೆಯರು" ಎಂಬ ನನ್ನ ಸಂಶೋಧನಾ ಅಭ್ಯಾಸದಿಂದ ವಿಷಯವನ್ನು ಆಯ್ದುಕೊಳ್ಳಲಾಗಿದೆ. ಇಲ್ಲಿ ಉದ್ಯೋಗಸ್ಥ ತಾಯಂದಿರ ಮಕ್ಕಳ ಸಮಸ್ಯೆಗಳನ್ನು ಗಮನಿಸಲಾಗಿದೆ.

ಮಗುವಿನ ಆರೈಕೆ, ಸರ್ವತೋಮುಖ ಅಭಿವೃದ್ಧಿ, ಅಭ್ಯುದಯ. ಮುಂತಾದವು ಗಳನ್ನು ನೋಡಿಕೊಳ್ಳಲು ಕುಟುಂಬ. ಸಂಬಂಧಿಕರು. ಸಮಾಜ, ಖಾಸಗಿ ಸಂಸ್ಥೆಗಳು ಸರಕಾರ ಇವೆಯಾದರೂ ತಾಯಿ ಮಾತ್ರ ಇವೆಲ್ಲವುಗಳಿಗಿಂತ ಪ್ರಮುಖ ಹಾಗೂ ಕೇಂದ್ರ ವ್ಯಕ್ತಿಯಾಗಿದ್ದಾಳೆ. ತಾತ್ತ್ವಿಕವಾಗಿ ಮಕ್ಕಳ ಪಾಲನೆ-ಪೋಷಣೆ ತಾಯಿಯ ಹೊಣೆ ಯಾಗಿದೆ. ಆದರೆ ಇಂದಿನ ಸಾಮಾಜಿಕ ಬದಲಾವಣೆ, ಒತ್ತಡ. ಅನುಕರಣೆಯಿಂದ ತಾಯಿ ತನ್ನ ಮಗುವನ್ನು ಮನೆಯಲ್ಲಿ ಬಿಟ್ಟು ಹೊರಗೆ ಹಣಕ್ಕಾಗಿ ದುಡಿಯಲು ಹೊರ ಡುತ್ತಿರುವಳು. ಇದರಿಂದ ಮಗುವಿನ ದೈಹಿಕ, ಮಾನಸಿಕ ಹಾಗು ಸಾಮಾಜಿಕ ಬೆಳವಣಿಗೆಯಲ್ಲಿ ಅನೇಕ ತೊಂದರೆಗಳು ಒದಗಿವೆ. ಅಲ್ಲದೆ ತಾಯಿಯು ದಿನದ ಬಹಳ ವೇಳೆ ಮಗುವನ್ನಗಲಿ ಮನೆಯ ಹೊರಗೆ ಇರುವುದರಿಂದ ಕುಟುಂಬ ಜೀವನದಲ್ಲಿ ಅನೇಕ ತೊಂದರೆಗಳು, ಅಡೆತಡೆಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಮುಖ್ಯವಾಗಿ ಕುಟುಂಬದಲ್ಲಿ ಪತಿ-ಪತ್ನಿಯರ ಸಂಬಂಧ, ಹೊಸದಾಗಿ ಹುಟ್ಟಿಕೊಂಡಿರುವ ಪ್ರಸಂಗಕ್ಕೆ ಹೊಂದಾಣಿಕೆ, ಮರುಹೊಂದಾಣಿಕೆ, ಹಾಗು ಗೃಹಕೃತ್ಯದಲ್ಲಿ ಅನೇಕ ಹೊಸ ಬದಲಾವಣೆ ಗಳು ಬಂದಿವೆ.

ಉದ್ಯೋಗದಲ್ಲಿದ್ದ ತಾಯಂದಿರು ಈ ಹೊಸ ಹಾಗು ಹಳೆಯ ಕಾರ್ಯಗಳೆರ ಡನ್ನೂ ಅಷ್ಟೇ ಸಾಮರ್ಥ್ಯದಿಂದ ನಿರ್ವಹಿಸುವಲ್ಲಿ ಹೆಚ್ಚಿನ ಶ್ರಮವಹಿಸಬೇಕಾಗುವುದು. ತಾಯಿಯಿಂದ ಬಹಳ ವೇಳೆ ಅಗಲಿದ ಚಿಕ್ಕಮಕ್ಕಳು ಆಳುಗಳು ಇಲ್ಲವೆ ಸಂಬಂಧಿಕರ ನಿಷ್ಕಾಳಜಿಯಿಂದ ಅಲಕ್ಷಿಸಲ್ಪಡುವರು. ಹೀಗೆ ಬೆಳೆದ ಮಕ್ಕಳು ಮುಂದೆ ತಾಯಿ-ತಂದೆ ಯರ ನಿಯಂತ್ರಣ ತಪ್ಪಿ ಬಾಲಾಪರಾಧಿಗಳಾಗಿ ಬೆಳೆಯುವ ಅವಕಾಶ ಹೆಚ್ಚು. ಗೃಹ ಕೃತ್ಯವು ಮನೆಯ ಗೃಹಿಣಿಯನ್ನಲ್ಲದೆ ಇನ್ನಾರಿಂದಲೂ ಸರಿಯಾಗಿ ನಿರ್ವಹಿಸಲಾರದೇ ಗಂಡಂದಿರ ಅತೃಪ್ತಿಗೆ ಕಾರಣಗಳಸಿವೆ. ಅಲ್ಲದೆ ಕೌಟುಂಬಿಕ ಹಾಗು ಮಕ್ಕಳ ಅನೇಕ ಸಮಸ್ಯೆಗಳಿಗೆ ತಾಯಿ ಉದ್ಯೋಗದಲ್ಲಿರುವುದು ಕಾರಣವಲ್ಲದಿದ್ದರೂ ಸಮಾಜದ ತಪ್ಪು ತಿಳಿವಳಿಕೆಯಿಂದ ಅವಳನ್ನು ದೂರಿದರೆ ಆಕೆಗೆ ಮಾನಸಿಕ ವೇದನೆಯಾಗುವುದು. ಗೃಹ ಕೃತ್ಯ ಹಾಗು ಮಕ್ಕಳ ಆರೈಕೆ ಇವು ಪ್ರತಿಯೊಬ್ಬ ಗೃಹಿಣಿಯ ಅಂತರ್ಗತ ಹಾಗು ಆತ್ಮ ಗತ (internalised) ಕರ್ತವ್ಯಗಳಾಗಿವೆ. ಇವುಗಳನ್ನು ಅಲಕ್ಷಿಸಿದಲ್ಲಿ ಸ್ವತಃ ತಾಯಿಗೆ 'ಮಕ್ಕಳನ್ನು ಅಲಕ್ಷಿಸುತ್ತಿದ್ದೇನೆ' ಎಂಬ ಅಪರಾಧ ಭಾವನೆ (guilty feelings) ಉಂಟಾಗುವುದು. ಇವೆಲ್ಲವುಗಳ ಪ್ರತ್ಯೇಕ ಹಾಗು ಸಾಮೂಹಿಕ ಕಾರಣಗಳ ಪರಿಣಾಮ ದಿಂದ ಉದ್ಯೋಗಸ್ಥ ತಾಯಿಯ, ಮಕ್ಕಳ ಹಾಗು ಕುಟುಂಬದ ಜನರ ಮೇಲೆ ಅನೇಕ ತೊಂದರೆಗಳುಂಟಾಗುವವು. ಮತ್ತು ತಾಯಿಯು ಉದ್ಯೋಗದಿಂದ ಆರ್ಥಿಕ ಸೌಲಭ್ಯ

ಗಳು ಲಭಿಸಿ ಅನೇಕ ಸೌಕರ್ಯಗಳು ದೊರೆತಿವೆ. ಈ ಸಮಸ್ಯೆಗಳಿಗೆ ಯಾರು, ಎಷ್ಟರ ಮಟ್ಟಿಗೆ, ಹೇಗೆ ಕಾರಣರು, ಉದ್ಯೋಗಸ್ಥ ತಾಯಿಯ ಮಾನಸಿಕ ಗೊಂದಲ, ದೈಹಿಕ ಶ್ರಮ ಹಾಗು ಕಿರುಕಳ ತೊಂದರೆಗಳನ್ನು ಕಡಿಮೆ ಮಾಡಿ, ಅವಳಿಗೂ ಅವಳ ಕುಟುಂಬಕ್ಕೂ ಹೇಗೆ ಅನುಕೂಲ ಮಾಡಿಕೊಡಬೇಕು ಎಂಬುದನ್ನು ತಿಳಿಯುವುದವಶ್ಯ. ಹೀಗೆ ಅನೇಕ ವಿಧದಲ್ಲಿ ಕ್ಲಿಷ್ಟಮಯವಾಗಿರುವ ಈ ಸಮಸ್ಯೆಯನ್ನು ಸಂಶೋಧನಾ ಹಿನ್ನೆಲೆಯಲ್ಲಿ ವಿವರಿಸುವುದು ಅವಶ್ಯವಾಗಿದೆ.

ಇಂದಿನ ಸಮಾಜದಲ್ಲಿ ಉದ್ಯೋಗಸ್ಥ ತಾಯಂದಿರು ಅಲ್ಪಸಂಖ್ಯೆಯಲ್ಲಿದ್ದರೂ ಗುಣಮಟ್ಟದಲ್ಲಿ ಅವರು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ಸೂಕ್ತ ಹಾಗು ಸಾಮಾಜಿಕ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಯಿಸುವುದರಲ್ಲಿ ಉದ್ಯೋಗಸ್ಥ ತಾಯಂದಿರು ಸಲ್ಲಿಸುತ್ತಿರುವ ಸೇವೆ ಗಮನಾರ್ಹವಾದುದು. ಆದುದರಿಂದ ಉದ್ಯೋಗಸ್ಥ ತಾಯಂದಿರ ಮಾರ್ಗದಲ್ಲಿ ಒದಗುವ ತೊಂದರೆಗಳು ಹಾಗು ಅವುಗಳಿಂದ ಮಕ್ಕಳ ಮೇಲಾಗುವ ಅನುಚಿತ ಪರಿಣಾಮಗಳು ಎಂತಹವು ಎಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯ.

ಇಂದು ತ್ವರಿತಗತಿಯಿಂದ ಬದಲಾಗುತ್ತಿರುವ ಸಮಾಜದಲ್ಲಿ ಕುಟುಂಬ ಜೀವನಕ್ಕೆ ಸಂಬಂಧಿಸಿದ ಅನೇಕ ಮೌಲ್ಯಗಳು ಬದಲಾಗಿವೆ. ಇದರಿಂದ ಕುಟುಂಬ ರಚನೆ, ಸದಸ್ಯರ ನಡುವಣ ಸಂಬಂಧ, ಕಾರ್ಯ ನಿರ್ವಹಿಸುವುದರಲ್ಲಿ ಬೇರೆ ವ್ಯಕ್ತಿ ಹಾಗು ಸಂಸ್ಥೆಗಳ ಮಧ್ಯಸ್ಥಿಕೆಯಿಂದ ಮೂಲ ಕಾರ್ಯದ ನಿರ್ವಹಿಸುವಿಕೆ, ತಂದೆ–ತಾಯಿಯರ ಹಾಗು ಅನೇಕ ಸಂಘ–ಸಂಸ್ಥೆಗಳ ಆಧುನಿಕತೆಯ ಪ್ರಭಾವ ಮುಂತಾದವು ಹುಟ್ಟಿಕೊಂಡಿವೆ. ಮಕ್ಕಳಿಗೆ ನೇರವಾದ ನಿಯಂತ್ರಣ ಮಾರ್ಗದರ್ಶನ ತಪ್ಪಿ ಮಕ್ಕಳ ಬೆಳವಣಿಗೆಯಲ್ಲಿ ಅನೇಕ ಸುಧಾರಣೆಗಳ ಜೊತೆಗೆ ಅನೇಕ ಸಮಸ್ಯೆಗಳೂ ಹುಟ್ಟಿಕೊಂಡಿವೆ.

ಉತ್ತಮ ಗುಣಮಟ್ಟದ ಶಿಕ್ಷಣ, ಔದ್ಯೋಗಿಕ ಅವಕಾಶ, ಅವಶ್ಯಕತೆ ಮುಂತಾದವುಗಳಿಂದ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ದುಡಿಯುವಂತಾಗಿದ್ದಾರೆ. ಅನೇಕ ಮಹಿಳೆಯರು ತಮ್ಮ ಉಪಜೀವನಕ್ಕಾಗಿ ಹಾಗೂ ತಮ್ಮ ಅಶಾಭಿಲಾಷೆಗಳನ್ನು ಪೂರೈಸಿಕೊಳುವುದಕ್ಕಾಗಿ ಮನೆಯಿಂದ ದೂರದ ಸ್ಥಳಗಳಲ್ಲಿ ದಿನದ ಹೆಚ್ಚು ವೇಳೆ ಆರೆಂಟು ತಾಸುಗಳವರೆಗೆ ಮನೆಬಿಟ್ಟು, ಕೈತುಂಬ ಹಣಸಂಪಾದನೆಗೆ ಹೊರಗಿರಬೇಕಾಗುತ್ತದೆ. ಇಂತಹ ಪರಿಸ್ಥಿತಿಯಿಂದ ತಾಯಿಯಾದವಳು ತನ್ನ ಮನೆ ಮಕ್ಕಳು ಮುಂತಾದ ಕ್ಷೇತ್ರಗಳಿಗೆ ಹೆಚ್ಚಿನ ವೇಳೆಯ ಗಮನವೀಯಲು ಅಸಾಧ್ಯವಾಗಿದೆ. ಇದರಿಂದ ಕುಟುಂಬದಲ್ಲಿ ತಾಯಿಯ ಅವಶ್ಯಕ ಹಾಗೂ ಅಗತ್ಯವಾದ ಸೇವೆಯಿಲ್ಲದಾಗಿ, ಇಲ್ಲವೆ ಕಡಿಮೆಯಾಗಿ, ಇಲ್ಲವೆ ಇನ್ನಾವುದೋ ವ್ಯಕ್ತಿಯ ಅಲಕ್ಷ್ಯತನದ ಕೆಲಸವಹಿಸುವಿಕೆಯಿಂದ ಮುಖ್ಯವಾಗಿ ಮಕ್ಕಳ ದೈಹಿಕ ಹಾಗು ಮಾನಸಿಕ ಬೆಳವಣಿಗೆಯ ರಂಗದಲ್ಲಿ ವ್ಯತ್ಯಯ ವುಂಟಾಗಿದೆ. ಇಷ್ಟೆಲ್ಲ ಅನಾನುಕೂಲತೆಗಳಿದ್ದರೂ ಅವಶ್ಯಕತೆ ಹಾಗು ಆಸಕ್ತಿಯುಳ್ಳ

ತಾಯಂದಿರು ನೌಕರಿ ಹಾಗು ತಾಯ್ತನ ಇವೆರಡು ಕಾರ್ಯಗಳನ್ನೂ ದಕ್ಷತೆಯಿಂದ ನೆರವೇರಿಸಲು ಪ್ರಯತ್ನಿಸುತ್ತಲಿದ್ದು ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿ ಅನೇಕ ದೈಹಿಕ ಹಾಗು ಮಾನಸಿಕ ತೊಂದರೆಗೆ ಒಳಗಾಗಿದ್ದಾರೆ. ಇವುಗಳಲ್ಲಿ ತಾವು ಚಿಕ್ಕಮಕ್ಕಳನ್ನು, ಅವುಗಳ ಬೆಳವಣಿಗೆಯನ್ನು ಹಾಗು ಶಾಲೆಗೆ ಹೋಗುವ ಮಕ್ಕಳ ಅಭ್ಯಾಸವನ್ನು ಅಲಕ್ಷಿಸುತ್ತಿದ್ದೇವೆಯೆಂಬ ಅಪರಾಧ ಭಾವನೆಯು ತಲೆದೋರುವುದು. ಚಿಕ್ಕಮಕ್ಕಳನ್ನು ಅಲಕ್ಷಿಸಿ, ಕೆಲಸಕ್ಕೆ ಹೋಗುವ ತಾಯಿಂದಿರನ್ನು ಸಹಿಸದ ನೆರೆಹೊರೆಯವರು, ಸಂಬಂಧಿಕರು ಹಾಗು ಅನ್ಯರಿಂದ ಬರುವ ಟೀಕೆ ನಿಂದನೆಗಳ ಪ್ರತಿಕ್ರಿಯೆಯಿಂದಾಗಿ ಉದ್ಯೋಗಸ್ಥ ಮಹಿಳೆ ತೊಂದರೆಗೆ ಈಡಾಗಿದ್ದಾಳೆ. ಇಂತಹ ಪರಿಸ್ಥಿಯಲ್ಲಿ ತಾಯಿ ತನ್ನ ಮಕ್ಕಳ ಬೆಳವಣಿಗೆಯಲ್ಲಿ ತೋರುವ ಜಾಣತನ ಇತರರಿಂದ ಅವಶ್ಯಕವಿರುವ ಸಹಾಯ. ಸೇವೆ ಹಾಗೂ ಸಹಾನುಭೂತಿಗಳನ್ನು ಅವಲೋಕಿರುವುದು ಅವಶ್ಯಕವಾಗಿದೆ. ತಾಯಿ ತನ್ನ ಕಾರ್ಯದಲ್ಲಿ ಇದ್ದುಕೊಂಡು ಮಕ್ಕಳ ಬೆಳವಣಿಗೆಗೆ ಅನುಕೂಲಕರವಾದ ಪರಿಸ್ಥಿತಿಯನ್ನು ನಿರ್ಮಿಸುವಂತಾಗಬೇಕು.

ಈಗಾಗಲೇ ಈ ದಿಶೆಯಲ್ಲಿ ಅನೇಕ ಅಭ್ಯಾಸಗಳನ್ನು ಕೈಕೊಳ್ಳಲಾಗಿದೆ ಇವುಗಳಲ್ಲಿ:

೧. ದೆಹಲಿಯ ವಿಶ್ವಯುವಕ ಕೇಂದ್ರದವರ "ಹೊಸ ಕುಟುಂಬ ಪೋಷಕರು" (The New Bread Winners)

೨) ಮದರಾಸಿನ ಸಮಾಜ ಕಾರ್ಯ ಸಂಸ್ಥೆಯ "ಬಿಳಿಯ ಕಾಲರ ವೃತ್ತಿಯಲ್ಲಿ ಉದ್ಯೋಗಸ್ಥ ತಾಯಂದಿರು" (Working Mothers in White collor Occupations)

೩) ಮುಂಬಯಿಯ ಎಸ್. ಎನ್. ಡಿ. ಟಿ. ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದವರು ವಿಜ್ಞಾನ ವಿಭಾಗದಲ್ಲಿ "ವಿಜ್ಞಾನಕ್ಕೆ ಸಂಬಂಧಿಸಿದ ಉದ್ಯೋಗಗಳಲ್ಲಿ ಸ್ತ್ರೀಯರು" ಎಂಬ ವಿಷಯದಲ್ಲಿ ಸಂಶೋಧನೆ ಕೈಕೊಂಡಿದ್ದಾರೆ.

೪) ಪ್ರಮೀಳಾ ಕಪೂರ ಇವರು "ಮಹಿಳೆ ಹಾಗು ಉದ್ಯೋಗ" ಈ ದಿಶೆಯಲ್ಲಿ ಆಳವಾದ ಅಭ್ಯಾಸ ಮಾಡಿದ್ದಾರೆ. ಇವರು ಬರೆದ ಪುಸ್ತಕಗಳಲ್ಲಿ :

i) "ಭಾರತದಲ್ಲಿ ಉದ್ಯೋಗಸ್ಥ ಮಹಿಳೆ ಹಾಗು ವಿವಾಹ"

ii) "ಭಾರತದಲ್ಲಿ ಉದ್ಯೋಗಸ್ಥ ಮಹಿಳೆಯರ ಬದಲಾಗುತ್ತಿರುವ ಸ್ಥಾನಮಾನಗಳು".

ಈ ಮೇಲಿನ ಅಭ್ಯಾಸಗಳಿಂದ ಉದ್ಯೋಗಸ್ಥ ತಾಯಂದಿರ ಮಕ್ಕಳ ಅನೇಕ ಸಮಸ್ಯೆಗಳು ತಿಳಿದುಬಂದಿವೆ.

ಸಾಮಾನ್ಯವಾಗಿ ಹದಿನಾರು ವರ್ಷದೊಳಗಿನ ವಯಸ್ಸಿನವರನ್ನು ಮಕ್ಕಳೆಂದು ಪರಿಗಣಿಸಲಾಗಿದೆ. ಅವರವರ ವಯೋಧರ್ಮಗಳಿಗನುಸಾರವಾಗಿ ಮಕ್ಕಳ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ ಉಪಾಯಗಳು ಭಿನ್ನವಾಗಿರುತ್ತವೆ.

ತಾಯಿಯ ಪಾತ್ರದಲ್ಲಿ ಮಹತ್ತರ ಬದಲಾವಣೆ:

ತಾಯಿ ಉದ್ಯೋಗಕ್ಕೆ ಹೋಗದೆ ಮನೆಯಲ್ಲೇ ಇದ್ದುಕೊಂಡು ಕುಟುಂಬದ ಜವಾಬ್ದಾರಿ ಹಾಗು ಮಕ್ಕಳ ಯೋಗಕ್ಷೇಮ ನೋಡಿಕೊಂಡು ಹೋಗುವುದು ಅವಳ ಸಾಂಪ್ರದಾಯಿಕವಾಗಿ ಬಂದ ಮುಖ್ಯ ಕರ್ತವ್ಯವಾಗಿದೆ. ಆದರೆ ಆಕೆಯ ಹೊಸ ಪಾತ್ರ ನಿರ್ವಹಣೆಯಿಂದ ಮೊದಲಿನ ಕಾರ್ಯಗಳಾದ ಅಡುಗೆ ಮಾಡುವ, ಬಟ್ಟೆ ಪಾತ್ರೆಗಳನ್ನು ಸ್ವಚ್ಛವಾಗಿರಿಸುವ, ಮಕ್ಕಳನ್ನು ಪೋಷಿಸುವ, ಮಕ್ಕಳಿಗೆ ಪಾಠ ಹೇಳಿಕೊಡುವ, ಅತಿಥಿಗಳನ್ನು ಆದರಿಸುವ, ವೃದ್ಧರನ್ನು ಸಂರಕ್ಷಿಸುವ ಮುಂತಾದ ಅನೇಕ ಮನೆಯ ಅವಶ್ಯಕವಾಗಿರುವ ಕೆಲಸಗಳನ್ನು ಮಾಡುವುದರಲ್ಲಿ ಕಡಿಮೆ. ಇಲ್ಲವೆ ಸಂಪೂರ್ಣವಾಗಿ ಬಿಟ್ಟುಕೊಡುವ ಪ್ರಸಂಗಗಳಿವೆ. ಇದರಿಂದ ಕುಟುಂಬದ ಸದಸ್ಯರ ನಡುವೆ ಹೊಸ ಹೊಂದಾಣಿಕೆ ಸಂಪರ್ಕಗಳುಂಟಾಗಿ ಮಕ್ಕಳೊಡನೆ ಇದ್ದ ದಿನ ನಿತ್ಯದ ವ್ಯವಹಾರದಲ್ಲಿ ವ್ಯತ್ಯಯ ಉಂಟಾಗಿದೆ. ಸ್ವತಃ ತಾಯಿಗೆ ನೌಕರಿಯು ಪೂರ್ಣಕಾಲದ ವೃತ್ತಿಯಾಗಿರುವುದರಿಂದ ಮನೆಯನ್ನು ಅಲಕ್ಷಿಸಲಾಗದೇ ತೊಳಲಾಡುವಂತಾಗಿದೆ. ಅನೇಕಸಲ ಮಕ್ಕಳನ್ನು ಅಲಕ್ಷಿಸುತ್ತಿದ್ದೇನೆಂಬ ಭಾವನೆ ಸಹಜವಾಗಿ ತೋರುವುದು. ಇಂತಹ ಕಾರ್ಯಭಾರದಿಂದ ಆಕೆಗೆ ದೈಹಿಕ ಹಾಗೂ ಮಾನಸಿಕ ಆಯಾಸವುಂಟಾಗಿ ಆಕೆ ಮನೆ ಹಾಗು ಮಕ್ಕಳನ್ನು ಅಲಕ್ಷಿಸಬಹುದಾಗಿದೆ.

ಸಾಮಾಜಿಕ ಒತ್ತಡ:

ಚಿಕ್ಕ ಮಕ್ಕಳಿರುವ ತಾಯಂದಿರು ಮನೆ ಮಕ್ಕಳನ್ನು ಬಿಟ್ಟು ಉದ್ಯೋಗದಲ್ಲಿ ಇರುವುದನ್ನು ಸಮಾಜವು ಸಹಿಸದು. ಮುಖ್ಯವಾಗಿ ಇವುಗಳಲ್ಲಿ ನೆರೆಹೊರೆಯವರ ಟೀಕೆ, ಸಂಬಂಧಿಕರ ಅಪ್ರಾಸಂಗಿಕ ನಿಂದೆ, ಸಹಾಯಕ್ಕೆ ಬಾರದ ನೆಂಟರು, ಹಾಗೂ ಕುಟುಂಬದ ಎಲ್ಲ ಸಮಸ್ಯೆಗಳು ಒದಗುವುದು ತಾಯಿ ಮನೆ ಬಿಟ್ಟು ಕೆಲಸಕ್ಕೆ ಹೊರ ಹೋಗುತ್ತಿರುವುದರಿಂದ ಉಂಟಾಗುತ್ತವೆಯೆಂಬ ತಿಳಿಯುವಿಕೆಗೆ ಇವೆಲ್ಲವು ಮುಖ್ಯ ಕಾರಣಗಳು. ಅನೇಕ ಉದ್ಯೋಗಸ್ಥ ತಾಯಂದಿರ ಕುಟುಂಬದಲ್ಲಿ ಅವರ ಗಂಡಂದಿರಿಗೂ (ಮಧ್ಯಮ ಹಾಗು ಉಚ್ಚ ವರ್ಗದ) ಕುಟುಂಬದಲ್ಲಿ ಹೆಂಡತಿಯು ಕೆಲಸದಲ್ಲಿರುವುದರಿಂದ ಅನೇಕ ತೊಂದರೆಗಳು. ಹೆಚ್ಚಾಗಿ ಚಿಕ್ಕಮಕ್ಕಳಿರುವ ಕುಟುಂಬದಲ್ಲಿ ಅತೃಪ್ತಿ, ಅಸಮಾಧಾನಗಳುಂಟಾಗುವುವು. ಸಾಯಂಕಾಲದವರೆಗೆ ಗಂಡ ಹೆಂಡತಿ ಇಬ್ಬರೂ ದೈಹಿಕವಾಗಿ ಹಾಗು ಮಾನಸಿಕವಾಗಿ ಸಂಪೂರ್ಣ ದಣಿದಿರುವುದರಿಂದ, ಇಬ್ಬರಿಗೂ ಮಕ್ಕಳ ಬೆಳವಣಿಗೆ, ಮಾರ್ಗದರ್ಶನ, ಅಭ್ಯಾಸಗಳ ಕಡೆಗೆ ಲಕ್ಷ್ಯ ಕೊಡಲು ಆಗದು. ಇಂಥ ಪ್ರಸಂಗಗಳಲ್ಲಿ

ಎಷ್ಟೋ ಜನ ಮಹಿಳೆಯರು ತಮ್ಮ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿದ ಉದಾಹರಣೆಗಳು ಸಾಕಷ್ಟಿವೆ. ಐದು ವರ್ಷ ಅಥವಾ ಅದಕ್ಕೂ ಕಡಮೆ ವಯಸ್ಸಿನ ಮಕ್ಕಳ ಸಂಖ್ಯೆ ಹೆಚ್ಚು ಇದ್ದಾಗ, ಮನೆಯಲ್ಲಿ ಯಾರೂ ನೋಡಿಕೊಳ್ಳಲು ಇಲ್ಲದ ಪ್ರಸಂಗಗಳಲ್ಲಿ ತಾಯಿ ಮಕ್ಕಳ ಪೋಷಕಳಾಗಿ ಮನೆಯಲ್ಲಿಯೇ ಇರಬೇಕಾಗುತ್ತದೆ. ಗಂಡಂದಿರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಅನೇಕ ತಾಯಂದಿರು ಕೆಲಸವನ್ನು ಬಿಟ್ಟೇಬಿಡುವ ಪ್ರಸಂಗಗಳು, ತಾತ್ಪೂರ್ತಿಕ ಕೆಲಸ, ಅರ್ಧಕಾಲಿಕ ಕೆಲಸ ಅಥವಾ ಪಾಳಿಯ ಕೆಲಸವನ್ನು ರೂಢಿಸಿಕೊಂಡ ಉದಾಹರಣೆಗಳಿವೆ.

ಬುದ್ಧಿವಂತ ತಾಯಂದಿರ ಕಾರ್ಯಮಗ್ನತೆ :

ಚುರುಕು ಹಾಗೂ ಬುದ್ಧಿವಂತ ತಾಯಂದಿರು ತಮಗೆ ಅನುಕೂಲಕರವಾದ ಪ್ರಸಂಗಗಳಲ್ಲಿ ತಮ್ಮ ಅಭಿರುಚಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಿಸುವರು. ಅನೇಕಸಲ ತಮ್ಮ ಕೆಲಸದಲ್ಲಿಯೇ ಮಗ್ನರಾದ ಹಾಗೂ ಮನಗೊಟ್ಟು ಕೆಲಸ ಮಾಡುವುದರಿಂದ ರಾತ್ರಿಯಾದರೂ ಮನೆಗೆಬಾರದ ಪ್ರಸಂಗಗಳು ಕಚೇರಿಯಲ್ಲಿ ಹೆಚ್ಚಿನ ಕೆಲಸ, ವಾಹನಗಳು ಅಕಸ್ಮಾತ್ ಕೆಟ್ಟು ನಿಲ್ಲವುದು, ವಾಹನಗಳ ಅಪಘಾತ ಇತ್ಯಾದಿ ಕಾರಣ ಗೊತ್ತುಪಡಿಸಿದ ವೇಳೆಗೆ ಮನೆಗೆಬಾರದ ತಾಯಂದಿರಿಂದ, ಮನೆಯಲ್ಲಿ ಯಾರೂ ನೋಡಿಕೊಳ್ಳಲು ಇಲ್ಲದ ಪ್ರಸಂಗಗಳಲ್ಲಿ ಚಿಕ್ಕ ಮಕ್ಕಳ ಪರಿಸ್ಥಿತಿ ಚಿಂತಾಜನಕವಾಗುವುದು. ಶಾಲೆಗೆ ಹೋಗುವ ದೊಡ್ಡ ಮಕ್ಕಳೂ ಕೂಡ ಶಾಲೆಗೆ ಹೋಗುವಾಗ ಹಾಗು ಸಾಯಂಕಾಲದಲ್ಲಿ ಮನೆಗೆ ಹಿಂತಿರುಗಿ ಬಂದಾಗ, ಬಹುಪಾಲು ತಾಯಿಯು ಮನೆಯಲ್ಲಿ ಇರದಾದಾಗ, ಅನೇಕ ಅವ್ಯವಸ್ಥೆಗೆ ಹಾಗೂ ಮಕ್ಕಳಿಗೆ ನಿರುತ್ಸಾಹ ತರುವಂತಹದಾಗಿದೆ. ತಾಯಿಯು ನಿಯಂತ್ರಣ ಕಳೆದುಕೊಳ್ಳುವರಲ್ಲದೆ ಸಹಜಪ್ರೇಮ, ವಿಶ್ವಾಸ, ಭದ್ರತೆಗಳನ್ನು ಮಕ್ಕಳು ಕಳೆದುಕೊಳ್ಳುತ್ತಾರೆ. ಮಕ್ಕಳು ಶಾಲೆಗೆ ಹೋಗುವ ವಯಸ್ಸಿನಲ್ಲಿ ತಾಯಿಯ ಮೇಲ್ವಿಚಾರಣೆ, ಮನೆಪಾಠ, ಅಭ್ಯಾಸದಲ್ಲಿ ಸಹಾಯ ಮಾಡದಿದ್ದರೆ, ಶಾಲೆಯಲ್ಲಿ ಮಕ್ಕಳು ತಮ್ಮ ವರ್ಗದಲ್ಲಿ ಹಿಂದುಳಿದು ಶಿಕ್ಷೆಗೆ ಗುರಿಯಾಗುವ ಮಕ್ಕಳಾಗಿ, ಶಾಲಾ ಜೀವನದ ಸಂತೋಷವನ್ನು ಕಳೆದುಕೊಂಡು; ಶಾಲೆ ತಪ್ಪಿಸುವ ಮಕ್ಕಳಾಗಿ, ಮುಂದೆ ಬಾಲಾಪರಾಧಿ ಗುಂಪುಗಳತ್ತ ಸೇರುವ ಸಾಧ್ಯತೆಯಿದೆ. ಶಾಲಾ ಜೀವನದಲ್ಲಿ ಈ ತರಹದ ಅಭದ್ರತೆಯಿಂದ ಬೆಳೆದ ಮಗುವಿಗೆ ಭವಿಷ್ಯದಲ್ಲಿ ಯಾವ ನಿಯೋಜಿತ ಭದ್ರತೆಯಿಂದಲೂ ತುಂಬಲಾರದ ಹಾನಿ ಸಂಭವಿಸಬಹುದಾಗಿದೆ. ಈ ಸಂದರ್ಭದಲ್ಲಿ ಅಮೇರಿಕನ್ ವಿಲ್ (American Will) ಎಂಬ ಸಮಾಜ ಶಾಸ್ತ್ರಜ್ಞನ ವಾಕ್ಯವನ್ನು ನೆನೆಯಬಹುದು:

"ಉದ್ಯೋಗಸ್ಥ ತಾಯಂದಿರು, ಮಕ್ಕಳು ನಿಯಂತ್ರಣ ಹಾಗೂ ಸಕಾಲಿಕ ಮೇಲ್ವಿಚಾರಣೆ ಇಲ್ಲದೆ ಮುಂದೆ ಬಾಲಾಪರಾಧಿಗಳಾಗಿ ಬೆಳೆಯುವ ಸಂಭವ ಇದೆ.

ಆದರೆ ಉದ್ಯೋಗದಲ್ಲಿ ಇರದ ತಾಯಿಯ ಮಕ್ಕಳು ಬಾಲಾಪರಾಧಿಗಳಾಗಿ ಬೆಳೆಯುವ ಸಂಭವ ಇದೆ; ಆದರೂ ಅದು ಕಡಿಮೆ ಪ್ರಮಾಣದಲ್ಲಿ"ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ತಾಯಿಯ ಕೆಲಸದ ಅತಿಶಯೋಕ್ತಿ :

ತಾಯಿಯು ಉದ್ಯೋಗದಲ್ಲಿರುವುದನ್ನೇ ಒಂದು ಅತಿಶಯೋಕ್ತಿಯಾಗಿ ಕಾಣುವ ಕುಟುಂಬದ ಜನರು, ನೆರೆಹೊರೆ ಹಾಗು ಸಂಬಂಧಿಕರು ತೋರಿಸುವ ಪ್ರತಿಕ್ರಿಯೆಯಿಂದ ಅನೇಕಸಲ ತಾಯಿಗೆ ಒಂದುಬಗೆಯ ಸಾಮಾಜಿಕ ಒತ್ತಡವಾಗಬಹುದು. ಕುಟುಂಬದಲ್ಲಿ ತಾಯಿಯ ನಿರ್ಗಮನದಿಂದ ಮಕ್ಕಳ ಎಲ್ಲಬಗೆಯ ಸಮಸ್ಯೆಗಳಿಗೆ ತಾಯಿಯೇ ಕಾರಣ ವೆಂದು ತಿಳಿಯುವುದು ತಪ್ಪು. ಮೇಲ್ನೋಟಕ್ಕೆ ತಾಯಿಯ ಕೆಲಸದಿಂದ ಕುಟುಂಬದಲ್ಲಿ ಸಮಸ್ಯೆಗಳು ಹುಟ್ಟಿಕೊಂಡಂತೆ ಕಾಣುತ್ತವೆ. ಆದರೆ ಅನೇಕ ಸಮಸ್ಯೆಗಳಿಗೆ ಆಕೆ ಕೆಲ ಮಟ್ಟಿಗೆ ಕಾರಣಳಿದ್ದು ಹೆಚ್ಚಾಗಿ ಸಾಮಾಜಿಕ ಪರಿಸ್ಥಿತಿ, ಕುಟುಂಬದ ಸಹಾಯ–ಸಹಾನುಭೂತಿಯಿಲ್ಲದಿರುವಿಕೆ ಆಕೆಯ ಶಕ್ತಿಗೂ ಮೀರಿದ ಕಾರಣಗಳಾದ ತೊಂದರೆ ಕೊಡುವ ಗಂಡ, ಅಂಕಿಯಲ್ಲಿರದ ಮಕ್ಕಳು, ಹೊತ್ತಿಗೆ ಒದಗದ ಸಂಬಂಧಿಕರು, ಯೋಗ್ಯ ಮಾರ್ಗದರ್ಶನ ನೀಡದ ಸಂಸ್ಥೆಗಳು ಇವೆಲ್ಲ ಇಲ್ಲದೇ ಇರುವುದರ ಪರಿಣಾಮದಿಂದ ಮಕ್ಕಳು ತೊಂದರೆಗೊಳಗಾಗುವರೇ ವಿನಾ, ಬರೀ ತಾಯಿಯ ನಿರ್ಗಮನದಿಂದಲ್ಲವೆಂದು ಸ್ಪಷ್ಟವಾಗುತ್ತದೆ. ಉದ್ಯೋಗಸ್ಥ ತಾಯಿಯ ಕುಟುಂಬದ ಮಕ್ಕಳಿಗಿರುವ ಅನೇಕ ಸಮಸ್ಯೆಗಳನ್ನು ಉದ್ಯೋಗದಲ್ಲಿರದ ತಾಯಿಯ ಕುಟುಂಬದಲ್ಲಿಯ ಮಕ್ಕಳು ಎದುರಿಸು ತ್ತಿದ್ದರೂ ಅವುಗಳನ್ನು ಸಮಾಜವು ಅಷ್ಟೊಂದು ಗಂಭೀರವಾಗಿ ವಿಚಾರಿಸುವುದಿಲ್ಲ. ಆದರೆ ಉದ್ಯೋಗ ಮಾಡುವ ತಾಯಿ ಮನೆ ಮಕ್ಕಳನ್ನು ಬಿಟ್ಟು ಕೆಲಸಕ್ಕೆ ಹೋಗುವ ಮಾತ್ರದಿಂದಲೇ ಕುಟುಂಬದಲ್ಲಿಯ ಮಕ್ಕಳ ಎಲ್ಲ ಸಮಸ್ಯೆಗಳಿಗೂ ತಾಯಿಯೇ ಕಾರಣ ವೆನ್ನುವಮಟ್ಟಿಗೆ ಅವಳನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಆದರೆ ಇದಕ್ಕೆ ಪ್ರತಿಯಾಗಿ ಒಳ್ಳೆಯ ಶೈಕ್ಷಣಿಕ ಹಿನ್ನೆಲೆಯುಳ್ಳ ತಾಯಿ ಕಡ್ಡಾಯವಾಗಿ ತನ್ನ ಮನೆ ಮಕ್ಕಳು ಇಷ್ಟಕ್ಕೇ ತನ್ನ ವ್ಯವಹಾರವನ್ನು ಸೀಮಿತಗೊಳಿಸದೇ ತನ್ನಲ್ಲಿರುವ ವ್ಯವಹಾರ ಚತುರತೆ, ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಳ್ಳಲು ಅವಕಾಶ ಸಿಗದೇ ಒಂಟಿತನದ ಮನೋವೇದನೆಯನ್ನು ಅನುಭವಿಸಬಹುದು. ಒಮ್ಮೊಮ್ಮೆ ಸ್ಕಿಜೋಫ್ರೆನಿಯಾದಂತಹ ಮನೋರೋಗ ತಗಲಬಹುದು. ಇಂತಹ ತಾಯಿಯ ಮಕ್ಕಳು ಅಲಕ್ಷಿಸಲ್ಪಡುವರು. ಅವಳ ಸಮಸ್ಯೆಯಿಂದ ಅವಳ ಮಕ್ಕಳಿಗೆ ಸಮಸ್ಯೆಗಳು ಸಹಜವಾಗಿ ತಲೆದೋರುವವು. ಇವೆಲ್ಲವುಗಳ ಸಾಮಾಜಿಕ, ಆರ್ಥಿಕ, ಮಾನಸಿಕ ಪರಿಣಾಮಗಳನ್ನು ಇನ್ನೂ ಸೂಕ್ಷ್ಮವಾಗಿ ಆಳವಾಗಿ ಅಭ್ಯಾಸಮಾಡಬೇಕಾಗಿದೆ.

ಅತಿ ಕಡಿಮೆ ಆರ್ಥಿಕ ಆದಾಯದ ಕುಟುಂಬದಲ್ಲಿಯ ತಾಯಿಯ ಪರಿಸ್ಥಿತಿ ಶೋಚನೀಯ :

ಅತಿ ಕಡಿಮೆ ಆದಾಯವುಳ್ಳ ತಾಯಿಯ ಕುಟುಂಬದಲ್ಲಿಯ ತಾಯಿ ಎರಡು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾಳೆ. ಇವಳಿಗೆ ಮಕ್ಕಳು ಬಹಳ. ಮನೆಗೆಲಸಕ್ಕೆ ಆಳು ಇಲ್ಲವೆ ಸಂಬಂಧಿಕರನ್ನು ಇಟ್ಟುಕೊಳ್ಳುವ ಸಾಮರ್ಥ್ಯವೂ ಇರದು. ಬಹಳ ಮಕ್ಕಳು ಇದ್ದ ಮನೆಯಲ್ಲಿ ಕೆಲಸವು ಶ್ರಮದ್ದಾಗುವುದು. ಕಡಿಮೆ ಆದಾಯದ ಕುಟುಂಬಗಳಲ್ಲಿ ಯಾಂತ್ರಿಕ ಸಹಾಯದ ಭರವಸೆಯೂ ಕಡಿಮೆ. ಕಾರಣ ಇವುಗಳ ಬೆಲೆಯೂ ಹೆಚ್ಚು. ಯಾಂತ್ರಿಕ ಸಲಕರಣೆಗಳ ಸಹಾಯ ಸ್ಥಿತಿವಂತರ ಸೌಕರ್ಯಗಳಾಗಿ ಅನೇಕ ಮಾಧ್ಯಮ ಹಾಗು ಕನಿಷ್ಠ ಆರ್ಥಿಕಸ್ಥಿತಿಯ ವರ್ಗದ ತಾಯಂದಿರ ತೊಂದರೆಗಳು ಯಾವ ವಿಧದಲ್ಲೂ ಕಡಿಮೆಯಾಗುವುದಿಲ್ಲ. ಹೀಗಾಗಿ ಮಕ್ಕಳ ಕ್ಷೇಮ, ಆಹಾರ, ತಿಂಡಿ, ಬಟ್ಟೆ ಬರೆ ಹಾಗು ಶಿಕ್ಷಣದಲ್ಲಿ ಸಮತೋಲನೆಯನ್ನು ಕಾಣುವುದು ಅಸಾಧ್ಯವೆನಿಸುವುದು. ಮನೆಯ ಒಳಹೊರಗೂ ಕೆಲಸದ ಭಾರದಿಂದ, ತಾಯಿಯ ಅಲಕ್ಷ್ಯತನದಿಂದ ಮಕ್ಕಳಿಗೂ ತಾಯಿಗೂ ಇರಬೇಕಾದ ನೇರಸಂಪರ್ಕ ತಪ್ಪಿ ಮಕ್ಕಳು ಬಾಲಾಪರಾಧಿಗಳಾಗಿ ಬೆಳೆಯುವರು. ಅಲ್ಲದೆ ಮಕ್ಕಳು ವಾತ್ಸಲ್ಯಹೀನರಾಗಿ ದಾರಿಗಾಣದೆ ಸಮಾಜವಿರೋಧಿ ಚಟುವಟಿಕೆಗಳ ಗುಂಪುಗಳಲ್ಲಿ ಸೇರಿಕೊಳ್ಳುವರು.

ಗಂಡ ಹೆಂಡತಿ ಇಬ್ಬರೂ ಕೆಲಸದಲ್ಲಿದ್ದರೆ ? ತರಬೇತಿ ಪಡೆದ ಸಂಘ-ಸಂಸ್ಥೆಗಳ ಸಹಾಯ :

ಗಂಡ ಹೆಂಡಿರಿಬ್ಬರೂ ಉದ್ಯೋಗದಲ್ಲಿ ಇದ್ದರೆ, ಮನೆಯ ಹಾಗು ಮಕ್ಕಳ ಮೇಲ್ವಿಚಾರಣೆ ನೋಡಿಕೊಳ್ಳಲು ಯಾರೂ ಇಲ್ಲದೆ ಹೋದರೆ...ಮಗುವಿನ ಊಟ, ಉಡುಗೆ, ತಿಂಡಿ, ಸ್ನಾನ, ಶಾಲೆಗೆ ಕಳುಹಿಸುವುದು. ಪಾಠ ಹೇಳುವುದು, ಅನಾರೋಗ್ಯದ ವೇಳೆಯಲ್ಲಿ ವೈದ್ಯರ ಕಡೆಗೆ ಕರೆದೊಯ್ಯುವುದು, ಬೆಳಗಿನ ಹೊತ್ತು ಗಂಟೆಗಟ್ಟಲೆ ಸರತಿಯಲ್ಲಿ ನಿಂತು ವೈದ್ಯರ ಸಲಹೆ ಔಷಧಿಗಳನ್ನು ಹೊತ್ತು ಹೊತ್ತಿಗೆ ತಂದು ಮಗುವಿಗೆ ಕೊಡಿಸುವುದು; ಇತ್ಯಾದಿ ಸೇವೆಯನ್ನೂ ಆಸಕ್ತಿವಹಿಸಿ ಹಾಗು ಪ್ರಾಮಾಣಿಕತನದಿಂದ ಯಾರು ಮಾಡಬೇಕು? ಎಂಬ ಸವಾಲು ಎದುರಾಗುತ್ತದೆ. ಇಂತಹ ಸಮಸ್ಯೆಗಳನ್ನು ಎದುರಿಸಲು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯಿಂದ ಕೂಡಿದ ಸಂಘ ಸಂಸ್ಥೆಗಳಿಂದ ಸೇವೆ, ಸಹಾಯವನ್ನು ಪಡೆಯಲು ಅನುಕೂಲತೆಯುಂಟು. ಇಂಥವುಗಳಲ್ಲಿ ಶಾಲೆಗಳು. ಆಸ್ಪತ್ರೆಗಳು. ಹಗಲಿನಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಕೇಂದ್ರಗಳು. ಬಾಲವಾಡಿಗಳು. ಮಕ್ಕಳ ಮಾರ್ಗದರ್ಶನ ಕೇಂದ್ರಗಳು ಇವಲ್ಲದೆ ನೆರೆಹೊರೆಯವರ. ಸಂಬಂಧಿಕರ. ಸೇವಕರ ಸಹಾಯವನ್ನು ತೆಗೆದುಕೊಳ್ಳುವರು. ಇವುಗಳಲ್ಲಿ ಯಾರ. ಹಾಗು ಯಾವುದರ ಸಹಾಯ, ಯಾವ ರೀತಿಯಲ್ಲಿ, ಎಷ್ಟರಮಟ್ಟಿಗೆ ತೆಗೆದುಕೊಳ್ಳ

ಬೇಕೆಂಬುದು ಪ್ರತಿಯೊಂದು ಕುಟುಂಬದ ವೈಯಕ್ತಿಕ ಅಭಿರುಚಿ ಹಾಗು ಆರ್ಥಿಕ ಹಾಗು ಸಾಮಾಜಿಕ ಹಿನ್ನೆಲೆಯನ್ನು ಅವಲಂಬಿಸಿವೆ.

ಇಂದು ಅಡುಗೆಯ ಮನೆಯಲ್ಲಿ ಸಹಾಯಮಾಡುವ ಅನೇಕ ಹೊಸಬಗೆಯ ಯಂತ್ರ ಸಾಮಗ್ರಿಗಳು, ಸಿದ್ಧ ಆಹಾರ, ಉತ್ತಮ ಗುಣಮಟ್ಟದ ಚಹಾ ಕಾಫಿ ಮಂದಿರಗಳು, ಭೋಜನಾಲಯಗಳು, ಉದ್ಯೋಗಸ್ಥ ತಾಯಿಗೆ ಅನೇಕ ಬಗೆಯ ನೆರವನ್ನುಂಟು ಮಾಡುತ್ತಿವೆ. ಆದರೆ ಇವೆಲ್ಲ ಅನುಕೂಲತೆಗಳು ಎಲ್ಲೆಡೆಗೂ ಲಭಿಸುವ ಭರವಸೆಯಿಲ್ಲ. ಒಮ್ಮೊಮ್ಮೆ ಅನುಕೂಲತೆಗಳನ್ನು ಅನುಭವಿಸುವ ಸ್ವಾತಂತ್ರ್ಯವೂ, ಸಾಧ್ಯತೆಯೂ ಇರುತ್ತದೆಂದು ಹೇಳಲಿಕ್ಕಾಗದು.

ತಾಯಿಯ ಒಳ್ಳೆಯ ಶೈಕ್ಷಣಿಕ ಹಿನ್ನೆಲೆ :

ತಾಯಿಯ ಶೈಕ್ಷಣಿಕ ಹಿನ್ನೆಲೆ, ಉದ್ಯೋಗದ ಭರವಸೆ, ಅವಕಾಶ, ಕೈತುಂಬ ಸಂಪಾದನೆ ಹಾಗು ಗೃಹಜೀವನ ಇವೆಲ್ಲವುಗಳಿಗೂ ನಿಕಟಸಂಬಂಧವಿದೆ. ಸಾವಿರಾರು ರೂಪಾಯಿ ಸಂಪಾದಿಸುತ್ತಿರುವ ತಾಯಂದಿರು ಅನೇಕ ಸಂಘ ಸಂಸ್ಥೆಗಳ ವ್ಯಕ್ತಿಯ ಸಹಾಯ ಧಾರಾಳವಾಗಿ ಬಳಸಿಕೊಂಡು ತಮಗೆ ಬಂದ ಸಮಸ್ಯೆಗಳನ್ನು ಸಹಜವಾಗಿ ಬಗೆಹರಿಸಿಕೊಳ್ಳುವರು.

ದೊಡ್ಡ ದೊಡ್ಡ ಹುದ್ದೆಯಲ್ಲಿರುವ ತಾಯಂದಿರಿಗೆ ಸೌಕರ್ಯ ಹೆಚ್ಚು. ಜೊತೆಗೆ ಜವಾಬ್ದಾರಿ ಕೂಡ. ಕೆಲಸದ ಅವಧಿ ಕಡಿಮೆ, ಅವರು ನಿರ್ದಿಷ್ಟ ಗಂಟೆಗಳ ಕಾಲ ಮಾತ್ರ ಕೆಲಸ ಮಾಡುವುದರಿಂದ ಇವರು ತಮ್ಮ ಉಳಿದ ವೇಳೆಯಲ್ಲಿ ಮಕ್ಕಳ ಬಗ್ಗೆ ವಿಶೇಷ ಆಸ್ಥೆ ಮತ್ತು ಜವಾಬ್ದಾರಿ ವಹಿಸುವರು. ಅವಶ್ಯವಿದ್ದ ಪ್ರಸಂಗಗಳಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡುವರು.

ಉದ್ಯೋಗಸ್ಥ ತಾಯಂದಿರ ಮಕ್ಕಳು ಬಾಲಾಪರಾಧಿಗಳಾಗಿ ಬೆಳೆಯುತ್ತಾರೆಂಬ ಹೇಳಿಕೆಯನ್ನು ಅನೇಕ ತಾಯಂದಿರು ಅಲ್ಲಗಳೆದಿದ್ದಾರೆ. ತಮ್ಮ ಜಾಣಾಕ್ಷತನದ ಮೇಲ್ವಿಚಾರಣೆಯಲ್ಲಿ ಮಕ್ಕಳು ಸ್ವತಂತ್ರ ಪ್ರವೃತ್ತಿಯವರಾಗಿ ಚುರುಕು ಹಾಗೂ ಜವಾಬ್ದಾರಿ ಗುಣಗಳುಳ್ಳ ಉತ್ತಮ ಮಕ್ಕಳಾಗಿ ಹಾಗು ನಾಗರಿಕರಾಗುವ ಭರವಸೆಯನ್ನು ಹೊಂದಿದ್ದಾರೆ.

ಕೈತುಂಬ ಹಣ ಸಂಪಾದಿಸುವ ಹೆಂಡತಿಯನ್ನು ಗಂಡ ಹಾಗು ಕುಟುಂಬದಲ್ಲಿಯ ಉಳಿದ ಸದಸ್ಯರೂ ಗೌರವದಿಂದ ಕಾಣುತ್ತಾರೆ. ಕುಟುಂಬದ ಅನೇಕ ಮಹತ್ವದ ವಿಷಯಗಳಾದ ಮನೆಯ ಖರ್ಚು ವೆಚ್ಚ, ಆಸ್ತಿ ಕೊಡುಕೊಳ್ಳುವ, ಮಕ್ಕಳ ಶಿಕ್ಷಣ, ನೌಕರಿ, ಮದುವೆ ವಿರಾಮಕಾಲದ ಚಟುವಟಿಕೆ ಹಾಗೂ ದಿನದ ಊಟ ತಿಂಡಿಗಳನ್ನು

ತಯಾರಿಸುವುದಲ್ಲಿಯೂ ಹೆಂಡತಿಯ ಸಲಹೆ ಸೂಚನೆಗಳನ್ನು ಲಕ್ಷಿಸಲಾಗುವುದು. ಸಾಮಾಜಿಕ ಕಾರ್ಯ, ಹಬ್ಬ ಹುಣ್ಣಿಮೆ, ದೈನಂದಿನ ಕಾರ್ಯಗಳಲ್ಲೂ ಅತಿಥಿ ಸತ್ಕಾರ ಕಾರ್ಯಗಳಲ್ಲೂ ತಮ್ಮ ಘನತೆ ಗೌರವವನ್ನು ಕಾಯ್ದುಕೊಂಡು ಸಂತೋಷವಾಗಿ ಕಾಲ ಕಳೆಯಲು ಪ್ರಯತ್ನಿಸುವರು.

ಪ್ರೌಢಾವಸ್ಥೆಯಲ್ಲಿ ಮಕ್ಕಳಿಗೆ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ, ದೈಹಿಕ ಬದಲಾವಣೆಯೊಂದಿಗೆ ಮಾನಸಿಕ ಬದಲಾವಣೆಯೂ ಸಹಜವೆಂದು ಮನವರಿಕೆ ಮಾಡಿಕೊಟ್ಟು ಭವಿಷ್ಯದಲ್ಲಿ ಅವರಿಗೆ ಯಾವತರಹದ ತೊಂದರೆಬಾರದಂತೆ ಆತ್ಮರಕ್ಷಣೆಯ ನೀತಿಯನ್ನು ಕಲಿಸಿಕೊಡುವರು. ಪ್ರೌಢಾವಸ್ಥೆಯ ಮಕ್ಕಳಿಗೆ ಬುದ್ಧಿವಂತ ತಾಯಂದಿರಲ್ಲಿ ಒಳ್ಳೆಯ ಆಶ್ರಯ, ಭರವಸೆ ಹಾಗೂ ಅನೇಕ ವೈಯಕ್ತಿಕ ಸಮಸ್ಯೆಗಳಿಗೆ ಸಮರ್ಪಕ ಮಾರ್ಗದರ್ಶನ ಲಭಿಸುವುದು. ಪ್ರಜ್ಞಾವಂತ ಮಹಿಳೆಯರೆನಿಸಿದ ಇವರು ಇಲ್ಲದ ಮಡಿವಂತಿಕೆಗೆ ಹೆಸರಾಗದೆ ಅನೇಕ ಬದಲಾವಣೆಗಳನ್ನು ದೈನಂದಿನ ಆಚರಣೆಯಲ್ಲಿ ಬಳಸುವರು. ಉದಾ: ತತ್ತಿ, ಮೀನುಗಳ ಬಳಕೆಯನ್ನು ಆಹಾರದಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಬಳಸುವರು. ಸಾಮಾಜಿಕ ಆಗುಹೋಗುಗಳ ಪರಿಜ್ಞಾನವಿರುವ ಇವರು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಬಲ್ಲರು. ಹಳೆಯ ಹಾಗೂ ಹೊಸ ಪೀಳಿಗೆಯ ಮಧ್ಯದ ಅಂತರವನ್ನು ಬೆಳೆಯಗೊಡದೆ ಅವೆರಡರ ಮಧ್ಯದ ಕೊಂಡಿಯಂತೆ ಸಹಾಯಕರಾಗುವರು.

ಉದ್ಯೋಗಸ್ಥ ಮಹಿಳೆಯರ ಕುಟುಂಬದಲ್ಲಿ ವಿರಸ ಕಡಿಮೆ. ಗಂಡ ಹೆಂಡತಿಯರ ಪಾತ್ರ ನಿರ್ವಹಣೆಯಲ್ಲಿ ಯಾರ ಪಾತ್ರವೂ ಗೌಣವಲ್ಲ. ಇಬ್ಬರೂ ತಮ್ಮ ತಮ್ಮ ಪೂರಕ ಸಂಬಂಧಗಳಲ್ಲಿ ಬೆರೆತು ಅರಿತು ಸಾಂಪ್ರದಾಯದ ಎಷ್ಟೋ ಕಟ್ಟುಪಾಡಿಗೆ ಬಂಧಿತರಾಗಿದ್ದರೂ ತಮ್ಮ ತಮ್ಮ ವೈಯಕ್ತಿಕ ಒಳಿತಿಗಾಗಿ ಬದುಕುವ ಸಂಬಂಧದಲ್ಲಿರುವರು. ಸರಿಯಾದ ತಿಳಿವಳಿಕೆಯುಳ್ಳ ಅನೇಕ ಜೋಡಿಗಳು ಹೆಚ್ಚು ನೆಮ್ಮದಿಯಿಂದ ಬಾಳುತ್ತಿದ್ದಾರೆ. ಇಂತಹ ಸಮಾನ ಅವಕಾಶದ ಪ್ರಯೋಗ ಶಾಲೆಯಲ್ಲಿ ಬೆಳೆಯುವ ಅವಕಾಶ ಹೊಂದಿರುತ್ತಾರೆ. ಈ ಸಂದರ್ಭದಲ್ಲಿ ಒಂದು ಮಾತು ಸರಿಹೋರುವದು. "ಉತ್ತಮ ಕುಟುಂಬಕ್ಕಿಂತ ಮಿಗಿಲಾದ ಶಾಲೆಗಳಿಲ್ಲ. ಪ್ರಾಮಾಣಿಕ ಹಾಗು ಉತ್ತಮ ನಡವಳಿಕೆಯುಳ್ಳ ತಂದೆ ತಾಯಿಗಳಿಗಿಂತ ಹೆಚ್ಚಿನ ಉಪಾಧ್ಯಾಯರಿಲ್ಲ." ಎಂದು ಹೀಗೆ ತಾವು ಉತ್ತಮರಾಗಿ ನಡೆದುಕೊಂಡು ಮಕ್ಕಳಿಗೂ ಉತ್ತಮ ನಡವಳಿಕೆಯನ್ನು ಕಲಿಸುವುದರಿಂದ ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡಿದಂತಾಗುತ್ತದೆ.

ಆರ್ಥಿಕ ಭದ್ರತೆ ಹಾಗು ಕುಟುಂಬದ ಮೇಲೆ ಅದರ ಪರಿಣಾಮ:

ತಾಯಿ ಉದ್ಯೋಗದಲ್ಲಿರುವುದರಿಂದ ಎಲ್ಲ ವರ್ಗದ ಕುಟುಂಬಗಳಿಗೂ ಆರ್ಥಿಕ ಸುಧಾರಣೆ ಎನ್ನಿಸುವುದು ಹೆಚ್ಚಿನ ವರಮಾನ, ಹೆಚ್ಚಿನ ಸೌಕರ್ಯ. ತಾಯಿಯೇ

ಕುಟುಂಬದ ಪೋಷಕ ವ್ಯಕ್ತಿ ಇರುವ ಕುಟುಂಬಗಳಲ್ಲಿ ತಾಯಿಯ ಉದ್ಯೋಗದಿಂದ ಲಭಿಸುವ ಸಂಪಾದನೆ ಒಂದು ವರದಾನವೆನ್ನಿಸುವುದು.

ಸಾಮಾಜಿಕ ಹಾಗು ಆರ್ಥಿಕ ಮಟ್ಟ ಮತ್ತು ಮಗುವಿನ ಬೆಳವಣಿಗೆ ಇವುಗಳ ಸಂಬಂಧವು ನೇರವಾದುದು. ಯಾವುದೇ ಸಾಂಪ್ರದಾಯಿಕ ನಿಯಮ ಬದಲಾಗುವುದ ರಿಂದ ಅನೇಕ ಒಳಿತು. ಕೆಡುಕು ಪರಿಣಾಮಗಳಾಗುವುವು. ತಾಯಿಯು ಗಳಿಸುವ ಹಣ ದಿಂದ ಕುಟುಂಬದ ಜೀವನ ಮಟ್ಟದಲ್ಲಿ ಸುಧಾರಣೆ ತೋರುವುದು. ಮಕ್ಕಳಿಗೆ ಒಳ್ಳೆಯ ಆಹಾರ, ಮನೆ, ಔಷಧೋಪಚಾರ, ಶಿಕ್ಷಣ, ಪ್ರವಾಸ, ಮನರಂಜನೆ ಮುಂತಾದವುಗಳು ಲಭಿಸುವ ಭರವಸೆ ದೊರೆಯುವುದು. ಕೌಟುಂಬಿಕ ಜಂಜಾಟದಿಂದ, ಯಾಂತ್ರಿಕ ಹಾಗು ಬೇಜಾರು ತರಿಸುವಂತಹ ದೈನಂದಿನ ಕೆಲಸದಿಂದ ಮುಕ್ತಳಾಗಿ ಉದ್ಯೋಗದಲ್ಲಿ ಇರುವುದು ತಾಯಿಗೆ ಒಂದು ಒಳ್ಳೆಯ ಅವಕಾಶ ಹಾಗೂ ಬದಲಾವಣೆಯಾಗಿದೆ. ಇದರಿಂದ ಉದ್ಯೋಗಸ್ಥ ತಾಯಿಯ ಸ್ಥಾನಮಾನಗಳು ಸಮಾಜದಲ್ಲಿ ಹೆಚ್ಚಾಗುವುವು. ಕೋನಸರ್‌ವ್ಸ್ಕಿ ಎಂಬ ರಶಿಯನ್ ಸಮಾಜ ತಜ್ಞನು ಹೇಳಿರುವಂತೆ, "ಹೆಚ್ಚಿನ ಸಾಮಾಜಿಕ ಹಾಗು ಆರ್ಥಿಕ ಸ್ಥಾನಗಳು, ಉತ್ತಮ ಅವಕಾಶಗಳು ಉತ್ತಮ ಉದ್ಯೋಗ ದಲ್ಲಿರುವ ತಾಯಂದಿರಿಗೆ ಲಭಿಸುತ್ತವೆ."

ಎರಡನೆಯ ವರ್ಗವಾದ ಕಡಿಮೆ ಆದಾಯದ ಕುಟುಂಬದಲ್ಲಿ, ತಾಯಿಯ ಗಳಿಕೆ ಯಿಂದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಅನೇಕಸಲ ಒಬ್ಬರ ಸಂಪಾದನೆಯಿಂದ ಕುಟುಂಬದ ನಿರ್ವಹಣೆ, ಮಕ್ಕಳ ಮದುವೆ, ಉಚ್ಚ ದರ್ಜೆಯ ಶಿಕ್ಷಣ ಕಠಿಣವೆನಿಸುವುದು. ಅನೇಕ ಸಲ ತಾಯಿಯ ಸಂಪಾದನೆಯೇ ಆಧಾರವಾಗಿರುವ ವಿಧವೆ, ಪರಿತ್ಯಕ್ತೆ, ವಿವಾಹ ವಿಚ್ಛೇದನ ಪಡೆದ ಹಾಗು ಅವಿವಾಹಿತಳಾಗಿರುವ ಮಹಿಳೆಯ ಕುಟುಂಬ ಹಾಗೂ ಆರ್ಥಿಕವಾಗಿ ಅತಿ ಕಡಿಮೆ ದರ್ಜೆಯ ಕುಟುಂಬಕ್ಕೆ ತಾಯಿಯ ಸಂಪಾದನೆಯೊಂದು ವರದಾನವೆನ್ನಿಸುವುದು.

ತಂದೆ–ತಾಯಿಗಳ ನೇರವಾದ ಸಂಬಂಧ :

ಮಕ್ಕಳ ಒಳ್ಳೆಯ ಗುಣಮಟ್ಟದ ಬೆಳವಣಿಗೆಯಲ್ಲಿ ತಂದೆ ತಾಯಿಯರ ನೇರವಾದ ಹಾಗು ನೇರವಲ್ಲದ (Direct and Indirect Control) ನಿಯಂತ್ರಣದ ಅವಶ್ಯಕತೆ ಯಿದೆ. ಪ್ರತ್ಯಕ್ಷ ಹಾಗು ಅಪ್ರತ್ಯಕ್ಷವಾಗಿ ಮಗುವಿನ ನಡುವಳಿಕೆಯ ಮೇಲೆ ಪರಿಣಾಮ ಬೀರುವ ಪ್ರಮುಖ ಸಂಸ್ಥೆಗಳಲ್ಲಿ ಕುಟುಂಬದ ಪಾತ್ರವು ಅತಿ ಮಹತ್ವದ್ದಾಗಿದೆ. ಅಮೇರಿಕೆಯಂತಹ ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲಿ ಕೂಡ ಕುಟುಂಬದಿಂದ ಲಭಿಸುವ ನೇರವಾದ ನಿಯಂತ್ರಣ ವಯಸ್ಸಿಗೆ ಬಂದ ಮಕ್ಕಳ ಮೇಲೆ ಅವರ ಸರಿಯಾದ ಬೆಳವಣಿಗೆಯಲ್ಲಿ ಅತಿ ಮಹತ್ವದ್ದಾಗಿದೆ. ಮಕ್ಕಳು ಅಪರಾಧಿ ಮನೋವೃತ್ತಿಯಿಂದ

ಬೆಳೆಯಬಾರದೆಂದು ಅನೇಕ ಅಡೆತಡೆಗಳನ್ನು, ನಿಯಂತ್ರಣಗಳನ್ನು ತಂದೆತಾಯಿಯರು ಹಾಕುತ್ತಾರೆ. ಮೊದಲಿನಿಂದಲೂ ತಂದೆ ತಾಯಿಯರ ನೇರವಾದ ಸಂಬಂಧ, ನಿಯಂತ್ರಣ ದಲ್ಲಿ ಬೆಳೆದ ಮಕ್ಕಳು ಮುಂದೆ ಬೆಳೆದು ದೊಡ್ಡವರಾದಮೇಲೆ ಸಮಾಜದ ಸುವ್ಯವಸ್ಥೆ ಗಾಗಿ ಇರುವ ಅನೇಕ ಕಾಯ್ದೆ ಕಾನೂನನ್ನು ಉಲ್ಲಂಘಿಸುವ ಸಾಹಸಕ್ಕೆ ಹೋಗುವುದಿಲ್ಲ.

ಆದರೆ ಕುಟುಂಬದಿಂದ ತಾಯಿಯ ನಿರ್ಗಮನದಲ್ಲಿ ಅನೇಕಸಲ ವಯಸ್ಸಿಗೆ ಬಂದ ಮಕ್ಕಳ ಮೇಲೆ ನಿಯಂತ್ರಣ ತಪ್ಪಿ ಬಾಲಾಪರಾಧಿಗಳಾಗಿ ಬೆಳೆಯುವ ಸಾಧ್ಯತೆಯಿದೆ.

ತಾಯಿಯ ಗೈರುಹಾಜರಿಯಲ್ಲಿ ಮಕ್ಕಳು ಮಾಡುವ ಅಪರಾಧಗಳು ಗಮನಕ್ಕೆ ಬಂದಾಗ ಹೆಣ್ಣು ಮಕ್ಕಳಿಗೆ ಕೊಡುವ ಶಿಕ್ಷೆ ಸ್ವಲ್ಪ ಗಂಭೀರ ಹಾಗು ಬಿಗುವು ಮತ್ತು ಹೊಂದಾಣಿಕೆಯಿಲ್ಲದ್ದಾಗಿದೆ. ಕಾರಣ ತಾಯಿ ವಿಶೇಷವಾಗಿ ಮೊದಲಿನಿಂದಲೂ ಹುಡುಗಿಯರ ಮೇಲೆ ನಿಗಾಹ, ನಿಯಂತ್ರಣ, ಕಟ್ಟುಪಾಡು ಜಾಸ್ತಿ. ಮುಂದೆ ತಾಯಿಯ ಉದ್ಯೋಗದಿಂದ, ಆ ಸ್ಥಾನದ ತೆರವಿನಲ್ಲಿ ಹುಡುಗಿಯರು, ಒಮ್ಮೆಲೆ ಸ್ವತಂತ್ರರಾಗಿ ಅಪರಾಧಿ ಮನೋವೃತ್ತಿಯಲ್ಲಿ ತೊಡಗುವವರ ಸಂಖ್ಯೆ ಹೆಚ್ಚು. ಮೊದಲಿನಿಂದಲೂ ಎಲ್ಲ ಮಕ್ಕಳ ಮೇಲೆ ಸಮಾನ ನಿಯಂತ್ರಣ, ಮಕ್ಕಳಿಗೆ ತಮ್ಮ ತಪ್ಪಿನ ಅರಿವು ಮಾಡಿ ಕೊಡುವ ಅವಕಾಶ ಇರಬೇಕು. ಇಂತಹ ಕುಟುಂಬಗಳಲ್ಲಿ ಅನ್ಯಥಾ ಸಂಭವಿಸುವ ಅನರ್ಥಗಳು ಕಡಿಮೆ.

ಪ್ರೇಮ, ವಿಶ್ವಾಸದಿಂದ ಅವರಿಸಿದ ಶಿಸ್ತಿನ ಕ್ರಮದಿಂದ ಬಾಲಾಪರಾಧಿಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಕಠಿಣ ಶಿಕ್ಷೆ, ಭಯ ಇತ್ಯಾದಿಗಳಿಂದ ತಿದ್ದಲಾ ರದ ತಪ್ಪನ್ನು ಪ್ರೀತಿಯಿಂದ ತಿದ್ದುವದು ಪರಿಣಾಮಕಾರಿ. ಫೆರಿಸ್ ಎಂಬ ಸಮಾಜ ಶಾಸ್ತ್ರಜ್ಞನು ಮಕ್ಕಳಿಗೆ ಶಿಕ್ಷೆ ಕೊಡುವುದು ಪೂರ್ಣ ತಪ್ಪೆಂದು ಅಭಿಪ್ರಾಯಪಟ್ಟಿದ್ದಾನೆ. ಇದೇ ರೀತಿ ಹೆನ್ರಿ ಮತ್ತು ಶಾರ್ಟ್ ಎಂಬ ತಜ್ಞರೂ "ಶಿಕ್ಷೆಯಿಂದ ಮಕ್ಕಳ ಮನಸ್ಸು ಸಂಕುಚಿತಗೊಳ್ಳುವುದು" ಎಂದಿದ್ದಾರೆ. ಆದ್ದರಿಂದ "ಶಿಕ್ಷೆ ನೀಡದೇ ಮಗು ಕೆಟ್ಟಿತು" ಎನ್ನುವ ಹಳೆಯ ಮಾತನ್ನು ಬಿಟ್ಟು ಮಕ್ಕಳಿಗೆ ಸಹಜವಾಗಿ ಲಭಿಸಬೇಕಾದ ಪ್ರೀತಿ ಯಿಂದ ನಿಯಂತ್ರಿಸುವುದು ಅವಶ್ಯಕವಾಗಿದೆ. ತಂದೆ ತಾಯಿಯರ ಹಾಗು ಮಕ್ಕಳ ಮಧ್ಯ ಇರಬೇಕಾದ ನಿಜವಾದ ನೈತಿಕ, ಮಾನವಿಕ ಹಾಗೂ ಸಾಂಸ್ಕೃತಿಕ ಬಲವಾದ ಬಂಧನಗಳು ಒಳ್ಳೆಯ ತಂದೆ ತಾಯಿಯರ ಮಧ್ಯದಲ್ಲಿ ಸಂವರ್ಧಿಸುವವು.

ಈ ಮೊದಲು ಉದ್ಯೋಗದಲ್ಲಿರುವ ತಾಯಿಯ ದೈಹಿಕ ಹಾಗೂ ಮಾನಸಿಕ ಒತ್ತಡದಿಂದ ಗರ್ಭಿಣಿ ತಾಯಿಗೆ, ಹುಟ್ಟುವ ಮಗುವಿನ ಮೇಲೆ, ಅನೇಕ ಗಂಭೀರ ಪರಿಣಾಮಗಳು ಉಂಟಾಗುತ್ತವೆ. ಅಲ್ಲದೆ ಮಹಿಳೆ ಸ್ವತಂತ್ರಳಾಗಿ ವೈವಾಹಿಕ ಜೀವನದ ಶಾಂತಿ ಕದಡಬಹುದು. ಸಹಜವಾದ ಹೆಣ್ಣಿನ ಮೃದುಸ್ವಭಾವದ ಬದಲು ಮಹಿಳೆಯ

ರಲ್ಲಿ ಕಾಠಿಣ್ಯತೆಯು ತಲೆದೋರಬಹುದು. ಮಕ್ಕಳ ಬೆಳವಣಿಗೆ, ಶಾಲಾಜೀವನ ಹದಗೆಡ ಬಹುದೆಂದು ಅನೇಕರು ಹೆದರಿಕೊಳ್ಳುವ ಪ್ರಸಂಗವಿತ್ತು. ಆದರೆ ಅನೇಕ ಸಂಶೋಧನಾ ಅಭ್ಯಸನಗಳ ಆಧಾರದ ಅಭಿಪ್ರಾಯದ ಮೇರೆಗೆ ಇದೆಲ್ಲ ತಪ್ಪು, ನಿರಾಧಾರ ಎಂದು ಸ್ಪಷ್ಟವಾಗಿದೆ.

ಮದ್ರಾಸಿನ ಸಮಾಜಕಾರ್ಯ ಸಂಸ್ಥೆಯವರು "ವೈಟ್ ಕಾಲರ್ (white collor) ಹುದ್ದೆಗಳಲ್ಲಿ ತಾಯಂದಿರು" ಎಂಬ ವಿಷಯದ ಮೇಲೆ ನಡೆಯಿಸಿದ ಸಂಶೋಧನೆಯಿಂದ ಉದ್ಯೋಗದಲ್ಲಿರುವ ಗರ್ಭಿಣಿಯರ ಮೇಲೆ ಅವರ ಕೆಲಸದಿಂದ ಯಾವುದೇ ತರಹದ ದೈಹಿಕ ಹಾಗು ಮಾನಸಿಕ ದಣಿವಿನಿಂದ ಗರ್ಭ ಸ್ರಾವ ಅಥವಾ ಮಗು ಸತ್ತು ಹುಟ್ಟುವುದು ಇಂಥ ಯಾವ ಕೆಡುಕು ಪರಿಣಾಮಗಳಾಗಿಲ್ಲ. ಆದರೆ ತದ್ವಿರುದ್ಧವಾಗಿ ಮನೆಗೆಲಸ ವನ್ನಷ್ಟೇ ಮಾಡಿಕೊಂಡಿದ್ದ ಗೃಹಿಣಿಯರಿಗೆ ಇಂತಹ ಅನಾಹುತಗಳು ಹೆಚ್ಚಿನ ಪ್ರಮಾಣ ದಲ್ಲಿ ಆಗಿರುವುದು ಕಂಡುಬಂದಿದೆ.

ಮಗುವಿಗೆ ತಾಯಿಯ ಹಾಲು ಮತ್ತು ತಾಯಿಯ ಸಾನ್ನಿಧ್ಯವನ್ನು ಸರಿ ಹೋಲುವ ಬೇರೆ ಯಾವುದೂ ಇಲ್ಲ. ವಿವಿಧ ವಯೋಗುಣಕ್ಕೆ ಅನುಗುಣವಾಗಿ ಮಕ್ಕಳ ಅವಶ್ಯಕತೆಗಳು ಮತ್ತು ಸಮಸ್ಯೆಗಳು, ಪರಿಹಾರಗಳು ಭಿನ್ನವಾಗಿರುತ್ತವೆ. ಇವುಗಳನ್ನು ಒಂದೊಂದಾಗಿ ತೆಗೆದುಕೊಂಡು ಪರಿಶೀಲಿಸೋಣ.

ತಾಯಿಯು ಉದ್ಯೋಗಕ್ಕೆ ಹೋಗುವುದರಿಂದ ಅನೇಕ ಸಮಸ್ಯೆಗಳು ಉದ್ಭವಿ ಸುವುವು.

ಮಗು ಹತ್ತು ಹನ್ನೆರಡು ತಿಂಗಳಾಗುವತನಕ ಮಗುವಿನ ಬೆಳವಣಿಗೆಯಲ್ಲಿ ಮಗು ವಿನ ಅತ್ಯಂತ ನಿಕಟವಾದ ಪೂರಕ ವ್ಯಕ್ತಿ "ತಾಯಿಯಾಗಿದ್ದಾಳೆ; ತಾಯಿಯ ಎದೆಹಾಲಿ ನಿಂದ ಮಗು ವಿಕಸಿತವಾಗುವುದು" ಎಂಬುದು ವೈಜ್ಞಾನಿಕ ಸತ್ಯವು. ತಾಯಿಯ ಹಾಲುಂಡು ಸಹಜವಾಗಿ ಬೆಳೆದ ಮಗು ದೈಹಿಕ ಹಾಗು ಮಾನಸಿಕವಾಗಿ ಸಮತೋಲ ಬೆಳವಣಿಗೆಯನ್ನು ಹೊಂದುವುದು. ತಾಯಿಯ ಹಾಲಿನಲ್ಲಿ ಸಹಜವಾದ ರೋಗ ನಿರೋಧಕ ಶಕ್ತಿಯೂ ಇರುವುದರಿಂದ ಮಗುವಿನ ಸೂಕ್ಷ್ಮವಾದ ಬೆಳವಣಿಗೆಯಲ್ಲಿ ಯಾವುದೇ ತರಹದ ಆತಂಕ ಬಾರದು. ಮಗುವಿನ ಆಹಾರ, ನಿದ್ರೆ, ಸ್ನಾನ ಇವು ಗಳನ್ನು ನಿಯಮಿತವಾಗಿ ಅನುಸರಿಸುವುದು ಅವಶ್ಯ. ತಾಯಿಗೂ ಮಗುವಿಗೂ ಸಾಕಷ್ಟು ವಿಶ್ರಾಂತಿ, ಪೌಷ್ಟಿಕ ಆಹಾರದ ಅವಶ್ಯಕತೆ ಇರುವುದು. ತಾಯಿಯು ಮಗುವನ್ನಗಲಿ ಮೈಲು ದೂರದಲ್ಲಿ ದುಡಿಯಲು ಹೋದಾಗ, ವಾಹನ ಮುಂತಾದ ವುಗಳ ಅನಾನುಕೂಲತೆಯಿಂದ ತಾಯಿಯ ಹಾಲು ಹಾಗೂ ಸಾನ್ನಿಧ್ಯವೂ ತಪ್ಪಿ ಹೋಗು ವುದು. ಇಂತಹ ಪ್ರಸಂಗಗಳಲ್ಲಿ ಹಾಲಿನ ಪೌಡರಿನಂತಹ ಮಕ್ಕಳ ಕೃತಕ ಆಹಾರಗಳಿಗೆ

ಶರಣು ಹೋಗಬೇಕಾಗುವುದು. ಇಂತಹ ಆಹಾರವನ್ನು ಕೂಡ ಹೊತ್ತು ಹೊತ್ತಿಗೆ ಸರಿಯಾದ ಅಳತೆ, ಘನತೆಗಳನ್ನು ಮಗುವಿನ ಆರೋಗ್ಯ ಲಕ್ಷಣಗಳನ್ನು ಅರಿತು ಸರಿಯಾದ ತಿಳಿವಳಿಕೆಯುಳ್ಳ ವಿಶ್ವಾಸವಿದ್ದ ಸಮೀಪದ ವ್ಯಕ್ತಿಯೇ ಮಾಡಬೇಕಾಗುವುದು. ಈ ಕೆಲಸವನ್ನು ಯಾರು ಮಾಡಿದರೂ ತಾಯಿಗೆ ತಾನೇ ಸ್ವತಃ ಮಾಡಿದ್ದ ಸಮಾಧಾನ ಆಗು ವುದಿಲ್ಲ. ಇದೇನು ಗಂಭೀರ ಸಮಸ್ಯೆಯಲ್ಲವಾದರೂ ಸರಿಯಾದ ವ್ಯಕ್ತಿಯ ಸಹಾಯ ಸಿಕ್ಕದಿದ್ದರೆ ಮಾತ್ರ ತಾಯಿ ಮಗು ಕಷ್ಟಕ್ಕೆ ಒಳಗಾಗುತ್ತಾರೆ. ತಾಯಿಯ ಹಾಲಿನ ಅಭಾವದಿಂದ ಮಗುವಿನ ಮೇಲೆ ಅಂಥ ಯಾವ ದೈಹಿಕ ಗಂಭೀರ ಪರಿಣಾಮಗಳಾಗ ದಿದ್ದರೂ ಮಾನಸಿಕ ಪರಿಣಾಮಗಳ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕು.

ತಾಯಿಯ ಅಗಲುವಿಕೆ :

ತಾಯಿ ದುಡಿಯಲು ಹೋಗುವುದರಿಂದ ತಾಯಿಯು ಮಗುವಿನಿಂದ ಕೆಲಕಾಲ ದೂರ ಇರಬೇಕಾಗುವುದು. ಆಕೆಯ ಅಗಲುವಿಕೆಯಿಂದ ಮಗುವಿನ ಬೆಳವಣಿಗೆಯ ಮೇಲೆ ಆಗುವ ಪರಿಣಾಮಗಳು ಮುಖ್ಯವಾದವು ಎಂಬುದು ಸಂಶೋಧನೆಯ ಆಧಾರದ ಮೇಲಿಂದ ತಿಳಿದುಬಂದಿದೆ.

ಎರಡನೆಯ ಜಾಗತಿಕ ಯುದ್ಧದ ಕಾಲದಲ್ಲಿ ತಾಯಿಯಿಂದ ಅಗಲಿದ ಮಕ್ಕಳನ್ನು ಕಲ್ಯಾಣಸಂಸ್ಥೆಗೆ ಒಳಪಡಿಸಿ ಈ ಮಕ್ಕಳ ಮೇಲೆ ತಾಯಿಯ ಅಗಲುವಿಕೆಯ ಪರಿಣಾಮ ವನ್ನು ತಿಳಿಯಲು ಅಭ್ಯಸಿಸಿದಾಗ "ತೀರ ಚಿಕ್ಕವಯಸ್ಸಿನಲ್ಲಿ ತಾಯಿಯಿಂದ ಅಗಲಿದ ಮಗು ಸಹಜವಾಗಿ ತಾಯಿಯ ಆಶ್ರಯದಲ್ಲಿ ಬೆಳೆದ ಮಗುವಿಗಿಂತ ಭಿನ್ನವಾಗಿ ಬೆಳೆಯು ತ್ತದೆ"ಯೆಂಬ ಮಾತನ್ನು ದೃಢೀಕರಿಸುತ್ತದೆ.

ಆದರೆ ಇತ್ತೀಚೆಗೆ ನಡೆಸಿದ ಅನೇಕ ಸಂಶೋಧನೆಗಳ ಆಧಾರದಿಂದ "ಉದ್ಯೋ ಗಸ್ಥ ಮಹಿಳೆಯರ ದಕ್ಷ ಮೇಲ್ವಿಚಾರಣೆಯಲ್ಲಿ ಅವರ ಮಕ್ಕಳು ಹಾಳಾಗುತ್ತಾರೆ" ಎಂದು ಹೇಳಲೂಬಾರದು.

ಕೆಲಮಕ್ಕಳು ತಾಯಿಯ ಅಗಲುವಿಕೆಯಿಂದ ಹಾಳಾದರೆ. ಇನ್ನು ಕೆಲವು ತಂದೆ ತಾಯಿಯರ ಸಲಿಗೆ, ಅಜ್ಜ-ಅಜ್ಜಿಯರ ಅತಿ ಮುದ್ದು ಇಂಥ ವಾತಾವರಣದಲ್ಲಿ ಬೆಳೆದ ಮಕ್ಕಳು ಅತಿ ನಿಯಂತ್ರಣದಿಂದಲೂ ಹಾಳಾಗಬಹುದು. ತಾಯಿಯ ಆರ್ಥಿಕ ಇಲ್ಲವೆ ಇನ್ನಾವುದೋ ಕಾರಣಕ್ಕಾಗಿ ತಾಯಿಯು ಉದ್ಯೋಗದಲ್ಲಿರುವುದು ಅವಶ್ಯವಿದ್ದು ಮನೆ ಯಲ್ಲಿ ಮಗುವನ್ನು ನೋಡಿಕೊಳ್ಳಲು ಯಾರೂ ಇರದಿದ್ದರೆ, ಮಗುವನ್ನು ಬೇರೆಯವರ ರಕ್ಷಣೆಯಲ್ಲಿ ಇಟ್ಟಾಗ ಮಗುವಿಗೆ, ತಾಯಿಯ ಸಂಪರ್ಕ ತಪ್ಪಿ ತೊಂದರೆಗೆ ಗುರಿಯಾಗು ವುದು. ಇಂತಹ ಉದಾಹರಣೆಗಳು ಕಡಿಮೆಯಿದ್ದರೂ ಪರಿಣಾಮ ಮಾತ್ರ ಗಂಭೀರ ವಾದವುಗಳಾಗಿವೆ. ತಾಯಿಯು ಮಗುವನ್ನು ಯಾವುದೇ ಪರಿಸ್ಥಿತಿಯಲ್ಲಿ ತನ್ನಿಂದ

ದೂರವಿಡದೇ ತನ್ನ ಮೇಲ್ವಿಚಾರಣೆಯಲ್ಲಿಯೇ ಬೆಳೆಸುವುದು ಅವಶ್ಯವಾಗಿದೆ. ಈಗ ದೊರೆತ ಅನೇಕ ಸಾಕ್ಷ್ಯಗಳ ಆಧಾರದಂತೆ ತಾಯಿಯಿಂದ ಕೆಲ ಗಂಟೆಗಳು ಮಾತ್ರ ಅಗಲಿದ ಮಗುವಿನ ಬೆಳವಣಿಗೆಯಲ್ಲಿ ಯಾವ ತರಹದ ದೈಹಿಕ ಹಾಗು ಮಾನಸಿಕ ಬೆಳವಣಿಗೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಂದಿಲ್ಲ.

ಆದರೂ ಈ ದಿಸೆಯಲ್ಲಿ ಆಳವಾದ ಸೂಕ್ಷ್ಮ ಅಭ್ಯಾಸ, ಚರ್ಚೆ, ತಿಳಿವಳಿಕೆ ಎಲ್ಲವೂ ಅವಶ್ಯ. ಯಾವ ತರಹದ ಸಹಾಯದಿಂದ ತಾಯಿಯ ಅಗಲುವಿಕೆ ಮತ್ತು ಪಾಲ್ಗೊಳ್ಳುವಿಕೆ ಇವುಗಳ ಗುಣಮಟ್ಟ ಯಾವ ಪ್ರಕಾರದಲ್ಲಿ ಮಗುವಿನ ಬೆಳವಣಿಗೆಗೆ ಸಹಾಯವಾಗುವುದೆಂದು ತಿಳಿದು ಮಗುವಿನ ಬೆಳವಣಿಗೆಯಲ್ಲಿ ಬರುವ ಆತಂಕಗಳನ್ನು ತಪ್ಪಿಸಿ ರಚನಾತ್ಮಕ ಹಾಗು ಸೃಜನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಗುವನ್ನು ಬೆಳೆಯಿಸಬಹುದು. ಆದರೆ ಉದ್ಯೋಗ್ಥ ತಾಯಿ ಮಗುವಿನೊಂದಿಗೆ ಎಷ್ಟುಹೊತ್ತು ಕಾಲ ಕಳೆಯುತ್ತಾಳೆ ಎನ್ನುವುದಕ್ಕಿಂತ ಆಕೆ ತನ್ನ ಮಗುವಿಗೆ ಯಾವ ಗುಣಮಟ್ಟದ ರಕ್ಷಣೆ, ಆರೈಕೆ (Std. Care and Protection) ಒದಗಿಸುತ್ತಾಳೆನ್ನುವುದು ಮಗುವಿನ ಬೆಳವಣಿಗೆಯಲ್ಲಿ ಮಹತ್ತ್ವವಾದುದು.

ಮಗುವಿನ ಮೊದಲ ಐದು ವರ್ಷಗಳು:

ಮೊದಲನೆಯ ಐದು ವರ್ಷಗಳು ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಅತಿ ಮಹತ್ತ್ವವಾದವುಗಳು. ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಮಗುವಿನ ಬೆಳವಣಿಗೆಯ ಅವಧಿಯ ಮೊದಲನೆಯ ಐದು ವರ್ಷದ ಮಹತ್ತ್ವವನ್ನು ಅರಿತು ಅಲ್ಲಿಯ ಸರಕಾರವು ತಾಯಿ ಹಾಗು ಮಗುವಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದೆ. ತಾಯಿಗೆ ಹೆರಿಗೆಯ ಪೂರ್ವದಲ್ಲಿ ಹಾಗು ನಂತರ ಸೂಕ್ತ ವಿಶ್ರಾಂತಿ, ವೈದ್ಯಕೀಯ ಹಾಗು ಆರ್ಥಿಕ ಸೌಕರ್ಯಗಳನ್ನು ಕೊಡುವುದಲ್ಲದೆ ಉದ್ಯೋಗಸ್ಥ ತಾಯಂದಿರಿಗೆ ಪೂರ್ಣ ವೇತನದೊಂದಿಗೆ ವಿಶ್ರಾಂತಿ ಮತ್ತು ವಿಶೇಷ ಬೋನಸ್ ಕೊಡುವುದು, "ಮಗು ದೇಶದ ಸಂಪತ್ತು" ಎಂದು ಅಕ್ಷರಶಃ ಅನುಸರಿಸಿಕೊಂಡು ಹೋಗುವುದು ರಶಿಯನ್ ಸರಕಾರದ ನೀತಿಯಾಗಿದೆ. ಹುಟ್ಟುವ ಪ್ರತಿ ಮಗುವಿಗೂ ನಾಲ್ಕು ವರ್ಷ ತುಂಬುವತನಕ ತಾಯಿ ಹಾಗು ಮಗುವಿನ ಆರೋಗ್ಯದ ಅವಶ್ಯಕತೆಗಳನ್ನು ಮನೆಯವರೆಗೆ ಬಂದು ಪುಕ್ಕಟೆಯಾಗಿ ವಿಚಾರಿಸಿ ಸಲಹೆ ಔಷಧೋಪಚಾರಗಳನ್ನು ಒದಗಿಸುವುದು.

ನಮ್ಮ ದೇಶದಲ್ಲೂ "ಮಗು" ಸಮಾಜದ ಗಮನ ಸೆಳೆಯುವಂತಾದರೂ ಮಗುವಿನ ಕಲ್ಯಾಣಕ್ಕೆ ಸರಕಾರವು ಕೈಕೊಳ್ಳುವ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳು ಅನುಕೂಲವಾಗಿ, ಅರ್ಥ ಪೂರ್ಣವಾಗಿ ಮಗುವಿನತನಕ ಮುಟ್ಟುವ ಸೇವೆಯಾಗಬೇಕು. ಮಗುವಿನ ಮೊದಲಿನ ಐದು ವರ್ಷಗಳು ಅತಿ ಮಹತ್ತ್ವವಾದವುಗಳು.

ಈ ಅವಧಿಯಲ್ಲಿ ತಾಯಿಯೇ ಪೋಷಿಚಾರಕಳಾಗಿದ್ದರೆ ಮಗುವಿನ ಬೆಳವಣಿಗೆಯಲ್ಲಿ ತೊಂದರೆ ಕಡಿಮೆ. ಉದ್ಯೋಗದಲ್ಲಿರುವ ತಾಯಿಯು ಮಗುವಿನ ಆರೈಕೆ ಮಾಡುವ ವ್ಯಕ್ತಿಯ ಸಂಬಂಧ ಮಗುವಿನ ಬೆಳವಣಿಗೆಯಲ್ಲಿ ಅತಿ ಮುಖ್ಯವಾದುದು. ಆದರೆ ತಜ್ಞರ ಅಭಿಪ್ರಾಯದ ಮೇರೆಗೆ ಕೇವಲ ತಾಯಿ ಇಲ್ಲವೆ ತಾಯಿಯಷ್ಟೇ ಮಹತ್ವದ ಪಾತ್ರವನ್ನು ವಹಿಸಬಲ್ಲ ವ್ಯಕ್ತಿ ಮಾತ್ರ ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಸೂಕ್ತ ಪಾತ್ರ ವಹಿಸಬಲ್ಲದು. ಸರಿಯಾದ ವ್ಯಕ್ತಿಯ ಸಹಾಯ ದೊರೆಯದ ಕಾರಣದಿಂದ ಈ ವಯಸ್ಸಿನ ಮಕ್ಕಳ ತಾಯಂದಿರು ಮಗು ಶಾಲೆಗೆ ಹೋಗುವತನಕ ಯಾವ ಉದ್ಯೋಗವನ್ನು ಅರಸಿ ಹೋಗುವುದಿಲ್ಲ.

ಹೀಗೆ ಮಕ್ಕಳ ಕ್ಷೇಮಕ್ಕಾಗಿ ತಾಯಿಯು ಪ್ರಾರಂಭದಲ್ಲಿ ಕೆಲವು ಭೌತಿಕ ಸುಖ ಸಂತೋಷಗಳನ್ನು ತ್ಯಾಗ ಮಾಡುತ್ತಾಳೆ. ಇದರಿಂದ ಭವಿಷ್ಯದಲ್ಲಿ ಉತ್ತಮ ಗುಣ ಮಟ್ಟದ ಒಳ್ಳೆಯ ಹೊಂದಾಣಿಕೆ ಸ್ವಭಾವದ ಮಕ್ಕಳು ಒಳ್ಳೆಯ ಸಂಸ್ಕಾರವುಳ್ಳ ನಾಗರಿಕರಾಗುವರು. ಈ ಪುರಸ್ಕಾರಯುಕ್ತ ಕಾರ್ಯದಲ್ಲಿ ಪಾಲ್ಗೊಂಡ ಸಮಾಧಾನ ವಲ್ಲದೇ ತನ್ನ ಮಗು ಯಾವ ಕೊರತೆಯಿಂದ ಬೆಳೆಯಲಿಲ್ಲ, ಎಂಬ ಅಪರಾಧ ಭಾವನೆಯೂ ಇಲ್ಲದಾಗುವುದು. "ಒಬ್ಬ ಜಟ್ಟಿ ಒಂದು ಗುಂಪು ಜಟ್ಟಿಗಳನ್ನು ತಯಾರು ಮಾಡುವ" ಎಂಬ ಹೇಳಿಕೆ ಒಬ್ಬ ಉತ್ತಮ ಗುಣಮಟ್ಟದ ತಾಯಿಯ ಜಾಗೃತ ಆಶ್ರಯದಲ್ಲಿ ಅನೇಕ ಉತ್ತಮ ನಾಗರಿಕರು ಬೆಳೆಯುವರು ಎಂದು ಹೇಳುವುದು ಉಚಿತವೆನಿಸಿದೆ.

ವೃದ್ಧ ದಂಪತಿಗಳ ಹೆಮ್ಮೆಯ ಸಾಧನೆ :

ಮೊದಲಿನಿಂದಲೂ ಒಳ್ಳೆಯ ಸಂಸ್ಕಾರದಲ್ಲಿ ಬೆಳೆದು ದೊಡ್ಡವರಾದ ಮಕ್ಕಳನ್ನು ಪಡೆದ ತಂದೆ ತಾಯಂದಿರಿಗೆ ಇದಕ್ಕಿಂತ ಹೆಚ್ಚಿನ ಸಮಾಧಾನ ಬೇರೊಂದಿಲ್ಲ. ಹಾಗು ಇದೊಂದು ಹೆಮ್ಮೆಯ ಸಾಧನೆಯೂ ಅಹುದು. ಇಂತಹ ಸಾಧನೆಯ ಎದುರು ಬೇರಾವ ಸಾಧನೆಯೂ ಸರಿದೂಗಲಾರದು. ವೃದ್ಧಾಪ್ಯದಲ್ಲಿ ಬರುವ ಅನೇಕ ಸಮಸ್ಯೆ ಗಳಲ್ಲಿ ಮುಕ್ಕಾಲುಪಾಲು ಮಕ್ಕಳು ತಮ್ಮ ಉದ್ಯೋಗ, ಕುಟುಂಬಗಳಲ್ಲಿ ಹೊಂದಿ ಕೊಳ್ಳುವ ಬಗೆಗೆ ಇರುವುದು ಮುಂದೆ ಇಂಥ ಅನೇಕ ಸಮಸ್ಯೆಗಳು ಬಾರದಂತೆ ಚಿಕ್ಕವ ರಿರುವಾಗಲೇ ಒಳ್ಳೆಯ ಯೋಜನೆಯಲ್ಲಿ ಮಕ್ಕಳನ್ನು ಬೆಳೆಸಿದರೆ, ತಂದೆ ಮಕ್ಕಳ ಸಮಸ್ಯೆಗಳು ದೂರಾಗುವುವು.

ಇಂದಿನ ನಾಗರಿಕತೆಯ ಅವಶ್ಯಕತೆ ಅನುಕರಣೆ, ಅವಕಾಶಗಳಿಂದ. ತಾಯಿಯು ಹಣ ಸಂಪಾದನೆಗೆ ಹೊರಗೆ ದುಡಿಯುವುದು ಅವಶ್ಯಕವೆನಿಸಿದೆ. ತಾಯಿಯ ಬದಲು ಯಾರಾದರೂ ಯೋಗ್ಯವ್ಯಕ್ತಿ ಇಲ್ಲವೆ ಸಂಘ ಸಂಸ್ಥೆ, ಒಳ್ಳೆಯ ಮಧ್ಯಸ್ಥಿಕೆ ವಹಿಸಬೇಕಾಗು ತ್ತದೆ. ಒಳ್ಳೆಯ ವ್ಯಕ್ತಿ ಸಿಕ್ಕುವುದು ಬಹಳ ದುರ್ಲಭ. ದೊಡ್ಡ ದೊಡ್ಡ ಶಹರಗಳಲ್ಲಿ

ಶಿಶುಸಂಗೋಪನಾ ಕೇಂದ್ರಗಳು, ಬಾಲವಾಡಿಗಳು, ಹಗಲು ಶಾಲೆಗಳು ಸಮರ್ಥವಾಗಿ ಕೆಲಸಮಾಡುತ್ತವೆ. ಇಂತಹ ಸಹಾಯ ಬರೀ ದೊಡ್ಡ ಶಹರುಗಳಿಗೆ ಮೀಸಲು. ಇಂತಹ ಅವಕಾಶದ ಸ್ಥಳಗಳಲ್ಲಿ ನೆರೆಹೊರೆಯವರು, ಸಂಬಂಧಿಕರು, ಸೇವಕರು ಮಗುವನ್ನು ನೋಡಿಕೊಳ್ಳುವರು. ಆದರೆ ತಾಯಿಗೆ ಹಾಗು ಮಗುವಿನ ತಂದೆಗೆ ಇವುಗಳಲ್ಲಿ ಅಷ್ಟೊಂದು ವಿಶ್ವಾಸ ಸಮಾಧಾನವಿಲ್ಲ. ಕೆಲಸದಲ್ಲಿದ್ದ ಗಂಡ ಹೆಂಡತಿಗೆ ಮಗುವಿನ ಈ ಅವಸ್ಥೆ ಅವ್ಯವಸ್ಥೆಯಾದಲ್ಲಿ ಚಿಂತಾಜನಕವಾಗಿದೆ. "ತಾಯಿಯ ಗೈರಹಾಜರಿಯಲ್ಲಿ ಮಗು ಅಲಕ್ಷಿಸಲ್ಪಡುವುದು" ಎಂದು ಅನೇಕ ಜನ ಗಂಡಂದಿರ ಅಭಿಪ್ರಾಯವಿದೆ. ಇದೇ ಕಾರಣಕ್ಕಾಗಿ ಅನೇಕ ಜನ ತಾಯಂದಿರು ಕೆಲಸಕ್ಕೆ ರಾಜೀನಾಮೆ ಇಲ್ಲವೆ ಅರ್ಧಕಾಲಿಕ, ತಾತ್ಪೂರ್ತಿಕ ಕೆಲಸಮಾಡುವ ಉದಾಹರಣೆಗಳಿವೆ.

ಆರ್ಥಿಕವಾಗಿ ಅನುಕೂಲವಿಲ್ಲದ ಗಂಡಂದಿರು, ಹೆಂಡತಿಯ ಉದ್ಯೋಗವನ್ನು ಸೈರಿಸಲು ಕಾರಣಗಳಿವೆ. ಆದರೆ ಆರ್ಥಿಕ ಸ್ಥಿತಿ ಚೆನ್ನಾಗಿದ್ದು, ಮಕ್ಕಳನ್ನು, ಮನೆಯನ್ನು ಅಲಕ್ಷಿಸಿ ಹೆಂಡತಿಯು ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಸ್ಥಿತಿ, ಗಂಡನಲ್ಲಿ ಅತೃಪ್ತಿಯನ್ನು ತರುವುದು. ವೈವಾಹಿಕ ಜೀವನದಲ್ಲಿ ಬರುವ ವಿರಸ ಪ್ರಸಂಗಗಳಿಂದ ಮಕ್ಕಳು ಮನಸ್ಸಿನ ಮೇಲೆ ಅನುಚಿತ ಪರಿಣಾಮವಾಗುವುದು. ಗಂಡ ಹೆಂಡತಿಯರ ಬೇಕು ಬೇಡಗಳ ದ್ವಂದ್ವ ಮತಗಳಲ್ಲಿ, ದಂಪತಿಗಳು ಬೇರೆಯಾಗುವುದು. ಬೇರೆ ಬೇರೆ ಗೃಹಗಳಲ್ಲಿ ವಾಸಿಸುವುದು, ಒಬ್ಬರಿಗೆ ವರ್ಗವಾದರೆ ಇನ್ನೊಬ್ಬರು ಆ ಊರಿಗೆ ವರ್ಗ ಬೇಡದೇ ಓಂದುಳಿಯುವುದು, ಮುಂತಾದ ವಿರಸ ಪ್ರಸಂಗಗಳು ಮಗುವಿನ ಜೀವನದಲ್ಲಿ ಕಹಿಪ್ರಸಂಗಗಳಾಗಿವೆ.

ಅವಿಭಕ್ತ ಕುಟುಂಬದಲ್ಲಿರುವ ಆಶೆ:

ಉತ್ತಮ ಶಿಕ್ಷಣ ಹೊಂದಿದ ತಾಯಂದಿರು ಸ್ವತಂತ್ರ ಪ್ರವೃತ್ತಿಯವರಾಗಿದ್ದರೂ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಈ ಕೆಲಸವನ್ನು ಚಿಕ್ಕ ಕುಟುಂಬದಿಂದ ನಿರ್ವಹಿಸಲಾಗುವುದಿಲ್ಲ. ಹಾಗು ಯೋಗ್ಯ ತರಬೇತಿ ಪಡೆದ ಸಂಸ್ಥೆಗಳ ಸಹಾಯವು ದೊಡ್ಡ ದೊಡ್ಡ ಶಹರಗಳಿಗಷ್ಟೇ ಮೀಸಲು. ಸಣ್ಣ ಸಣ್ಣ ಪಟ್ಟಣಗಳಲ್ಲಿ ಇಂಥ ಸಂಸ್ಥೆಗಳ ಸಹಾಯದ ಕೊರತೆಯನ್ನು ನೀಗಿಸಲು ತಮ್ಮ ಸಹಾಯಕ್ಕೆ ಸಂಬಂಧಿಕರ ಇಲ್ಲವೆ ಸೇವಕರ ಸಹಾಯ ತೆಗೆದುಕೊಳ್ಳುವುದು. ಹೆಚ್ಚಾಗಿ ಮಗು ಚಿಕ್ಕದಿದ್ದಾಗ ಸಂಬಂಧಿಕರ ಮೇಲೆ ಅವಲಂಬಿತರಾಗಿರುವ ಇವರು ಬರಬರುತ್ತ ಸೇವಕರ ಸಹಾಯವನ್ನು ಬಯಸುತ್ತಾರೆ.

ಈ ವಿಷಯದಲ್ಲಿ ಗಂಡಹೆಂಡತಿ ಇಬ್ಬರೂ ಒಂದೇ ಅಭಿಪ್ರಾಯಪಡುತ್ತಾರೆ. ಒಂದು ವರ್ಷದಿಂದ ಐದು ವರ್ಷದ ಒಳಗಿನ ಮಗುವಿನ ರಕ್ಷಣೆಗೆ ಬಹುತೇಕ ತಮಗೆ ಅನುಕೂಲರಾದ ಸಂಬಂಧಿಕರ, ತನ್ನ ಅತ್ತೆ, ನಾದಿನಿ, ತಾಯಿ, ಅಕ್ಕತಂಗಿಯರು ಇಲ್ಲವೆ ಓರಿಯ ಹೆಣ್ಣು ಮಕ್ಕಳ ಸಹಾಯದಿಂದ ಮಗುವಿನ ರಕ್ಷಣೆ ಹಾಗು ಮನೆಯ ಜವಾಬ್ದಾರಿ

ಯನ್ನೂ ವಹಿಸಿಕೊಟ್ಟು ತಮ್ಮ ಮೇಲ್ವಿಚಾರಣೆಯಲ್ಲಿ ನಡೆಸುವುದು ಕಂಡು ಬರುತ್ತದೆ. ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದ ಕುಟುಂಬಗಳಲ್ಲಿ ಮಗುವಿನ ಹಾಗೂ ಕುಟುಂಬದ ಜವಾಬ್ದಾರಿ ವಹಿಸಲು ಸಂಬಂಧಿಕರು. ಸೇವಕರು. ಯಾಂತ್ರಿಕ ಸಲಕರಣೆ ಎಲ್ಲದರ ಸಹಾಯದಿಂದ ಸಮಸ್ಯೆಯನ್ನು ಹಗುರು ಮಾಡಿಕೊಳ್ಳುವರು.

ಹಿಂದೂ ಸಂಪ್ರದಾಯದಂತೆ ಮಗಳ ಮೊದಲನೆಯ ಹೆರಿಗೆ ತಾಯಿಯ ಮನೆಯಲ್ಲೇ ಆಗುತ್ತದೆ. ಅನುಕೂಲಸ್ಥರು ಎರಡನೆಯ ಹೆರಿಗೆಯನ್ನೂ ಮಾಡಿಸುತ್ತಾರೆ. ಹೆರಿಗೆಯ ನಂತರ ಕನಿಷ್ಠ ಮೂರರಿಂದ ಐದು ತಿಂಗಳು ತಾಯಿಯ ಮನೆಯಲ್ಲಿದ್ದ ಮಗುವಿನ ಹಾಗೂ ತಮ್ಮ ಆರೋಗ್ಯದ ಭಾರ ಹಿರಿಯರ ಅನುಭವದ ಸೇವೆಯಲ್ಲಿ ಸಾಂಗವಾಗಿ ನಡೆಯುವದು. ಈ ಪದ್ಧತಿಯು ಸಂಪೂರ್ಣಲಾಭ ಉದ್ಯೋಗದಲ್ಲಿರುವ ತಾಯಿಗೆ ಮಗು ಹುಟ್ಟುವ ಪೂರ್ವದಲ್ಲಿ ಹಾಗು ಪ್ರಸೂತಿಯ ನಂತರ ಮೂರು ತಿಂಗಳ ಮಟ್ಟಿಗಾದರೂ ವಿಶ್ರಾಂತಿ, ಹಿರಿಯರ ಅನುಭವಿಕ ಸಹಾಯದ ಅವಶ್ಯಕತೆಯಿರುವುದು. ಆದರೆ ಇಂತಹ ಸಹಾಯ ಸಿಕ್ಕುವುದು ಕಡಿಮೆ.

ಮುಖ್ಯವಾಗಿ ತಾಯಂದಿರಿಗೆ ಮಗುವಿನ ಮೊದಲು ಐದು ವರ್ಷದ ಒಳಗಿನ ಅವಧಿಯಲ್ಲಿ ಯಾರೂ ನೋಡಿಕೊಳ್ಳಲು ಇರದ ಪ್ರಸಂಗದಲ್ಲಿ ಕಷ್ಟ ಅನುಭವಿಸ ಬೇಕಾಗುವುದು. ತಾಯಿಗೂ ಮಗುವಿಗೂ ತೊಂದರೆ. ಸಮಸ್ಯೆಗಳಿರುವುದು ಇದೇ ಅವಸ್ಥೆ ಯಲ್ಲಿ ವಿಶ್ವಾಸಿಕ ಸೇವಕರು, ಪ್ರೇಮದಿಂದ ತಮ್ಮದೇ ಮನೆಯೆಂದು ತಿಳಿದು ಬಂದು ಇರುವ ಸಂಬಂಧಿಕರು ಸಿಕ್ಕುವುದಿಲ್ಲ. ಈ ಅವಸ್ಥೆ ತಾಯಿಯ ಹಾಗು ಮಗುವಿನ ಚಿಂತಾಜನಕ ಸ್ಥಿತಿಯಾಗಿದೆ.

ನಮ್ಮ ದೇಶದಲ್ಲಿ ಹಗಲಿನಲ್ಲಿ ಮಗುವನ್ನು ನೋಡಿಕೊಳ್ಳುವ ಶಾಲೆಗಳ ಕೊರತೆ ಯಿದೆ. ಮಗು ಹುಟ್ಟಿದಾಗಿನಿಂದ ಐದು ವರ್ಷವಾಗುವತನಕ ನೋಡಿಕೊಂಡು ಹೋಗಲು ಉತ್ತಮ ತರಗತಿಯ ಸಹಾಯ ನೀಡುವ ವಿಶೇಷ ತರಬೇತಿ ಪಡೆದ ದಾದಿ, ವೈದ್ಯ, ಶಿಶುಸಂಗೋಪನಾ ತಜ್ಞ, ಶಿಶು ಮನೋವಿಜ್ಞಾನಿ, ಇವರುಗಳಿಂದ ಕೂಡಿದ ಒಂದು ತಜ್ಞರ ಗುಂಪು ಇಲ್ಲವೆ ಸಂಸ್ಥೆಯ ಸಹಾಯ ಪ್ರತಿಜಿಲ್ಲೆಗೊಂದು ಇರಬೇಕು. ಇವರ ಸಹಾಯ ಸದಾಕಾಲ ಲಭಿಸಬೇಕು. ಇಂಥ ತಾಯಿ ಮಕ್ಕಳ ಕಲ್ಯಾಣ ಕೇಂದ್ರ ಗಳಿಂದ ತಾಯಂದಿರು ಯಾವುದೇ ಪ್ರಸಂಗದಲ್ಲಿ ತಮ್ಮ ಉದ್ಯೋಗವನ್ನು ಬಿಟ್ಟು ಕೊಡಲಾರದೇ ಉಳಿದ ಇನ್ನಿತರರಿಗೂ ಉತ್ತೇಜನಕಾರಿ ಸಂಸ್ಥೆಯಾಗಿ ಪರಿಣಮಿಸು ವುದು.

ಐದು ವರ್ಷದ ಒಳಗಿನ ಎಲ್ಲ ಮಕ್ಕಳು ಅನುಭವಿಸುವ ಸಮಸ್ಯೆಗಳನ್ನು ಉದ್ಯೋಗಸ್ಥ ಮಹಿಳೆಯ ಮಗುವು ಅನುಭವಿಸುವುದೇ ? ಎಂಬುದು ತಿಳಿಯಬೇಕಾದ

ನಿಜವು. ಮಕ್ಕಳನ್ನು ಬೆಳೆಸುವುದು ತಂದೆ ತಾಯಿಯರ ಮುಖ್ಯ ಕರ್ತವ್ಯವಾದರೂ ಮಗುವಿನ ಬೆಳವಣಿಗೆಯಲ್ಲಿ ಅನೇಕ ಜನರ, ಬೇಕು ಬೇಡಾದವರ ಪಾತ್ರವು ಬಂದು ಹೋಗುವುದು. ಆದರೂ ಇದರೆಲ್ಲರಿಗಿಂತ ತಾಯಿಯದು ಪ್ರಮುಖ ಪಾತ್ರ ಹಾಗು ಜವಾಬ್ದಾರಿಯದೂ ಆಗಿದೆ. ಒಳ್ಳೆಯ ಶಿಕ್ಷಣ, ಶಿಸ್ತಿನಲಿ ಹಾಗು ತಿಳಿವಳಿಕೆಯುಳ್ಳ ತಾಯಿ ಜಾಗರೂಕತೆಯಿಂದ ಪೋಷಿಸಿದ ಮಗು ಯಾವ ತೊಂದರೆಯಿಲ್ಲದೇ ಪರಿಪೂರ್ಣ ಬೆಳವಣಿಗೆ ಹೊಂದುವುದು. ಸಾಮಾನ್ಯವಾಗಿ ಮಗು ಒಂದು ವರ್ಷದ್ದಾಗುವವರೆಗೆ ತಾಯಿಯ ಹಾಲು, ಮೇಲ್ವಿಚಾರಣೆಯಲ್ಲಿ ಬೆಳೆಯುವುದು, ಹೊತ್ತು ಹೊತ್ತಿಗೆ ಆಹಾರ. ಸ್ನಾನ, ನಿದ್ರೆ ಮುಂತಾದವು ಸಕಾಲಕ್ಕೆ ನಡೆಯುವವುವು. ಆದರೆ ಮಗುವಿನ ಎರಡನೆಯ ವರ್ಷ ಪ್ರಾರಂಭವಾಗುತ್ತಲೆ "ಮಗು ಬೆಳೆಯಿತು" ಎಂಬ ಭಾವನೆಯಿಂದ ಅನಾದರಣೆಯ ವರ್ಷಗಳು ಶುರುವಾದವು ಎಂದು ಹೇಳುವುದು ವಾಡಿಕೆ. ತಾಯಿಯು ಎಚ್ಚರಿಕೆ ವಹಿಸುವದರಲ್ಲಿ ಅಷ್ಟೊಂದು ಮೊದಲಿನ ಎಚ್ಚರಿಕೆ ಉಳಿಯುವುದಿಲ್ಲ. ಮಗು ಕಂಡಕಂಡದ್ದನ್ನೆಲ್ಲ ಬಾಯಿಗೆ ಸೇರಿಸುವದು; ಬೆಂಕಿ, ನೀರು ಭೇದವಿಲ್ಲದೆ ಮುಟ್ಟುವುದು, ಕೈಗೆ ಕಂಡದ್ದನ್ನು ಎಳೆಯುವುದು, ಚೆಲ್ಲುವುದು, ಕತ್ತಿ, ಚಾಕು, ಬ್ಲೇಡು, ಹೊಲಿಗೆಯಂತ್ರ ಮುಂತಾದವುಗಳನ್ನು ಮುಟ್ಟಿನೋಡುವುದು. ಈ ಅವಸ್ಥೆಯಲ್ಲಿ ಮನೆಯಲ್ಲೇ ಇದ್ದುಕೊಂಡಿರುವ ತಾಯಿಗೂ ಮಗುವನ್ನು ಹಿಡಿದುಕೊಂಡಿರುವುದು ದೊಡ್ಡ ಸಾಹಸದ ಮಾತೇ ಸರಿ.

ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು :

ನಮ್ಮ ಇಂದಿನ ಸ್ವಭಾವ, ರೀತಿ ನೀತಿ, ಬೇಕು–ಬೇಡಗಳು ನಮ್ಮ ಬಾಲ್ಯದ ಬೆಳವಣಿಗೆಯ ಬಗೆಯನ್ನು ವಾತಾವರಣವನ್ನು ಸೂಚಿಸುತ್ತವೆ. ನಾವಿದ್ದಂತೆ ನಮ್ಮ ಅಭ್ಯಾಸಗಳು. ಆದ್ದರಿಂದ ಮಕ್ಕಳು ಚಿಕ್ಕವರಿರುವಾಗಲೇ ಒಳ್ಳೆಯ ಅಭ್ಯಾಸಗಳನ್ನು ರೂಢಿಸಬೇಕು. ಈ ಕೆಲಸವು ಮಗುವಿನ ಒಂದು ವರ್ಷ ಕಳೆಯುತ್ತಲೂ ಆರಂಭವಾಗಿ ಸಾಮಾನ್ಯವಾಗಿ ಐದು ಆರು ವರ್ಷಗಳ ಅವಧಿ ಯೋಗ್ಯಕಾಲವು. ಟೈಪನ್ನು, ಪಿಯಾನೋ ಮುಂತಾದವುಗಳನ್ನು ಅಭ್ಯಾಸಮಾಡಿ ಸಹಜವಾಗಿ ಕಲಿಯುವಂತೆ ನಮಗೆ ಗೊತ್ತಿರದೇ ಮಗು ಒಳ್ಳೆಯ ಹಾಗು ಕೆಡುಕು ಅಭ್ಯಾಸಗಳನ್ನು ಕಲಿತುಕೊಳ್ಳುವುದು. ಅದು ನಮ್ಮ ಶರೀರ ರಚನೆ, ಹಾಗು ಮಾನಸಿಕ ಸ್ಥಿತಿ ಎಷ್ಟೊಂದು ವಿಚಿತ್ರವೆಂದರೆ, ಎಂಥಹ ಕಷ್ಟಮಯ ಕೆಲಸವನ್ನು ಸುಲಭವಾಗಿ ಸಾಧನೆಯಿಂದ, ಅಭ್ಯಾಸ ಬಲದಿಂದ ಯಾವ ತೊಂದರೆಯಿಲ್ಲದೆ ಕಲಿತುಕೊಳ್ಳಬಹುದು. ಅದರಂತೆ ವ್ಯಕ್ತಿಯ ಹಾಗೂ ಸಮಾಜಕ್ಕೆ ಹಾನಿಕಾರಕ ದುರಭ್ಯಾಸಗಳು ಚಿಕ್ಕವರಿರುವಾಗಲೇ ನಮಗೆ ಅರಿವಿಲ್ಲದಂತೆ ಅಂಟಿಕೊಳ್ಳುವವು. ಆದ್ದರಿಂದ ಮಗುವಿನ ಊಟಮಾಡುವ, ಮಲಗುವ, ಬೇಗನೇ ಏಳುವ, ಚೆನ್ನಾಗಿ ಮಾತನಾಡುವ, ಒಳ್ಳೆಯ ಅಭಿರುಚಿಗಳ ಸಂವರ್ಧನೆ, ಒಳ್ಳೆಯ ನಡವಳಿಕೆ, ಸೌಜನ್ಯತೆ, ಸಮಯ ಪರಿಪಾಲನೆ, ನಮ್ರತೆ ಮತ್ತು ಸಂತೋಷದಿಂದಿರುವ

ಅನೇಕ ಒಳ್ಳೆಯ ಅಭ್ಯಾಸಗಳನ್ನು ಒಳ್ಳೆಯ ನುರಿತ ಪಾಲಕರ ನಿರ್ದೇಶನದಲ್ಲಿ ಮಕ್ಕಳು ಬೆಳೆಸಿಕೊಳ್ಳುವರು. ಮಗು ಕುಟುಂಬದ ಜನರ ಮಧ್ಯ ಇದ್ದು ಇದನ್ನೆಲ್ಲವನ್ನು ರೂಢಿಸಿಕೊಳ್ಳಬೇಕಾಗುವದು. ತಾಯಿ ಈ ಕೆಲಸವನ್ನು ಬೇಜಾರುಪಟ್ಟುಕೊಳ್ಳದೇ ನಿರಂತರವಾಗಿ ಕನಿಷ್ಠ ಐದು ವರ್ಷದ ಮಟ್ಟಿಗಾದರೂ ಮಾಡಬೇಕಾಗುವುದು.

ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದರಿಂದ ಭಾವೀ ಜೀವನದಲ್ಲಿ ಅನ್ಯಥಾ ತೊಂದರೆಗಳು ಬಾರದೆ ನಿತ್ಯ ಜೀವನವು ಸುಗುಮವಾಗುವುದು. ಇಲ್ಲವಾದರೆ ಮಗು ದಾರಿ ತಪ್ಪಿ, ತಪ್ಪು ಅಭ್ಯಾಸಗಳನ್ನು ರೂಢಿಸಿಕೊಂಡು ಜೀವನಪರ್ಯಂತ ಪರಿತಪಿಸ ಬೇಕಾಗುವುದು. ಈ ಕಾರ್ಯವನ್ನು ಒಳ್ಳೆಯ ಪರಿಜ್ಞಾನವಿದ್ದ ತಾಯಿ ಮಾತ್ರ ಮಾಡಬಲ್ಲಳು. ಇಂತಹ ಒಳ್ಳೆಯ ಅವಕಾಶವನ್ನು ಅಜ್ಞಾನಿ ತಾಯಿ ಸದಾಕಾಲ ಮನೆಯಲ್ಲಿಯೇ ಇದ್ದರೂ ತನ್ನ ಮಗುವಿಗೆ ಕಲ್ಪಿಸಿಕೊಡಲು ಸಾಧ್ಯವಾಗುವುದಿಲ್ಲ. ಮನೆಯಲ್ಲಿ ಆಳು, ಯಾಂತ್ರಿಕ ಸಲಕರಣೆಗಳ ಸಹಾಯ ಎಲ್ಲ ಅನುಕೂಲತೆಗಳಿದ್ದರೂ ಅದನ್ನು ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯ ತಾಯಿಗೆ ಬೇಕು. ಒಳ್ಳೆಯ ಅಭ್ಯಾಸ ಗಳನ್ನು ರೂಢಿಸುವುದಕ್ಕೂ ಶೈಕ್ಷಣಿಕ ಹಿನ್ನೆಲೆ ಅವಶ್ಯವಾಗಿದೆ. ಉದಾ: ತಿನ್ನುಣ್ಣುವ ಅಭ್ಯಾಸವನ್ನು ಮೊದಲನೆಯ ವರ್ಷದ ಮಟ್ಟಿಗೆ ನಿರ್ವಹಿಸಿದ ನಂತರ ಕೈಬಿಟ್ಟರೆ, ಇದರ ಪ್ರಯೋಜನ ಮಗುವಿಗೆ ಆಗುವುದಿಲ್ಲ. ಇದು ಮುಂದಿನ ಜೀವನದಲ್ಲೂ ನಿರಂತರವಾಗಿ ಸಾಗಬೇಕು. ಸಮತೋಲ, ಸರಿಯಾದ ಪೌಷ್ಟಿಕ ಆಹಾರದ ಕೊರತೆಯಿಂದ ಮಗುವಿಗೆ ನಾನಾ ತರಹದ ರೋಗಗಳು ರಕ್ತ ಹೀನತೆ, ಶಕ್ತಿ ಹೀನತೆ, ಡಾಯೇರಿಯಾ, ಮಲಬದ್ಧತೆ ಹೊಟ್ಟೆನೋವು, ಜ್ವರ ಮುಂತಾದ ಅನೇಕ ರೋಗಗಳು ಹುಟ್ಟಿಕೊಳ್ಳುತ್ತವೆ. ಮಕ್ಕಳ ಅನೇಕ ರೋಗಗಳು ಆಹಾರ ಸೇವನೆಯಿಂದಲೇ ಪ್ರಾರಂಭವಾಗುತ್ತವೆ. "ಊಟ ಬಲ್ಲವ ರೋಗ ಅರಿಯ" ಎಂಬ ಹೇಳಿಕೆಯೂ ಇದೆ, ಇವು ಕೇವಲ ಉದ್ಯೋಗಸ್ಥ ತಾಯಿಯ ಸಮಸ್ಯೆಗಳಾಗಿರದೇ ಸಾಮಾನ್ಯವಾಗಿ ಎಲ್ಲ ಮಕ್ಕಳಿಗೂ ಅನ್ವಯಿಸುವಂತಹವು. ಊಟ ಮಾಡುವುದರಲ್ಲಿ ದಾರಿ ತಪ್ಪಿದ ಮಗು ಬೆಳೆದು ದೊಡ್ಡದಾಗುತ್ತಿದ್ದಂತೆ, ಎರಡು ಬಗೆಯ ನ್ಯೂನತೆಯಿಂದ ಬಳಲುವುದು. ಮೊದಲನೆ ಯದು. ಭಾವೀಜೀವನದ ಹೊಸ ಪಾತ್ರ ನಿರ್ವಹಣೆ ಹೊಂದಾಣಿಕೆ ಮರು ಹೊಂದಾಣಿಕೆ ಮಾಡಿಕೊಳ್ಳುತ್ತ ಸಹಜವಾಗಿ ಎಲ್ಲರೂ ಹೊಂದಿಕೊಳ್ಳುವ ಪ್ರಸಂಗಗಳಲ್ಲಿ ಅತಿ ಕಷ್ಟದಿಂದ ಹೊಂದಿಕೊಳ್ಳಲು ಪ್ರಯತ್ನಿಸುವುದು. ಅನೇಕಸಲ ಇದರಲ್ಲಿ ರೂಢಿಸಿಕೊಳ್ಳುವ ಮಗು ಈ ಕಷ್ಟದಿಂದ ಪಾರಾಗಬಹುದಿತ್ತು.

ತಾಳ್ಮೆಗೆಟ್ಟ ತಂದೆ ತಾಯಿಗಳು:

ಮಗು ತನ್ನ ಗೃಹ ವಾತಾವರಣವನ್ನು ಪ್ರತಿಬಿಂಬಿಸುತ್ತದೆ, ಎಂಬ ಮಾತು ಸತ್ಯ. ಸಮಾಧಾನ. ತಾಳ್ಮೆಯಿಂದ ಇರುವ ತಂದೆ ತಾಯಿಯರ ಮಗುವು ಅನಾಯಾಸವಾಗಿ.

ಸಹಜವಾಗಿ ಈ ಅಭ್ಯಾಸವನ್ನು ಮೈಗೂಡಿಸಿಕೊಳ್ಳುವುದು. ಸಿಟ್ಟು, ಸೆಡಕು. ಜರಿಯುವುದು, ಟೀಕಿಸುವುದು, ತಪ್ಪು ಹುಡುಕಿ ತೆಗೆಯುವುದು, ತಮ್ಮ ಅನೇಕ ಈಡೇರದ ಆಕಾಂಕ್ಷೆಗಳನ್ನು ಮಕ್ಕಳಲ್ಲಿ ಕಂಡುಕೊಳ್ಳುವ ಹಂಬಲ, ಆತುರದಿಂದ ಮಕ್ಕಳ ಮೇಲೆ ಒತ್ತಾಯವಾಗಿ ಹೇರುವಂಥ ತಂದೆ ತಾಯಿಯರ ಮಧ್ಯ ಮಗು ಸಿಕ್ಕು ಮಾನಸಿಕವಾಗಿ ಘಾಸಿಗೊಳ್ಳುವುದು. ಆಶ್ವಾಸನೆ ಕೊಟ್ಟು ಈಡೇರಿಸದೇ ಹೋದರೆ ಮಕ್ಕಳು ನಿರಾಶೆಗೊಳ್ಳುವರು. ಅಲ್ಲದೆ ಪ್ರಾಮಾಣಿಕತೆಯಲ್ಲಿ, ನಿಷ್ಠೆಯಲ್ಲಿ ನಂಬಿಕೆ ಕಳೆದುಕೊಂಡು ಸುಳ್ಳು ಹೇಳುವ, ಮೋಸ ಮಾಡುವ, ಹಣವನ್ನು ಕದಿಯುವ ಮುಂತಾದ ಅನೇಕ ದುರಭ್ಯಾಸಗಳು ಗಂಟು ಬೀಳುವುವು.

ಮಗುವಿನ ಸಂರಕ್ಷಣೆ ತಾಯಿಯ ಆತ್ಮಗತ ಹಾಗೂ ಅಂತರ್ಗತ ಕರ್ತವ್ಯ:

ತಾಯಿ ದುಡಿಯಲು ಹೊರಗೆ ಹೋದಾಗ ಅನುಕೂಲವಿದ್ದ ಕುಟುಂಬಗಳಲ್ಲಿ ಮಗುವಿನ ಜವಾಬ್ದಾರಿ ಮತ್ತು ಮನೆಯ ಜವಾಬ್ದಾರಿ ವಹಿಸಲು ಸಂಬಂಧಿಕರು, ಆಳುಗಳು ಇರುತ್ತಾರೆ. ದೊಡ್ಡ ಶಹರಗಳಲ್ಲಿ ಹಗಲು ಶಾಲೆಗಳು ಇದ್ದರೂ ಬಹುಪಾಲು ಮಕ್ಕಳ ಸಂರಕ್ಷಣೆಯ ಕಾರ್ಯವು ತಾಯಿಯ ಕರ್ತವ್ಯವಾಗಿದೆ. ತಾಯಿಯು ಉದ್ಯೋಗದಲ್ಲಿ ಇದ್ದರೂ ಮಗುವಿನ ಸಂರಕ್ಷಣೆಯ ಕರ್ತವ್ಯಗಳಲ್ಲಿ ಹಾಲು ಕುಡಿಸುವುದು, ಸ್ನಾನ ಮಾಡಿಸುವುದು. ಬಟ್ಟೆ ಹಾಕುವುದು, ಔಷಧ ಕುಡಿಸುವುದು ತಾಯಿಯ ಕರ್ತವ್ಯಗಳೇ ಆಗಿವೆ. ತಂದೆಯೂ ಈ ಕೆಲಸದಲ್ಲಿ ಸಹಾಯ ಮಾಡುತ್ತಾನೆ. ಶಾಲೆಗೆ ಕಳಿಸುವುದು, ಕರೆತರುವುದು ಅನುಕೂಲಸ್ಥರ ಮನೆಯಲ್ಲಿ ಆಳುಗಳ ಕೆಲಸವಾದರೆ, ಯಾರೂ ಸಹಾಯಕ್ಕೆ ಇರದ ಮನೆಗಳಲ್ಲಿ ತಂದೆಯ ಇಲ್ಲವೆ ದೊಡ್ಡ ಮಕ್ಕಳ ಕೆಲಸವಾಗಿದೆ. ಮಕ್ಕಳಿಗೆ ಪಾಠ ಹೇಳುವುದು, ಮನೆ ಪಾಠದಲ್ಲಿ ಸಹಾಯ ಇದಕ್ಕಾಗಿ ನಿಯಮಿಸಿಕೊಂಡ ಉಪಾಧ್ಯಾಯರು ಇಲ್ಲವೆ ದೊಡ್ಡ ಮಕ್ಕಳು ಮಾಡುತ್ತಾರೆ. ಎರಡೂಬಗೆಯ ಕೆಲಸದಿಂದ ದಣಿದ ತಾಯಿ ಮಕ್ಕಳ ಅಭ್ಯಾಸದಲ್ಲಿ ಗಮನವಿರಿಸಲು ಸಾಧ್ಯವಾಗುವುದಿಲ್ಲ. ಆದರೂ ಈ ಕೆಲಸವನ್ನು ಅಲಕ್ಷಿಸುವಂತಿಲ್ಲ.

ಇತ್ತೀಚೆಗೆ ಮುಂಬಯಿಯ ಎಸ್.ಎನ್.ಡಿ.ಟಿ. ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದವರು "ವಿಜ್ಞಾನ ವಿಭಾಗದಲ್ಲಿ ಮಹಿಳೆಯರು" ಈ ವಿಷಯದ ಮೇಲಿನ ಸಂಶೋಧನೆಯಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಉದ್ಯೋಗಗಳಲ್ಲಿ ಸ್ತ್ರೀಯರು ಅವಿರತವಾಗಿ ಪರಿಶ್ರಮದಿಂದ ಪಾಲ್ಗೊಳ್ಳಲಾರರು" ಎಂದು ಕಂಡು ಬಂದಿದೆ. ಇಂಥ ಪ್ರಸಂಗಗಳು ಬಂದಾಗ ತಮ್ಮ ಸ್ತ್ರೀ ಸ್ವಭಾವವನ್ನು ಕಡೆಗಣಿಸಲಾರದೆ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಡುವರು ಎಂದು ಕಂಡು ಬಂದಿದೆ. ಈ ಎಲ್ಲ ಆಧಾರಗಳ ಮೇಲಿಂದ

ಉದ್ಯೋಗದಲ್ಲಿರುವ ತಾಯಿ ಯಾವುದೇ ಪ್ರಸಂಗದಲ್ಲಿ ಮನೆ ಮಕ್ಕಳನ್ನು ಅಲಕ್ಷಿಸುವದಿಲ್ಲವೆಂದು ತಿಳಿದಿದೆ.

ತಾಯಂದಿರ ಅತೃಪ್ತಿ:

ಪಾಶ್ಚಿಮಾತ್ಯ ದೇಶದ ಮಹಿಳೆಯರಂತೆ ನಮ್ಮ ದೇಶದ ಮಹಿಳೆಯರು ಶಿಕ್ಷಣ-ಅವಕಾಶ, ಆಸಕ್ತಿಯ ಪ್ರೇರಣೆಯಿಂದ ಮನೆಯ ಹೊರಗಡೆ ಹಣಕ್ಕಾಗಿ, ಒಳ್ಳೆಯ ಶಿಕ್ಷಣದ ಸದುಪಯೋಗಕ್ಕಾಗಿ ಕೆಲಸ ಮಾಡುತ್ತಿರುವರು. ಇದು ಇತ್ತೀಚೆಗೆ ಉಂಟಾದ ಬದಲಾವಣೆ. ವೈಯಕ್ತಿಕ ಮತ್ತು ಸಮಾಜದ ಅಭಿವೃದ್ಧಿಯ ಮಾರ್ಗದತ್ತ ಸಾವಕಾಶವಾಗಿ ಹಾಗೂ ನಿಶ್ಚಿತವಾದ ಹೆಜ್ಜೆಗಳಾಗಿವೆ. ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ಮಹಿಳೆ ಸಂಪೂರ್ಣ ಸ್ವಾತಂತ್ರ್ಯ, ಸಮಾನತೆ, ವೈಯಕ್ತಿಕ ಸುಖ ಇವುಗಳಿಗಾಗಿ ವಿಶೇಷವಾಗಿ ಹಂಬಲಿಸದೆ ಶಾಂತವೂ, ಗಂಭೀರವೂ ಆದ (conflict free) ಪೇಚಾಟ ನಿಂದ ದೂರವಾದ ಶಾಶ್ವತ ಸುಖಕ್ಕಾಗಿ ಪ್ರಯತ್ನಿಸುವಳು. ಕೌಟುಂಬಿಕ ಸುಖ ಶಾಂತಿಗಾಗಿ ತ್ಯಾಗ ಮಾಡುವಳು.

ದೈನಂದಿನ ಹೊಂದಾಣಿಕೆಗಳಲ್ಲಿ ಕೆಲ ಅಡಚಣೆಗಳಿಂದ, ವೇಳೆಯ ಅಭಾವದಿಂದ, ಆಳುಗಳ ಇಲ್ಲವೆ ಸಂಬಂಧಿಕರ ಸಕಾಲಿಕ ಸೇವೆ ದೊರೆಯದ್ದರಿಂದ ನಿತ್ಯದ ಊಟ ಉಪಚಾರ, ರುಚಿ, ಶುಚಿ, ವೈವಿಧ್ಯತೆ, ಸತ್ವಪೂರ್ಣ ಆಹಾರ ಇತ್ಯಾದಿಗಳ ಕೊರತೆ ಕಂಡು ಬಂದಿದೆ. ತಾಯಿಯ ಗೈರುಹಾಜರಿಯಲ್ಲಿ ಮನೆಯ ಸ್ವಚ್ಛತೆ, ಕೆಲಸದ ಬಗೆಗೆ ಅಲಕ್ಷ್ಯತನ, ಅಪನಂಬಿಕೆ, ಆಳುಗಳ ಹಾಗು ಸಂಬಂಧಿಕರ ಬಗೆಗೆ ತಕರಾರು ಇದ್ದೇ ಇದೆ. ವಿಶೇಷವಾಗಿ ಚಿಕ್ಕಮಕ್ಕಳು ಇಂಥವರ ರಕ್ಷಣೆಯಲ್ಲಿ ಅಸಮಾಧಾನ ತರುವಂತಹುದಾಗಿದೆ. ಅನೇಕರ ಅಭಿಪ್ರಾಯದಂತೆ ಮಹಿಳೆ, ವಿವಾಹ, ಮಕ್ಕಳ ಜನನ, ಬೆಳವಣಿಗೆ, ಶಾಲಾ ಜೀವನದ ಮೇಲ್ವಿಚಾರಣೆ, ಇವೆಲ್ಲವುಗಳ ಅವಶ್ಯಕ ಅನಿವಾರ್ಯಗಳ ಮಧ್ಯದಿಂದ ಹೊರ ಬರುವ ಶಕ್ಯತೆ ಕಡಿಮೆಯಾಗಿ, ಇದೊಂದುಬಗೆಯ ಜೇಲಿನಂತೆ ಆಗಿದೆ. We are the prisoners of our children ಎಂಬ ಅಭಿಪ್ರಾಯವಿದೆ. ಈ ತೆರನಾಗಿ ಮಹಿಳೆ ತನ್ನ ಕರುಳುಬಳ್ಳಿಗಳಿಂದ ಬಂಧಿತಳಾಗಿರುವಳು.

ಗಂಡಂದಿರ ತೃಪ್ತಿ :

ಉದ್ಯೋಗಸ್ಥ ಮಹಿಳೆಯರ ಗಂಡಂದಿರ ತೃಪ್ತಿ ಸಮಾಧಾನ ಕರ. ಈ ವಿಷಯದ ಪ್ರಸ್ತಾಪ ಮಾಡುವಾಗ ಪಾಶ್ಚಿಮಾತ್ಯ ದೇಶಗಳಲ್ಲಿ ಗಂಡಂದಿರು ತಮ್ಮ ಹೆಂಡಂದಿರಿಗೆ ಹೊರಗಿನ ಕೆಲಸವನ್ನು ಹಂಚಿಕೊಂಡು ಮಾಡುವಂತೆ ಗೃಹಕಾರ್ಯದಲ್ಲಿ ಸಹಭಾಗಿಗಳು: ಆದರೆ ನಮ್ಮ ದೇಶದಲ್ಲಿಯ ಸಂಪ್ರದಾಯಗಳು, ಪದ್ಧತಿಗಳು ಬೇರೆ. ಪುರುಷಪ್ರಧಾನ ಕುಟುಂಬಪದ್ಧತಿ ಇರುವ ಇಲ್ಲಿ ಪುರುಷನ ಜನನ, ಬೆಳವಣಿಗೆ, ಆಹಾರ, ಬಟ್ಟೆ, ಶಿಕ್ಷಣ,

ವಿವಾಹ, ಉದ್ಯೋಗ, ವೈಯಕ್ತಿಕ ಸುಖ, ಎಲ್ಲದರಲ್ಲೂ ವಿಶೇಷವಾದ ಮಹತ್ತ್ವವಿದೆ. ಪ್ರತಿಯೊಬ್ಬ ಪುರುಷನೂ ತನ್ನ ಕುಟುಂಬಕ್ಕೆ ಮುಖ್ಯ ಅಧಿಕಾರಿಯ ಸ್ಥಾನದಲ್ಲಿರುವನು ಹೆಂಡತಿ ಅವನಿಗೆ ಅನುಕೂಲಗಳಾಗಿರಬೇಕು. ಉದ್ಯೋಗದಲ್ಲಿರದ ಮಹಿಳೆಯರ. ಗಂಡಂದಿರ ಅಭಿಪ್ರಾಯದಲ್ಲಿ, ತಮ್ಮ ಹೆಂಡತಿ ಗೃಹಕಾರ್ಯ ನೋಡಿಕೊಂಡು ಮನೆಯಲ್ಲಿರುವುದು ತೃಪ್ತಿ ಹಾಗು ಸಮಾಧಾನ ತಂದಿದೆ. ಉದ್ಯೋಗಸ್ಥ ತಾಯಿಯ ಕುಟುಂಬಕ್ಕೆ ತಾಯಿಯ ಸೇವೆ ಸದಾಕಾಲ ಸಿಕ್ಕುವುದಿಲ್ಲ. ಮಕ್ಕಳು ಚಿಕ್ಕವರಿದ್ದಾಗ ಅಲಕ್ಷಿಸಲ್ಪಡುವದು ಗಂಡಂದಿರ ಅಸಮಾಧಾನಕ್ಕೆ ಕಾರಣವಾಗಿವೆ. ಆದರೆ ಮನೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು ಮಗುವಿನ ಆರೈಕೆ, ಮನೆಯ ಜವಾಬ್ದಾರಿ ವಹಿಸಿಕೊಂಡು ಹೋಗುವ ಗೃಹಕೃತ್ಯದ. ಮಕ್ಕಳ ಬೆಳವಣಿಗೆ, ಅಭ್ಯಾಸ ಇವುಗಳ ಒಳ್ಳೆಯ ಪರಿಜ್ಞಾನ ವಿರುವ ಹೆಂಡತಿ ಕೆಲಸದಲ್ಲಿ ಇರಲಿ, ಇರದೇ ಇರಲಿ, ಮನೆಯನ್ನು ಸುವ್ಯವಸ್ಥೆಯಿಂದ ಕಾಯ್ದುಕೊಂಡುಹೋಗುವ ಹೆಂಡತಿಯಿಂದ ಹೆಚ್ಚಿನ ಸಮಾಧಾನವಿದೆ. ಆದರೂ ಹಿಂದೂ ಸಂಪ್ರದಾಯದಂತೆ ಮನೆಗೆಲಸವೆಲ್ಲವನ್ನೂ ಹೆಂಡತಿಯೇ ಮಾಡಬೇಕು. ಗಂಡಸರು ಕುಟುಂಬದ ಪೋಷಕರು. ದುಡಿಯುವ ಮುಖ್ಯ ಕೆಲಸದೊಂದಿಗೆ ಹೊರಗಿನ ಕೆಲಸವೆನಿಸಿದ ಕೊಂಡುತರುವುದು, ಮಗುವನ್ನು ನೋಡಿಕೊಳ್ಳುವುದು, ಪಾಠ ಹೇಳು ವುದು. ಕಾಯಿಲೆ ಬಿದ್ದಾಗ ಔಷಧ ತರುವುದು. ಕೈತೋಟ, ಮಕ್ಕಳನ್ನು ಸುತ್ತಾಡಿಸು ವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಆದರೆ ಇವೆಲ್ಲ ಸ್ವಇಚ್ಛಾಪೂರ್ಣ ಕೆಲಸಗಳಾಗಿವೆಯೇ ವಿನಾ ಒತ್ತಾಯಪೂರ್ವಕವಾಗಿಲ್ಲ.

ಕಾಲೇಜು ಶಿಕ್ಷಣ ಪಡೆದು ಸುಧಾರಿಸಿದ ಗಂಡಂದಿರು ಉದ್ಯೋಗದಲ್ಲಿದ್ದ ತಮ್ಮ ಹೆಂಡತಿಗೆ ಅವಶ್ಯಕ ಸಹಾಯಮಾಡುವ ಉದಾಹರಣೆಗಳಿವೆ. ಒಳ್ಳೆಯ ಅಧಿಕಾರದಲ್ಲಿದ್ದ ಗಂಡಂದಿರಿಗೆ ವೇಳೆಯ ಉಳಿತಾಯ. ತಮ್ಮ ಹೆಂಡತಿ ಮಕ್ಕಳೊಂದಿಗೆ ಕೂಡಿಕೊಂಡು ಅವರು ಕಾಲ ಕಳೆಯುತ್ತಾರೆ. ಅನೇಕ ವಿಷಯಗಳಲ್ಲಿ ಒಮ್ಮತದ ಅಭಿಪ್ರಾಯವಿದೆ. ಆದರೆ ಈ ಅವಕಾಶ ಉದ್ಯೋಗದಲ್ಲಿರದ ಮಹಿಳೆಯ ಕುಟುಂಬದಲ್ಲಿ ಅಪರೂಪ.

ಉದ್ಯೋಗಸ್ಥ ತಾಯಿಯ ಮಾರ್ಗದಲ್ಲಿ ಅನೇಕ ಅಡೆತಡೆಗಳಿದ್ದರೂ ಅನೇಕ ತಾಯಂದಿರು ತಮ್ಮ ಉದ್ಯೋಗವನ್ನು ಶಾಂತವಾಗಿ ಮುಂದುವರಿಸಿಕೊಂಡು ಹೋಗು ತ್ತಿದ್ದಾರೆ. ಇದಕ್ಕೆ ಗಂಡಹೆಂಡರ ಮಧ್ಯದ ತಿಳುವಳಿಕೆ. ಸಂಘ ಸಂಸ್ಥೆಗಳ ಸಹಾಯ ಎಲ್ಲವೂ ಕಾರಣಗಳಿವೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಈ ದಿಶೆಯಲ್ಲಿ ನಡೆಸಿದ ಅನೇಕ ಅಭ್ಯಾಸಗಳಿಂದ ತಿಳಿದುಬಂದ ವಿಷಯವೆಂದರೆ ಪರಸ್ಪರ ಹೊಂದಾಣಿಕೆಯುಳ್ಳ ದಂಪತಿಗಳಲ್ಲಿ ಹೆಂಡತಿಯ ಉದ್ಯೋಗದಿಂದ ಕಡಿಮೆ ತೊಂದರೆಗಳು ತಲೆದೋರಿದುವು. ತಮ್ಮ ಅನೇಕ ತೊಂದರೆಗಳನ್ನು ನಿವಾರಿಸಿಕೊಂಡು ಉತ್ತಮ ರೀತಿಯಲ್ಲಿ ಮಕ್ಕಳನ್ನು ಬೆಳೆಯಿಸಬಲ್ಲರೆಂಬುದು ತಿಳಿದಿದೆ.

ಉಪಸಂಹಾರ :

ನಮ್ಮ ಸಮಾಜದಲ್ಲಿ ಬಾಹ್ಯ ಹಾಗು ಅಂತರಿಕ ಒತ್ತಡಗಳಿಂದ ಮೂಲ ಸಂಸ್ಥೆಗಳಾದ ವಿವಾಹ, ಕುಟುಂಬಗಳಲ್ಲಿ ಅನೇಕ ಬದಲಾವಣೆಗಳಾಗಿವೆ ಇಂದು ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಕೆಲಸಮಾಡುತ್ತಿದ್ದಾರೆ. ಮೊದಲಿನ ಪ್ರತಿಕೂಲ ಪರಿಸ್ಥಿತಿ ತಿಳಿಯಾಗುತ್ತ ಕ್ಷೀಣವಾಗುತ್ತಿದೆ. ಮೊದಲಿನ ಗಂಭೀರತೆ, ಹೆದರಿಕೆ ಇಲ್ಲವಾಗಿದೆ. ತಾಯಿ ಒಮ್ಮೆ ಕೆಲಸಕ್ಕೆ ಸೇರಿದರೆ ತೀರಿತು. ಕುಟುಂಬದ ಸದಸ್ಯರು ಹೊಂದಿಕೊಳ್ಳಲು ಪ್ರಯತ್ನಿಸುವುದು ಕಂಡುಬರುತ್ತದೆ. ಚಿಕ್ಕ ಮಕ್ಕಳಿರುವ ಕುಟುಂಬದಲ್ಲಿ ಮಗು ಶಾಲೆಗೆ ಹೋಗುವ ಪೂರ್ವದಲ್ಲಿ ಇನ್ನೊಬ್ಬರ ರಕ್ಷಣೆಯಲ್ಲಿ ಇರಬೇಕಾಗುವುದು. ಈ ಅವಸ್ಥೆಯಲ್ಲಿ ತಾಯಿಗೆ ಮಗುವಿನ ಆರೈಕೆಯ ಚಿಂತೆ ಅಧಿಕವಾಗುವುದು. ತಾನು ಮಗುವನು ಅಲಕ್ಷಿಸುತ್ತಿದ್ದೇನೆ ಎಂಬ ಕೊರಗು ಇದ್ದೇ ಇರುತ್ತದೆ. ಈ ಕೊರಗು ಮಗುವಿನ ತಂದೆಯನ್ನೂ ಬಿಟ್ಟಿಲ್ಲ. ಆದರೂ ಇವೆಲ್ಲವು ಒಮ್ಮೊಮ್ಮೆ ಇದ್ದ ಪರಿಸ್ಥಿತಿಗಿಂತ ಒಂದು ತೂಕ ಜಾಸ್ತಿ. ಕಲ್ಪನೆಗಳು ಗಂಭೀರವಾಗಿವೆ. ತಾಯಿಯ ನಿರ್ಗಮನದಿಂದ ಯಾವ ತರಹದ ಗಂಭೀರ ಪರಿಣಾಮಗಳು ಆಗದಿದ್ದರೂ ಮಗುವಿನ ಸಂವೇದನಾತ್ಮಕ [emotional] ಭಾವನೆಗಳ ಅಭ್ಯಾಸ ಮಾಡುವುದು ಅವಶ್ಯ. ಈ ಅವಸ್ಥೆಯನ್ನು ಬಿಟ್ಟರೆ, ತಾಯಿಗೆ ಮಗುವಿನ ಬೆಳವಣಿಗೆಯಲ್ಲಿ ಯಾವ ಅಡೆತಡೆಯಿಲ್ಲ. ಆದರೂ ತಾಯಿಗೆ ಈ ಸಂದರ್ಭದಲ್ಲಿ ನಿಶ್ಚಿತ, ಸುವ್ಯವಸ್ಥಿತ ಸಹಾಯ ಸೇವಕರಿಂದ ಲಭಿಸುವುದು ವಿರಳ. ಹೆಚ್ಚಿನ ಸಹಕಾರ ಪ್ರೋತ್ಸಾಹಗಳು ಸರಕಾರ, ಖಾಸಗಿ ಸಂಸ್ಥೆಗಳಿಂದ ಅವಳಿಗೆ ಲಭಿಸುವಂತಾಗಬೇಕು.

ತಾಯಿಯ ಉದ್ಯೋಗ, ಈ ವಿಚಾರವು ಕೇವಲ ತಾಯಿಯ ವೈಯಕ್ತಿಕ ವಿಷಯವಾಗಿರದೆ ಮಕ್ಕಳ, ಕುಟುಂಬದ, ಮುಂದುವರಿದ ಸಮಾಜದ ಅತಿ ಹತ್ತಿರದ, ಕ್ಷೇಮದ ವಿಷಯವೆನಿಸಿದೆ. ತಾಯಿಗೆ ಒದಗಬಹುದಾದ ತೊಂದರೆಗಳನ್ನು ತಪ್ಪಿಸಲು ಒಳ್ಳೆಯ ಹಗಲು ಶಾಲೆ, ಮಧ್ಯಾಹ್ನದ ಊಟ, ಮನರಂಜನೆಯ ಶಿಕ್ಷಣವು ಅವಳ ಮಗುವಿಗೆ ಕಡ್ಡಾಯವಾಗಿ ಲಭಿಸುವತ್ತ ಪ್ರಯತ್ನವಾಗಬೇಕು.

ಔದ್ಯೋಗಿಕ ಕೇಂದ್ರಗಳು ತಾಯಂದಿರಿಗೆ ಅರ್ಧಕಾಲಿಕ ತಾತ್ಪೂರ್ತಿಕ ಕೆಲಸಗಳನ್ನು ಕೊಡುವ ವ್ಯವಸ್ಥೆಮಾಡಬೇಕು. ತಾಯಂದಿರ ಸೇವೆಯನ್ನು ವಿಶಿಷ್ಟ ರೀತಿಯಲ್ಲಿ ಪರಿಗಣಿಸಬೇಕು. ಅವರಿಗೆ ವಿಶೇಷ ಸೌಕರ್ಯ, ಸೌಲಭ್ಯ ದೊರಕಿಸಿಕೊಡಬೇಕು.

ಇವೆಲ್ಲವುಗಳ ಒಟ್ಟು ಪ್ರಯತ್ನದಲ್ಲಿ ಫಲದೊರೆಯುವ ನಿರೀಕ್ಷೆಯಿದೆ. ಭರವಸೆಯಿದೆ. ತಾಯಿಯ ಕೆಲಸದಿಂದ ಮಕ್ಕಳ ಬೆಳವಣಿಗೆಯ ಮೇಲೆ ಆಗುವ ಪರಿಣಾಮಗಳ ಅಭ್ಯಾಸವನ್ನು ಇನ್ನೂ ಸೂಕ್ಷ್ಮವಾಗಿ ಮಾಡಲು ಅವಕಾಶವಿದೆ.

ಗ್ರಂಥ ಋಣ

1. Padmini Sengupta — *Women Workers of India,* Asia Publishing House, Bombay. (1960)

2. —do— — *Working Mothers in White Collor Occ-upations,* Madras School of Social Work (1970)

3. Premilla Kapur — *Marriage and the Working Women in India,* Vikas Publishing House, Pvt. Ltd: Delhi (1970)

4. —do— — *The Changing Status of the Working Women in India,* Vikas Publishing House, Pvt. Ltd, Delhi (1974)

5. Kiran Wadhera — *The New Bread Winners,* Vishwa Yuvak Kendra; New Delhi (1976)

6. —do— — *Social Welfare* Vol. XXII No. 6,7. C.S.W.B. New Delhi (1975)

7. Rhana Rapoport and Robert N. Rapoport (ed) — *Working Couple*

8. —do— — *Role and Status of Women in India* Firma KLM (Private Ltd,) Calcutta. (1978)

9. Jana Matson Everett — *Women and Social Change in India,* Heritage Publisher, New Delhi (1979)

ಮಕ್ಕಳ ಕಲ್ಯಾಣ ಕಾರ್ಯದಲ್ಲಿ ವಿಶ್ವಸಂಸ್ಥೆ*

● ಕೆ. ಎಸ್. ದೇಶಪಾಂಡೆ

"ಪ್ರಪಂಚದಲ್ಲೇ ಅಧಿಕ ಸಂಖ್ಯೆಯಲ್ಲಿ ದುಡಿಯುವ ಮಕ್ಕಳಿರುವುದು ಭಾರತದಲ್ಲಿ" ಎಂಬುದಾಗಿ 'ಅಂತರರಾಷ್ಟ್ರೀಯ ಕಾರ್ಮಿಕ ಸಂಘ'ದ ೧೯೭೭ರ ವಾರ್ಷಿಕ ವರದಿಯಲ್ಲಿ ನಮೂದಿಸಲಾಗಿದೆ. ಮಕ್ಕಳಿಂದ ಕೆಲಸ ಮಾಡಿಸುವುದನ್ನು ಸಂಪೂರ್ಣ ನಿಲ್ಲಿಸಬೇಕೆಂಬ ಅದರ ಸೂಚನೆ ಭಾರತದಲ್ಲಿನ್ನೂ ಕಾರ್ಯಗತವಾಗಿಲ್ಲ. ದೇಶದ ಶ್ರಮಿಕ ವರ್ಗದ ಒಟ್ಟು ಸಂಖ್ಯೆಯ ಶೇಕಡಾ ಆರರಷ್ಟು ಪ್ರಮಾಣವಾಗಬಹುದಾದ ಎರಡು ಕೋಟಿ ಮಕ್ಕಳು ಭಾರತದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂಥ ಬಾಲ ಕೆಲಸಗಾರರ ಹಾಗೂ ಇತರ ದುರ್ದೈವಿ ಮಕ್ಕಳ ಬಗೆಗೆ ವಿಚಾರಿಸಿದಾಗ ಸಮಸ್ಯೆಯ ಪ್ರಮಾಣ ಹಾಗೂ ಮುಖ ಅಗಾಧವಾಗಿ ತೋರುವುದು. ರೇಲ್ವೆ ಸ್ಟೇಶನ್ನುಗಳಲ್ಲಿ, ಮೋಟಾರು ನಿಲ್ದಾಣಗಳಲ್ಲಿ ಹಿಡಿ ಕೂಳಿಗಾಗಿ ಕಾಡಿ ಬೇಡುವ, ತಿಂದೆಸೆದ ಮುಸುರೆ ತುಂಡುಗಳಿಗಾಗಿ ಕಚ್ಚಾಡುವ ಹಸಿದ ಬಡಮಕ್ಕಳ ದೃಶ್ಯ ಎಲ್ಲೆಡೆ ಕಾಣುವಂಥದು. ಸರಕಾರ ಹಂಚುವ ಪುಕ್ಕಟೆ ಹಾಲಿನ ಕೇಂದ್ರಗಳ ಎದುರು ಗುಂಪುಗೂಡಿದ ಮಕ್ಕಳ ಹಿಂಡು ಎಲ್ಲರಿಗೂ ಕಾಣುವ ದೃಶ್ಯವೇ. ಅರೆ ಬತ್ತಲಾಗಿರುವ, ಎಲುವುಗೂಡಿನ, ರೋಗಾದಿಗಳಿಂದ ಉಬ್ಬಿದ ಹೊಟ್ಟೆ ಹೊತ್ತು, ಕಣ್ಣುಗಳಲ್ಲಿ ತೀರದ ಹಸಿವಿನ ತೀಕ್ಷ್ಣತೆ ತೋರುವ ಇಂಥ ಮಕ್ಕಳ ನೋಟ ಕರುಣಾಜನಕ ವಾದದ್ದು. ಹಾಗೆಯೇ ನಾವು ನೀಡುವ ನಾಲ್ಕು ದುಡ್ಡುಗಳಿಗಾಗಿ ನಮ್ಮ ಪಾದರಕ್ಷೆ ಪಾಲೀಸು ಮಾಡಲು ಪೈಪೋಟಿ ಮಾಡುವ ಮಕ್ಕಳ ದೃಶ್ಯವೂ ಮಾಮೂಲು. ಮತ್ತೊಂದೆಡೆ ಹೊಟೆಲ್‌ಗಳಲ್ಲಿ, ವಿವಿಧ ಖಾಸಗಿ ಉದ್ದಿಮೆಗಳಲ್ಲಿ ಅಲ್ಪ ಹಣಕ್ಕಾಗಿ ದಿನ-ರಾತ್ರಿ ದುಡಿದು ಹಣ್ಣಾಗಿ ಹೋಗುತ್ತಿರುವ ಮಕ್ಕಳ ದೃಶ್ಯ ಕಾಣುವದು. ಈ ಎಲ್ಲ ನೋಟಗಳು ದಾರಿ ತಪ್ಪುವ, ಅಪರಾಧಿಗಳಾಗುವ, ಎಲ್ಲೋ ಅರಿಯದೆ ಅಳಿದು ಹೋಗುವ ಸಹಸ್ರ-ಸಹಸ್ರ ಸಂಖ್ಯೆಯ ಮಕ್ಕಳ ಚಿತ್ರವನ್ನು ಸ್ಪಷ್ಟಪಡಿಸುವವು. ಮಾನವೀಯತೆಯ ಬಳ್ಳಿಯಲ್ಲಿ ಅರಳಿ ಬೆಳಗಬೇಕಾದ ಈ ಹೂಗಳು ಮೊಗ್ಗಿನಲ್ಲಿಯೇ ಅಳಿದು ಹೋಗಬೇಕೇ?

---

* ಧಾರವಾಡ ಆಕಾಶವಾಣಿ ಕೃಪೆಯಿಂದ

ಇಂಥ ಮಕ್ಕಳಿಗೆ ಯೋಗ್ಯ ರಕ್ಷಣೆ, ಅನುಕೂಲತೆ, ಅವಕಾಶಗಳು ದೊರಕಿದರೆ ಮುಂದೆ ವಿಜ್ಞಾನಿಗಳೋ, ವೈದ್ಯರೋ, ನ್ಯಾಯವಾದಿಗಳೋ, ಇಂಜನಿಯರುಗಳೋ, ಆಡಳಿತಗಾರರೋ ಆಗಿ ನಮ್ಮ ಸಂಸ್ಕೃತಿ ಹಾಗೂ ನಾಗರೀಕತೆಗಳಿಗೆ ತಮ್ಮ ಅಮೂಲ್ಯ ಕಾಣಿಕೆ ಸಲ್ಲಿಸಬಹುದಲ್ಲವೇ?

ಇಂಥವೇ ಭಾವನೆಗಳು ಹಾಗೂ ವಿಚಾರಗಳು ೧೯೪೬ ರ ಡಿಸೆಂಬರ ೧೧ ರಂದು ನ್ಯೂಯಾರ್ಕ್‌ನಲ್ಲಿ ಸೇರಿದ್ದ ವಿಶ್ವಸಂಸ್ಥೆಯ ಪ್ರತಿನಿಧಿಗಳ ಮನದಲ್ಲಿ ತಾಂಡವವಾಡಿರಲು ಸಾಕು.

ಅದೇ ತಾನೆ ಎರಡನೇ ಮಹಾಯುದ್ಧ ಕೊನೆಗೊಂಡಿತ್ತು. ಅದರ ವಿಷ ವರ್ತುಲದಲ್ಲಿ ಸಿಕ್ಕು ನಂತರದ. ಭೀಕರ ಪರಿಣಾಮಗಳಿಗೆ ಮೊದಲು ತುತ್ತಾದವರು ಮಕ್ಕಳು. ಸಂವೇದನಾಶೀಲ ಹಾಗೂ ದೂರದೃಷ್ಟಿಯ ವಿಶ್ವಸಂಸ್ಥೆಯಲ್ಲಿಯ ಧುರೀಣರು ಇದನ್ನು ಮನಗಂಡು ತೀವ್ರ ಪರಿಹಾರ ಕಾರ್ಯಗಳನ್ನು ಹಮ್ಮಿಕೊಂಡರು. ಪರಿಣಾಮವಾಗಿ ವಿಶ್ವಸಂಸ್ಥೆಯ ಮಕ್ಕಳ ತುರ್ತು ಪರಿಸ್ಥಿತಿ ನಿಧಿ (United Nations Children's Emergency Fund) ಅಂದೇ ಸ್ಥಾಪನೆಗೊಂಡಿತು. ತ್ರಸ್ತಗೊಂಡ ಎಲ್ಲ ಪ್ರದೇಶಗಳ ಮಕ್ಕಳ ಕಲ್ಯಾಣಕ್ಕೆ ತೀವ್ರ ಪರಿಹಾರಕ್ರಮ ಕೈಗೊಳ್ಳುವುದೇ ಇದರ ಆಗಿನ ಗುರಿಯಾಗಿತ್ತು. ಇತ್ತೀಚಿನ ಬಾಂಗ್ಲಾದೇಶ ಯಾದವೀ ಕಲಹದಲ್ಲಿ. ವಿಯಟ್ನಾಂ ಯುದ್ಧದಲ್ಲಿ ಹೆಚ್ಚಿನ ತೊಂದರೆಗಳಿಗೆ ಒಳಗಾದವರು ಮಕ್ಕಳೇ ಎಂಬುದನ್ನು ನಾವಿಲ್ಲಿ ನೆನೆಯಬಹುದು.

ಆದರೆ ಇಂದಿನ ನಮ್ಮ ಯುಗದಲ್ಲಿ ಮಕ್ಕಳ ಪ್ರಗತಿಯ ಮೂಲಭೂತ ಸಮಸ್ಯೆಗಳತ್ತ ಜಾಗತಿಕ ದೃಷ್ಟಿಯನ್ನು ಕೇಂದ್ರೀಕರಿಸುವಂತೆ ಮಾಡಿದ ಶ್ರೇಯಸ್ಸು ಕುಮಾರಿ ಎಗ್ಲಂಟಾಯಿನ್ ಜೆಬ್ ಎಂಬ ಆಂಗ್ಲ ಮಹಿಳೆಗೆ ಸಲ್ಲಬೇಕು. ಅವಳು ಪ್ರಥಮ ಮಹಾಯುದ್ಧದ ನಂತರ, ೧೯೧೯ರಲ್ಲಿಯೇ ವಿಜಯಿ ರಾಷ್ಟ್ರಗಳು ಪರಾಭವ ಹೊಂದಿದ ರಾಷ್ಟ್ರಗಳ ಮೇಲೆ ಹೇರಿದ ದಿಗ್ಬಂಧನದಿಂದ ಅಲ್ಲಿನ ಮಕ್ಕಳಿಗಾದ ಯಾತನೆಯ ಪರಿಹಾರಕ್ಕಾಗಿ ತನ್ನ ಸರಕಾರದ ವಿರುದ್ಧವೇ ಕ್ರಾಂತಿಯ ಧ್ವಜವನ್ನು ಎತ್ತಿದಳು. ಬ್ರಿಟಿಶ್ ದೇಶದ ಭದ್ರತೆಗೆ ಗಂಡಾಂತರಕಾರಿಯೆಂದು ಅವಳನ್ನು ಸರಕಾರ ದೂರಿತು. ಅವಳ ಸಹಾಯಕ್ಕೆ ಧಾವಿಸಿದ ಮಹಾ ನಾಟಕಕಾರ ಬರ್ನಾರ್ಡ ಶಾ ಸಹ ಟೀಕೆಗೊಳಗಾದನು. ಆದರೆ ಬರ್ನಾರ್ಡ ಶಾ ಇದಕ್ಕೆ ಬಗ್ಗಲಿಲ್ಲ. ತನ್ನ ಚರ್ಚಾತೀತ ಉತ್ತರಗಳಿಂದ ವಿರೋಧಿಗಳನ್ನು ಸುಮ್ಮನಾಗಿಸಿದ. "ಎಳರ ಕೆಳಗೆ ನನಗೆ ಶತ್ರುಗಳೇ ಇಲ್ಲ" ಎಂದನಾತ. ಜೆಬ್‌ಳ ಪ್ರಯತ್ನಗಳು ಸಂಘಟನೆಗೊಂಡು ಬೇಗನೇ ಅಂತರರಾಷ್ಟ್ರೀಯ ಸಂಘವಾಗಿ ರೂಪುಗೊಂಡವು. ೧೯೨೩ರಲ್ಲಿ ಜೆಬ್‌ಳು, ಐದಂಶಗಳ ಮಕ್ಕಳ ಹಕ್ಕುಗಳ ಪ್ರಥಮ ತಾಮ್ರ ಪತ್ರವೊಂದನ್ನು ಜಗತ್ತಿಗೆ ನೀಡಿದಳು. ವಿಶ್ವಸಂಸ್ಥೆಯ ಮೊದಲು ಹರಿಕಾರ ,ಲೀಗ ಆಫ್ ನೇಶನ್ಸ' ಈ ಅಂಶಗಳನ್ನು ಒಪ್ಪಿ ಅಂಗೀಕರಿಸಿತು. ೧೯೨೪ ರಲ್ಲಿ

ವಿಶ್ವಸಂಸ್ಥೆ ತನ್ನದೇ ಆದ ಮಕ್ಕಳ ಹಕ್ಕುಗಳ ತಾಮ್ರಪತ್ರ ಸಿದ್ಧಪಡಿಸುವಾಗ ಜೆಬ್‌ಳ ಈ ಅಂಶಗಳನ್ನೇ ಮೂಲವಾಗಿಟ್ಟುಕೊಂಡಿತು. ಹತ್ತು ಅಂಶಗಳ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ತಾಮ್ರಪತ್ರ ಹೀಗಿದೆ :

೧ ರಾಷ್ಟ್ರೀಯತೆ, ಧರ್ಮ, ಲಿಂಗಭೇದ, ವರ್ಣಭೇದ, ಜಾತಿ–ಮುಂತಾಗಿ ಯಾವುದೇ ಬಗೆಯ ತಾರತಮ್ಯಗಳನ್ನೆಣಿಸದೆ ಇಲ್ಲಿ ಕಾಣಿಸಿದ ಹಕ್ಕುಗಳನ್ನು ಪಡೆಯಲು ಎಲ್ಲ ಮಕ್ಕಳೂ ಬಾಧ್ಯಸ್ಥರು.

೨ ಸ್ವತಂತ್ರವಾಗಿ, ಗೌರವಪೂರ್ಣವಾಗಿ, ನೈಜರೀತಿಯಲ್ಲಿ, ಸದೃಢವಾಗಿ ಬೆಳೆಯಲು ಅವಶ್ಯವಿರುವ ವಿಶೇಷ ರಕ್ಷಣೆ ಅವಕಾಶಗಳು ಹಾಗೂ ಅನುಕೂಲತೆಗಳು ಅವರಿಗೆ ಲಭ್ಯವಿರಬೇಕು.

೩ ಪ್ರತಿಯೊಂದು ಮಗುವಿಗೆ ಒಂದು ಹೆಸರು ಹಾಗೂ ಒಂದು ರಾಷ್ಟ್ರೀಯತೆ ಅವಶ್ಯವಾಗಿರಬೇಕು.

೪ ಸಾಮಾಜಿಕ ಭದ್ರತೆ ಸಾಕಷ್ಟು ಸತ್ವಪೂರ್ಣ ಆಹಾರ, ವಸತಿ, ಮನರಂಜನೆ ಹಾಗೂ ವೈದ್ಯಕೀಯ ಸೌಲಭ್ಯಗಳು ದೊರಕಲೇಬೇಕು.

೫ ಅಂಗವಿಕಲರಾಗಿದ್ದರೆ, ವಿಶೇಷ ತರದ ಉಪಚಾರ, ಶಿಕ್ಷಣ ಹಾಗೂ ಕಾಳಜಿ ಲಭ್ಯವಿರಬೇಕು.

೬ ಸಾಮಾನ್ಯವಾಗಿ ಅವರವರ ಪಾಲಕರ ಹೊಣೆಗಾರಿಕೆ ಹಾಗೂ ರಕ್ಷಣೆಯಲ್ಲಿ ದೊರೆಯುವ ಪ್ರೀತಿಪೂರ್ಣ ತಿಳುವಳಿಕೆ, ಆತ್ಮೀಯ ವಾತಾವರಣ, ಭದ್ರತೆ ಅವರಿಗಿರಬೇಕು.

೭ ಮುಕ್ತ ಶಿಕ್ಷಣ ಹಾಗೂ ಮನರಂಜನೆ ಮತ್ತು ಸಮಾನ ಅವಕಾಶಗಳು, ತಮ್ಮ ತಮ್ಮ ವೈಯಕ್ತಿಕ ಯೋಗ್ಯತೆಗಳನ್ನು ಬೆಳೆಸಿಕೊಳ್ಳುವ ಅವಕಾಶ, ಇವುಗಳಿಗೆ ಅವರೆಂದೂ ಎರವಾಗಬಾರದು.

೮ ಆಪತ್ತುಗಳ ಪ್ರಸಂಗದಲ್ಲಿ ವಿಶೇಷವಾಗಿ ಹಾಗೂ ತಕ್ಷಣ ರಕ್ಷಣೆ ಹಾಗೂ ಪರಿಹಾರ ಅವರವಾಗಿರತಕ್ಕದ್ದು.

೯ ಎಲ್ಲ ಬಗೆಯ ಶೋಷಣೆ, ಕ್ರೌರ್ಯ ಹಾಗೂ ತಿರಸ್ಕಾರಗಳ ವಿರುದ್ಧ ರಕ್ಷಾಕವಚ ಅವರಿಗೆ ಒದಗಿಸಲ್ಪಡಬೇಕು.

೧೦ ಜಾತಿ, ಧರ್ಮ ಹಾಗೂ ಯಾವುದೇ ಬಗೆಯ ಭೇದ ಭಾವಗಳ ವಿರುದ್ಧ ರಕ್ಷಣೆ, ಶಾಂತಿ ಹಾಗೂ ಜಾಗತಿಕ ಬಾಂಧವ್ಯದ ತಳಹದಿಯ ಮೇಲೆ ಬೆಳವಣಿಗೆಗೆ ಅವಕಾಶ ಅವರಿಗೆ ಸಿಗಬೇಕು.

ಈ ಹತ್ತು ಹಕ್ಕುಗಳ ಕಾರ್ಯಾಚರಣೆ ಹಾಗೂ ಪ್ರಪಂಚದ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ತಾನು ಹುಟ್ಟಿದಾರಂಭ ಯುನಿಸೆಫ್ (UNICEF) ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇದರ ಕಾರ್ಯಮಹತಿಯನ್ನು ಗುರುತಿಸಿ ೧೯೫೩ ರಲ್ಲಿ ಇದನ್ನು ವಿಶ್ವಸಂಸ್ಥೆಯು ಸ್ಥಿರವಾದ ಅಂಗವೆಂದು ಘೋಷಿಸಲಾಯಿತು. ಅಲ್ಲಿಂದ ಇದನ್ನು ವಿಶ್ವಸಂಸ್ಥೆಯ ಬಾಲನಿಧಿ (United Nations Children's Fund) ಎಂದು ಕರೆಯಲಾಯಿತು. ಹಿಂದುಳಿದ ದೇಶಗಳಲ್ಲಿಯ ಮಕ್ಕಳ ಹಾಗೂ ಯುವ ಜನಾಂಗದ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುವುದೇ ಇದರ ಮುಖ್ಯ ಗುರಿಯಾಗಿದೆ. ಪ್ರಗತಿಗಾಗಿ ಯೋಜಿಸಲ್ಪಡುವ ರಾಷ್ಟ್ರೀಯ ಯೋಜನೆಗಳಿಗೆ ಆಯಾ ಸರಕಾರಗಳ ಬೇಡಿಕೆ ವಿನಂತಿಯನ್ನನುಲಕ್ಷಿಸಿಯೇ ಇದು ಸಹಾಯ ನೀಡುವುದು. ಯುನಿಸೆಫ್ ಸಹಾಯ ಸಲ್ಲಿಸುವ ವಿಶೇಷ ಕ್ಷೇತ್ರಗಳು ಹೀಗಿವೆ :

೧. ಆರೋಗ್ಯ

೨. ಸತ್ವಪೂರ್ಣ ಆಹಾರಾಂಶಗಳು

೩. ಸಮಾಜ ಕಲ್ಯಾಣ

೪. ವಿದ್ಯಾಭ್ಯಾಸ

೫. ತರಬೇತಿ

೬. ಮಕ್ಕಳ ಮಹತ್ತರ ಅವಶ್ಯಕತೆಗಳನ್ನು ಅಳೆಯಲು ಯೋಜನೆಗಳನ್ನು ಏರ್ಪಡಿಸುವುದು ಇತ್ಯಾದಿ.

ಈ ಕ್ಷೇತ್ರಗಳನ್ನು ಆರಿಸುವಾಗ ಯುನಿಸೆಫ್ ಗಮನದಲ್ಲಿಟ್ಟುಕೊಂಡ ಅಂಶಗಳೆಂದರೆ :

೧. ಹಿಂದುಳಿದ ದೇಶಗಳಲ್ಲಿನ ಮಕ್ಕಳಲ್ಲಿಯ ೨/೩ ಭಾಗದಷ್ಟು ಮಕ್ಕಳು ಯೋಗ್ಯ ಆಹಾರವಿಲ್ಲದೆ ಬಳಲುತ್ತಿರುವುದು.

೨. ಇಲ್ಲಿನ ಶಿಶು ಮರಣದ ಸಂಖ್ಯೆ ಮುಂದುವರಿದ ದೇಶಗಳಿಗಿಂತ ಎಂಟುಪಟ್ಟು ಹೆಚ್ಚಿರುವುದು.

೩. ಪ್ರಾಥಮಿಕ ಹಂತದಲ್ಲಿ ಶಾಲೆಗೆ ಹೋಗಬೇಕಾದ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಮಾತ್ರ ಈ ಸೌಲಭ್ಯ ಹೊಂದಿರುವುದು.

ಯುನಿಸೆಫ್ ನೆರವು ವಿವಿಧ ವಸ್ತುಗಳ ಸ್ವರೂಪದಲ್ಲಿ ಲಭ್ಯವಾಗುವುದೇ ವಿನಃ ಹಣದ ರೂಪದಲ್ಲಿ ಅಲ್ಲ.

ಪಠ್ಯಪುಸ್ತಕಗಳ ನಿರ್ಮಾಣಕ್ಕೆ ಸಾಧನಗಳು, ವೈದ್ಯಕೀಯ ಕೇಂದ್ರಗಳಿಗೆ ಸಾಧನ-ಸಲಕರಣೆಗಳು, ಶಾಲಾತೋಟಗಳಿಗೆ ಸಾಧನಪೂರೈಕೆ. ಮಕ್ಕಳಿಗೆ ಹಾಗೂ ಇತರರಿಗೆ ಕುಡಿಯುವ ನೀರಿನ ಭಾವಿ ತೋಡುವವರಿಗೆ ಯಂತ್ರಗಳು, ಆರೋಗ್ಯ ಕೇಂದ್ರ ತೆರೆಯಲು ಬೇಕಾಗುವ ಸಲಕರಣೆಗಳು ಮುಂತಾದವನ್ನು ಯುನಿಸೆಫ್ ಪೂರೈಸುವುದು. ರಾಷ್ಟ್ರೀಯ ತರಬೇತಿ ಯೋಜನೆಗಳನ್ವಯ ನಡೆಯುವ ತರಬೇತಿ ಶಿಬಿರಗಳಲ್ಲಿ ತರಬೇತಿ ಪಡೆಯುವ ಶಿಕ್ಷಕರಿಗೆ ಸಹಾಯಧನ ನೀಡುವುದು, ಹೀಗೆ ನೀಡುವ ಸಹಾಯಗಳು ತುಂಬ ಗಣನೀಯವೇ ಆಗಿವೆ. ಇಲ್ಲಿ ಕೆಲವನ್ನು ಮಾತ್ರ ಗಮನಿಸಬಹುದು :

೧೯೭೨ರಲ್ಲಿ ವಿಟಾಮಿನ್ "ಎ" ಜೀವನಸತ್ವದ ಅಭಾವದಿಂದ ಉಂಟಾಗುವ ಅಂಧತ್ತ್ವವನ್ನು ದೂರಗೊಳಿಸುವ, ಸಾಮೂಹಿಕ ಯೋಜನೆಯೊಂದನ್ನು ಬಂಗ್ಲಾದೇಶ, ಭಾರತ, ಇಂಡೋನೇಶಿಯಾ ಹಾಗೂ ಫಿಲಿಪೈನ್ಸ್‌ಗಳಲ್ಲಿ ಕೈಕೊಳ್ಳಲಾಯಿತು. ಭಾರತವನ್ನೊಳಗೊಂಡಂತೆ ೫೪ ದೇಶಗಳಲ್ಲಿಯ ಹಳ್ಳಿಗಳಲ್ಲಿ, ಕುಡಿಯುವ ನೀರನ್ನೊದಗಿಸುವ ಯೋಜನೆಗಳಿಗಾಗಿ. ಸುಮಾರು ಎಪ್ಪತ್ತುಲಕ್ಷ ಡಾಲರುಗಳನ್ನು ವಿನಿಯೋಗಿಸಲಾಯಿತು. ೪೧ ದೇಶಗಳ ಹಳ್ಳಿ ಪ್ರದೇಶಗಳಲ್ಲಿ ಸತ್ವಯುತ ಆಹಾರವನ್ನೊದಗಿಸಲು ಐವತ್ತು ಲಕ್ಷ ಡಾಲರುಗಳನ್ನು ಉಪಯೋಗಿಸಲಾಯಿತು. ೮೦ ದೇಶಗಳಿಗೆ ಅಲ್ಲಿನ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಪ್ರಗತಿಗೊಳಿಸಲು ಒಂದು ಕೋಟಿ ಪತ್ತುಲಕ್ಷ ಡಾಲರುಗಳನ್ನು ನೀಡಲಾಯಿತು. ೨ ಲಕ್ಷ ೧೮ ಸಹಸ್ರ ರಾಷ್ಟ್ರೀಯ ಕೆಲಸಗಾರರಿಗೆ ಸಹಾಯ ವೇತನಗಳನ್ನು ನೀಡಲಾಯಿತು.

ಯುನಿಸೆಫ್ ಆದಾಯದ ಮುಖ್ಯ ಮೂಲಗಳೆಂದರೆ : ಆಯಾ ದೇಶಗಳ ಸರಕಾರಗಳು ನೀಡುವ ಒತ್ತಾಯವಿಲ್ಲದ ವಂತಿಗೆಗಳು, ವ್ಯಕ್ತಿ ಅಥವಾ ಗುಂಪುಗಳು ನೀಡುವ ಸಹಾಯಧನ, ಯುನಿಸೆಫ್ ಗ್ರೀಟಿಂಗ್ಸ ಕಾರ್ಡುಗಳನ್ನು ಮಾರಿದ್ದರಿಂದ ಬರುವ ಹಣ ಇವೇ ಆಗಿವೆ. ೧೯೭೧ರಲ್ಲಿ ಇಂಥ ಅಭಿನಂದನಪರ ಕಾರ್ಡುಗಳ ಮಾರಾಟವೊಂದರಿಂದಲೇ ಐದುಕೋಟಿ ಎಪ್ಪತ್ತುಲಕ್ಷ ಡಾಲರುಗಳ ಆದಾಯವಾಗಿತ್ತೆಂಬುದು ಗಮನಾರ್ಹವಾಗಿದೆ.

೧೯೬೫ರಲ್ಲಿ ಯುನಿಸೆಫ್ ಮಕ್ಕಳ ಹಿತ ವರ್ಧಿಸುವಲ್ಲಿ ಸಲ್ಲಿಸಿದ ಸೇವೆ ಹಾಗೂ ಅಪೂರ್ವ ಸಾಧನೆಗಾಗಿ ನೋಬೆಲ್ ಶಾಂತಿ ಬಹುಮಾನ (Nobel Prize for Peace) ಪಡೆದಿದೆಯೆಂಬುದು ಉಲ್ಲೇಖನೀಯ.

ಕಳೆದ ೧೯೭೮ರ ಮೇ ದಿಂದ ಜುಲೈವರೆಗೆ ವಿಶ್ವಸಂಸ್ಥೆಯು ನಿಃಶಸ್ತ್ರೀಕರಣ ಕುರಿತಾದ ಒಂದು ವಿಶೇಷ ಸಮ್ಮೇಳನ (Disarmament Conference) ನಡೆಸಿತು. ಈ ಸಮ್ಮೇಳನದ ಮಹತಿಯನ್ನು ಗುರುತಿಸಿ ಈ ಅವಧಿಯಲ್ಲಿಯೇ ಯುನಿಸೆಫ್ ಆ ಸಮ್ಮೇಳನ ನಡೆದ ಭವನದ ಪಕ್ಕದಲ್ಲೇ ತನ್ನದೊಂದು ಸಭೆ ನಡೆಸಿತು. ನಿಃಶಸ್ತ್ರೀ

ಕರಣ ಸಮ್ಮೇಲನಕ್ಕೆ ಆಗಮಿಸಿದ ವಿವಿಧ ದೇಶಗಳ ಪ್ರತಿನಿಧಿಗಳಿಗೆ ಅವರು ತಮ್ಮ ದೇಶಗಳಲ್ಲಿ ಶಸ್ತ್ರಾಸ್ತ್ರಗಳಿಗೆ ಖರ್ಚುಮಾಡುವ ಅಗಾಧ ಮೊತ್ತದಲ್ಲಿಯ ಒಂದು ಅತಿ ಚಿಕ್ಕ ಭಾಗವನ್ನಾದರೂ ತಮ್ಮ ಕಲ್ಯಾಣ ಕಾರ್ಯಗಳಿಗೆ ನೀಡಬೇಕೆಂದು ಕಳಕಳಿಯ ಮನವಿ ಮಾಡಿಕೊಂಡಿತು. ಜಗತ್ತಿನ ರಾಷ್ಟ್ರಗಳೆಲ್ಲ ಸೇರಿ, ವರ್ಷವೊಂದಕ್ಕೆ ಶಸ್ತ್ರಾಸ್ತ್ರಗಳಿಗಾಗಿ ಮಾಡುವ ವೆಚ್ಚ "೪೦೦ ಮಿಲಿಯನ್ ಡಾಲರು, ಎಂದರೆ ೪೦೦ ದಶ ಕೋಟಿ" ಡಾಲರುಗಳು. ಇಡೀ ವಿಶ್ವಸಂಸ್ಥೆ ಸಹಾಯ ಯೋಜನೆಗಳಿಗಾಗಿ ತಾನು ಖರ್ಚು ಮಾಡುವ ಹಣದ ೨೦ ಪಟ್ಟಿಗಿಂತ ಇದು ಹೆಚ್ಚಾಗುವುದು. ನಿಃಶಸ್ತ್ರೀಕರಣಕ್ಕಾಗಿ ಕೂಡಿದ ಪ್ರತಿನಿಧಿಗಳಿಗೆ ಯುನಿಸೆಫ್ ಈ ರೀತಿ ಸವಾಲು ಹಾಕಿತು. "೨ ಕೋಟಿ ಡಾಲರು ಬೆಲೆಬಾಳುವ ಒಂದು ಯುದ್ಧ ವಿಮಾನದ ಖರೀದಿ ಬಿಟ್ಟು ಅದೇ ಮೊತ್ತವನ್ನು ನಮಗೆ ನೀಡಿದ್ದಾದರೆ, ೪೦,೦೦೦ ಹಳ್ಳಿಗಳಲ್ಲಿ ಜನಾಂಗದ ಜೀವರಕ್ಷಣೆ ಮಾಡುವ ಔಷಧಿಗಳ ಫಾರ್ಮಸಿಗಳನ್ನು ತೆರೆಯುತ್ತೇವೆ. ಹತ್ತು ಕೋಟಿ ಡಾಲರು ಬೆಲೆಬಾಳುವ ಯುದ್ಧ ಹಡಗದ ಬೆಲೆಯಲ್ಲಿ ತೊಂಬತ್ತು ಲಕ್ಷ ಜನನಿಬಿಡವಾದ ೧೩ ಪಟ್ಟಣ ಹಾಗೂ ೧೯ ಹಳ್ಳಿಗಳ ಪ್ರದೇಶದಲ್ಲಿ ವಿದ್ಯುತ್ ಶಕ್ತಿ ಒದಗಿಸುತ್ತೇವೆ. ೫ ಲಕ್ಷ ಡಾಲರು ಬೆಲೆಯ ಒಂದು ಟ್ಯಾಂಕನ್ನು ಖರೀದಿಸುವುದನ್ನು ನೀವು ನಿಲ್ಲಿಸಿ, ಆ ಹಣದಲ್ಲಿ ಪ್ರತಿಯೊಂದು ವರ್ಗದಲ್ಲಿ ೩೦ ರಂತೆ ವಿದ್ಯಾರ್ಥಿಗಳಿರುವ ೫೨೦ ಪ್ರಾಥಮಿಕ ಶಿಕ್ಷಣ ವರ್ಗಗಳನ್ನು ಸಜ್ಜುಗೊಳಿಸುತ್ತೇವೆ." ಇತ್ಯಾದಿಯಾಗಿ, ಇದೇ ಸಭೆಯಲ್ಲಿ ವಿಶ್ವದಾದ್ಯಂತ ಮಕ್ಕಳ ಕಲ್ಯಾಣ ಕಾರ್ಯಗಳಿಗಾಗಿ ಬರೀ ೨೦ ಕೋಟಿ ಡಾಲರುಗಳ ಮೊತ್ತವನ್ನು ಯುನಿಸೆಫ್ ನಿಗದಿ ಪಡಿಸಿತು. ಇದು ಯುನಿಸೆಫ್ ಈ ವರೆಗೆ ನಿಗದಿಪಡಿಸಿದ ವಾರ್ಷಿಕ ಮೊತ್ತಕ್ಕಿಂತ ಅತಿ ಹೆಚ್ಚಿನದಾದರೂ, ವಿಶ್ವದ ರಾಷ್ಟ್ರಗಳು ಶಸ್ತ್ರಾಸ್ತ್ರಗಳ ಮೇಲೆ ವೆಚ್ಚಮಾಡುವ ವೆಚಕ್ಕಿಂತ ೨೦ ಸಹಸ್ರ ಪಟ್ಟು ಕಡಿಮೆಯಾಗಿದೆ. ಈಗಾಗಲೇ, ಜಗತ್ತಿನ ಎಲ್ಲ ರಾಷ್ಟ್ರಗಳು ತಮ್ಮ ಶಸ್ತ್ರಾಗಾರಗಳಲ್ಲಿ ಜಗತ್ತಿನ ಎಲ್ಲರನ್ನೂ ನಾಲ್ವತ್ತು ಸಲ ಕೊಲ್ಲುವಷ್ಟು ಮೊತ್ತದ ಶಸ್ತ್ರಗಳನ್ನು ಸಂಗ್ರಹಿಸಿಟ್ಟಿವೆ. ಇದು ಇನ್ನೂ ಏರುತ್ತಲೇ ಇದೆ.

ಹೀಗೆ ಮಕ್ಕಳ ಕಲ್ಯಾಣಕ್ಕಾಗಿ. ಸ್ವತಂತ್ರವಾಗಿ ಕಾರ್ಯಮಾಡುತ್ತಿರುವ ವಿಶ್ವಸಂಸ್ಥೆಯ ಇನ್ನೊಂದು ಅಂಗ ಸಂಸ್ಥೆಯೆಂದರ ಯುನೆಸ್ಕೋ (UNESCO). ಮಕ್ಕಳ ವಿದ್ಯಾಭ್ಯಾಸ, ಸಂಸ್ಕೃತಿ ಹಾಗೂ ಸಂಪರ್ಕ– ಈ ರೀತಿಯ ಆಯ್ದ ಕ್ಷೇತ್ರಗಳಲ್ಲಿ ತನ್ನ ಸದಸ್ಯ ರಾಷ್ಟ್ರಗಳ ಆಸಕ್ತಿಯನ್ನು ಸಕ್ರೀಯವಾಗಿಸಲು ಯುನೆಸ್ಕೋ ಶ್ರಮಿಸುತ್ತಿದೆ. "ಅಂತರರಾಷ್ಟ್ರೀಯ ಮಕ್ಕಳ ವರ್ಷ"ವೆಂದು ಹೆಸರಿಸಲ್ಪಟ್ಟ ಸದ್ಯದ ವರುಷ, ಯುನೆಸ್ಕೋ ಈ ಮುಂದೆ ಹೇಳುವ ವಿಷಯಗಳಮೇಲೆ ಹೆಚ್ಚಿನ ಗಮನ ನೀಡಿ ಕಾರ್ಯ ಮಾಡುತ್ತಿದೆ. ಅವೆಂದರೆ :

ಅ) ಅಂಗವಿಕಲ ಮಕ್ಕಳ ವಿದ್ಯಾಭ್ಯಾಸ

ಬ) ವಲಸೆಗೊಂಡವರ, ಕಾರ್ಮಿಕರ ಹಾಗೂ ಗುಳೇಕಾರರ ಮಕ್ಕಳ ಹಕ್ಕುಗಳ ರಕ್ಷಣೆ

ಕ) ಮಕ್ಕಳ ಪುಸ್ತಕಗಳು ಹಾಗೂ ಬೆಳವಣಿಗೆ ಹಾಗೂ ಮಕ್ಕಳ ಗ್ರಂಥಾಲಯಗಳ ಸ್ಥಾಪನೆ

ಡ) ಟೆಲಿವಿಜನ್ ಮೂಲಕ ಮಕ್ಕಳ ಶಿಕ್ಷಣ ಮುಂತಾದವುಗಳ ಪರಿಣಾಮಗಳ ಸಂಶೋಧನೆ

ಇ) ಶಾಲಾಪೂರ್ವ ಶಿಕ್ಷಣ ನೀಡುವ ಸಿಬ್ಬಂದಿಯ ತರಬೇತಿ

ಫ) ಜಗತ್ತಿನಾದ್ಯಂತ ಮಕ್ಕಳ ಆಟಿಕೆಗಳ ಹಾಗೂ ಆಟಗಳ ಸಂಚಾರಿ ಪ್ರದರ್ಶನ

ಹ) ಮಕ್ಕಳ ಜಾಗತಿಕ ಚಿತ್ರಕಲಾ ಸ್ಪರ್ಧೆ, ಇತ್ಯಾದಿ

ಗ) ಮಕ್ಕಳ ಗ್ರಂಥಗಳ ಅಂತರರಾಷ್ಟ್ರೀಯ ಪ್ರದರ್ಶನ.

ಮಕ್ಕಳ ಕಲ್ಯಾಣದ ಸಮಸ್ಯೆ ಎಷ್ಟೊಂದು ತೀವ್ರ ಅವಶ್ಯಕತೆಯುದಾಗಿದೆಯೆಂಬುದನ್ನು ಗಮನಿಸಲು ನಮ್ಮ ದೇಶದ ಉದಾಹರಣೆ ತೆಗೆದುಕೊಳ್ಳಬೇಕು.

ಪ್ರಪಂಚದ ಈ ಭಾಗ ಜಗತ್ತಿನಲ್ಲೇ ಅತ್ಯಂತ ಕಡಿಮೆ ಮಟ್ಟದಲ್ಲಿ ಜೀವಿಸುವಂಥವರನ್ನೊಳಗೊಂಡಿದೆ. ಈ ಪ್ರದೇಶ ಎರಡು ಮಾನವ ಶಕ್ತಿ ಸಮಸ್ಯೆಗಳನ್ನು ಏಕಪ್ರಕಾರವಾಗಿ ಕಂಡಿದೆ.

೧. ರಚನಾ ಕೌಶಲ್ಯಗಳುಳ್ಳ ಕುಶಲ ಕೆಲಸಗಾರ ವ್ಯಕ್ತಿಗಳ ಅಭಾವ

೨. ಉತ್ಪಾದನಾ ಹೀನ ಪ್ರಮುಖ ಬಾಹುಳ್ಯ. ಈ ಸಂಖ್ಯೆಗೆ ವರ್ಷವೂ ಒಂದು ಕೋಟಿ ೨೦ ಲಕ್ಷ ಮಕ್ಕಳನ್ನು ಸೇರಿಸುತ್ತಲೇ ಇದ್ದೇವೆ.

ಇದ್ದ ಮಕ್ಕಳಲ್ಲಿಯೇ ಒಂಬತ್ತು ಕೋಟಿ ಇಪ್ಪತ್ತು ಲಕ್ಷ ಮಕ್ಕಳು ದಾರಿದ್ರ್ಯ ರೇಖೆಯ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿವೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿಯ ನಾಲ್ಕು ಕೋಟಿ ಅರವತ್ತು ಲಕ್ಷ ಮಕ್ಕಳು ಒಂದರಿಂದ ೬ ವರುಷದೊಳಗಿನವು. ಇವು ಜೀವಿಸಲು ಅಸಾಧ್ಯವೆಂಬಂಥ ಹೀನಸ್ಥಿತಿಯಲ್ಲಿವೆ. ಯುನಿಸೆಫ್ ಇಂಥ ಮಕ್ಕಳ ಕಲ್ಯಾಣ ಹಾಗೂ ಪ್ರಗತಿಯ ಅಗಾಧ ಕಾರ್ಯ ಹೊತ್ತಿದೆ. ಇಂಥ ಇಂದಿನ ಮಕ್ಕಳನ್ನೇ ನಾಳಿನ ಪ್ರಪಂಚದ ಕುಶಲ ಶಿಲ್ಪಿಗಳನ್ನಾಗಿ ಪರಿವರ್ತಿಸುವ ಮಹಾಭಾರ ಹೊತ್ತಿದೆ. ಅದರ ಅವಿಶ್ರಾಂತ ಪರಿಶ್ರಮಗಳ ಫಲವಾಗಿ ಪ್ರಪಂಚದ ಅಸಹಾಯಕ, ಅನಾಥ ಮಕ್ಕಳಿಗೆ:

"ಹೊಟ್ಟೆ ತುಂಬ ಅನ್ನ ದೊರೆಯಲಿ
ಮೈತುಂಬ ಬೆಚ್ಚಗಿನ ಬಟ್ಟೆ ದೊರೆಯಲಿ
ಪಾಠಗಳನ್ನು ಕಲಿಯುವಂಥ ಅನುವು ದೊರೆಯಲಿ
ಹಸಿವು ಹೆದರಿಕೆ, ಕೊರತೆಗಳು ನೀಗಲಿ
ವರ್ಣ, ಧರ್ಮ, ಜಾತಿಗಳ ಭೇದ ಅಳಿಯಲಿ
ಮಾನವೀಯತೆಯಲ್ಲಿ ವಿಶ್ವಾಸ ಮೂಡಲಿ
ಇಂಥ ಮಕ್ಕಳ ಚಿತ್ರಿದ ಮುಖ ನಾವೆಲ್ಲ ನೋಡುವಂತಾಗಲಿ"

ಎಂದು ಈ ಪ್ರಸಂಗದಲ್ಲಿ ಪ್ರಾರ್ಥಿಸಿ ಕಾರ್ಯಪ್ರವೃತ್ತರಾಗೋಣ.

"ಪ್ರತಿಯೊಂದು ಮಗುವೂ ದೇವರು ಮಾನವನ ಬಗ್ಗೆ ಇನ್ನೂ ನಿರಾಶೆಗೊಂಡಿಲ್ಲ ಎಂಬ ಸಂದೇಶವನ್ನು ಹೊತ್ತುಕೊಂಡೇ ಬರುತ್ತದೆ."

—ರವೀಂದ್ರನಾಥ ಟಾಗೋರರ

ವಿಶ್ವಸಂಸ್ಥೆಯ ಮಕ್ಕಳ ಜರೂರು ನಿಧಿಯ ಕಾರ್ಯಕ್ರಮಗಳು

● ನಿರ್ಮಲಾ ಕೇಸರಿ

ವಿಶ್ವ ಸಂಸ್ಥೆಯ ಅಂಗವಾಗಿ ಸ್ಥಾಪಿಸಲಾಗಿರುವ ವಿಶ್ವ ಸಂಸ್ಥೆಯ ಮಕ್ಕಳ ಜರೂರು ನಿಧಿ ಮಕ್ಕಳ ಅಭ್ಯುದಯಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ೧೯೪೯ ರಿಂದ ಭಾರತದಲ್ಲಿ ಮಾಡುತ್ತ ಬಂದಿದೆ. ವಿಶ್ವ ಸಂಸ್ಥೆಯ ಅಂಗವಾಗಿ ವಿಶ್ವ ಸಂಸ್ಥೆಯ ಜರೂರು ನಿಧಿ ಮಕ್ಕಳಿಗಾಗಿ ಇರುವ ಏಕೈಕ ಸಂಸ್ಥೆ. ವಿಶ್ವ ಸಂಸ್ಥೆಯು ಮಕ್ಕಳ ಕಾರ್ಯಕ್ರಮಗಳನ್ನೆಲ್ಲಾ ಈ ಸಂಸ್ಥೆಯ ಅಂಗವಾಗಿಯೇ ಮಾಡುತ್ತದೆ. ಮಕ್ಕಳ ಅಭ್ಯುದಯವೇ ಈ ಸಂಸ್ಥೆಯ ಉದ್ದೇಶವಾದ್ದರಿಂದ ಪ್ರತಿ ವರ್ಷವೂ ಮಕ್ಕಳ ವರ್ಷವೇ: ಪ್ರತಿ ಕ್ಷಣವೂ ಮಕ್ಕಳ ಕ್ಷಣವೇ.

ಮಕ್ಕಳ ವರ್ಷದ ಕಾರ್ಯಕ್ರಮಗಳನ್ನು ನಿರ್ವಹಿಸಲು ವಿಶ್ವ ಸಂಸ್ಥೆಯು ಇಂಟರ್ ನ್ಯಾಶನಲ್ ಇಯರ ಸೇಕ್ರೆಟರಿಯೇಟ ಎಂಬ ಸಂಸ್ಥೆಯನ್ನು ನಿರ್ಮಿಸಿದೆ. ಇದರ ಶಾಖೆಗಳು ನ್ಯೂಯಾರ್ಕ ಮತ್ತು ಜಿನೇವಾದಲ್ಲಿ ನಿರ್ಮಿಸಲ್ಪಟ್ಟಿವೆ. ಈ ಸಂಸ್ಥೆಯು (ಐ ವೈ ಸಿ ಸೆಕ್ರೆರಿಯಟ್) ತನ್ನ ಕೆಲಸ ಕಾರ್ಯಗಳನ್ನು ವಿಶ್ವಸಂಸ್ಥೆಯ ಜರೂರು ನಿಧಿಯ ಮೂಲಕವೇ ನಿರ್ವಹಿಸಲು ನಿರ್ಧರಿಸಿದೆ.

ಇಪ್ಪತ್ತು ವರ್ಷಗಳ ಹಿಂದೆಯೇ ವಿಶ್ವಸಂಸ್ಥೆಯು ಮಗುವಿನ ಮೂಲಭೂತ ಹಕ್ಕು ಎಂಬ ಶೀರ್ಷಿಕೆಯಲ್ಲಿ ಕೆಳ ಕಂಡ ವಿಷಯಗಳನ್ನು ಮಂಡಿಸಿತ್ತು. ಆ ಹಕ್ಕುಗಳೇನಂದರೆ :

೧) ಮಮತೆ. ಪ್ರೀತಿ. ಮಗುವನ್ನು ಸರಿಯಾಗಿ ಅರಿತು ಅರ್ಥಮಾಡಿಕೊಳ್ಳುವದು

೨) ಸಾಕಷ್ಟು ಆಹಾರ ಮತ್ತು ವೈದ್ಯಕೀಯ ಶುಶ್ರೂಷೆಗಳನ್ನು ಒದಗಿಸುವದು

೩) ಉಚಿತ ವಿದ್ಯಾಭ್ಯಾಸ ನೀಡುವದು

೪) ಆಟ ಮತ್ತು ಮನರಂಜನೆಗೆ ಪೂರ್ಣಾವಕಾಶ

೫) ಹೆಸರು ಮತ್ತು ರಾಷ್ಟ್ರೀಯತೆಯ ಹಕ್ಕು

೬) ಅಂಗ ವಿಕಲಿತ ಮಕ್ಕಳಿಗೆ ವಿಶೇಷ ಸಹಕಾರ ಶುಶ್ರೂಷೆ

೭) ಅಪಘಾತ, ಅಪಾಯ ಕಾಲದಲ್ಲಿ ನೀಡುವ ಪರಿಹಾರ ಕ್ರಮಗಳಲ್ಲಿ ಆದ್ಯತೆ

೮) ಸಮಾಜದ ಉಪಯುಕ್ತ ಪ್ರಜೆಗಳಾಗುವದಕ್ಕೆ ಮತ್ತು ಸ್ವಸಾಮರ್ಥ್ಯದ ಬೆಳವಣಿಗೆಗೆ ಸಾಧನೆ

೯) ಶಾಂತ ಮತ್ತು ವಿಶ್ವ ಭ್ರಾತೃತ್ವದ ವಾತಾವರಣ ಕಲ್ಪಿಸಿ ಬೆಳವಣಿಗೆಗೆ ಅವಶ್ಯವಾದ ಶಾಂತಿಯನ್ನು ನೀಡುವದು

೧೦) ವರ್ಣ, ಜಾತಿ, ಧರ್ಮ, ರಾಷ್ಟ್ರೀಯತೆ, ಸಾಮಾಜಿಕ ಮೂಲ ಮುಂತಾದ ಯಾವ ಆತಂಕಗಳೂ ಇಲ್ಲದೆ ಮಕ್ಕಳು ಈ ಮೇಲಿನ ಹಕ್ಕುಗಳನ್ನು ಅನುಭವಿಸುವ ಹಕ್ಕು.

ಮುಖ್ಯವಾಗಿ ಈ ಮೇಲಿನ ಮೂಲಭೂತ ಹಕ್ಕುಗಳನ್ನು ಒದಗಿಸಿ ಕೊಡುವದು ಪ್ರತಿಯೊಬ್ಬ ಮಾನವನ, ದೇಶದ, ವಿಶ್ವದ, ಕರ್ತವ್ಯ. ವಿಶ್ವ ಸಂಸ್ಥೆಯು ಈ ವರ್ಷವನ್ನು ಮಕ್ಕಳ ವರ್ಷವೆಂದು ಘೋಷಿಸುವ ಉದ್ದೇಶವೆಂದರೆ ಮಾನವ ಕುಲ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಮಕ್ಕಳು ತಮ್ಮ ನಿಜವಾದ ಸ್ಥಾನವನ್ನು ಕಂಡು ಕೊಂಡಿಲ್ಲವಷ್ಟೇ ಅಲ್ಲದೆ ಅತೀವ ಅನ್ಯಾಯವನ್ನು ಅನುಭವಿಸುತ್ತಿರುವ ಮಕ್ಕಳ ಕಲ್ಯಾಣ. ವಿಶ್ವದ ಬಹು ಭಾಗದಲ್ಲಿ ಮಕ್ಕಳು ಆಹಾರವಿಲ್ಲದೆ, ವಿದ್ಯೆ ಇಲ್ಲದೆ, ಆರೋಗ್ಯವಂತರಾಗಿ ಬೆಳೆಯುವ ಸಾಧನೆಗಳಿಲ್ಲದೆ ಬಳಲುತ್ತಿದ್ದಾರೆ. ಮತ್ತು ಬದುಕಿ ಬೆಳೆಯಬೇಕಾದ ಮಕ್ಕಳು ಹೆಳವರು ಕುರುಡರು ಆಗುತ್ತಿದ್ದಾರೆ ಮತ್ತು ಅಸು ನೀಗುತ್ತಿದ್ದಾರೆ. ಸಾಮಾಜಿಕ ಕ್ರೌರ್ಯತೆಗೆ ತುತ್ತಾಗಿ ಕೆಲವು ಮಕ್ಕಳನ್ನು ತಂದೆ ತಾಯಿಂದಿರೇ ಕೊಂದು ಹಾಕುತ್ತಾರೆ. ಎಷ್ಟೋ ಮಕ್ಕಳು ಈಗಿನ ಸೌಕರ್ಯಗಳನ್ನು ಕಾಣದಿರುವದಷ್ಟೇ ಅಲ್ಲ ಅವುಗಳ ಅಸ್ತಿತ್ವವೂ ಗೊತ್ತಿಲ್ಲದಂತೆ ಬದುಕುತ್ತಿದ್ದಾರೆ. ಜೀವನದಲ್ಲಿ ಏನನ್ನು ಬಯಸಬೇಕು, ಬಯಸ ಬಹುದು ಎಂಬ ಜ್ಞಾನವೂ ಇಲ್ಲದೇ ಇದ್ದಾರೆ. ಈ ಮಕ್ಕಳ ವರ್ಷದ ಈ ಉದ್ದೇಶಗಳನ್ನು ಅಳವಡಿಸಿಕೊಂಡ ಒಂದು ಸಂಕೇತ ಚಿತ್ರವನ್ನು ರೂಪಿಸಲಾಗಿದೆ. ಅದರಲ್ಲಿ ಹಿರಿಯರು ಮಗುವನ್ನು ತಮ್ಮ ಬಾಹುಗಳಲ್ಲಿ ಬಾಚಿ ಪ್ರೇಮ ಮತ್ತು ರಕ್ಷಣೆ ನೀಡುವಂತೆಯೂ ಮತ್ತು ಮಗು ಆಶೆಯಿಂದ ತನ್ನ ಕೈಗಳನ್ನು ಮೇಲೆತ್ತಿ ಪ್ರೇಮ ಮತ್ತು ರಕ್ಷಣೆ ಕೇಳುವಂತೆಯೂ ಚಿತ್ರಿಸಲಾಗಿದೆ.

ಈ ಅಂಶಗಳನ್ನು ಜಾರಿಗೆ ತರಲು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :

೧) ಸಿರಿವಂತ ಬಡರಾಷ್ಟ್ರಗಳೆಂಬ ಭೇದವಿಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳೂ ತಮ್ಮ ಮಕ್ಕಳ ಕಲ್ಯಾಣವನ್ನು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಪರಿಶೀಲಿಸುವದು ಮತ್ತು ಪ್ರತಿಯೊಂದು ರಾಷ್ಟ್ರ ತನ್ನ ಶಕ್ತಿಗೆ ಅನುಕೂಲವಾಗಿ ತಮ್ಮ ದೇಶದ ಅವಶ್ಯ

ಕತೆ ಮತ್ತು ಆದ್ಯತೆಗಳನ್ನು ಕಂಡು ಹಿಡಿದು ಅವುಗಳ ನಿವಾರಣೆಗಾಗಿ ಕಾರ್ಯಕ್ರಮ ಗಳನ್ನು ಹಾಕಿ ಕೊಳ್ಳುವದು; ಮಕ್ಕಳಿಗಾಗಿ ಇರುವ ರಾಷ್ಟ್ರೀಯ ಹಾಗೂ ಸ್ಥಳೀಯ ಕಾರ್ಯಕ್ರಮಗಳನ್ನು ಬೆಂಬಲಿಸುವದು.

೨) ರಾಷ್ಟ್ರ ನಿರ್ಮಾಣ ಕಾರ್ಯಕ್ರಮದಲ್ಲಿ ನಿರತರಾದ ಗಣ್ಯ ವ್ಯಕ್ತಿಗಳಿಗೂ ಹಾಗೂ ಸಾರ್ವಜನಿಕರಿಗೂ ಮಕ್ಕಳ ಅವಶ್ಯಕತೆಗಳನ್ನು ಸರಿಯಾದ ರೀತಿಯಲ್ಲಿ ತಿಳಿಸಿ ಕೊಡುವದು.

೩) ಮಕ್ಕಳಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ದೇಶದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯ ನಡುವಣ ಸಂಬಂಧವನ್ನು ಮನದಟ್ಟು ಮಾಡಿಕೊಡುವದು.

೪) ರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಪ್ರಯೋಜನಕ್ಕಾಗಿ ಅಲ್ಪಾವಧಿಯ ಹಾಗೂ ಧೀರ್ಘಾವಧಿಯ ಕಾರ್ಯಕ್ರಮಗಳನ್ನು ಹಾಗೂ ಅವರ ಕ್ಷೇಮಕ್ಕಾಗಿ ವಾಸ್ತವಿಕ ವಾದ ಹಾಗೂ ಕಾರ್ಯ ಸಾಧ್ಯವಾದ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ದೇಶಗಳನ್ನು ಪ್ರೇರೇಪಿಸುವದು.

೫) ಮಕ್ಕಳ ಅಂತರರಾಷ್ಟ್ರೀಯ ವರ್ಷವು ಮಕ್ಕಳ ದೇಹಾರೋಗ್ಯದ ಜೊತೆಗೆ ಅವರ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಹೆಚ್ಚಿನ ಮಹತ್ವ ಕೊಡುವದೆಂದು ನಂಬಲಾಗಿದೆ.

ಹೆಚ್ಚಿನ ಸೌಲಭ್ಯವನ್ನು ಯಾವ ಸೌಕರ್ಯಗಳೂ ಸಿಗದಂತಹ ಕೊಳಚೆ ಪ್ರದೇಶ. ಹಳ್ಳಿಯ ಬಡಮಕ್ಕಳು. ಅಂಗ ವಿಕಲರು. ಮತ್ತು ಅನಾಥ ಮಕ್ಕಳಿಗೆ ಸಂಪೂರ್ಣವಾಗಿ ಸಿಗುವಂತೆ ಮಾಡುವದೂ ಒಂದು ಮುಖ್ಯವಾದ ಕೆಲಸ. ಈ ಮಕ್ಕಳಿಗೆ ಆರೋಗ್ಯ, ಆಹಾರ, ಸ್ವಚ್ಛತೆ, ವಿದ್ಯೆ, ಎಲ್ಲವೂ ಸಿಗುವಂತೆ ಮಾಡುವದು ಮುಖ್ಯ ಕರ್ತವ್ಯ. ಸಂಶೋಧನೆಯೂ ಈ ದಿಶೆಯಲ್ಲಿ ಒಂದು ಮುಖ್ಯ ಅಂಶ. ಯಾವ ಯಾವ ಭಾಗಗಳಲ್ಲಿ ಯಾವ ಯಾವ ಕೊರತೆಗಳು ಇವೆ ಎಂದು ಕಂಡು ಹಿಡಿದು ಅವನ್ನು ನಿವಾರಿಸುವ ಸುಲಭ ಸಾಧ್ಯ ಮಾರ್ಗಗಳು ಯಾವವು ಎಂದು ನಿರ್ಧರಿಸುವದು ಮತ್ತು ಅವನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡುವದು.

ಭಾರತದಲ್ಲಿ ಈಗ ೧೨ ಕೋಟಿ ಮಕ್ಕಳು ಇದ್ದು ಇನ್ನು ಹತ್ತು ವರ್ಷಗಳಲ್ಲಿ ಈ ಮಕ್ಕಳ ಸಂಖ್ಯೆ ಸುಮಾರು ೧೫ ಕೋಟಿಗೆ ಹೆಚ್ಚುವದೆಂದು ನಿರೀಕ್ಷಿಸಲಾಗಿದೆ. ಹೆಚ್ಚು ಮಕ್ಕಳು ಕೊಳಚೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹುಟ್ಟಿ ಬೆಳೆಯುವರು ಮತ್ತು ಬಡತನ ಹಾಗೂ ಅಜ್ಞಾನದಿಂದ ಆಗುವ ಎಲ್ಲ ತೊಂದರೆಗಳಿಗೂ ಈಡಾಗುವರು. ಹಸಿವು ಮತ್ತು ರೋಗ ರುಜಿನುಗಳಿಂದ ಕಷ್ಟಕ್ಕೆ ಈಡಾಗುವರು. ಇದನ್ನು ತಪ್ಪಿಸಿ ಈ ಮಕ್ಕಳಿಗೆ

ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಬೇಕಾಗಿದೆ. (To reach the unreached)

ಮಕ್ಕಳ ಬೆಳವಣಿಗೆ ಅಗತ್ಯವೆನಿಸಿದ ಮೂಲಭೂತ ಸೇವೆಗಳೆಂದರೆ :

೧) ಆರೋಗ್ಯ ಪಾಲನೆ (ತಾಯಿಗೆ, ಶಿಶುಗಳಿಗೆ, ಮಕ್ಕಳಿಗೆ, ಪ್ರಾಥಮಿಕ ಆರೋಗ್ಯ ಪಾಲನೆ, ಆರೋಗ್ಯ ಶಿಕ್ಷಣ ಮತ್ತು ರೋಗ ನಿಯಂತ್ರಣ.)

೨) ಸ್ವಚ್ಛವಾದ ನೀರಿನ ಸರಬರಾಜು (ನೈರ್ಮಲ್ಯದ ಅಭಾವದಿಂದಾಗಿ ರೋಗಗಳನ್ನು ತಡೆಯುವಂತೆ ಕುಡಿಯಲು, ಅಡಿಗೆ ಮಾಡಲು. ಸ್ನಾನ ಮಾಡಲು ಸ್ವಚ್ಛವಾದ ನೀರು ಸಿಗುವಂತೆ ಮಾಡುವದು.)

೩) **ಪೌಷ್ಟಿಕ ಆಹಾರ :** ಅಪೌಷ್ಟಿಕತನವನ್ನು ನಿವಾರಿಸುವಂತಹ ಮತ್ತು ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಾಯಕಾರಿಯಾಗುವಂತಹ ಯೋಗ್ಯವಾದ ಸಾಕಷ್ಟು ಆಹಾರ ಸಿಗುವಂತೆ ಮಾಡುವುದು.

೪) **ವಿದ್ಯಾಭ್ಯಾಸ :** ಅನಕ್ಷರತೆ ಮತ್ತು ಅಜ್ಞಾನದಿಂದ ಮಕ್ಕಳನ್ನು ಕಾಪಾಡಲು ಪ್ರಾಥಮಿಕ ಶಾಲಾ ಶಿಕ್ಷಣ ಮತ್ತು ಶಾಲೆಯಿಂದ ಹೊರಗಿರುವಾಗ ಶಿಕ್ಷಣ ಕೊಡುವದು.

೫) **ತರಬೇತಿ :** ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ನಿಯೋಜಿಸಲು ಆರೋಗ್ಯ ಕಾರ್ಯಕರ್ತರು, ಪೌಷ್ಟಿಕ ಆಹಾರ ತಜ್ಞರು ಮತ್ತು ಇತರ ಸೇವೆಗಳನ್ನು ನೀಡುವವರಿಗೆ ತರಬೇತಿ.

೬) **ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು :** ಕುಟುಂಬ ಮತ್ತು ಸಾಮುದಾಯಿಕ ಜೀವನವನ್ನು ಉತ್ತಮಗೊಳಿಸಲು ಕೆಲಸದ ಸಮಯದಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಕೇಂದ್ರಗಳು, ಯುವಜನ ಹಾಗೂ ಮಹಿಳಾ ತಂಡಗಳು ಹಾಗೂ ಸ್ವಸಹಾಯ ಯೋಜನೆಗಳು.

ಈ ಕಾರ್ಯಕ್ರಮಗಳಿಂದ ಮಕ್ಕಳನ್ನು ಗಂಡಾಂತರಗಳಿಂದ ಸಂರಕ್ಷಿಸಿ ಮುಂದಿನ ಜೀವನಕ್ಕೆ ಸಿದ್ಧಗೊಳಿಸಲು ಸಾಧ್ಯ. ಈ ಮಕ್ಕಳಿಂದ ದೇಶೋದ್ಧಾರಕ ಕೆಲಸಗಳಾಗಬೇಕಾಗಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲೂ ಯೂನಿಸೆಫ್ (UNICEF) ಬಹಳ ಆಸ್ಥೆಯಿಂದ ಭಾಗವಹಿಸುತ್ತಿದೆ.

ತಾಯಿ ಮತ್ತು ಮಗುವಿನ ಆರೋಗ್ಯ :

ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಸಹಾಯ ನೀಡಲು ಯೂನಿಸೆಫ್ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ನಮ್ಮ ದೇಶದಲ್ಲಿಯ ಸಹಾಯದ

ಕಾಲು ಭಾಗ, ಅಂದರೆ ೫೬,೮೦೦,೦೦೦ ಡಾಲರುಗಳನ್ನು ಐದನೆಯ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ (೧೯೭೪-೧೯೭೯) ಕುಟುಂಬ ಕಲ್ಯಾಣದ ಅಂಗವಾಗಿ ತಾಯಿ ಮಗುವಿನ ಆರೋಗ್ಯಕ್ಕಾಗಿ ಮೀಸಲಾಗಿಟ್ಟಿದೆ. ಇದನ್ನು ಹೆರಿಗೆಗೆ ಸಹಾಯಕವಾದ ಸಾಮಾನುಗಳ ಶೀತ ಪೆಟ್ಟಿಗೆ (Refrigerator), ಔಷಧಿ, ಚುಚ್ಚು ಮದ್ದುಗಳು ಆಹಾರ, ಪಟ್ಟಣ ಮತ್ತು ಗ್ರಾಮೀಣ ಆರೋಗ್ಯ ಕೇಂದ್ರಗಳಿಗೆ ಹಾಗೂ ವೇತನಗಳಿಗೆ ವಿನಿಯೋಗಿಸಲಾಗುತ್ತಿದೆ.

ಮುಕ್ಕಾಲು ಪಾಲು ೫೨,೦೦೦ ಪ್ರಾಥಮಿಕ ಆರೋಗ್ಯಕೇಂದ್ರಗಳಿಗೂ, ಮೂರನೇ ಒಂದರಷ್ಟು ೩೦,೦೦೦ ಉಪಕೇಂದ್ರಗಳಿಗೂ ಯೂನಿಸೆಫ್ ಈಗಾಗಲೇ ಸಹಾಯ ನೀಡಿವೆ. ಈ ವರ್ಷದ ಕೊನೆಯೊಳಗಾಗಿ ಎಲ್ಲ ಕೇಂದ್ರಗಳಿಗೂ ಸಹಾಯ ಸಲ್ಲಿಸಲಾಗುತ್ತಿದೆ. ನೂರಾರು ಪಟ್ಟಣ ಕುಟುಂಬಕೇಂದ್ರಗಳಿಗೆ ಮತ್ತು ೧೦೦ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಮಕ್ಕಳಿಗೆ ಹೆಚ್ಚಿನ ಸೌಕರ್ಯ ಸಿಗುವಂತೆ ಸಹಾಯಮಾಡುತ್ತದೆ.

ಭಾರತದಲ್ಲಿ ಸಿಡುಬಿನ ವಿರುದ್ಧ ಮಾಡಿದಯುದ್ಧದಲ್ಲಿ ಯಶಸ್ವಿಯಾದನಂತರ ಮಲೇರಿಯಾ (ಛಳಿಜ್ವರ) ಕಾಯಿಲೆ ಬೃಹದಾಕಾರವಾಗಿ ಬೆಳೆದುನಿಂತಿದೆ. ೧೯೭೬ರಲ್ಲಿ ೪ ಲಕ್ಷ ಜನರು ಛಳಿಜ್ವರದಿಂದ ಬಳಲುತ್ತಿರುವುದಾಗಿ ವರದಿ ಮಾಡಲಾಗಿತ್ತು. ಈ ಕಾಯಿಲೆಯನ್ನು ತಡೆಗಟ್ಟಲು ಶಕ್ತಿಮೀರಿ ಪ್ರಯತ್ನ ನಡೆದಿದೆ. ಸರಕಾರದ ಕೇಳಿಕೆಯ ಮೇರೆಗೆ ೧೧೭೦ ಲಕ್ಷ ಮಲೇರಿಯಾ ನಿರೋಧಕ ಮಾತ್ರೆಗಳನ್ನು ಸರಕಾರ ಕೊಡುವ ಮಾತ್ರೆಗಳಿಗೆ ಪೂರಕವಾಗಿ ಹೆಚ್ಚಾಗಿ ಬಳಲುವ ಪ್ರದೇಶಗಳಲ್ಲಿ ಹಂಚಲು ಸಹಾಯಮಾಡಿದೆ. Central Research Institute of Kasauli ಗೆ ರೋಗನಿರೋಧಕ ಚುಚ್ಚುಮದ್ದುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಬೇಕಾದ ಯಂತ್ರಗಳನ್ನು ಪರದೇಶಗಳಿಂದ ತರಿಸಲು ಸಹಾಯಮಾಡಿ ನಮ್ಮ ದೇಶಕ್ಕೆ ಬೇಕಾದ ಎಲ್ಲಾ ಚುಚ್ಚುಮದ್ದುಗಳನ್ನು ನಮ್ಮ ದೇಶದಲ್ಲಿಯೇ ತಯಾರುಮಾಡಲು ಸಹಾಯ ನೀಡಿದೆ. ಅದು ಕಾರ್ಯಗತವಾಗುವವರೆಗೆ ತ್ರಿರೋಗ ನಿರೋಧಕ ಚುಚ್ಚುಮದ್ದನ್ನು ನಮ್ಮ ದೇಶಕ್ಕೆ ಯೂನಿಸೆಫ್ ಕೊಡಲೊಪ್ಪಿದೆ. ಈ ರೀತಿ ದೇಶಾದ್ಯಂತ ಚುಚ್ಚುಮದ್ದನ್ನು ಕೊಡಬೇಕೆಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳನ್ನು ಕೆಲವು ಕಾಯಿಲೆಗಳಿಂದ ರಕ್ಷಿಸಲು ಸಹಾಯ ಮಾಡುತ್ತಿದೆ.

ಪೌಷ್ಟಿಕ ಆಹಾರ ಯೋಜನೆ

ನಿರಾಹಾರ ನಿರ್ಮೂಲನ ಕಾರ್ಯಕ್ರಮ: ಇದು ಮುಖ್ಯವಾಗಿ ಆಹಾರದ ವಿಷಯವಾಗಿ ಶಿಕ್ಷಣ ಕೊಟ್ಟು ಅದನ್ನು ಅನುಸರಿಸಿ ತಾನೇ ತಮ್ಮ ಆರೋಗ್ಯ ಕಾಯ್ದುಕೊಳ್ಳುವಂತೆ ಸಹಾಯ ಮಾಡುವದು. ನಮ್ಮ ದೇಶದಲ್ಲಿ ಬಡತನವಿರುವದು ಸರ್ವ

ವಿದಿತ. ಆದರೆ ಆಹಾರದ ವಿಷಯವಾಗಿ ಸರಿಯಾದ ತಿಳುವಳಿಕೆ ಇಲ್ಲದ್ದರಿಂದ ಇನ್ನೂ ಹೆಚ್ಚಿನ ತೊಂದರೆಗೆ ಈಡಾಗಿದ್ದೇವೆ. ಅದರಲ್ಲಿಯೂ ಮುಖ್ಯವಾಗಿ ಮಕ್ಕಳಿಗೆ ಒದಗಿಸಬೇಕಾದ ಆಹಾರದ ವಿಷಯವಾಗಿ ತಿಳುವಳಿಕೆ ನೀಡುವದು ಅತ್ಯವಶ್ಯ.

ಈ ಯೋಜನೆಯಿಂದ ಆಹಾರದ ವಿಷಯವಾಗಿ ಹೆಚ್ಚಿನ ತಿಳುವಳಿಕೆ ಆಗಿ, ಅದನ್ನು ಮಾಡುವ ರೀತಿ, ಬಳಸುವ ರೀತಿ ತಿಳಿಯುವದರಿಂದ ಆಹಾರ ಬೆಳವಣಿಗೆಗೂ ಸಹಾಯವಾಗುತ್ತದೆ. ಈ ಕಾರ್ಯಕ್ರಮವನ್ನು ಅಳವಡಿಸುವದರಿಂದ ಕುಟುಂಬಕ್ಕೆ ಯಾವ ಹೆಚ್ಚಿನ ಖರ್ಚೂ ಬೀಳುವದಿಲ್ಲ. ಆದರೆ, ಇದರಿಂದ ಆಗುವ ಲಾಭ ಅವರ್ಣನೀಯ. ಮಕ್ಕಳ ಮರಣ ಸಂಖ್ಯೆ ಕಡಿಮೆ ಆಗಿ, ಬೆಳವಣಿಗೆ ಹೆಚ್ಚಿ, ಆರೋಗ್ಯವಂತರಾಗಿ, ಶಕ್ತಿಯುತರಾಗಿ ಸಂತೋಷದಿಂದಿದ್ದು ಜಾಣ ಪ್ರಜೆಗಳಾಗುತ್ತಾರೆ. ಪೌಷ್ಟಿಕ ಆಹಾರ ಯೋಜನೆಗೂ ಕೃಷಿ ವ್ಯವಸಾಯ ಪುಷ್ಟೀಕರಣಕ್ಕೂ ನಿಕಟ ಸಂಬಂಧವಿದೆ.

ಈ ಕಾರ್ಯಕ್ರಮಕ್ಕೆ ಪೂರಕವಾಗಿ ಉತ್ತಮ ತರಗತಿಯ ಬೀಜ; ನಮ್ಮ ದೇಶದ "ಗಿಡನೆಡುವ ಕಾರ್ಯಕ್ರಮ"ದ ಅಂಗವಾಗಿ ಜಿಲ್ಲಾಮಟ್ಟದ ಸಸ್ಯಪಾಲನಾಲಯಗಳಿಗೆ ಸಹಾಯ: ಆಹಾರ ಸಂಗ್ರಹವನ್ನು ಸಂರಕ್ಷಿಸುವದು, ಹೆಚ್ಚಿಗೆ ಆಹಾರ ಬೆಳೆಸುವದು ಮತ್ತು ಅದಕ್ಕೆ ಸಲಹೆಗಳನ್ನು ಕೊಡುವದು, ಮಕ್ಕಳ ಮತ್ತು ಆಹಾರ ಸಂರಕ್ಷಣೆ, ಅವುಗಳ ಬೆಳವಣಿಗೆಗೆ ಸಹಾಯಕ ಸೌಲಭ್ಯಗಳನ್ನು ತಯಾರಿಸುವದು, ಸ್ವಯಂ ಸೇವಕರಿಗೂ, ಮತ್ತು ಆಹಾರ, ಆರೋಗ್ಯದ ಸಿಬ್ಬಂದಿಗಳ ತರಬೇತಿಗೂ ಸಹಾಯ ಮಾಡುವುದು ಅವಶ್ಯವಾಗಿದೆ.

ಪ್ರಾಥಮಿಕ ಶಿಕ್ಷಣ : ಯೂನಿಸೆಫ್‌ನ ಶೈಕ್ಷಣಿಕ ಗುರಿಗಳೆಂದರೆ– ಮಕ್ಕಳು ಈ ವೈಜ್ಞಾನಿಕ, ಶಾಸ್ತ್ರತಂತ್ರಗಳಿಂದ ತುಂಬಿ ಬದಲಾಗುತ್ತಿರುವ ವಿಶ್ವದಲ್ಲಿ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಮೂಲಕ ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಪರಿಸರಕ್ಕೆ ಹೊಂದಿಕೊಂಡು ಸುಖವಾಗಿ ಬಾಳಬೇಕು ಎಂಬುದು. ಭಾರತ ರಾಷ್ಟ್ರದ ಏಳಿಗೆಗೆ ಶಿಕ್ಷಣ ಬಹಳ ಅವಶ್ಯವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ಯೂನಿಸೆಫ್‌ನ ವಿಜ್ಞಾನ ಶಿಕ್ಷಣದ ಕಾರ್ಯಕ್ರಮ (Science Education Programme) ದ ಉದ್ದೇಶವೆಂದರೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿಯ ವೈಜ್ಞಾನಿಕ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವದು, ಶಾಲೆಯ ಅಧ್ಯಾಪಕರ ತರಬೇತಿ ಮತ್ತು ಅವರ ಹೆಚ್ಚಿನ ತರಬೇತಿಗೆ ಸಹಾಯ ನೀಡುವದು.

ಮೊದಲ ಹಂತದಲ್ಲಿ ಬೇರೆ ಬೇರೆ ಭಾಗಗಳಲ್ಲಿ ದೆಹಲಿಯಲ್ಲಿಯ "ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ" (National Council of

Educational Research and Training) (NCERT) ಯವರು ಮಾಡಿದ ವಿಜ್ಞಾನ ಅಭ್ಯಾಸದ ಸಹಾಯಕ ಸಲಕರಣೆಗಳನ್ನು ಪರೀಕ್ಷಿಸುವ ಸುಸಂಧಿಯನ್ನು ಕಲ್ಪಿಸಿ ಕೊಡಲು ಕೆಲವು ಶಾಲೆಗಳನ್ನು ಆಯ್ಕೆಮಾಡಿ ಆ ಸಲಕರಣೆಗಳನ್ನು ಒದಗಿಸಿ, ಆ ಸಲಕರಣೆಗಳನ್ನು ತಮ್ಮ ಕೆಲಸಕ್ಕೆ ಅನುಗುಣವಾದ ರೀತಿಯಲ್ಲಿ ಬದಲಿಸಿ, ಕಡಿಮೆ ಖರ್ಚಿನಲ್ಲಿ ಅವುಗಳನ್ನು ಸ್ಥಳೀಯ ವಸ್ತುಗಳಿಂದಲೇ ತಯಾರು ಮಾಡುವಂತೆ ಪ್ರೋತ್ಸಾಹ ಕೊಡಲಾಗುತ್ತಿದೆ.

೧೯೭೬ನೇ ವರ್ಷದವರೆಗೆ ಯೂನಿಸೆಫ್ ೩೬,೩೧೪ ಪ್ರಾಥಮಿಕ ಶಾಲೆಗಳಿಗೂ ೧೮,೧೦೮ ಮಾಧ್ಯಮಿಕ ಶಾಲೆಗಳಿಗೂ ವೈಜ್ಞಾನಿಕ ಶಿಕ್ಷಣ ತರಬೇತಿ ಸಲಕರಣೆಗಳನ್ನು ಒದಗಿಸಿದೆ. ಇದರಿಂದ ೮೧ ಲಕ್ಷ ಮಕ್ಕಳಿಗೆ ಸಹಾಯ ದೊರೆತಿದೆ. ೧೯೭೫–೭೬ರ ವರೆಗೆ ೬೩,೧೧೧ ಶಾಲೆಯ ಉಪಾಧ್ಯಾಯರು ಹೆಚ್ಚಿನ ತರಬೇತಿ ಪಡೆದಿದ್ದಾರೆ. ಯೂನಿಸೆಫ್‌ನ ಸಹಾಯದಿಂದ ೫೭೯ ಮುಖ್ಯೋಪಾಧ್ಯಾಯರು ಹೆಚ್ಚಿನ ತರಬೇತಿ ಪಡೆದು ಶಾಸ್ತ್ರೀಯ ಪ್ರಯೋಗಶಾಲೆಗಳಿಗೆ ಬೇಕಾದ ಸಲಕರಣೆಗಳನ್ನೂ, ಕಾರಖಾನೆಯ ಸರಬರಾಜುಗಳನ್ನು ಪುಸ್ತಕ ಭಾಂಡಾರಗಳಿಗೆ ಪುಸ್ತಕಗಳನ್ನು ಒದಗಿಸಲಾಗಿದೆ. ೯೮ ಉಪಾಧ್ಯಾಯರ ತರಬೇತಿ ಕೇಂದ್ರಗಳಿಗೂ ಸಹಾಯ ನೀಡಿದೆ. ಸಾಧಾರಣ ೧೦.೦೦೦ ಮೀಟರ ಟನ್ ಕಾಗದವನ್ನು ಪಠ್ಯಪುಸ್ತಕಗಳನ್ನು ಇನ್ನಿತರ ಪ್ರಕಟಣೆಗಳನ್ನು ಒದಗಿಸಿದೆ.

ಪ್ರಾಥಮಿಕ ಶಾಲಾ ಪಠ್ಯ ಕ್ರಮವನ್ನು ಬದಲಾಯಿಸುವ ಕಾರ್ಯಕ್ರಮವೆಂದರೆ ಬೇರೆ ಬೇರೆ ಭಾಗದ ಶಾಲೆಗಳಿಗೆ ೧ ರಿಂದ ೫ ನೇ ತರಗತಿಯವರೆಗೆ ಕೆಲವು ಹಿಂದುಳಿದ ಭಾಗಗಳಲ್ಲಿನ ಶಾಲೆಗಳಿಗೆ ಸಹಾಯ ಮಾಡುವದು. ಯೂನಿಸೆಫ್ ಕೆಲಸವು ನಮ್ಮ ರಾಷ್ಟ್ರದ ನೀತಿಗೆ ಅನುಗುಣವಾಗಿದ್ದು ಬೇರೆ ಬೇರೆ ತರಹದ ನೆರವು ನೀಡುವದು. ೪೫೦ ಶಾಲೆಗಳಿಗೆ ಇದುವರೆಗೆ ಅಂತಹ ಸಹಾಯ ದೊರೆತಿದೆ.

ಸಾಮಾಜಿಕ. ಶೈಕ್ಷಣಿಕ ಸುಧಾರಣೆ ಮುಂದುವರಿಯುವದಕ್ಕೆ ಬೇಕಾದ ಹೊಸ ವಿಧಾನದ ಕಾರ್ಯಕ್ರಮಗಳನ್ನು ಕೈಕೊಂಡು ಹಿಂದುಳಿದ ವಿಭಾಗಗಳಲ್ಲಿ ಕನಿಷ್ಠ ಶಿಕ್ಷಣವಾದರೂ ಮುಟ್ಟುವಂತೆ ಮಾಡುವದೇ ಅದರ ಮೂಲ ಉದ್ದೇಶಗಳಲ್ಲಿ ಒಂದು.

ಸ್ವಚ್ಛ ನೀರಿನ ಸರಬರಾಜು :

ಶುಚಿಯಾದ ನೀರು ಆರೋಗ್ಯಕ್ಕೆ ಅತ್ಯವಶ್ಯ. ನೀರು ಸುಲಭವಾಗಿ ಸಿಗುವಲ್ಲಿ ಜನರ ಸ್ವಚ್ಛತೆಯು ಮುಟ್ಟಿ ಬೇರೆ ಯಾವ ತರಬೇತಿ, ಜ್ಞಾನವಿಲ್ಲದೆ ಹೆಚ್ಚುತ್ತದೆ. ಒಳ್ಳೆಯ ಕುಡಿಯುವ ನೀರಿನಿಂದ ಕೆಲವು ಕಾಯಿಲೆಗಳನ್ನು ತಡೆಗಟ್ಟಬಹುದು. ಬಳಸುವ ನೀರು ಸ್ವಚ್ಛವಾಗಿ ಯಥೇಚ್ಛವಾಗಿ ದೊರೆತಲ್ಲಿ ಪರಿಸರದ ಸ್ವಚ್ಛತೆಯೂ ಹೆಚ್ಚಾಗುತ್ತದೆ ಮತ್ತು ಪರಿಸರದಿಂದ ಬರುವ ಕಾಯಿಲೆಗಳನ್ನೂ ತಡೆಗಟ್ಟಬಹುದು. ಯೂನಿಸೆಫ್

ಇದುವರೆಗೆ ೧೫೯ ಗಟ್ಟಿ ಕಲ್ಲು ನೆಲವನ್ನು ಅಗಿಯುವ ಯಂತ್ರಗಳನ್ನು (Hand Rock Drilling Rigs) ನೀರಿಲ್ಲದ ಒಣ ಪ್ರದೇಶಗಳಲ್ಲಿ, ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಾವಿ ತೋಡಲು ತಂದಿದೆ. ಈಗಾಗಲೇ ೨೭,೦೦೦ ಬಾವಿಗಳನ್ನು ತೋಡಲಾಗಿದೆ, ಮತ್ತು ಅವುಗಳಿಗೆ ೨೦,೭೦೦ ಪಂಪುಗಳನ್ನು ಹಾಕಲಾಗಿದೆ. ಈ ಮೂಲಕ ಈಗಾಗಲೇ ೧೨ ಕೋಟಿ ಜನರಿಗೆ ನೀರಿನ ಸರಬರಾಜು ಮಾಡಿದೆ. ಭಾರತ ಸರಕಾರವೂ ಎಷ್ಟೋ ಪಂಪುಗಳನ್ನೂ ತಂದಿದೆ. ಯೂನಿಸೆಫ್ ಮತ್ತು ಭಾರತ ಸರಕಾರ ಒಟ್ಟಾಗಿ ಈಗಾಗಲೇ ೪೦,೦೦೦ ಬಾವಿಗಳನ್ನು ತೋಡಿ ಆಗಿದೆ. ಮಧ್ಯಪ್ರದೇಶ, ಆಂಧ್ರ, ಮಹಾರಾಷ್ಟ್ರ, ಓರಿಸ್ಸಾ, ರಾಜಸ್ಥಾನ, ಗುಜರಾತ, ಕರ್ನಾಟಕ, ತಮಿಳುನಾಡು, ಬಿಹಾರ ಮುಂತಾದ ಪ್ರದೇಶಗಳಲ್ಲಿ ಈ ಕೆಲಸವನ್ನು ಮುನ್ನಡೆಸಲಾಗಿದೆ.

ಆದರೆ ಎಷ್ಟೋ ಕಡೆಗೆ ಹಾಕಿದ ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ; ಕೆಲವು ಕಡೆಗೆ ಕೆಟ್ಟು ಹೋಗಿವೆ, ಇನ್ನೂ ಕೆಲವು ಕಡೆಗಳಲ್ಲಿ ಅಜ್ಞಾನದ ಕಾರಣದಿಂದಾಗಿ ನೀರಿನ ಉಪಯೋಗ ಮಾಡುತ್ತಿಲ್ಲ. ಈ ಪಂಪುಗಳು ಮತ್ತು ಬಾವಿ ನೀರಿನ ಉಪಯೋಗ ಸರಿಯಾಗಿ ಆಗದೆ ಇರಲು ಕಾರಣಗಳೆಂದರೆ, ಅವುಗಳನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಮತ್ತು ಈ ಪಂಪುಗಳು ಬಹಳ ಜನರಿಗೆ ನೀರಿನ ಪೂರೈಕೆ ಮಾಡಬೇಕಾಗುತ್ತದೆ. ಈ ಪಂಪುಗಳನ್ನು ಸರಿಪಡಿಸುವದು ಅಥವಾ ಬೇರೆ ಪಂಪುಗಳನ್ನು ಹಾಕಿಸುವದೇ ಒಂದು ದೊಡ್ಡ ಕಾರ್ಯಕ್ರಮ. ಈ ಕಾರಣಕಾಗಿ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಕೊಡುವ ಪಂಪುಗಳ ಸಂಶೋಧನೆ ಮಾಡಲು ಯೂನಿಸೆಫ್ ಸಹಾಯ ಮಾಡುತ್ತಿದೆ.

ತಮಿಳು ನಾಡಿನಲ್ಲಿ ಮೂರು ಮಟ್ಟದ (೩ tier) ಸಹಾಯ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಹಳ್ಳಿಗಳಲ್ಲಿ ಸಣ್ಣಪುಟ್ಟ ತಪ್ಪುಗಳನ್ನು ಸರಿಪಡಿಸುವದು ಕೆಳ ಮಟ್ಟದ ಕೆಲಸ ಮತ್ತು ಇದನ್ನು ಹಳ್ಳಿಗಳಲ್ಲಿ ಸ್ವಯಂಸೇವಕರು ಮಾಡತಕ್ಕದ್ದು. ಎರಡನೇ ಮಟ್ಟದಲ್ಲಿ ಒಂದೊಂದು ಭಾಗಕ್ಕೆ (ಬ್ಲಾಕ) ಒಬ್ಬ ಇನಸ್ಪೆಕ್ಟರ ಇದ್ದು ಇವನು ಸ್ವಲ್ಪ ಹೆಚ್ಚಿನ ಕೆಲಸವನ್ನು ಮಾಡಬಲ್ಲ. ಅಷ್ಟೇ ಅಲ್ಲದೆ ಏನಾದರೂ ಹೆಚ್ಚಿನ ಕೆಲಸವಿದ್ದಲ್ಲಿ ಮೇಲ್ಮಟ್ಟದ ಸರಿಪಡಿಸುವ ಚಲಿತ (mobile workships)ಸಂಸ್ಥೆಗೆ ತಿಳಿಸಿ ಅದನ್ನು ಕರೆಸಿ ತುರ್ತಾಗಿ ಸರಿಪಡಿಸುವದೇ ಅವನ ಕೆಲಸ. ಮೇಲ್ಮಟ್ಟದ ಚಲಿತ ಸಂಸ್ಥೆಯಲ್ಲಿ ಆ ಪಂಪು ಸರಿಪಡಿಸಲು ಸಾಧ್ಯವಿದ್ದಲ್ಲಿ ಸರಿಪಡಿಸಿ, ಇಲ್ಲವಾದಲ್ಲಿ ಹೊಸ ಪಂಪು ಕೂಡಿಸಲು ಸಲಹೆ ನೀಡಿ ಅದನ್ನು ತಂದು ಕೂಡಿಸಲು ಸಹಾಯ ಮಾಡುವ ಹಕ್ಕು ಇರುವ ಸಂಸ್ಥೆ. ಈ ತರಹದ ಮೂರು ಮಟ್ಟದ ಸಂಸ್ಥೆಗಳನ್ನು ಎಲ್ಲಾ ಕಡೆಗೂ ಜಾರಿಗೆ ತರಲು ನಿರ್ಧಾರ ಮಾಡಲಾಗಿದೆ.

೫ ನೇ ಪಂಚವಾರ್ಷಿಕ ಯೋಜನೆಯಲ್ಲಿ (UNICEF) ಒಟ್ಟು ಬಾಧಿತ. ನೀರಿಲ್ಲದ, ಕಾಯಿಲೆಗಳಿಂದ ಕೂಡಿದ ೨೫,೦೦೦ ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆ ಮಾಡಲು

ಸರಕಾರಕ್ಕೆ ಸಹಾಯ ಮಾಡುತ್ತಿದೆ. ಆರೋಗ್ಯಕರವಾದ, ಸ್ವಚ್ಛವಾದ ವಾತಾವರಣವನ್ನು ಕಲ್ಪಿಸಲು ಮತ್ತು ಕಾಪಾಡಿಕೊಳ್ಳಲು ಕೆಲವು ಸಹಜ ಹಾಗೂ ಸುಲಭವಾದ ಮಾರ್ಗಗಳನ್ನು ತೋರಿಸಿ ಅದಕ್ಕೂ ಮತ್ತು ಆರೋಗ್ಯಕ್ಕೂ ಇರುವ ಸಂಬಂಧವನ್ನು ತೋರಿಸಿ ಕೊಡುತ್ತದೆ. ಇದಲ್ಲದೇ ವಾಹನಗಳನ್ನು, ಪಂಪುಗಳನ್ನು ಸರಿಪಡಿಸಲು ಬೇಕಾದ ಸಲಕರಣೆಗಳನ್ನೂ, ಪಂಪುಗಳನ್ನು ಸರಿಪಡಿಸಲು ಬೇಕಾದ ತರಬೇತಿಯನ್ನೂ ಪಡೆಯಲು ಧನಸಹಾಯ ಮಾಡುತ್ತಿದೆ.

ಆಹಾರ:

ಯುನಿಸೆಫ್ ಪೌಷ್ಟಿಕ ಆಹಾರವನ್ನು ತಯಾರು ಮಾಡಲು ಸರಕಾರಕ್ಕೆ ಸಹಾಯ ಮಾಡುತ್ತಿದೆ. ಇದರ ಮುಖ್ಯ ಗುರಿ ಎಂದರೆ ಈ ಆಹಾರವು ಪ್ರಾದೇಶಿಕ ಉತ್ಪನ್ನ ಧಾನ್ಯಗಳಿಂದ ಮಾಡಿರಬೇಕು. ಮತ್ತು ಈ ಆಹಾರ ಜನತೆಗೆ ಸುಲಭವಾಗಿ ಮಾಡಲು ಬರುವ ಸ್ವೀಕೃತವಾಗಬೇಕು. ಇಂತಹ ಆಹಾರವನ್ನು ಸರಕಾರದ ಕೇಂದ್ರಗಳಿಂದ ಪೂರಕ ಆಹಾರ (Supplimentary food) ವಾಗಿ ಬಳಕೆಗೆ ತರುವದೇ ಮುಖ್ಯ ಉದ್ದೇಶ. ಈ ಆಹಾರವನ್ನು ಮಕ್ಕಳಿಗೂ ಗರ್ಭಿಣಿಯರಿಗೂ ಉಚಿತವಾಗಿ ಹಂಚಿ ಅದರ ಲಾಭ ಪಡೆಯುವದಲ್ಲದೇ ಆಹಾರವನ್ನು ಮಾಡಲು ಕಲಿತು ಅದನ್ನು ತಮ್ಮ ದಿನದ ಆಹಾರದಲ್ಲಿ ಅಳವಡಿಸುವಂತೆ ಮಾಡುವದು ಒಂದು ಮುಖ್ಯ ಉದ್ದೇಶ.

ಈ ಸಂಸ್ಥೆಯು ಹೊಲದಲ್ಲಿ ಆಹಾರ ಬೆಳೆಯಲು ಬೇಕಾದ ಎಲ್ಲ ತರಹದ ಸಹಾಯ ನೀಡಿ ಮಕ್ಕಳು ಮತ್ತು ಹಿಂದುಳಿದ ಜನರು ಮುಂದೆ ಬರುವಂತೆ ಅವರ ಆಹಾರ, ಆರೋಗ್ಯ ಸುಧಾರಿಸಲು ಸಹಾಯ ಮಾಡುತ್ತಿದೆ. ಇದು ಮುಖ್ಯವಾಗಿ ಬಡತನ, ಅಜ್ಞಾನಿಗಳು ಮತ್ತು ಕಾಯಿಲೆಗಳಿಂದ ಬಳಲುವ, ಅಥವಾ ಇವುಗಳಿಗೆ ತುತ್ತಾಗಬಹುದಾದ ಜನರಿಗೇ ಮೀಸಲಾಗಿದೆ.

೧೯೫೪ ರಿಂದ ೧೩ ಹಾಲಿನ ಕೇಂದ್ರಗಳಿಗೆ ಸಹಾಯ ಮಾಡಿದೆ. ಅವುಗಳಿಗೆ ಬೇಕಾದ ಸೌಲಭ್ಯಗಳನ್ನು ಧನ ಸಹಾಯವನ್ನು ನೀಡಿದೆ. ಈ ಬಗೆಯ ಸಹಾಯದಿಂದ ಈಗ ನಡೆಯುತ್ತಿರುವ ಕಾರಖಾನೆಗಳಲ್ಲಿ ಆನಂದ (ಗುಜರಾತ)ದಲ್ಲಿರುವ ಕಾರಖಾನೆ. ಈ ಕಾರಖಾನೆಯಲ್ಲಿ ಕಡಿಮೆ ದರದಲ್ಲಿ ಪ್ರಾದೇಶಿಕ ಧಾನ್ಯಗಳಿಂದ ಚಿಕ್ಕ ಮಕ್ಕಳಿಗೆ ಸುಲಭವಾಗಿ ಕೊಡಬಹುದಾದ ಮಧ್ಯಮ ವರ್ಗದ ಕುಟುಂಬಗಳು ಬಹಳ ತೊಂದರೆಯಾಗದೆ ಉಪಯೋಗಿಸಬಹುದಾದ ಆಹಾರದ ತಯಾರಿಕೆ: ಹೈದರಾಬಾದಿನಲ್ಲಿ ಯಾವ ತರಹದ ಅಡುಗೆಯನ್ನು ಮಾಡದೆ ತಿನ್ನಲು ಯೋಗ್ಯವಾಗಿ ತಯಾರಾದ ಆಹಾರ (ready food)ವನ್ನು ಮಾಡುವ ಕಾರಖಾನೆ. ಬೆಂಗಳೂರಿನಲ್ಲಿ ಮಿಲ್ಕೋನ ಎಂಬ ಶಾಕಾಹಾರಿ ಮತ್ತು ಹೆಚ್ಚು ಸಸಾರಜನಕ (protein) ಇರುವ ಹಾಲನ್ನು ಮಾಡುವ ಕಾರಖಾನೆಗಳಿಗೆ ಸಹಾಯ ಮಾಡಿದೆ.

ಆಹಾರದ ಬಗೆಗೆ ಶಿಕ್ಷಣ ಕೊಡುವ ಕೇಂದ್ರಗಳಿಗೆ ಮತ್ತು ಶಿಕ್ಷಣ ನೀಡುವ ಸಿಬ್ಬಂದಿಗಳಿಗೆ ತರಬೇತಿ ವೇತನ ಮತ್ತು ಅಂಥ ಸಂಸ್ಥೆಗಳಿಗೂ ಧನಸಹಾಯ ಮಾಡುತ್ತದೆ. ಇದೇ ರೀತಿ ಮಕ್ಕಳ ಮತ್ತು ತಾಯಂದಿರ ಆರೋಗ್ಯ ಸುಧಾರಣೆಯ ಸಂಶೋಧನೆಯ ಕೇಂದ್ರಗಳು ಮತ್ತು ಅಂಥ ಸಂಶೋಧನೆಗೆ ಧನಸಹಾಯ ಒದಗಿಸುವದನ್ನು ಯುನಿಸೆಫ್ ಮಾಡುತ್ತದೆ. ಉದಾಹರಣೆಗಳೆಂದರೆ ಉಪ್ಪಿನಲ್ಲಿ ಕಬ್ಬಿಣದ ಧಾತುವನ್ನು ರಕ್ತಹೀನತೆಯನ್ನು ಹೋಗಲಾಡಿಸಲು ಕೂಡಿಸುವದು ಮತ್ತು ಸಬ್ಬಕ್ಕಿಯಲ್ಲಿ ಸಸಾರಜನಕವನ್ನು ಮತ್ತು ಜೀವನಸತ್ವ ಸೇರಿಸುವದು.

ಉಪ್ಪಿನಲ್ಲಿ ಅಯೋಡಿನ್ (Iodine) ಸೇರಿಸುವಂಥ ೧೨ ಕಾರಖಾನೆಗಳನ್ನು ಒದಗಿಸಿದೆ. ಇವೆರಡು ಕಾರಖಾನೆಗಳನ್ನು ಅಸ್ಸಾಮ ರಾಜ್ಯಕ್ಕೆ ಕೊಡಲಿದೆ. ಇದನ್ನು ರಾಷ್ಟ್ರೀಯ ಕಾರ್ಯಕ್ರಮದ (National Goitre Control Programme) ಅಂಗವಾಗಿ ನಿಯಂತ್ರಣ ಕೊಡಲಾಗಿದೆ.

ವಾಹನಗಳು :

ವಾಹನಗಳು ಎಲ್ಲ ಕಾರ್ಯಕ್ರಮಗಳಿಗೂ ಅತ್ಯವಶ್ಯವಾದ ಸಾಧನಗಳು. ಅದರಲ್ಲಿ ನಮ್ಮ ದೇಶದಲ್ಲಿ ಹಳ್ಳಿಗಳಿಗೆ ಹೋಗಲು ಸಾರ್ವಜನಿಕ ಸೇವೆಗೆ ವಾಹನಗಳಿಲ್ಲದೆಯೇ ಸಾಧ್ಯವೇ ಇಲ್ಲ. ವಾಹನಗಳಿಂದ ಬಹಳ ವೇಳೆಯ ಉಳಿತಾಯವೂ ಆಗುವದು.

ಯುನಿಸೆಫ್ ನಮ್ಮ ದೇಶಕ್ಕೆ ೭,೫೦೦ ವಾಹನಗಳನ್ನು ಕೊಟ್ಟಿದೆ. ಅದರಲ್ಲಿ ೪,೦೦೦ ಜೀಪುಗಳು. ಉಳಿದವುಗಳು ಬಸ್, ಟ್ರಕ್ಕ, ಮೋಟರ ಸೈಕಲ್ಲು, ಸ್ಕೂಟರ, ಸೈಕಲ್ಲು, ಬೋಟ ಮುಂತಾದವುಗಳು. ಇವನ್ನು ಸರಿಯಾಗಿ ಇಡುವದಕ್ಕೂ ದುರಸ್ತಿ ಮಾಡುವದಕ್ಕೂ ಯುನಿಸೆಫ್ ಸಹಾಯ ಮಾಡುತ್ತದೆ ಮತ್ತು ಸಲಹೆ ನೀಡುತ್ತದೆ.

ಒಟ್ಟಿನ ಮೇಲೆ ಯುನಿಸೆಫ್ ಭಾರತಕ್ಕೆ ೧೧೯. ೧೧೯. ೪೦೦ ಡಾಲರುಗಳನ್ನು ೧೯೪೯-೭೩ ರ ವರೆಗೆ ಖರ್ಚು ಮಾಡಿದೆ. ೧೯೭೪-೭೮ ರ ವರೆಗೆ ೫೭,೦೦೦,೦೦೦ ಡಾಲರುಗಳನ್ನು ಖರ್ಚುಮಾಡಬಹುದೆಂಬ ಅಂದಾಜು ಇದೆ.

ಯುನಿಸೆಫ್‌ನ ಮೂವತ್ತು ದೇಶಗಳ ಕಾರ್ಯಕಾರೀ ಸಮಿತಿಯಲ್ಲಿ ಭಾರತವೂ ಒಂದಾಗಿದೆ. ಭಾರತದಲ್ಲಿ ಶುಭಾಶಯಗಳ ಪತ್ರಗಳನ್ನು ಮತ್ತು ಕ್ಯಾಲೆಂಡರ ಮಾರಿದ ಮೂಲಕ ಶೇಖರಿಸಲ್ಪಟ್ಟ ಧನವನ್ನು ಇದೇ ದೇಶದಲ್ಲಿ ಖರ್ಚು ಮಾಡಲಾಗುತ್ತದೆ.

ಈ ವರ್ಷದಲ್ಲಿ ಮೊದಲಿನಂತೆ ಬೃಹತ ಸಮ್ಮೇಳನಗಳನ್ನು ಹಾಕಿಕೊಳ್ಳದೇ ಅದೇ ಹಣ, ಸೌಕರ್ಯ, ಕಾಲಾವಧಿಗಳನ್ನು ಹೆಚ್ಚು ಪ್ರಯೋಜನವಾಗುವಂತಹ ರಾಷ್ಟ್ರೀಯ ಮಟ್ಟ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಕೊಡಬೇಕೆಂದು ನಿರ್ಣಯಿಸಿದೆ.

ಅಂತರರಾಷ್ಟ್ರೀಯ ವರ್ಷದ ಸೆಕ್ರೇಟರಿಯಟದ ಪ್ರಮುಖರಾಗಿರುವ (ಡೈರೆಕ್ಟರ) ಜಾನ ಗ್ರುನ್ (John Grun) ಅತ್ಯುತ್ತಮವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "ಈ ವಿಶ್ವದಲ್ಲಿ ಮಗುವಿಗೆ ನಮ್ಮಲ್ಲಿದ್ದ ಅತ್ಯುತ್ತಮವಾದದ್ದನ್ನೇ ಕೊಡಬೇಕಾದದ್ದು ನಮ್ಮ ಕರ್ತವ್ಯ" ಆದರೆ ಜಗತ್ತು. ಎಂದರೆ ನಾವು ಮತ್ತು ನಾವೆಂದರೆ ಮತ್ತಾರೂ ಅಲ್ಲ ರಾಜ್ಯದಾಡಳಿತದಲ್ಲಿ ಭಾಗವಹಿಸುವರು, ಸಾಮಾನ್ಯ ಜನರು, ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಮಕ್ಕಳನ್ನು ಈ ಲೋಕಕ್ಕೆ ತಂದ ತಂದೆತಾಯಿದಿರು—ಎಂದ ಮೇಲೆ ಪ್ರತಿಯೊಬ್ಬನೂ.

ಮೇಲಿನ ಅಂಶಗಳನ್ನು ಸರಿಯಾಗಿ ತಿಳಿಸಿ ಅದನ್ನು ಕಾರ್ಯಗತ ಮಾಡುವದಕ್ಕೆ ಪ್ರತಿಯೊಂದು ದೇಶಕ್ಕೂ, ರಾಜ್ಯಕ್ಕೂ, ಸಂಸ್ಥೆಗೂ. ಸಹಾಯ ಮಾಡಿ ಪ್ರತಿ ಮಗುವೂ ನಕ್ಕು ನಲಿಯುವಂತೆ ಮಾಡುವದೇ ಯುನಿಸೆಫ್‌ನ ಮುಖ್ಯವಾದ ಮತ್ತು ಏಕಮೇವ ಗುರಿ.

ಮಕ್ಕಳ ಕಲ್ಯಾಣಕ್ಕಾಗಿ ಒಂದು ಯೋಜನೆ

● ಬಿ. ಸಿ. ಚವಡಿ

೧೯೭೯ನ್ನು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಘೋಷಿಸಲಾಗಿದೆ. ಮಕ್ಕಳ ಸಮಸ್ಯೆಗಳತ್ತ ಜಗತ್ತಿನ ಗಮನ ಸೆಳೆಯುವದೇ ಇದರ ಉದ್ದೇಶವಾಗಿದೆ. ನಮ್ಮ ದೇಶದಲ್ಲಿ ಸರಕಾರವು ಮಕ್ಕಳ ಕಲ್ಯಾಣಕ್ಕಾಗಿ ಒಂದು ಕಾರ್ಯಕ್ರಮ ಕೈಕೊಂಡರೆ ಮಾತ್ರ ಒಳ್ಳೆಯ ಆರಂಭ ಮಾಡಿದಂತಾಗುವದು. ಸಾಮಾನ್ಯವಾಗಿ ೧೪ ವರ್ಷದೊಳಗಿನವರೆಲ್ಲರೂ ಮಕ್ಕಳು. ಭಾರತದ ಜನಸಂಖ್ಯೆ ೬೩೦ ದಶಲಕ್ಷವಿದೆ. ಇದರಲ್ಲಿ ಆರು ವರ್ಷದೊಳಗಿನವರ ಪ್ರಮಾಣ ನೂರಕ್ಕೆ ೨೦ ರಷ್ಟಿದೆ. ಅದರೆ ಜನಸಂಖ್ಯೆಯ ೧/೫ ರಷ್ಟು ಆರು ವರ್ಷದೊಳಗಿನವರು. ೬ ರಿಂದ ೧೪ ವಯೋಮಿತಿಗೆ ಸೇರಿದವರು ನೂರಕ್ಕೆ ೧೫ ರಷ್ಟು. ಅಂದರೆ ನೂರಕ್ಕೆ ೩೫ ರಷ್ಟು ಮಕ್ಕಳ ಸಂಖ್ಯೆ ನಮ್ಮದು. ಈ ೧೪ ವರ್ಷದ ಅವಧಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಮೊದಲಿನ ೫ ವರ್ಷದ ಅವಧಿ ಹಾಗೂ ೬ರಿಂದ ೧೪ ವರ್ಷದ ಅವಧಿ. ಮೊದಲಿನ ೫ ವರ್ಷ ಬೆಳವಣಿಗೆಯ ಅತ್ಯಂತ ಮಹತ್ವದ ಅವಧಿ. ಇಲ್ಲಿ ಬೆಳವಣಿಗೆಯ ಅಡಿಗಲ್ಲು ಅಥವಾ ನೆಲಗಟ್ಟು ಸಿದ್ಧವಾಗುವದು. ಈ ನೆಲಗಟ್ಟು ಸರಿಯಾಗದಿದ್ದಲ್ಲಿ ಉತ್ತಮ ಬೆಳವಣಿಗೆ ಸಾಧ್ಯವಿಲ್ಲ. ಈ ನೆಲಗಟ್ಟೇ ಇರದಿದ್ದರೆ ಬೆಳವಣಿಗೆಯೇ ಇಲ್ಲ. ದುರದೃಷ್ಟದಿಂದ ನಮ್ಮ ದೇಶದಲ್ಲಿ ೧೦೦ಕ್ಕೆ ೪೦ ರಷ್ಟು ಜನ ಕಡುಬಡವರು. ಈ ಬಡತನದ ಬೇಗೆಗೆ ಮೊದಲು ಬಲಿಯಾಗುವವರು ಮಕ್ಕಳು. ಯಾಕೆಂದರೆ ಬಡ ಕುಟುಂಬದಲ್ಲಿ ಇರುವ ಆಹಾರದಲ್ಲಿ ದುಡಿಯುವ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಆದ್ಯತೆ ದೊರೆಯುವದು. ಹೆರಿಗೆಯ ಪೂರ್ವದ ಕೊನೆಯ ಮೂರು ತಿಂಗಳು ಹಾಗೂ ಹೆರಿಗೆಯ ನಂತರದ ಮೊದಲಿನ ೫ ವರ್ಷಗಳು ಮಗುವಿಗೆ ಅತ್ಯಂತ ಕಠಿಣ ಅವಧಿ. ಈ ಅವಧಿಯಲ್ಲಿ ಮಗುವಿಗೆ ಸಾಕಷ್ಟು ಆಹಾರ ಪೂರೈಕೆ ಆಗದಿದ್ದರೆ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆ ಸರಿಯಾಗಿ ಆಗಲಾರದು. ಅಂಥ ಪರಿಸ್ಥಿತಿಯಲ್ಲಿ ದೇಹ ಸರಿಯಾಗಿ ಬೆಳೆಯುವದಿಲ್ಲ; ಮೆದುಳು ಸರಿಯಾಗಿ ಬೆಳೆಯುವದಿಲ್ಲ. ನಂತರದ ಅವಧಿಯಲ್ಲಿ ಏನೇ ಮಾಡಿದರೂ ಸರಿಪಡಿಸಲು ಸಾಧ್ಯವಿಲ್ಲ. ಹೀಗಾಗಿ ಬಡ ಕುಟುಂಬದ ಮಗು ಅನಾನುಕೂಲತೆಯಿಂದಲೇ ಜೀವನ ಪ್ರಾರಂಭಿಸುತ್ತದೆ. ಕೆಳ ಮಟ್ಟದ ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಮಗು ದೊಡ್ಡವನಾಗಿ

ಮತ್ತೆ ತನ್ನಂಥವರಿಗೇ ಜನ್ಮ ಕೊಡುವದರಿಂದ ಅಂಥ ಅನಾನುಕೂಲತೆ ಒಂದು ವಿಷ ವರ್ತುಳವಾಗಿ ಪರಿಣಮಿಸುವದು. ಸರಿಯಾದ ಆಹಾರ ಪೂರೈಕೆಯಾಗದಿದ್ದರೆ ಮಕ್ಕಳ ಸಾವಿನ ಸಂಖ್ಯೆ ಹೆಚ್ಚುತ್ತದೆ. ನಮ್ಮ ದೇಶದಲ್ಲಿ ಮಕ್ಕಳ ಸಾವಿನ ಸಂಖ್ಯೆ ಅತಿ ಹೆಚ್ಚು. ಅಂದರೆ ೧೦೦೦ಕ್ಕೆ ೧೨೫. ಗ್ರಾಮೀಣ ಪ್ರದೇಶದಲ್ಲಿ ಈ ಸಂಖ್ಯೆ ೧೦೦೦ ಕ್ಕೆ ೧೪೦.

ನಮ್ಮ ದೇಶದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆಗಿಂತಲೂ ಮೂಲ ಆಹಾರದ ಕೊರತೆಯೇ ಒಂದು ಸಮಸ್ಯೆ. ಮಕ್ಕಳು ತಮಗೆ ಅವಶ್ಯವಿರುವ ಒಟ್ಟು ಆಹಾರದ ಅರ್ಧದಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಆಹಾರದ ಕೊರತೆಯಿಂದಾಗಿ ಬರುವ ರೋಗಗಳಿಗೆ ಮಕ್ಕಳು ಬಲಿಯಾಗುತ್ತಿದ್ದಾರೆ. ಆಹಾರದಷ್ಟೇ ಉತ್ತಮ ನೀರಿನ ಪೂರೈಕೆಯೂ ಅವಶ್ಯ. ನಮ್ಮ ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ಸುರಕ್ಷಿತ ವಾದ ಕುಡಿಯುವ ನೀರಿನ ಸಮಸ್ಯೆ ಇದೆ. ಮಗು ಸಾಕಷ್ಟು ಆಹಾರ ತೆಗೆದುಕೊಂಡು ಉತ್ತಮ ನೀರನ್ನು ಸೇವಿಸದಿದ್ದರೆ ಆಹಾರವನ್ನೆಲ್ಲ ರೋಗಾಣುಗಳಿಗೆ ಹಾಕಿದಂತಾಗು ವದು. ಉತ್ತಮ ಆಹಾರ ಮತ್ತು ನೀರು ಪೂರೈಕೆ ಮಾಡಿದರೂ ರೋಗ ನಿರೋಧಕ ಗಳನ್ನು ಕೊಡಿಸದಿದ್ದರೆ ಮತ್ತೆ ಮಗು ಗಂಡಾಂತರದಲ್ಲಿ ಸಿಕ್ಕಿಕೊಳ್ಳುತ್ತದೆ. ಅದ್ದರಿಂದ ಮಕ್ಕಳ ಕಲ್ಯಾಣ ಯೋಜನೆಯಲ್ಲಿ ಈ ಕೆಳಗಿನವು ಮುಖ್ಯವಾದವುಗಳು.

೧) ತಾಯಿ ಹಾಗೂ ಮಗುವಿಗೆ ಆಹಾರದ ಪೂರೈಕೆ

೨) ತಾಯಿಯ ಆರೋಗ್ಯ ಹಾಗೂ ಮಗುವಿನ ಆರೋಗ್ಯ ಕಾಪಾಡುವದು

೩) ಮಗುವಿನ ಆಹಾರ ಪೂರೈಕೆ, ಆರೋಗ್ಯ ರಕ್ಷಣೆ ಹಾಗೂ ಮಗುವಿನ ತರಬೇತಿ.

ಗರ್ಭಿಣಿ ಸ್ತ್ರೀಯರಿಗೆ ಆಹಾರದ ಪೂರೈಕೆ ಮಾಡುವದು ಹೇಗೆ? ಸಾಮಾನ್ಯ ಪರಿಸ್ಥಿತಿ ಸುಧಾರಿಸಿ ಅವರು ಸಾಕಷ್ಟು ಉತ್ತಮ ಆಹಾರ ಸೇವಿಸುವಂತಾಗುವವರೆಗೆ ತಡೆಯಲು ಸಾಧ್ಯವೇ? ಅಥವಾ ವಿಶೇಷ ಯೋಜನೆ ಕೈಕೊಂಡು ಅಂಥವರಿಗೆ ಆಹಾರ ಪೂರೈಸುವದು ಸಾಧ್ಯವೇ? ಇದನ್ನು ಪರಿಶೀಲಿಸಬೇಕು. ಎರಡನೆಯದಾಗಿ ಬಡ ಕುಟುಂಬದ ಮಕ್ಕಳಿಗೆ ಆಹಾರ ಪೂರೈಕೆ ಯಾವ ರೀತಿ ಮಾಡವದು ಸಾಧ್ಯ? ಹೊರ ಗಿನಿಂದ ಆಹಾರ ಪೂರೈಸುವದಾದರೆ ಅದನ್ನು ಹೇಗೆ ಪೂರೈಸಬೇಕು? ಮೂರನೆಯದಾಗಿ ಮಗುವಿನ ತರಬೇತಿ. ಮಗುವನ್ನು ಕುಟುಂಬದ ಪರಿಸರದಲ್ಲಿಯೇ ಬೆಳೆಯಲು ಬಿಟ್ಟರೆ ಉತ್ತಮ ಪರಿಸರದ ಲಾಭವಾಗಲಾರದು. ಅದ್ದರಿಂದ ಉತ್ತಮ ಪರಿಸರ ನೀಡುವದು ಹೇಗೆ? ಇವೆಲ್ಲ ಪ್ರಶ್ನೆಗಳಿಗೆ ಪರಿಹಾರ ಕಂಡು ಹಿಡಿಯುವದು ಅವಶ್ಯವಿದೆ. ಇವುಗಳನ್ನು ಕೆಳಗೆ ವಿವೇಚಿಸಲಾಗಿದೆ.

೧) ಗರ್ಭಿಣಿ ಸ್ತ್ರೀಯರಿಗೆ ಹಾಗು ಚಿಕ್ಕ ಮಕ್ಕಳಿಗೆ ಆಹಾರದ ಪೂರೈಕೆ :

ಗರ್ಭಿಣಿಯರಿಗೆ ಉತ್ತಮ ಆಹಾರದ ಪೂರೈಕೆ ಅವಶ್ಯವಿದೆ. ಅವರಲ್ಲೂ ಹೆರಿಗೆಯ ಪೂರ್ವದ ಮೂರು ತಿಂಗಳಲ್ಲಿ ಸಾಕಷ್ಟು ಹಾಗೂ ಉತ್ತಮ ಆಹಾರದ ಪೂರೈಕೆ ಅತ್ಯವಶ್ಯ. ಬಡಕುಟುಂಬದ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಆಹಾರದ ಪೂರೈಕೆಗೆ ವಿಶೇಷ ಯೋಜನೆ ಅವಶ್ಯ. ಉತ್ತಮ ಆಹಾರ ಅವರವರ ಪರಿಸರದಲ್ಲಿಯೇ ಸಾಕಷ್ಟು ದೊರೆಯುತ್ತಿದೆ. ಉತ್ತಮ ಆಹಾರ ಯಾವದು ಮತ್ತು ಅತಿಕಡಿಮೆ ಖರ್ಚಿನಲ್ಲಿ ದೊರೆಯುವ ಪೌಷ್ಟಿಕ ಆಹಾರದ ಬಗ್ಗೆ ತಿಳುವಳಿಕೆ ಮಾಡಿಕೊಟ್ಟರೆ ಹೊರಗಿನ ಸಹಾಯವಿಲ್ಲದೆ ಅರ್ಧದಷ್ಟು ಸಮಸ್ಯೆ ಪರಿಹರಿಸುವದು ಸಾಧ್ಯವಿದೆ. ಅವರಿಗೆ ತಿಳಿಸಿ ಹೇಳಬಹುದು. ಆದರೆ ಅವರು ಅನುಸರಿಸುವಂತೆ ಮಾಡುವದು ಕಠಿಣ. ಅವರು ಕೂಡಲೇ ಬದಲಾಗಲಾರರು. ಆಹಾರದಲ್ಲಿ ಬದಲಾವಣೆ ತರುವದು ಕಠಿಣ. ಉದಾಹರಣೆಗೆ ಪಂಜಾಬದಲ್ಲಿ ಸಾಕಷ್ಟು ಪೌಷ್ಟಿಕ ಆಹಾರದ ಉತ್ಪಾದನೆ ಹಾಗೂ ಉತ್ಪನ್ನವಿದ್ದರೂ ೧೦೦ಕ್ಕೆ ೫೦ ಕ್ಕಿಂತ ಹೆಚ್ಚು ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಆದರೆ ಕೇರಳದಲ್ಲಿ ಮಹಿಳೆಯರು ಹೆಚ್ಚಾಗಿ ವಿದ್ಯಾವಂತರಾಗಿರುವದರಿಂದ ಪೌಷ್ಟಿಕ ಆಹಾರದ ಕೊರತೆ ಮತ್ತು ಆ ಕಾರಣದಿಂದ ಮಕ್ಕಳು ಸಾಯುವ ಪ್ರಮಾಣ ಕಡಿಮೆ ಇದೆ. ನಮ್ಮ ದೇಶದಲ್ಲಿ ಅವಿದ್ಯಾವಂತ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚಿಗಿರುವದರಿಂದ ವಿಶೇಷ ಯೋಜನೆ ಅವಶ್ಯವಿದೆ. ಬಡ ಕುಟುಂಬಗಳಿಗೆ ಆಹಾರ ಪೂರೈಸುವದು ಹೇಗೆ? ಅವರ ಮನೆಗೆ ಮುಟ್ಟಿಸಿದರೆ ಅದನ್ನು ಮನೆಯ ಎಲ್ಲರಿಗೂ ಹಂಚಿ ಗರ್ಭಿಣಿ ಸ್ತ್ರೀ ತಾನು ತೆಗೆದುಕೊಳ್ಳದೇ ಇರಬಹುದು. ಆದ್ದರಿಂದ ಗ್ರಾಮ ಮಟ್ಟದಲ್ಲಿಯೇ ಒಂದು ವ್ಯವಸ್ಥೆ (Organisation)ಯ ಅವಶ್ಯಕತೆಯಿದೆ. ಸ್ಥಳೀಯ ವ್ಯವಸ್ಥೆ ಹಾಗೂ ಸ್ಥಳೀಯವಾಗಿಯೇ ದೊರೆಯುವ ಪೌಷ್ಟಿಕ ಆಹಾರ ಉಪಯೋಗಿಸಿಕೊಂಡು ಆಹಾರದ ಸಮಸ್ಯೆ ಪರಿಹರಿಸಬಹುದು. ಹೊರಗಿನಿಂದ ಆಹಾರ ತರುವದಾದರೆ ಹಾಗೂ ಅದು ತುಟ್ಟಿಯದಾದರೆ ಸಾಧ್ಯವಿಲ್ಲ. ಗ್ರಾಮಗಳಲ್ಲಿಯ ಹೆಣ್ಣುಮಕ್ಕಳಿಗೆ ಗೊತ್ತಿರುವ ಆಹಾರವನ್ನು ಕೊಡಬೇಕು. ನಮ್ಮ ಹೆಣ್ಣುಮಕ್ಕಳಿಗೆ ಆಹಾರದ ಬಗ್ಗೆ ಜ್ಞಾನವಿದೆ. ಅವರು ನಿರಕ್ಷರಿಗಳಾಗಿರಬಹುದು ಮತ್ತು ಬೇನೆಯಿಂದ ಬಳಲುತ್ತಿರಬಹುದು ಆದರೆ ಯಾವದು ಉತ್ತಮ ಆಹಾರವೆಂಬ ಬಗ್ಗೆ ಅವರಿಗೆ ಗೊತ್ತಿರುತ್ತದೆ. ಆದರೆ ಕೆಲವು ತಪ್ಪು ತಿಳುವಳಿಕೆಗಳನ್ನು ದೂರಮಾಡಬೇಕಾಗಿದೆ. ಇದು ತಂಪು ಆಹಾರ, ಇದು ಉಷ್ಣ ಆಹಾರ ಎಂಬ ತಪ್ಪು ತಿಳುವಳಿಕೆ ದೂರ ಮಾಡಬೇಕಾಗಿದೆ. ಇಂಥ ತಪ್ಪು ತಿಳುವಳಿಕೆಯಿಂದ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಉತ್ತಮ ಆಹಾರದ ಪೂರೈಕೆಯಾಗುತ್ತಿಲ್ಲ. ಅವರಿಗೆ ಸರಿಯಾದ ಆರೈಕೆ ಆಗುತ್ತಿಲ್ಲ. ಆದ್ದರಿಂದ ವಿಶೇಷ ಯೋಜನೆ ಅವಶ್ಯವಿದೆ. ಇದನ್ನು ಹೀಗೆಯೇ ಬಿಟ್ಟರೆ ನಾವು ಈಗ ಹೇಗೆ ಇರುವೆವೋ ಹಾಗೆ ಉಳಿಯಬಹುದು. ಆದರೆ ಸುಧಾರಣೆ ತರಬೇಕಾಗಿದೆ. ನಾವು ಮಾಡಬೇಕಾಗಿರುವದೇನೆಂದರೆ ಗರ್ಭಿಣಿಯರು ಇನ್ನೂ ಹೆಚ್ಚು ಬೇಳೆಕಾಳು, ಶೇಂಗಾ, ಕಾಯಿಪಲ್ಲೆ ಮುಂತಾದ ಉತ್ತಮ ಆಹಾರ ತೆಗೆದು

ಕೊಳ್ಳುವಂತೆ ಮಾಡುವದು. ಯಾಕೆಂದರೆ ಹೊಟ್ಟೆಯಲ್ಲಿರುವ ಮಗುವಿನ ಪೋಷಣೆಗೆ ಮತ್ತು ಹೆರಿಗೆಯನಂತರ ಮೊಲೆಹಾಲಿನಿಂದ ಮಗುವನ್ನು ಪೋಷಿಸಲು ಗರ್ಭಿಣಿ ಹೆಚ್ಚಿಗೆ ಉತ್ತಮ ಆಹಾರ ಸೇವಿಸುವದು ಅವಶ್ಯವಿದೆ. ಅದರಲ್ಲೂ ಗರ್ಭಿಣಿ ಹೆರಿಗೆಯ ಪೂರ್ವದ ಮೂರು ತಿಂಗಳು ಪೌಷ್ಟಿಕ ಆಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದು ಕೊಳ್ಳುವದು ಅವಶ್ಯವಿದೆ. ಯಾಕೆಂದರೆ ಇದೇ ಅವಧಿಯಲ್ಲಿ ಮಗುವಿನ ಮೆದುಳು ಬಹು ವೇಗವಾಗಿ ಬೆಳೆಯುತ್ತಿರುತ್ತದೆ. ಹೆಚ್ಚಿನ ಆಹಾರದ ಅವಶ್ಯಕತೆ ಇರುತ್ತದೆ. ಉತ್ತಮ ಆಹಾರ ಸ್ಥಳೀಯವಾಗಿಯೇ ದೊರೆಯುತ್ತಿದ್ದರೂ ಬಡ ಕುಟುಂಬಳಿಗೆ ಅದನ್ನು ಕೊಳ್ಳುವ ಶಕ್ತಿ ಇಲ್ಲದೇ ಇರಬಹುದು. ಆದ್ದರಿಂದ ಸರಕಾರವು ಮಧ್ಯ ಪ್ರವೇಶಿಸಿ ಆಹಾರ ಪೂರೈಕೆ ಮಾಡಲೇಬೇಕಾಗಿದೆ. ಸ್ಥಳೀಯವಾಗಿ ದೊರೆಯುವ ಸುಲಭ ದರದ ಉತ್ತಮ ಆಹಾರ ಪದಾರ್ಥಗಳನ್ನು ಗುರುತು ಮಾಡಿಕೊಂಡು ಅವುಗಳನ್ನು ಸ್ಥಳೀಯ ವ್ಯವಸ್ಥೆಯ ಮುಖಾಂತರ ಬಡಕುಟುಂಬದ ಸ್ತ್ರೀಯರಿಗೆ ತಲುಪಿಸಬೇಕು. ಚಿಕ್ಕ ಮಕ್ಕಳು ಗ್ರಾಮದ ಒಂದೆಡೆ ಸೇರಿ ಆಹಾರ ಸೇವಿಸುವದು ವ್ಯವಸ್ಥೆಯಾಗಬೇಕು.

೨) ಆರೋಗ್ಯ ರಕ್ಷಣೆ ಮತ್ತು ರೋಗ ನಿರೋಧಕಗಳು.

ಧನುರ್ವಾತ ಅಥವಾ ನಂಜು (Tetanus) ನಿಂದ ಸಾವಿರಾರು ಗರ್ಭಿಣಿ ಸ್ತ್ರೀಯರು ಮತ್ತು ಶಿಶುಗಳು ಸಾವಿಗೀಡಾಗುತ್ತಾರೆ. ತ್ರಿವಿಧ ಚುಚ್ಚುಮದ್ದು ಕೊಡಸಿ ಅವರನ್ನು ಉಳಸಬಹುದು. ಈ ಚುಚ್ಚುಮದ್ದು ಕೊಡಿಸುವದನ್ನು ಕಡ್ಡಾಯವಮಾಡ ಬೇಕು. ಇದಕ್ಕೆ ಬೇಕಾಗುವ ಔಷಧಿ ಕೂಡ ಸಾಕಷ್ಟು ಲಭ್ಯವಿದೆ. ನಿಜವಾದ ಸಮಸ್ಯೆ ಎಂದರೆ ಚಿಕ್ಕ ಮಕ್ಕಳಿಗೆ ರೋಗ ನಿರೋಧಕ ಕೊಡಿಸುವದು. ೧೦೦ಕ್ಕೆ ೫೦ ರಿಂದ ೬೦ ರಷ್ಟು ಮಕ್ಕಳಿಗೆ ರೋಗ ನಿರೋಧಕ ಕೊಡಿಸಲಾಗುತ್ತಿದೆ ಎಂಬ ಭಾವನೆ ಇದೆ. ಆದರೆ ನಿಜವಾಗಿ ೧೦೦ಕ್ಕೆ ೧೦ ರಿಂದ ೧೫ ರಷ್ಟು ಮಕ್ಕಳಿಗೆ ಮಾತ್ರ ಕೊಡಲಾಗುತ್ತಿದೆ. ೧೦೦ಕ್ಕೆ ೨೦ ರಿಂದ ೨೫ ರಷ್ಟು ಮಕ್ಕಳಿಗೆ ಕೊಡಲು ಸಹ ಔಷಧಿ ಇಲ್ಲ. ಇದನ್ನು ವಿದೇಶಗಳಿಂದ ತರಿಸಬೇಕಾಗುವದು. ಈ ವರ್ಷವಾದರೂ ಅಧಿಕಾರಿಗಳು ಹಾಗೂ ರಾಜಕೀಯ ಧುರೀಣರು ಎಲ್ಲ ಮಕ್ಕಳಿಗೂ ರೋಗ ನಿರೋಧಕಗಳನ್ನು ಕೊಡಿಸುವ ವ್ಯವಸ್ಥೆ ಮಾಡ ಬೇಕು. ತ್ರಿರೋಗ ಪ್ರತಿಬಂಧಕ ಲಸಿಕೆ ಸಿಗುತ್ತಿಲ್ಲ. ಅದು ಸಿಗುವಂತೆ ಮಾಡಬೇಕು. ೫೦೦ ರಲ್ಲಿ ಒಂದು ಮಗು ಪೋಲಿಯೋ ಪೀಡಿತವಾಗಿದೆ. ಅಂಥ ಮಗು ಜೀವನಾದ್ಯಂತ ಊನವಾಗುತ್ತದೆ. ಪೋಲಿಯೋ ಲಸಿಕೆಯನ್ನು ಸುರಕ್ಷಿತವಾಗಿ ಇಡುವದು ಮತ್ತು ಅದನ್ನು ಗ್ರಾಮಗಳಿಗೆ ಕಳಿಸಿಕೊಡುವದು ಒಂದು ತಾಂತ್ರಿಕ ಸಮಸ್ಯೆ. ಕೆಲವು ಸಾರೆ ಅದು ಗ್ರಾಮಗಳಿಗೆ ಮುಟ್ಟುವದರೊಳಗಾಗಿ ತನ್ನ ಸತ್ವವನ್ನೇ ಕಳೆದುಕೊಂಡಿರುತ್ತದೆ. ದೇಶದ ತಾಂತ್ರಿಕ ಪರಿಣತಿ ಈ ಸಮಸ್ಯೆಯನ್ನು ಬಿಡಿಸಲು ಉಪಾಯ ಕಂಡುಹಿಡಿಯ ಬೇಕಾಗಿದೆ. ಮೂರನೆಯದಾಗಿ ಮಕ್ಕಳನ್ನು ಕಾಡುವ ಇನ್ನೊಂದು ಸಮಸ್ಯೆ ಎಂದರೆ

ಗೊಬ್ಬರ (Measles). ಆದರಿಂದ ಸಾವು ಹಾಗೂ ಕ್ಷಯ ಬರುವ ಸಂಭವ ಹೆಚ್ಚು. ಅದನ್ನು ಪ್ರತಿಬಂಧಿಸಲು ಲಸಿಕೆ ಕೊಡಿಸುವದೂ ಅವಶ್ಯ. ಅದಿನ್ನೂ ನಮ್ಮ ದೇಶದಲ್ಲಿ ಪ್ರಾರಂಭವಾಗಿಲ್ಲ. ಅದನ್ನು ಕೊಡಿಸಬೇಕೆಂದರೆ ವಿದೇಶಗಳಿಂದ ತರಿಸಬೇಕಾಗುವದು. ಇವೆಲ್ಲ ಮಕ್ಕಳನ್ನು ಮೌನವಾಗಿ ಕೊಲ್ಲುವ ರೋಗಗಳು. ಇಂಥ ರೋಗಗಳ ಪ್ರತಿಬಂಧಕ ಔಷಧಿ ದೊರಕಿಸಲು ಸಾರ್ವಜನಿಕ ಒತ್ತಾಯ ಬರಬೇಕು. ಅಧಿಕಾರಿಗಳು ಹಾಗೂ ರಾಜಕಾರಣಿಗಳು ಈ ರೋಗ ನಿರೋಧಕಗಳನ್ನು ಕೊಡಿಸುವದರ ಕಡೆಗೆ ಗಮನ ಕೊಡಬೇಕು.

೩) ಮಗುವಿನ ತರಬೇತಿ:

ನಮ್ಮ ದೇಶದಲ್ಲಿ ಶಾಲೆಗೆ ಸೇರುವ ಮಕ್ಕಳಲ್ಲಿ ೧೦೦ಕ್ಕೆ ೪೦ ಮಕ್ಕಳು ೫ನೇ ವರ್ಗಕ್ಕೆ ಬರುವದರೊಳಗಾಗಿ ಶಾಲೆ ಬಿಡುವರು. ೧೦೦ಕ್ಕೆ ೨೫ ಮಾತ್ರ ೮ನೇ ವರ್ಗದ ವರೆಗೆ ಬರುತ್ತಾರೆ. ೮ನೇ ವರ್ಗದವರೆಗೆ ಬಂದರೆ ಮಾತ್ರ ಶಿಕ್ಷಣದ ಪ್ರಯೋಜನ ವಾಗುವದು. ಆದರೆ ನಮ್ಮಲ್ಲಿ ೧೦೦ಕ್ಕೆ ೭೫ ರಷ್ಟು ಮಕ್ಕಳು ಅಲ್ಲಿಯವರೆಗೆ ಬರುವದಿಲ್ಲ. ಅಷ್ಟರಮಟ್ಟಿಗೆ ಶಿಕ್ಷಣ ವ್ಯರ್ಥವಾಗುತ್ತಿದೆ. ಅದಕ್ಕೆ ಕಾರಣವೇನಂದರೆ ಮಕ್ಕಳಿಗೆ ಶಾಲೆಯಲ್ಲಿ ಕಲಿಸುವದನ್ನು ಗ್ರಹಿಸುವ ಶಕ್ತಿ ಇಲ್ಲವಾಗಿದೆ. ಆದ್ದರಿಂದ ಶಾಲಾ ಪೂರ್ವದ ಅವಧಿಯಲ್ಲಿ ಅಂದರೆ ೫ ವರ್ಷದ ಅವಧಿಯಲ್ಲಿ ಅವರ ಬೆಳವಣಿಗೆ ಸರಿಯಾಗಿರುವಂತೆ ನೋಡಿಕೊಳ್ಳುವದು ಅವಶ್ಯ. ೬ ವರ್ಷ ವಯಸ್ಸಿನ ನಂತರ ಏನೇ ಮಾಡಿದರೂ ನಿರರ್ಥಕವಾಗುತ್ತದೆ.

ಮೇಲೆ ವಿವರಿಸಿದ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಮಕ್ಕಳ ಕಲ್ಯಾಣಕ್ಕಾಗಿ ಒಂದು ಯೋಜನೆ ರೂಪಿಸುವದು ಅವಶ್ಯವಿದೆ. ಕಾಲಾವಧಿಗೆ ಒಳಪಟ್ಟು ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ದೇಶವು ಸಿದ್ಧವಾಗಬೇಕು. ಕನಿಷ್ಟ ೧೦ ವರ್ಷಗಳಲ್ಲಿ ಎಲ್ಲ ಮಕ್ಕಳೂ ಈ ಯೋಜನೆಯಲ್ಲಿ ಒಳಪಡುವಂತೆ ಆಗಬೇಕು. ಈ ವರ್ಷ ತಯಾರಿಯ ಅಥವಾ ಪ್ರಾರಂಭದ ವರ್ಷವಾಗಬೇಕು. ಮುಂದಿನ ೧೦ ವರ್ಷ ಗಳಲ್ಲಿ ಎಲ್ಲ ಮಕ್ಕಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಂತಾಗಬೇಕು. ಯೋಜನೆ ಕಾರ್ಯರೂಪದಲ್ಲಿ ಬರಲು ಈ ಕೆಳಗಿನ ಅಂಶಗಳು ಅವಶ್ಯ.

೧. ಬಡಕುಟುಂಬದ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಆಹಾರ ಪೂರೈ ಸಲು ಗ್ರಾಮ ಮಟ್ಟದಲ್ಲಿಯೇ ಒಂದು ವ್ಯವಸ್ಥೆ ಆಗಬೇಕು. ಸ್ಥಳೀಯವಾಗಿಯೇ ಸಿಗುವ ಆಹಾರ ಪದಾರ್ಥಗಳನ್ನು ಉಪಯೋಗಿಸಿಕೊಳ್ಳಬೇಕು. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವ ಆಹಾರಗಳಲ್ಲಿ ಸತ್ವಯುತವಾದ ಆಹಾರಗಳನ್ನು ಗುರುತಿಸಬೇಕು.

೨. ತಾಯಿಯ ಹಾಗೂ ಮಗುವಿನ ಆರೋಗ್ಯ ರಕ್ಷಣೆಗಾಗಿ ಹೊಸ ವ್ಯವಸ್ಥೆ ಅಸಾಧ್ಯ. ಈಗ ದೇಶದಲ್ಲಿರುವ ೫೦೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ ೪೦,೦೦೦ ಉಪಕೇಂದ್ರಗಳನ್ನು ಈ ಕೆಲಸದಲ್ಲಿ ತೊಡಗಿಸಬೇಕು. ಅಲ್ಲಿಯ ಡಾಕ್ಟರರು ತಾಯಿಯ ಹಾಗೂ ಮಗುವಿನ ಆರೋಗ್ಯದತ್ತ ಗಮನಕೊಡುವಂತೆ ಮಾಡಬೇಕು. ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಮಕ್ಕಳ ಆರೋಗ್ಯ ಶಾಸ್ತ್ರ ಪರೀಕ್ಷೆಯ ವಿಷಯ ವಾಗಿಲ್ಲ. ಅದು ಪರೀಕ್ಷೆಯ ವಿಷಯವಾಗಬೇಕು. ಶಿಕ್ಷಣದ ಉಳಿದ ಕ್ಷೇತ್ರಗಳಲ್ಲಿ ಮಕ್ಕಳ ಸಮಸ್ಯೆಗಳ ಬಗ್ಗೆ ಶಿಕ್ಷಣ ನೀಡಬೇಕು.

೩. ಸಮೂಹ ಮಾಧ್ಯಮಗಳಾದ ರೇಡಿಯೋ, ಸಿನೇಮಾ, ದಿನಪತ್ರಿಕೆ ಮುಂತಾದವು ಮಕ್ಕಳ ಸಮಸ್ಯೆ ಹಾಗೂ ಪರಿಹಾರದ ಬಗ್ಗೆ ತಿಳುವಳಿಕೆ ನೀಡಬೇಕು. ತಜ್ಞರು ಈ ವರ್ಷ ಸಮೂಹ ಮಾಧ್ಯಮಗಳಲ್ಲಿ ಉಪಯೋಗಿಸಬಹುದಾದ ಸಾಹಿತ್ಯ ರಚಿಸಬೇಕು. ಸ್ಥಳೀಯ ಧುರೀಣರಿಗೆ ಹಾಗೂ ಕುಟುಂಬದ ಹಿರಿಯರಿಗೆ ಈ ಸಂದೇಶ ಮುಟ್ಟುವಂತೆ ಮಾಡಬೇಕು.

೪. ಸ್ಥಳೀಯ ಸಂಸ್ಥೆಗಳು ಹಾಗೂ ಸರಕಾರವು ಈ ಯೋಜನೆಗೆ ಬೇಕಾಗುವ ಸಂಪನ್ಮೂಲ ಕಂಡುಕೊಳ್ಳಬೇಕು.

೫. ಇದು ರಾಷ್ಟ್ರೀಯ ಯೋಜನೆಯಾಗಬೇಕು. ರಾಜಕೀಯ ಪಕ್ಷಗಳಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು. ಇದರ ಬಗ್ಗೆ ಸಹಮತ (consensus) ಉಂಟಾಗಬೇಕು.

೬. ಅಂತರಾಷ್ಟ್ರೀಯ ಸಂಸ್ಥೆಗಳಿಂದ ರೋಗನಿರೋಧಕ ಔಷಧಿಗಳನ್ನು ಪಡೆಯುವ ಮೂಲಕ ಅವರ ಸಹಕಾರ ಪಡೆಯಬೇಕು.

ಮಾನವ ಸಂಪತ್ತೇ ಅತ್ಯಮೂಲ್ಯವಾದ ನಿಜವಾದ ಸಂಪತ್ತು. ಈ ಸಂಪತ್ತು ಅವರು ಚಿಕ್ಕವರಿರುವಾಗಲೇ ಅಭಿವೃದ್ಧಿಗೊಳ್ಳಬೇಕು. ಕನಿಷ್ಟ ದರ್ಜೆಯ ಮನುಷ್ಯರಿಂದ ಪ್ರಥಮ ದರ್ಜೆಯ ರಾಷ್ಟ್ರ ನಿರ್ಮಾಣವಾಗಲಾರದು. ಉತ್ತಮ ದೇಶ ನಿರ್ಮಿಸುವ ಕಾರ್ಯ ಮಕ್ಕಳ ಉತ್ತಮ ಜೀವನಗೆಯಿಂದಲೇ ಪ್ರಾರಂಭವಾಗಬೇಕು. ನಾವು ಸಮಾಜವಾದದ ಬಗ್ಗೆ ಬಹಳ ಮಾತನಾಡುತ್ತೇವೆ. ಸಮಾಜವಾದ ಮಕ್ಕಳ ಈ ಕಾರ್ಯಕ್ರಮದೊಂದಿಗೇ ಆರಂಭವಾಗಲಿ. ಬಡಕುಟುಂಬವಲ್ಲಿ ಜನಿಸಿದ ಒಂದೇ ಕಾರಣದಿಂದ ಮಗು ಅನಾನುಕೂಲತೆ ಅನುಭವಿಸದಂತೆ ನೋಡಿಕೊಳ್ಳಬೇಕು. ಇದನ್ನು ಸಾಧಿಸಿದಲ್ಲಿ ಸಮಾಜವಾದದತ್ತ ಒಂದು ದೊಡ್ಡ ಸಾಧನೆ ಮಾಡಿದಂತಾಗುವದು. ಮಕ್ಕಳ ಕಲ್ಯಾಣ ಯೋಜನೆ ಕೇವಲ ಮಾನವತಾ ಅಥವಾ ಕಲ್ಯಾಣ ಕಾರ್ಯಕ್ರಮವಲ್ಲ. ಇದು ಒಂದು ಅಭಿವೃದ್ಧಿ ಯೋಜನೆ.

ಆಧಾರ :

ಪ್ರಸಿದ್ಧ ಆಂಗ್ಲ ದಿನಪತ್ರಿಕೆ ಒಂದು "ತನ್ನ ೩೧-೧೨-೭೮ ರ ಸಂಚಿಕೆಯಲ್ಲಿ ಕೇಂದ್ರದ ಮಾಜಿ ಮಂತ್ರಿ ಶ್ರೀ ಸಿ. ಸುಬ್ರಮಣ್ಯಮ್‌ರ ಒರಿಯತನದಲ್ಲಿ ನಡೆದ ಒಂದು ಚರ್ಚೆಯನ್ನು ಪ್ರಕಟಿಸಿದೆ. ಅದರಲ್ಲಿ ಮೂಡಿಬಂದ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಮಕ್ಕಳ ವರ್ಷಕ್ಕೆ ಶಾಶ್ವತ ಸ್ವರೂಪ

● ಲಲಿತಾಂಬಾ ವೃಷಭೇಂದ್ರಸ್ವಾಮಿ

"ಮಕ್ಕಳೇ ಮನೆಗೆ ಮಾಣಿಕ್ಯ" ಈ ಮಾತು ದೇಶದ ಬಗೆಗೂ ಸತ್ಯ. ಅಂತೆಯೇ ೧೯೭೯ನೆಯ ವರುಷವನ್ನು ಅಂತರರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಘೋಷಿಸಲಾಗಿದೆ. ಈ ಘೋಷಣೆಯ ಹಿಂದಿರುವ ಉದ್ದೇಶ ಸಾಧುವಾದದ್ದು, ಯೋಗ್ಯವಾದುದಲ್ಲದೆ, ಯಾವುದೇ ದೇಶದ ಅಭಿವೃದ್ಧಿ, ಸಮ್ಮೃದಿ, ಸಂಪತ್ತು ಆಯಾದೇಶದ ಪೀಳಿಗೆಯನ್ನು ಅವಲಂಬಿಸಿರುವುದರಿಂದ ದೈಹಿಕವಾಗಿ, ಬೌದ್ಧಿಕವಾಗಿ. ಮಾನಸಿಕವಾಗಿ. ನೈತಿಕವಾಗಿ ಉತ್ತಮ ವ್ಯಕ್ತಿತ್ವವನ್ನು ಪಡೆದಿರುವ ಪೀಳಿಗೆಯನ್ನು ತಯಾರಿಸುವುದು ಅವಶ್ಯ. ಮಕ್ಕಳು ಹುಟ್ಟಿದುಂದಿನಿಂದಲೂ ಈ ದಿಶೆಯಲ್ಲಿ ಲಕ್ಷ್ಯಕೊಡಬೇಕಾದುದು ಅಗತ್ಯ. ಒಂದು ಬೀಜವು ಮೊಳಿತು, ವೃಕ್ಷವಾಗಿ ಸುಫಲಕೊಡಬೇಕಾದರೆ ಭೂಮಿಗೆ ಬೀಜ ನೆಟ್ಟಂದಿನಿಂದಲೂ ಅದರ ಕಾಳಜಿ ವಹಿಸಬೇಕಾಗುತ್ತದೆ. ಕಾಲಕಾಲಕ್ಕೆ ಅದರ ಬೆಳವಣಿಗೆಗೆ ಬೇಕಾದ ಗೊಬ್ಬರ, ನೀರನ್ನು ಹಾಕಬೇಕು. ಅಷ್ಟೇ ಅಲ್ಲದೆ ಅದಕ್ಕೆ ಸಾಕಷ್ಟು ಬಿಸಿಲು, ಗಾಳಿ ದೊರೆಯುವಂತಿರಬೇಕು. ಇಷ್ಟೇ ಸಾಲದು. ಅಕಸ್ಮಾತ್ತಾಗಿ ಕ್ರಿಮಿ ಕೀಟಕಗಳ, ರೋಗರುಜಿನಗಳ ಬಾಧೆಗೆ ಒಳಗಾದರೆ ಅದಕ್ಕೆ ತಕ್ಕ ನಿವಾರಣೋಪಾಯಗಳನ್ನು ಆಗಿಂದಾಗಲೇ ಕೈಕೊಳ್ಳಬೇಕು. ಅಂದಾಗ ಅದು ಅಬಾಧಿತವಾಗಿ ಬೆಳೆದು ಪ್ರತಿಫಲವಾಗಿ ಸತ್ಫಲವನ್ನೀಯುತ್ತದೆ. ಅದೇ ರೀತಿ ಮಕ್ಕಳಿಗೂ ಆರೈಕೆ, ಪೂರೈಕೆ, ಶಿಕ್ಷಣದ ಮಾರ್ಗದರ್ಶನ ಸಕಾಲಕ್ಕೆ ದೊರೆಯಬೇಕು. ಈ ಅರಿವು ವಿಶ್ವನಾಯಕರುಗಳಿಗೆ ಉಂಟಾಗಿ ಈ ದಿಶೆಯಲ್ಲಿ ಪ್ರಪಂಚಾದ್ಯಂತ ಜಾಗೃತಿ ಉಂಟುಮಾಡಲು ಕೈಕೊಂಡ ಕಾರ್ಯಕ್ರಮ ಸ್ತುತ್ಯವಾದುದು.

ವಿಶ್ವದಾದ್ಯಂತ ಎಲ್ಲಾ ರಾಷ್ಟ್ರಗಳೂ ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿವೆ. ಸಾಕಷ್ಟು ಹಣವನ್ನು ಮಕ್ಕಳ ವರ್ಷದ ಆಚರಣೆಗೆ ಮೀಸಲಿರಿಸಿವೆ. ಎಲ್ಲಾ ಸಂಘ-ಸಂಸ್ಥೆಗಳೂ ಇದರ ಸಂಬಂಧ ಕಾರ್ಯಕಲಾಪಗಳನ್ನು ಈ ವರ್ಷ ಪೂರ್ತಿ ಆಚರಿಸಿಯೂ ಆಚರಿಸುತ್ತವೆ. ಸ್ವಲ್ಪಮಟ್ಟಿಗೆ, ಈ ದಿಶೆಯಲ್ಲಿ ಸಾಮಾನ್ಯಜನರ ಲಕ್ಷ್ಯವನ್ನು ಮಕ್ಕಳ ಬಗೆಗಿನ ಅವರ ಕರ್ತವ್ಯದ ಕಡೆಗೆ ಸೆಳೆಯಲೂಬಹುದು. ಆದರೆ ಹನ್ನೆರಡು ತಿಂಗಳು ಈ ಬಗ್ಗೆ ಸಭೆ-ಸಮಾರಂಭಗಳನ್ನು ನಡೆಸಿ. ಭಾಷಣ ಘೋಷಣೆಗಳನ್ನು ಮಾಡಿಬಿಟ್ಟರೆ ಉದ್ದೇಶ

ಫಲಿತವಾಗುತ್ತದೆಯೆ ? ಮಹಿಳಾವರ್ಷವನ್ನು ಹೀಗೆಯೇ ಆಚರಿಸಲಾಯ್ತು. ಆದರಿಂದ ವಿಷ್ಟರಮಟ್ಟಿನ ಉಪಯೋಗವಾಗಿದೆಯೆಂಬುದು ಆದರ ಲಾಭಪಡೆದ ಕೆಲವರಿಗೇ ಗೊತ್ತು. ರಚನಾತ್ಮಕವಾದ, ಶಾಶ್ವತವಾದ ಯಾವ ಕಾರ್ಯಕ್ರಮವನ್ನೂ ನಮ್ಮದೇಶದಲ್ಲಿ ಕೈಗೊಳ್ಳಲಿಲ್ಲ. ಆದರೆ ಮಹಿಳಾವರ್ಷದ ಆಚರಣೆಗಾಗಿ ಕೋಟಿಗಟ್ಟಲೆ ಹಣ ಖರ್ಚಾದು ದಂತೂ ಸತ್ಯ. ಇದೇರೀತಿ "ಮಕ್ಕಳ ವರ್ಷ"ದ ಆಚರಣೆಯೂ ಆದರೆ ಅದರಿಂದ ಉದ್ದೇಶಿತ ಫಲ ದೊರಕುವುದಿಲ್ಲ. ಆದರಿಂದ ಜನ ಜಾಗೃತಿಗಾಗಿ ಸಭೆ-ಸಮಾರಂಭ ಗಳನ್ನು ಮಾಡುವುದರ ಜೊತೆಗೆ. ಪ್ರತಿ ಮಗುವೂ ಆರೋಗ್ಯಕರ ವಾತಾವರಣದಲ್ಲಿ ಜೀವಿಸಲು, ಪೌಷ್ಟಿಕ ಆಹಾರವನ್ನು ಪಡೆಯಲು, ಆವಶ್ಯಕ ಉಡುಪನ್ನು ತೊಡಲು, ಸೂಕ್ತ ಶಿಕ್ಷಣವನ್ನು ಹೊಂದಲು ಬೇಕಾದಂತಹ ಮಾರ್ಗದ ವ್ಯವಸ್ಥೆ ರೂಪಿಸಬೇಕು. ಮಕ್ಕಳ ಕಲ್ಯಾಣನಿಧಿಯನ್ನು ಸ್ಥಾಪಿಸಿ, ಆ ನಿಧಿ ಯಾವ ವಿಧದಲ್ಲೂ ದುರುಪಯೋಗ ವಾಗದಂತಹ ವ್ಯವಸ್ಥೆ ರೂಪಿಸಬೇಕು. ಅದು ಸರ್ವ ವಿಧದಲ್ಲೂ ಸದುಪಯೋಗವಾಗಿ ಅದರಿಂದ ಮಕ್ಕಳು ಉತ್ತಮ ವ್ಯಕ್ತಿತ್ವ ಪಡೆದು ರೂಪುಗೊಳ್ಳುವಂತೆ ಮಾಡಬೇಕು.

ಮಕ್ಕಳ ಕಲ್ಯಾಣನಿಧಿಯನ್ನು ರಾಜ್ಯಮಟ್ಟದಲ್ಲೋ, ರಾಷ್ಟ್ರಮಟ್ಟದಲ್ಲೋ ಇಟ್ಟು ಕೊಂಡು ಅದರ ಹಂಚುವಿಕೆಗೆ ಮಾಡುವ ಏರ್ಪಾಟಿನಿಂದ ಅನೇಕ ಅವ್ಯವಸ್ಥೆಗಳಾಗಲು ಅವಕಾಶವಿದೆ. ಅಲ್ಲದೆ ಅದರ ಸಂಗ್ರಹ, ವಿತರಣೆ ಮುಂತಾದವುಗಳಿಗಾಗಿಯೇ ಬಹಳಷ್ಟು ಹಣ ಪೋಲಾಗುವ ಸಾಧ್ಯತೆಯುಂಟು. ಆದುದರಿಂದ ಈ ವ್ಯವಸ್ಥೆಯ ಬದಲಾಗಿ ಸೂಕ್ತ ವ್ಯವಸ್ಥೆ ಅಗತ್ಯ.

ಕೇವಲ ಸರಕಾರವೇ ಈ ನಿಧಿಯನ್ನು ಕೂಡಿಸಿದರೆ ಹಣ ಸಾಲುವುದಿಲ್ಲ. ಈ ಬಗ್ಗೆ ಜನರ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಜಾಗೃತಗೊಳಿಸಿದಾಗ ಎಲ್ಲರೂ ಜವಾಬ್ದಾರಿಯಿಂದ ನಡೆಯಲು ಸಹಾಯಕವಾಗುತ್ತದೆ. ಆಯಾ ರಾಜ್ಯಸರ್ಕಾರಗಳು, ಬೇರೆ ಬೇರೆ ಖಾತೆಗಳಿಗೆ ಪ್ರತಿವರ್ಷದ ಬಜೆಟ್ಟಿನಲ್ಲಿ ಹಣ ನಿರ್ಧರಿಸುವಂತೆ, ಮಕ್ಕಳ ನಿಧಿಗೂ ಇಂತಿಷ್ಟು ಹಣವೆಂದು ತೆಗೆದಿರಿಸಬೇಕು. ಕೇಂದ್ರವೂ ಕೂಡ ಪ್ರತಿ ರಾಜ್ಯಕ್ಕೂ ಆಯಾರಾಜ್ಯದ ಮಕ್ಕಳ ಜನಸಂಖ್ಯೆಗನುಗುಣವಾಗಿ ತನ್ನ ವಂತಿಗೆಯನ್ನು ನೀಡಬೇಕು. ಅಲ್ಲದೆ ಗ್ರಾಮಪಂಚಾಯ್ತಿಗಳು, ತಾಲ್ಲೂಕು ಬೋರ್ಡುಗಳೂ, ಡಿಸ್ಟ್ರಿಕ್ಟ್ ಬೋರ್ಡ್ ಗಳೂ, ಮುನಿಸಿಪಾಲಿಟಿಗಳೂ. ಕಾರ್ಪೊರೇಶನ್‌ಗಳೂ ತಮ್ಮ ಆದಾಯದ ಇಂತಿಷ್ಟು ಭಾಗವನ್ನು ಮಕ್ಕಳ ಶಾಶ್ವತ ಕಲ್ಯಾಣ ನಿಧಿಗೆ ವಂತಿಗೆಯನ್ನು ಪ್ರತಿ ವರ್ಷವೂ ಸಲ್ಲಿಸುತ್ತಾ ಹೋಗಬೇಕು. ಇದರ ಜೊತೆಗೆ ಸಂಪಾದನೆ ಮಾಡುವ (ನಿರ್ದಿಷ್ಟ ಆದಾಯವಿಲ್ಲದ ಕೂಲಿಗಳನ್ನು ಬಿಟ್ಟು) ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆದಾಯದ ಶೇಕಡಾ ಒಂದರ ಷ್ಟನ್ನು ಮಕ್ಕಳ ನಿಧಿಗೆ ವಂತಿಗೆಯಾಗಿ ಕೊಡುವಂತೆ ವಿಧಿಸಬೇಕು. ವೃತ್ತಿತೆರಿಗೆಯನ್ನು ವಿಧಿಸಿದಾಗ. ನೇರವಾಗಿ ತಮಗೆ ಅನುಕೂಲವಿಲ್ಲದಿದ್ದರೂ ಜನತೆ ಪ್ರತಿಮಾತಿಲ್ಲದೆ ಕೊಟ್ಟರು. ಹಾಗಿರುವಲ್ಲಿ ತಮ್ಮ ಮಕ್ಕಳಿಗೆ ಕ್ಷಿಪ್ರದಲ್ಲಿಯೇ ಅನುಕೂಲವಾಗುವ ಭರವಸೆ ಸಿಕ್ಕರೆ, ಜನರು ಇದಕ್ಕೆ ಪ್ರತಿಭಟಿಸಲಾರರು.

ಒಂದೊಂದು ಜಿಲ್ಲೆಯನ್ನೂ 'ಮಕ್ಕಳ ಶಾಶ್ವತ ಕಲ್ಯಾಣನಿಧಿ ಪ್ರದೇಶ'ವಾಗಿ ಒಂದೊಂದು ಪ್ರದೇಶದ ವಿಸ್ತೀರ್ಣ ೧ ದಿನ ವಯಸ್ಸಿನ ಮಗುವಿನಿಂದ ೫ ವರ್ಷ ವಯಸ್ಸಿನ ವರೆಗಿನ ಮಕ್ಕಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. (ಪ್ರದೇಶವನ್ನು ವಿಭಾಗಿಸುವ ಸಮಯದಲ್ಲಿ) ಪ್ರತಿ ಪ್ರದೇಶ ಐದುನೂರು ಮಕ್ಕಳನ್ನು ಒಳಗೊಳ್ಳಬೇಕು. ಹೀಗೆ ಆ ಜಿಲ್ಲೆಯಲ್ಲಿ 'ಮಕ್ಕಳ ಶಾಶ್ವತ ಕಲ್ಯಾಣ ನಿಧಿ ಪ್ರದೇಶ'ಗಳ ಸಂಖ್ಯೆಯನ್ನು ನಿರ್ದಿಷ್ಟಗೊಳಿಸಬೇಕು. ಇದೇ ರೀತಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ವಿಂಗಡಿಸಿ, ರಾಜ್ಯದಲ್ಲಿ ಎಷ್ಟು ಅಂತಹ ಪ್ರದೇಶಗಳಾಗುತ್ತವೆಯೆಂಬುದನ್ನು ಕಂಡುಕೊಳ್ಳಬೇಕು. ಕೇಂದ್ರವಾಗಲೀ ರಾಜ್ಯವಾಗಲೀ ಈ ನಿಧಿಗೆ ಕೊಡುವ ವಂತಿಗೆಯನ್ನು ಸಮನಾಗಿ ಎಲ್ಲಾ ಪ್ರದೇಶಗಳಿಗೂ ಹಂಚಬೇಕು. ಆ ಮೊತ್ತಕ್ಕೆ ಆಯಾ ಪ್ರದೇಶದ ಜನರ ಆದಾಯದ ಶೇಕಡ ಒಂದರಷ್ಟನ್ನು ಪ್ರತಿ ತಿಂಗಳೂ ತನ್ನ ವಂತಿಗೆಯಾಗಿ ಕೊಟ್ಟು ಹಣವನ್ನು ಸೇರಿಸಬೇಕು. ಹೀಗೆ ಈ ಮಕ್ಕಳ ವರ್ಷದಲ್ಲಿ ಶೇಖರಿಸಿ ವರ್ಷದ ಅಂತ್ಯದಲ್ಲಿ 'ಮಕ್ಕಳ ಕಲ್ಯಾಣ ಶಾಶ್ವತ ನಿಧಿ'ಯನ್ನು ಬ್ಯಾಂಕಿನಲ್ಲಿ ಶಾಶ್ವತ ಠೇವಣಿ (fixed deposit) ಆಗಿ ಇಡಬೇಕು. ಇದಕ್ಕೆ ಪ್ರತಿವರ್ಷವೂ ಜನರು, ಸ್ಥಳೀಯ ಸಂಸ್ಥೆಗಳು, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ವಿಶ್ವಸಂಸ್ಥೆ ಅಥವಾ ಬೇರಿನ್ನಾವುದೇ ಸಂಸ್ಥೆ ಅಥವಾ ವ್ಯಕ್ತಿಗಳು ಕೊಡುವ ಹಣವನ್ನು ಈ ನಿಧಿಗೆ ಕೂಡಿಸುತ್ತಾ ಹೋಗಬೇಕು. ಆ ಶಾಶ್ವತ ನಿಧಿಯಿಂದ ಬರುವ ಬಡ್ಡಿ ಆಯಾ 'ಪ್ರದೇಶ'ದಲ್ಲಿ ಎಷ್ಟು ಬರುತ್ತೆ ಎಂಬುದನ್ನು ನೋಡಿಕೊಂಡು, ಪ್ರತಿ ಬಡ ಮಗುವಿಗೆ ವರ್ಷಕ್ಕೆ ಎಷ್ಟು ಹಣ ಖರ್ಚುಮಾಡಬಹುದೆಂಬುದನ್ನು ಕಂಡುಹಿಡಿದುಕೊಳ್ಳಬೇಕು. ಒಂದೊಂದು ಪ್ರದೇಶದಲ್ಲಿ ೫೦೦ ಮಕ್ಕಳಿದ್ದರೂ ಸಹಾಯದ ಅವಶ್ಯಕತೆ ಇರುವ ಮಕ್ಕಳೆಷ್ಟು ಎಂಬುದನ್ನು ನೋಡಿಕೊಳ್ಳಬೇಕು. ವರ್ಷಕ್ಕೆ ೫೦೦೦ ರೂ. ಗಳಿಗಿಂತಲೂ ಕಡಿಮೆ ಆದಾಯವಿರುವ ಅಥವಾ ಇಂತಿಷ್ಟರವರೆಗೆ ಕಂದಾಯ ಕೊಡುವ ತಂದೆ ತಾಯ್ಗಳ ಮಕ್ಕಳಿಗೆ ಮಾತ್ರ ಈ ನಿಧಿಯಿಂದ ಸಹಾಯ ದೊರೆಯಬೇಕು. ವರ್ಷದ ಬಡ್ಡಿಯನ್ನು ಸಹಾಯ ಕೊಡಬೇಕಾದ ಮಕ್ಕಳಲ್ಲಿ ಸಮಾನವಾಗಿ ಹಂಚಬೇಕು. ಅಂದರೆ ಹಣವನ್ನು ಕೊಡಬೇಕೆಂದು ಅರ್ಥವಲ್ಲ. ಅವರಿಗೆ ಪೌಷ್ಟಿಕ ಆಹಾರದ ಪೂರೈಕೆ, ಉಡುಪು, ವೈದ್ಯಕೀಯ ಉಪಚಾರ ಮುಂತಾದ ಅತ್ಯಗತ್ಯಗಳನ್ನು ಪೂರೈಸಬೇಕು. ಹಣದ ರೂಪದಲ್ಲಿ ಎಂದಿಗೂ ಕೊಡಬಾರದು. ಪ್ರತಿ ತಿಂಗಳೂ ಸಹಾಯಕ್ಕಾಗಿ ಬಂದಾಗ ಮಗುವಿನಲ್ಲಿ ನಿಜವಾದ ಪ್ರಗತಿಯಾಗಿರುವುದನ್ನು ಕಂಡುಕೊಂಡು, ಇಲ್ಲದಿದ್ದಲ್ಲಿ ಸೂಕ್ತ ಸಲಹೆ, ಎಚ್ಚರಿಕೆ ಕೊಟ್ಟು ಹಣ ವ್ಯರ್ಥವಾಗುತ್ತಿಲ್ಲವೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. ಪ್ರತಿವರ್ಷವೂ ನಿಧಿಯ ಹಣ ಹೆಚ್ಚುತ್ತಾ ಹೋಗುವುದರಿಂದ ವರ್ಷ, ವರ್ಷಕ್ಕೂ ಬಡ್ಡಿಯೂ ಹೆಚ್ಚುತ್ತಾ ಹೋಗಿ ವರ್ಷ ಕಳೆದಂತೆ ಮಕ್ಕಳ ಸೌಲಭ್ಯಗಳನ್ನು ಹೆಚ್ಚು, ಹೆಚ್ಚು ಸಮರ್ಥವಾಗಿ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಹತ್ತು ವರ್ಷಗಳ ನಂತರ ಜನರ ವಂತಿಗೆ ಅವಶ್ಯಕವಿಲ್ಲದಿದ್ದಲ್ಲಿ ಬೇಕಾದರೆ ನಿಲ್ಲಿಸಬಹುದು.

ಹೀಗೆ ಏನಾದರೊಂದು ರೀತಿಯಲ್ಲಿ ಶಾಶ್ವತವಾದ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳುವುದು ಅಪೇಕ್ಷಣೀಯ. ಇಲ್ಲದೆ ಒಂದು ವರ್ಷ ವಿಜೃಂಭಿಸಿ, ನಂತರ ಅದರ ಸುಳಿವೂ ಇಲ್ಲದಂತಾಗುವ ಕಾರ್ಯಕ್ರಮಗಳಿಂದ ಹಣ, ಸಮಯ, ಶಕ್ತಿಗಳ ಅಪವ್ಯಯ ಮಾಡಿದಂತಾಗುತ್ತದೆ. ಇಲ್ಲದೆ ಶಾಶ್ವತವಾದ ಕಾರ್ಯರೂಪಿಸಿ, ವಂತಿಗೆ ಕೂಡಿಸಿದರೂ ಕೆಲಸ ಮುಗಿದಂತಲ್ಲ. ನಮ್ಮ ದೇಶದಲ್ಲಿ ಅನೇಕ ಉತ್ತಮ ಯೋಜನೆಗಳನ್ನು ರೂಪಿಸಿದ್ದಾರೆ. ಆದರೆ ನೂರಕ್ಕೆ ತೊಂಬತ್ತು ಯೋಜನೆಗಳು ಯೋಜಿಸಿದಂತೆ ಕೆಲಸ ಮಾಡುತ್ತಿಲ್ಲ. ಇಷ್ಟೇ ಅಲ್ಲ ಹೆಚ್ಚು ಹೆಚ್ಚಿಗೂ ಹಣದ ದುರುಪಯೋಗವಾಗಿ ಯೋಜನೆಯೇ ಉಪಯೋಗವಿಲ್ಲದ್ದು; ಅವ್ಯಾವಹಾರಿಕವಾದದ್ದು, ಕಾರ್ಯರೂಪಕ್ಕೆ ತರಲಿ ಸಾಧ್ಯವಾದದ್ದು ಎಂಬಂತಹ ಸ್ಥಿತಿಗೆ ಬಂದ ಉದಾಹರಣೆಗಳೂ ಸಾಕಷ್ಟಿವೆ. ನಿಜವಾಗಿ ಈ ದಿಶೆಯಲ್ಲಿ ಉತ್ತಮ ಕಾರ್ಯ ಮಾಡಬೇಕಾದರೆ ಬಹಳ ಜನರ ಕೈವಾಡಕ್ಕೆ ಆಸ್ಪದವಿಲ್ಲದೆ, ನಿಧಿಯಿಂದ ಹಣವು ನೇರವಾಗಿ ಮಗುವಿನ ಕಲ್ಯಾಣ ಕೆಲಸ ನಿರ್ವಹಿಸುವ ವ್ಯಕ್ತಿಯ ಮೂಲಕ ಮಗುವಿಗೆ ಸೂಕ್ತರೂಪದಲ್ಲಿ ಮುಟ್ಟುವ ಏರ್ಪಾಟಾಗಬೇಕು. ಅದಕ್ಕೆ ಆ ಪ್ರದೇಶದ ಸ್ವಜನತನವಿಲ್ಲದೆ, ರಾಜಕಾರಣಿಗಳಿಲ್ಲದೆ, ಒಳ್ಳೆಯ ಹೆಸರುಳ್ಳ ನಾಲ್ಕೈದು ಜನರ ಮೇಲ್ವಿಚಾರಣಾ ಕಮಿಟಿ ರಚಿಸಬೇಕು. ಆ ಕಮಿಟಿಯ ಸದಸ್ಯರು ಆ ನಿಧಿಯನ್ನು ಇಟ್ಟಿರುವ ಊರಿನವರೇ ಆಗಿರಬೇಕು. ಪ್ರಯಾಣ ಭತ್ಯೆ, ತುಟ್ಟಿಭತ್ಯೆ, ವಸತಿ ಭತ್ಯೆ ಮುಂತಾದವುಗಳಿಗೆ ಹಣ ವ್ಯರ್ಥವಾಗಿ ಖರ್ಚಾಗುವಂತಿರಬಾರದು. ಈ ಹಣದ ಲೆಕ್ಕ ಪತ್ರವಿಡುವ ಮತ್ತು ಮಕ್ಕಳಿಗೆ ಕಲ್ಯಾಣ ವಸ್ತುಗಳನ್ನು ಹಂಚುವ ಕಾರ್ಯ ನಿರ್ವಹಿಸಲು ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕು. ಅವನಿಗೆ ಪ್ರತ್ಯೇಕ ಸೇವಾ ನಿಯಮಗಳಿರಬೇಕು. ಇಂತಹ ಉದಾತ್ತ ಧ್ಯೇಯಕ್ಕಾಗಿ ಮೀಸಲಿರಿಸುವ ಹಣದ ದುರುಪಯೋಗ ಸ್ವಲ್ಪಮಟ್ಟಿಗೆ ಆದರೂ ಆ ವ್ಯಕ್ತಿಯನ್ನು ಕೆಲಸದಿಂದ ಕಿತ್ತೊಗೆಯುವಂತಹ ಅಥವಾ ಮತ್ತಾವುದೇ ಸೂಕ್ತ ಉಗ್ರ ಶಿಕ್ಷೆಯನ್ನು ವಿಧಿಸಬೇಕು. ಮತ್ತು ಅವನ ಬಗ್ಗೆ ಯಾವುದೇ ರೀತಿಯ ದೂರುಗಳಿಲ್ಲದಿದ್ದಲ್ಲಿ, ಬಹಳ ನಿಷ್ಠೆಯಿಂದ, ದಕ್ಷತೆಯಿಂದ ಕೆಲಸ ನಿರ್ವಹಿಸುವ ಸಂಗತಿ ಕಂಡು ಬಂದರೆ ಅಂತಹ ವ್ಯಕ್ತಿಯನ್ನು ಸಾರ್ವಜನಿಕವಾಗಿ ಗೌರವಿಸುವ ಪರಿಪಾಠ ಇಟ್ಟುಕೊಳ್ಳಬೇಕು. ಆ ಸಂದರ್ಭದಲ್ಲಿ ಆಯಾ 'ಪ್ರದೇಶದ ಸಹಾಯ ಪಡೆದ ಪಾಲಕರು ಈ ಅಧಿಕಾರಿಯಿಂದಾದ ತಮ್ಮ ಒಳಿತು ಅಥವಾ ಕೆಡುಕಿನ ಅನುಭವಗಳನ್ನು ಹೇಳಲು ಅವಕಾಶವಿರಬೇಕು. ಅಂದರೆ ಈ ವ್ಯಕ್ತಿ ಎಲ್ಲ ಮಕ್ಕಳಿಗೂ ಸಮಾನ ರೀತಿಯಲ್ಲಿ ಭೇದಭಾವವಿಲ್ಲದೆ ತನ್ನ ಕರ್ತವ್ಯ ಮಾಡುವಂತೆ ನಿಯಂತ್ರಣ ಹೇರಿದಂತಾಗುತ್ತದೆ. ಈ ಅಧಿಕಾರಿಗಳನ್ನು ನಿಯಮಿಸುವಾಗಲೂ ಬೇರಾವುದೇ ನಿಯಮಗಳನ್ನು ಗಣಿಸದೆ, ಅವನ ಮನೆತನದ ಹಿನ್ನೆಲೆ, ಅವನು ಓದಿದ ಶಾಲಾ-ಕಾಲೇಜುಗಳಿಂದ ಗುಪ್ತ ವರದಿಗಳನ್ನು (Confidential report) ತರಿಸಿ ಇವುಗಳನ್ನು ಗಮನಿಸಬೇಕು. ಜಿಲ್ಲೆಗೆ ಒಬ್ಬ ಮೇಲಾಧಿಕಾರಿಯನ್ನು, ರಾಜ್ಯ ಮಟ್ಟದಲ್ಲಿ ಒಬ್ಬ ಮೇಲಧಿಕಾರಿಯನ್ನು ಮೇಲ್ವಿಚಾರಣೆಗಾಗಿ ನಿಯಮಿಸಿಕೊಳ್ಳಬಹುದು. ಆದರೆ ಆತ ಸಂದರ್ಶನ ಅಧಿಕಾರಿಯೇ

ಹೊರತು ಲೆಕ್ಕ ಪತ್ರ ಯಾವುದೂ ಅವನ ಜವಾಬ್ದಾರಿಯಲ್ಲ. ಅವನಿಗೆ ಸಹಾಯಕ ಸಿಬ್ಬಂದಿಯೂ ಅಗತ್ಯವಿಲ್ಲ. ಆಗಾಗ್ಗೆ ತನ್ನ ವ್ಯಾಪ್ತಿಗೆ ಒಳಪಟ್ಟ 'ಪ್ರದೇಶ'ಗಳನ್ನು ಸಂದರ್ಶಿಸಿ, ಆಯಾ ಪ್ರದೇಶದ ಕಾರ್ಯಕ್ಷಮತೆಯ ಬಗೆಗೆ ವರದಿ ತಯಾರಿಸಿ ರಾಜ್ಯ ಮಟ್ಟದ ಅಧಿಕಾರಿಗೆ ಒಪ್ಪಿಸಬೇಕು. ಆ ಅಧಿಕಾರಿಯೂ ಸರಕಾರಕ್ಕೆ ಬೇಕಾದ (ಈ ಕ್ಷೇತ್ರದ) ಮಕ್ಕಳ ಕ್ಷೇತ್ರ ಮಾಹಿತಿಯನ್ನು ಒಪ್ಪಿಸಬೇಕು. ಅಲ್ಲದೆ ಇವನು ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಮಕ್ಕಳ ಕಲ್ಯಾಣ ನಿಧಿಗೆ ಕೊಡುವ ಹಣವನ್ನು ಸಮವಾಗಿ ಎಲ್ಲಾ ಕೇಂದ್ರಗಳಿಗೆ ಹಂಚುವ ಕೆಲಸವನ್ನು ನಿರ್ವಹಿಸಬೇಕು. (ಈ ಕೆಲಸ ವರ್ಷಕ್ಕೊಮ್ಮೆ ಮಾತ್ರ) ಜೊತೆಗೆ ಪ್ರತಿ ತಿಂಗಳೂ ಇಂತಿಷ್ಟು 'ಪ್ರದೇಶ'ಗಳೆಂದು ಪ್ರದೇಶಗಳಿಗೆ ಭೇಟಿ ಕೊಟ್ಟು, ಒಪ್ಪಿಸಿದ ಕೆಲಸವು ಸರಿಯಾಗಿ ನಿರ್ವಹಿಸಲ್ಪಡುತ್ತಿದೆ ಎಂಬ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕು. ಅಗತ್ಯ ಬಿದ್ದಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ಕೊಡಬೇಕಾಗುವುದು.

ಒಟ್ಟಿನಲ್ಲಿ 'ನಿಧಿ'ಯ ಹಣದ ಒಂದು ಪೈಸೆಯೂ ದುರುಪಯೋಗವಾಗಲಾರದಂತಹ ಒಂದು ವ್ಯವಸ್ಥೆಯಾಗಬೇಕು. ಇದು ಅತ್ಯಂತ ಮಹತ್ತರ ಜವಾಬ್ದಾರಿ. ಅಷ್ಟು ಜಾಗರೂಕತೆಯಿಂದ ಮಾಡುವಂತಿದ್ದರೆ ಮಾತ್ರ ಇಂತಹ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಅವರೆ ಒಂದು ಯೋಜನೆ ಕೈಗೊಂಡು, ಸಾಕಷ್ಟು ಹಣ ಮೀಸಲಿಟ್ಟು ಕೆಲವೊಂದು ವರಿಷ್ಟ ಹಿತಾಸಕ್ತಿಗಳ ಬಾಯಿಗೆ ಬಸಿಯುವಂತಹ ನಿರುಪಯುಕ್ತವಾದ. ಮಕ್ಕಳ ಹೆಸರಿನಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದ ಕೊಡುವಂತಹ ಯೋಜನೆಗಳನ್ನು ಕೈಗೊಳ್ಳದಿರುವುದೇ ಕ್ಷೇಮ. ಹಾಗೆಂದು ಒಳ್ಳೆಯ ಕೆಲಸದ ಆರಂಭವನ್ನೇ ಮಾಡಬರದೆಂದಲ್ಲ. ಮಾಡಬೇಕು. ಜೊತೆಗೆ ಮಾಡಿದ ಪ್ರಯತ್ನ ಸಫಲವಾಗುವಂತೆ ಜಾಗರೂಕತೆ ವಹಿಸಬೇಕು.

ಮಕ್ಕಳು ಮತ್ತು ಕಳ್ಳತನ ಪ್ರವೃತ್ತಿ

● ಎಂ. ಕುಮಾರಸ್ವಾಮಿ

ಎಲ್ಲಾ ತಂದೆ ತಾಯಿಗಳು ತಮ್ಮ ಮಕ್ಕಳೆಲ್ಲರೂ ಸತ್ಯಸಂಧರಾಗಿ, ಸಾತ್ವಿಕರಾಗಿ, ಪರೋಪಕಾರಿಗಳಾಗಿ ಸಮಾಜದಲ್ಲಿ ಸತ್ಪ್ರಜೆಗಳಾಗಿ ಬಾಳಿ ಬದುಕಬೇಕೆಂದು ಬಯಸುತ್ತಾರೆ. ಆದರೆ ಹಲವಾರು ಮಕ್ಕಳು ಇವರ ಈ ಬಯಕೆ, ಆಸೆ, ಆಕಾಂಕ್ಷೆಗಳಿಗೆ ಭಂಗ ತಂದು, ತಪ್ಪುದಾರಿ ಹಿಡಿದು, ತಮಗೂ, ತಂದೆ ತಾಯಿಗಳಿಗೂ ಹಾಗು ಸಮಾಜಕ್ಕೂ ಸಮಸ್ಯೆಯಾಗುತ್ತಾರೆ. ಈ ಮಕ್ಕಳು ತಮ್ಮ ಆಸೆ, ಆಕಾಂಕ್ಷೆ ಇತ್ಯಾದಿಗಳನ್ನು ಪೂರೈಸಿಕೊಳ್ಳಲು ಸರ್ಕಾರದ ಹಾಗೂ ಸಮಾಜದ ಕಟ್ಟುಪಾಡು, ಕಾನೂನುಗಳನ್ನು ಉಲ್ಲಂಘಿಸಿ ಹಲವಾರು ತೊಂದರೆಗಳಿಗೆ ಈಡಾಗುತ್ತಿರುವುದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಸಮಾಜದಲ್ಲಿ ಇಂತಹ ಮಕ್ಕಳು ಬಾಲಾಪರಾಧಿಗಳೆಂದು ಕರೆಯಲ್ಪಡುತ್ತಾರೆ.

ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಬಾಲಾಪರಾಧ ಹಾಗೂ ವಯಸ್ಕರು ಮಾಡುವ ಅಪರಾಧ, ಅಪರಾಧಿಗಳ ವ್ಯಕ್ತಿತ್ವ, ಅಪರಾಧದ ಕಾರಣಗಳು, ಅಪರಾಧ ಶೋಧನೆ ಅದಕ್ಕೆ ತಕ್ಕ ಪರಿಹಾರ ಇಂತಹ ವಿಷಯಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ವೈಜ್ಞಾನಿಕವಾಗಿ ಅಭ್ಯಾಸಮಾಡಲು ಒಂದು ಪ್ರತ್ಯೇಕವಾದ ಶಾಸ್ತ್ರವಿದೆ. ಅದೇ ಅಪರಾಧ ಶಾಸ್ತ್ರ ಅಥವಾ ಅಪರಾಧ ವಿಜ್ಞಾನ (Criminology).

ಬಾಲಾಪರಾಧ ಮಕ್ಕಳ ಕಿಡಿಗೇಡಿತನಕ್ಕೆ ಹಾಗೂ ಅವರ ಘಾತುಕ ಚೇಷ್ಟೆಗಳಿಗೆ ಒಂದು ಉದಾಹರಣೆಯಾಗಿದೆ. ಮಕ್ಕಳ ಕಿಡಿಗೇಡಿತನವೇನೋ ಸಾಧಾರಣವಾಗಿ ಎಲ್ಲಾ ಕುಟುಂಬಗಳಲ್ಲಿಯೂ, ಎಲ್ಲಾ ಸಮಾಜದಲ್ಲಿಯೂ ಕಂಡು ಬರುವ ವರ್ತನೆಯಾಗಿರಬಹುದು. ಆದರೆ ಈ ಕಿಡಿಗೇಡಿತನವೇ ಸಾಮಾಜಿಕ ಕ್ರಮ ನಿಯಮಗಳಿಗೆ, ಸಮಾಜದ ಕಾರ್ಯಕಲಾಪಗಳಿಗೆ, ಸಮಾಜದ ಕ್ಷೇಮಾಭಿವೃದ್ಧಿಗೆ ಅಥವಾ ಕಾನೂನುಗಳಿಗೆ ವಿರುದ್ಧವಾದ ಕಾರ್ಯವಾದರೆ ಅದನ್ನೇ ನಾವು ಬಾಲಾಪರಾಧಿವರ್ತನೆಯೆಂದು ಕರೆಯುತ್ತೇವೆ. ಮಕ್ಕಳಲ್ಲಿ ಈ ವಿಧವಾದ ವರ್ತನೆಯನ್ನು ತಡೆಯದಿದ್ದಲ್ಲಿ ಅದೇ ಅವರು ದೊಡ್ಡ ಅಪರಾಧಿಗಳಾಗಲು ಅಡಿಪಾಯವಾದಂತಾಗುತ್ತದೆ. ಆದುದರಿಂದ ಬಾಲಾಪರಾಧವನ್ನು ತುಚ್ಛವೆಂದು ಕಡೆಗಣಿಸಲು ಬರುವುದಿಲ್ಲ. ಇದು ಜೀವಂತ

ಸಮಸ್ಯೆ. ಇಂದು ಅದನ್ನು ತಡೆಯದಿದ್ದಲ್ಲಿ ನಾಳೆ ಅದು ನಾಡಿನ ಸತ್ವವನ್ನೇ ಹಾಳು ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ.

ಕಾನೂನಿನ ದೃಷ್ಟಿಯಲ್ಲಿ ಮಕ್ಕಳ ಅಪರಾಧಗಳು ಬಾಲಾಪರಾಧಗಳಾಗುತ್ತವೆ ಎಂಬುದು ಸರಿಯಷ್ಟೆ. ಇಂತಹ ಸಂದರ್ಭದಲ್ಲಿ ಬಾಲಕರು ಅಥವಾ ಮಕ್ಕಳು ಎಂದರೆ ಯಾರು? ಎಂಬುದನ್ನು ಆಯಾ ರಾಜ್ಯಗಳ ಕಾನೂನು ನಿರ್ಧರಿಸಿರುತ್ತದೆ. ನಮ್ಮ ಭಾರತ ದೇಶದಲ್ಲಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಮಕ್ಕಳ ಕಾನೂನನ್ನು (Children Act) ರಚಿಸಿಕೊಂಡು ಜಾರಿಗೆ ತಂದಿದೆ. ಕರ್ನಾಟಕ ರಾಜ್ಯದ ಮಕ್ಕಳ ಕಾನೂನಿನ ಪ್ರಕಾರ ಹದಿನಾರು ವರ್ಷ ವಯಸ್ಸಿನ ಒಳಗಿರುವ ಹುಡುಗರು ಮತ್ತು ಹದಿನೆಂಟು ವರ್ಷ ವಯಸ್ಸಿನ ಒಳಗಿರುವ ಹುಡುಗಿಯರು ಮಕ್ಕಳೆಂದು ಕರೆಯಲ್ಪಡು ತ್ತಾರೆ. ಇಂತಹ ಮಕ್ಕಳು ರಾಜ್ಯದ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸಿದಾಗ ಬಾಲಾಪರಾಧಿಗಳಾಗುತ್ತಾರೆ. ಬಾಲಾಪರಾಧಿಗಳು ಅನೇಕ ವಿಧವಾದ ಅಪರಾಧ ಕೃತ್ಯ ಗಳನ್ನು ಮಾಡುತ್ತಾರೆ. ಅವುಗಳಲ್ಲಿ ಕಳ್ಳತನವೂ ಒಂದು. ಈ ಲೇಖನದಲ್ಲಿ ಅವರ ಕಳ್ಳತನ ಕೃತ್ಯದ ಬಗ್ಗೆ ಮಾತ್ರ ನಾನು ಸಂಕ್ಷಿಪ್ತವಾಗಿ ಹೇಳಿರುತ್ತೇನೆ.

ಅಪರಾಧ ಶಾಸ್ತ್ರಜ್ಞರ ಪ್ರಕಾರ ಮಕ್ಕಳು ಮಾಡುವ ಕಳ್ಳತನಕ್ಕೆ ಕೇವಲ ಒಂದೋ ಅಥವಾ ಎರಡೋ ಕಾರಣಗಳಿಲ್ಲ. ಅನೇಕ ಕಾರಣಗಳಿರುತ್ತವೆ. ಯಾವುದೇ ಎರಡು ಕಳ್ಳತನಗಳು ಒಂದೇ ತೆರನಾದ ಕಾರಣಗಳನ್ನು ಹೊಂದಿರುವುದಿಲ್ಲ. ಶಾರೀರಿಕ ಅಂಶ ಗಳು, ಮಾನಸಿಕ ಅಂಶಗಳು, ಮತ್ತು ಸಾಮಾಜಿಕ-ಆರ್ಥಿಕ ಅಂಶಗಳು ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಮಕ್ಕಳ ಕಳ್ಳತನಗಳಿಗೆ ಕಾರಣಗಳಾಗಿರುತ್ತವೆ.

ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸುಳ್ಳು ಹೇಳುವುದು ಹೇಗೆ ಹುಟ್ಟುಗುಣವಲ್ಲವೋ ಹಾಗೆಯೇ ಕಳ್ಳತನವೂ ಕೂಡ ಹುಟ್ಟು ಗುಣವಲ್ಲ. ಇದು ಕಲಿತ ವಿದ್ಯೆಯೇ ಹೊರತು ಅನುವಂಶಿಕವಾಗಿ ಬಂದಂತಹ ವರ್ತನೆ ಯಲ್ಲ. ಯಾವ ಮಕ್ಕಳೂ 'ಹುಟ್ಟುಕಳ್ಳ'ರಲ್ಲ. ಮೊದಲನೆಯದಾಗಿ, ಮಕ್ಕಳ ಹಲವಾರು ರೀತಿಯ ಕಳ್ಳತನಗಳಿಗೆ ಅವರು ಬೆಳೆಯುತ್ತಿರುವ ಕುಟುಂಬವೇ ಕಾರಣವೆನ್ನಬಹುದು. ಮಕ್ಕಳು ತೀರಾ ಚಿಕ್ಕವಯಸ್ಸಿನವರಾಗಿರುವಾಗ ಅವರಿಗೆ ವಸ್ತುಗಳು 'ತಮ್ಮದು' ಅಥವಾ 'ಬೇರೊಬ್ಬರದು' ಎಂಬ ಜ್ಞಾನವಿರುವುದಿಲ್ಲ. ಈ ಜ್ಞಾನ ಅವರಿಗೆ ಕ್ರಮೇಣವಾಗಿ ಅವರು ಬೆಳೆಯುತ್ತಿರುವಂತೆ ಬರುವುದು. ಮೊದ ಮೊದಲು ಮಕ್ಕಳು ತಮಗೆ ಬೇಕೆನಿ ಸಿದ ವಸ್ತುಗಳನ್ನು ತಮಗೆ ಬೇಕೆನಿಸಿದಾಗ ತೆಗೆದುಕೊಂಡುಬಿಡುತ್ತವೆ. ಆದರೆ ಅವರು ಬೆಳೆದಂತೆಲ್ಲಾ ತಮ್ಮ ವಸ್ತುಗಳಾವುವು ಇತರರದು ಯಾವುವು ಎಂಬುದು ಅರಿವಾಗುತ್ತದೆ. ಈ ಸಮಯದಲ್ಲಿ ತಂದೆ-ತಾಯಿಗಳು ಅಥವಾ ಹಿರಿಯರು ಮಕ್ಕಳಿಗೆ ತಮ್ಮ ಹಾಗೂ ಇತರರ ವಸ್ತುಗಳನ್ನು ಉಪಯೋಗಿಸುವುದರ ಬಗ್ಗೆ ಸೂಕ್ತ ಶಿಕ್ಷಣ ಕೊಡಬೇಕಾಗುತ್ತದೆ.

ಕೆಲವೊಮ್ಮೆ ಮನೆಯಲ್ಲಿ ಹಿರಿಯರು ತಿಳಿದೋ ಅಥವಾ ತಿಳಿಯದೆಯೋ ಮಕ್ಕಳ ವಸ್ತುಗಳನ್ನು ಬಳಸುತ್ತಾರೆ. ಮಕ್ಕಳನ್ನು ಕೇಳಿ ಅವರ ಒಪ್ಪಿಗೆ ಪಡೆದು ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ, ಇದರಿಂದ ಮಕ್ಕಳಿಗೆ ಸೌಜನ್ಯವೆಂದರೇನೆಂಬುದನ್ನು ತೋರಿಸಿ ಸೂಕ್ತ ಶಿಕ್ಷಣ ಕೊಟ್ಟಂತಾಗುತ್ತದೆ. ಉದಾಹರಣೆಗೆ, ಒಂದು ಕುಟುಂಬದಲ್ಲಿ ಒಂದು ಮಗು ತನ್ನ ತಾಯಿಯನ್ನು ಮಿಠಾಯಿ ಕೊಡಲು ಕೇಳುತ್ತೆನ್ನೋಣ. ಆಗ ತಾಯಿ ಬೇರಾವುದೋ ಕಾರ್ಯದಲ್ಲಿ ನಿರತಳಾಗಿದ್ದೋ ಅಥವಾ ಅವಳಿಗೆ ತೀರಾ ಬೇಸರವಾಗಿಯೋ ಇದ್ದರೆ, ಆ ಮಗುವಿಗೆ ಇಂತಹ ಕಡೆ ಮಿಠಾಯಿ ಇಟ್ಟಿದ್ದೇನೆ, ಹೋಗಿ ತೆಗೆದುಕೋ ಎಂದು, ಹೇಳುತ್ತಾಳೆ. ಇನ್ನೊಮ್ಮೆ ಮಗುವಿಗೆ ಮಿಠಾಯಿ ಬೇಕೆನಿಸಿದಾಗ, ಹಿಂದೆ ತಾಯಿಯು ತನ್ನನ್ನೇ ತೆಗೆದುಕೊಳ್ಳಲು ಹೇಳಿದ್ದನ್ನು ನೆನೆಸಿಕೊಂಡು, ಹೋಗಿ ತೆಗೆದುಕೊಂಡಾಗ ತಾಯಿ 'ಕಳ್ಳ' ಎಂದು ಮಗುವನ್ನು ಶಿಕ್ಷಿಸುತ್ತಾಳೆ. ಮುಂದೆ ಅದೇ ಮಗು ಸ್ವಲ್ಪ ಬುದ್ಧಿವಂತಿಕೆ ಬಳಸಿ, ತಾಯಿಗೆ ಕಾಣದಂತೆ ತನಗೆ ಬೇಕಾದ ತಿನಸುಗಳನ್ನು ತೆಗೆದುಕೊಳ್ಳಲು ಪ್ರಾರಂಭಮಾಡುತ್ತದೆ. ಇದೇ ಆ ಮಗುವಿನ ಕಳ್ಳತನ ಕೃತ್ಯಕ್ಕೆ ಉಗಮವಾಗುತ್ತದೆ. ತಂದೆ ತಾಯಿಗಳು ಅತಿಯಾಗಿ ಪ್ರೀತಿಸುವ ಮಕ್ಕಳು, ಪಕ್ಷಪಾತ ಹೊಂದಿರುವ ತಂದೆ ತಾಯಿಗಳು, ಮಕ್ಕಳಿಗೆ ಮಿತಿಮೀರಿ ಸ್ವಾತಂತ್ರ್ಯ ಕೊಡುವ ತಂದೆ ತಾಯಿಗಳೂ ಕೂಡ, ಮಕ್ಕಳ ಬಾಲಾಪರಾಧಿ ಕಳ್ಳತನಗಳಿಗೆ ಕಾರಣರಾಗುತ್ತಾರೆ. ಅತಿಯಾಗಿ ಪ್ರೀತಿಸಲ್ಪಟ್ಟ ಮಕ್ಕಳುಗಳಿಗೆ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವ ಅವಕಾಶವೇ ಇರುವುದಿಲ್ಲ. ಮನೆಯಲ್ಲಿ ಅವರು ಇತರರ ಸಾಮಾನುಗಳನ್ನೋ ಅಥವಾ ಹಣವನ್ನೋ ತೆಗೆದುಕೊಂಡಾಗಲೆಲ್ಲಾ ತಂದೆ ತಾಯಿಗಳು, ಆ ಮಕ್ಕಳಿಗೆ ಸರಿಯಾದ ತಿಳುವಳಿಕೆ ಕೊಡದೆ ಅವರ ಪರವಾಗಿಯೇ ಪಕ್ಷಪಾತವಹಿಸಿಕೊಂಡು ಮಾತನಾಡುತ್ತಾರೆ. ಇದರಿಂದ ಆ ಮಕ್ಕಳ ಕೃತ್ಯಗಳಿಗೆ ಉತ್ತೇಜನ ಕೊಟ್ಟಂತಾಗಿ ಮಕ್ಕಳು ಅದನ್ನೇ ತಮ್ಮ ಜೀವನದಲ್ಲಿ ರೂಢಿ ಮಾಡಿಕೊಂಡುಬಿಡುತ್ತಾರೆ. ಕೆಲವು ಕುಟುಂಬಗಳಲ್ಲಿ ಮಕ್ಕಳು ಕಳ್ಳತನಮಾಡುತ್ತಿರುವುದು ತಂದೆ ತಾಯಿಯರಿಗೆ ಗೊತ್ತಿದ್ದರೂ ಸಹ, ಅದನ್ನು ಸರಿಯಾಗಿ ತಿದ್ದದೆ ಬಿಟ್ಟುಬಿಡುತ್ತಾರೆ. ಉದಾಹರಣೆಗೆ, ತಾಯಿಯ ಜೊತೆಯಲ್ಲಿ ಪೇಟೆಗೆ ಹಣ್ಣು ತರಲು ಹೋಗಿರುವ ಮಗು, ತಾಯಿಯು ಹಣ್ಣಿನ ವ್ಯಾಪಾರ ಮಾಡುತ್ತಿರುವಾಗ, ಒಂದು ಹಣ್ಣನ್ನು ಎತ್ತಿಕೊಂಡು ತಾಯಿ ಕೊಂಡ ಹಣ್ಣಿನ ಚೀಲದೊಳಗೆ ಸೇರಿಸಿದಾಗ, ಆಕೆಯು ಅದನ್ನು ನೋಡಿಯೂ, ತನ್ನ ಮರ್ಯಾದೆ ಉಳಿಸಿಕೊಳ್ಳಲು ಸುಮ್ಮನಿದ್ದುಬಿಡುತ್ತಾಳೆ. ಆಗ ಮಗುವಿಗೆ ತಾನು ಮಾಡಿದ್ದು ತಪ್ಪು ಎಂದು ಅರಿವಾಗದೇ, ಮುಂದೆ ಅಂತಹುದೇ ಕೃತ್ಯಗಳನ್ನು ಮಾಡಲು ತೊಡಗಬಹುದು.

ಮತ್ತೆ ಕೆಲವು ಕುಟುಂಬಗಳಲ್ಲಿ ತಂದೆ-ತಾಯಿಗಳ ನೈತಿಕಮಟ್ಟ ಅಧೋಗತಿಯಲ್ಲಿರುತ್ತದೆ. ಅವರ ನೀತಿಮಟ್ಟ ಸರಿಯಿಲ್ಲವಾಗಿದ್ದು, ಅವರು ಸ್ವೇಚ್ಛಾಪ್ರವೃತ್ತಿಗಳಾಗಿದ್ದರೆ.

ಮಕ್ಕಳೂ ಸಹ ಅದನ್ನೇ ಅನುಕರಿಸಿ ಮನಸ್ಸಿನಲ್ಲಿ ಕೊರಗುತ್ತಾರೆ. ಮಕ್ಕಳ ಮುಂದೆ ಹಿರಿಯರು ಸಂಯಮ ತೋರುವುದು ಅಗತ್ಯ. ಅದು ಬದಲಾಗದೆ ಅವರು ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ಮಾಡುತ್ತಾರೆ. ಅಂತಹವರ ಮಕ್ಕಳಲ್ಲಿ ಅಥವಾ ಹಣದ ಮುಂದಿರುವಲ್ಲಿ. ಕೆಲವು ತಂದೆ-ತಾಯಿಯರು ಅರ್ಥ ಮಾಡಿಕೊಳ್ಳಲು ಅಥವಾ ಬಿಡಿಸಲು ಕೊಳ್ಳುವುದನ್ನು ಕಲ್ಪಿಸಿ ನೋಡುವುದರಿಂದ ಮಕ್ಕಳ ಮನಸ್ಸಿನಲ್ಲಿ. ಮಕ್ಕಳ ಮುಂದೆಯೇ ಅಶಿಸ್ತಿನ ಜೀವನ ನಡೆಸಲಾಗುತ್ತದೆ. ಮತ್ತೆ ಕೆಲವು ಕುಟುಂಬಗಳಲ್ಲಿ ತಾಯಿಯಿಂದ ತಿಳಿಯದ ಬೇರೆ ಗಂಡಸರನ್ನು ಬರುವ ಮಾಡಿ. ಗಂಡಂದಿರಿಗೆ ತಿಳಿಯದೆ ಬೇರೆ ಕೆಲವು ತಂದೆಯಾಗಿ ಸಂಬಂಧಿಸಿ, ಆ ಹಣವನ್ನು ಕೊಡುತ್ತಿರುತ್ತಾರೆ. ಈ ಬಗೆಯ ಕೃತ್ಯಗಳು ಮಕ್ಕಳ ಕಣ್ಣು ಮುಂದೆಯೇ ನಡೆಯುತ್ತಿದ್ದರೆ ಮಕ್ಕಳ ಪ್ರಾಮಾಣಿಕತೆ. ಇನ್ನು ಹಾಗೆ ಪತ್ತೆ ಚಿತ್ರಗಳಿಗೆ ಧಕ್ಕೆಯುಂಟಾಗಿ ಅವರ ಅಪರಾಧ ಪ್ರವೃತ್ತಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಕೆಲವು ಕುಟುಂಬದ ಮಕ್ಕಳು ಮನೆಯಲ್ಲಿರದೆ ಬೀದಿಯಲ್ಲಿಯೇ ಅಲೆಯುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುತ್ತಾರೆ. ಹಾಗೆ ಅಲೆದು ಮನೆಗೆ ಹೊತ್ತಲ್ಲದೆ ಬರುವ ಮಕ್ಕಳು ಮತ್ತು ಆಗಾಗ್ಗೆ ಮನೆ ಬಿಟ್ಟು ಓಡಿಹೋಗುವ ಮಕ್ಕಳು ಹಣ, ಹಸಿವು ಇತ್ಯಾದಿ ಬಯಕೆಗಳನ್ನು ತೀರಿಸಿಕೊಳ್ಳಲು ಕದಿಯುತ್ತಾರೆ. ಬಡತನ, ನಿರುದ್ಯೋಗ, ತಂದೆ-ತಾಯಿಗಳಿಬ್ಬರೂ ಮನೆಯಿಂದ ಹೊರಗೆ ಕೆಲಸಕ್ಕೆ ಹೋಗುವುದು, ಅತಿಶಿಸ್ತು, ತಂದೆ-ತಾಯಿಗಳಲ್ಲಿ ಜಗಳ, ವಿಚ್ಛೇದನ, ಒಡೆದ ಕುಟುಂಬ ಇತ್ಯಾದಿ ಅಂಶಗಳೂ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಮಕ್ಕಳ ಕಳ್ಳತನಗಳಿಗೆ ಕಾರಣವಾಗುತ್ತವೆ.

ಮತ್ತೊಂದೆಡೆಯಲ್ಲಿ, ಮಕ್ಕಳು ತಮ್ಮ ಮನೆಯ ಸುತ್ತಮುತ್ತಲ ಅನಾರೋಗ್ಯಕರ ವಾತಾವರಣದಿಂದಾಗಿ ಕಳ್ಳತನ ಕಲಿಯುವುದುಂಟು. ಮನೆಯ ಅಕ್ಕಪಕ್ಕದಲ್ಲಿ ದುಷ್ಟರು, ಸಮಾಜಘಾತುಕ ವ್ಯಕ್ತಿಗಳು ವಾಸವಾಗಿದ್ದು ಪರಿಸರದಲ್ಲಿ ಅನೈತಿಕ ವ್ಯಾಪಾರಗಳ ಸಂಸ್ಥೆಗಳಾದ ವೇಶ್ಯಾಗೃಹ, ಜೂಜುಕಟ್ಟೆ, ಮದ್ಯಗೃಹ, ಕ್ಲಬ್ಬು ಇತ್ಯಾದಿಗಳಿದ್ದಲ್ಲಿ ಆ ಪರಿಸರದಲ್ಲಿ ಬೆಳೆಯುವ ಮಕ್ಕಳು ಈ ಸಂಸ್ಥೆಗಳಿಂದ ಆಕರ್ಷಿತರಾಗಿ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳಲು ಕಳ್ಳತನ ಮಾಡಲು ತೊಡಗುತ್ತಾರೆ.

ಬಾಲಾಪರಾಧಿಗಳು ನಾನಾ ರೀತಿಯಲ್ಲಿ ಕಳ್ಳತನ ಮಾಡುತ್ತಾರೆ. ಕೆಲವು ಮಕ್ಕಳು ಕೈಗೆ ಸಿಗುವ ವಸ್ತುಗಳನ್ನು ಕಳ್ಳತನ ಮಾಡಿದರೆ, ಮತ್ತೆ ಕೆಲವರು ಬೇರೆಯವರ ಮನೆ ಪ್ರವೇಶಮಾಡಿ ವಸ್ತುಗಳನ್ನು ಅಥವಾ ಹಣವನ್ನು ಅಪಹರಿಸುತ್ತಾರೆ. ಕೆಲವರು ಬೇರೆ ಮಕ್ಕಳಮೇಲೆ ಬಲಾತ್ಕಾರಮಾಡಿ ಹಣ-ಸಾಮಾನುಗಳನ್ನು ಕಸಿಯುವವರೂ ಉಂಟು. ಕೆಲವರು ಗುಂಪಾಗಿ ವ್ಯವಸ್ಥಿತವಾದ ಕಳ್ಳತನ ಮಾಡಿದರೆ, ಮತ್ತೆ ಕೆಲವರು ಒಬ್ಬಂಟಿಯಾಗಿ ಕದಿಯುತ್ತಾರೆ. ಬಾಲಾಪರಾಧಿಗಳು ಕದಿಯುವ ವಸ್ತುಗಳು ಇಂಥವೇ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಕೆಲವು ಮಕ್ಕಳ

ತಮ್ಮ ಮನೆಯಲ್ಲಿ ಮಾತ್ರ ಹಣ ಇತ್ಯಾದಿಗಳನ್ನು ಕಳುವುಮಾಡಿದರೆ, ಮತ್ತೆ ಕೆಲವರು ಶಾಲೆಗಳಲ್ಲಿ ಬೇರೆ ಮಕ್ಕಳ ಪುಸ್ತಕ, ಪೆನ್ನು ಇತ್ಯಾದಿ ವಸ್ತುಗಳನ್ನು ಅಪಹರಿಸುತ್ತಾರೆ. ಕೆಲವರು ಹೋಟೆಲು, ಸಿನಿಮಾಮಂದಿರಗಳ ಮುಂದೆ ಬಿಟ್ಟಿರುವ ಸೈಕಲ್ಲುಗಳ, ಮೋಟಾರುವಾಹನಗಳ ಭಾಗಗಳನ್ನು ಕದ್ದರೆ, ಕೆಲವರು ಅಂಗಡಿಗಳಲ್ಲಿ ಆಟದ ಸಾಮಾನು, ಆಹಾರ, ಬಟ್ಟೆ, ಶೃಂಗಾರಸಾಮಗ್ರಿ ಇತ್ಯಾದಿಗಳನ್ನು ಅಪಹರಿಸುತ್ತಾರೆ.

ಕೆಲವು ಮಕ್ಕಳು ಒಂಟಿಯಾಗಿ ಯಾರ ಸಹಾಯವೂ ಇಲ್ಲದೆ ಕದಿಯುತ್ತಾರೆ. ಮತ್ತೆ ಕೆಲವರು ಇತರರೊಡನೆ ಕೂಡಿಕೊಂಡು ಕಳ್ಳತನ ಮಾಡುತ್ತಾರೆ. ತಮ್ಮ ಒಡನಾಡಿಗಳ ದೃಷ್ಟಿಯಲ್ಲಿ ಒಂದು ಪ್ರತಿಷ್ಠೆ ಮತ್ತು ಘನತೆಯನ್ನು ಹೊಂದಲು ಕೆಲವು ಮಕ್ಕಳು ಕಳ್ಳತನ ಮಾಡುವುದೂ ಉಂಟು. ಶಾಲೆಯಲ್ಲಿ ಮಕ್ಕಳು ವಿಹಾರಕ್ಕೆಂದು ಹೊರಟಾಗಲೋ ಅಥವಾ ಯಾವುದಾದರು ಸಮಾರಂಭವನ್ನು ಏರ್ಪಡಿಸಿದಾಗ ಅವರಿಗೆ ಹಣ ಕೊಡಲು ತಂದೆ-ತಾಯಿಗಳು ನಿರಾಕರಿಸಿದಾಗ, ಮಕ್ಕಳು ಕಳ್ಳತನ ಮಾಡಿ ತಮ್ಮ ಆಕಾಂಕ್ಷೆಯನ್ನು ತೀರಿಸಿಕೊಳ್ಳುತ್ತಾರೆ. ಮಕ್ಕಳಲ್ಲಿ ಕೆಲವರು ತಮ್ಮ ಪ್ರತಿಷ್ಠೆಯನ್ನು ತೋರಿಸಿಕೊಳ್ಳಲು ತಮ್ಮ ಸಹಪಾಠಿಗಳಿಗೆ ತಿಂಡಿ-ತಿನಸು, ಪೆನ್ನು, ಪುಸ್ತಕ ಮುಂತಾದುವುಗಳನ್ನು ಕದ್ದು ತಂದ ಹಣದಿಂದ ಕೊಡುವವರೂ ಇದ್ದಾರೆ. ಜಂಬಗಾರ ಮಕ್ಕಳು, ತಮ್ಮ ಜಂಬವನ್ನು ತೋರಿಸಲು ಕಳ್ಳತನ ಮಾಡುತ್ತಾರೆ. ಒಡನಾಡಿಗಳೇನಾದರೂ ಹಂಗಿಸಿದಾಗ ಸೋಲಲೊಪ್ಪದೆ ಕಳವು ಮಾಡಿ ತಮ್ಮ ಎದೆಗಾರಿಕೆಯನ್ನು ಪ್ರದರ್ಶಿಸುವವರೂ ಉಂಟು.

ಬಾಲಾಪರಾಧಿಗಳು ಗುಂಪುಗೂಡಿ ಕಳ್ಳತನಕ್ಕೆ ತೊಡಗುವುದು ಪದಾರ್ಥಗಳ ಆಸೆಗಾಗಿ ಹಾಗೂ ಅವರಿಗೆ ದೊರೆಯುವ ಒಂದು ರೀತಿಯ ಸಾಹಸ-ಸಂತೋಷಕ್ಕಾಗಿ. ಈಗಿನ ಸಿನಿಮಾಗಳು ಮಕ್ಕಳ ಕಳ್ಳತನಕ್ಕೆ ಸಾಕಷ್ಟು ಪ್ರೋತ್ಸಾಹನ ಕೊಡುತ್ತಿವೆ. ಎಷ್ಟೋ ಮಕ್ಕಳಿಗೆ ಸಿನಿಮಾ ನಟ-ನಟಿಯರು ಆರಾಧ್ಯ ದೇವತೆಗಳು. ತೆರೆಯ ಮೇಲೆ ತಮ್ಮ ನೆಚ್ಚಿನ ನಾಯಕನೋ, ನಾಯಕಿಯೋ, ಖಳನಾಯಕನೋ ಅಥವಾ ಖಳನಾಯಕಿಯೋ ಕಳ್ಳತನ ಮಾಡಿ ತೋರಿಸುವ ಚಮತ್ಕಾರಗಳಿಗೆ ಮರುಳಾಗಿ ಅವರ ಕೃತ್ಯಗಳನ್ನೇ ಅನುಕರಣ ಮಾಡುತ್ತಿರುವ ನಿದರ್ಶನಗಳು ಬಹಳಷ್ಟಿವೆ. ಇದೆಲ್ಲದರ ಜೊತೆಗೆ, ಸೇಡು ಮತ್ತು ಅಸೂಯೆ ಕೆಲವು ಬಾರಿ ಮಕ್ಕಳನ್ನು ಕಳ್ಳತನಕ್ಕೆ ತೊಡಗಿಸುತ್ತವೆ. ಸೇಡು ತೀರಿಸಿಕೊಳ್ಳುವ ಮನೋಭಾವ ಕೆಲವು ಮಕ್ಕಳಲ್ಲಿ ಕಳ್ಳತನವನ್ನು ಪ್ರಚೋದಿಸುತ್ತದೆ. ಮನೆಯಲ್ಲಿ ಹಿರಿಯರು ಯಾರಾದರೂ ಶಿಕ್ಷೆ ವಿಧಿಸಿದಾಗ, ಅತ್ಯಾವಶ್ಯಕವಾದ ಯಾವುದಾದರೂ ಅವರ ವಸ್ತುಗಳನ್ನು ಕದ್ದು ಪ್ರತೀಕಾರ ತೋರಿಸುವ ಮಕ್ಕಳೂ ಇದ್ದಾರೆ. ಭಾವನಾ ಪ್ರಪಂಚದಲ್ಲಿನ ಯಾವುದೋ ಕೊರತೆಯಿಂದಾಗಿ ಮಕ್ಕಳು ಕಳ್ಳತನಕ್ಕೆ ತೊಡಗುತ್ತಾರೆಂದು ಕೆಲವು ಮನೋವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ತಂದೆ-ತಾಯಿಗಳ ಪ್ರೀತಿ-ಮಮತೆಯಿಂದ ವಂಚಿತರಾದ ಮಕ್ಕಳು, ತಮಗಾದ ನಷ್ಟವನ್ನು ಭರ್ತಿಮಾಡಿ

ಕೊಳ್ಳಲು ವಸ್ತುಗಳನ್ನು ಕದ್ದು ಕೇಳಿಕೊಡುವ ಮನೋಭಾವವುಳ್ಳವರಾಗಿರುತ್ತಾರೆ. ಅವರ ಸುಪ್ತ ಚೇತನ ಈ ಹವ್ಯಾಸವನ್ನು ಪ್ರಚೋದಿಸುತ್ತದೆ. ಮತ್ತೆ ಕೆಲವೆಡೆಯಲ್ಲಿ ಕಾಮೋದ್ರೇಕ, ಅಪಘಾತ, ಉನ್ಮಾದ, ಮನೋವೇದನೆಗಳು ಇತ್ಯಾದಿ ಮಾನಸಿಕ ಅಂಶಗಳೂ ಪ್ರತ್ಯಕ್ಷವಾಗಿಯೋ, ಅಥವಾ ಪರೋಕ್ಷವಾಗಿಯೋ ಕೆಲವು ಮಕ್ಕಳ ಕಳ್ಳತನಗಳಿಗೆ ಕಾರಣಗಳಾಗಿರುತ್ತವೆ.

ಕಳ್ಳತನ ನಿರೋಧ :

ಈ ಮೇಲೆ ಹೇಳಿರುವ ಕಾರಣಗಳು ಮಕ್ಕಳನ್ನು ಬಾಲಾಪರಾಧಿಗಳನ್ನಾಗಿ ಮಾಡುವುದರಿಂದ, ಈ ರೀತಿಯ ಅಪರಾಧ ಪ್ರವೃತ್ತಿಯ ಪ್ರಾರಂಭವನ್ನು ಅರಿತು, ಅದನ್ನು ನಿವಾರಿಸುವ ಪ್ರಯತ್ನವನ್ನು ಮೊದಲನೆಯದಾಗಿ ತಂದೆ–ತಾಯಿಗಳು ಕೈಗೊಳ್ಳಬೇಕು. ಚಿಕ್ಕವಯಸ್ಸಿನಲ್ಲಿ ಮಕ್ಕಳ ವ್ಯಕ್ತಿತ್ವವನ್ನು ಸಾಧ್ಯವಾದಷ್ಟು ಪರಿಪೂರ್ಣವಾದ ರೀತಿಯಲ್ಲಿ ರೂಪಿಸಲು ಪ್ರಯತ್ನಿಸಬೇಕು. ಅಂದರೆ ತಂದೆ-ತಾಯಿಗಳು ಮನೆಯ ಪರಿಸರವನ್ನು ಸಂತೋಷಕರವಾಗಿಟ್ಟುಕೊಂಡು, ಮಕ್ಕಳೊಡನೆ ಸ್ನೇಹಪೂರ್ಣವಾಗಿ ನಡೆದುಕೊಂಡು ಅವರ ನೈತಿಕ ಮಟ್ಟ ಬೆಳೆಯಲು ನೆರವಾಗುವುದರ ಮೂಲಕ ಈ ಸಮಾಜಘಾತುಕ ವರ್ತನೆಯನ್ನು ಬಹಳಮಟ್ಟಿಗೆ ತಡೆಯಬಹುದು. ಈ ಮಕ್ಕಳ ಕೃತ್ಯಗಳಿಗೆ ಮದ್ದು ಶಿಕ್ಷೆಯಲ್ಲ, ಸೂಕ್ತ ಶಿಕ್ಷಣ. ಅವರ ಈ ದುಷ್ಕೃತ್ಯವನ್ನು ತಹಬಂದಿಗೆ ತರುವ ಜವಾಬ್ದಾರಿ ತಂದೆ ತಾಯಿಗಳಷ್ಟೇ, ಶಾಲೆಯ ಗುರುಗಳು, ಸಮಾಜ ಕಾರ್ಯಕರ್ತರು, ಸಮಾಜ ಸುಧಾರಕರು ಹಾಗೂ ಸಮಾಜದ ಕೈಯಲ್ಲಿದೆ.

ಆಧಾರ ಗ್ರಂಥಗಳು

1 Cyril Burt : *The Young Delinquent:* University of London Press Ltd, London EC4–1957.

2 Walter C. Reckless : *The Crime Problem* Appleton–Century–Crofts, Inc, New York, 1950.

3 M. J. Sethna : *Society and theCriminal* : Kitab Mahal, Bombay, 1964.

4 The Mysore Children's Act of 1964: Govt. Press, Bangalore, 1964.

'ನಾಳೆ' ಎಂದರೆ ತಡವಾದೀತು ....

"ನಾವು ಹಲವಾರು ತಪ್ಪು ತಡೆಗಳನ್ನು ಮಾಡುವೆವು. ಆದರೆ ನಮ್ಮ ಮಹಾಪರಾಧವೆಂದರೆ— ಮಕ್ಕಳನ್ನು ದೂರಿಡುವುದು. ಅರ್ಥಾತ್ ಜೀವನದ ಚಿಲುಮೆಯನ್ನೇ ನಿಷ್ಕಾಳಜಿಸುವುದು. ನಾವು ಇಚ್ಛಿಸುವ ಹಲವು ಸಂಗತಿಗಳು ನಮಗಾಗಿ ಕಾಯಬಹುದು. ಆದರೆ ಮಗುವು ಹಾಗಲ್ಲ. ಈಗಿಂದಲೇ ಆತನ ಮೂಳೆಗಳು ರೂಪತಾಳುತ್ತಿರುವವು. ಆತನ ರಕ್ತ ನಿರ್ಮಾಣವಾಗುತ್ತಿರುವುದು ಮತ್ತು ಆತನ ವಿಚಾರಗಳು ವಿಕಾಸಗೊಳ್ಳುತ್ತಿರುವವು. ಆತನಿಗೆ 'ನಾಳೆ' ಎಂದು ನಾವು ಉತ್ತರಿಸಲಾರೆವು. ಆತನ ಹೆಸರೇ 'ಇಂದು'."

—ಗಾಬ್ರೀಲಾ ಮಿಸ್ಟ್ರಾಲ್
ಚಿಲಿಯ ನೋಬೆಲ್ ಪಾರಿತೋಷಕ ವಿಜೇತ ಕವಿ

—ಈ ಹೇಳಿಕೆಯನ್ನು ಓದಲು ನಿಮಗೆ ಸುಮಾರು ಆರು ಸೆಕೆಂದುಗಳು ಹಿಡಿದವು ಎಂದು ಇಟ್ಟುಕೊಂಡರೆ, ನೀವು ಇದನ್ನು ಓದುತ್ತಿರುವಾಗಲೇ ಜಗತ್ತಿನ ಬೆಳೆಯುತ್ತಿರುವ ರಾಷ್ಟ್ರಗಳಲ್ಲಿ ಹನ್ನೆರಡು ಮಕ್ಕಳು ಹುಟ್ಟಿದವು.

ಇನ್ನು ಮುಂದಿನ ಹದಿನೈದು ವರ್ಷಗಳಲ್ಲಿ ಈ ಹನ್ನೆರಡಕ್ಕೆ ಏನೇನಾಯಿತೆಂದು ವಿಚಾರಿಸಿದರೆ :

ಎರಡು ಕೂಸಾಗಿದ್ದಾಗಲೇ ಅಸುನೀಗಿದವು. ಉಳಿದ ಹತ್ತರಲ್ಲಿ, ಮೂರು ಶಾಲೆಗೆ ಹೋಗಲಿಲ್ಲ. ಹೋದ ಏಳರಲ್ಲಿ, ಎರಡು ಮಾತ್ರ ಪ್ರಾಥಮಿಕ ಹಂತ ಮುಗಿಸಿದವು.

ಎರಡು ತೀರಿದವು. ಐದು ಶಿಕ್ಷಣವನ್ನು ಅಲ್ಪಸ್ವಲ್ಪ, ಅಥವಾ ಹೊಂದಲೇ ಇಲ್ಲ. ಎಲ್ಲಕ್ಕೂ ಬೇನೆ ಗೊತ್ತು, ಎಲ್ಲಕ್ಕೂ ಹಸಿವೆ ಗೊತ್ತು ಮತ್ತು ಎಷ್ಟೋ ಸಾಕಷ್ಟು ಆಹಾರ ಸಿಗದ್ದಕ್ಕೆ ತಮ್ಮ ಜೀವನಪರ್ಯಂತ ನರಳುವವು.

ಮೂಲ ಹನ್ನೆರಡರಲ್ಲಿಯೂ ಒಂದಕ್ಕೆ ಮಾತ್ರ ಕೈಕೆಲಸಕ್ಕಿಂತ ಹೆಚ್ಚಿನ ಯಾವುದಾದರೂ ಕೆಲಸಕ್ಕಾಗಿ ತರಬೇತಿಯನ್ನು ನೀಡಲಾಗಿದೆ. ಉಳಿದವರೆಲ್ಲರೂ ಜೀವನಪರ್ಯಂತ ಕಠಿಣ ಶ್ರಮಪಡುವವರಲ್ಲದೆ, ಬಡತನದ ಅತಿ ಕೆಳಮಟ್ಟದಲ್ಲಿರುವರು.

[illegible] ?

[illegible] ಮೇಲೆ ಪರಿಣಾಮ ಬೀರುವುದು.

[illegible]

"Tomorrow Is Too Late"

—UNICEF, United Natio[illegible]
New York.

—ಅನು : ವಸಂತ ಪಾಟೀ[illegible]

ಸಂಪಾದಕೀಯ

[illegible]

[illegible]

[illegible]

ಈ ವಿಶೇಷ ಸಂಚಿಕೆಯ ಯೋಜನೆಯಲ್ಲಿ ಪ್ರೊ. ಎ. ಎಸ್. ಧರಣೇಂದ್ರಯ್ಯ ಹಾಗೂ ಪ್ರೊ. ವಸಂತ ಪಾಟೀಲರು ನೀಡಿದ ಸಹಕಾರ ಸ್ಮರಿಸದಿರಲಾರೆ.

ಇಲ್ಲಿಯ ಲೇಖನಗಳಲ್ಲಿ ವೈವಿಧ್ಯತೆಯಿದೆ. ಮಗುವಿನ ವರ್ಷದ ವೈಶಿಷ್ಟ್ಯ, ಮಗುವಿನ ಪಾಲನೆ, ಪೋಷಣೆ ಮತ್ತು ಬೆಳವಣಿಗೆ, ಮಗುವಿನ ಸಾಮಾಜಿಕ ವರ್ತನೆ ಮತ್ತು ವಿಕಾಸ, ಮಗುವಿನ ಬೆಳವಣಿಗೆಯಲ್ಲಿ ತಂದೆತಾಯಿಗಳ ಪಾತ್ರ, ಮಗುವಿನ ರಾಜಕೀಯ ವಿಕಾಸ, ಗ್ರಾಮಾಂತರ ಮಗುವಿನ ಸಮಸ್ಯೆಗಳು, ಮಕ್ಕಳ ಸಂಖ್ಯಾ ಸಮಸ್ಯೆ, ಮಕ್ಕಳ ಸೃಜನಶೀಲತೆ, ಮಕ್ಕಳ ಶೈಕ್ಷಣಿಕ ಸಮಸ್ಯೆಗಳು, ಮಕ್ಕಳ ಆರೋಗ್ಯ. ಮಕ್ಕಳ ಪುಸ್ತಕಗಳ ಸಮಸ್ಯೆ, ಮಕ್ಕಳ ಆಟ, ಮಕ್ಕಳ ಮನೋರೋಗ ಹಾಗೂ ಅವುಗಳ ನಿವಾರಣೆ, ಬಾಲಾಪರಾಧ, ರಿಮಾಂಡ ಹೋಮ, ಬಾಲಕಾರ್ಮಿಕರ ಸಮಸ್ಯೆ. ವಿಶ್ವಸಂಸ್ಥೆಯ ಪಾತ್ರ, ಶಾಶ್ವತ ಸ್ವರೂಪದ ಯೋಜನೆಗಳು ಮುಂತಾದ ವಿಷಯಗಳ ಮೇಲೆ ಪ್ರಬುದ್ಧ ಲೇಖನಗಳಿವೆ.

ಒಟ್ಟಿನಲ್ಲಿ ಲೇಖನಗಳು ಮಕ್ಕಳ ಸರ್ವಾಂಗೀಣ ಬೆಳವಣಿಗೆಯತ್ತ ಉತ್ತಮ ಸಲಹೆ ಸೂಚನೆಗಳನ್ನು ಹೊತ್ತು ತಂದಿರುವವು. ಅವು ಪರಿಶೀಲನಾರ್ಹವಾಗಿವೆ. ಸರಕಾರ ಮತ್ತು ಇನ್ನಿತರ ಸಂಸ್ಥೆಗಳು ತಮ್ಮ ಧೋರಣೆಗಳನ್ನು ನಿರೂಪಿಸುವಲ್ಲಿ ಇವುಗಳ ಸಹಾಯ ಪಡೆಯಬಹುದು.

ಮಗುವಿನ ವರ್ಷ ಕೇವಲ ಸಭೆ, ಸಮಾರಂಭಗಳಲ್ಲಿ ಮುಕ್ತಾಯವಾಗದೆ ಒಂದು ಶಾಶ್ವತ ಯೋಜನೆಯಾಗಿ ಸದಾ ಕಾರ್ಯಪ್ರವೃತ್ತವಾಗಿ ಮುನ್ನಡೆಯಬೇಕು. ಅದಕ್ಕೆ ಸರ್ವರೂ ತಮ್ಮ ಸಹಕಾರ ನೀಡಬೇಕು.

—**ಸಂಪಾದಕರು**

ಈ ಸಂಚಿಕೆಯ ಲೇಖಕರು

೧. ಡಾ. ಕೆ. ಜಿ. ಗುರುಮೂರ್ತಿ
ಪ್ರವಾಚಕರು,
ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಬಿ. ಕುಪ್ಪುಸ್ವಾಮಿ
ನಿರ್ದೇಶಕರು,
ಸಾಮಾಜಿಕ ಮತ್ತು ಮಾನವಶಾಸ್ತ್ರ ಸಂಶೋಧನಾ ವಿಭಾಗ,
ಜಯನಗರ, ಬೆಂಗಳೂರು

೩. ಡಾ. ಎಂ. ಬಸವಣ್ಣ
ಪ್ರವಾಚಕರು, ಮಾನವಶಾಸ್ತ್ರ ವಿಭಾಗ,
ಎಸ್. ವಿ. ವಿಶ್ವವಿದ್ಯಾಲಯ, ತಿರುಪತಿ

೪, ಡಾ॥ ಆರ್. ಟಿ. ಜಂಗಮ
ಪ್ರವಾಚಕರು,
ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ಎನ್. ಕೆ. ಕಡೇತೋಟದ
ಅಧ್ಯಾಪಕರು.
ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಡಾ. ಎಂ. ಸಿ. ಕೊಡ್ಲಿ
ಅಧ್ಯಾಪಕರು,
ಅರ್ಥಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಪ್ರೊ. ಎ. ಎಸ್. ಧರಣೇಂದ್ರಯ್ಯ
ಅಧ್ಯಾಪಕರು, ಮನೋವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಡಾ. ಎಲ್. ಆರ್. ಹೆಗಡೆ
ಹೆಗಡೆ, (ಉ. ಕ. ಜಿಲ್ಲೆ)

೯. ಡಾ. ಎಸ್. ಜೆ. ನಾಗಲೋಟಿಮಠ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ರೋಗಶಾಸ್ತ್ರ ವಿಭಾಗ,
ಜವಾಹರಲಾಲ ನೆಹರು ಮೆಡಿಕಲ್ ಕಾಲೇಜ, ಬೆಳಗಾಂವ

೧೦. ಡಾ. ಕೆ. ಶೇಷಗಿರಿ ರಾವ್
ಉಪನಿರ್ದೇಶಕರು,
ಜನಸಂಖ್ಯಾ ಕೇಂದ್ರ,
ಭಾರತ ಜನಸಂಖ್ಯಾ ಯೋಜನೆ, ಬೆಂಗಳೂರು

೧೧. ಶ್ರೀ ಕೆ. ಎಸ್. ದೇಶಪಾಂಡೆ
ಗ್ರಂಥಪಾಲಕರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಶ್ರೀ ಕೆ. ಜಿ. ನಾಡಗೀರ
ಸಂಚಾಲಕರು,
ಮಲ್ಲಸಜ್ಜನ ವ್ಯಾಯಾಮ ಶಾಲೆ, ಧಾರವಾಡ.

೧೩. ಡಾ. ಜಿ. ಎಸ್. ಬಿದರಕೊಪ್ಪ
ಮುಖ್ಯಸ್ಥರು, ಸಮಾಜಕಾರ್ಯ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಡಾ. ಗ. ಚ. ಸುವರ್ಣ
ಸುಪರಿಂಟೆಂಡೆಂಟ ಆ್ಯಂಡ ಸಿಯಾಟ್ರಿಸ್ಟ,
ಮಾನಸಿಕ ಆಸ್ಪತ್ರೆ, ಧಾರವಾಡ

೧೫. ಡಾ. ಬಸನಗೌಡ ಆರ್. ಪಾಟೀಲ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಪಿ. ಎಸ್. ಜಿ. ಕಲೆ ಮತ್ತು ವಿಜ್ಞಾನ ಕಾಲೇಜ, ಕೊಯಮುತ್ತೂರ

೧೬. ಶ್ರೀಮತಿ ಲಲಿತಾಂಬಾ ವೃಷಭೇಂದ್ರಸ್ವಾಮಿ
ಅಧ್ಯಾಪಕರು,
ಕ. ವಿ. ವಿ. ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

೧೭, ಪ್ರೊ. ಬಿ. ಎಚ್. ಅಮಾತಿ
ಅಧ್ಯಾಪಕರು.
ಸಮಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮. ಶ್ರೀಮತಿ ಸುಲೋಚನಾ ಬಿದರಕೊಪ್ಪ
ಸಂಶೋಧಕರು, ಮಾನವಶಾಸ್ತ್ರವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯. ಡಾ. ನಿರ್ಮಲಾ ಕೇಸರಿ
ಜೆ. ಜೆ. ಎಂ. ಮೆಡಿಕಲ್ ಕಾಲೇಜ, ದಾವಣಗೆರೆ

೨೦. ಶ್ರೀ ಬಿ. ಸಿ. ಚವಡಿ
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಕಾಡಸಿದ್ಧೇಶ್ವರ ಆರ್ಟ್ಸ ಕಾಲೇಜ, ಹುಬ್ಬಳ್ಳಿ

೨೧, ಪ್ರೊ. ಎಂ. ಕುಮಾರಸ್ವಾಮಿ
ಅಧ್ಯಾಪಕರು,
ಅಪರಾಧ ಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ

ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ೩-೫೦ (,, ,, ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦
ಮಕ್ಕಳ ವರ್ಷದ ವಿಶೇಷ ಸಂಚಿಕೆಯ ಬಿಡಿಪ್ರತಿಯ ಬೆಲೆ : ರೂ. ೨-೦೦

ಹಣವನ್ನು, ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಇವರಿಗೆ ಕಳುಹಿಸಬೇಕು.

ಈ ಕುರಿತು ಯಾವದೇ ಪತ್ರವ್ಯವಹಾರ ಕೆಳಗಿನ ವಿಳಾಸಕ್ಕೆ ಮಾಡಿರಿ :

ನಿರ್ದೇಶಕರು,
ಪ್ರಸಾರಾಂಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರತಿಯೊಂದು ಮಗುವೂ ಇವುಗಳಿಗೆ ಅರ್ಹವಾಗಿದೆ

* ಒಲವು, ಪ್ರೀತಿ ಮತ್ತು ತಿಳುವಳಿಕೆ
* ಯುಕ್ತ ಪೌಷ್ಟಿಕ ಆಹಾರ ಮತ್ತು ವೈದ್ಯಕೀಯ ರಕ್ಷಣೆ
* ಉಚಿತ ವಿದ್ಯೆ
* ಆಟ ಆರಾಮಗಳ ಪೂರ್ಣ ಅವಕಾಶಗಳು
* ಒಂದು ರಾಷ್ಟ್ರದವನೆಂಬ ತಿಳುವಳಿಕೆ
* ಅಂಗ ವಿಕಲವಾಗಿದ್ದರೆ ವಿಶೇಷ ರಕ್ಷಣೆ
* ಆಪತ್ತು ಅಪಘಾತಗಳಲ್ಲಿ ಆದ್ಯ ಗಮನ
* ಸತ್ಪ್ರಜೆಯಾಗಿ ಸ್ವಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶ
* ಮತ ಮತ್ತು ವರ್ಗಗಳ ಕಾರಣದಿಂದ ಶೋಷಣೆಗೆ ಒಳಗಾಗದೆ ಮೂಲಭೂತ ಹಕ್ಕುಗಳನ್ನು ಅನುಭವಿಸುವದು